START

MICRO FILMED
BY

KARNATAKA STATE
ARCHIVES
1992

MICRO FILMED
BY

KARNATAKA STATE
ARCHIVES
1992

ದೃಢೀಕರಣ ಪತ್ರ

ದಿ. ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ) ಇವರ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದ 'ಜಯಂತಿ' ಮಾಸ ಪತ್ರಿಕೆಯನ್ನು ಅವರ ಮಕ್ಕಳಾದ ಶ್ರೀ ಸುರೇಶ ಬೆಟಗೇರಿ ಆನಂದ ಕಂದ ನಗರ, ಮಾಳಮಡ್ಡಿ, ಧಾರವಾಡ – 580007, ಅವರಿಂದ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ಸೂಕ್ಷ್ಮ ಚಿತ್ರೀಕರಿಸಲು ಪಡೆಯಲಾಗಿದೆ. ಸದರಿ ಪತ್ರಿಕೆ 1938 ರಿಂದ 1960ರ ಅವಧಿಗೆ ಸೇರಿದ ಸುಮಾರು 23 ಸಂಪುಟಗಳಲ್ಲಿದ್ದು ಅವುಗಳಲ್ಲಿ 21 ಸಂಪುಟಗಳನ್ನು ಮಾತ್ರ ಇಲಾಖೆಗೆ ನೀಡಿದ್ದಾರೆ. ಈ ಸಂಪುಟಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಮೂಲ ದಾಖಲೆಗಳಿಂದ ಸೂಕ್ಷ್ಮ ಚಿತ್ರೀಕರಿಸಿ ಸಾರ್ವಜನಿಕರ ಹಾಗೂ ಸಂಶೋಧಕರ ಉಪಯೋಗಕ್ಕಾಗಿ ಕಾಯ್ದಿರಿಸಲು ಅವರು ಒಪ್ಪಿರುತ್ತಾರೆ. ಅದರಂತೆ ಸೂಕ್ಷ್ಮ ಚಿತ್ರೀಕರಿಸಿ ಇಲಾಖೆಯಲ್ಲಿ ಸಂಶೋಧಕರ ಸದುಪಯೋಗಕ್ಕಾಗಿ ಸೂಕ್ಷ್ಮ ಚಿತ್ರೀಕರಣ ಸುರುಳಿಗಳನ್ನು ಸಂರಕ್ಷಿಸಿ ಕಾಯ್ದಿರಿಸಲಾಗಿದೆ ಎಂದು ದೃಢೀಕರಿಸುತ್ತೇನೆ.

(ನಿರ್ದೇಶಕರು)
ಕರ್ನಾಟಕ ರಾಜ್ಯ ಪತ್ರಾಗಾರ.

<u>ದೃಢೀಕರಣ ಪತ್ರ</u>

ದಿ. ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ) ಇವರ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದ 'ಜಯಂತಿ' ಮಾಸ ಪತ್ರಿಕೆಯನ್ನು, ಅವರ ಮಕ್ಕಳಾದ ಶ್ರೀ ಸುರೇಶ ಬೆಟಗೇರಿ ಆನಂದ ಕಂದ ನಗರ, ಮಾಳಮಡ್ಡಿ, ಧಾರವಾಡ – 580007, ಅವರಿಂದ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ಸೂಕ್ಷ್ಮ ಚಿತ್ರೀಕರಿಸಲು ಪಡೆಯಲಾಗಿದೆ. ಸದರಿ ಪತ್ರಿಕೆ 1938 ರಿಂದ 1960ರ ಅವಧಿಗೆ ಸೇರಿದ ಸುಮಾರು 23 ಸಂಪುಟಗಳಲ್ಲಿದ್ದು ಅವುಗಳಲ್ಲಿ 21 ಸಂಪುಟಗಳನ್ನು ಮಾತ್ರ ಇಲಾಖೆಗೆ ನೀಡಿದ್ದಾರೆ ಈ ಸಂಪುಟಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಮೂಲ ದಾಖಲೆಗಳಿಂದ ಸೂಕ್ಷ್ಮ ಚಿತ್ರೀಕರಿಸಿ ಸಾರ್ವಜನಿಕರ ಹಾಗೂ ಸಂಶೋಧಕರ ಉಪಯೋಗಕ್ಕಾಗಿ ಕಾಯ್ದಿರಿಸಲು ಅವರು ಒಪ್ಪಿರುತ್ತಾರೆ. ಅದರಂತೆ ಸೂಕ್ಷ್ಮ ಚಿತ್ರೀಕರಿಸಿ ಇಲಾಖೆಯಲ್ಲಿ ಸಂಶೋಧಕರ ಸದುಪಯೋಗಕ್ಕಾಗಿ ಸೂಕ್ಷ್ಮ ಚಿತ್ರೀಕರಣ ಸುರುಳಿಗಳನ್ನು ಸಂರಕ್ಷಿಸಿ ಕಾಯ್ದಿರಿಸಲಾಗಿದೆ ಎಂದು ದೃಢೀಕರಿಸುತ್ತೇನೆ

7/12

(ನಿರ್ದೇಶಕರು)
ಕರ್ನಾಟಕ ರಾಜ್ಯ ಪತ್ರಾಗಾರ.

7/12

ARS 38 APP 90-91

"ಜಯಂತಿ ಮಾಸ ಪತ್ರಿಕೆ"

ಸುರೇಶ - ಬೆಟಗೇರಿ ಯವರ
ಸಂಗ್ರಹ. ಧಾರವಾಡ.

ಜಯಂತಿ ಮಾಸ ಪತ್ರಿಕೆ

1938 ರಿಂದ 1960 ಅವಧಿಗೆ
ಸೇರಿದ ಸುಮಾರು 23 ಸಂಪುಟ
-ಗಳು ಅವುಗಳಲ್ಲಿ 21 ಸಂಪುಟ
ಗಳು ಮಾತ್ರ ಲಭ್ಯವಾಗಿರುತ್ತವೆ.

ಸುರೇಶ — ಬೆಟಗೇರಿ ಇವರ ಜಯಂತಿ ಮಾಸ ಪತ್ರಿಕೆ ಇವರ ಸಂಗ್ರಹ ಕುರಿತಂತೆ:—

ಕ್ರ·ಸಂಖ್ಯೆ	ವರ್ಷ	ಪುಟ ಸಂಖ್ಯೆ
1·	1938 — 1939	13 — 838
2·	1939 — 1940	1 — 794
3·	——	———
4·	1941— 1942	1 — 582
5·	1942 — 1943	1 — 564
6·		573 580 17—488
7·	1944 — 1945	1 — 334
8·	1945 — 46	1 — 502
9	1946 — 47	1 — 398
10·	1947 — 48	1 — 436
11	——	———
12·	1949 — 1950	1 — 584
13	1950 — 1951	1 — 562
14·	1951 — 1952	1 — 500
15·	1952 — 53	1 — 480
16·	1953 — 1954	1 — 480
17·	1954 — 1955	1 — 472
18·	1955 — 1956	1 — 480
19·	1956 — 1957	1 — 480
20·	1957 — 1958	1 — 476
21·	——	———
22·	1959 — 1960	1 — 436
23	1960 — 1961	1 — 432

ಪರಿಶಿಷ್ಟ — ಬೆಟಗೇರಿ ಇವರ ಜಯಂತಿ ಮಾಸ ಪತ್ರಿಕೆ ಇವರಸಂಗ್ರಹ ಕುರಿತಂತೆ:—

ಕ್ರ.ಸಂಖ್ಯೆ	ವರ್ಷ	ಪುಟ ಸಂಖ್ಯೆ
1.	1938 — 1939	13 — 838
2.	1939 — 1940	1 — 754
3.	——	——
4.	1941 — 1942	1 — 582
5	1942 — 1943	1 — 564
6.		573 580 17—488
7.	1944 — 1945	1 — 334
8.	1945 — 46	1 — 502
9	1946 — 47	1 — 398
10	1947 — 48	1 — 436
11	——	——
12.	1949 — 1950	1 — 584
13	1950 — 1951	1 — 562
14.	1951 — 1952	1 — 500
15.	1952 — 53	1 — 430
16	1953 — 1954	1 — 480
17.	1954 — 1955	1 — 472
18.	1955 — 1956	1 — 480
19.	1956 — 1957	1 — 480
20.	1957 — 1958	1 — 476
21.	——	——
22.	1959 — 1960	1 — 436
23	1960 — 1961	1 — 432

ಚತುರರವು. ಕನ್ಯೆಯ ಚನ್ನು-ಚೆಲುವು ಹೇಗಿರಬೇಕೆಂಬುದರ ಕಡೆಗೆ ...ಮರಳಿ ನೋಡಬೇಕಾದರೂ ಏತಕ್ಕೆ? ವಿಜೃಂಭಣೆಯಿಂದ ...ದುವೆಯ ಸಮಾರಂಭವು ನೆರವೇರಿತು.

ವಧುವಿಗೆ ಕಣ್ಣು, ಕಿವಿ, ಮೂಗು, ಬಾಯಿ, ಹಲ್ಲು, ನಾಲಗೆ ಎಲ್ಲವೂ ಇದ್ದುವು. ಕೈಕಾಲು ಸ್ವಲ್ಪ ಬಡಕಲು; ಮದುವೆಯ ಹೆಣ್ಣಿನ ಕೈಕಾಲುಗಳೇನು ಗರುಡಿಯಾಳುಗಳ ಕೈಕಾಲುಗಳಂತಿರಬೇಕೇ? ಮೈಬಣ್ಣ ಕಪ್ಪೆಂದು ಯಾರಾದರೂ ಹೇಳಿದರೆ ರಾಯರ ತಾಯಿಯ ಕಿಡಿಗಣ್ಣಿಗೆ ಪಾತ್ರರಾಗಬೇಕಾಗುತ್ತಿದ್ದಿತಾದುದರಿಂದ, ಮೈಬಣ್ಣ 'ನಸುಗೆಂಪು' ಎಂದೋ 'ಮಾಸಲುಗೆಂಪು' ಎಂದೋ ಜನ ಮಾತನಾಡಿರಬಹುದು. ಮದುವೆಯಾದ ಮೇಲೆ 'ರಂಗೂ' ಎಂದು ಹೆಂಡತಿಯ ಹೆಸರನ್ನು ಹೇಳುತ್ತಿರುವಾಗ ಗಂಡನ ಅಧಿಕಾರ ತಮಗೆ ದೊರಕಿದ ಅಭಿಮಾನವು ರಾಯರ ಎದೆಯನ್ನು ಹಿಗ್ಗಿಸಿರಲೂ ಬಹುದು.

* * *

ಮದುವೆಯಾದ ಮರುವರ್ಷವೆ ರಾಯರು ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಟ್ಟಣದಲ್ಲಿರಬೇಕಾಯಿತು. ಮೊದಲನೆಯ ವರ್ಷವೆಲ್ಲವನ್ನೂ ರಾಯರು ತಮ್ಮ ಹಳ್ಳಿಗತನವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಉಪಯೋಗಿಸಿದರು. ಎರಡನೆಯ ವರ್ಷವನ್ನು ನಾಗರಿಕ ವಿದ್ಯಾರ್ಥಿ ಜೀವನವನ್ನು ತಮ್ಮ ಬದುಕಿಗೆ ಅಳವಡಿಸಿಕೊಳ್ಳುವುದರಲ್ಲಿ ಕಳೆದರು. ತರಗತಿಯ ಉಪಾಧ್ಯಾಯರೇ ಮನೆಗೆ ಬಂದು ಕಲಿಸುತ್ತಿದ್ದುದರಿಂದ ರಾಯರು ಪರೀಕ್ಷೆಯಲ್ಲಿ ಸೋತುದೂ ಎಂದೂ ಇಲ್ಲ.

ಮೊದಲಿನ ಎರಡುಮೂರು ವರ್ಷ ಗಂಡಹೆಂಡಿತಿಯರು ಒಂದೆಡೆಯಲ್ಲಿ ಕೂಡಿ ಇರುವ ದಿನಗಳು ಹೆಚ್ಚಾಗಿ ಬರಲೇ ಇಲ್ಲ. ಹುಡುಗಿ ಚಿಕ್ಕವಳು: ತಾಯ್ತಂದೆಗಳಿಗೆ ಅಪರೂಪದ ಒಬ್ಬಳೆ ಹೆಣ್ಣುಮಗಳು; ಎಂತಲೆ ಎಂದಾದರೂ ನಾಲ್ಕೆಂಟು ದಿನ ಬಂದರೆ ಅತ್ತೆಯ ಬಳಿಯಿದ್ದು ಮರಳಿ ತವರೂರಿಗೆ ಹೋಗಿಬಿಡುವಳು.

ಅತ್ತೆಮಾವಂದಿರಿಬ್ಬರಿಗೂ ಅಳಿಯನನ್ನು ತಮ್ಮಲ್ಲಿಗೆ ಕರೆಯಿಸಿಕೊಳ್ಳಬೇಕೆಂದು ಬಲುದಿನದ ಹವಣಿಕೆ. ಎಂತಲೇ 'ಈ ಸಲದ ಬೇಸಿಗೆಯ ಬಿಡುವಿನಲ್ಲಿ ಇಲ್ಲಿಗೇ ಬರಬೇಕು' ಎಂದು ರಾಯರಿಗೆ ಮಾವನವರಿಂದ ಕಾಗದ ಬಂದಿತು. ಹೋಗಬೇಕೆಂದು ರಾಯರೂ ಸಂಕಲ್ಪಿಸಿಕೊಂಡಿದ್ದರು. ಆದರೇನು? ಹೊರಡಲಿರುವ ಮೊದಲ ದಿನವೇ ಮಾವನವರಿಂದ ಮತ್ತೊಂದು ಕಾಗದ ಬಂದಿತು. ಸಿಡುಬಿನ ಪಿಡುಗು ಊರಲ್ಲೆಲ್ಲ ಹಬ್ಬುವುದೆಂದೂ ಆದುದರಿಂದ ಈಗ ನೀವು ಖಂಡಿತ ಇಲ್ಲಿಗೆ ಬರಬಾರದೆಂದೂ ಅದರಲ್ಲಿ ಬರೆದಿದ್ದಿತು. ರಾಯರಿಗೆ ತುಂಬ ನಿರಾಶೆ.

ಊರಲ್ಲಿಯ ಸಿಡುಬಿನ ರೋಗ ... ಹೆಂಡತಿ ರಂಗಕ್ಕನಿಗೂ ತಗಲಿಕೊಂಡಿತು. ಬದುಕಿ ... ಹೆಚ್ಚಿನದೆಂದು ...ಳಬೇಕು. ಜೀವದ ಮೇಲೆ ಬಂದಿದ್ದ ಪ್ರಸಂಗವು ಎಡಗಣ್ಣೊಂದನ್ನು ಕಸಿದುಕೊಂಡು ಹೋಯಿತು. ಸಿಡುಬಿನ ಮಚ್ಚೆ ... ಮುಖವು ... ಹುತ್ತದ ದೋಸೆಯಂತಾಯಿತು.

* * * *

ಪಟ್ಟಣವಾಸದ ಮೂರನೆಯ ವರ್ಷವು ರಾಯರಿಗೆ ತನ್ನ ಸಂಸ್ಕಾರದ ಬಣ್ಣವನ್ನು ಚೆನ್ನಾಗಿ ಬಳಿಯತೊಡಗಿದ್ದಿತು. ಇಪ್ಪತ್ತು ಇಪ್ಪತ್ತೊಂದು ವರ್ಷದ ಮೊದಲು ಹರಯದ ವಯಸ್ಸು. ಮನಸ್ಸು ಎಂತೆಂತಹವೋ ಬಿಸಿಲುಗುದುರೆಗಳನ್ನು ಬೆಂಬಳಿಸಲಾರಂಭಿಸಿದ್ದಿತು. ಆಗ ರಾಯರಿಗೆ ಮಾವನವರಿಂದ ಕಾಗದವೊಂದು ಬಂದಿತು. 'ದೀಪಾವಳಿಯ ರಜೆಯಲ್ಲಿ ತಮ್ಮಲ್ಲಿಗೇ ಬರಬೇಕು.' ಎಂಬ ಅಭಿಪ್ರಾಯ ಅದರಲ್ಲಿದ್ದಿತು. ಮಾವನ ಮನೆಗೆ ಹೊರಡಬೇಕಾದ ಹದಿನೈದು ದಿನಗಳ ಮೊದಲಿನಿಂದಲೂ ರಾಯರು ಹೊರಡುವ ಸಿದ್ಧತೆಗಳನ್ನು ಮಾಡಿಕೊಂಡರು. ನೋಡುವುದಕ್ಕೆ ರಾಯರ ರೂಪವು ಚೆನ್ನಾದುದು; ರೂಪಕ್ಕೆ ತಕ್ಕ ರಸಿಕತನದ ವೇಷಭೂಷಣಗಳ ಅಳವಡಿಕೆಯಾಯಿತು. ತುಂಬಿದ ಉತ್ಸಾಹದಿಂದಲೆ ರಾಯರು ಮಾವನ ಮನೆಗೆ ಬಂದರು. ಆದರೆ ಏನಾಯಿತೇನೋ ಅಳಿಯತನಕ್ಕೆಂದು ಬಂದಿದ್ದ ರಾಯರು ಏನೇನೋ ನೆವಗಳನ್ನೊಡ್ಡಿ ಬಂದ ಮರುದಿನವೆ ಅಲ್ಲಿಂದ ಹೊರಟುಬಿಟ್ಟರು. ದೀವಳಿಗೆಯ ರಜೆಯನ್ನೆಲ್ಲ ಹಳ್ಳಿಯಲ್ಲಿಯೆ ಕಳೆದರು. ಆಗ ನೋಡಿದರೆ ಮುಖದ ಮೇಲೆ ಮೊದಲಿನ ಕಳೆಯಿರಲಿಲ್ಲ. ತುಟಿಯ ಮೇಲೆ ಹಿಂದಿನ ಹುಸಿನಗೆಯಿರಲಿಲ್ಲ. ಮಾತಿಗೆ ತುಂಬ ಮಿತಿಯು ಬಂದುಬಿಟ್ಟಿದ್ದಿತು. ಯಾವಾಗಲೂ ವಿಚಾರಮುದ್ರೆ. ಅದನ್ನು ಮರೆಮಾಡಲಿಕ್ಕೆಂದೇ ಇರಬಹುದು– ಯಾವಾಗಲೂ ಮೂಗಿನ ಮುಂದೆ ಅಭ್ಯಾಸದ ಪುಸ್ತಕ. ಮಗನ ಈ ಅಭ್ಯಾಸದ ಅಭಿನಯವು ತಾಯಿತಂದೆಗಳಲ್ಲಿ ಹೆಮ್ಮೆಯನ್ನೆ ಹುಟ್ಟಿಸಿರಬಹುದು.

* * * *

ರಾಯರು ಹೈಸ್ಕೂಲಿನ ಓದನ್ನು ಮುಗಿಸಿ ಕಾಲೇಜನ್ನು ಸೇರಿದರು. ಅಲ್ಲಿಯ ಸಂಗಡಿಗರಲ್ಲಿ ಯಾರಾದರೂ 'ಮದುವೆ' 'ಹೆಂಡತಿ' ಎಂದು ಮಾತುಗಳನ್ನೆತ್ತಿದರೆ ಔದಾಸೀನ್ಯ-ಅಸಮಾಧಾನಗಳ ಮೋಡವು ರಾಯರ ಮುಖವನ್ನು ಮುಸುಕಿಬಿಡುವುದು. ತುಂಬ ಮಾತಿನ ರಭಸದಲ್ಲಿದ್ದಾಗಲೆ ಅವರ ನಾಲಗೆ ತಡೆದು ನಿಲ್ಲುವುದು. ಸಂಸಾರವಿರಕ್ತಿಯ ಪ್ರಾರಂಭವು ರಾಯರ ಕಾಲೇಜಿನ ಜೀವನದಲ್ಲಿಯೆ ತಲೆದೋರಿತು.

ಮರುವರುಷವೆ ಹುಡುಗಿ ಋತುಮತಿಯಾದ ವಿಷಯ ಗೊತ್ತಾಯಿತು. ಪ್ರಸ್ಥಕ್ಕಾಗಿ ತಂದೆಯವರ ಕಡೆಯಿಂದ ಅವಸರದ ಕರೆ ಬಂದಿತು. ಅಭ್ಯಾಸದ ನೆಪದಿಂದ ರಾಯರು ಪ್ರಸ್ಥವನ್ನು ಮುಂದಕ್ಕೆ ನೂಕಿದರು. ರಾಯರ ಜೀವನದಲ್ಲಿಯ ವ್ಯತ್ಯಾಸದ ಅರ್ಥವನ್ನು ತಂದೆತಾಯಿಗಳು ಹೇಗೆ ಮಾಡಿಕೊಂಡಿದ್ದರೇನೋ ಮಗನಿಗೆ ಮತ್ತೊಂದು ಮದುವೆಯನ್ನು ಮಾಡಿಬಿಡಬೇಕೆಂಬ ಯೋಚನೆಯಲ್ಲಿರುವರೆಂಬ ವರ್ತಮಾನ ರಾಯರಿಗೆ ಹೇಗೋ ಹೇಗೋ ಗೊತ್ತಾಗುತ್ತಿದ್ದಿತು ಆಗಾಗ. ಆದರೆ ಈ ವಿಚಾರ ಬಂದಾಗ ರಾಯರು ಮಾತಿಲ್ಲ ...

* * *

ಇಂಟರ್ ಪರೀಕ್ಷೆಯನ್ನು ತೀರಿಸಿ ರಾಯರು ಮನೆಗೆ ಬಂದರು. ಮನೆಯಲ್ಲಿ ತಂದೆಯವರು ಜ್ವರದಿಂದ ಹಾಸಿಗೆ ಹಿಡಿದಿದ್ದರು. ವಿಷಮಜ್ವರವದು; ಬಂದುದು ಏಡಲೇ ಇಲ್ಲ. ಅದರಲ್ಲಿಯೆ ಅವರ ಜೀವನದ ಕೊನೆಯಾಯಿತು. ಇಂಟರ್ ಪರೀಕ್ಷೆಯಲ್ಲಿ ಪಾಸಾದರೂ ಮನೆಯ ಹೊಣೆಗಾರಿಕೆಯ ಮೂಲಕ ರಾಯರ ವಿದ್ಯಾಭ್ಯಾಸಕ್ಕೂ ಕೊನೆಯಾಯಿತು. ಪ್ರಸ್ಥದ ದಿನವನ್ನು ಮುಂದೆ ನೂಕುವುದಕ್ಕೆ ತಂದೆಯವರ ಮರಣವೂ ರಾಯರಿಗೆ ಒಂದು ಹೊಸ ನೆಪವನ್ನು ಒದಗಿಸಿಕೊಟ್ಟಿತು.

ರಾಯರಲ್ಲಿ ಸಂಸಾರದ ಬಗೆಗೆ ವೈರಾಗ್ಯಭಾವವನ್ನು ಬಳೆಯಿಸುತ್ತಲೆ ಆ ವರುಷವೂ ಉರುಳಿಹೋಯಿತು. ಉರುಳಿದ ಆ ವರ್ಷ ರಾಯರ ತಾಯಿಯನ್ನು ಮುಸುಕಿಕೊಂಡಿದ್ದ ಪತಿವಿಯೋಗ ದುಃಖದ ತೆರೆಯನ್ನು ಬಯಲಾಗಿಸುತ್ತ ಮರೆಯಾಯಿತು. "ತನ್ನ ಸಂಸಾರದ ಕೊನೆಯಂತೂ ಆಗಿಬಿಟ್ಟಿತು; ಮಗನ ಸಂಸಾರದ ಸಡಗರವನ್ನಾದರೂ ನೋಡಿ, ಇದ್ದುದರಲ್ಲಿಯೆ ಆನಂದದಿಂದ ಕಾಲಯಾಪನೆ ಮಾಡಬೇಕು' ಎಂಬ ಬಯಕೆ ರಾಯರ ತಾಯಿಯವರಲ್ಲಿ ಬಳೆಯತೊಡಗಿತು. ದಿನದಿನದ ತಾಯಿಯ ಕಾಟವನ್ನು ತಾಳಲಾರದೆಯೋ, ಸೋದರಮಾವನ ಮಗಳಾದ ಅಂತಃಕರಣವನ್ನು ಕಳೆದುಕೊಳಬಾರದೆಂದು ಯೋಚಿಸಿಯೋ ರಾಯರು ಹೆಂಡತಿಯನ್ನು ಕರೆಯಿಸಿದರು. ಹೇಗೊ ಹೇಗೋ ಪ್ರಸ್ಥದ ಸಂಪ್ರದಾಯವನ್ನು ತೀರಿಸಿದರು. ದಾಂಪತ್ಯ ಜೀವನದೊಂದಿಗೆ ರಾಯರಲ್ಲಿ ಸಂಸಾರವಿರಕ್ತಿಯೆ ಬಳೆಯುತ್ತ ನಡೆಯಿತು. ಒಬ್ಬರೇ ಇದ್ದರೆಂದರೆ ಆಯಿತು; ನೋಟವನ್ನು ಯಾವುದೋ ಒಂದು ಶೂನ್ಯ ಬಿಂದುವಿನಲ್ಲಿ ಸಿಕ್ಕಿಸಿ ಧ್ಯಾನಸ್ಥರಾಗಿ ಕುಳಿತುಕೊಳ್ಳುವರು. ರಾಯರ ಆಗಿನ ಆಂತರಿಕ ದರ್ಶನಗಳು ಯಾವರೀತಿಯವಿರುತ್ತಿದ್ದುವೋ ಅವರಿಗೇ ಗೊತ್ತು. ಆ ಧ್ಯಾನದ ಕಾಲದಲ್ಲಿ ಮುಖವು ಜಿಂಬಣ್ಣವನ್ನು ತಾಳಿರುವುದು. ಮೂಗು ಬಿಸಿಯುಸಿರನ್ನು ಹೊರಕ್ಕೆ ಹಾಕುತ್ತಿರುವುದು. ಯಾರಾದರೂ ಜೊತೆಸಿಕ್ಕಾಗ ಮಾತ್ರ ರಾಯರ ಬಾಯಿಗೆ ಬಿಡುವಿರುವುದಿಲ್ಲ; ಯಾವ ರೀತಿಯಲ್ಲಾದರೂ ಸಂಸಾರವಿರಕ್ತಿಯ ಕೊಂಡಾಟ ನಡೆದಿರುತ್ತದೆ.

ಹೀಗೆಲ್ಲ ಸಂಸಾರವಿರಕ್ತಿಯ ಉಪನ್ಯಾಸಕೊಡುತ್ತಲೇ, ರಾಯರು ತಮ್ಮ ದಾಂಪತ್ಯಜೀವನದ ಮೊದಲಿನ ನಾಲ್ಕು ವರ್ಷಗಳಲ್ಲಿ ಸಂತಾನಲಾಭವೆರಡನ್ನು ಹೊಂದಿದರು; ಆದರೆ ಹುಟ್ಟಿದ ಕೂಸುಗಳಿಗೆ ಶ್ರೀಶಂಕರಾಚಾರ್ಯರ ಮಾಯಾವಾದದ ಮನವರಿಕೆಯಾಯಿತೋ, ವೈಷ್ಣವದಾಸರ ವೈರಾಗ್ಯಭಾವವು ಮನದಟ್ಟಾಯಿತೋ! ಹುಟ್ಟಿದದಿನವೇ ಅವು ಈ ಲೋಕ[illegible] ಬಿಟ್ಟುಹೋದುವು. 'ಈ ಪರತಂತ್ರಭಾರತದ [illegible]ಮಯಜೀವನದಲ್ಲಿ ತಾವೇತಕ್ಕಾಗಿ ಬದುಕಿರಬೇಕು?' ಎಂ[illegible] ವಿಚಾರದಿಂದಲೂ ಆ ಕೂಸುಗಳು ಜೀವಬಿಟ್ಟಿರಬಹುದು. [illegible]ಯಂತೆ ಮಕ್ಕಳು, ಜೊತೆಯಂತೆ ಮತಿ—ಅಲ್ಲವೆ?

ಎರಡನೆಯದನ್ನು [illegible] ರಂಗ[illegible] ಹೇನೆಬದ್ದಳು. ದಿನದಿನಕ್ಕೂ ಬಲಹೀನತೆ ಬಲಿಯತೊಡಗಿತು. [illegible]ದ್ಯರ ಗುಳಿಗೆಯನ್ನು ನುಂಗಿ, ಡಾಕ್ಟರರ ಸೀರನ್ನು ಕುಡಿದು ಎಲ್ಲವನ್ನೂ ಅರಗಿಸಿಕೊಂಡ[illegible] ಮೇಲೆ ರೋಗವು ರಂಗಕ್ಕನ ದೇಹವನ್ನೇ ಅರಗಿಸಲಾರಂಭಿಸಿ[illegible] ಮೊದಲಿನ ಎರಡು ಮೂರು ತಿಂಗಳು ಆಕೆ ಸ್ವಲ್ಪ [illegible] ತಿರುಗಾಡುತ್ತಲಿದ್ದಳು. ಬಳಿಕ ಹಾಸಿಗೆ ಹಿಡಿದವಳು ಆರೇ ತಿಂಗಳ ವರೆಗೂ ಬಿದ್ದುಕೊಂಡೇ ಇದ್ದಳು. ರಾಯರು ಹೆಂಡತಿಯ ಶುಶ್ರೂಷೆಯಲ್ಲಿ ಸ್ವಲ್ಪವೂ ಹಿಂದೆಮುಂದೆ ನೋಡಲಿಲ್ಲ; ಸೊಸೆಯ ಬೇನೆಯಿಂದ ರಾಯರ ತಾಯಿ ಆಗಾಗ ಕಣ್ಣೀರುಸುರಿಸುವರು; ತಮ್ಮ ಬಾಳನ್ನು ಬೈದುಕೊಳ್ಳುವರು. ಹೆಂಡತಿಯ ರೋಗದಿಂದ ಮಾನವಜೀವನದ ಅಸ್ಥಿರತೆಯ ವಿಷಯದಲ್ಲಿ ರಾಯರಿಗೆ ಪ್ರತ್ಯಕ್ಷ ಪ್ರಮಾಣವೊಂದು ದೊರೆತಂತಾಯಿತು; ಅವರಲ್ಲಿಯ ವೈರಾಗ್ಯ ವೃಕ್ಷಿಯ ಸಸಿಗೆ ನೀರೆರೆದಂತಾಯಿತು. ಕೊನೆಗೊಂದು ದಿನ ರಂಗಕ್ಕ ತೀರಿಹೋದಳು.

* * *

ಹೆಂಡತಿ ಸತ್ತು ತಿಂಗಳು ತಿರುಗುವಷ್ಟರಲ್ಲಿಯೆ ರಾಯರ ತಾಯಿ ಮತ್ತೊಂದು ಮದುವೆಯ ಪ್ರಸ್ತಾಪ ತೆಗೆದರು. ಅದಕ್ಕೆ ರಾಯರು ತಮ್ಮ ಸಂಪೂರ್ಣ ಅಸಮ್ಮತಿಯನ್ನು ವ್ಯಕ್ತಮಾಡಿದರು. ತಾಯಿ ರಾಶಿರಾಶಿಯಾಗಿ ಕಂಬನಿಗರೆದು, ಅತ್ತುಕರೆದು ಹೇಳಿಕೊಂಡರು. ಯಾವ ಉಪಾಯವೂ ರಾಯರ ನಿಶ್ಚಯವನ್ನು ಕದಲಿಸಲಿಲ್ಲ. ಮನೆಗೆ ಬಂದವರೆಲ್ಲರ[illegible] ರಾಯರೆದುರು ಮೊದಲನೆಯ ಮಾತಾಗಿ ಮದುವೆಯ ಪ್ರಸ್ತಾಪವ[illegible]ೇ ಎತ್ತುವರು. ಎಲ್ಲರಿಗೂ ರಾಯರು ಕೊಡುತ್ತಿದ್ದ ಖಂಡಿತವಾದ ಉತ್ತರವಿದು: "ಅನೋ[illegible]ದನ್ನು ಬಿಟ್ಟರೆ ಬೇರೆಯ ವಿಷಯವೇ ಇಲ್ಲವೇ ನಿಮಗೆ?"

"ರಾಯರು ಬಹುಶಃ ಇನ್ನು ಸಂನ್ಯಾಸ ತೆಗೆದುಕೊಳ್ಳುವರು" ಎಂದು ಶ್ರೀಕಂಠಭಟ್ಟರು ಅಲ್ಲಿಯಿಲ್ಲಿ ಹೇಳಲು ತೊಡಗಿದರು. 'ಇನ್ನೇನು ರಾಯರು ತಾಳ-ತಂಬೂರಿ-ಗೋಪಾಳಬುಟ್ಟಿಗಳನ್ನು ಕೈಕೊಳ್ಳುವರು' ಎಂದು ಸೀನಪ್ಪಾಚಾರ್ಯರು ಊರಲ್ಲಿ ಸಾ[illegible]ಲಾರಂಭಿಸಿದರು. ತಮಗೊಬ್ಬ ಒಳ್ಳೆಯ ದೇಶಭಕ್ತರ ಹದಿನಾ[illegible]ಣೆಯ ನೆರವು ದೊರೆಯುವುದೆಂದು ದೇಶಭಕ್ತರು ಆಶೆಯ ಮಾತನ್ನಾಡಲು ತೊಡಗಿದರು. ಈ ಹೇಳಿಕೆ, ಆಡಿಕೆ, ನಾರಿಕೆಗಳೆಲ್ಲವೂ—ರಾಯರ ಕಡೆಗೆ ಆಶೆಯ ಕಣ್ಣಿಂದ ನೋಡುತ್ತಲಿದ್ದ ಬಳಿದ ಹೆಣ್ಣಿ[illegible] ತಾಯ್ತಂದೆಗಳು ರಾಯರ ಹತ್ತಿರ ಸುಳಿಯದಂತೆ— ಸುತ್ತಲು ಏಳುಸುತ್ತಿನ ಬೇಲಿ[illegible]ನ್ನು ಬಿಗಿದುಬಿಟ್ಟುವು. ರಾಯರು ಈ[illegible] ಪಾತ್ರ[illegible] ಯೋಗಿಜನದ ಅಭ್ಯಾಸವನ್ನು ನಡೆಯಿಸಿದರು [illegible]ರ ತಾಯಿ ಮಗನಿಗೆ ಒಳ್ಳೆಯ ಬುದ್ಧಿಯನ್ನು ಕೊಡೆಂದ ಕುಲದೇವತೆಯನ್ನು ಹಗಲಿರುಳೂ ಮೊರೆಯಿಡತೊಡಗಿದರು.

* * * *

ಬೇಸಗೆ ಬಂದಿತು. ಊರಲ್ಲಿ ಮದುವೆ-ಮುಂಜಿಗಳ ಸುಗ್ಗಿಯೆದ್ದುಬಿಟ್ಟಿತು. ಎಲ್ಲೆಲ್ಲಿಯೂ ಮಂಗಲವಾದ್ಯದ ಮೊಳಗು ಕೇಳಾರಂಭಿಸಿತು. ರಾಯರ ಸ್ನೇಹಿತ ರಂಗನಾಥನೂ ಈ ಸಲ ವರನ್ವಧುವೊಬ್ಬಳ ಕೈಯನ್ನು ಹಿಡಿಯುವುದಕ್ಕೆ ಸಿದ್ಧನಾಗಿ[illegible] ರಾಯರ ವೈರಾಗ್ಯದ ಕೊಂಡಾಟದ ಉಪನ್ಯಾಸಗಳಿಂದ ಇ[illegible]

ವರೆಗೂ ಸಂಸಾರದ ನೊಗವನ್ನು ಸಂದೇಹದೃಷ್ಟಿಯಿಂದ ನೋಡುತ್ತ ಬಂದವನಿವನು. ಮದುವೆ ಮುಗಿಯುವ ವರೆಗೂ ಸ್ನೇಹಿತರೆಲ್ಲರು ತಮ್ಮ ಮನೆಯಲ್ಲಿಯೆ ಇದ್ದುಬಿಡಬೇಕೆಂದು ರಂಗನಾಥನು ಹೇಳಿಕೊಂಡ. ಎಲ್ಲರೂ ಒಪ್ಪಿಕೊಂಡರು. ರಾಯರೊಬ್ಬರು ಮಾತ್ರ ಅಕ್ಷತೆಯ ಕಾಲಕ್ಕೆ ಬಂದುಹೋಗುವೆನೆಂದು ಕ್ಷಮಾಯಾಚನೆಯೊಂದಿಗೆ ಹೇಳಿದರು.

* * * *

ವಧುವು ಅದೇ ಊರಿನದು. ವಧುವಿನ ತಂದೆ ಚೆನ್ನಾಗಿ ಉಳ್ಳವರು. ಮದುವೆ ಅವರ ಮನೆಯಲ್ಲಿಯೆ. ಬೇರೆಬೇರೆ ಕಡೆಯಿಂದ ಬಂದ ನಿಬ್ಬಣಿಗರಿಂದ ಮದುವೆಯ ಮನೆಯೆಲ್ಲ ತುಂಬಿಹೋಗಿದ್ದಿತು. ಅಕ್ಷತೆಗೆ ಇನ್ನೂ ಅರ್ಧಗಂಟೆಯಿರುವಾಗಲೆ ರಾಯರು ಗಂಭೀರ ಭಾವದಿಂದ ಬಂದು ತಮ್ಮ ಗೆಳೆಯರ ಬಳಗದಲ್ಲಿ ಕುಳಿತುಕೊಂಡರು. ಮದುವೆಯ ಮಂಟಪ, ಗಂಡು, ಹೆಣ್ಣು, ಹೋಮ, ಹವನ, ವೇದಮಂತ್ರ ಇವೆಲ್ಲ ಸೇರಿ ರಾಯರ ವ್ಯೆಮನಸಗಳನ್ನು ಅದೇ ತಕ್ಕೊ ಒಮ್ಮೆಲೆ ಜುಮ್ಮುದಟ್ಟಿಸಿದುವು. ಬೆರಗುಗಣ್ಣುಗಳ ಅಸ್ಥಿರದೃಷ್ಟಿಯಿಂದ ಅಲ್ಲಿಯ ಸಂನಿವೇಶಗಳನ್ನೆಲ್ಲ ನೋಡಲುತೊಡಗಿದರು. ಮದುವೆಯ ಮನೆಯ ಒಂದುಬಗೆಯ ಉತ್ತೇಜಕ ವಾಸನೆಯು ಉಸಿರಾಟದೊಂದಿಗೆ ಎಡೆಬಿಡದೆ ಮೂಗಿನಲ್ಲಿ ನುಗ್ಗಿಬರುತ್ತಿದ್ದಿತು.

ವಿವಾಹ ಮಂಟಪದಲ್ಲಿ ಎಲ್ಲೆಲ್ಲಿಯೂ ಚೆನ್ನೆಯರ ಓಡಾಟವೇ ಓಡಾಟ. ದೂರದೂರದ ನೆಂಟರು ಬಂದುದರಿಂದ ಓಡಾಡುವ ಹೆಂಗುಸರಲ್ಲಿ ಅನೇಕರವು ಹೊಸಮುಖ. ಮಂಗಲಸಮಯದ ಪ್ರಸನ್ನಭಾವವು ಎಲ್ಲರ ಮುಖಗಳನ್ನೂ ಅರಳಿಸಿದ್ದಿತು. ಅವರಲ್ಲಿಯ ಅನೇಕರ ಚೆಲುವಿಕೆಯು ಬಲುಜನರ ನೋಟಗಳನ್ನು ಸೆಳೆಯುವಂತಹದು. ಅದರಲ್ಲಿಯೂ ಬಣ್ಣಬಣ್ಣದ ಹೊಸ ಹೊಸ ಮಿರುಗಿನ ಸೀರೆ–ಕುಪ್ಪಸಗಳು, ಚಿನ್ನ–ರನ್ನದ ತೊಡವುಗಳು, ತಮ್ಮ ತಮ್ಮಲ್ಲಿಯ ತುಂಟಾಟ–ಹುಡುಗಾಟಗಳಿಂದ ಮೂಡಿದ ಮೆಲುನಗೆಯ ಮಿಂಚು ಇವೆಲ್ಲ ಕೂಡಿ ಇಲ್ಲದವರಲ್ಲಿಯೂ – ಚೆಲುವನ್ನು ತಂದು ತುಂಬಿದ್ದುವು. ತೆರೆದ ಕಣ್ಣುಗಳಿಂದ ರಾಯರು ಇದೆಲ್ಲ ಚೆಲುವಿನ ರಾಜ್ಯವನ್ನು ನೋಡಿಯೆ ನೋಡುತ್ತಿದ್ದರು.

ರಾಯರ ಸ್ನೇಹಿತರ ಹೆಂಡಂದಿರು ಕೆಲವರು, ತಮ್ಮ ಬೆಡಗು–ಬಿಯ್ಯಾರಗಳನ್ನು ತಮ್ಮ ಗಂಡಂದಿರು ಆತುರಭಾವದಿಂದ ನಿರೀಕ್ಷಿಸುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸುವದಕ್ಕಾಗಿಯೇನೋ ಆಗಾಗ ಕಳ್ಳನೋಟದಿಂದ ಗಂಡಂದಿರತ್ತ ನೋಡುತ್ತ – ನಿಮಿಷ ನಿಮಿಷಕ್ಕೊಮ್ಮೆ ಅಲ್ಲಿ ಸುಳಿಸುಳಿದು ಹೋಗುವರು. ತಮ್ಮ ಕಳ್ಳನೋಟವನ್ನು ಇನ್ನಾದರೂ ನೋಡಿದರೆಂಬುದು ತಿಳಿದಾಗಂತೂ ನಾಚಿಕೆ ಅವರ ಕೆಳದುಟಿಯನ್ನು ಕಚ್ಚಿಸುವುದು; ಕೆನ್ನೆಗಳ ಕೆಂಪನ್ನು ಹೆಚ್ಚಿಸುವುದು. ರಾಯರ ಕೂಡ [illegible]

ವಂತೂ ಸ್ನೇಹಿತರು ಕೇಳಿದುದೇ ಒಂದು; ಅದಕ್ಕೆ ರಾಯರು ಉತ್ತರ ಕೊಟ್ಟುದೇ ಒಂದು ; ಹೀಗಾಗಿ ರಾಯರಿಗೆ ಗೊಂದಲಕ್ಕಿಟ್ಟಿತು.

ಪಾಣಿಗ್ರಹಣ ವಿಧಿಯು ಮುಗಿದು, ಬಂದಿದ್ದ ಅತಿಥಿಗಳೆಲ್ಲರೂ ಮನೆಗೆ ಹೊರಟರು. ರಾಯರೂ ಹೊರಟುಬಿಡಬಹುದೆಂದು ಗೆಳೆಯರೆಲ್ಲರಿಗೂ ಎನಿಸಿದ್ದಿತು. ಆಗ ರಾಯರು ಹೇಳಿದರು.

“ ರಂಗನ ಕೂಡ ಮಾತುಕತೆಯಾಡಲಿಕ್ಕೆ ಆಗಲೇ ಇಲ್ಲ. ಈಗ ಮನೆಗೆ ಹೋಗಿಯಾದರೂ ಮಾಡುವ ಕೆಲಸವೇನಿದೆ? ಮದುವಣಿಗನಿಗೆ ಬಿಡುವು ದೊರೆಯುವವರೆಗೂ ಇಲ್ಲಿಯೆ ಕುಳಿತರಾಯಿತು. ಮತ್ತೆ ನನ್ನದೇನಾದರೂ ಇಲ್ಲಿ ಕೆಲಸವಿದ್ದರೆ ಹೇಳಿ! ನಮ್ಮ ರಂಗನಾಥನ ಮದುವೆಯ ಕಾರ್ಯದಲ್ಲಿ ನಾನು ಪಾಲುಗಾರನಾಗದಿದ್ದರೆ ಹೇಗೆ ? ”

ಅಂದು ರಾಯರು ಎಲ್ಲ ಸ್ನೇಹಿತರೊಂದಿಗೂ ತುಂಬ ಸಲಿಗೆಯಿಂದ ಮಾತನಾಡುತ್ತಿದ್ದರು. ನಗೆಯಲ್ಲಿಯ ಬಿಗುಹೂ ನಾಕಷ್ಟು ಸಡಿಲಾಗಿದ್ದಿತು.

* * * *

ಮದುವೆಯ ಮರುದಿನದ ಮದುಮಕ್ಕಳ ಉರುಟಣೆಯನ್ನು ನೋಡಲಿಕ್ಕೆಂದು ರಂಗನಾಥನ ಸ್ನೇಹಿತರೆಲ್ಲರೂ ಬಂದರು. ಅವರಲ್ಲಿ ರಾಯರ ಮುಖವೂ ಕಾಣಿಸುತ್ತಿದ್ದಿತು. ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಉಚಿತಸ್ಥಳದ ಏರ್ಪಾಡು ಮೊದಲೆ ಆಗಿದ್ದಿತು.

ಹೆಂಗುಸರೆಲ್ಲರಿಗೂ ಸ್ವಾತಂತ್ರ್ಯದಿನವದು. ಎಲ್ಲರೂ ಬೇಕಾದ ಹಾಗೆ ನಕ್ಕು ಕೆಲೆದು ಮಾತನಾಡುತ್ತಿದ್ದರು. ಪೆಟ್ರೋಮ್ಯಾಕ್ಸಿನ ನಿಚ್ಚಳವಾದ ಬೆಳಕಿನಲ್ಲಿ ನಾರಿಯರ ಗುಂಪಿನ ಶೃಂಗಾರ ವೈವಿಧ್ಯವು ಎದ್ದು ಕಾಣುತ್ತಿದ್ದಿತು. ಅನೇಕರ ಮೂಗಬಟ್ಟು, ಬೆಂಡೋಲೆಗಳಲ್ಲಿಯ ಹರಳುಗಳು ತೊಳತೊಳಗಿ ಸುತ್ತಲೂ ಕಿರಣಗಳನ್ನು ಕಳುಹುತ್ತಿದ್ದವು. ಮದುವಣಿಗರ ಬಳಿಯಲ್ಲಿ ಹಚ್ಚಿಟ್ಟಿದ್ದ ಊದಬತ್ತಿಗಳ ಗಿಡವು ದಿವಾಣಖಾನೆಯ ವಾತಾವರಣದಲ್ಲೆಲ್ಲ ತನ್ನ ಅವಿರತವಾದ ಬಲ್ಗಂಪನ್ನು ಹರಡುತ್ತಿದ್ದಿತು. ಪನ್ನೀರು–ಗಂಧದೆಣ್ಣೆಗಳ ಮೆಲುಗಂಪೂ ಆಗಾಗ ತೆರೆತೆರೆಯಾಗಿ ಬಂದು ಮೂಗನ್ನು ಸೋಂಕುತ್ತಿದ್ದಿತು. ರಾಯರ ನೋಟದಲ್ಲಿ ಆಗ ಒಂದುಬಗೆಯ ಚಾಂಚಲ್ಯ ; ಮುಖದಲ್ಲಿ ಒಂದು ವಿಧದ ಗಾಬರಿ. ಎದೆಯು ಡವಡವಿಸುತ್ತಿದ್ದಿತೇನೋ!

ಮದುವಣಗಿತ್ತಿ ನಾಚುತ್ತ ನಲುಗುತ್ತ ಎದು [illegible] ಹುಡುಗಿ ಸ್ಫುರದ್ರೂಪಿ. ಬಳೆದ ಹಣ್ಣಾದ [illegible] ಸರಿ – ಗಳಿಗೆ ತಕ್ಕಮಟ್ಟಿನ ಪೂರ್ಣತೆ ಬಂದಿದ್ದಿತು. [illegible] ನಮ್ಮ ಮಾತನ್ನು ತಿಳಿಗಿನ ರೇಶಿಮೆಯ ಸೀರೆ–ಕುಪ್ಪಸ [illegible] ರಿಂದ ಮೈಯ ತುಂಬುತನವು ಅ [illegible] ಕಾಣಿಸುತ್ತಿದ್ದಿತು. ರಾವು ಜನರೆಯರನೇಕರು ಸೇರಿದ್ದರ ಅರಿವೇನೂ ಇದ್ದಂತೆ ಕಾಣಲಿಲ್ಲ.

ಗೆಳೆಯರ ಬಳಗದಲ್ಲಿ ಬಗೆಬಗೆಯ ಹರಟೆ ನಡೆದಿದ್ದಿತಾದರೂ ರಾಯರು ಮಾತ್ರ ಮೌನಿಗಳು. ಅವರು ಶ್ರೀನಾರಾಯಣ ಸ್ವರೂಪಿಯಾದ ವರನನ್ನೊಮ್ಮೆ, ಶ್ರೀಲಕ್ಷ್ಮೀಸ್ವರೂಪಿಯಾದ ವಧುವನ್ನೊಮ್ಮೆ ಎವೆಯಿಕ್ಕದೆ ನೋಡುತ್ತ ಕುಳಿತಿದ್ದರು. ನಡು ನಡುವೆ ರಾಯರ ಕಣ್ಣುಗಳು ಧ್ಯಾನಮುದ್ರೆಯನ್ನು ತಳೆದು ಯಾವುವೊ ಆಂತರಿಕ ದರ್ಶನಗಳನ್ನು ಕಾಣುತ್ತಿದ್ದುವು. ಆಗ ಬಾಯಿಂದ ತುಂಡುತುಂಡಾದ ನಿಟ್ಟುಸಿರೊಂದು ಹೊರಕ್ಕೆ ಹೊರ ಹೊರಡುತ್ತಿದ್ದಿತು. ಉರುಟಣೆ ಮುಗಿದು ಆರತಿ ನಡೆಯುವ ವರೆಗೂ ರಾಯರ ಬಾಯಿಂದ ಒಂದು ನುಡಿಯೂ ಹೊರಬಿದ್ದಿರಲಿಲ್ಲ. ಕೊನೆಗೆ ಒಂದೆಬಂದು ಮಾತನ್ನಾಡಿದರು.

" ರಂಗನ ಹೆಂಡತಿ ನಿನ್ನೆಯ ದಿನ ಅಷ್ಟೊಂದು ಚೆಲುವೆಯಾಗಿ ಕಾಣಲಿಲ್ಲ, ಅಲ್ಲವೇ ? "

ರಂಗನಾಥನ ಮದುವೆಯಾಗಿ ಎರಡು ಮೂರು ದಿನಗಳ ವ ರಾಯರು ಹೆಚ್ಚಾಗಿ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಇ ಸ್ಟೇಷನ್ ದಾರಿಯಲ್ಲಿ ಒಬ್ಬರೆ ಅಡಿಯಾಡುತ್ತ ನಡೆದಿದ್ದ ಮುಖದ ಲಕ್ಷಣವನ್ನು ನೋಡಿದರೆ ಯಾರ ಜೊತೆಯೂ ಆ ಗೀಗ ಬೇಕಾಗಿರಲಿಲ್ಲವೆಂದು ತೋರುತ್ತಿದ್ದಿತು. ಆದರೆ ದಾರಿಯ ನಾಲ್ಕಾರು ಜನ ಗೆಳೆಯರು ರಾಯರನ್ನು ಸಂಧಿಸಿದರು. ಹ ಐದುವರೆ ಗಂಟೆಯಾಗಿರಬಹುದು. ಸ್ಟೇಷನ್ನಿಗೆ ' ಪ್ಯಾಸೆಂ ಟ್ರೇನು ' ಬರುವ ಸಮಯ. ಎಲ್ಲರೂ ಸೇರಿ ಸ್ಟೇಷನ್ ಕಡ ಹೊರಡೋಣವೆಂದು ಮುಂದುವರಿದರು. ಇವರು ಸ್ಟೇಷ ತಲ್ಪುವದರಲ್ಲಿಯೆ ಟ್ರೇನು ಬಂದು ಪ್ಲ್ಯಾಟ್‌ಫಾರ್ಮಿನ ಮೆ ನಿಂತಿದ್ದಿತು. ಜನರು ಇಳಿದಿಳಿದು ಹೊರಕ್ಕೆ ಬರುತ್ತಿದ್ದರು.

ಗದ್ದಲವೆಲ್ಲ ಮುಗಿದ ಮೇಲೆ ಎಲ್ಲರಿಗಿಂತ ಹಿಂದಿನಿಂದ ತರ

ನಲ್ಲಿ ನ,

ಗದ್ದಲವೆಲ್ಲ ಮುಗಿದ ಮೇಲೆ ಎಲ್ಲರಿಗಿಂತ ಹಿಂದಿನಿಂದ ತರುಣಿಯೊಬ್ಬಳು ಹೊರಕ್ಕೆ ಬಂದಳು.....

ಾಸುಗಳಿಗೆ ಶ್ರೀ

ಾಯಿತೋ, ಪೈಷ್ಣವಾಗಿ ಯಾರೋ ನುಡಿದರು:

ುತೋ! ಹುಟ್ಟಿದದಿನವೇಗಿ ಮದುವೆಯ ದಿನವೆ ಚೆನ್ನಾ ೋದುವು. 'ಈ ಪರತಂತ್ರಭೀತೆಯ ವೇಷ ಹಾಕಿರುತ್ತಾ ಾವೇತಕ್ಕಾಗಿ ಬದುಕಿರಬೇಕು?' ುಕೊಂಡೇ ಮಾಡಿದ್ದಾರೆ. ಾಸುಗಳು ಜೀವಬಿಟ್ಟಿರಬಹುದ ೊತೆಯಂತೆ ಮತಿ-ಅಲ್ಲವೆ?

ಎರಡನೆಯದನ್ನು ಹೆತ್ತ ರಂಗನ ... ರ ಗು ... ಲಹೀನತೆ ಬಲಿಯುತ್ತಾಗಿತು.

ಯೊಬ್ಬಳು ಹೊರಕ್ಕೆ ಬಂದಳು. ಜೊತೆಗೆ ವಯಸ್ಕರಾದ ಗೃ ಇಳಿಬ್ಬರಿದ್ದರು. ವಯಸ್ಸು ಇಪ್ಪತ್ತು ಇಪ್ಪತ್ತೊಂದರ ಳೊಳಗೆ ಇರಬಹುದವಳಿಗೆ. ಸೃಷ್ಟಿಕರ್ತನು ಬೇಕಾದುದಷ್ಟಕ ಹೆಚ್ಚಾಗಿಯೆ ಅವಳಲ್ಲಿ ಚೆಲುವನ್ನಿರಿಸಿದ್ದ ; ಮತ್ತೆ ಆ ಚೆಲುವ ಇನ್ನಷ್ಟು ಮೆರೆಯಿಸಿ ತೋರಿಸುವಂತೆ ಉಡಿಗೆ-ತೊಡಿಗೆ ವ ಕೊಳ್ಳುವ ಚದುರನ್ನೂ ಕೊಟ್ಟಿದ್ದನೆಂದು ತೋರುವುದು. ಪ ನದ ಗಲಾಟೆಯಲ್ಲಿ ಮುಡಿಯು ಸಡಲಿ ಮುಂಗುರುಳು

ಜಯಂ

ದ್ದರೂ ಮೊಗದ ಸೊಬಗು ಕಡಿಮೆಯಾಗಿರಲಿಲ್ಲ. ದೂರದ ದಾರಿಯ ಶ್ರಮದಿಂದ ಬಳಲಿದ ಭಾವದವಳಾಗಿದ್ದರೂ ಕೆನ್ನೆ-ತುಟಿಗಳ ಕೆಂಪು ಕಡಿಮೆಯಾಗಿರಲಿಲ್ಲ. ರಾಯರು ಅವಳಲ್ಲಿ ನೆಡಿಸಿದ್ದ ತಮ್ಮ ನೋಟವನ್ನೇ ಕಿತ್ತುಕೊಳ್ಳಬೇಕಾದರೆ ಗೆಳೆಯರ ಕಣ್ಣುಸನ್ನೆಯ ಕೊಂಕುನಗೆಯೂ ಕಾರಣವಾಯಿತು. ಗೊಂದಲಗೊಂಡ ದನಿಯಲ್ಲಿ ರಾಯರು ಕೇಳಿದರು :

"ಈ ಹೆಣ್ಣುಮಗಳು ಯಾರು ?"

ಒಬ್ಬ ಪರಿಹಾಸದ ದನಿಯಲ್ಲಿ ನುಡಿದ :

"ಇರಬಹುದು ಯಾವನಾದರೂ ಒಬ್ಬ ತಂದೆಯ ಮಗಳು ; ಯಾವನಾದರೂ ಒಬ್ಬ ಗಂಡನ ಹೆಂಡತಿ !"

ಅವರನ್ನರಿತವನೊಬ್ಬ ಮಾತನಾಡಿದ.

"ತಂದೆಗೆ ಮಗಳಾಗಿದ್ದುದೇನೋ ಸರಿ ! ಗಂಡನಿಗೆ ಹೆಂಡತಿ ಇನ್ನು ಮೇಲೆ ಆಗಬೇಕು."

ರಾಯರು ಆತುರದ ದನಿಯಲ್ಲಿ ಕೇಳಿದರು :

"ಏನು ಇವರು ನಿಮಗೆ ಗೊತ್ತೇ ? ಇನ್ನೂ ಇವಳಿಗೆ ಮದುವೆಯಿಲ್ಲವೇ?"

"ನಮ್ಮ ವಕೀಲ ಮಾಧವರಾಯರಿಲ್ಲವೇ ! ಆ ಮುದುಕ ಅವರ ಸೋದರಮಾವ. ಹುಡುಗಿ ಮುದುಕನ ಮಗಳು."

"ಹುಡುಗಿಯೇನು ! ಹೆಂಗುಸೆಂದು ಹೇಳಬಾರದೇ ?'

"ಮದುವೆಯಾಗುವವರೆಗೂ ಹೆಂಗಸರೆಲ್ಲ ಹುಡುಗಿಯರೇ ! ಏನು ರಾಯರೇ !'

ರಾಯರ ಕಣ್ಣು, ಕಿವಿ, ಮನಸ್ಸು, ಬುದ್ಧಿ ಎಲ್ಲವೂ ಅಂತರ್ಮುಖವಾಗಿದ್ದುವು. ಗೆಳೆಯನ ಕೂಗಿಗೆ ಬೆಚ್ಚಿಬಿದ್ದವರಾಗಿ ಬಣಗಿದ ದನಿಯಲ್ಲಿ ಅವರು ಹೇಳಿದರು. "ಅಷ್ಟೇ ಸರಿ !"

ಸ್ಟೇಷನ್ನಿನಿಂದ ಮನೆಗೆ ಮರಳುವಾಗ ಆ ಹುಡುಗಿಯ ವಿಚಾರದಲ್ಲಿ ರಾಯರಿಗೆ ಗೊತ್ತಾದ ಸಂಗತಿಯಿಷ್ಟು :

"ಹುಡುಗಿಯ ತಂದೆ ಜಮ್‌ಸೇದ್‌ಪುರದಲ್ಲಿ ಕೆಲಸಕ್ಕೆ ಇದ್ದಾರೆ. ಸಂಪ್ರದಾಯವಂತರಾದರೂ ಅನುಕೂಲ ವರನನ್ನು ಹುಡುಕುವುದಕ್ಕಾಗದೆ ಮಗಳನ್ನು ಓದಿಸಿದರು. ಹುಡುಗಿ ಹೆಚ್ಚಾಗಿ ಕಲಿತವಳಲ್ಲವೆಂದು ಸುಧಾರಕರೂ ಮದುವೆಗೆ ಸಮ್ಮತಿಸಲಿಲ್ಲ. ಓದಿದ ಹುಡುಗಿಯಾದುದರಿಂದ ಸಂಪ್ರದಾಯವಂತರೂ ಸಿದ್ಧರಾಗಲಿಲ್ಲ. ಬೇಗನೆ ಹುಡುಗಿಯ ಮದುವೆ ಮಾಡಬೇಕೆಂದು ತಂದೆ ಬಾಯ್‌ಬಿಡುತ್ತಿದ್ದಾನೆ. ಈಗ ವರಸಂಶೋಧನಕ್ಕಾಗಿಯೆ ತಿಂಗಳ ರಜೆಪಡೆದುಕೊಂಡು ಇಲ್ಲಿಗೆ ಬಂದಿದ್ದಾನೆ."

ಕೇಳಿದ ಗೆಳೆಯರಲ್ಲಿ ಒಬ್ಬನು ಅಣಕದ ದನಿಯಲ್ಲಿ ನುಡಿದ.

"ಪಾಪ ! ಈ ಹುಡುಗಿಯನ್ನು ಪ್ರತ್ಯಕ್ಷವಾಗಿ ಯಾರೂ ನೋಡಿರಲಿಕ್ಕಿಲ್ಲ. ಎಂತಲೆ ಆ ಸುಧಾರಕರೂ ಸಂಪ್ರದಾಯವಂತರೂ ಇವಳನ್ನು ಬಿಟ್ಟಿದ್ದಾರೆ."

ಈಗ ನಕ್ಕ ರಾಯರ ನಗೆಯು ಒಳಗೊಳಗಿಂದ ಹೊರಟುದಾಗಿತ್ತು.

* * * *

ರಾಯರ ಮನೆಯ ಒಕ್ಕಲುಗಿತ್ತಿ ನೀಲಿ ಸ್ವಲ್ಪ ಬೆಡಗುಬಿನ್ನಾಣದಾಕೆ. ಕಣ್ಣು, ಮೂಗು ಕೊಂಚ ಚೆನ್ನಾಗಿದ್ದುದರಿಂದ ರತಿದೇವಿಯ ಹೆಮ್ಮೆಯವಳಿಗೆ. ಎಷ್ಟೋ ಸಲ ನೀಲಿ ಇಲ್ಲದ ನೆಪಗಳನ್ನು ತೆಗೆದು ತಾನಾಗಿಯೆ ರಾಯರನ್ನು ಮಾತನಾಡಿಸುತ್ತಿರುವಳು ; ಆದರೆ ರಾಯರ ಗಾಂಭೀರ್ಯ ಅವಳೊಂದಿಗೆ ಹೆಚ್ಚಿನ ಮಾತುಗಳನ್ನೆ ಆಡಗೊಡುತ್ತಿರಲಿಲ್ಲ. ಇತ್ತೀಚೆಗಿನ ಎರಡು ದಿನಗಳಿಂದ ರಾಯರು ನೀಲಿಯೊಂದಿಗೆ ಸಲುಗೆಯಿಂದ ಮಾತುಕತೆಯಾಡುವರು : ಏನನಾದರೂ ನಗೆಯಾಟವಾಡುವರು. ನೀಲಿಗೆ ರಾಯರ ಈ ರೀತಿ ತೀರ ಹೊಸಬಗೆಯದಾಗಿ ಕಂಡಿತು ; ಸಮಾಧಾನ ಬೆರೆತ ಬಿಂಕವು ಅವಳ ಮನಸ್ಸನ್ನಾವರಿಸಿತು.

ತಾಯಿಯವರಿಗೆ ರಾಯರ ರೀತಿ-ನೀತಿಗಳಲ್ಲಿ ಹೆಚ್ಚಿನ ಪರಿವರ್ತನವೇನೂ ಕಂಡುಬರಲಿಲ್ಲ. ಏಕೆಂದರೆ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಎಂದಿನಂತೆಯೆ ಮಗನು ಧ್ಯಾನಮಗ್ನನಾಗಿ ಕುಳಿತಿರುತ್ತಿದ್ದ. ಏನನಾದರೂ ಮಾತನಾಡಿಸಿದರೆ ಅದರ ಎಚ್ಚರ ಕೂಡ ಇರುತ್ತಿರಲಿಲ್ಲ. ಇದರಿಂದ ತಾಯಿಗೆ ತುಂಬ ಅಸಮಾಧಾನ.

* * * *

ಇಂದು ರಾತ್ರಿಯ ಊಟಕ್ಕೆ ಕುಳಿತಾಗ ತಾಯಿ ರಾಯರಿಗೆ ಹೇಳಿದರು :

"ವಕೀಲ ಮಾಧವರಾಯರ ತಾಯಿ ಇಂದು ನಮ್ಮ ಮನೆಗೆ ಬಂದಿದ್ದರು."

ರಾಯರು ಮಾತನೇನೂ ಆಡದೆ ತಾಯಿಯ ಕಡೆಗೆ ಮುಖವೆತ್ತಿ ನೋಡಿ, 'ಸರಿ ಬಂದಿರಬಹುದು' ಎಂಬರ್ಥದ ಗೋಣನ್ನು ಹಾಕಿದರು. ತಾಯಿ ಮುಂದೆ ನುಡಿದರು :

"ಅವರ ತಮ್ಮ ನಿನ್ನೆಯ ದಿನ ಇಲ್ಲಿಗೆ ಬಂದಿದ್ದಾರಂತೆ ಜಮ್‌ಸೇದ್‌ಪುರದಿಂದ !"

ಆತುರದ ಧನಿಯಲ್ಲಿ ರಾಯರು ಕೇಳಿದರು :

"ಜಮ್‌ಸೇದ್‌ಪುರದಿಂದ ?"

"ಹುಂ. ಜಮ್‌ಸೇದ್‌ಪುರದಿಂದಲೇ ! ಅವರಿಗೆ ಮಗಳೊಬ್ಬಳಿದ್ದಾಳಂತೆ; ಮದುವೆಗಾಗಿದ್ದಾಳಂತೆ. ಹುಡುಗಿ ಬಲು ಚಲುವೆಯಂತೆ. ಅವರು ವರಸಂಶೋಧನಕ್ಕಾಗಿ ಮಗಳನ್ನು ಕರೆದುಕೊಂಡೇ ಇಲ್ಲಿಗೆ ಬಂದಿದ್ದಾರಂತೆ !"

ದಡದಡಿಸುವ ಎದೆಯಿಂದ ರಾಯರು ಕೇಳಿದರು !

'ಏನು ? ಇಲ್ಲಿ ಯಾರಿಗಾದರೂ ಕೊಡಬೇಕೆಂದಿದ್ದಾರೆಯೆ ?"

"ಅದಕ್ಕೆಂತಲೇ ಮಾಧವರಾಯರ ತಾಯಿ ನಮ್ಮ ಮನೆಗೆ ಬಂದಿದ್ದರು. ಹುಡುಗಿ ನಿಮ್ಮ ಸೊಸೆಯಾಗುವುದಕ್ಕೇ ಸರಿ — ಎಂದು ಹೇಳಿದರು. ಆದರೇನು ? ದೈವವೊಂದು ನಮ್ಮ ಮಾತನ್ನು ಕೇಳಬೇಕಲ್ಲವೇ ?"

ರಾಯರು ಮಂಕುಕವಿದಂತೆ ಕುಳಿತುಬಿಟ್ಟರು. ತಾವು ಊಟಕ್ಕೆ ಕುಳಿತಿದ್ದೇವೆಯೆಂಬುದರ ಅರಿವೇನೂ ಇದ್ದಂತೆ ಕಾಣಲಿಲ್ಲ. ತಾಯಿ ಆಸೆಯ ದನಿಯಲ್ಲಿ ಹೇಳಿದರು :

"ತಾಯಿಯಾದುದಕ್ಕೆ ನನ್ನದೊಂದು ಮಾತನ್ನು ನಡೆಯಿಸಿಕೊಡು ಮಗು !"

" ಅದಾವುದಮ್ಮಾ ನಿನ್ನ ಮಾತು ? " ರಾಯರು ಉತ್ಸಾಹದಿಂದ ಕೇಳಿದರು.

" ಇನ್ನೇನೂ ಇಲ್ಲ; ನೀನು ಆ ಹುಡುಗಿಯನ್ನು ಮದುವೆ ಮಾಡಿಕೊಂಡುಬಿಡು ! ಪಾಪ, ಮುದುಕಿ ಎಷ್ಟೊಂದು ಹೇಳಿಕೊಂಡು ಹೋಗಿದ್ದಾಳೆ. "

ದೊಡ್ಡದೊಂದು ಹೊರೆಯನ್ನು ಇಳಿಸಿದಷ್ಟು ರಾಯರ ಮನಸ್ಸು ಹಗುರಾಗಿದ್ದಿತು. ನಗೆಯಾಟದ ದನಿಯಲ್ಲಿ ಅವರು ತಾಯಿಗೆ ಹೇಳಿದರು :

" ಆ ಹುಡುಗಿ ನನಗೆ ಗೊತ್ತಮ್ಮಾ ! ಆಕೆ ದೊಡ್ಡವಳಾಗಿಯೆ ಈಗ ಆರೇಳು ವರ್ಷಗಳಾದುವಂತೆ ! "

" ಅದಕ್ಕೇನೋ ! ಎಲ್ಲೆಲ್ಲಿಯೂ ನಡೆದೇಬಿಟ್ಟಿದೆಯಲ್ಲ ! ಮೊನ್ನೆ ರಂಗನಾಥನ ಮದುವೆಯೆ ಆಗಲಿಲ್ಲವೇ ? ದೊಡ್ಡವಳಾಗಿ ವರ್ಷೆರಡು ವರ್ಷವಾಗಿದ್ದರೇನು ? ಆರೇಳು ವರ್ಷವಾಗಿದ್ದರೇನು ? ಬೆಳೆದ ವರನಿಗೆ ಬೆಳೆದ ಕನ್ಯೆಯೆ ಬೇಕಲ್ಲವೇ ? "

ರಾಯರು ನನುವೇಳೆ ಸುಮ್ಮಗೆ ಕುಳಿತು ಕೇಳಿದರು.

" ಹಾಗಾದರೆ ನಿನ್ನ ಒಪ್ಪಿಗೆಯೂ ಇದೆಯೆನ್ನು ! ಇದಕ್ಕೆ ! "

" ಒಪ್ಪಿಗೆಯಿಷ್ಟೇ ಅಲ್ಲ ; ಒತ್ತಾಯವಿದೆ. "

ತೃಪ್ತಿಯ ದನಿಯಲ್ಲಿ ರಾಯರು ಹೇಳಿದರು :

" ಇಷ್ಟು ದಿನ ನಾನೂ ವಿಚಾರವನ್ನು ಮಾಡಿದೆ. ಅಮ್ಮಾ ! ತಾಯಿಯ ಅಪ್ಪಣೆಯನ್ನು ಮೀರಿ ನಡೆಯುವುದು ಪಾಪವೆಂದು ನನಗೆ ಎನಿಸುತ್ತಿದೆ. "

ಮುದುಕಿಯ ಮುಖದ ಮೇಲೆ ಗೆಲುವಿನ ನಗೆ ಆಟವಾಡಿತು. ಮಾತು ಕೇಳುವ ಮಗನನ್ನು ಕೊಟ್ಟುದಕ್ಕಾಗಿ ದೇವರನ್ನು ಆಕೆ ಎಷ್ಟೆಷ್ಟೋ ಕೊಂಡಾಡಿದಳು. ಹೃದಯದಲ್ಲಿ ಹಿಡಿಸಲಾರದಿದ್ದ ಹಿಗ್ಗನ್ನು ಹೊರಕ್ಕೆ ಹಾಕುವುದಕ್ಕಾಗಿ ' ಹನುಮಂತಾ ' ' ಹನುಮಂತಾ ' ಎಂದು ಮನೆಯಾಳನ್ನು ಕೂಗುತ್ತ ಹೊರಕ್ಕೆ ಹೊರಟರು. ರಾಯರ ಹೊಟ್ಟೆ ಒಂದು ತುತ್ತು ಕೂಡ ಹಿಡಿಸದಂತೆ ತುಂಬಿಬಿಟ್ಟಿದ್ದಿತು.

* * * *

ಮರುದಿನವೆ ಊರಲ್ಲಿ ಎಲ್ಲೆಲ್ಲಿಯೂ ರಾಯರ ಎರಡನೆಯ ಮದುವೆಯ ಸುದ್ದಿ. ಶ್ರೀಕಂಠಭಟ್ಟರನ್ನು ಯಾರೋ ಅಣಕದ ಮಾತಿನಲ್ಲಿ ಕೇಳಿದರು :

" ರಾಯರು ಸಂನ್ಯಾಸವನ್ನೆಂದು ತೆಗೆದುಕೊಳ್ಳುತ್ತಾರೆ ಭಟ್ಟರೇ ! "

ತಮ್ಮನ್ನು ಏಡಿಸಿ ನುಡಿದವರಿಗೆಲ್ಲ ಸೀನಪ್ಪಾಚಾರ್ಯರು ಸಮಾಧಾನವನ್ನು ಹೇಳುತ್ತಿದ್ದುದು ಹೀಗೆ :

" ಏನ್ಮಾಡರೂ ನೋಡಿ, ತಾಯಿಯ ಮಾತನ್ನು ಮೀರುವುದಕ್ಕಾದೀತೇ ?

' ಮಾತೃದೇವೋಭವ ' ಎಂದು ನಮ್ಮ ಶ್ರುತಿಯೇ ಹೇಳುವುದಿಲ್ಲವೆ ? "

ಸೀನಪ್ಪಾಚಾರ್ಯರ ಹಿರಿಯ ಮಗನೇ ಅವರಿಗೆ ಸರಿಯಾದ ಉತ್ತರ ಕೊಟ್ಟ :

" ಹಿಂದಿನ ಕಾಲದ ಶ್ರುತಿಯಲ್ಲಿ ' ಮಾತೃದೇವೋಭವ !' ಎಂದು ಹೇಳಿರಬಹುದು ಅಪ್ಪಾ ! ಆದರೆ . . ಇಂದಿನ ಕಾಲದ ಕೃತಿಯಲ್ಲಿ ' ಮದುವೆ ದೇವೋಭವ ! ' ಎಂದು ಹೇಳಿದೆ. "

ಮಗನ ಮಾತು ಅರ್ಥವಿಲ್ಲದುದೆಂದೇನೂ ಆಚಾರ್ಯರಿಗೆ ಎನಿಸಿರಲಾರದು. ಬರೀ ಹುಚ್ಚುನಗೆಯೊಂದನ್ನವರು ನಕ್ಕು ಬಿಟ್ಟರಷ್ಟೇ !

ಸುಳ್ಳು ಸುದ್ದಿ

ಏಪ್ರಿಲ್ ೧ ರಿಂದ ರೇಲ್ವೆ ಪ್ರವಾಸಿಕರಿಗೆ ಹೊಸತಾದ ಸವಲತ್ತು ದೊರಕಿದೆಯಂತೆ! ಗಾಡಿಯನ್ನು ನಿಲ್ಲಿಸಬೇಕಾದರೆ ಸರಪಳಿಯನ್ನು ಎಳೆಯಬೇಕಲ್ಲವೆ ? ನಿರರ್ಥಕವಾಗಿ ಸರಪಳಿಯನ್ನು ಎಳೆದರೆ ೫೦ ರೂ. ಗಳ ಜುಲ್ಮಾನೆ ಇದೆ.

ಆ ದ ರೆ

ನಿಮ್ಮ **ಜಯಂತಿಯ** ಸಂಚಿಕೆ ಕೈಜಾರಿ ಬಿದ್ದರೆ ಸರಪಳಿಯನ್ನು ಎಳೆಯಲೇಬೇಕಂತೆ ! ನಿಮ್ಮ ಜೊತೆಯ ಪ್ರವಾಸಿಕರು **ಜಯಂತಿ**ಗಾಗಿ ನಿಮ್ಮ ಸುತ್ತಲೂ ಹವೆಗಟ್ಟಿ ಮುತ್ತಬಹುದು. ಎಚ್ಚರ! ಕಿಟಕಿಯ ಹತ್ತಿರದಲ್ಲಿಯೆ **ಜಯಂತಿಯ** ವಾಚಕರು ಕೂಡಬೇಕು.

ಪಾಶ್ಚಿಮಾತ್ಯರ ಜೀವನಪಥ

ಬರೆದವರು :

ವಿ. ಕೃ. ಗೋಕಾಕ

ಇದು ಘನವಾದ ವಿಷಯ. ಎಷ್ಟು ಬರೆದರೂ ಸಾಲದು. ಆಕ್ಸ್‌ಫರ್ಡಿನ ಚಕ್ರದಲ್ಲಿ ಸಿಕ್ಕ ದಿನಗಳನ್ನು ಗಳಿಗೆಗಳಂತೆ ಕಳೆಯುವಾಗ ನನಗೆ ಹೊಳೆದ ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಬರೆಯುತ್ತೇನೆ.

ನಮ್ಮದು ನಿವೃತ್ತಿಮಾರ್ಗ; ಪಾಶ್ಚಿಮಾತ್ಯರದು ಪ್ರವೃತ್ತಿಮಾರ್ಗ. ಐಹಿಕ ಜೀವನವನ್ನು ಆದಷ್ಟು ಸುಂದರವಾಗಿಸಿ ಅದರಲ್ಲಿಯೇ ಸತ್ಯವನ್ನು ಕಾಣಬೇಕೆಂಬ ಹಂಬಲವು ಅವರದು. ಸಾಂಸಾರಿಕ ಸುಖಗಳನ್ನು ಹೇಗಾದರೂ ಸಹಿಸಿಕೊಂಡು ಪಾರಮಾರ್ಥಿಕ ಚಿಂತನೆಯಲ್ಲಿ ಕಾಲಕಳೆಯಬೇಕೆಂಬ ಹೊಳವು ನಮ್ಮದು. ಇದರಿಂದ ನಮ್ಮಲ್ಲಿ ಮೂಢತನ ಹಾಗು ಶೋಷಿತನಗಳು ಬೆಳೆದಿವೆ. ಧರ್ಮದ ಹೆಸರಿನಲ್ಲಿ ಮನುಷ್ಯತ್ವವನ್ನು ಸಹ ಮರೆಯುತ್ತೇವೆ. ಪಾಶ್ಚಿಮಾತ್ಯರಲ್ಲಿ – ಅಪರ ದೃಷ್ಟಿಯ ಮೂಲಕ – ದ್ವೇಷವು ಬೆಳೆಯುತ್ತಿದೆ, ಶಕ್ತಿಮದವು ಮಿತಿಮೀರುತ್ತಲಿದೆ. ಪಾಶ್ಚಿಮಾತ್ಯರು ಇಂದು ಉಪನಿಷತ್ತುಗಳನ್ನು ಓದಬೇಕು. ನಾವು ಭೂಗೋಲಶಾಸ್ತ್ರ, ಭೂಗರ್ಭಶಾಸ್ತ್ರ, ಶಾಸ್ತ್ರೀಯ ವಿಜ್ಞಾನ,– ಇದರ ಹಾದಿಯನ್ನು ಹಿಡಿಯಬೇಕು.

ಶಾಸ್ತ್ರೀಯ ವಿಜ್ಞಾನವು ಕಟ್ಟಿದ ಸಮಾಜದಲ್ಲಿ ನಿಂತು ಪಾಶ್ಚಿಮಾತ್ಯರು ಕಲೋಪಾಸಕರಂತೆ ಜೀವಿಸುತ್ತಾರೆ. ಕಲೋಪಾಸಕನ ದೃಷ್ಟಿಯಿಂದ ಸಮಾಜದ ಹುಳುಕುಗಳನ್ನು ಮನಸ್ಸಿನಲ್ಲಿ ಸರಿಪಡಿಸಿಕೊಂಡು ತತ್ವಜ್ಞಾನಿಗಳಂತೆ ಇರಲು ನಾವು ಹವಣಿಸುತ್ತೇವೆ. ಆದರೆ ಕಣ್ಣು ತೆರೆದು ನಮ್ಮ ಸುತ್ತಲಿನ ಪ್ರಪಂಚವನ್ನು ನಾವು ನೋಡಬೇಕು. ಇದ್ದುದನ್ನು ಸರಿಪಡಿಸಿ ಉಳಿದುದನ್ನು ಕುರಿತು ವಿಚಾರಿಸಬೇಕು.

ಪ್ರೊ. ಗೋಕಾಕರು ತಾವು ಕಣ್ಣಾರೆ ಕಂಡು ಮನಗಂಡ ಮಾತುಗಳನ್ನೆ ಸುಲಭಶೈಲಿಯಲ್ಲಿ ತಿಳಿಯಾಗಿ ತಿಳಿಸಿದ್ದಾರೆ. ಯುರೋಪೀಯರ ಏಳಿಗೆ ಹಾಗೂ ಇಳಿಗೆಯ ಗುಟ್ಟನ್ನು ಈ ಲೇಖದಿಂದ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ.

ಪಾಶ್ಚಿಮಾತ್ಯರಿಗೆ,– ಕಾಮ ಇಲ್ಲವೆ ಪ್ರೇಮವೇ ಪ್ರಪಂಚದ ಅದ್ಭುತ ರಹಸ್ಯ. ಇದರಿಂದ ಹೆಣ್ಣು-ಗಂಡು ಕೂಡಿ ಬೆಳೆಯಲು ಇಲ್ಲಿ ಸಹಜಸಾಧ್ಯವಾಗಿದೆ. ನಮ್ಮಲ್ಲಿ ಕಾಮ ಇಲ್ಲವೆ ಪ್ರೇಮಕ್ಕೆ ಇಂತಹ ಪ್ರಮುಖ ಸ್ಥಾನವಿಲ್ಲ. ಪಾಶ್ಚಿಮಾತ್ಯರ ಅತಿರೇಕತೆಯನ್ನು ಬಿಡಬೇಕು; ಆದರೆ ಹೆಣ್ಣಿಗೆ ತಕ್ಕ ಮಾನವನ್ನು ಸಲ್ಲಿಸಬೇಕು; ಇಂದಿನ ಸಮಾಜದಲ್ಲಿದ್ದ ವಿಷಮತೆಯನ್ನು ತಗ್ಗಿಸಬೇಕು.

ಪಾಶ್ಚಿಮಾತ್ಯರ ವ್ಯವಹಾರದಲ್ಲಿ ಶಿಸ್ತಿದೆ. 'ವೂಲ್‌ವರ್ಥ'ನ ಸ್ಟೇಶನರಿ ಅಂಗಡಿಗಳು, ಲಾಯನ್ಸ್ ಉಪಹಾರಗೃಹ, ಸಾಯ್‌ಟ್ಯಾಕ್ಸ್ ಮೋಟರು,– ಇವೆಲ್ಲ ವಿಲಾಯತಿಯಲ್ಲಿಯ 'ಸಂಸ್ಥೆ'ಗಳು. ಎಲ್ಲ ವ್ಯವಹಾರದಲ್ಲಿ ಸಂಘಟನೆಯಿದೆ.

ಪ್ರತಿಯೊಂದು ಮಾತಿಗೆ ಒಂದು 'ಕಂಪನಿ' ಇದ್ದೇ ಇರುತ್ತದೆ. ನಮ್ಮ ವ್ಯವಹಾರದಲ್ಲಿ ಸಂಘಟನೆಯಿಲ್ಲ. ಅಂತೇ ಅವಶ್ಯವಾಗಿ ಬೇಕಾದ ಪ್ರಾಮಾಣಿಕತೆಯಿಲ್ಲ.

'ಅಡಿಗೆ-ಊಟ'ವು ಸಮಸ್ಯೆಯಲ್ಲ. ಪ್ರತಿದಿನವೂ ಬೇಕಾದರೆ 'ಹೊಟೆಲ್ಲಿ'ಗೆ ಹೋಗಬಹುದು,– ಇಡಿಯ ಕುಟುಂಬವು ಸಹ! ಹಬ್ಬ–ಹುಣ್ಣಿಮೆಗಳ ತೊಡಕಿಲ್ಲ! ಕಾರಣ, ವಿಲಾಸಿಗಳು ಸ್ವಚ್ಛಂದವಾಗಿರುತ್ತಾರೆ. ವಿಚಾರಿಗಳು ತಮ್ಮ ಸರ್ವಸ್ವವನ್ನೇ ಸಾರ್ವಜನಿಕ ಕಾರ್ಯಕ್ಕೆ ಅರ್ಪಿಸುತ್ತಾರೆ, –ಎಲ್ಲ ವೇಳೆಯನ್ನು ವಿಚಾರದಲ್ಲಿ ಕಳೆಯುತ್ತಾರೆ. ಇಲ್ಲಿಯ ಶಿಕ್ಷಕರು ಹಾಗು ಪ್ರೊಫೆಸರರು 'ವೈದಿಕ'ರೆನ್ನಬಹುದು. ಜಗತ್ತಿನ ಸೂತ್ರಗಳು ಇವರ ಕೈಯ್ಯಲ್ಲಿವೆ. ಉಳಿದವರು 'ಲೌಕಿಕ'ರು,– ವೈದಿಕರು ಹೇಳಿದ ಕೆಲಸವನ್ನು ಮಾಡುತ್ತ ಉಳಿದ ವೇಳೆಯಲ್ಲಿ ಬೇಕಾದ ಮನೋರಂಜನೆಯನ್ನು ಹೊಂದುತ್ತಾರೆ!

ನಮ್ಮಲ್ಲಿ ವೇಳೆಗೆ ಕಿಮ್ಮತ್ತಿಲ್ಲ. ಇಲ್ಲಿ ವೇಳೆಯೆಂದರೆ ದುಡ್ಡು. ಪ್ರತಿವಾರ ಶನಿವಾರ ಬರುವತನಕ ಜನರ ಉದ್ಯೋಗಕ್ಕೆ ಕಡಿಮೆಯಿಲ್ಲ, ಊಟಕ್ಕೆ ಸಹ ಪುರಸತ್ತಿಲ್ಲ. ರವಿವಾರ ಮಾತ್ರ ಇಲ್ಲಿಯವರು ಮನುಷ್ಯರು; ಉಳಿದ ವಾರಗಳಲ್ಲಿ ಬರಿ ಯಂತ್ರಗಳು!

ಆಕ್ಸ್‌ಫರ್ಡಿನ ಯಂತ್ರವ್ಯೂಹದಲ್ಲಿ ಸಿಕ್ಕ ನನ್ನ ವೇಳೆಯೇ ನನ್ನದಲ್ಲವಾಗಿದೆ. ಈ ಲೇಖವನ್ನು ಇಲ್ಲಿಗೆ ನಿಲ್ಲಿಸುವ ಕಾರಣ ಗೊತ್ತೆ? ನಾಳೆ ಬೆಳಗಾದರೆ ಹತ್ತು ದೊಡ್ಡ ಪುಸ್ತಕಗಳನ್ನು ಓದಿ ಒಂದು ಸಣ್ಣ ನಿಬಂಧವನ್ನು ಬರೆದು 'ಗುರು'ಗಳಿಗೆ ಓದಿ ತೋರಿಸಬೇಕು. ಓದಿನಲ್ಲಿ ತುಸು ಹೆಚ್ಚುಕಡಿಮೆಯಾಗಿದ್ದರೆ,– ಗುರುಗಳ ವ್ಯಂಗ್ಯೋಕ್ತಿಗಳನ್ನು ಸಹಿಸಲಾಸಲ್ಲ!

ಕಬ್ಬೂರ ಕೃಷ್ಣರಾಯರು

[ಕರ್ನಾಟಕವು ಏಕೀಕೃತವಾದರೆ — 'ಆದರೆ - ಆದರೆ - ಎಂಬ ಹರಕೆಯ ಹಾಡೇಕೆ? ನಮ್ಮ ಸರ್ವತೋಮುಖವಾದ ಪ್ರಗತಿಗೆ ಏಕೀಕರಣವು ಅಗತ್ಯವಾಗಿದೆ, ಅವಶ್ಯವಾಗಿದೆ, ಅನಿವಾರ್ಯವಾಗಿದೆ? ಹೀಗೆ ಗರ್ಜಿಸಿದ ಕನ್ನಡ ಕೈಗಾರಿಕೆಯ ಸಿಂಹವು ತನ್ನ ನಾಡಾದ ಕರ್ನಾಟಕದಲ್ಲಿ ಕಾಲಿಡಲು ಹೊಂಚು ಹಾಕುತ್ತಲಿದೆ. ಪರನಾಡಗಳಲ್ಲಿ, ಇಡಿಯ ಭಾರತದಲ್ಲಿ ಈ ಪುರುಷಸಿಂಹನು ತೋರಿದ ಪರಾಕ್ರಮಗಳನ್ನು ನಾವು ಅರಿತಿರುವೆವೆ?]

'ಬೆಲ್ಲವಿಲ್ಲದಿದ್ದರೆ ಬೆಲ್ಲದಂತಹ ಮಾತನಾದರೂ ಕೊಡುವೆಯಾ, ಸೆಟ್ಟೀ' ಎಂಬುದು ಕನ್ನಡದಲ್ಲಿ ಗಾದೆಯ ಮಾತಿನಂತಾಗಿದೆ. ಹಿಂದಿನ ಕಾಲದ ಸೆಟ್ಟಿಗಳು ಹೇಗೆ ಮಾತನಾಡುತ್ತಿದ್ದಿರಬಹುದೆಂದು ಇದರ ಮೇಲಿಂದ ಊಹಿಸಬಹುದಲ್ಲವೆ? ಆದರೆ ಇಂದಿನ 'ಸೆಟ್ಟ

ಶ್ರೀಮಾನ್ ಕಬ್ಬೂರರವರು

ತನ'ದ ಅನುಭವವು ನನ್ನ ಸುದೈವದಿಂದ ನನಗೆ ದೊರೆಯಿತೆಂದು ಹೇಳಬಹುದು. 'ನಿಮ್ಮ ಬಣ್ಣದ ವ್ಯವಸಾಯದ ಮಾತು ನನಗೆ ಬೇಕಿಲ್ಲ' ಎಂದರೆ 'ಬಣ್ಣದ ಮಾತನ್ನೇ ಕೊಡುವೆ, ತೆಗೆದು ಕೊಳ್ಳಿರಿ' ಎಂದು ನಗೆಯಿಂದ ನನ್ನನ್ನು ಹಿಡಿದು ಕೂಡಿಸಿದ ಶ್ರೀಮಾನ್ ಕಬ್ಬೂರ ಕೃಷ್ಣರಾಯರು ಜಗತ್ತನ್ನೆಲ್ಲ ಆಕಾಶದಂತೆ ನೀಲಿ ಬಣ್ಣದಿಂದ ಸುತ್ತುಗಟ್ಟಿದ 'ಸೆಟ್ಟಿ' ಗಳು, ಆ ವ್ಯವಸಾಯದ ಜಟ್ಟಿಗಳು ಎಂದು ಹೇಳಬಹುದು. ವ್ಯವಸಾಯಕ್ಕೆ ಬಣ್ಣದಷ್ಟೆ ಬಣ್ಣದ ಮಾತೂ ಅವಶ್ಯಕವಾಗಿದೆ ಎಂದೂ, ಪರರಾಷ್ಟ್ರಗಳ ವ್ಯಾಪಾರಿಗಳು ಸವಿನುಡಿ-ಸೌಜನ್ಯಗಳಿಂದ ತಮ್ಮ ವ್ಯವಸಾಯವನ್ನು ಹೇಗೆ ಬೆಳೆಸುತ್ತಿರುವರೆಂದೂ ಅವರು ತಮ್ಮ ಯುರೋಪದ ಅನುಭವದಿಂದ ಆಗಾಗ ಹೇಳುತ್ತಿದ್ದರು. ಇಂದು ಆ ಬಣ್ಣದ ಮಾತಿಗೆ ನಾನೇ ಬಲಿಬಿದ್ದೆ. ಎಷ್ಟು ಸಲ ಆಫೀಸಿನಲ್ಲಿ ಹಣಿಕಿಕ್ಕಿದರೂ ಕೃಷ್ಣರಾಯರ ದರ್ಶನವೆ ಆಗುತ್ತಿದ್ದಿಲ್ಲ; ಅವರಿಗೆ ಯಾವಾಗಲೂ ಕೆಲಸ; ಯಾರಾದರೂ ತಮಗೆ ಕೆಲಸದ ಒತ್ತಾಯವಿದೆ ಎಂದು ಹೇಳಿದರೆ ನನ್ನಂತಹ ನಿರುದ್ಯೋಗಿಗೆ ಸಹಜವಾಗಿಯೆ ಅಪಮಾನವೆನಿಸುವುದು, ಅಪಮಾನವೆನಿಸಿತು, ಕೋಪಬಂದಿತು; ಆದರೇನು? ಕನ್ನಡದ ಮಾತು! ಬಣ್ಣದ ಮಾತು! ಕ್ಷಣಾರ್ಧದಲ್ಲಿ ನಾನು ಎಂದಿನಂತೆ ಬೆರಗುಗೊಂಡು ನನ್ನ ಎದುರಿನಲ್ಲಿದ್ದ ಈ ಸಾಹಸಪುರುಷನ ಅಲೌಕಿಕ ಚರಿತ್ರೆಯಲ್ಲಿ ಮಗ್ನನಾದೆ!

ಶ್ರೀಮಾನ್ ಕೃಷ್ಣರಾಯರು ಒಂದಾನೊಂದು ಕಾಲಕ್ಕೆ ವರ್ಷಕ್ಕೆ ೬೦,೦೦೦೦೦ ರೂಪಾಯಿಗಳ ವ್ಯವಸಾಯವನ್ನು ನಡೆಸಿದವರು. ಇಂಗ್ಲೆಂಡಿನಲ್ಲಿ ಅವರ ವ್ಯವಸಾಯದ ಕೇಂದ್ರ. ಈಗಲೂ ಮ್ಯಾಂಚೆಸ್ಟರಿನಲ್ಲಿ ಅವರದೊಂದು ಭವ್ಯವಾದ ನಿವಾಸವಿದೆ; ಸದ್ಯಕ್ಕೆ ಭಾರತದ ತುಂಬೆಲ್ಲ ಅವರ ವ್ಯಾಪಾರದ ಭರಭರಾಟವಿದೆ: ಅವರು ಯಾವಾಗಲೂ ಇರುವುದು ಮುಂಬಯಿಯಲ್ಲಿ. ಆದರೂ ನನ್ನೊಡನೆ ಕನ್ನಡದಲ್ಲಿ ಮಾತನಾಡುವಾಗ ಸಲಿಗೆಯ ಶೈಲಿಯಿಂದ ತಮ್ಮ ಘನತೆಯನ್ನು ಮರೆಸಿದರು; ಆದರೆ ಹೊರಬಿದ್ದಮೇಲೆ ಆ ಘನತೆಯು ಇಮ್ಮಡಿಯಾಗಿ ನನ್ನ ಕಣ್ಣು ಕಟ್ಟಿ ನಿಂತಿತೆಂದು ಹೇಳಬಹುದು.

ಭಾರತೀಯ ತರುಣರಿಗೆ ವ್ಯವಹಾರದಲ್ಲಿ ಅವಕಾಶಗಳೆ (openings) ದೊರೆಯುವುದಿಲ್ಲ ಎಂದು ಎಲ್ಲರಂತೆ ನನ್ನದೂ ದೂರು; ಯಾರಾದರೂ ನನ್ನ ವ್ಯವಸಾಯವೇನೆಂದು ಕೇಳಿದಾಗ ನಾ

ಇದನ್ನೇ ಹೇಳುವವ. ಆದರೆ ಕೃಷ್ಣರಾಯರನ್ನು ಕಂಡಂದಿನಿಂದ ನನಗೆ ನನ್ನ ಆಲಸ್ಯಕ್ಕಾಗಿ ಮತ್ತೊಂದು ನೆವವನ್ನು ಹುಡುಕುವ ದುರ್ಭಾಗ್ಯ ಬಂದಿದೆ. ಅವಕಾಶ (opening) ಎಂದರೇನು— ಎಂದು ಅವರ ಪ್ರಶ್ನೆ. ಅವರ ಜೀವನವೆ ಅದಕ್ಕೆ ಉತ್ತರ. ೧೮೮೮ ರ ಫೆಬ್ರುವರಿ ೧೮ಕ್ಕೆ ಕೃಷ್ಣರಾಯರು ಒಂದು ಬಡತನದ ಸಂಸಾರದಲ್ಲಿ ಜನ್ಮವನ್ನು ತಾಳಿದರು. ಕಬ್ಬೂರ ಎಂಬುದು ಚಿಕ್ಕೋಡಿ ತಾಲೂಕಿ (ಬೆಳಗಾಂವಿ ಜಿಲ್ಹೆ)ನಲ್ಲಿ ಇವರ ಜನ್ಮಸ್ಥಳ. ಬೆಳಗಾಂವಿ ಮತ್ತು ವಿಜಾಪುರ ಇವೆರಡು ಸ್ಥಳಗಳಲ್ಲಿ ಇವರು ಬಾಲ್ಯದಲ್ಲಿ ಶಿಕ್ಷಣವನ್ನು ಪಡೆದವರು. ಬಾಲ್ಯವಾದರೂ ಸರ್ವಸಾಮಾನ್ಯವಾದುದು ಎಂದು ಹೇಳಬಹುದು.

'ಮಗುವಾಗಿದ್ದಾಗ ನಿಮ್ಮಲ್ಲಿ ಹಟಮಾರಿತನವಿದ್ದಿತೊ?' ಎಂದು ನನ್ನ ಪ್ರಶ್ನೆ.

ಅದಕ್ಕೆ ಮುಗುಳ್ನಗೆಯೊಂದೇ ಅವರ ಉತ್ತರ.

ಅದೇ ಪ್ರಶ್ನೆಯನ್ನು ಮತ್ತೂ ಮತ್ತೂ ಕೇಳುವುದರಲ್ಲಿ ನನ್ನದೆ ಹಟಮಾರಿತನ ಹೊರಬಿದ್ದೀತೆಂದು ನಾಚಿಕೆಯಾಗಿ ನಾನು ತಡೆದೆ. ಮಹಾನುಭಾವರಾದವರು ಮಗುವಾಗಿದ್ದಾಗ ಹೆಚ್ಚಾಗಿ ಹಟಮಾರಿಗಳೂ ಹುಡುಗಾಟ (mischief) ದವರೂ ಆಗಿರುವರೆಂದು ನಮ್ಮಂತಹ ಸಾಮಾನ್ಯರ ಗ್ರಹಿಕೆ. ಆದರೆ ಅಭೇದ್ಯ ಕೋಟೆಯಂತಿದ್ದ ಸೌಜನ್ಯವನ್ನು ಒಳಹೊಕ್ಕು ಕೃಷ್ಣರಾಯರಿಂದ ಉತ್ತರವನ್ನು ದೊರಕಿಸುವುದು ನನಗೆ ಅಸಾಧ್ಯವಾಯಿತು.

ತಮ್ಮ ಹದಿನಾರನೆಯ ವಯಸ್ಸಿಗೆ ಕೃಷ್ಣರಾಯರು ಮುಂಬಯಿಗೆ ಬಂದರು; ಒಬ್ಬ ಜರ್ಮನ ರಸಾಯನಿಕ (chemist) ನ ಕೈಕೆಳಗೆ ದುಡಿಯತೊಡಗಿದರು. ಈ ಆಧುನಿಕ ಅಭಿಮನ್ಯುವಿನ ಸಾಹಸವನ್ನೂ ಕೌಶಲ್ಯವನ್ನೂ ಕಂಡು ಬೆರಗಾದ ಜರ್ಮನನು ತನ್ನೊಡನೆ ೧೯೦೮ರಲ್ಲಿ ಈ ಯುವಕನನ್ನು ಜರ್ಮನಿಗೆ ಕರೆದುಕೊಂಡು ಹೋದನು. ಎರಡುವರ್ಷಗಳ ತರುವಾಯ ಜರ್ಮನ ಏಜನ್ಸಿಯೊಂದನ್ನು ದೊರಕಿಸಿಕೊಂಡು ಕೃಷ್ಣರಾಯರು ಸ್ವದೇಶಕ್ಕೆ ಮರಳಿದರು; ಇಡಿಯ ಹಿಂದುಸ್ಥಾನವನ್ನೆಲ್ಲ ಸಂಚರಿಸಿದರು; ಮದ್ರಾಸ ಭಾಗದಲ್ಲಿ ಕೆಲವುಕಾಲ ನೆಲಸಿ ನಿಂತರು; ಮತ್ತು ೧೯೧೪ ರ ಪ್ರಾರಂಭಕ್ಕೆ ಇಂಗ್ಲಂಡಿಗೆ ಪ್ರಯಾಣ ಬೆಳೆಸಿದರು.

ಇಪ್ಪತ್ತಾರು ವಯಸ್ಸಿನ ತಾರುಣ್ಯದಲ್ಲಿ ಸ್ವಂತದ ಯೋಗ್ಯತೆಯಿಂದಲೆ ಕೃಷ್ಣರಾಯರು ಇಡಿಯ ಭಾರತವನ್ನು ಸಂಚರಿಸಿ, ರಸಾಯನತಜ್ಞರೆನಿಸಿ, ವ್ಯವಸಾಯಪಟುತ್ವವನ್ನು ದೊರಕಿಸಿ ಇಂಗ್ಲಂಡದಂತಹ ಸ್ವಸಂಸ್ಕೃತಿ ಮದಾಂಧ ಸಮಾಜದಲ್ಲಿ ನೆಲೆಗೊಳಿಸಿದ ಸಾಹಸವನ್ನು ಎಷ್ಟು ಹೊಗಳಿದರೂ ಸಾಲದು. 'ವ್ಯಾಪಾರವು ಒಂದು ಕಲೆ ಎಂಬುದನ್ನು ಇಂಗ್ಲಿಶ ಜನರಿಂದಲೆ ಕಲಿಯತಕ್ಕದ್ದು, ಇಂಗ್ಲಿಶರು ಹೆಚ್ಚಾಗಿ ಪ್ರಾಮಾಣಿಕರು, ಶುದ್ಧ ಹೃದಯದವರು, ಸರಲಸ್ವಭಾವದವರು' ಎಂದು ಮುಂತಾಗಿ ಇವರು ಹೇಳುವುದನ್ನು ಕೇಳಿ ಇಂದಿನ ತರುಣರು (ತಾವು ಸಾಮ್ರಾಜ್ಯವಾದ ವಿರೋಧಿಗಳೆಂಬ ಹೆಮ್ಮೆ ಇದ್ದವರು) ಸಿಡಿಮಿಡಿಗೊಂಡು ತಲೆಗಾಲು ಕುಣಿಸಬಹುದು. ಆದರೂ ಕೃಷ್ಣರಾಯರು ಅನುಭವಿಕರು, ಧ್ಯೇಯವೆಂಬುದೊಂದು ಅವರಿಗೆ ಬರಿಯ ಕೊಳ್ಳಿಯ ದೆವ್ವ (willo-o' the wisp) ನಂತಲ್ಲ, ತಮ್ಮ ಅನುಭವದಿಂದ 'ಇಂದು ಅವರು ಭಾರತೀಯ ಉದ್ದಿಮೆಗಾರರಲ್ಲಿ ಗಣ್ಯರಾಗಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. 'ಭಾರತೀಯರ ವೈಶಿಷ್ಟ್ಯವೇನು?' ಎಂದು ನಾನು ಕೇಳಿದಾಗ ಮನಸ್ಸೊಪ್ಪದ ದನಿಯಲ್ಲಿ 'ಅಜ್ಞಾನ, ಅನಾದರ, ಅನೈಶ್ವರ್ಯ' ಎಂದರು. ಇಂದು ವ್ಯಾಪಾರ, ಯಾಂತ್ರಿಕ-ವ್ಯವಸಾಯಗಳಲ್ಲಿದ್ದ ನಮ್ಮ ಲಕ್ಷಾಧೀಶರಿಗೆ ಕೂಡ ಬರಿಯ ಆಶೆ ಇದೆಯಲ್ಲದೆ ಆಕಾಂಕ್ಷೆ ಇಲ್ಲ, ಅಹಂಕಾರವಿದೆಯಲ್ಲದೆ ಅಭ್ಯಾಸವಿಲ್ಲ. ಪರದೇಶದವರ ಮೇಲಾಟಕ್ಕಿಂತ ನಮ್ಮವರ 'ಕೀಳಾಟ'ವೆ ನಮ್ಮ ಪ್ರಗತಿಗೆ ಬಾಧಕವಿದೆ ಎಂದು ಇವರ ಅಭಿಪ್ರಾಯ.

ಇವರು ಇಂಗ್ಲಂಡಿನಲ್ಲಿದ್ದಾಗ ಮಹಾಯುದ್ಧವು ಪ್ರಾರಂಭವಾಯಿತು. ರಸಾಯನಗಳನ್ನೂ ಬಣ್ಣಗಳನ್ನೂ ಇಡಿಯ ಗ್ರೇಟ ಬ್ರಿಟನ್ನಿಗೆ ಬೇಕಾಗುವುದರ ೬೦ ರಷ್ಟು ಇವರೊಬ್ಬರೆ ಪೂರೈಸುತ್ತಿದ್ದರು! ೧೯೧೫ರಲ್ಲಿ ಇವರ ವ್ಯವಸಾಯಕ್ಕೆ ಸಿಡಿಲು ಬಡೆಯಿತು. ಒಂದೇ ವ್ಯವಹಾರದಲ್ಲಿ ೨೫ ಲಕ್ಷ ರೂಪಾಯಿಗಳ ಹಾನಿಯಾಯಿತು! ಕೃಷ್ಣರಾಯರೊಡನೆ ಮಾತುಕತೆಗಳಲ್ಲಿ ತಲ್ಲೀನನಾದ ನನಗೆ ೨೫ ಲಕ್ಷವೆಂದರೆ ಏನೂ ಸೋಜಿಗವೆನಿಸಲಿಲ್ಲ. ಮತ್ತಾವುದೆ ಪ್ರಸಂಗವಾಗಿದ್ದರೆ ೨೫ ರೂಪಾಯಿ—ಎಂದ ಮಾತ್ರಕ್ಕೆ ನಾನು ಬಾಯ್ಬಿಡಬಹುದಾಗಿತ್ತು.

'ಈ ಹಾನಿಯನ್ನು ತಪ್ಪಿಸಲು ನಿಮಗೆ ಶಕ್ಯವಿದ್ದಿಲ್ಲವೆ?' ಎಂದು ಕೇಳಿದೆ ನಾನು.

ರಾಯರ ತುಟಿ ಬಿಚ್ಚಿದುವು, ಕಣ್ಣು ಅರಳಿದುವು; ಪ್ರಸನ್ನವಾದ ಕಳೆಯೊಂದು ಮುಖವನ್ನಾವರಿಸಿತು :

'ಅದನ್ನು ತಪ್ಪಿಸಬಹುದಾಗಿತ್ತು; ವ್ಯವಹಾರದ ಮಾನ-ಘನತೆಗಳನ್ನೂ, ಪ್ರಾಮಾಣಿಕತೆಯನ್ನೂ, ಸರಳಸ್ವಭಾವವನ್ನೂ ಬಿಟ್ಟು ಕೊಟ್ಟಿದರೆ ಆ ಹಾನಿಯನ್ನು ಸಹಜವಾಗಿ ತಪ್ಪಿಸಬಹುದಾಗಿತ್ತು. ಆದರೆ—'

ರಾಯರ ದನಿ ಗಂಭೀರವಾಯಿತು. ಕಣ್ಣುಗಳಲ್ಲಿ ಆವೇಶ ಮೂಡಿತು, —

'ಆದರೆ ಈ ಗುಣಗಳೆ ವ್ಯವಹಾರದ ನಿಜವಾದ ಬಂಡವಳ ಎಂದು ನನ್ನ ಕಲ್ಪನೆ ಇದ್ದುದರಿಂದ ನಾನು ಅವುಗಳನ್ನು ಬಿಟ್ಟುಕೊಡಲಿಲ್ಲ, ಹಾನಿಯನ್ನು ತಪ್ಪಿಸಿಕೊಳ್ಳಲಿಲ್ಲ.' ಮಾತು ಮುಗಿಸಿದಾಗ ಅಭಿಮಾನದಿಂದ ತೆರೆಯಂತೆ ದೇಹವು ಹೊಯ್ದಾಡುತ್ತಿದ್ದಿತು. ಕೃಷ್ಣರಾಯರ ಇಂದಿನ ವ್ಯವಹಾರದ ಪ್ರಪಂಚವನ್ನೂ ವಿಸ್ತಾರವನ್ನೂ ನೋಡಿದರೆ ಅವರಿಗೆ ಅಭಿಮಾನವೆನಿಸುವುದು ಆಶ್ಚರ್ಯವಲ್ಲ ಎಂದು ಹೇಳಬಹುದು.

೧೯೨೦ರಲ್ಲಿ ಕೃಷ್ಣರಾಯರು ಮತ್ತೆ ಹಿಂದುಸ್ಥಾನದಲ್ಲಿ ತಮ್ಮ ವ್ಯಾಪಾರವನ್ನು ಹೂಡಿದರು. ಬಣ್ಣದ ವ್ಯಾಪಾರವು ಆಗ ಜರ್ಮನ ಕೈಯಾಟ (monopoly) ವಾಗಿತ್ತು. ಆದರೆ ಹೆಚ್ಚಿನ ಪರಿಶೋಧಗಳನ್ನು ಮಾಡಿ ಸಮ್ಮಿಶ್ರಣವು (mixing) ಸಮರ್ಪಕವಾಗುವಂತೆಯೂ ಅಳಿಸದಂತಹ ಬಣ್ಣ ಹೊರಡುವಂತೆಯೂ

ಇವರು ಸಾಧಿಸಿಕೊಂಡರು. ಪರದೇಶದವರೊಡನೆ ಮೇಲಾಟವು competition) ನಡೆಯದಂತಾಯಿತು. ನಮ್ಮವರ ಪ್ರೋತ್ಸಾಹವಂತೂ ಕನಸಿನಲ್ಲಿ ಕೂಡ ಎಣಿಸುವಂತಿಲ್ಲ. 'ಪರದೇಶದವರಿಗಿಂತ ಹೆಚ್ಚು ನೀಟಾಗಿ, ಅಗ್ಗವಾಗಿ ನಮ್ಮವರು ಸರಕುಗಳನ್ನು ಹೊರಡಿಸುವುದು ಸಾಧ್ಯವೇ ಇಲ್ಲ' ಎಂದು ಭಾರತೀಯ ಮಹನೀಯರ ಅಭಿಮಾನಶೂನ್ಯ ಅಜ್ಞಾನ! ಲಕ್ಷಾಧೀಶರಾದ ಗಿರಣಿ (mill) ಗಳ ಒಡೆಯರಾದರೂ ಅರಿತವರಿರಬಹುದೆಂದು ಕೃಷ್ಣರಾಯರ ಆಸೆ! ಆದರೆ ಅದೂ ಬಯಲಾಸೆಯಾಯಿತು! ಕಾಸಿಗೆ ಕತ್ತುಕಾಸು ಲಾಭ ಸಿಕ್ಕುವುದು ಹೇಗೆ–ಎಂಬ ಬಡ್ಡಿಯ ವ್ಯವಹಾರದ ಧೋರಣೆಯೆ ಈ ಮಹನೀಯರ ಧೋರಣೆಯಾಗಿತ್ತು. ಇಂಗ್ಲಂಡಿನಲ್ಲಿ ತಾವು ಕಂಡ ದೇಶಾಭಿಮಾನವು ಇಲ್ಲಿ ರಾಯರಿಗೆ ಕಾಣಲಿಲ್ಲ. ತನ್ನ ಲಾಭದೊಡನೆ ತನ್ನ ದೇಶದ ವ್ಯಾಪಾರವು ಬೆಳೆಯಬೇಕು. ಐಶ್ವರ್ಯವು ಹೆಚ್ಚಬೇಕು, ತನ್ನ ದೇಶದ ಬಡವರಿಗೂ ಗುಣಿಗಳಿಗೂ ಯೋಗ್ಯತೆ ಗಸು ಸರಿಸಿ ಸಹಾಯವಾಗಬೇಕು ಮುಂತಾದ ವಿಚಾರಗಳು ನಮ್ಮ ಉದ್ದಿಮೆಗಾರ (industrialist) ರಿಗೆ ನಿಲುಕದ ವಿಷಯವಾಗಿದ್ದುವು. ಪರದೇಶದವರ ಮೇಲಾಟ, ಸ್ವಕೀಯರ ಅಜ್ಞಾನದ ಕಾಟ–ಇವೆರಡನ್ನೂ ಎದುರಿಸಿ ಈಗ ನಾಲ್ಕು ವರ್ಷಗಳಿಂದ ಕೃಷ್ಣರಾಯರು ಕಾಲೂರಿ ನಿಂತಿದ್ದಾರೆ. ಸಂಯುಕ್ತಪ್ರಾಂತ ಮತ್ತು ಬಂಗಾಲಗಳನ್ನುಳಿದು ಇಕ್ಕ ಹಿಂದುಸ್ಥಾನವನ್ನೆಲ್ಲ ವ್ಯಾಪಿಸಿ ಸುಮಾರು ೩೨–೩೫ ಏಜನ್ಸಿಗಳಿಂದ ತಮ್ಮ ವ್ಯಾಪಾರವನ್ನು ನಡೆಸಿದ್ದಾರೆ. 'ನಿಮ್ಮ ವ್ಯವಸಾಯಕ್ಕೆ ಪ್ರಗತಿಯ ಚಿಹ್ನಗಳಿವೆಯೊ?' ಎಂದು ಕೇಳುವುದೆ ತಡ, ಕೃಷ್ಣರಾಯರು ಆವೇಶದಿಂದ ಭಾರತವನ್ನು ಸುವರ್ಣಭೂಮಿಯಾಗಿ ಬಣ್ಣಿಸುವರು. ನಮ್ಮಲ್ಲಿ ಯೋಗ್ಯತೆ ಇದೆ, ಸಹನಶೀಲತೆ ಇಲ್ಲ; ಅವಕಾಶವಿದೆ. ವ್ಯವಸ್ಥೆ ಇಲ್ಲ ಎಂದು ಅವರ ಕಳವಳದ ಕೂಗು. ವ್ಯವಸಾಯಕ್ಕೆ ಬೇಕಾಗುವ ಕಗ್ಗ (raw materals) ಗಳನ್ನು ಒದಗಿಸುವ ಏರ್ಪಾಟು ಇಲ್ಲವೇ ಇಲ್ಲ, ಇಂತಹ ಏರ್ಪಾಟು ನಮ್ಮಲ್ಲಿ ಆಗುವವರೆಗೆ ನಾವು ಕೇವಲ ದಳ್ಳಾಳಿ (broker) ಗಳಾಗುವೆವೆಂದು ಅವರ ಅಭಿಪ್ರಾಯ.

ಬಣ್ಣದ ಮಾತು! ಎಷ್ಟು ದಿವಸಗಳ ವರೆಗೆ ಮಾತನಾಡಿದರೂ ಕೃಷ್ಣರಾಯರು 'ಬಣ್ಣದ ಮಾತು'ಗಳನ್ನೆ ಹೇಳುವರು. ಆದರೆ ಮಾತನಾಡಲು ಅವಕಾಶ ಬೇಕಲ್ಲ. ಮಾತು ಮತ್ತು ಸಾಹಿತ್ಯ–ಇವುಗಳಲ್ಲೇ ನಮ್ಮ ಬುದ್ಧಿ ಹಾಳಾಗಿದೆ ಎಂದು ಅವರು ಹೇಳುವರು. ಬೆಳಗಿನ ೯ ಗಂಟೆಯಿಂದ ರಾತ್ರಿಯ ೯ ಗಂಟೆಯ ವರೆಗೆ ಅವಿಶ್ರಾಂತವಾಗಿ ದುಡಿಯುವ ರಾಯರು ಹೀಗೆ ಅಭಿಪ್ರಾಯ ಪಟ್ಟುದು ಆಶ್ಚರ್ಯವಲ್ಲ. 'ದುಡಿಯುವುದು ಮತ್ತು ಅಭ್ಯಾಸ ಮಾಡುವುದು– ಇವೆರಡೆ ನನ್ನ ಪ್ರತಿದಿನದ ಕಾರ್ಯಕ್ರಮ–' ಎಂದು ಸಮಯ ದೊರತಾಗ ಹೇಳುವರು. ಬೇರೆ ಹೌಸು (hobby) ಗಳೆ ಇಲ್ಲವಂತೆ! 'ಆದರೂ ಇನ್ನು ಮುಂದೆ ಆಹಾರವನ್ನು ಮಾತ್ರ ಕಾಳಜಿಯಿಂದ ನೋಡಿಕೊಳ್ಳುವೆ' ಎಂದರು. ಆಹಾರವು ಕನ್ನಡಿಗರ ವೈಶಿಷ್ಟ್ಯವೆಂದು ನನ್ನನ್ನು ಚುಚ್ಚಿ ಮಾತನಾಡಿರಬಹುದೆ? ಶಕ್ಯವಿಲ್ಲ. ಕನ್ನಡ ಮತ್ತು ಕರ್ನಾಟಕದ ವಿಷಯವಾಗಿ ಅವರಿಗಿದ್ದ ಅಭಿಮಾನವು ಅತ್ಯಂತ ಅನುಕರಣೀಯವಾಗಿದೆ. ಕನ್ನಡಿಗರಲ್ಲಿ ಯೋಗ್ಯತೆ ಇದೆಯೆ?' ಎಂಬ ಪ್ರಶ್ನೆ ಮುಗಿಯುವ ಮುಂಚಿತವಾಗಿಯೆ ಅವರು ಜೋರಾಗಿ ತಲೆತೂಗುವರು. ಅವರ ಶಬ್ದಗಳಲ್ಲಿಯೆ ಹೇಳುವುದಾದರೆ 'ಇವರ ತಲೀ ಮ್ಯಾಲ ನಿಂತು ಜಡದು ಕೆಲಸಾ ತೊಗೊಂಬುವವರು ಮಾತ್ರ ಬೇಕಾಗ್ಯಾರ' ಅಂತೆ. ಹಳ್ಳಿಯ ವ್ಯವಸಾಯ(Cottage Industry) ಗಳನ್ನು ಬೆಳೆಸಲು ಕರ್ನಾಟಕದಲ್ಲಿ ತುಂಬಾ ಅವಕಾಶ ಮತ್ತು ಅಗತ್ಯವಿದೆ ಎಂದು ರಾಯರ ಮತ.

'ನನಗೆ ದುಡಿಯುವವರು ಬೇಕು. ದುಡ್ಡು ಬೇಡ; **ದುಡ್ಡು ಬೇಡ,** ಕೆಲಸಗಾರರು ಮಾತ್ರ ಬೇಕು; ಕರ್ನಾಟಕದ ವ್ಯವಸಾಯಗಳನ್ನು ಬೆಳೆಸುವ ಹತ್ತಾರು ಯೋಜನೆಗಳು ನನ್ನ ತಲೆಯನ್ನು ತುಂಬಿಕೊಂಡಿವೆ' ಎಂದು ಕಳಕಳಿಯಿಂದ ಹೇಳಿದರು.

ಉಪ್ಪು, ನಿಂಬೆಹಣ್ಣು, ಹುಣಸೆಹಣ್ಣು, ತಂಬಾಕ (ಹೊಗೆಸೊಪ್ಪು)ದ ಕಡ್ಡಿಗಳು – ಮುಂತಾದುವು ಇಂದು ಕರ್ನಾಟಕದ ಧನನಿಧಿಯಾಗಿವೆ. ದುಡಿಯುವವರು ಯಾರು? ತಲೆ ಕೆದರಿ, ರಟ್ಟೆ ಮುರಿದು ದುಡಿಯುವವರು ಯಾರು?

'ನಾನು ಮುದುಕನಂತೆ ಉಪದೇಶ ಮಾಡುವುದಿಲ್ಲ. ಕೆಲಸಗಾರರು ದೊರೆತಾಕ್ಷಣ ನಾನೇ ಕರ್ನಾಟಕದಲ್ಲಿ ನೆಲೆಸಿ ಕಾರ್ಯವನ್ನು ಕೈಕೊಳ್ಳುವೆ' ಎಂದು ಹೆಮ್ಮೆಯ ದನಿಯಿಂದ ಹೇಳಿದರು. ಇವರ ಮಾತುಗಳನ್ನು ಕೇಳಿದರೆ, ಜ್ಞಾನವನ್ನು ಸವಿದರೆ ಮೈಯಲ್ಲಿ ಸ್ಫೂರ್ತಿಯೆ ಸಂಚರಿಸುವುದೆಂದು ಹೇಳಬಹುದು. ಇಂತಹ ಅನೇಕ ಅಲೌಕಿಕ ಕನ್ನಡಿಗರು ಅತ್ತಿತ್ತ ಕರ್ನಾಟಕದ ಹೊರಗೆ ಇರಬೇಕಾದುದನ್ನು ಕಂಡು ಕಳವಳವಾಗುವುದು. ಕರ್ನಾಟಕವು ಏಕೀಕೃತವಾದರೆ?

'ಆದರೆ–? ಆದರೆ–ಎಂಬ ಹರಕೆಯ ಹಾಡೇಕೆ?' ಎಂದು ಕೃಷ್ಣರಾಯರು ಗರ್ಜಿಸಿದರು. 'ನಮ್ಮ ಸರ್ವತೋಮುಖವಾದ ಪ್ರಗತಿಗೆ ಏಕೀಕರಣವು ಅಗತ್ಯವಾಗಿದೆ, ಅವಶ್ಯವಾಗಿದೆ, ಅನಿವಾರ್ಯವಾಗಿದೆ.'

ಇದೀಗ ಏಳುವ ಸಮಯ ಎಂದೆನಿಸಿತು ನನಗೆ. ಏಕೆಂದರೆ ನಾನು ಅವರ ವಿಷಯವಾಗಿ ಕೇಳಿದಂತೆ ಅವರು ಕರ್ನಾಟಕದ ವಿಷಯವಾಗಿ ಕೇಳಿಯಾರು ಎಂದು ಹೆದರಿಕೆಯಾಯಿತು ನನಗೆ. ಆದರೂ ಕರ್ನಾಟಕದ ಏಕೀಕರಣ ಪ್ರಶ್ನೆಯು ರಾಜಕಾರಣದ ವಿಷಯವಾಗಿದೆ, ಹಗಲೆಲ್ಲ ವ್ಯವಸಾಯದಲ್ಲಿ ಮಗ್ನರಾದವರಿಗೆ ರಾಜಕಾರಣವನ್ನು ಓದುವ ಅವಕಾಶವಾದರೂ ಎಲ್ಲಿ ಎಂದು ನಾನು ಸಮಾಧಾನಹಚ್ಚಿಕೊಳ್ಳುತ್ತಿರುವಾಗ ನನ್ನ ಅಂತರಂಗವನ್ನು ಅರಿತರೊ ಏನೊ ಎನುವಂತೆ 'ಅದಕ್ಕಾಗಿ ನನಗೆ ರಾಜಕಾರಣದಲ್ಲೂ ಆಸಕ್ತಿ ಇದೆ' ಎಂದರು. ನಾನು ತಟ್ಟನೆ ಎದ್ದೆ. 'ನಿಮ್ಮ ರಾಜಕೀಯ ಪುಢಾರಿ (ಮುಂದಾಳು) ಗಳು ಏಕೀಕರಣಕ್ಕಾಗಿ ಎಷ್ಟು ಪ್ರಯತ್ನವನ್ನು ನಡೆಸಿದ್ದಾರೆ?' ಎಂದು ಇನ್ನಿವರು ಕೇಳಿಯೆ ಕೇಳುವರೆಂದು ನನಗೆ ಲಗಬಗೆಯಾಯಿತು. ನಾನು ತತ್ವಜ್ಞಾನಿಯಂತೆ 'ಪಾಪ! ಕರ್ನಾಟಕ ಯಾಕೊ ದುರ್ದೈ

ಯಾಗಿದೆ! ' ಎಂದೆ. 'ದುರ್ದೈವ' ಎಂದು ತಿರಸ್ಕಾರದಿಂದ ತುಟಿಗಳನ್ನರಳಿಸಿದರು ಕೃಷ್ಣರಾಯರು. 'ಕರ್ನಾಟಕದಲ್ಲಿ ಅಪಾರವಾದ ಸಂಪತ್ತು ಇದೆ. ತರುಣರು ಕರ್ನಾಟಕವನ್ನು ಅರಿತುಕೊಳ್ಳಲಿ, ಅಭ್ಯಾಸಮಾಡಲಿ, ಕರ್ನಾಟಕದಲ್ಲಿ ದುಡಿಯಲು -ನನಗೆ ಮಾತು ಬೇಡ, ಸಾಹಿತ್ಯ ಬೇಡ— ದುಡಿಯಲು ಸಿದ್ಧರಾಗಲಿ; ಕರ್ನಾಟಕವು ಘನವಂತವಾದ ಪ್ರಾಂತವಾಗಿ ಭಾರತದ ಪ್ರಗತಿಯ ಮುಂದಿನ ಹೆಜ್ಜೆಯಾಗುವುದು' ಎಂದರು. ನಾನು ಮೈಮರೆತೆ— ಕೃಷ್ಣರಾಯರಿಗೆ ಸ್ತುತಿ ಎನಿಸುವ ಒಂದು ಮಾತೂ ಸೇರುವುದಿಲ್ಲವೆಂಬುದನ್ನು ಮರೆತೆ; 'ನಿಮ್ಮಂತಹ ಆದರ್ಶಪುರುಷರನ್ನು ಕರ್ನಾಟಕಕ್ಕೆ ಒದಗಿಸಿಕೊಟ್ಟುದಕ್ಕಾಗಿ ಯಾರಿಗೆ ಋಣಿಯಾಗೋಣ?' ಎಂದೆ. ರಾಯರು ಗಹಗಹಿಸಿ ನಕ್ಕರು. 'ಯಾರಿಗೆ? ಯಾರಿಗೆ ಋಣಿಯಾಗೋಣ ಎನ್ನುವಿರಾ?' ಎಂದು ಒಳಗೆ ನೋಡುತ್ತ 'ಯಾವಾಗಲೂ ಸಾಹಸ-ಸಹಕಾರಗಳಿಂದ ನನ್ನನ್ನು ಪ್ರೋತ್ಸಾಹಿಸಿದ ನನ್ನ ಪತ್ನಿಗೆ— ಶ್ರೀಮತಿ ಕಬ್ಬೂರ ಅವರಿಗೆ ನೀವು ಋಣಿಯಾಗಬೇಕಾಗಿದೆ' ಎಂದರು. ವ್ಯವಹಾರ- ವ್ಯವಸಾಯಗಳಲ್ಲಿ ಕೂಡ ಶ್ರೀಮತಿಯವರು ಕೈನೆರವಾಗಿ ಸಹಾಯಮಾಡಿದ್ದಾರೆಂದು ನಾನು ಕೃಷ್ಣರಾಯರ ಅನೇಕ ಸ್ನೇಹಿತರಿಂದಲೂ ಕೇಳಿದ್ದೆ. ಈ ಪತಿ-ಪತ್ನಿಯರ ಕನಸು ರೂಪುಗೊಂಡು ಕರ್ನಾಟಕದ ಭಾಗ್ಯೋದಯವು ಶೀಘ್ರದಲ್ಲಿಯೆ ಬರಲಿ ಎಂದು ಹೊರಟೆ. ನಾನು ಕೈಮುಗಿದೆ, ರಾಯರು ಕೈಮುಗಿಯಲಿಲ್ಲ. ಯಾಕೆ? ಅವರು ಭೋಜನಕ್ಕೆ ಕುಳಿತಾಗ ನಾನು ಅವರೊಡನೆ ಸಂಭಾಷಣೆಯನ್ನು ನಡೆಸಿದ್ದೆ. ಲಕ್ಷಾವಧಿಯ ವ್ಯವಹಾರವನ್ನು ನಡೆಸುವ ಮಹಾನುಭಾವರಿಗೆ ಎಕ್ಕ ವೇಳೆಯಲ್ಲಿ ಸಮಯ ದೊರೆಯುವುದು ಹೇಗೆ? 'ತಲೀಮ್ಯಾಲ ನಿಂತು ಜಡದು ಕೆಲಸಾತಗೊಂಬುವವರು ಬೇಕು' ಎಂದಿದ್ದರು ರಾಯರು. ನಾನೂ ಅಂತಹರಲ್ಲಿ ಒಬ್ಬನಾದೆ ಎಂದು ಹೇಳಲೆ"

—ಗೋಪಾಲಕೃಷ್ಣ

ಮುಂದಿನ ಸಂಚಿಕೆಯಿಂದ ಆರಂಭವಾಗುವುದು !

● ಸರಸ- ಸ್ವತಂತ್ರ- ಸಾಮಾಜಿಕ- ಕಾದಂಬರಿ ●

ಶಾಂತಾ

ಪತಿಯು ಜೀವಿಸಿರಲಿಕ್ಕೂ ಶಾಂತೆಗೆ 'ಪುನರ್ವಿವಾಹ' ಮಾಡಬೇಕಾಯಿತು !
ಅಥವಾ ಅವಳು ಮಾಡಿದ್ದು ವಿವಾಹವೋ 'ಪುನರ್ವಿವಾಹ'ವೋ ?

ಶಾಂತಿಯು ತನ್ನ ಕುಲೀನತೆಯನ್ನು ಕಳೆದುಕೊಂಡಳೆ ?

ಕುಲೀನತೆಯ ಹೆಸರಿನಲ್ಲಿ ಬೇಕಾದಷ್ಟು ಅತ್ಯಾಚಾರಗಳು ಜಗತ್ತಿನಲ್ಲಿ ನಡೆಯುವವು;
ಆದರೆ ಸ್ಪಷ್ಟವಾದ ಸತ್ಯವು ಮಾತ್ರ ಅತ್ಯಾಚಾರದಂತೆ ತ್ಯಜಿಸಲ್ಪಡುವುದು.

ಲೇಖಕರು:— ವ್ಹಿ. ಎಂ. ಇನಾಮದಾರ, ಬಿ. ಎ. (ಆನರ್ಸ)

ಸ್ಟಾಲಿನ— ರಶಿಯಾದ ರಾಷ್ಟ್ರಪುರುಷ

ಸಾಹುಕಾರದೇವನಿಗೆ ನೊಚ್ಚಿಗಾರನ ಪೆಟ್ಟು

◆

ಕಲಿಯುಗದ ಕಬ್ಬಿಣಮೂರುತಿ

◆

ಬರೆದವರು :

ಚಾಡಿಯ ಚಾಣಕ್ಯ

ಸ್ಟಾಲಿನ್

ಜಗತ್ತನ್ನೆ ಬೆರಗುಗೊಳಿಸುತ್ತಲಿರುವ, ಜಗತ್ತಿನ ⅙ ಭಾಗದ ಸರ್ವಾಧಿಕಾರಿಯಾಗಿರುವ ಅದ್ಭುತ ವ್ಯಕ್ತಿ, ಲೇನಿನನಿಗೆ ಬೇಡವಾಗಿದ್ದರೂ ಲೇನಿನನ ತರುವಾಯ ರಶಿಯದ ರಾಜ್ಯಸೂತ್ರಗಳನ್ನು ತನ್ನ ಕೈಗೆ ಹೇಗೆ ಸೆಳೆದುಕೊಂಡನೆಂಬ ವಿಸ್ಮಯಜನಕ ವರ್ಣನೆಯನ್ನು ಇದರಲ್ಲಿ ಓದಬಹುದು. ಅಲ್ಲದೆ ಸ್ಟಾಲಿನನ ಇನ್ನೂ ಹೆಚ್ಚಿನ ಅಂತರಂಗ ಪರಿಚಯವಾಗಬೇಕಿದ್ದರೆ ಇದನ್ನು ಅವಶ್ಯ ಓದಬೇಕು.

ಸ್ಟಾಲಿನ! ಸ್ಟಾಲಿನ ಎಂದರೇನೆಂಬುದು ಲಿಟ ಎಷ್ಟು ಜನರಿಗೆ ಗೊತ್ತಿದೆ? ಸ್ಟಾಲಿನ ಎಂಬುದೊಂದು ವ್ಯಕ್ತಿ ಎಂದು ಹೇಳಿದರೆ ಎಷ್ಟೋ ಜನರಿಗೆ ಆಶ್ಚರ್ಯವೆನಿಸಬಹುದು. ಇಡಿಯ ಜಗತ್ತಿನ ⅙ರಷ್ಟಾದ ರಶಿಯಾ ದೇಶವನ್ನು ಅವ್ಯಾಹತವಾಗಿ ಏಕಾಧಿಪತ್ಯದಿಂದ ಆಳುವ ವ್ಯಕ್ತಿಯೆ ಸ್ಟಾಲಿನ ಎಂದರಂತೂ ನಂಬಲು ಕೂಡ ಮನಸ್ಸು ಒಪ್ಪಲಿಕ್ಕಿಲ್ಲ. ಈ ಪ್ರವೃತ್ತಿಯು ಸಾಮಾನ್ಯ ಮನುಷ್ಯನಲ್ಲಿ ಸಹಜವಾಗಿ ಕಂಡುಬರುವದು. ಏಕೆಂದರೆ ಸ್ಟಾಲಿನನ ಚರಿತೆ ಮತ್ತು ಸ್ವಭಾವ ನಂಬಲು ಅಶಕ್ಯವೆನಿಸುವಂತಹವೆ ಆಗಿವೆ. ಇತ್ತಿತ್ತಲಾಗಿ ರಶಿಯಾದಲ್ಲಿ ಸಾಮೂಹಿಕ ಪ್ರೇತಯಾತ್ರೆಗಳೆ ನಡೆದಿವೆ. ಇಂದು ನೂರು ಜನರು, ನಿನ್ನೆ ನೂರಾರು ಜನರು ಹೀಗೆ ದಿನಾಲು ಹಿಂಡುಗಳಂತೆ ಜನರು ಗುಂಡಿನೇಟಿಗೆ ಗುರಿಮಾಡಲ್ಪಡುತ್ತಿದ್ದಾರೆ ಎಂಬ ಸುದ್ದಿಯು ಪತ್ರಿಕೆಗಳಲ್ಲಿರುವದು. ಹೀಗೆ ಕೊಲ್ಲಲ್ಪಡುವವರಲ್ಲಿ ಅನೇಕರು ರಶಿಯಾದ ಕ್ರಾಂತಿಗಾಗಿ ಅವಿಶ್ರಾಂತ ದುಡಿದವರಿದ್ದಾರೆ. ಇಂತಹರನ್ನು ಹೀಗೆ ಇರುವೆಗಳಂತೆ ಕೊಲ್ಲುವ ಹೊಣೆಗಾರಿಕೆ ಸ್ಟಾಲಿನನ ಮೇಲಿರುವಾಗ ಈ ಸ್ಟಾಲಿನನು ವ್ಯಕ್ತಿಯೆ— ಎಂದು ಜನರಿಗೆ ಆಶ್ಚರ್ಯವಾಗುವದು ಸಹಜವಿದೆ. ಸ್ಟಾಲಿನನು ವ್ಯಕ್ತಿಯೆ ಅಲ್ಲ, ಅದೊಂದು ಶಕ್ತಿ; 'ಸ್ಟಾಲಿನ' ಎಂಬುದು (ಜಗತ್ತಿಗೆಲ್ಲ ಅದೊಂದೆ ಹೆಸರು ಗೊತ್ತಿದ್ದರೂ) ಅವನ ನಿಜವಾದ ಹೆಸರೂ ಅಲ್ಲ. ಸ್ಟಾಲಿನ ಎಂದರೆ ರಶಿಯನ ಭಾಷೆಯಲ್ಲಿ 'ಉಕ್ಕು' ಎಂದು ಅರ್ಥವಂತೆ. ಸ್ಟಾಲಿನನು ಸ್ವಭಾವದಿಂದ ಉಕ್ಕಿನ ತುಂಡಿನಂತಿದ್ದಾನೆಂದು ರಶಿಯಾದ ಕ್ರಾಂತಿಪುರುಷನಾದ ಲೇನಿನನೆ ಈ ಹೆಸರನ್ನು ಅವನಿಗೆ ಕೊಟ್ಟನಂತೆ. ಉಕ್ಕಿನ ತುಂಡಿಗೆ ದಯೆ-ಮಾಯೆಗಳಿರಬಹುದೆಂದು ಹೇಳಲು ಯತ್ನಿಸಿದರೆ ಯಾರು ನಂಬುವರು? 'ಜನರನ್ನು ಹೀಗೆಯೆ ಎಷ್ಟು ದಿವಸ ಕೊಲ್ಲುವಿರಿ?' ಎಂಬ ಪ್ರಶ್ನೆಗೆ 'ಅವಶ್ಯವೆನಿಸುವವರೆಗೆ ಕೊಲ್ಲುವೆ' ಎಂದು ಉತ್ತರ ಕೊಟ್ಟನಂತೆ ಸ್ಟಾಲಿನನು! No revolution can be made with silk gloves (ರೇಶಿಮೆಯ ಕೈಚೀಲ ಕಟ್ಟಿಕೊಂಡು ಕುಸ್ತಿಯಾಡುವದು ಬಂಡು [ಕ್ರಾಂತಿ] ಅಲ್ಲ) ಎಂದು ಸ್ಟಾಲಿನನು ಒಂದೆಡೆಗೆ ಸ್ಪಷ್ಟವಾಗಿ ಹೇಳಿದ್ದಾನೆ.

ಸ್ಟಾಲಿನನ ಈ ಅಭಿಪ್ರಾಯದಿಂದ ಅವನ ಸ್ವಭಾವವನ್ನು ತಿಳಿದುಕೊಳ್ಳಲು ಸುಲಭವಾಗುವದು. ಕ್ರಾಂತಿ ಪುರುಷನಾದ ಲೇನಿನನು ತನ್ನ ಗುರು ಎಂದು ಅವನು ಹೇಳುತ್ತಾನೆ; ಗುರುವಿನಿಂದ ಪ್ರಚಲಿತವಾದ ಕ್ರಾಂತಿಯನ್ನು ನಡೆಸುವದೆ ತನ್ನ ಧರ್ಮ (ಇಲ್ಲವೆ ಕರ್ತವ್ಯ ಎನ್ನೋಣ, ಏಕೆಂದರೆ 'ಧರ್ಮ' ಎಂಬ ಶಬ್ದವನ್ನು ಪಯೋಗಿಸಿದುದಕ್ಕಾಗಿ ನಮಗೂ ತಲೆಗೆ

ಪರವಾಗಬೇಕಾದೀತು) ಎಂದು ತಿಳಿದಿದ್ದಾನೆ. ಆ ಕರ್ತವ್ಯಕ್ಕೆ ಅಡ್ಡಬಂದುದನ್ನೆಲ್ಲ ನೆಲಸಮ ಮಾಡುವುದು ಅವನಿಗೆ ಸಹಜವೆನಿಸುವುದು. ಕರ್ತವ್ಯನಿರ್ವಹಣದಲ್ಲಿ ದಯೆ-ದಾಕ್ಷಿಣ್ಯಗಳ ಸಂಬಂಧವೇನು- ಎಂದು ಅವನ ಪ್ರಶ್ನೆ. ಕ್ರಾಂತಿಗೆ ಮುಂಚಿತ ರಶಿಯಾ ದೇಶವನ್ನಾಳಿದ ಝಾರನಾಗಲಿ ಅವನ ಕೈಗೊಂಬೆಗಳಂತಿದ್ದ ಅಧಿಕಾರಿಗಳಾಗಲಿ ಎಷ್ಟು ದಯೆ-ದಾಕ್ಷಿಣ್ಯಗಳನ್ನು ತೋರಿಸುತ್ತಿದ್ದರು? ಕ್ಷುಲ್ಲಕ ಅಪರಾಧಕ್ಕೆ ಆಹುತಿಯಾಗಿ ಲೇನಿನನ ಅಣ್ಣನು ಗುಂಡಿನೇಟಿಗೆ ಗುರಿಯಾದನು. ಲೇನಿನ ಮೊದಲಾದ ಉದಾರಮತವಾದಿಗಳು ಕಾರಾಗೃಹಗಳಲ್ಲಿ ಕೊಳೆಯಬೇಕಾಯಿತು, ಹೆಸರು ವೇಷಗಳನ್ನು ಬದಲಾಯಿಸಿ ನಾಯಿ ಬೆನ್ನಟ್ಟಿದ ಬೆಕ್ಕಿನಂತೆ ಗಿಡ-ಗುಡ್ಡಗಳನ್ನೂ ದೇಶ-ದೇಶಾಂತರಗಳನ್ನೂ ಅಲೆದಾಡಬೇಕಾಯಿತು ಇಷ್ಟೇಕೆ? ಸ್ವತಃ ಸ್ಟ್ಯಾಲಿನನ ಅನುಭವವನ್ನೇ ನೋಡಬಹುದು. ತನ್ನ ವಯಸ್ಸಿನ ೨೩ನೆಯ ವರ್ಷದಿಂದ (೧೯೦೨) ಮುಂದೆ ೧೫ ವರ್ಷಗಳ ವರೆಗೆ ಸ್ಟ್ಯಾಲಿನನು ಐದು ಸಲ ಕಾರಾಗೃಹವನ್ನು ಸೇರಬೇಕಾಯಿತು. ನಾಲ್ಕು ಸಲ ಪಾರಾದನೇನೋ ನಿಜ, ಆದರೂ ಹೊರಬಂದಾಕ್ಷಣ ಬೇಟೆಯ ನಾಯಿಗಳನ್ನು ತಪ್ಪಿಸುತ್ತಲೆ ಇರಬೇಕಾಗುತ್ತಿದ್ದಿತು. ಕೊನೆಗೆ ೧೯೧೭ರಲ್ಲಿ ಲೇನಿನನ ಕ್ರಾಂತಿಯು ಯಶಸ್ವಿಯಾಯಿತು. ರಶಿಯಾದ ಬಹುಜನರಿಗೆ ಬೇಕೆನಿಸಿತು, ಹಿತವೆನಿಸಿತು. ಆ ಜನಹಿತವನ್ನೇ ಈಗ ತಾನು ಮುಂದೆ ಸಾಗಿಸುವಾಗ ಅಡ್ಡಬಂದವರನ್ನು ಕಡಿದೊಗೆಯುವುದು ಜನಹಿತಕ್ಕಾಗಿಯೆ ಅಲ್ಲವೆ? ಬಂದಮೇಲೆ ಅದರ ತಪ್ಪೇನು?

ಧ್ಯೇಯಕ್ಕಾಗಿ ಬೇಕಾದ್ದನ್ನು ಮಾಡುವ ಧೈರ್ಯವು ಸ್ಟ್ಯಾಲಿನನ ಸ್ವಭಾವವೈಶಿಷ್ಟ್ಯವಾಗಿದೆ. ಮೊದಲಿನಿಂದಲೂ ಸ್ಟ್ಯಾಲಿನನಲ್ಲಿ ಈ ಧೈರ್ಯವನ್ನು ಕಾಣಬಹುದು. ೧೯೦೭ರಲ್ಲಿ ಸ್ಟ್ಯಾಲಿನನು ಟಾಯಿಫ್ಲಿಸ ಭಾಗದ ಕ್ರಾಂತಿಪಕ್ಷದ ಸದಸ್ಯನಿದ್ದನು. ಆಗ ಪಕ್ಷದ ಕೆಲಸಕ್ಕಾಗಿ ಹಣ ಬೇಕಾಗಿದ್ದಿತು. ನಾಣ್ಯಾಗಾರದಿಂದ ದ್ರವ್ಯಸಂಚಯವನ್ನು ಸ್ಥಳಾಂತರಿಸುವ ಅಧಿಕಾರಿಗಳ ಸುಳುವು ಸ್ಟ್ಯಾಲಿನನಿಗೆ ಹತ್ತಿತು; ಅದೊಂದೆ ತಡ, ಅಲ್ಲಿ ಹೋಗಿ ಬಾಂಬುಗಳನ್ನೆಸೆದನು. ಇಪ್ಪತ್ತು ಜನರು ಸತ್ತುಬಿದ್ದಾಗ ಆ ಹೆಣಗಳನ್ನು ತುಳಿದು ದ್ರವ್ಯಸಂಚಯವನ್ನಪಹರಿಸಿಕೊಂಡು ಓಡಿಹೋದನು.

ಘಾತುಕ (murderer) ಎನ್ನುವಿರಾ?

ಡಕಾಯಿತ (robber) ಎನ್ನುವಿರಾ?

ಮಿಕ್ಕವರ ಮಾತಂತೂ ಉಳಿಯಲಿ, ಸ್ವತಃ ಲೇನಿನನಿಗೆಯೆ ಅಸಹ್ಯವೆನಿಸಿ ಅವನು ಸ್ಟ್ಯಾಲಿನನ ಸದಸ್ಯತ್ವವನ್ನು ರದ್ದುಮಾಡಿಸಿದನು. ಕ್ರಾಂತಿಯು ಯಶಸ್ವಿಯಾದ ತರುವಾಯ ಸ್ಟ್ಯಾಲಿನನು ಲೇನಿನನೊಡನೆ ಕಾರ್ಯಭಾರತ್ವವನ್ನು ವಹಿಸಿದನು. ಆದರೂ ೧೯೨೩ರಲ್ಲಿ ಲೇನಿನನು ಈ ವ್ಯಕ್ತಿಯ ವಿಷಯವಾಗಿ ಬರೆದಿಟ್ಟ ಅಭಿಪ್ರಾಯವು ಬೆಚ್ಚುಗೊಳಿಸುವಂತಿದೆ. 'ಸ್ಟ್ಯಾಲಿನನ ಸ್ವಭಾವವು ಉದ್ಧಟತನದ್ದಿದೆ, ಅವನನ್ನು ಕಾರ್ಯದರ್ಶಿಯ ಕೆಲಸದಿಂದ ತೆಗೆದುಹಾಕಬೇಕು. ಯಾವನು ಸ್ಟ್ಯಾಲಿನನಿಗಿಂತ ಹೆಚ್ಚು ಸಹನಶೀಲ, ಹೆಚ್ಚು ವಿಧೇಯ, ಹೆಚ್ಚು ನಮ್ರ ಮತ್ತು ಕಡಿಮೆ ವಿಕ್ಷಿಪ್ತನೆನಿಸುವನೊ ಅಂತಹನು ನಮ್ಮ ಪಕ್ಷದ ಮುಖ್ಯ ಕಾರ್ಯದರ್ಶಿಯಾಗಬೇಕು.' ಕ್ರಾಂತಿಯ ಮೂಲಪುರುಷನ ಈ ಖಂಡನೆ ಇರುವಾಗಲೂ ಮುಂದೆ ೮-೧೦ ವರ್ಷಗಳ ಅವಧಿಯಲ್ಲಿಯೆ ಸ್ಟ್ಯಾಲಿನನು ರಶಿಯಾದ ಸರ್ವಾಧಿಕಾರಿ ಎನಿಸಿದನು. ವಿರೋಧಿಸುವವರನ್ನೆಲ್ಲ ಬದಿರಿಸಿ ಇಡಿಯ ದೇಶವನ್ನೆ ತನ್ನೊಬ್ಬನ ವ್ಯಕ್ತಿತ್ವದ ನೆರಳಿನಿಂದ ಮುಸುಕಿದನು. ಈ ಅದ್ಭುತ ಸಾಹಸದ ನಾಯಕನ ಚರಿತ್ರವಾದರೂ ಅದ್ಭುತವಾಗಿರಲೇಬೇಕಲ್ಲವೇ?

ಸ್ಟ್ಯಾಲಿನನ ನಿಜವಾದ ಹೆಸರು ಯುಸಫ ವಿಸರಿಯೋನಿಚ ಓಝುಗಶಿವಿಲಿ ಎಂದು. ಇವನು ಹುಟ್ಟಿದ್ದು ಜಾರ್ಜಿಯ ಪ್ರಾಂತದಲ್ಲಿ, ೧೮೭೯ರಲ್ಲಿ. ಜಾರ್ಜಿಯಾ ಪ್ರಾಂತವು ಆಗ ರಶಿಯಾದ ಅಧೀನತೆಯಲ್ಲಿದ್ದಿತು. ಆದರೆ ಆ ಪ್ರಾಂತದ ಜನಜಾತಿಯೂ ಜನಭಾಷೆಯೂ ರಶಿಯಾದಕಿಂತ ತೀರ ಭಿನ್ನವಾದುದು. ಸ್ಟ್ಯಾಲಿನನಿಗೆ ಈಗ ಕೂಡ ರಶಿಯನ್ ಭಾಷೆಯನ್ನು ಜಾರ್ಜಿಯನದ ಛಾಯೆಯಿಲ್ಲದೆ ಮಾತನಾಡಲು ಬರುವುದಿಲ್ಲಂತೆ; ಸ್ಟ್ಯಾಲಿನನ ತಾಯಿ (ಇನ್ನೂ ಜೀವಿಸುತ್ತಿದ್ದಾಳೆ) ಜಾರ್ಜಿಯನದ ಹೊರತಾಗಿ ಬೇರೆ ಭಾಷೆಯನ್ನು ಇದುವರೆಗೂ ಅರಿಯಳಂತೆ! ತಾಯಿಯ ಪ್ರಭಾವವು ಮೊದಲಿನಿಂದಲೂ ಸ್ಟ್ಯಾಲಿನನ ಘನತೆಗೆ ಕಾರಣವಾಗಿದೆ ಎಂದು ಬಹುಜನರ ಅಭಿಪ್ರಾಯವಾಗಿದೆ. ಸ್ಟ್ಯಾಲಿನನ ತಂದೆಯು ಮೋಚಿಗಾರ ವ್ಯವಸಾಯದವನು. ಮಗನೂ ಅದೇ ವ್ಯವಸಾಯದಲ್ಲಿ ಪ್ರಾವೀಣ್ಯ ದೊರಕಿಸಬೇಕೆಂದು ತಂದೆಯ ಆಸೆ. ಆದರೆ ತಾಯಿಗೆ ಮಹತ್ವಾಕಾಂಕ್ಷೆ ಇದ್ದಿತು, ಮಗನ ಬುದ್ಧಿಮತ್ತೆಗಾಗಿ ಅಭಿಮಾನವಿದ್ದಿತು. ತೀರ ಬಡತನದ ಸ್ಥಿತಿಯಲ್ಲೂ ಮಗನಿಗೆ ಶಿಕ್ಷಣವನ್ನು ಅವಳು ಹಟದಿಂದ ಕೊಡಿಸಿದಳು. ಸ್ಟ್ಯಾಲಿನನ ಶಿಕ್ಷಣಸಂಸ್ಥೆ ಯಾವುದೆಂಬುದನ್ನು ಕೇಳಿದರೆ ಇಂದು ಬಹುಜನರಿಗೆ ನಗೆ ಬರಬಹುದು. ಸ್ಟ್ಯಾಲಿನನು ಕಲಿತದ್ದು ಧರ್ಮದ ಮತಸಂಸ್ಥೆ (Seminary) ಯಲ್ಲಿ. ಈ ಸಂಸ್ಥೆಯಲ್ಲಿದ್ದ ಅಂಧಶ್ರದ್ಧೆಯನ್ನೂ, ಪರಮತಾಸಹಿಷ್ಣುತೆಯನ್ನೂ, ಅಜ್ಞಾನಪೋಷಣವನ್ನೂ, ದುರಹಂಕಾರವೃತ್ತಿಯನ್ನೂ, ಐಸಿರಿಯ ದರ್ಪವನ್ನೂ ನೋಡಿ ತಲೆಗೆಟ್ಟು ಸ್ಟ್ಯಾಲಿನನು ರೂಢಧರ್ಮವನ್ನು ಮುರಿದೊಗೆಯಲು ಇಂದು ಟೊಂಕಕಟ್ಟಿ ನಿಂತಿದ್ದಾನೆ. ತನ್ನ ಬಡತನದ ಬಳಲಿಕೆಯೂ ಇವನ ಕ್ರಾಂತಿವೃತ್ತಿಗೆ ಕಾರಣವಾಗಿರಲೇಬೇಕು. ಅಂತೂ ಚಿಕ್ಕವಯಸ್ಸಿನಲ್ಲಿಯೆ ಸ್ಟ್ಯಾಲಿನನು ಸಮಾಜಸತ್ತಾವಾದ ಪಕ್ಷವನ್ನು ಸೇರಿಕೊಂಡನು. ತನ್ನ ಮಾತೃಭಾಷೆಯಲ್ಲಿ ಒಂದು ಪತ್ರಿಕೆಯನ್ನು ಹೊರಡಿಸಿದನು; ೧೯೧೨ರಲ್ಲಿ ಒಂದು ಗ್ರಂಥವನ್ನು ಬರೆದನು; ರಶಿಯನ್ ಡುಮಾ (ಪಾರ್ಲಮೆಂಟ) ದಲ್ಲಿ ಪ್ರಗತಿಪಕ್ಷದ ಮುಂದಾಳುವಾದನು. ೧೯೧೩ರಲ್ಲಿ ಇವನನ್ನು ಸೆರೆಹಿಡಿದು ದೇಶದ ಹೊರಕ್ಕೆ ತಳ್ಳಿದರು. ೧೯೧೭ರ ಕ್ರಾಂತಿಯ ವರೆಗೆ ಸ್ಟ್ಯಾಲಿನನು ಹೋರಿನೊಳಗಿನ ಮೊಲದಂತೆ ಒಳಗಿಂದೊಳಗೆಯೇ ದುಡಿಯುತ್ತಿದ್ದನು; ಹೊಟ್ಟೆಗಾಗಿ ಎಷ್ಟೋ ಕೀಳು ಕೆಲಸಗಳನ್ನು ಮಾಡಿದನು; ಈ ಸಂದರ್ಭದಲ್ಲಿ ಅವನಿಗೆ ಸಾವಿರಾರು ಕೀಳ್‌ಸ್ಥಿತಿಯ ಕೆಲಸಗಾರರ ಪರಿಚಯವಾಯಿತು. ಕ್ರಾಂತಿಯವರೆಗೂ ದೇಶವನ್ನು ಬಿಟ್ಟುಹೋಗದೆ ಧೈರ್ಯದಿಂದ, ಗಂಡಾಂತರಗಳಿಗೀಡಾಗಿ

ರಶಿಯಾದಲ್ಲಿಯೆ ಉಳಿದುಕೊಂಡುದಕ್ಕಾಗಿ ಸ್ಟಾಲಿನನಿಗೆ ಈಗಲೂ ಅಭಿಮಾನವಿದೆ. ೧೯೨೨ರಲ್ಲಿ ಸ್ಟಾಲಿನನು ಬೋಲ್‌ಶೆವಿಕ ಪಕ್ಷದ ಮುಖ್ಯ ಕಾರ್ಯದರ್ಶಿಯಾದನು. ೧೯೨೪ರಲ್ಲಿ ಲೇನಿನನು ಮರಣಹೊಂದಿದನು.

ಲೇನಿನನ ಮರಣದ ತರುವಾಯ ಸ್ಟಾಲಿನನ ನಿಜವಾದ ಯೋಗ್ಯತೆ ಹೊರಬಿದ್ದಿತು. ಸ್ಟಾಲಿನನಿಗೆ ವಿರುದ್ಧವಾಗಿ ನಿಂತವರಲ್ಲಿ ಟ್ರಾಟ್‌ಸ್ಕಿ ಎಂಬವನೊಬ್ಬನು ಅತ್ಯಂತ ಬುದ್ಧಿಶಾಲಿಯು. ಉಳಿದ ದೇಶಗಳಲ್ಲಿ ಬಂಡವಾಳಗಾರರ ಪುಂಡಾಟಿಕೆ ಇರುವವರೆಗೆ ರಶಿಯಾದ ಕ್ರಾಂತಿಯು ಸುರಕ್ಷಿತವಾಗದೆಂದೂ, ಅದಕ್ಕಾಗಿ ಮಿಕ್ಕ ರಾಷ್ಟ್ರಗಳಲ್ಲೂ ಕ್ರಾಂತಿಯನ್ನೆಬ್ಬಿಸುವ ಹೊಣೆಯನ್ನು ರಶಿಯಾದೇಶವು ಹೊರಬೇಕೆಂದೂ, ಬಡವರ ಬಂಡು ಸಂತತ (permanent revolution) ವಾಗಿರಬೇಕೆಂದೂ ಟ್ರಾಟ್‌ಸ್ಕಿ ಮತದ ತತ್ತ್ವ; ರಶಿಯಾದೊಳಗೆಯೆ ಕ್ರಾಂತಿಯನ್ನು ಸುರಕ್ಷಿತವಾಗಿಡುವ ಹೊಣೆ ದೊಡ್ಡದಿದೆ ಎಂದೂ, ರಶಿಯಾದಲ್ಲಿ ಕ್ರಾಂತಿಯನ್ನು ಯಶಸ್ವಿಯಾಗಿ ಮಾಡಿ ತೋರಿಸಿದರೆ ಮಿಕ್ಕ ರಾಷ್ಟ್ರಗಳ ಕೆಲಸಗಾರರಿಗೆ ಸ್ಫೂರ್ತಿದಾಯಕವಾಗುವದೆಂದೂ, ಅದಕ್ಕಾಗಿ ಶ್ರಮವನ್ನೂ ಧನವನ್ನೂ ರಶಿಯಾದೊಳಗಿನ ಕಾರ್ಯಕ್ಕಾಗಿಯೆ ವೆಚ್ಚಮಾಡಬೇಕೆಂದೂ ಸ್ಟಾಲಿನನ ತತ್ತ್ವ. ಈ ತತ್ತ್ವಗಳ ತಿಕ್ಕಾಟವು ಘೋರವಾದ ಕದನದ ಸ್ವರೂಪವನ್ನೆ ತಾಳಿತು. ಕೊನೆಗೆ ಟ್ರಾಟ್‌ಸ್ಕಿಗೆ ದೇಶವನ್ನು ಬಿಟ್ಟು ಓಡಿಹೋಗಬೇಕಾಯಿತು. ಇಂದು ರಶಿಯಾದಲ್ಲಿ ಸ್ಟಾಲಿನ ಮತ್ತು ಅವನ ತತ್ತ್ವ ಇವೆರಡರ ಹೊರತು ಮೂರನೆಯದಕ್ಕೆ ಜಾಗೆಯೆ ಇಲ್ಲ.

ಸ್ಟಾಲಿನನಿಗೆ ಟ್ರಾಟ್‌ಸ್ಕಿಯಂತಹ ಬುದ್ಧಿಮತ್ತೆ ಇಲ್ಲ; ಆದರೆ ಕಾರ್ಯಕೌಶಲ್ಯವಿದೆ. ಮೊದಲಿನಿಂದಲೂ ಸ್ಟಾಲಿನನು ತನ್ನ ತತ್ತ್ವವು ತನ್ನದಲ್ಲ, ತನ್ನ ಗುರುವಾದ ಲೇನಿನನದು ಎಂಬ ಯುಕ್ತಿಯನ್ನು ಹೂಡಿದನು. ಆದುದರಿಂದ ಟ್ರಾಟ್‌ಸ್ಕಿಗೆ ಲೇನಿನನ ದ್ರೋಹಿ ಎಂಬ ಅಪವಾದ ಬಂದಿತು. ತಾನೂ ಮತ್ತು ಲೇನಿನನೂ ಕೂಡಿ ನಿಂತಿದ್ದ ಭಾವಪಟವೊಂದನ್ನು ಲಕ್ಷಾವಧಿಯಾಗಿ ಪ್ರಕಟಿಸಿ ತನಗೂ ಲೇನಿನಗೂ ಎಂತಹ ಸೌಹಾರ್ದವಿದ್ದಿತೆಂಬ ಭಾವನೆಯನ್ನು ಜನರಲ್ಲಿ ಹರಡಿದನು. ಇದಲ್ಲದೆ ಸ್ಟಾಲಿನನು ಟ್ರಾಟ್‌ಸ್ಕಿಯಂತೆ ಕೇವಲ ವಿಚಾರಪ್ರವೀಣನಲ್ಲ, ಮುಖ್ಯವಾಗಿ ಆಚಾರಧುರೀಣನು. ಇಂದಿಗೂ ಸ್ಟಾಲಿನನಿಗೆ ಮುಸೋಲಿನಿ-ಹಿಟ್ಲರರಂತೆ ಜನರ ಕುರಿಹಿಂಡುಗಳನ್ನು ನೆರೆಯಿಸಿ ಕೈ-ಮೈ-ಮಣಿತಗಳ ಆಡಂಬರದಿಂದ ಕಂಠಶೋಷ ಮಾಡುವುದು ಸೇರುವದಿಲ್ಲ. ಒಂದು ಕಾಲಕ್ಕೆ ಒಂದೇಸವನೆ ೧೮ ತಿಂಗಳುಗಳ ವರೆಗೆ ಒಂದು ಭಾಷಣವನ್ನು ಕೂಡ ಮಾಡಿದ್ದಿಲ್ಲವಂತೆ ಸ್ಟಾಲಿನನು! ಗುಮ್ಮಟೇಶ್ವರ ಸರ್ವಾಧಿಕಾರಿ! ಕಾಕದೃಷ್ಟಿಯಿಂದ ಏಕಧ್ಯೇಯನಿರತನಾಗಿ ದುಡಿಯುವುದು, ಧ್ಯೇಯಕ್ಕಾಗಿ ಬೇಕಾದಷ್ಟು ಶ್ರಮವನ್ನು ಸಹಿಸುವುದು, ಧ್ಯೇಯ ಸಾಧಿಸುವಾಗ ಒಳಿತು-ಕೆಡಕು ಎಂಬ ಬಾಹ್ಯಭೇದವನ್ನು ಬದಿಗಿಡುವುದು, ಯುಕ್ತಿಯಿಂದ ಶಕ್ತಿಯವರೆಗೆ ಸಾಧನಗಳನ್ನುಪಯೋಗಿಸುವುದು ಇವೇ ಸ್ಟಾಲಿನನ ಅಸಾಧಾರಣ ಗುಣಗಳು; ಸ್ಟಾಲಿನನ ವಿಜಯಸ್ತಂಭವನ್ನು ನಿಲ್ಲಿಸಿದ ಸಾಮಗ್ರಿಯೂ ಇದೇ. ಸ್ಟಾಲಿನನಿಗೆ ಬುದ್ಧಿಯಾಗಲಿ ಜ್ಞಾನವಾಗಲಿ ಕಡಿಮೆ ಎಂದರ್ಥವಲ್ಲ. ಅವನನ್ನು ಕಾಣಹೋದ ಪತ್ರಿಕಾಕರ್ತರು ಅವನಿಗಿದ್ದ ಮಾತಿನ ಜಾಣ್ಮೆಗಾಗಿಯೂ, ಸಂಗತಿಗಳ ಜ್ಞಾನಕ್ಕಾಗಿಯೂ, ತಾತ್ತ್ವಿಕ ಧೋರಣೆಗಾಗಿಯೂ ತಲೆದೂಗುತ್ತ ಬಂದಿದ್ದಾರೆ. ಆದರೆ ಸ್ಟಾಲಿನನಿಗೆ ಬರಿಯ ಮಾತಿನ ಆಡಂಬರ ಬೇಡ. ಉಳಿದ ಸರ್ವಾಧಿಕಾರಿಗಳಿಗಿದ್ದಂತೆ ಅವನಿಗೆ ವೈಯಕ್ತಿಕ ಆಕಾಂಕ್ಷೆ-ಲೋಭಗಳೂ ಇಲ್ಲ. ಯಾವಾಗಲೂ ನಮ್ರತೆಯನ್ನೆ ತೋರಿಸುತ್ತಾನೆ, ನಮ್ರತೆಯಿಂದಲೆ ನಡೆಯುತ್ತಾನೆ. ರಾಜ್ಯಸೂತ್ರಪದ್ಧತಿ (constitution)ಯಲ್ಲಿ ಅವನಿಗೆ ಯಾವ ವಿಶಿಷ್ಟಾಧಿಕಾರಗಳಾಗಲಿ, ಹೆಚ್ಚಿನ ಸ್ಥಾನವಾಗಲಿ ಇಲ್ಲ. ಹಿಟ್ಲರನು ದೇಶನಾಯಕ (Reichsführer); ಮುಸೋಲಿನಿ ಮುಖ್ಯ ಮಂತ್ರಿ; ಕಮಾಲಪಾಶಾ ದೇಶಾಧ್ಯಕ್ಷ (President of the Republic) ಮತ್ತು ಜನರ ತಂದೆ (Atturk) ಆದರೆ ಸ್ಟಾಲಿನನು ಮಾತ್ರ ಮಿಕ್ಕವರಂತೆ ಬೋಲ್‌ಶೆವಿಕ ಪಕ್ಷದ ಕಾರ್ಯಕಾರಿ ಮಂಡಳದ ಸಾಮಾನ್ಯ ಸದಸ್ಯನಾಗಿದ್ದಾನೆ.

ದೇಶದ ವ್ಯವಹಾರದಲ್ಲಿ ಗುಮ್ಮಟೇಶ್ವರನಂತಿದ್ದರೂ ಸಂಸಾರದಲ್ಲಿ ಮಮತಾಮೃದುವಾಗಿದ್ದಾನೆ. ಸ್ಟಾಲಿನನ ಮೊದಲನೆಯ ಹೆಂಡತಿಯು ೧೯೧೭ರಲ್ಲಿ ತೀರಿದಳು; ೧೯೧೯ರಲ್ಲಿ ಎರಡನೆಯ ಸಲ ಮದುವೆಯಾದನು. ಸ್ಟಾಲಿನನ ಹೆಂಡತಿಯಾಗಲಿ ಮಕ್ಕಳಾಗಲಿ ವ್ಯವಹಾರದಲ್ಲಿ ಸಾಮಾನ್ಯರಂತೆಯೆ ದುಡಿಯುವರು. ೧೯೩೨ರಲ್ಲಿ ಎರಡನೆಯ ಹೆಂಡತಿಯೂ ತೀರಿಕೊಂಡಳು. ಸ್ಟಾಲಿನನಿಗೆ ಕಾಮ-ಲೋಭಗಳೆ ಇಲ್ಲ. ಇಂದು ಬೇಕಾದಷ್ಟು ಐಶ್ವರ್ಯದಿಂದ ಅವನು ಬಾಳಬಹುದು. ಆದರೂ ತಿಂಗಳಿಗೆ ೧೫೦ ರು. ಗಳಿಗಿಂತ ಕಡಿಮೆ ಸಂಬಳವನ್ನು (೧೦೦೦ ರೂಬಲ್ಸ್-೬ ಪೌ, ೧೫ ಶಿ) ಸ್ವೀಕರಿಸುತ್ತಾನೆ. ಪಾಯಿಪ್ (ಚಿಲುಮೆ) ಸೇದುವುದು; ಬ್ರ್ಯಾಂಡಿ ಕುಡಿಯುವುದು; ಅದೂ ಸೌಮ್ಯವೃತ್ತಿಯಿಂದ. ವೇಷದ ಆಡಂಬರ ಬೇಡ. ಮಕ್ಕಳಿಗಾಗಿ, ಬಡವರಿಗಾಗಿ ಪ್ರೇಮವಿದೆ, ಕಳಕಳಿ ಇದೆ. ಒಮ್ಮೆ ಸೈನ್ಯಪರೀಕ್ಷಣೆಯನ್ನು ನಡೆಸಿದಾಗ ಸೈನಿಕನೊಬ್ಬನು ಮುಜರೆ ಮಾಡಲಿಲ್ಲವಂತೆ. 'ಯಾಕೆ?' ಎಂದು ಸ್ಟಾಲಿನನು ಗದ್ದರಿಸಿದನು. ಆ ಸೈನಿಕನು ತನ್ನ ಕಾಲೊಳಗಿನ ಹರಕು ಬೂಟುಗಳನ್ನೂ, ಚಳಿಯಿಂದ ಹಿಮಗಟ್ಟಿದಂತಿದ್ದ ಬೆರಳುಗಳನ್ನೂ ತೋರಿಸಿ, ಸ್ಟಾಲಿನನ ಕಾಲೊಳಗಿದ್ದ ಹೊಸ ಬೂಟುಗಳನ್ನೂ ತೋರಿಸಿದನಂತೆ. ತತ್ಕ್ಷಣವೆ ಸ್ಟಾಲಿನನು ತನ್ನ ಬೂಟುಗಳನ್ನು ಅವನಿಗೆ ಕೊಟ್ಟು ಬಹುದಿವಸಗಳ ವರೆಗೆ ಸೈನಿಕನ ಹರಕು ಬೂಟುಗಳನ್ನು ತಾನು ತೊಟ್ಟು ತಿರುಗಿದನು. ಅದಕ್ಕಾಗಿಯೆ ಇಂದು ಸ್ಟಾಲಿನನಿಗಾಗಿ ರಶಿಯಾದ ಬಹುಜನರಲ್ಲಿ ಆದರವಿದೆ. ಸುಪ್ರಸಿದ್ಧ ಪತ್ರಿಕಾಕರ್ತನೊಬ್ಬನು ಹೀಗೆ ಬರೆದಿದ್ದಾನೆ. 'ಹಿಟ್ಲರನ ಅನುಯಾಯಿಗಳು ಹಿಟ್ಲರನನ್ನು ಪೂಜಿಸುವರು; ಮುಸೊಲಿನಿಯ ಅನುಯಾಯಿಗಳು ಮುಸೊಲಿನಿಗೆ ಭಯದಿಂದ ನಡುಗುವರು; ಸ್ಟಾಲಿನನ ಅನುಯಾಯಿಗಳು ಸ್ಟಾಲಿನನನ್ನು ಭಕ್ತಿಯಿಂದ ನೋಡುವರು.' ಆಶ್ಚರ್ಯವೇನಿದೆ? ಕಾಲ್ಕೆಳಗೆ ತುಳಿವ, ಹೊಲಸಕ್ಕಿಳಿವ ಮೋಚ್ಚೆಗಳನ್ನು ಕಟ್ಟುವ ಕೀಳನೆನಿಸಿದವನು ಇಂದು ಕಾಲ್ಕೆಳಗೆ ತುಳಿದು ಮಣ್ಣುಮುಕ್ಕಿದ ಬಡವರ ಮನೆಗಳನ್ನು ಕಟ್ಟುವ ಮಾಯಾವಿಯಾಗಿದ್ದಾನೆ; ತನ್ನನ್ನೆ ಮರೆವ ಮಹಾನುಭಾವಿಯಾಗಿದ್ದಾನೆ.

ಹುಚ್ಚು ಹುಡುಗಿ

(ಒಂದು ಚಿತ್ರ)

ಬರೆದವರು:
ಕೆ. ಶಂಕರಭಟ್ಟ

"ಮಿಸ್ ಹೇರಿಸನ್! ಗಣೇಶ ಪ್ರಭು ...ವನಾಗಿದ್ದಾನೆ. ಇನ್ನು ಆತನನ್ನು ಕೊಲ್ಲುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ"

ಗಣೇಶ ಪ್ರಭುಗಳಿಗೆ ಏನು ಗ್ರಹಚಾರವೋ ಗೊತ್ತಿಲ್ಲ ; ಒಂದು ವರ್ಷದ ಹಿಂದೆ ಮೂರು ಲಕ್ಷದ ಒಡೆಯರಾಗಿದ್ದ ಅವರು ಇಂದು ಕೊರಳುದ್ದ ಸಾಲದ ಕೆಸರಲ್ಲಿ ಮುಳುಗಿದ್ದಾರೆ. ಅವರ ಅವಸ್ಥೆಯನ್ನು ಕಂಡವರು " ತನ್ನ ಅವಿವೇಕದ ಫಲವನ್ನು ಅನುಭವಿಸುತ್ತಿದ್ದಾನೆ. ಆಸಾಮಿ "– ಎಂದು ಮನಸ್ಸಿನ ಒಳಗೆ ನಗುತ್ತಿದ್ದರು. ಅವರ ಹೆಂಡತಿ ಮಾತ್ರ "ಗ್ರಹಚಾರ! ಗ್ರಹಚಾರ!" ಎಂದು ಗೋಳಿಡುತ್ತಿದ್ದಳು. ಇದು ಗ್ರಹಚಾರ ಫಲವೆಂದೇ ಗಣೇಶ ಪ್ರಭುಗಳೂ ನಂಬುವುದಕ್ಕೆ ಅಭ್ಯಾಸಿಸಿದ್ದರು.

ಅವರು ಐಶ್ವರ್ಯಶಿಖರದಿಂದ ಕೆಳಗಿಳಿದ ಕ್ರಮ ಹೀಗೆ:– ಒಂದು ದಿನ ಪ್ರಾತಃಕಾಲ, ಅವರ ಪಾಲುಗಾರಿಕೆಯಿದ್ದ ಬಟ್ಟೆಗಿರಣಿ ದಿವಾಳಿಯಾಯಿತು. ಇನ್ನೊಂದು ದಿನ ಸಂಜೆ, ಅವರೇ ಅಧ್ಯಕ್ಷರಾಗಿದ್ದ ಬ್ಯಾಂಕಿನ ಕಬ್ಬಿಣದ ಕೋಣೆಯೊಳಗೆ ತುಂಬಿದ್ದ ನಗನಾಣ್ಯಗಳೆಲ್ಲ, ತಾಮ್ರದ ದೇಹವುಳ್ಳವುಗಳಾಗಿ, ಬಂಗಾರದ ಲೇಪದ ಬಟ್ಟೆಹೊದೆದು ತೆಪ್ಪಗೆ ಕತ್ತಲೆಯಲ್ಲಿ ತಲೆ ಮರೆಯಿಸಿಕೊಂಡಿದ್ದದು ತಿಳಿದುಬಂತು. ಮತ್ತೊಂದು ಮಧ್ಯಾಹ್ನದಲ್ಲಿ, ಅವರ ಆಸ್ತಿಯೆಲ್ಲ ಯಾರೋ ಸಾಲಗಾರರ ವಶವಾಗಿ ಹೋಯಿತು. ಇಂದು ಅವರಿಗೆ ಉಳಿದುದೆಂದರೆ, ಇಟ್ಟಿಗೆ ವ್ಯಾಪಾರಿ ಗಣೇಶ ಪ್ರಭು–ಎಂಬ ಹೆಸರು ಮಾತ್ರ!

ಇದರೊಂದಿಗೆ, ಹೆಂಡತಿಯ ಹೆಸರಲ್ಲಿ ಕೊಂಡುಕೊಂಡಿದ್ದ ಮನೆಯೊಂದು; ಹೆಂಡತಿ ಮಕ್ಕಳು; ಲೆಕ್ಕದ ಬಾಧೆಗೆ ಸಿಲುಕದ ಎಷ್ಟೋ ದೊಡ್ಡದಾಗಬಹುದಾದ ಉಳಿಕೆಯ ಸಾಲ; ಇವೂ ಅವರ ಸೊತ್ತುಗಳೆ ಎಂಬುದನ್ನು ಒಪ್ಪಿಕೊಳ್ಳಬೇಕು!

ಒಂದು ದಿನ ಅಪರಾಹ್ನ ಪ್ರಭುಗಳು ತಮ್ಮ ಮನೆಚಾವಡಿಯಲ್ಲಿ ಮಲಗುವ ಕುರ್ಚಿಯ ಮೇಲೆ ತಮ್ಮ ದೇಹಭಾರವನ್ನು ಒರಗಿಸಿ ಕುಳಿತುಕೊಂಡಿದ್ದರು. ಸಾಂಪತ್ತಿಕ ವ್ಯವಹಾರಗಳಲ್ಲಿ ಸಿಕ್ಕು ಸಂಕಟಗಳು ಬಂದಂದಿನಿಂದ, ಮನೆಯೊಳಗಿರುವುದೇ ಅಪರೂಪವಾಗಿದ್ದ ಪ್ರಭುಗಳು, ಇಂದು ಸ್ವಲ್ಪ ಬಿಡುವಮಾಡಿ ಕುಳಿತುದನ್ನು ಕಂಡು ಅವರ ಧರ್ಮಪತ್ನಿ ಗಂಗಮ್ಮ ಸಮೀಪದಲ್ಲಿಯೇ ಇದ್ದ ಮುಂದಿನ ಬೆಂಚಿನಮೇಲೆ ಆಸೀನಳಾದಳು. ತನ್ನ ಪತಿಯ ಆರ್ಥಿಕ ಸ್ಥಿತಿ ಹೇಗೆ ಎಂಬುದು ಅವಳಿಗೆ ಗೊತ್ತಿತ್ತು. ಅವ

ಆವರು ಗೃಹಪರಿತ್ಯಾಗ ಮಾಡಿದ ಮಾತ್ರದಿಂದ ಆಳಿದ ಸಂಪತ್ತು ಮರಳಿ ಬರುವುದು ಸಾಧ್ಯವೆಂಬುದು ಅವಳಿಗೆ ತಿಳಿದಿರಲಿಲ್ಲ. ಗೃಹ ಚಾರದ ಮೇಲೆಯೇ ಕಾರಣವನ್ನಾರೋಪಿಸುವ ಮಂಕುಬುದ್ಧಿ ಅವಳದು. ತನ್ನ ಕುರಿತಾದ ಅಸಮಾಧಾನದಿಂದ ಅವರೀಗ ಮನೆ ಬಿಟ್ಟು ದೂರವಾಗಿರುವರೇ ಎಂಬ ಸಂದೇಹವು ಆಕೆಯ ಹೃದಯದಲ್ಲಿ ಮೂಡದಿರಲಿಲ್ಲ. ಅವಶ್ಯವಾದರೆ, ತನ್ನ ಹೆಸರಲ್ಲಿರುವ ಮನೆಯನ್ನು ಕೂಡ. ಗೃಹಚಾರಕ್ಕೂ ಸಾಲಗಾರರ ಬಾಯಿಗೂ ತುತ್ತಾಗಿ ಕೊಡುವುದಕ್ಕೆ ಅವಳು ಸಿದ್ಧಳೇ ಆಗಿದ್ದಳು. ಆದರೆ ಪ್ರಭುಗಳ ತುಟಿಯಲ್ಲಿ ಮಾತು ಮೂಡುವುದೇ ಇಲ್ಲ! ಗಂಗಮ್ಮನ ಕಣ್ಣಿನಿಂದ ಎರಡು ಹನಿಗಳುದುರಿದುವು; ಪ್ರಭುಗಳೂ ಕಂಡರು; ನಿಟ್ಟುಸಿರು ಕರೆದರು.

"ಗಂಗೂ ಇಂದು ನಾವು ದರಿದ್ರರು. ನಮ್ಮದೆನ್ನುವ ಚಿಕ್ಕಾಸು ಇಲ್ಲ. ಇದುವರೆಗೆ ಈ ವಿಷಯವನ್ನು ನಿನಗೆ ತಿಳಿಸಲಿಲ್ಲ." ಎಂದರು ಪ್ರಭುಗಳು.

"ಹೂಂ... ದೇವರು ಕೊಡುತ್ತಾನೆ; ಕೊಂಡು ಹೋಗುತ್ತಾನೆ; ಯಾರೇನು ಮಾಡಲಾಗುತ್ತದೆ?" ಎಂದು ಗಂಗಮ್ಮ ಸಹಾನುಭೂತಿ ತೋರಿಸಿದಳು. ತಪ್ಪು ಮಾಡುವುದು ದೇವರಲ್ಲದೆ ತನ್ನ ಪತಿದೇವರಲ್ಲ ಎಂದವಳ ನಂಬಿಕೆ.

"ದೇವರು ಮನುಷ್ಯನಿಗೆ ದುರ್ಬುದ್ಧಿ ಕೊಡುತ್ತಾನೆ; ಎಂಬುದನ್ನು ನಾನು ಒಪ್ಪಲಾರೆ."

"ಲೋಕದಲ್ಲಿ ಹಣ ಕಳೆದುಕೊಳ್ಳುವವರೆಲ್ಲರೂ ದುರ್ಬುದ್ಧಿಗಳೇ?"

"ಚರ್ಚೆ-ಬೇತಗರಿಗೂ.. ಚರ್ಚೆ ಮಾಡಿದರೆ ಹೋದ ಸಂಪತ್ತು ಮರಳಿ ಬರುವುದೇ? ನಿನ್ನ ಗಂಡ ನೀಚನಲ್ಲವೆಂದು ಸಿದ್ಧಾಂತ ಪಡಿಸಲು ಅವನಿಗೂ ಮನಸ್ಸಿದೆ. ಆದರೆ.. ಆದರೆ.. ಸಾಧ್ಯವಿಲ್ಲ."

"ಹಣ ಕಾಸಿನ ವಿಚಾರ ಹೇಗೂ ಆಗುತ್ತವೆ. ಆದರೆ ನಮ್ಮ ಪ್ರೇಮಕ್ಕೆ ದಾರಿದ್ರ್ಯವೊದಗದಿದ್ದರೆ.."

ಈ ಮಾತನ್ನು ಕೇಳಿದೊಡನೆ ಪ್ರಭುಗಳು ಗೊಳ್ಳೆಂದು ಅತ್ತರು. ಬಿಕ್ಕು ಮಾತಿನಲ್ಲಿ ಹೇಳಿದರು.

ಪ್ರೇಮಕ್ಕೆ ದಾರಿದ್ರ್ಯ ಹೇಗೆ ಬಂದೀತು ಗಂಗೂ ನಿನ್ನಂತಹ ಹೆಂಡತಿಯಿರುವಲ್ಲಿ? ಎಳೆಯ ವಯಸ್ಸಿನಲ್ಲಿಯೇ ಬೇಕಾದಷ್ಟು ರೊಕ್ಕವನ್ನು ಕೂಡಿಟ್ಟು ತಂದೆಯವರು ಇಹಲೋಕವನ್ನು ಬಿಟ್ಟರು. ನನಗೆ ವಿದ್ಯೆ ಕಲಿಸಿದರು. ನಾನಾದರೂ ವಿದ್ಯೆ ಕಲಿತು ವಿಚಾರವಂತನಾದೆನೇ? ಇಲ್ಲ. ಇಟ್ಟಿಗೆಯ ಕೈಗಾರಿಕೆಯಲ್ಲಿ ಕೌಶಲವನ್ನು ಪಡೆಯುವುದಕ್ಕೆಂಬ ನೆವದಿಂದ, ಇಂಗ್ಲೆಂಡು, ಫ್ರಾನ್ಸು, ಅಮೇರಿಕ ಹೆಚ್ಚೇನು? ಪ್ರಪಂಚದ ಮೂಲೆ ಮೂಲೆ ಯಲ್ಲಿ ಸುತ್ತಾಡಿದೆ ತಂದೆ ಗಳಿಸಿದ ಹಣವನ್ನು ಪರದೇಶಗಳ ಬೀದಿ ಬೀದಿಯಲ್ಲಿ ಚೆಲ್ಲಿದೆ. ಮನಸ್ಸು ಇಟ್ಟಿಗೆಯಷ್ಟು ಕಠಿಣವಾಯಿತು. ಎಳೆ ಹರೆಯದ ಕೈಹಿಡಿದವಳನ್ನು ಮರೆತೆ. ಎಷ್ಟೋ ವರ್ಷ ಅಜ್ಞಾತವಾಸವಾದೆ. ತಂದೆ ತೀರಿ ಹೋದರು. ನನ್ನ ಜೇಬು ಖಾಲಿಯಾಯಿತು. ಹೋದರೆ ಹೋಗಲಿ ಭಿಕಾರಿ ಎಂದು ಬಂಧುಗಳು ಅಲಕ್ಷಿಸಿದರು. ಆಗ ನೀನು ಮೈಯ ಒಡವೆಗಳನ್ನು ಮಾರಿ, ಹಣಕಳುಹಿಸಿ, ನನ್ನನ್ನು ಬರಿಸಿಕೊಂಡೆ. ನಿನ್ನ ಮನಸ್ಸು ಅಂದು ಪ್ರೇಮದ ಅಕ್ಷಯಪಾತ್ರವಾಗಿತ್ತು; ಈಗಲೂ ಹಾಗೆಯೇ ಇದೆ. ಪ್ರೇಮ ದಾರಿದ್ರ್ಯವುಂಟಾಗುವುದು ಹೇಗೆ ಗಂಗೂ! ಇದಾದರೂ ನಿನ್ನ ಪ್ರೇಮವೇ ನನ್ನನ್ನು ಬದುಕಿಸಬೇಕು. ನೋಡು. ನಮ್ಮ ಮುಂದೆ ವಿಶಾಲ ಜಗತ್ತು. ನಮ್ಮ ದೇಹಗಳನ್ನು ಒದೆದು ಚೆಂಡಾಡುವ ದಾರಿದ್ರ್ಯ ಕ್ರೀಡಾಭೂಮಿಯಾದ ಜಗತ್ತು. ಇದರಲ್ಲಿ ನೀನು ..ಮಕ್ಕಳು.. ನಾನು ಕೂಡ ಜೀವಿಸಬೇಕಾಗಿ ಬಂದಿದೆ ಗಂಗೂ!

"ಹಿಂದಿನದನ್ನು ನೆನೆದು ಎದೆ ನೋಯಿಸುವುದರಲ್ಲಿ ಅರ್ಥವಿಲ್ಲ. ದೊಡ್ಡ ಸಾಹುಕಾರರ ಹೆಂಡತಿ ಎಂದು ಹೇಳಿಸಿಕೊಳ್ಳುವ ಆಸೆ ನನಗಿಲ್ಲ. ನಿಮ್ಮ ಕಾಲ ಬುಡದಲ್ಲಿಯೇ ಬಿದ್ದು ಸತ್ತರೆ ಸಾಕಾಗಿದೆ."

"ಗಂಗೂ; ಅಷ್ಟೆಲ್ಲ ಹೇಳಬೇಕೆ? ನಾನೀಗ ಮನೆ ಬಿಟ್ಟಿರುವುದಕ್ಕೆ ಸಾಲಿಗರ ಕಾಟವೆ ಕಾರಣ; ನಿನ್ನ ಕುರಿತಾದ ಅಲಕ್ಷ್ಯವಲ್ಲ."

"ಸಾಲಿಗರೇನು ಮಾಡುತ್ತಾರೆ? ನಮ್ಮ ಒಡವೆಗಳನ್ನೆಲ್ಲ ಅವರಿಗೆ ಅರ್ಪಿಸಿಬಿಡೋಣ. ನಮ್ಮ ಪರಸ್ಪರ ಪ್ರೇಮವೊಂದೇ ನಮಗಿರುವ ವಸ್ತುವೆಂಬುದನ್ನು ಲೋಕಕ್ಕೆ ಸಾರಿಬಿಡೋಣ."

"ನನಗೊಂದೂ ತಿಳಿಯದು ಗಂಗೂ. ಹೀಗೇಕೆ ಆಯಿತೆಂದು ತಿಳಿಯಹೇಳುವ ಕುತೂಹಲವೂ ಇಲ್ಲ. ಹಿಂದಿನ ಸಂಗತಿಗಳನ್ನೆಲ್ಲ ಹಿಕ್ಕುತ್ತಾ ಹೋದರೆ ಮನಸ್ಸಿಗಾಗುವುದು ಖೇದವಷ್ಟೆ. ನನಗೊಂದೇ ವ್ಯಸನ. ನನ್ನ ಮಾನಭಂಗವನ್ನು ನೋಡಿಯೇ ತೀರಬೇಕೆಂದು ಸಂಕಲ್ಪಿಸಿರುವ ಸಾಲಿಗರ ನಡುವೆ ಕಳ್ಳನಂತೆ ತಿರುಗಾಡಬೇಕಾಗುತ್ತದೆ. ಹೃದಯೇಶ್ವರಿಯ ಪ್ರೇಮವನ್ನು ಕಳ್ಳನಂತೆ ಸವಿಯಬೇಕಾಗುತ್ತದೆ.. ಇದಕ್ಕಾಗಿ ಮಾತ್ರ ಕೊರಗಬೇಕಾಗಿದೆ.'

ಆ ಸಮಯಕ್ಕೆ ಬೀದಿಯ ಬಳಿಯಲ್ಲಿ ನಿಂತಿದ್ದ ಪ್ರಭುಗಳ ಹುಡುಗ ಓಡಿ ಬಂದು "ಯಾರೋ ಬರುತ್ತಾರೆ!' ಎಂದು ಕೂಗಿದ.

"ರಣಹದ್ದುಗಳು! ಶವದ ಮೇಲೆ ಬೀಳಲು ಬರುವ ರಣಹದ್ದುಗಳು!" ಎಂದು ಉದ್ಗರಿಸುತ್ತಾ ಪ್ರಭುಗಳು ಆಸನದಿಂದೆದ್ದರು.

"ಒಬ್ಬಳು ಹೆಂಗುಸು" ಎಂದ ದಿನಕರ.

"ಹೆಂಗುಸೆ? ಮತ್ತಾರೂ ಇಲ್ಲವೇ?"

"ಮೋಟರಿನಿಂದ ಇಳಿದಿದ್ದಾಳೆ. ಮತ್ತಾರೂ ಇದ್ದಂತೆ ತೋರಲಿಲ್ಲ."

ನಾಯಕಸಾನಿ ರತ್ನಾವಳಿಯಿಂದಲೂ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಪಡೆದಿದ್ದ ಪ್ರಭುಗಳ ಮೈ ಜುಮ್ಮೆಂದಿತು.

ಕೂಡಲೆ ಮನೆಯೊಳಗೆ ನುಗ್ಗಿ ಮಾಳಿಗೆಯನ್ನೇರಿದರು ಪ್ರಭುಗಳು.

ಒಂದು ವರ್ಷದಿಂದಿತ್ತ ಮನೆಗೆ ಬಂದು ಹೋಗುವವರ ಸವಾಲು ಅಷ್ಟು ಸವಾಲುಗಳಿಗೆ ಸರಿಯಾದ ಉತ್ತರ ಕೊಡುವ ವಿಧಾನ ಅವ ಮನೆ ನಾಯಿಗೂ ತಿಳಿದಿದ್ದಿತು. ಪ್ರಭುಗಳು ಮಾಳಿಗೆಯ ಮೇಲಿದ್ದ ಮಂಚದಲ್ಲಿ ಮುಸುಕು ಹಾಕಿಕೊಂಡು ಮಲಗಿಬಿಟ್ಟರು

* * *

ಮೋಟರಿನಿಂದಿಳಿದ ಅಪರಿಚಿತ ಸ್ತ್ರೀ ಅಂಗಳಕ್ಕೆ ಬಂದಳು. ಚಾವಡಿ ಮೆಟ್ಟಲಿಗೆ ಕಾಲಿಟ್ಟಳು. ಗಂಗಮ್ಮ ಇದಿರಾಗಿ "ಬನ್ನಿರಮ್ಮ" ಎಂದಳು.

"ಇದು ಯಾರ ಮನೆ?" ಎಂದು ಅಪರಿಚಿತ ಸ್ತ್ರೀ ಕೇಳಿದಳು.

"ಇದು .. ಮನೆ .... ನಮ್ಮದು. ದಿನಕರ! ತಂದೆಯ ಹೆಸರು ಹೇಳಪ್ಪ!" ಎಂದಳು ಗಂಗಮ್ಮ.

ಹುಡುಗನ ಮಾತಿನಿಂದ ಇದೇ ತನ್ನ ಗುರಿಯೆಂದು ಅಪರಿಚಿತೆಗೆ ತಿಳಿಯಿತು. ಗಂಗಮ್ಮ ತೋರಿಸಿಕೊಟ್ಟ ಕುರ್ಚಿಯಲ್ಲಾಕೆ ಕುಳಿತುಕೊಂಡಳು.

"ಕ್ಷಮಿಸಿರಮ್ಮ.. ಕ್ಷಮಿಸಿರಿ.. ನಾನು ಪರದೇಶದವಳು .. ನಿಮ್ಮಲ್ಲಿ ಹೆಂಡತಿ ಗಂಡನ ಹೆಸರು ಹೇಳಬಾರದೆಂಬುದನ್ನು ಮರೆತೆ." ಎನ್ನುತ್ತಾ ದಿನಕರನ ಕಡೆಗೆ ಮುಖ ತಿರುಗಿಸಿ "ಪ್ರಭುಗಳು ಮನೆಯಲ್ಲಿದ್ದಾರೆಯೇ ?" ಎಂದು ಪ್ರಶ್ನಿಸಿದಳು.

"ಇಲ್ಲ"

"ಅವರನ್ನು ಈ ದಿನ ಕಾಣುವ ಸಂಭವವುಂಟೇ ?"

"ಇಲ್ಲ"

"ಎಲ್ಲಿಗೆ ಹೋಗಿದ್ದಾರೆ?"

"ತಿಳಿಯದು"

ಹೀಗೆ ಕುಂಟು ಮಾತಿನ ಉತ್ತರಗಳನ್ನು ಕೇಳಿದ ಅಪರಿಚಿತೆಯ ಮನಸ್ಸಿಗೆ, ತನ್ನ ಆಗಮನದಿಂದ ಮನೆಯವರಿಗೇನೋ ಕ್ಲೇಶವಾದಂತೆ ಭಾಸವಾಯಿತು. ನಾನು ಬಂದುದರ ಉದ್ದೇಶ, ತನ್ನ ಪರಿಚಯ. ಇವಿಷ್ಟನ್ನು ತಿಳಿಸಿಬಿಟ್ಟರೆ ಅವರ ಸಂದೇಹಪರಿಹಾರವಾದೀತೆಂದು ಭಾವಿಸಿ "ಪ್ರಭುಗಳು ದೊಡ್ಡ ಇಟ್ಟಿಗೆ ಕಾರ್ಖಾನೆಯ ಒಡೆಯರಂತೆ. ಅವರ ಕಾರ್ಖಾನೆಯ ಕುರಿತು ಒಂದು ಪತ್ರಿಕೆಗೆ ಲೇಖನ ಬರೆಯಬೇಕೆಂದಿರುವೆನು. ಮಾಹಿತ್ಯಕ್ಕಾಗಿ ಬಂದೆ" ಎಂದಳು.

ಗಂಗಮ್ಮನಿಗೆ ಸ್ವಲ್ಪ ಧೈರ್ಯ ಬಂತು. "ತಮ್ಮ ಹೆಸರನ್ನು ಕೇಳಬಹುದೇ?" ಎಂದು ಪ್ರಶ್ನಿಸಿದಳು.

"ನನ್ನ ಹೆಸರು ಹೀರಾ"

"ಪತ್ರಿಕೆಗೆ ಲೇಖನ ಬರೆಯುವುದು ತಮ್ಮ ವೃತ್ತಿಯೆನ್ನುತ್ತೀರಾ?"

"ಹೌದು : ನಮ್ಮ ದೇಶದ ಸ್ತ್ರೀಯರು ಹೀಗೂ ಜೀವನೋಪಾಯ ಮಾಡುತ್ತಾರೆ"

"ತಮ್ಮ ದೇಶ ?"

"ಬಲು ದೂರವಮ್ಮ ! ಸಮುದ್ರವನ್ನು ದಾಟಬೇಕು."

ಗಂಗಮ್ಮ "ತೃಷೆಗೇನಾದರೂ ಬೇಕೆ?" ಎಂದು ಕೇಳಿದಳು. "ಹೌದು; ಬೆಲ್ಲ ನೀರು" ಎಂದಳು ಹೀರೆ. ಬೆಲ್ಲ ನೀರಿನ ಸೇವನೆಯಾದ ಮೇಲೆ "ಅವರು ಇಂದು ಬರುವ ಸಂಭವವಿಲ್ಲವೇ ?" ಎಂದು ಪ್ರಶ್ನಿಸಿದಳು. ಗಂಗಮ್ಮ "ಇಲ್ಲ" ಎಂದಳು.

"ನಿಮ್ಮ ಮನೆಯಲ್ಲಿ ನೀವಿಷ್ಟೆ ಜನ ಅಲ್ಲವೆ ?"

"ಹೌದು"

"ನಾನೊಬ್ಬಳು ಈ ರಾತ್ರಿ ಇಲ್ಲಿಯೇ ಇದ್ದರೆ .. ನಿಮಗೆ ತೊಂದರೆಯಾಗದಷ್ಟೆ?"

"ತೊಂದರೆ ಏನೂ ಇಲ್ಲ. ಬಡವರ ಮನೆ.. ನಿಮಗೆ ಸುಖವಾಗದು.."

"ಆ ಮಾತನ್ನು ಎತ್ತಬೇಡಿರಿ. ಈ ಮನೆ .. ಇದರ ಸುತ್ತುಮುತ್ತಿನ ವಠಾರ, ಇದರ ಗೋಡೆಗಳು.. ಈ ಚಿತ್ರಗಳು..ಇವೆಲ್ಲ ಸ್ವಪ್ನಗೋಚರವಾದಂತೆ ತೋರುತ್ತಿವೆ. ಈ ಮನೆಯ ನೆರಳಲ್ಲಿ ನಿಂತ ನನ್ನ ಇಂದ್ರಿಯಗಳೆಲ್ಲ ಎದ್ದು ನಿಂತು.. ಇದು ನಿನ್ನವರ ಮನೆ ಎನ್ನುತ್ತಿವೆಯಮ್ಮ.. ಇಲ್ಲಿ ನನಗೆ ಯಾವ ಉಪಚಾರ ಬೇಕು ?"

ಗಂಗಮ್ಮ ಉಭಯಸಂಕಟದಲ್ಲಿ ಸಿಕ್ಕಿಬಿದ್ದಳು. ಒಪ್ಪುವುದೇ ಒಪ್ಪದಿರುವುದೇ ? ಹಾವಭಾವಗಳಲ್ಲಿಯೂ ನಡತೆಯಲ್ಲಿಯೂ ವಿಶೇಷತೆಯೇನೂ ಕಂಡುಬಾರದಿದ್ದರೂ, ಮಾತು ಸಭ್ಯರೀತಿಯಲ್ಲಿಯೇ ಇದ್ದರೂ, ಈಕೆಯ ಅಪೇಕ್ಷೆ ವಿಚಿತ್ರವೇ ಆಗಿದೆ. ಅಪರಿಚಿತೆಯಾಗಿ ಬಂದು ಪರಕೀಯರ ಮನೆಯನ್ನು ತನ್ನವರ ಮನೆಯೆಂದು ಹೇಳುವುದರ ಅರ್ಥವೇನು ? ವಸತಿಯನ್ನಪೇಕ್ಷಿಸುವುದರ ಅಭಿಪ್ರಾಯವೇನು ? ಹುಚ್ಚಿಯೇ ಇವಳು ? ಸಭ್ಯತೆಯ ವೇಷದಲ್ಲಿರುವ ಹುಚ್ಚು ಹೀಗೆಯೇ ಇರಬಹುದಲ್ಲ ?

"ನಿಮ್ಮ ಸಮಾಜಕ್ರಮಗಳನ್ನು ಕೇಳಿ ಬಲ್ಲೆನಮ್ಮ..ನೀವು ಸಂಪ್ರದಾಯವಂತರಾಗಿರಬಹುದು. ನಾನು ಪರದೇಶದವಳು·· ಮ್ಲೇಂಛ ಸ್ತ್ರೀ. ಆದರೇನು ಹೆಣ್ಣು ಹೆಣ್ಣೇ ಅಲ್ಲವೇ ! ಹೆಣ್ಣು ಹೆಣ್ಣಿನಲ್ಲಿ ಬೇಡಿಕೊಳ್ಳುತ್ತಾಳೆ. ಪ್ರಾರ್ಥನೆಯನ್ನು ಮನ್ನಿಸು. ನಿಮ್ಮ ಯಜಮಾನರನ್ನು ಕಂಡೊಡನೆ ಕೆಲಸ ಮುಗಿಯಿತು. ಆ ವರೆಗೆ ಎಡೆಕೊಡಿ. ದಾರಿತಪ್ಪಿದ, ಹೊಲತಪ್ಪಿದ, ಹಸುವೊಂದು ನಿಮ್ಮ ಅಂಗಳಕ್ಕೆ ಬಂದು ಅಂಬಾ ಎಂದು ಕೂಗಿತೆಂದು ಭಾವಿಸಿರಿ. ಆಗ ನೀವೇನು ಮಾಡುವಿರಿ? ಅದನ್ನು ಬಡಿದು ಓಡಿಸುವಿರೇ ?"

ಗಂಗಮ್ಮ ನಿರುತ್ತರಳಾದಳು.

"ನಮ್ಮ ಧರ್ಮದಲ್ಲಿಯೂ ದೇವರಿದ್ದಾನೆ. ಅವನ ಹೆಸರಲ್ಲಿ ಹೇಳುತ್ತೇನೆ. ನಿಮಗೆ ನನ್ನಿಂದ ಕಷ್ಟವೇನೂ ಆಗದು."

ಗಂಗಮ್ಮ "ಹೂಂ" ಎನ್ನದೆ ನಿರ್ವಾಹವಿರಲಿಲ್ಲ.

ಈಗ ಪರದೇಶದವಳಾದ, ಪರಜಾತಿಯವಳಾದ, ಆಕೆಯ ಆಕಾರ ವೇಷಗಳನ್ನು ಸೂಕ್ಷ್ಮವಾಗಿ ನೋಡುವ ಅವಕಾಶವು ಗಂಗಮ್ಮನಿಗೆ ದೊರೆಯಿತು. ಎಂದರೆ ಮನಸ್ಸಿನಲ್ಲಿ ಇತರ ಯೋಚನೆಗಳಿದ್ದರೂ ಅವುಗಳನ್ನು ಹೊರೆಯೇರಿಸುವುದು ಅನವಶ್ಯವೆಂಬ ಅರಿವುಂಟಾದುದರಿಂದ ಈಕೆಯನ್ನು ಸೂಕ್ಷ್ಮದೃಷ್ಟಿಯ ಪರಾಮರ್ಶೆಗೆ ಈಡಾಗಿಸುವ ಮನೋವೃತ್ತಿ ಗಂಗಮ್ಮನಿಗಾಯಿತು. ಆಕೆಯು ಕೆನ್ನೆ ಮಾಗಿದ ಕಿತ್ತಳೆ. ಕುಂಕುಮದ ಗೆರೆಯಂತೆ ತೆಳ್ಳಗಾದ ಹುಬ್ಬು. ನೀಳವಾದ, ಸ್ವಾತಂತ್ರ್ಯಪ್ರೀತಿಯನ್ನುಸುರುವ ಮೂಗು. ಮುಖಮುದ್ರೆಯಲ್ಲಿ ಸ್ವಭಾವ ಶಾಂತತೆಯ ಚಿಹ್ನೆ. ಮಾತಿನಲ್ಲಿ, ನಡೆಯಲ್ಲಿ ಉದಾತ್ತಭಾವವನ್ನು ಚೆಲ್ಲುವಂತಿದ್ದ ಅಂಗಚಲನಗಳು ಶೃಂಗಾರದ ಮುದ್ದೆಯಂತಿದ್ದ ಅವಳ ಮುಖದಿಂದ

ಪ್ರಾಯವನ್ನೂಹಿಸುವುದು ಕಷ್ಟವಾಗಿದ್ದರೂ ಮೂವತ್ತು ವರ್ಷವನ್ನು ಮೀರದ ವಯಸ್ಸಿನವಳೆಂಬುದನ್ನು ಊಹಿಸಿಕೊಂಡಳು. ಇಂತಹ ಎಳೆಯ ವಯಸ್ಸಿನವಳ ಈ ನಡತೆಗೆ ಅರ್ಥವೇನು ? ಇದುವರೆಗೆ ಗ್ರಹಚಾರ ಚಕ್ರಗಳು ಮನೆಯ ಹೊರಗೇ ಸುತ್ತುತ್ತಿದ್ದುವು. ಈಗ ಒಳಗೂ ಪ್ರವೇಶಿಸುವುವೆ ? ಮಿಂಚಿನಂತೆ ಬಂದ ಹುಡುಗಿ ಮಳೆಗಾಲವನ್ನು ಬರಿಸದಿರುವಳೇ ? ಇಂತಹ ರೂಪವತಿಯು ಪ್ರಭುಗಳ ಪರಿಚಿತೆ ಎನ್ನುವಾಗ, ಸಾಧ್ವಿಯಾದರೂ ಗಂಗಮ್ಮನಿಗೆ ಸಂದೇಹವುಂಟಾಗದಿರುವುದೇ ?

ಹೀರೆ ಹೊರಗೆ ಹೋಗಿ ಮೋಟರ್ ಬಂಡಿಯಲ್ಲಿದ್ದ ತನ್ನ ಒಂದೆರಡು ಪೆಟ್ಟಿಗೆಗಳನ್ನು ತಂದಳು. ಚಾವಡಿಯಲ್ಲಿರಿಸಿದಳು.

ಅಪರಿಚಿತರನ್ನು ಮಾತಾಡಿಸುವ ನುಡಿಯ ಭಂಡವಳ ಮುಗಿದು ಹೋದುದರಿಂದ ಗಂಗಮ್ಮ ಏನುಮಾಡಬೇಕೆಂದು ತಿಳಿಯದೆ ಮೌನವಾಗಿಯೆ ಇದ್ದಳು. ಆಗ ಒಳಗೆ ತೊಟ್ಟಿಲಲ್ಲಿ ಮಲಗಿ ನಿದ್ರಿಸುತ್ತಿದ್ದ ಆಕೆಯ ಮುದ್ದುಕೂಸು ಎದ್ದು ಅಳುವುದಕ್ಕೆ ಪ್ರಾರಂಭಿಸಿತು. ಆಕೆಯನ್ನು ಎತ್ತಿಕೊಂಡು ಹೊರಗೆ ತಂದಳು. ಅಪರಿಚಿತೆಯನ್ನು ನೋಡಿ ಮಗು ಅಳುವನ್ನು ನಿಲ್ಲಿಸಿತು. ತಾಯಿಯ ಮುಖನೋಡಿ ಬೆಪ್ಪನೆ ನಿಂತುಕೊಂಡಿತು.

ಕೂಸಿನ ಸಹಾಯದಿಂದ, ಸಂಕೋಚದ ಸಮಯವನ್ನು ಗಂಗಮ್ಮ ದೂಡಿದಳು. ಹೀರೆ ಕೂಸನ್ನು ಕಂಡು ಮಾತಾಡುವುದಕ್ಕೆ ತೊಡಗಿದಳು. ಮಗು ತಾಯಿಯ ಕರ್ತವ್ಯಭಾರವನ್ನು ಕಡಿಮೆಮಾಡಿತು.

" ನಿಮಗೆ ಮಕ್ಕಳೆಷ್ಟಮ್ಮಾ ? "

" ಮೂರು ಮಂದಿ "

" ಮನೆತುಂಬ ಮಕ್ಕಳಿರಬೇಕಮ್ಮ. ಒಂದರ ಮುಖ ಗುಲಾಬಿ; ಇನ್ನೊಂದರ ನಗು ಮಲ್ಲಿಗೆ; ಮತ್ತೊಂದರ ಕೋಪ ಸಂಪಿಗೆ. ಹೀಗೆ ವನಕುಸುಮಗಳಂತಹ ಭಾವಭಂಗಿಗಳನ್ನು ಹೊಂದಿದ ಹತ್ತೆಂಟು ಮಕ್ಕಳಿದ್ದರೆ, ಆ ಮನೆಯೇ ನಂದನವಲ್ಲವೇ ? " ಎಂದು ಒಂದು ಮಗುವಿನ ಮುಖವನ್ನು ಚುಂಬಿಸಿದಳು. ಇನ್ನೊಂದರ ನೆತ್ತಿಯನ್ನು ಆಘ್ರಾಣಿಸಿದಳು.

ಗಂಗಮ್ಮ ಯೋಚಿಸಿದಳು– " ನಿಜವಾಗಿಯೂ ಈಕೆಗೆ ಬುದ್ಧಿಸ್ವಾಸ್ಥ್ಯವಿದೆಯೆ ? " ಅದೇವೇಳೆಗೆ ಆಕೆಯ ಮುಖವು ಕತ್ತಲಿಸಿತು. ಹಾಳು ಬಿದ್ದಂತಿದ್ದ ಮನೆಯ ಒಳಗೂ ಹೊರಗೂ ದೃಷ್ಟಿ ಪ್ರಸಾರ ಮಾಡಿದಳು. ಕಣ್ಣೀರುಕ್ಕಿತು.

ಆಡಿದ ಮಾತು ಆಕೆಯ ಹೃದಯವನ್ನು ನಾಟಿತೆಂದು ಹೀರೆಗೆ ತಿಳಿಯಿತು. ಮನೆಯಲ್ಲಿಂದು ಐಶ್ವರ್ಯವಿಲ್ಲ. ಸುತ್ತಲೂ ಬಿದ್ದಿರುವ ಮುರುಕು ಕುರ್ಚಿಗಳು ಬಣ್ಣಗುಂದಿ ನೇತಾಡುತ್ತಿರುವ ಚಿತ್ರಗಳು, ಹಳೆಯ ಸಾಮಾನುಗಳು: ಇವೆಲ್ಲ ಲಕ್ಷ್ಮೀದೇವಿ ಪಲಾಯನ ಮಾಡಿದಾಗ ಅವಸರದಲ್ಲಿ ಬಿಟ್ಟು ಹೋದ ಒಡವೆಗಳಾಗಿರಬೇಕೆಂದು ಆಕೆಗೆ ತಿಳಿಯಿತು.

" ದಾರಿದ್ರ್ಯ ಸಂಪತ್ತುಗಳ ಮಾತು ಹೇಗೂ ಇರಲಿ; ಇಂತಹ ಮಕ್ಕಳನ್ನು ಪಡೆಯಬೇಕಾದರೆ ಪುಣ್ಯ ಬೇಕು " ಎಂದು ಹೀರೆ ಮತ್ತೂ ನುಡಿದಳು.

* * * *

ಹೀಗೆ ಹೆಚ್ಚು ಸಮಯ ಕಳೆದಿರಲಿಲ್ಲ. ಮಾಳಿಗೆಯಲ್ಲಿದ್ದ ಪ್ರಭುಗಳು ಧಡಧಡನೆ ಮೆಟ್ಟಿಲುಗಳನ್ನಿಳಿದು ಚಾವಡಿಗೆ ಬಂದರು. ಹೀರೆಯನ್ನು ಕಂಡು ಸಾಷ್ಟಾಂಗವಾಗಿ ಆಕೆಯ ಪಾದದಲ್ಲಿ ಕೆಡೆದರು. " ಮಿಸ್ ಹೇರಿಸನ್ ! ಗಣೇಶಪ್ರಭು ಶವವಾಗಿದ್ದಾನೆ. ಇನ್ನು ಆತನನ್ನು ಕೊಲ್ಲುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ " ಎಂದು ಎದೆಚುಚ್ಚುವಂತೆ ಆಡಿದರು. ಬಿಕ್ಕಿ ಬಿಕ್ಕಿ ಅತ್ತರು.

ಹೀರೆ ಉದ್ವಿಗ್ನೆಯಾಗಿ " ನಾನು ರಕ್ತಹೀರುವುದಕ್ಕಾಗಿ ಬಂದಿಲ್ಲ. ತಮ್ಮ ದರ್ಶನಕ್ಕಾಗಿ ಬಂದೆ " ಎಂದು ಬಿನ್ನವಿಸಿದಳು. " ದಮ್ಮಯ್ಯ ಏಳಿರಿ " ಎಂದು ಬೇಡಿಕೊಂಡಳು.

ಇಬ್ಬರೂ ತಂತಮ್ಮ ಸ್ಥಾನಗಳನ್ನು ಹಿಡಿದುಕೊಂಡರು. ಇಬ್ಬರ ಹೃದಯಗಳೂ ಕಣ್ಣುಗಳೂ ದುಃಖರಸದಲ್ಲಿ ತೇಲಿ ಹೋಗಿದ್ದುವು.

ಈ ದೃಶ್ಯವನ್ನು ಕಂಡ ಗಂಗಮ್ಮ ಒಳನುಗ್ಗಿದಳು. ಹೀರೆ ಎಷ್ಟು ಒತ್ತಾಯಿಸಿದರೂ ಮುಂದುಗಡೆಯಲ್ಲಿ ನಿಲ್ಲಲಿಲ್ಲ.

" ಎಷ್ಟು ಕಷ್ಟಪಟ್ಟೆ ಹೇರಿಸನ್ ! ಯಾವ ಸಾಗರಗಳನ್ನು ದಾಟಿ ಯಾವ ಶೀತೋಷ್ಣವಲಯಗಳನ್ನು ಕಳೆದು, ಅಂದಿನ ಪ್ರೇಮಕ್ಕಾಗಿ ಇಲ್ಲಿಗೆ ಬಂದೆ ಹೇರಿಸನ್ ! ಅಂದು ಗಣೇಶಪ್ರಭು ಮನುಷ್ಯನಾಗಿದ್ದ. ದುಷ್ಟನಾದರೂ ಮನುಷ್ಯನಾಗಿದ್ದ. ಇಂದು ಮನುಷ್ಯನೂ ಅಲ್ಲ. ಪ್ರೇತವಾಗಿದ್ದಾನೆ. "

" ಹಾಗೆ ಹೇಳಬಾರದು ಪ್ರಭುಗಳೆ ! ' ಮನುಷ್ಯರು ಮನುಷ್ಯರಾಗಿರುವುದೂ ತಾರುಣ್ಯದಲ್ಲಿ. ಮೃಗಗಳಂತೆ ಬಾಳುವುದೂ ತಾರುಣ್ಯದಲ್ಲಿ. ಯೌವನವು ಹೋದೊಡನೆ ಮನುಷ್ಯನು ಬೇರಾಗುತ್ತಾನೆ. ಇದು ಪ್ರಕೃತಿ ನಿಯಮ. ಆ ಮಾತು ಹಾಗಿರಲಿ. ಎಷ್ಟೋ ವರ್ಷವಾಯಿತು ನಿಮ್ಮನ್ನು ನೋಡದೆ. ನೋಡಿ ಹೋಗೋಣ ಎಂದು ಬಂದೆ. ಹೆಂಡತಿ.. ಮಕ್ಕಳು.. ತುಂಬಿದ ಮನೆ. ಇದನ್ನು ನೋಡಿ ಹೊಟ್ಟೆ ತುಂಬಿತು ನನಗೆ. "

" ಹೇರಿಸನ್ ! ನಾನು ಅಪರಾಧಿ. ಕ್ಷಮಿಸು ನನ್ನನ್ನು.. ಆ ಅಮೇರಿಕ.. ಆ ಸಂಗೀತ.. ಆ ಕುಣಿತ.. ಆ ನಿನ್ನ ಅರಮನೆ.. ನಿನ್ನ ವಸಂತೋದ್ಯಾನ.. ಅಲ್ಲಿಯ ವಿಹಾರ.. ನನ್ನ ಪ್ರತಿಜ್ಞೆ.. ನನ್ನ ಸಹಧರ್ಮಿಣಿಯಾಗುವೆನೆಂದು ನೀನು ಕೊಟ್ಟ ಮಾತು.. ನಾನು ನಿನ್ನ ಪ್ರಣಯಭಿಕ್ಷುವೆಂದು ಅಂಗಲಾಚಿ ಬೇಡಿದುದು.. ನನ್ನ ಕನ್ನಡವನ್ನು ನೀನು ಕಲಿತದ್ದು.. ನಿನ್ನ ಹೃದಯವನ್ನು ನಾನು ಓದಿದ್ದು.. ಹತ್ತೆಂಟುವರ್ಷಗಳ ಹಿಂದಣ ಚಿತ್ರ ಹೃದಯದಲ್ಲಿ ಕೆತ್ತಿದಂತಿದೆ ಹೇರಿಸನ್ ! ಆದರೇನು ಹೀರಾ ! ನನ್ನದಲ್ಲದ ರಾಜ್ಯಕ್ಕೆ ನಾನಿಳಿದೆ. ನನ್ನದಲ್ಲದ ಒಡವೆಗೆ ಕೈಹಾಕಿದೆ.. ನನ್ನ ಹೃದಯಾಧಿಕಾರಿಣಿಯಾದವಳು ಆ ಮೊದಲೆ ಇದ್ದಾಳೆಂಬುದನ್ನು ತಿಳಿಸಲಿಲ್ಲ. ನನ್ನದು ಕಳವು.. ದರೋಡೆ.. ಒಂದು ಜೀವನದ ಸುಲಿಗೆ.. ಯಾವ ಶಿಕ್ಷೆಯೋ ಅದನ್ನು ವಿಧಿಸು ಹೇರಿಸನ್ "

" ಪ್ರಭುಗಳೇ! ಹೀಗೆ ಆಡಬಾರದು. ಪ್ರತೀಕಾರ ಭಾವನೆಯಿಂದ ನಾನಿಲ್ಲಿಗೆ ಬಂದಿಲ್ಲ. "ಪರಿಶುದ್ಧ ಪ್ರೇಮವು ಪ್ರತೀಕಾರವನ್ನು ಬಯಸೀತೇ? ಪ್ರೇಮವು ಮುಟ್ಟಿದುದನ್ನು ಸುಡುವ ಜ್ವಾಲೆಯಲ್ಲ. ಅದು ಹಾರುವ ಚಿಟ್ಟೆಯ ಬಣ್ಣದ ರೆಕ್ಕೆ; ಮುಟ್ಟಿದರೆ ಕೆದುವಾಗಿದ್ದು ತನ್ನಿಂದತಾನೇ ಪುಡುದುರುವ ರೆಕ್ಕೆ! ನನ್ನ ಪ್ರೇಮದ ವಿಷದಹಲ್ಲು ಎಂದೋ ಉದುರಿಹೋಗಿದೆ; ಅದಿಂದು ಪ್ರೀತಿಯಾಗಿ ಪರಿಣಮಿಸಿದೆ. ತಾಯಿಗೆ ಮಗುವಿನಲ್ಲಿ, ತಂಗಿಗೆ ಅಕ್ಕನಲ್ಲಿ, ಸಹೋದರಿಗೆ ಸಹೋದರನಲ್ಲಿ– ಇರುವ ಪ್ರೇಮಕ್ಕೆ ಹೆಸರೇನು? ಪ್ರೀತಿಯೆಂದಲ್ಲವೇ? ನಿಮ್ಮದು ತುಂಬಿರುವ ಮನೆ. ಇದನ್ನು ಹಾಳುಮಾಡಲು ನಾನು ಬಂದಿಲ್ಲ."

" ನೀನು ಯಾವ ಕಾರಣದಿಂದ ಬಂದಿದ್ದರೂ ಏಕೆ ಬಂದೆ ಎಂದು ಕೇಳುವ ಅಧಿಕಾರ ನನಗೆಲ್ಲಿದೆ? ಎರಡು ವರ್ಷಗಳ ಹಿಂದಿನವರೆಗೆ ಪತ್ರಮೂಲಕವಾದರೂ ನನ್ನ ಅಸ್ತಿತ್ವವನ್ನು ನಿನಗೆ ತಿಳಿಸುತ್ತಿದ್ದೆ. ಏತಕ್ಕಾಗಿ? ನೀನು ನಿನ್ನ ದೇಶದಲ್ಲಿಯೇ ಇರುವಷ್ಟು ಕಾಲ ಬರಿಯ ಪತ್ರದಿಂದೇನೂ ಅಪಾಯವೊದಗದೆಂದು ಭಾವಿಸಿಕೊಂಡೆ. ನೀನು ಹೊರಡುವ ಸುದ್ದಿ ಇತರರಿಂದ ತಿಳಿದು ಬಂತು. ಹೊರಟೆ ಯೆಂದೂ ಕೇಳಿಬಂತು. ಮುಂಬಯಿಗೆ ಬಂದುದೂ ತಿಳಿಯಿತು. ಈ ನಗರಕ್ಕೆ ಬಂದು ಒಂದು ತಿಂಗಳಿನಿಂದಿತ್ತ ನನ್ನ ದರ್ಶನವನ್ನು ಬಯಸುತ್ತಿದ್ದುದೂ ತಿಳಿದುಬಂತು. ಆದರೇನು ಹೇರಿಸನ್! ಮುಖನೋಡುವ ಧೈರ್ಯವಿರಲಿಲ್ಲ.` ನನ್ನ ನಿನ್ನ ಒಡನಾಟದಿಂದ ನನ್ನ ಹೃದಯಭೂಮಿಯ ತಗ್ಗುಗಳನ್ನು ತಿಳಿದುಕೊಂಡೆನಲ್ಲದೆ ಏರುಗಳನ್ನು ತಿಳಿಯಲಿಲ್ಲ. ಮಾಡಿದ ತಪ್ಪು ಮನಸ್ಸನ್ನು ಕೊರೆಯುತ್ತಿತ್ತು. ಅದನ್ನು ಒಪ್ಪಿಕೊಳ್ಳುವ ಧೈರ್ಯವಿರಲಿಲ್ಲ. ಅದರ ಪರಿಣಾಮವನ್ನು ಅನುಭವಿಸುವೆನೆಂಬ ಎದೆಯಾಳ್ತನವಿರಲಿಲ್ಲ. ನನ್ನ ಮನುಷ್ಯತ್ವದಲ್ಲಿ ಏನೂ ಇರಲಿಲ್ಲ ಹೇರಿಸನ್! ಅದರ ಒಳಗು ಟೊಳ್ಳಾಗಿತ್ತು! ಆದುದರಿಂದ ನೀನು ನನ್ನ ಸಮೀಪಕ್ಕೆ ಇಟ್ಟ ಒಂದೊಂದು ಹಜ್ಜೆಯೂ ನನ್ನ ಕೊಲೆಮಾಡಬರುವ ಕಟುಕನ ಹೆಜ್ಜೆಯೆಂಬ ಭಾವನೆಯಿತ್ತು. ಆದುದರಿಂದ ತಪ್ಪಿಸಿಕೊಂಡೆ; ತಲೆಮರಸಿಕೊಂಡೆ; ಜೀವಿಸುತ್ತಿದ್ದು ಸತ್ತಹಾಗೆ ಉಸಿರಾಡದೆ ಇದ್ದೆ."

" ಮನುಷ್ಯಸ್ವಭಾವ! ಮನುಷ್ಯಸ್ವಭಾವ! ಇದಕ್ಕಾಗಿ ನಾನು ವ್ಯಥಿಸುವುದಿಲ್ಲ ಪ್ರಭುಗಳೇ? ನನಗೆ ಸರಿತೋರಿದ ವಿಷಯವೇನೆಂದರೆ, ಗಂಡ–ಹೆಂಡತಿ–ಮಕ್ಕಳು ಮರಿಗಳು ಇವರ ನಡುವೆ ನಾನೊಬ್ಬಳು ಪ್ರವೇಶಿಸಿ, ಇವರಿಗೂ ತನಗೂ ಸಂಬಂಧವೇನೆಂದು ಹುಡುಕಬೇಕಾದ ಪ್ರಸಂಗವನ್ನು ತರಲಿಲ್ಲ. ಅರಳಿದ ಹೂವಿನಂತಿರುವ ಇವರ ಹೃದಯಗಳನ್ನು ತನ್ನ ಉರಿಗೈಯಿಂದ ಚಿವುಟಲಿಲ್ಲ. ಚಿವುಟುವ ಬಯಕೆ ಇನ್ನೂ ಇಲ್ಲ. ನಾನಿಂತಹ ಇನ್ನೊಂದು ಮನೆಯೊಳಗೆ ಬೆಳೆದವಳಲ್ಲವೆ? ತಂದೆಮಕ್ಕಳ ಗಂಡಹೆಂಡಿರ ಪ್ರೀತಿ ಸುಖಗಳನ್ನು ಕಂಡು ತಿಳಿದವಳಲ್ಲವೇ? ನನ್ನ ಬಯಕೆಯೊಂದನ್ನು ತ್ಯಜಿಸಬೇಕಾಗುತ್ತದೆ; ಅಷ್ಟೆ. ಅದರಿಂದ ಹತ್ತೆಂಟು ಜೀವಗಳು ಹಸನಾಗಿ ಬದುಕಿಕೊಂಡಿರಬಹುದಾದರೆ ನಾನೇಕೆ ಹಾಗೆ ಮಾಡಬಾರದು?"

ಪ್ರಭುಗಳು ನಿರುತ್ತರರಾದರು.

" ಮುಂಬಯಿನಗರದ ನನ್ನ ನಿವಾಸಗೃಹದಲ್ಲಿ ಸಂಜೆಯ ನೆರಳನ್ನು ನೋಡುತ್ತಾ ಒಮ್ಮೆ ಕುಳಿತಿದ್ದೆ. ತಮ್ಮ ದುರವಸ್ಥೆಯ ನೆನಪು ನೆರಳುಗಳ ತಾಳಿಮೆಯನ್ನು ಹೆಚ್ಚಿಸಿದ್ದಿತು. ನನ್ನ ಮನಸ್ಸಿನಲ್ಲಿ ಹೀಗೆ ಆಲೋಚನೆಗಳೆದ್ದುವು. ಅಂದು ನನ್ನನ್ನು ಪ್ರಭುಗಳು ಸಹಜವಾಗಿಯೇ ಪ್ರೀತಿಸುತ್ತಿದ್ದುದು ನಿಜವಾಗಿರಬಹುದು. ಈಗ ಉಭಯಸಂಕಟದಲ್ಲಿ ಸಿಕ್ಕಿಬಿದ್ದು ನನ್ನನ್ನು ದೂರೀಕರಿಸಲು ಪ್ರಯತ್ನಿಸುತ್ತಿರುವುದೂ ನಿಜವೇ ಆಗಿರಬಹುದು. ಆದರೆ ಇಂತಹ ಅವಸ್ಥೆ ಅವರಿಗೂ ನನಗೂ ಬಂದುದು ಹೇಗೆ ಏಕೆ? ಅಮೇರಿಕಕ್ಕೆ ಹೋಗುವ ಮೊದಲೆ ಅವರು ವಿವಾಹವಾಗಿದ್ದರು. ಅದು ತಪ್ಪೆ? ವಿವಾಹವಾದ ಮೇಲೆ ತಾನೆ ಅವರು ನನಗೆ ದರ್ಶನವಿತ್ತರು; ಇದು ಅವರ ತಪ್ಪೆ? ಸ್ವದೇಶಕ್ಕೆ ಬಂದ ಮೇಲೆ, ತನ್ನ ಕೈಹಿಡಿದ ಹೆಣ್ಣನ್ನು ನೋಡಿದೊಡನೆ, ತಮ್ಮ ಸಾಂಸಾರಿಕ ಕರ್ತವ್ಯದ ನೆನಪು ಅವರಿಗಾಯಿತು. ಇದು ತಪ್ಪೆ? ಅಲ್ಲ. ಎಲ್ಲಿಯಾದರೂ ಅಪರಾಧವಾಗಿದ್ದರೆ, ಅದು ಅಲ್ಲಿ– ನನ್ನ ಸ್ನೇಹದಲ್ಲಿ ಅವರಿದ್ದಾಗ ಆಯಿತು. ಇದು ಅವರೊಬ್ಬರ ತಪ್ಪೆ? ಅಥವಾ ಇದಕ್ಕೆ ನಾನೂ ಸ್ವಲ್ಪ ಮಟ್ಟಿಗೆ ಕಾರಣಭೂತಳಾದೆನೆ? ಅಮೇರಿಕದ ನೂರಾರು ಸ್ತ್ರೀಯರಿಗೇಕೆ ಅವರು ಹೃದಯವನ್ನು ಸಮರ್ಪಿಸಲಿಲ್ಲ? ನಾನೇಕೆ ಇತರ ಹಿಂದೀ ತರುಣರಲ್ಲಿ ಒಬ್ಬನನ್ನೂ ಮೆಚ್ಚದೆ ಇವರನ್ನು ಮಾತ್ರ ಮೆಚ್ಚಿದುದು? ಇಬ್ಬರೂ ತಮ್ಮ ತಮ್ಮ ಹೃದಯಗಳನ್ನು ಮರೆತಿದ್ದಾಗ– ಅಂದು– ಅಲ್ಲಿ ಆದ ಅಪರಾಧವಿದು. ಇಬ್ಬರೂ ಅಪರಾಧಿಗಳು.

" ಇದು ಹೇಗಾದೀತು ಹೇರಿಸನ್?"

" ಒಂದು ವೇಳೆ ತಪ್ಪು ಮಾಡಿದವರು ನೀವೆಂದೇ ಒಪ್ಪಿಕೊಳ್ಳೋಣ. ಇಂತಹ ತಪ್ಪನ್ನು ನೀವು ಮಾಡದಿರುತ್ತಿದ್ದರೆ, ನನ್ನ ಈ ಅಕ್ಕನ ಮುಖ ನೋಡಿ ನನ್ನನ್ನು ಮರೆಯದಿರುತ್ತಿದ್ದರೆ, ನಿಮ್ಮ ಪೌರುಷಕ್ಕೆ ನಾನು ಕಾಸಿನ ಬೆಲೆ ಕೊಡುತ್ತಿರಲಿಲ್ಲ ಪ್ರಭುಗಳೇ! ಸಹಧರ್ಮಿಣಿಯೆನಿಸುವಾಕೆಯನ್ನು ಹಿಂದಿನ ರಾತ್ರಿಯ ಹುಚ್ಚು ಕನಸಿನಂತೆ ಮರೆತುಬಿಡುವ ಆಸಾಮಿಯಿದು ಎಂದು ಭಾವಿಸಿ ನಾನೂ ಹೆಚ್ಚಿನ ಸಂದೇಹಕ್ಕೆ ಒಳಗಾಗುತ್ತಿದ್ದೆ."

ಪ್ರಭುಗಳಿಗೆ ತಮ್ಮ ತಪ್ಪು ದೊಡ್ಡದಾಗಿ ತೋರಿಬಂತು. ಗಂಗಮ್ಮನ ಕೈಬಿಡದಿದ್ದುದು ತಮ್ಮ ಅಪರಾಧವಲ್ಲದಿದ್ದರೆ, ಈ ಎಳಬಳ್ಳಿಯನ್ನು ಚಿವುಟಿದ ಪಾಪಕ್ಕೆ ಪ್ರಾಯಶ್ಚಿತ್ತವೇನು? ಹೀರೆ ಅಥವಾ ಹೇರಿಸನ್ ರಕ್ತಕುಡಿಯಲು ಬಂದಿದ್ದರೆ ಅವರಿಗೆ ವ್ಯಸನವಾಗುತ್ತಿರಲಿಲ್ಲ. ಕ್ಷಮಿಸುವುದಕ್ಕೆ ಬಂದಿದ್ದಾಳೆ. " ನೀನು ಮನುಷ್ಯಕೀಟ. ಹೀಗೆಲ್ಲ ಮಾಡುವುದರಲ್ಲಿ ತಪ್ಪಿಲ್ಲ" ಎನ್ನಲು ಬಂದಿದ್ದಾಳೆ. ಅಥವಾ ಇದೆಲ್ಲ ತರ್ಕ? ಏನೂ ಇರಲಿ; ಇವಳನ್ನು ಮನುಷ್ಯನಂತೆ ಇದಿರಿಸಬೇಕು ಎಂದು ಸಂಕಲ್ಪಿಸಿ " ಹೇರಿಸನ್! ನಿನ್ನ ಮಾತಿಗೆ ಅರ್ಥವಾಗುವುದಿಲ್ಲ. ಏನು ಹೇಳುವೆಯೊ ಅದನ್ನು ಮಾಡಲು ಸಿದ್ಧನಾಗಿದ್ದೇನೆ" ಎಂದು ಮುಖವೆತ್ತಿ ಆಕೆಯನ್ನು ನೋಡುತ್ತಿದ್ದರು ಪ್ರಭುಗಳು.

"ನನಗೆ ಮತ್ತೇನೂ ಬೇಕಾಗಿರಲಿಲ್ಲ. ನನ್ನ ಅಂದಿನ ಕನಸು ಸತ್ಯವಾಗಿ ಪರಿಣಮಿಸುತ್ತಿದ್ದರೆ, ನಾನು ತಮ್ಮ ಬಳಿಯಲ್ಲಿ ಯಾವ ಸ್ಥಾನವನ್ನು ಪಡೆಯುತ್ತಿದ್ದೆನೋ ಆ ಸ್ಥಾನದಲ್ಲಿರುವ ನನ್ನೀ ಅಕ್ಕನನ್ನು ಕಣ್ತುಂಬ ನೋಡಬೇಕೆಂಬ ಆಸೆಯಿತ್ತು. ಅದು ಫಲಿಸಿತು. ನೀವು ನನಗೆ ಪತ್ರಬರೆಯುವುದನ್ನು ನಿಲ್ಲಿಸಿದಂದಿನಿಂದ ನನ್ನ ಪ್ರೇಮದ ಬಿಸಿ ತಣ್ಣಗಾಯಿತು. ಅದು ಬೇರೆ ಭಾವದಲ್ಲಿ ಪರಿಣಾಮಹೊಂದಿತು. ಹಿಂದೂದೇಶಕ್ಕೆ ಬಂದಮೇಲೆ, ನಿಮ್ಮ ಕಷ್ಟಗಳನ್ನೆಲ್ಲ ಕೇಳಿ ಎದೆ ಕರಗಿತು. ಸಹಾನುಭೂತಿ ತೋರಿಸ ಬೇಕೆಂಬ ಬಯಕೆಯಾಯಿತು. ಇಲ್ಲಿಯ ವರೆಗೆ ಬಂದೆ. ನಾನೂ ನೀವೂ ಅಪರಾಧಮಾಡಿದವರೆಂದು ಹೇಳಿಕೊಳ್ಳಬಹುದು. ಈ ಮಕ್ಕಳು ಏನು ಮಾಡಿವೆ ? ಈ ಅಕ್ಕ ಏನು ಮಾಡಿದ್ದಾಳೆ? ಇವರ ಮಧ್ಯದಲ್ಲಿ ನನಗಿರುವ ಅಧಿಕಾರವೊಂದೆ. ನಿಮಗೆ, ನಿಮ್ಮ ಕುಟುಂಬಕ್ಕೆ ಕ್ಷೇಮವಾಗಲಿ ಎಂದು ಬಯಸುವುದು— ಇಷ್ಟೇ. ನನ್ನದೊಂದು ಇಷ್ಟಾರ್ಥವಿದೆ. ಅದನ್ನು ನೆರವೇರಿಸುವಿರಾ?

ಪ್ರಭುಗಳ ನರನಾಡಿಗಳಲ್ಲಿ ರಭಸದಿಂದ ರಕ್ತಸಂಚಾರ ವಾಯಿತು. "ಏನದು ಹೀರಾ?" ಎಂದು ಕೇಳಿದರು.

ಹೀರೆಯು ತನ್ನ ಕೈಪೆಟ್ಟಿಗೆಯಲ್ಲಿದ್ದ ಬೆಳ್ಳಿಯ ಕರಡಿಗೆ ಯೊಂದನ್ನು ತೆಗೆದಳು. "ಇದನ್ನು ಸ್ವೀಕರಿಸಿರಿ; ಬೇಕಾದಂತೆ ಉಪಯೋಗಿಸಿಕೊಳ್ಳಿರಿ. ಹಿಂದೆ ನಡೆದುದನ್ನು ಒಮ್ಮೆಯೂ ನೆನೆಯಬೇಡಿರಿ." ಎನ್ನುತ್ತ ಅದನ್ನು ಪ್ರಭುಗಳ ಕೈಯಲ್ಲಿ ಇಡುವುದಕ್ಕೆ ಉದ್ಯುಕ್ತಳಾದಳು.

"ಅದರಲ್ಲಿ ಏನಿದೆ?" ಎಂದು ಪ್ರಭುಗಳು ಮತ್ತೂ ಪ್ರಶ್ನಿಸಿದರು.

"ಏನೂ ಇರಬಹುದು; ಅದನ್ನು ಸದುಪಯೋಗಪಡಿಸಿಕೊಳ್ಳ ಬೇಕೆಂದೆ ನನ್ನ ಪ್ರಾರ್ಥನೆ."

ಪ್ರಭುಗಳು ಸಂದೇಹಗ್ರಸ್ತರಾದರು.

"ಸಂದೇಹಕ್ಕೆ ಎಡೆಯಿಲ್ಲ ಪ್ರಭುಗಳೇ! ನೀವು ಅಪರಾಧಿಗ ಳೆಂದು ನೀವೇ ಹೇಳುತ್ತೀರಲ್ಲ? ಅಪರಾಧಿಗಳು ನ್ಯಾಯಾಧೀಶರ ಆಜ್ಞೆಯನ್ನು ಶಿರಸಾವಹಿಸಬೇಡವೇ? ತೆಗೆದುಕೊಳ್ಳಿ. ಆಗದು ಎನ್ನುವ ಅಧಿಕಾರ ನಿಮಗಿಲ್ಲ."

ಪ್ರಭುಗಳು ಕೈಚಾಚಿದರು. ಸೂತ್ರದ ಬೊಂಬೆಯಂತೆ ಕೊಟ್ಟುದನ್ನು ತೆಗೆದುಕೊಂಡರು.

ಹೀರೆ ಹೇಳಿದಳು— ಇದಕ್ಕೆ ಪ್ರತಿಯಾಗಿ ನಾನು ಬಯಸುವು ದಿಷ್ಟೆ–ನಿಮ್ಮ, ಹೆಂಡತಿ ಮಕ್ಕಳ ಭಾವಚಿತ್ರವೊಂದನ್ನು ನನಗೆ ಕಳುಹಿಕೊಡಬೇಕು. ಸರ್ವಥಾ ಮರೆಯಬೇಡಿರಿ. ನೀವಿನ್ನು ಈ ಹೀರೆಯನ್ನು ಕಾಣಲಾರಿರಿ. ಯಾವ ಲೋಕದಲ್ಲಿ ಹುಡುಕಿ ದರೂ ಕಾಣಲಾರಿರಿ. ಸಪ್ತಸಾಗರಗಳಿಂದಾಚೆಗೂ ಕಾಣಲಾರಿರಿ. ಕೊನೆಯ ಆಸೆಯಿದು ಪೂರೈಸಿರಿ.

ಪ್ರಭುಗಳು "ಹುಂ" ಎಂದರು. ಜ್ವರ ತಲೆಗೇರಿದಂತೆ ಅವರಿಗೆ ಶಿರೋಭ್ರಮಣವಾಯಿತು.

ಹೀರೆ ತನ್ನ ಆಳನ್ನು ಕರೆದಳು. ಗಂಗಮ್ಮನನ್ನೂ ಮಕ್ಕಳನ್ನೂ ಕರೆಗಳು. ಸುಖವಾಗಿ ಬಾಳಿರಮ್ಮ. ನಿಮ್ಮ ಸಂಸಾರದಲ್ಲಿ ಅರಳಿಕೊಂಡಿರುವ ದಾಂಪತ್ಯಸುಖವೆಂಬ ಕುಸುಮವನ್ನು ಮುರಿದುರುಳಿಸುವ ಬಿರುಗಾಳಿಯಿದು ಎಂದು ಭಾವಿಸಬೇಡಿ. ಸುಖವಾಗಿ ಬಾಳಿರಿ. ನೂರು ವರ್ಷ ಬಾಳಿರಿ. –ಮನೆಯಲ್ಲಿ ಇನ್ನೊಂದು ಕೂಸು ದಟ್ಟಡಿಯಿಟ್ಟು ಹೊರಳಿ ಉರುಳಿ ನಡೆಯು ವಾಗ ನನಗದರ ಚಿತ್ರವನ್ನು ಕಳುಹಿಸಿಕೊಡಿರಿ. ಎಂದಾದರೂ ಒಮ್ಮೊಮ್ಮೆ, ಮನೆಗೆಲಸವಿಲ್ಲದಾಗ, ಈ ಹುಡುಗಿಯನ್ನು ಸ್ಮರಿಸಿ ಕೊಳ್ಳಿರಿ." ಎನ್ನುತ್ತಾ ಹೊರಡಲು ಉದ್ಯುಕ್ತಳಾದಳು.

ಪ್ರಭುಗಳು ಗಂಟಲು ಕೆರೆದುಕೊಂಡು "ಎಲ್ಲಿಗೆ ಹೀರಾ.. ನಿನ್ನನ್ನು ಇರಿಸಿಕೊಳ್ಳುವ ಪುಣ್ಯ ಯಾವಲೋಕಕ್ಕೆ ಇದೆ?" ಎಂದು ಕೇಳಿದರು. ಕಣ್ಣೀರು ಸರಕ್ಕನೆ ಹರಿಯಿತು.

"ನಾನೂ ಲೋಕವನ್ನು ಹುಡುಕಬೇಕಾಗಿದೆ." ಎಂದು ಕಂದಿದ ಮುಖದಲ್ಲಿ ಹೀರೆ ನಗುವನ್ನು ಬೀರಿ ಅಂಗಳಕ್ಕೆ ಇಳಿದಳು.

ಪ್ರಭುಗಳು ಬೀದಿಯವರೆಗೆ ಆಕೆಯನ್ನನುಸರಿಸಿದರು.

ಮೋಟರನ್ನೇರಿ "ಬರುತ್ತೇನೆ" ಎಂದು ಹೀರೆ ಕೈವ ಎಗಿದಳು.

"ಇದು ಸಂಬಲಾರದ ಮಾತು ಹೀರಾ!" ಎಂದು ಪ್ರಭುಗಳು ಅಳತೊಡಗಿದರು.

ಇಬ್ಬರೂ ಅರೆನಿಮಿಷ ಪರಸ್ಪರ ಮುಖಾವಲೋಕನ ಮಾಡಿ ಕಣ್ಣೀರುಸುರಿಸಿದರು. ಹೀರೆಯ ರೂಪು ಮಾಯವಾಗುವ ವರೆಗೂ ಪ್ರಭುಗಳು ಅಲ್ಲಿಯೇ ನಿಂತು ಆಕಡೆಯ ದಿಗಂತವನ್ನೆ ನೋಡು ತ್ತಿದ್ದರು.

ಗಂಗಮ್ಮ ಚಾವಡಿಗೆ ಒಂದು ಇನ್ನಾದರೂ ಒಳಗೆ ಬರಬಾರದೇ? ಎಂದು ಕರೆದಳು.

ಪ್ರಭುಗಳಿಗೆ ಸದ್ದೇನೋ ಕೇಳಿದಂತಾಯಿತು. ಅದರ ಅರ್ಥ ವಾಗಲಿಲ್ಲ. ಒಳಗೆ ಬಂದು ಅದೇ ಕುರ್ಚಿಯ ಮೇಲೆ ದೇಹವ ನ್ನೊಗೆದರು.

"ಯಾರೀಕೆ ಹುಚ್ಚು ಹುಡುಗಿ?" ಎಂದು ಗಂಗಮ್ಮ ಕೇಳಿದಳು.

"ನನ್ನ ಹೃದಯವನ್ನು ಕೇಳು" ಎಂದು ಪ್ರಭುಗಳು ಬಿಕ್ಕಿ ಬಿಕ್ಕಿ ಅಳತೊಡಗಿದರು.

ಹೀರೆ ಕೊಟ್ಟಿದ್ದ ಪೆಟ್ಟಿಗೆಯನ್ನು ಗಂಗಮ್ಮ ತೆರೆದು ನೋಡಿದಳು. ರೇಶ್ಮೆವಸ್ತ್ರದಿಂದ ಮುಚ್ಚಿದ್ದ ಭಾವಚಿತ್ರವೊಂದು; ಅನರ್ಘ್ಯ ರತ್ನಗಳ ಮಾಲಿಕೆಯೊಂದು ಮುಗ್ಧೆಯಾದ ಗಂಗಮ್ಮ ಚಿತ್ರವನ್ನು ನೋಡದೆ, ಮಾಲಿಕೆಯನ್ನು ಮಾತ್ರ ಕಂಡು ನೋಡಿರಿ ಇದನ್ನು ಎಂದು ಪ್ರಭುಗಳಿಗೆ ತೋರಿಸಿದಳು.

ಮಳೆಗಾಲದ ಬಿಸಿಲಿನಂತೆ ಗಂಗಮ್ಮನ ಮುಖದಲ್ಲಿ ಸಂತೋಷದ ಕಳೆ ಹೊರಹೊಮ್ಮಿತು. ಕಡಿಮೆಯೆಂದರೆ ಹತ್ತಿಪ್ಪತ್ತು ಸಾವಿರ ಬೆಲೆಬಾಳುವ ರತ್ನಮಾಲಿಕೆಯಿದು. ಏನುಚಂದ! ಏನು ಹೊಳಪು ಎಂಥ ಹುಚ್ಚು ಹುಡುಗಿ ಈಕೆ? ಎಂದವಳು ಉದ್ಗರಿಸಿದ ಈ ರೀತಿಯ ಹುಚ್ಚಿಗಾಗಿ ಕೃತಜ್ಞತೆಯನ್ನೂ ಸಲಿಸಿದಳು.

ಜಯ

ಪ್ರಭುಗಳಿಗೆ ಇದೊಂದೂ ಕೇಳಿಸಲಿಲ್ಲ. ತಮ್ಮ ಅಂದಿನ ಭಾವಚಿತ್ರವನ್ನು ನೋಡಿ ಸಿಡಿಲುಹೊಡೆದಂತಾಗಿ " ಹಾ! ಎಂಥ ಅನ್ಯಾಯವಿದು ಹೀರಾ ! ಅಂದಿನ ದಿನಗಳನ್ನು ಮರೆತು ಬಿಡಿ ರೆಂದು ನೀನೆ ಹೇಳಿದೆ. . ಮರೆಯುವುದು ಹೇಗೆ ? ಅಂದಿನ ಖೂಳ ಇಂದು ನನ್ನ ಕಣ್ಣಮುಂದೆ ನಿಂತಿದ್ದಾನೆ. . ದುಷ್ಟ ! ಚಂಡಾಲ ? ಎಂತಹ ಭವ್ಯಚಿತ್ರಕ್ಕೆ ಹೇಗೆ ಮಸಿಬಳಿದೆ ? " ಎಂದು ಅದನ್ನು ದೊಪ್ಪನೆ ಬಿಸಾಡಿ, ಮೈಮೇಲಿದ್ದ ಶಾಲನ್ನು ಮುಖಕ್ಕೆ ಸುತ್ತಿ ಕೊಂಡು ಅದೇ ಮಲಗುವ ಕುರ್ಚಿಯಮೇಲೆ ಮಲಗಿಬಿಟ್ಟಳು.

ಪ್ರಭುಗಳ ಅವಸ್ಥೆ ಗಂಗಮ್ಮನಿಗೆ ತಿಳಿದಿರಲಿಲ್ಲ. "ನಮ್ಮ ದೈವವು ಕಣ್ಣುತೆರೆದ ಹಾಗೆ ತೋರುತ್ತದೆ ! " ಎಂದು ತನ್ನಲ್ಲಿತಾನೆ ಸ್ವಲ್ಪ ಹಿಗ್ಗಿ ಪ್ರಭುಗಳಿಗೆ ಆ ಮಾಲಿಕೆಯ ಬೆಡಗನ್ನು ತೋರಿಸುವುದಕ್ಕೆ ಹೋದಳು; ವಿವರಿಸುವುದಕ್ಕೆ ಹೋದಳು.

ಪ್ರಭುಗಳು ಮಾತಾಡಲಿಲ್ಲ. ಗಂಗಮ್ಮ ಮೈ ಕುಲುಕಿಸಿದಳು. ಪ್ರಭುಗಳ ಆತ್ಮಗತವು ಅರ್ಥರಹಿತವಾದ ಮಾತುಗಳಿಂದ ಸೇರಿದ್ದಿತು. ಗಂಗಮ್ಮನಿಗೆ ಗಾಬರಿಯಾಯಿತು. "ಹೀಗೇಕೆ ಮಾತಾಡದೆ ನನ್ನನ್ನು ಬೆದರಿಸುವುದು ? " ಎಂದು ಗಂಗಮ್ಮ ಅಳುವುದಕ್ಕೆ ಮೊದಲುಮಾಡಿದಳು.

ಪ್ರಭುಗಳು ಒಮ್ಮೊಮ್ಮೆ 'ಹುಚ್ಚು · · ಹುಡುಗಿ · · ' ಎನ್ನುವುದು ಮಾತ್ರ ಗಂಗಮ್ಮನಿಗೆ ತಿಳಿದಿತ್ತು.

ಮಕ್ಕಳೂ ಬಂದು ಅಳುತ್ತಾ ತಂದೆಯ ಮೈಮೇಲೆ ಹತ್ತುವು ದಕ್ಕೆ ಹೋದುವು.

ಪ್ರಭುಗಳು ಮಾತಾಡುವುದನ್ನೂ ಮರೆತರು.

" ಅಯ್ಯೋ ನನ್ನ ಗ್ರಹಚಾರವೇ ! " ಎಂದು ಗಂಗಮ್ಮ ಆ ಧರ್ಮಪತ್ನಿ ಉಚ್ಚಸ್ವರದಿಂದ ಚೀರಿಟ್ಟಳು ! ಪ್ರಭುಗಳ ತುಟಿ ಯಿಂದ " ಹುಚ್ಚು ಹುಡುಗಿ ! " ಎನ್ನುವ ಮಾತೂ ಅಳಿಸಿ ಹೋಯಿತು !

ರೋಗಪರೀಕ್ಷೆಯ ಕೈಪಿಡಿ :
ರೋಗಚಿಕಿತ್ಸೆಯ ಕೈಗನ್ನಡಿ

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಅಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ

ಲೇಖಕರು :
ಡಾ. ಗೋ. ಸ. ಪಳಸುಲೆ L.M.&.S. ಪುಣೆ

ಕನ್ನಡಿಸಿದವರು :
ಶ್ರೀ. ನಾ. ತಿ. ದಾತಾರ B.A. ಬೆಳಗಾವಿ

೮೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ
ಬೈಂಡಿನ ಸುಂದರ ಹೊತ್ತಿಗೆ
ಬೆಲೆ : ಮೂರೇ ರೂಪಾಯಿಗಳು

ಪುಸ್ತಕ ದೊರೆಯುವ ಸ್ಥಳ :
೧. ಮನೋಹರ ಗ್ರಂಥ ಭಾಂಡಾರ, ಧಾರವಾಡ
೨. ಸ್ಟೂಡಂಟ್ಸ ಓನ್ ಬುಕ್‌ಡಿಪೊ, ಧಾರವಾಡ

Head office:– Shri Krishna Homio Farmacy
Budhwar Peth, Poona.

ಆರೋಗ್ಯ ಮತ್ತು ಬಲವನ್ನು ಸಾಧಿಸಿಕೊಳ್ಳುವ
ಸಚಿತ್ರ ಪುಸ್ತಕವು

ಎದೆಯನ್ನು ಹೇಗೆ ಬೆಳೆಯಿಸಬೇಕು ?

ಬೆಲೆ : ಪೋಸ್ಟೇಜಸಹಿತ ೪ ಆಣೆ

ಸಂಪೂರ್ಣ ಆರೋಗ್ಯವನ್ನು ಸಾಧಿಸಿಕೊಡುವ

ನಮಸ್ಕಾರದ ಚಿತ್ರಪಟ

ಬೆಲೆ : ಪೋಸ್ಟೇಜಸಹಿತ ೪ ಆಣೆ

ದೇಶ ವಿದೇಶಗಳ ತಜ್ಞರಿಂದ ಸಿಫಾರಸು ಮಾಡಲ್ಪಟ್ಟ
ಶಾರೀರಿಕ ಶಿಕ್ಷಣಕ್ರಮ

Price : Including Postage Rs. 1-10-0

Amunt should be sent by Mony Order or by Postal Stamps. No copy will be sent by V. P. P.

Address : S. J. Bapat,
Madihal, Dharwar.

ಹುದ್ದೇದಾರಿಯು ಜವಾಬ್ದಾರಿಯ ಗೋರಿಯಾಗಬಾರದು, ಅದರ ಗುತ್ತಿಗೆ, ಅದರ ಗುರಿಯಾಗಿ ಸಾಗಬೇಕು..ಕುಲಕರ್ಣಿಯು ಪ್ರಾಚೀನಕಾಲದಲ್ಲಿ ತನ್ನ ಹಳ್ಳಿಯ ಜನರಿಗೆ ಜವಾಬ್ದಾರನಾಗಿದ್ದನು. ಅವರಿಂದ ಚುನಾಯಿಸಲ್ಪಡುತ್ತಿದ್ದನು .... ಈಗ ಕುಲಕರ್ಣಿಗೆ ಪಿತ್ರಾರ್ಜಿತ ಹಕ್ಕು ಇದೆ.... ಹಳ್ಳಿಯ, ಮೇಲಧಿಕಾರಿಗಳ ರಾಜಾಧಿರಾಜನವನು....ಗ್ರಾಮೋದ್ಧಾರದ ಬೀಜವು ಇಲ್ಲಿದೆ .... ಬುನಾದಿಯನ್ನು ಬೇರೆಯಾಗಿ ಕಟ್ಟಬೇಕಾಗಿದೆ.

ಬರೆದವರು : **ಪಂಡಿತ ತಾರಾನಾಥರು**

"ಆದರೆ ಕಲೆಕ್ಟರ್ ಆಗಬೇಕು, ಇಲ್ಲಾದರೆ ಕುಲಕರ್ಣಿಯಾಗಬೇಕು" ಎಂಬದೊಂದು ಎಷ್ಟೋ ಕಡೆ ವಾಡಿಕೆಯಲ್ಲಿರುವ ನಾಣ್ಣುಡಿ. ಇಂಗ್ಲಿಷ್ ವಿದ್ಯೆ ಕಲಿಯುವ ಪಟ್ಟಣದ ಯುವಕರಿಗೆ "ಕಲೆಕ್ಟರ್" ಆಗಬೇಕು ಎಂಬದೇ ಧ್ಯೇಯಗಳಲ್ಲಿ ಮುಖ್ಯ ಧ್ಯೇಯ. ಹಳ್ಳಿಯಲ್ಲಿ ಸ್ವಲ್ಪ ಓದುಬರೆಹ ಬಲ್ಲವರಿಗೆ ಕುಲಕರ್ಣಿ ಆಗಬೇಕೆಂಬುದೊಂದು ದೊಡ್ಡ ಆಕಾಂಕ್ಷೆ. ಇಂಡಿಯದ ಆಡಳಿತವೂ ಮುಖ್ಯವಾಗಿ ಇವರಿಬ್ಬರ ನಡುವೆಯೇ ಸಾಗುತ್ತಿದೆ. .ಎನ್ನಬಹುದು. ಪೋಲೀಸಿಗೂ ಒಂದು ಮಹತ್ವದ ಜಾಗೆ ಕೊಡಬೇಕಾಗುತ್ತದೆ. ಮೇಲೆ ಕಲೆಕ್ಟರ್, ಕೆಳಗೆ ಕುಲಕರ್ಣಿ, ನಡುವೆ ಪೋಲೀಸ್. ಸರಕಾರವನ್ನು ಮಾಡುವವರು ಅಂದರೆ ಇವರೇ. ಬಾಕಿಯವರೆಲ್ಲ ಇವರ ಕೈಯಲ್ಲಿ ಇವರು ಕುಣಿಸಿದಂತೆ ಆಡುವವರು ಎಂದರೂ ಅತಿಶಯೋಕ್ತಿ ಆಗಲಾರದು.

ಬ್ರಿಟಿಷ್ ರಾಜ್ಯತಂತ್ರವು ಬಿಗಿದಿಟ್ಟ ಬ್ರಹ್ಮ-ಗಂಟಿನ ರೂಪವೇನೋ ಹೀಗಿದೆ! ಕಾಂಗ್ರೆಸ್ ಸರಕಾರವೇ ಬರಲಿ, ಇನ್ನಾವ ಸರಕಾರವೇ ಬರಲಿ, ಈ ಗಂಟನ್ನು ಬಿಚ್ಚಿ ಬಿಸುಟದೆ ಯಾವ ವಿಧವಾದ ದೇಶಹಿತವನ್ನೂ ಅದು ನಿಜವಾಗಿ ಶಾಶ್ವತವಾಗಿ ಮಾಡಲಾರದು. ಕಲೆಕ್ಟರ್ (ಇಡೀ I. C. S. ವರ್ಗವೇ ಅನ್ನಿ), ಕುಲಕರ್ಣಿ, ಪೋಲೀಸ್ ಇವರೆಲ್ಲ ತಮ್ಮಲ್ಲಿಯ ಜನರಿಗೇ ಜವಾಬ್ದಾರರಾಗುವ ವರೆಗೆ ಎಲ್ಲ ಸರಕಾರ ಸಂಸ್ಕರಣಗಳೂ ಬರೀ ಇಂದ್ರಜಾಲವೇ ಸರಿ. ಪೋಲೀಸಿನ ವಿಷಯವನ್ನು ಚರ್ಚಿಸುವದು ಈ ಲೇಖಕ್ಕೆ ಬಾಹ್ಯವಾಗಿದೆ. ಇಲ್ಲಿ ಕುಲಕರ್ಣಿಯೇ ನಮಗೆ ಮುಖ್ಯ. ಆತನ ಪೂರ್ವೇತಿಹಾಸ, ರೀತಿ- ನೀತಿ- ಧ್ಯೇಯಗಳನ್ನೂ ಅವುಗಳಿಂದ ಜನತೆಯ ಮೇಲಾಗುವ ಪರಿಣಾಮವನ್ನೂ ಪರೀಕ್ಷಿಸುವದೇ ನಮ್ಮ ಈಗಿನ ಕೆಲಸ. ಮುಸಲ್ಮಾನರು ಹಿಂದುಸ್ಥಾನಕ್ಕೆ ಬಂದು ರಾಜ್ಯ ಮಾಡುವದಕ್ಕೆ ಮೊದಲು, ಕುಲಕರ್ಣಿಕೆ ಮಾಡುವವನು ಆಯಾ ಹಳ್ಳಿಯ ಪ್ರಜೆಗಳಿಂದಲೇ **ಚುನಾಯಿಸಲ್ಪಡುತ್ತಿದ್ದನು** ಎಂಬದಕ್ಕೆ ನಮಗೆ ಹಳೆಯ ಗ್ರಂಥಗಳಲ್ಲಿ ಧಾರಾಳವಾದ ಆಧಾರ ಸಿಕ್ಕುತ್ತದೆ. ಪ್ರಜೆಗಳಿಗೆ ಬೇಕಾದಷ್ಟು ಹಿತವನ್ನು ಆತನು ಮಾಡುವವನಲ್ಲವಾದರೆ ಅಂಥವನನ್ನು ಯಾಕಾದರೂ ಚುನಾಯಿಸಿಯಾರು ? ಚುನಾಯಿಸಿದ ಮೇಲೆ ಆವನಿಂದ ಅವರು ತೋರಿದ ಸೇವೆಯು ಚನ್ನಾಗಿ ನಡೆಯದೆ ಹೋದರೆ ಆವನನ್ನು ತಾವು ಕೊಟ್ಟ ಸ್ಥಾನದಲ್ಲಿ ಯಾಕಾದರೂ ಇರಗೊಟ್ಟಾರು? ಸಾರಾಂಶ, ಅಂದಿನ ಕುಲಕರ್ಣಿಯು ತನ್ನ ಗ್ರಾಮದ ಜನರಿಗೆ ಜವಾಬ್ದಾರನಾಗಿದ್ದನು ; ಮತ್ತು ಆ ಜವಾಬ್ದಾರಿಯನ್ನು ಪೂರೈಸಿದರೆ ಮಾತ್ರವೇ ಆತನಿಗೆ ಆ ತನ್ನ ಹುದ್ದೆಯಲ್ಲಿರುವದು ಸಾಧ್ಯವಾಗಿತ್ತು.

ಮುಸಲ್ಮಾನರು ಈ ದೇಶಕ್ಕೆ ಬಂದ ಮೇಲೆ ಆ ಪರಸ್ಪರ ಜವಾಬ್ದಾರಿಕೆಯು ಉಳಿಯಲಿಲ್ಲ. ಮೊದಲು ಮೊದಲು ಬಂದ ಮುಸಲ್ಮಾನರು ರಾಜ್ಯವನ್ನು ಸ್ಥಾಪಿಸಬೇಕೆಂಬ ಇಚ್ಛೆಯಿಂದ ಇಲ್ಲಿಗೆ ಬರಲೇ ಇಲ್ಲ. ಅವರು ಬರೇ ಲೂಟಿಗಾಗಿ ಬಂದಿದ್ದರು. ಹಾಗೆ ಬಂದವರು ಆ ಲೂಟಿ ಮಾಡಿಕೊಂಡು ಹೋಗಿಯೂ ಬಿಟ್ಟರು. ಅವರ ಕಾಲದಲ್ಲಿ ಹಳ್ಳಿಗಳ ವ್ಯವಸ್ಥೆಯು ಮಾರ್ಪಡಲಿಲ್ಲ. ಆದರೆ ಬರಬರುತ್ತ ಯಾವಾಗ ಅವರಿಗೆ ಇಲ್ಲಿಯೇ ಇದ್ದು ರಾಜ್ಯ ಮಾಡುವ ವಿಚಾರ ಉಂಟಾಯಿತೋ ಅವರಿಗೆ ತೆರಿಗೆ ವಸೂಲು ಮಾಡಲಿಕ್ಕೆ ಒಂದು ವ್ಯವಸ್ಥೆಯನ್ನುಂಟು ಮಾಡಬೇಕಾಯಿತು ಆದರೆ ಈ ವ್ಯವಸ್ಥೆಯಲ್ಲಿಯೂ ಬಹುಕಾಲದಿಂದ ನಡೆದು ಬಂದ ಸಂಪ್ರದಾಯದ ರೂಪರೇಖೆಗಳಲ್ಲಿ ಅಷ್ಟೊಂದು ವ್ಯತ್ಯಾಸವನ್ನು ಮಾಡುವದು ಸಾಧ್ಯವಾಗಲಿಲ್ಲ. ಅನೇಕ ಹುದ್ದೆಗಳು ಇದ್ದಕ್ಕಿದ್ದಂತೆಯೇ ಉಳಿದವು. ಆದರೆ (೧) ಅವುಗಳ ಹೆಸರುಗಳು ಮಾರ್ಪಟ್ಟವು. ಹಿಂದಿನ ಶಬ್ದಗಳು ಹೋಗಿ ಅವುಗಳ ಜಾಗೆಯಲ್ಲಿ ಫಾರ್ಸಿ, ಅರಬಿ ಶಬ್ದಗಳು ಬಂದವು. (೨) ಆ ಹೊಸ ಹೆಸರಿನ ಹಳೇ ಹುದ್ದೆಗಳಿಗೆ ಕೆಲಸಗಾರರನ್ನು ನಿರ್ಮಿಸುವದರ ತತ್ತ್ವವೂ ರೀತಿಯೂ ಹೊಸದಾಯಿತು. ಬರಬರುತ್ತ ಒಂದು ಹೊಸ ಅರ್ಥಯುಗವೇ ಉಂಟಾಯಿತು.

ಈ ಯುಗದಲ್ಲಿ ಕುಲಕರ್ಣಿ ಮುಂತಾದ ಹಳ್ಳಿಯ ಹುದ್ದೇದಾರರು ಜನರಿಂದ ಆರಿಸಲ್ಪಟ್ಟವರಲ್ಲ. ಆ ಪರದೇಶೀ ಲೂಟಿಗಾರರಿಗೆ ಇಲ್ಲಿ ಅರಸುತನಕ್ಕೆ ಏರಲು ಸಹಾಯಕರಾಗಿದ್ದ ದೇಶ-ಪ್ರಜಾದ್ರೋಹಿಗಳಿಗೇ ಆ ಜಾಗೆಗಳು ಕೊಡಲ್ಪಟ್ಟವು. ಅವರಿಗೆ ಇನಾಮುಗಳು ಕೊಡಲ್ಪಟ್ಟವು. ಅಷ್ಟು ಮಾತ್ರವೇ ಅಲ್ಲ. ಅವರ ಆ ಹುದ್ದೆಗಳೂ ಇನಾಮುಗಳೂ ಮಾನ-ಮರ್ಯಾದೆಗಳೂ ಅವರ ಮನೆತನಕ್ಕಾಗಿಯೇ ವಿಾಸಲಾಗಿಡಲ್ಪಟ್ಟವು. ಈ ಹುದ್ದೇದಾರರು ಈಗ ಪ್ರಜೆಗಳಿಂದ ಚುನಾಯಿಸಲ್ಪಟ್ಟವರಲ್ಲ. ಇವರು ತಮ್ಮಲ್ಲಿಯ ಪ್ರಜೆಗಳಿಗೆ ಜವಾಬ್ದಾರರಲ್ಲ; ಅವರ ಹಿತಸಾಧನದ ಗೊಡವೆ ಇವರಿಗಿಲ್ಲ. ತಮ್ಮನ್ನು ಉದ್ಧರಿಸಿದ ನವಾಬರ ಮತ್ತು ಅವರ ರಾಜ್ಯಾಂಗದವರ ಬೊಕ್ಕಣವನ್ನು ತುಂಬಿಸುವದೇ ಇವರ ಮೊದಲ ಕರ್ತವ್ಯವಾಗಿ ಬಿಟ್ಟಿತು. ಸುಬೇದಾರರು, ತಾಲುಕಾದಾರರು, ತಹಸೀಲದಾರರು, ಮತ್ತು ಹೀಗೆ ಇಳಿಯುತ್ತ ಇಳಿಯುತ್ತ ಅವರ ಗುಮಾಸ್ತರು ಮತ್ತೆ ಚಪ್ರಾಸಿಗಳವರೆಗೆ ಅವರವರ ಯೋಗ್ಯತಾನುಸಾರ ಸರಬರಾಯಿಯನ್ನು ಮಾಡುತ್ತ ಅವರನ್ನು ಸಂತೋಷಪಡಿಸುವದೇ ಇವರ ನಿತ್ಯಕರ್ಮವಾಯಿತು, ವ್ರತವಾಯಿತು! ಈ ಮುಹಮ್ಮದ್ ಗೋರೀ, ಕುತ್‌ಬುದ್ದೀನ್ ಮುಂತಾದವರ ಕಾಲದಲ್ಲಿ ಮೊದಲಾದ ಈ ಸರಬರಾಯಿಯು (ಅಂದರೆ ಸರಕಾರಿ ಹುದ್ದೇದಾರರಿಗೆ ಬೇಕಾದ ವಸ್ತು ವಿಷಯಗಳನ್ನು ಪುಕ್ಕಟೆಯಾಗಿ ಒದಗಿಸಿಕೊಡುವ ಮಾಮೂಲು), ಈ ಕಾಲಕ್ಕೂ ಒಂದಲ್ಲ ಇನ್ನೊಂದು ರೂಪದಿಂದ, ಪ್ರಮಾಣದಿಂದ, ನಡೆಯುತ್ತಲೇ ಇದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಕುಲಕರ್ಣಿಕೆಯ ಇತಿಹಾಸವು ಹೀಗಿದೆ. ಅದು ಜನ್ಮವೆತ್ತಿದ ಹದಿಮೂರನೆಯ ಶತಮಾನದ ವಾತಾವರಣವು ಇಂದಿಗೂ ಹಾಗೆಯೇ ಇದೆ. ಸರಬರಾಯಿಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿವೆ ಎಂದುಕೊಂಡರೂ ಮುಖ್ಯವಾದ ದೋಷವಂತೂ ಹಾಗೆಯೇ ಇದೆ. ಅದೇನೆಂದರೆ ಕುಲಕರ್ಣಿಗೂ ಹಾಗೂ (ಹಳ್ಳಿಯ ಇತರ ಎಲ್ಲ ಹುದ್ದೇದಾರರಿಗೂ) ಅಲ್ಲಿಯ ಗ್ರಾಮಸ್ಥರಿಗೂ ಪರಸ್ಪರ ಜವಾಬ್ದಾರಿಕೆಯು ಇಲ್ಲವೇ ಇಲ್ಲ. ಹಿಂದಿನ ಮುಸಲ್ಮಾನ ರಾಜ್ಯಗಳಲ್ಲಿದ್ದಷ್ಟಾದರೂ ಈಗಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಹಳ್ಳಿಯ ಆಡಳಿತವು ಮೇಲಿನ ಆಧಿಪತ್ಯದ ಪ್ರತಿಬಿಂಬವೇ ಆಗಿರುವುದು. ಅನಿವಾರ್ಯ. ಅದಕ್ಕೆ ಇದು ಬೆಂಬಲ, ಇದಕ್ಕೆ ಅದು ಬೆಂಬಲ. ಹೀಗಿರುವಾಗ ಈ **ಜವಾಬ್ದಾರಿ ಇಲ್ಲದ ಹುದ್ದೇದಾರಿಯು ಕೆಳಗಿನಿಂದ ಕೊನೆಯುವರೆಗೆ ದೇಶದಲ್ಲೆಲ್ಲ ಮೊದಲು ನಾಶವಾಗಬೇಕು.** ಇದು ನಾಶವಾಗಬೇಕು ಎಂಬ ಎಚ್ಚರಿಕೆಯು ಜನತೆಯಲ್ಲೆಲ್ಲ ಉಂಟಾಗಿ ದಿನೇ ದಿನೇ ಹೆಚ್ಚುತ್ತ ಹೋಗಬೇಕು. **ಹುದ್ದೇದಾರಿಯು ಜವಾಬ್ದಾರಿಯ ಗೋರಿಯಾಗಬಾರದು. ಅದರ ಗುತ್ತಿಗೆ ಅದರ ಗುರಿಯಾಗಿ ಸಾಗಬೇಕು.** ಎಂಬದರ ಎಚ್ಚರಿಕೆಯು ರಾಜ್ಯಾಂಗದಲ್ಲೆಲ್ಲ ಉಂಟಾಗಬೇಕು; ಅದನ್ನು ಪ್ರಜೆಗಳೇ ಅವರಲ್ಲಿ ಉಂಟುಮಾಡಿಸಬೇಕು. ಅದಾಗುವ ವರೆಗೆ ಯಾರಿಗೂ ಹಿತವಿಲ್ಲ. ಆದರೆ ಅದಾಗುವ ಬಗೆ ಯಾವದು?

ಈಗ ಹಳ್ಳಿಗೆ ಆಗಾಗ ಬರುವ ಹುದ್ದೇದಾರರು ಅಂದರೆ ರೆವೆನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಸೀಲದಾರ ಅಥವಾ ಮಾಮಲೆದಾರರು. ಇವರಿಗೂ ಗ್ರಾಮಸ್ಥರಿಗೂ ಮಧ್ಯಸ್ಥ ಅಂದರೆ ಕುಲಕರ್ಣಿಯೇ. ಈ ಹುದ್ದೇದಾರರು ಬರುವದು ಹೊಲಗದ್ದೆಗಳ ತೆರಿಗೆ, ಸರ್ವೇಕಲ್ಲು ಮುಂತಾದವುಗಳನ್ನು ಕುರಿತಿರುವ ವ್ಯಾಜ್ಯಗಳನ್ನು ತನಿಖೆ ಮಾಡುವದಕ್ಕಾಗಿ. ಇವರಿಗೆ ಸಾಧಾರಣವಾಗಿ ತಾವು ಬಂದ ವಿಷಯದ ಪರಿಚಯವೇ ಸಾಕಷ್ಟಿರುವದಿಲ್ಲ. ಆದರೆ ಕುಲಕರ್ಣಿಯೇ ಈ ವಿಷಯಗಳ ಪರಿಚಯದಲ್ಲಿ ಕೇವಲ ನಿಪುಣ! ಹೀಗಿರುವಾಗ ತಮ್ಮ ಕೆಲಸ ಸಾಗಬೇಕಾದರೆ ಆತನ ಸಹಾಯವಿಲ್ಲದೆ ಸ್ವತಂತ್ರವಾಗಿ ಇವರು ಏನೇನೂ ಮಾಡಲಾರರು. ಇವರಿಗೆ ಅವನೇ ನೌಕೆ, ಅವನೇ ದಿಕ್ಸೂಚಕ! ಮೊದಲೇ ಅವನ ಸರಬರಾಯಿಯಿಂದ ಅರ್ಧಮತ್ತರಾದ ಇವರು, ತಮ್ಮ ಅಜ್ಞಾನಾಂಧತ್ವದ ಮೇಲೆ ಅವನಿಗಿರುವ ವಾಜೀಕರಣ ಶಕ್ತಿಯಿಂದ ಪೂರ್ತಿ ಮೈಮರೆತು ಅವನ ಕೈಗೊಂಬೆಗಳೇ ಆಗಿಬಿಡುತ್ತಾರೆ! ಹೀಗಿದೆ ಈ ಹುದ್ದೇದಾರರ ಯೋಗ್ಯತೆ! ಇಂಥ ಸ್ಥಿತಿಯಲ್ಲಿ ರಾಜಾಧಿರಾಜನೆಂದರೆ ಕುಲಕರ್ಣಿಯೇ ಅಲ್ಲವೇ? ಮತ್ತಿಲ್ಲಿ ವ್ಯಾಜ್ಯದ ವಿಷಯವಾವದು? ಮುಖ್ಯ ತೆರಿಗೆಯ ವಿಷಯ; ರೈತರ ಮೂಗಿನುಸುರು! ಆದರೆ ಅದರ ತೀರ್ಮಾನವಾಗುವದು ಹೇಗೆ? ಕುಲಕರ್ಣಿಯ ಮತಕ್ಕೆ ಮಾಮಲೆದಾರರ ಸೈ!! ಮತ್ತೆ ಆ ಕುಲಕರ್ಣಿಯ ಮತಕ್ಕೆ ಆಧಾರವಾವುದು? ದೊಡ್ಡಮನುಷ್ಯರ ದಾಕ್ಷಿಣ್ಯ, ಅಥವಾ ಲಂಚ ಕೊಟ್ಟವರ ಲಗಾಮು! ತಹಸಿಲ್‌ದಾರರ ನ್ಯಾಯಾಸ್ಪದ ಕಡಿವಾಣ! ಈ ರೀತಿಯಾಗಿದೆ ಎಂದಮೇಲೆ ಬಡರೈತನಿಗೆ ನ್ಯಾಯವೆಲ್ಲಿಂದ ದೊರೆಯಬೇಕು? ತಾನು ಸರಬರಾಯಿಗಾಗಿ ಖರ್ಚು ಮಾಡಿದ ರೊಕ್ಕವನ್ನು ಕುಲಕರ್ಣಿಯೂ ಒಂದಲ್ಲ ಇನ್ನೊಂದು ಉಪಾಯದಿಂದ ಭರ್ತಿ ಮಾಡಿಕೊಳ್ಳಬೇಡವೆ? ಅವನಾದರೂ ಏನು ಮಾಡಿಯಾನು? ಪಾಪಚಕ್ರವೇ ಹಾಗೆ ತಿರುಗುತ್ತದೆ ಈ ಪರದೇಶೀ ರಾಜ್ಯದಲ್ಲಿ!

ಪಂಚಾಯತಿಗಳಿಂದ ಹಳ್ಳಿಗಳ ಸುಧಾರಣೆಯಾಗುತ್ತದೆ ಎಂದು ಅನೇಕ ಮುಂದಾಳುಗಳ ಮತ. ನಮ್ಮ ಮುಂದಾಳುಗಳಲ್ಲಿ ಮುಕ್ಕಾಲು ಜನರು ಹಳ್ಳಿಗಳನ್ನು ದೂರದ ಪಟ್ಟಣಗಳಿಂದ ನೋಡುವವರು! "ವೋಟ್" ಒಂದರಿಂದ ಎಲ್ಲವೂ ಸುಭಗವಾಗಿ ನಡೆದುಬಿಡುತ್ತದೆ ಎಂದು ಅಂಥವರ ಮತ. ಆದರೆ "ವೋಟ್"ಗಳು ಹರಿಯುವದು ಎತ್ತಕಡೆ? ಬಲಾಢ್ಯನಾದ ಕುಲಕರ್ಣಿಯು ಇರುವವರೆಗೆ ಅವುಗಳನ್ನು ಅವನು ತನಗೆ ಬೇಕಾದಂತೆ ಹರಿಸಬಲ್ಲ. ತನಗೆ ಬೇಕಾದವರಿಗೆ ಬೇಕಾದಷ್ಟು ವೋಟ್‌ಗಳನ್ನು ಕೊಡಿಸಬಲ್ಲ. ತನ್ನ ಇಚ್ಛಾವಿರುದ್ಧ ನಡೆದವರನ್ನು ಬೇಕಾದಂತೆ ಗೋಳಾಡಿಸಬಲ್ಲ. ಆತನು ಪ್ರಜೆಗಳಿಗೆ ಯಾವರೀತಿಯಿಂದಾದರೂ ಜವಾಬ್ದಾರನಾಗಿರದೆ ಎಲ್ಲಿಯತನಕ ತನ್ನ ಮೇಲಿನ ಹುದ್ದೇದಾರರಿಗೆ ಮಾತ್ರ ಒಳಪಟ್ಟುಕೊಂಡಿರುತ್ತಾನೋ, ಅಲ್ಲಿಯವರೆಗೆ ಎಂಥ ಪಂಚಾಯತಿ ಕಾನೂನೇ ಬರಲಿ, ಆ ಹಳ್ಳಿಯಲ್ಲಿ ಆತನ ಕುತಂತ್ರರಾಜ್ಯವು ಮಾತ್ರ

ನಡೆದೀತೇ ಅಲ್ಲದೆ ಪ್ರಜಾಸತ್ತೆಯ ಗಾಳಿಯು ಕೂಡ ಸುಳಿಯಲಿಕ್ಕಿಲ್ಲ. ನಾವು ಚುನಾಯಿಸದ ನಮಗೆ ಬಾಧ್ಯಸ್ಥರಾಗಿಲ್ಲದ ಗವರ್ನರರ ಯಜಮಾನಿಕೆಯಲ್ಲಿ, ನಮ್ಮ ಪ್ರಾಂತೀಯ ಸರಕಾರಗಳಿಗೆ ಬಂದ ತಕ್ಕ ಸ್ವಾತಂತ್ರ್ಯದಪ್ರತಿಬಿಂಬವೇ ಈ ಪಂಚಾಯತಿಗಳಿಂದ ಹಳ್ಳಿಗೆ ಬರುವ ಪ್ರಜಾಸತ್ತೆಯು. ಇವುಗಳಲ್ಲಿ ವ್ಯತ್ಯಾಸವಿದ್ದರೆ ಇಷ್ಟೇ. ಗವರ್ನರರು ತಾವೇ ಸುಶಿಕ್ಷಿತರಾಗಿರೋಣದರಿಂದ, ಅವರಿಂದ ಎಲ್ಲಿಯಾದರೂ ತಪ್ಪಾದರೆ ಅದು ಕೂಡಲೆ ಬೈಲಿಗೆಬಿದ್ದು ಗದ್ದಲವೇರುವ ಸಂಭವವಿರೋಣದರಿಂದ ಅವರ ಆಡಳಿತವು ತಕ್ಕಮಟ್ಟಿಗಾದರೂ ಹತೋಟಿಯಲ್ಲಿದ್ದೇ ತೀರಬೇಕು. ಆದರೆ ನಮ್ಮ ಕುಲಕರ್ಣಿಗಳಿಗೆ ಅಂತರಂಗ ಬಹಿರಂಗಗಳೆರಡರಲ್ಲಿಯೂ ನಿರಂಕುಶ ಪ್ರಭುತ್ವವಿದೆ! ಅದಿರುವವರೆಗೆ ಈ ಪಂಚಾಯತಿಯಿಂದಾಗುವದೂ ಬಡ-ಬಗ್ಗರಿಗೆ ಹಿಂಸೆ, ಮೋಸವೇ ಹೊರತು ಇನ್ನೇನೂ ಇಲ್ಲ. ಇದೆಲ್ಲ ಬರೀ ವಿಚಾರದ ಮಾತಲ್ಲ; ನಾವು ಪಂಚಾಯತಿ ಹಳ್ಳಿಗಳಲ್ಲಿ ಕಣ್ಣಾರೆಕಂಡ ದುಷ್ಪರಿಣಾಮಗಳ ಅತ್ಯಲ್ಪ ವಿವರವಿದು.

ಈಗಾಗಬೇಕಾದ್ದೇನು? ಕುಲಕರ್ಣಿಗಳು ಚುನಾಯಿಸಲ್ಪಟ್ಟೇ ಆ ಹುದ್ದೆಗೆ ಬರಬೇಕು. ಅವರು ಕುಲಕರ್ಣಿಕೆಯ ಶಿಕ್ಷಣವನ್ನು ಪಡೆದವರಾಗಿರಬೇಕು. ಸಾಧ್ಯವಾದಷ್ಟುಮಟ್ಟಿಗೆ ಆ ಹಳ್ಳಿಯವರೇ ಆಗಿರಬೇಕು. ಕುಲಕರ್ಣಿಕೆಗೆ ಅವರಿಗೆ ಇಲ್ಲಿಯತನಕ ನಡೆದುಬಂದಿರುವ ಪಿತ್ರಾರ್ಜಿತ ಹಕ್ಕು ಕಿತ್ತೊಗೆಯಲ್ಪಡಬೇಕು. ಅವರು ತಮ್ಮ ಹುದ್ದೆಗೆ ಸೇರಿದ ಪ್ರತಿಯೊಂದು ವಿಷಯದಲ್ಲಿಯೂ ತಮ್ಮ ಹಳ್ಳಿಯ ಜನರಿಗೆ ಮುಖ್ಯವಾಗಿ ಜವಾಬ್ದಾರರಾಗಿರಬೇಕೇ ಹೊರತು, ಮಾಮಲೆದಾರ ತಹಸೀಲದಾರರಿಗಲ್ಲ. ಸರಬರಾಯಿಗಳಿಗೆ ಸುತರಾಂ ಜಾಗೆಯಿರಕೂಡದು. ಹೀಗೆ ಕುಲಕರ್ಣಿಗಳನ್ನು ಜನರಿಗೆ ಜವಾಬ್ದಾರರಾಗಿ ಮಾಡಿದರೆ, ಮೇಲಿನ ಹುದ್ದೇದಾರರೂ ಬರಬರುತ್ತ ಜನತೆಗೇ ಜವಾಬ್ದಾರರಾಗುತ್ತ ಹೋಗಿ ನಿಜವಾದ ಸ್ವರಾಜ್ಯವು ನಮ್ಮ ದೇಶಕ್ಕೆ ಲಭಿಸುವದು. ಯಾವದಕ್ಕೂ ಪ್ರಜೆಗಳಿಗೆ ಅಸಲಿಗೂ ನಕಲಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿಯುವ ಶಿಕ್ಷಣವಾಗಬೇಕು.

ಅಚ್ಚಾದದ್ದೆಲ್ಲ ನಿಜವೇ?

ರಶಿಯಾದಲ್ಲಿ ಜೋಡಿಗಾರ (Comrade) ನೊಬ್ಬನು ತನ್ನ ಉಪನ್ಯಾಸದ ಆವೇಶದ ಭರದಲ್ಲಿ ಹೀಗೆ ನುಡಿದನು:—

'ನಮ್ಮ ಐದುವರ್ಷದ ಯೋಜನೆಯಿಂದ ನಾವು ಎಂತಹ ಅದ್ಭುತವನ್ನು ಸಾಧಿಸಿ ತೋರಿಸಿದ್ದೇವೆ! ಉದಾಹರಣೆಗಾಗಿ, ನಮ್ಮ ಲೇನಿನ್‌ಗ್ರಾಡ ಎಂಬ ಬಂದರವನ್ನು ನೋಡಿರಿ. ಮೊದಲು ಇಲ್ಲಿ ಏನಿದ್ದಿತು? ಏನೂ ಇಲ್ಲ! ಆದರೆ ಈಗ? ದಿನಕ್ಕೆ ಇಪ್ಪತ್ತು ಹಡಗಗಳು ಬರುವವು, ಮೂವತ್ತು ಹಡಗಗಳು ಹೋಗುವವು—'

ಶ್ರೋತೃವರ್ಗದಲ್ಲಿ ತಟ್ಟನೆ ಕೆಲಸಗಾರನೊಬ್ಬನೆದ್ದು ನುಡಿದನು— 'ಇಪ್ಪತ್ತು? ಮೂವತ್ತು?— ಯಾರು ಹೇಳಿದರು ನಿಮಗೆ? ನಾನು ದಿನಾಲು ಅಲ್ಲಿಯೆ ಕೆಲಸ ಮಾಡುತ್ತೇನೆ. ನನಗೆ ಗೊತ್ತಿದೆ—'

ಜೋಡಿಗಾರನಿಗೆ ತಡೆಯದಂತಾಗಿ ಅಬ್ಬರಿಸಿದನು. 'ನಿನಗೆ ಗೊತ್ತಿದೆ! ಏನು ಗೊತ್ತಿದೆ ಬುರುಡೆ? ವೃತ್ತಪತ್ರಗಳನ್ನು ಎಂದಾದರೂ ಓದಬೇಕೆಂಬುದನ್ನು ಬಲ್ಲಿಯಾ? ಒಮ್ಮೆ ಓದಿ ನೋಡು ಆಮೇಲೆ ತಿಳಿಯುವುದು! "ನನಗೆ ಗೊತ್ತಿದೆ"ಯಂತೆ' ಎಂದು ಹಂಗಿಸಿದನು!

ತ್ವರೆಮಾಡಿರಿ! ತ್ವರೆಮಾಡಿರಿ!!

ತ್ರಿಪದಿರೂಪವಾಗಿ ರಚಿಸಿದ

ಸರ್ವಜ್ಞ ವಚನಗಳು

ಸಂಶೋಧಿತವಾದ ಸಂಪೂರ್ಣ ಸಂಗ್ರಹ

ಜನಪದಾವೃತ್ತಿ

ಪ್ರಸ್ತಾವನೆ, ವಿಷಯಸೂಚಿಕೆ, ವಿಷಯವಿಭಜನೆ, ಶಬ್ದಕೋಶ ಅಭಿಪ್ರಾಯಗಳ ಸಹಿತವಾದುದು

ಸಂಪಾದಕರು:

ಚನ್ನಪ್ಪ ಉತ್ತಂಗಿ

ಕರ್ನಾಟಕ ಕವಿಚರಿತಕಾರರಾದಿಯಾಗಿ ಅನೇಕ ಸಾಹಿತಿಗಳೂ ಜನತೆಯೂ ಮೆಚ್ಚಿರುವ ಉದ್ಗ್ರಂಥ

ಸಾಮಾನ್ಯ ಪ್ರತಿ ಒಂದಕ್ಕೆ ೧ ರೂ. ೨ ಆ.
ಉತ್ತಮ ಪ್ರತಿ ಒಂದಕ್ಕೆ ೧ ರೂ. ೧೨ ಆ.
ಅಂಚೆವೆಚ್ಚ ಬೇರೆ.

ಸಿಗುವ ಸ್ಥಳ:—

ಕರ್ನಾಟಕ ಪ್ರಿಂಟಿಂಗ ವರ್ಕ್ಸ್, ಧಾರವಾಡ

ದಹನಚಿತ್ರ

ಬರೆದವರು :
“ ಆನಂದ ”

ಏಕಾಂಕ ರುದ್ರರೂಪಕ
(ಭಾಷಾಂತರದ ರೂಪಾಂತರ)

ಪಾ ತ್ರ ಗ ಳು

ಗಿರಿ— ಕಲಾಕೋವಿದ. ವರ್ಷ ೪೫.

ಚಂಪ— ಗಿರಿಯ ಚಿತ್ರಗಳಿಗೆ ಮಾದರಿ; ಅವನ ಪ್ರಣಯುವಧು ವರ್ಷ ೨೪.

ರಾಜ— ಗಿರಿಯ ಶಿಷ್ಯನು ವರ್ಷ ೨೮.

ರೋಹಿಣಿ— ಗಿರಿಯ ಮಗಳು ವರ್ಷ ೧೪.

ಕಿಟ್ಟಣ್ಣ— ರೋಹಿಣಿಯ ಸೋದರಮಾವ ವರ್ಷ ೪೦.

ಕಾಲ : ಆಧುನಿಕ. **ದೇಶ :** ನಮ್ಮದು.

ಸ್ಥಳ : ಗಿರಿಯ ಮನೆಯಲ್ಲಿ

ೃಶ್ಯ— ಗಿರಿಯ ಮನೆಯ ಅಂಗಳ– ಮನೆಯ ಹಿಂಭಾಗದ ಶಾಲವಾದ ಪಡಸಾಲೆಯು ರಂಗಸ್ಥಳದ ಹೆಚ್ಚು ಭಾಗವನ್ನು ಕ್ರಮಿಸಿದ್ದು ವೇದಿಕೆಯಂತೆ ತೋರುವುದು. ಈ ಪಡಸಾಲೆಯ ಂದು ಪಕ್ಕದಲ್ಲಿ ಮಹಡಿಯ ಮೆಟ್ಟಿಲುಗಳು ಕಾಣುವವು– ಡಸಾಲೆಯ ಇನ್ನೊಂದು ಪಕ್ಕದಲ್ಲಿ ಒಂದು ದೊಡ್ಡ ಸುಖಾಸನ Sofa), ಒಂದೆರಡು ಕುರ್ಚಿಗಳು ಇರುವುವು. ಅವುಗಳೆದುರಿಗೆ ಂದು “ ಟೀಪಾಯಿ ” ಇರುವುದು. ಅದರ ಮೇಲೆ ಒಂದು ಪುಷ್ಪಪಾತ್ರೆ. ಪಡಸಾಲೆಯ ಗೋಡೆಯ ಮೇಲೆ ನಾಲ್ಕಾರು ೊಡ್ಡ ಚಿತ್ರಪಟಗಳೂ ಇನ್ನು ಕೆಲವು ಚಿಕ್ಕ ಚಿಕ್ಕ ಚಿತ್ರಪಟಗಳೂ ಗಲು ಹಾಕಲ್ಪಟ್ಟಿವೆ. ಒಂದು ಗೋಡೆಗೆ ಗಡಿಯಾರವೂ ಇದೆ. ಟ್ಟಿನಲ್ಲಿ ಉತ್ತಮವಾದ ಕಲಾಭಿರುಚಿಯನ್ನು ತೋರುವಂತೆ ುಸಜ್ಜಿತವಾಗಿದೆ.

ಅಂಗಳದಲ್ಲಿ ಒಂದೆರಡು ಹೂವಿನ ಕುಂಡಗಳಿವೆ. ಅಂಗಳದ ಂದು ಪಕ್ಕಕ್ಕೆ ಹೊರಗೆ ಹೋಗುವ ಬಾಗಿಲು ಕಾಣುವುದು. ಕಾಲ ಮಧ್ಯಾಹ್ನ ಎರಡು ಗಂಟೆಯ ಸಮಯವಿರಬಹುದು.

ಪಡಸಾಲೆಯ ಒಂದು ಪಕ್ಕಕ್ಕೆ ಮಹಡಿಯ ಮೆಟ್ಟಿಲುಗಳಿಗೆ ಸಮೀಪವಾಗಿ ಒಂದು ಕಂಭ. ಅದಕ್ಕೆ ಚಂಪಳು ಸಣ್ಣ ಸರಪಳಿಗಳಿಂದ ಬಿಗಿಯಲ್ಪಟ್ಟಿದ್ದಾಳೆ. ಚಂಪಳು ಒಳ್ಳೆಯ ಮೈಕಟ್ಟಿನ ರೂಪವತಿಯಾದ ಹೆಣ್ಣು. ವಿಪುಲವಾದ ತಲೆಯ ಕೂದಲನ್ನು ಬಾಚಿ ಸೊಗಸಾಗಿ ಹೆರಳು ಹಾಕಿಕೊಂಡಿದ್ದಾಳೆ. ಜರತಾರಿ ಅಂಚಿನ ಕಿಳುಪಾದ ಕಪ್ಪು ರೇಷ್ಮೆ ಸೀರೆಯನ್ನುಟ್ಟಿದ್ದಾಳೆ. ಹಣ್ಣುನಿಂಬೆ ವರ್ಣದ ರವಿಕೆಯನ್ನು ಸಾಂಪ್ರದಾಯಿಕ ರೀತಿಯಲ್ಲಿ ಬಿಗಿದು ಕಟ್ಟಿದ್ದಾಳೆ. ಹಣೆಯಲ್ಲಿ ಕುಂಕುಮ–ಏನೋ ಅವಸರದಲ್ಲಿ ಇಟ್ಟಂತೆ ತೋರುತ್ತ ಸೌಂದರ್ಯೋಪಾಸಕನ ಕಣ್ಣುಗುರಿಯಂತಿದೆ. ಗಲ್ಲದ ಮೇಲೆ ಒಂದು ಪುಟ್ಟ ಕರಿಯ ಮಚ್ಚೆ– ಬಹುಶಃ ಪ್ರೇಕ್ಷಕರಿಗೆ ಕಾಣಲಾರದು ! ಆದರೂ ಮಚ್ಚೆಯೇನೋ ಇದೆ ! ಬಂಧಿಸಲ್ಪಟ್ಟಿರುವ ರೀತಿಯಲ್ಲಿ ಅವಳ ಬಾಹುಗಳಿಗೂ ಸ್ವಾತಂತ್ರ್ಯವಿಲ್ಲ. ಕಟ್ಟಿರುವ ರೀತಿಯಲ್ಲಿ ಅವಳ ಉಡುಪು ಸ್ವಲ್ಪ ಅಸ್ತವ್ಯಸ್ತವಾಗಿದೆ. ಅಂದರೆ ಸೆರಗು ಸ್ವಲ್ಪ ಓರೆಯಾಗಿ ಯೌವನ ಅರೆಮುಚ್ಚಿದಂತಾಗಿದೆ.

ಗಿರಿಯು ಅವಳೆದುರಿಗೆ ಎಂಟು ಹತ್ತು ಅಡಿಗಳ ದೂರದಲ್ಲಿ ಕುಳಿತು– ಬಂಧಿತಳಾದ ಚಂಪಳ ನಿಲುವನ್ನು ಚಿತ್ರಿಸಲು ತೊಡಗಿದ್ದಾನೆ– ಅವನು ಕುಳಿತಿರುವುದು ಒಂದು ಕಾಲುಮಣೆಯಮೇಲೆ– ಎದುರಿಗೆ ಒಂದು “ ಈಸ್ಟಲ್ ” ಅದರ ಮೇಲೆ ಚೌಕಟ್ಟಿಗೆ ಹೊಡೆಯಲ್ಪಟ್ಟ “ ಗೋಣಿ ” (Canavas). ಗಿರಿಯು ಆ ಗೋಣಿಯ ಮೇಲೆ ಒಂದು ಇದ್ದಿಲು ಚೂರಿನಿಂದ, ಚಂಪಳ ನಿಲುವಿನ ಭಂಗಿಯ ಮೂಲರೇಖೆಗಳನ್ನು ಗುರ್ತಿಸುತ್ತಿದ್ದಾನೆ – ಅವನ ಪಕ್ಕದಲ್ಲಿ ಇನ್ನೊಂದು ಕಾಲುಮಣೆ– ಅದರ ಮೇಲೆ ತೈಲವರ್ಣಗಳ ಪೆಟ್ಟಿಗೆ– ಬಣ್ಣಗಳನ್ನು ಕಲಸುವ ಹಲಗೆ (Palatte), ತೈಲದ ಸೀಸೆ, ಕುಂಚಗಳು (Brushes) ಎಲ್ಲಾ ಇವೆ.

ಗಿರಿಯ ವರ್ಣ ಶ್ಯಾಮ— ತಲೆಯ ಕೂದಲು ಮೋಟಕಾಗಿ ಕತ್ತರಿಸಲ್ಪಟ್ಟು– ಕೆದರಿಕೊಂಡು ಪೊದೆಯಾಗಿದೆ. ಆಕೃತಿ ತೀರ ಎತ್ತರವೂ ಅಲ್ಲ– ತೀರ ಗಿಡ್ಡೂ ಅಲ್ಲ ; ತೀರ ದಪ್ಪವೂ ಅಲ್ಲ– ತೀರ ತೆಳುವೂ ಅಲ್ಲ. ತೇಜೋಮಯವಾದ ಕಣ್ಣುಗಳು– ಅವನ ಮುಖಕ್ಕೆ ಸಹಜವಾದ ರಾಜಸಕಳೆ– ಈಗ ಒಂದೆರಡು ತಿಂಗಳುಗಳಿಂದ ಕ್ಷೌರವಿಲ್ಲದೆ – ತಾಮಸವಾಗಿದೆ– ಮೊಳಕಾಲವರೆಗೂ ಇಳಿಯುವ, ಸಡಿಲವಾದ ತೋಳುಗಳ ಒಂದು ಬಿಳಿಯ ಜುಬ್ಬವನ್ನು

ತೊಟ್ಟಿದ್ದಾನೆ- ಆದರ ಮೇಲೆಲ್ಲಾ ಅವನು ಉಪಯೋಗಿಸುವ ನಾನಾಬಣ್ಣಗಳ ಗುರುತುಗಳು ಕಾಣುತ್ತಿವೆ- ಕೆಂಪು ಅಂಚಿನ ಪಂಚೆಯನ್ನು ಬಂಗಾಳಿಗಳ ರೀತಿಯಲ್ಲಿ ಕಚ್ಚೆ ಹಾಕಿ ಉಟ್ಟಿದ್ದಾನೆ. ಎಡಗೈಯಲ್ಲಿ ಹಚ್ಚಿದ ಸಿಗರೇಟು ಇದೆ- "ಗೋಣಿ"ಯಮೇಲೆ ಅವನು ಎಳೆದಿರುವ ಪ್ರಾರಂಭದ ಕೆಲವು ರೇಖೆಗಳು ಕಾಣುತ್ತಿವೆ.

ಗಿರಿ— (ಚಿತ್ರಿಸುವುದನ್ನು ನಿಲ್ಲಿಸಿ, ಸಿಗರೇಟನ್ನು ಬಾಯಿಗಿಟ್ಟು ಕೊಂಡು; ಹಾಗೆಯೇ ಚಂಪಳನ್ನು ದಿಟ್ಟಿಸಿ ನೋಡಿ- ಪುನಃ ಸಿಗರೇಟನ್ನು ಕೈಗೆ ತೆಗೆದುಕೊಂಡು, ಹೊಗೆಯನ್ನು ತುದಿ ಬಾಯಿಂದ ಉಗುಳಿ) ಚಂಪಾ—

ಚಂಪ— ಏನು ?

ಹೀಗೆ ಆಡಿಸುತ್ತ ಒಂದೆರಡು ಕ್ಷಣ ಚಂಪಳನ್ನು ದಿಟ್ಟಿಸಿ) ಎಲ್ಲಿ, ತಲೆಯನ್ನು ಸ್ವಲ್ಪ ಮೇಲಕ್ಕೆತ್ತು.

ಚಂಪ— (ತಲೆಯನ್ನು ಎತ್ತಿ) ಇಷ್ಟು ಸಾಕೋ ?

ಗಿರಿ— ಇನ್ನೂ ಸ್ವಲ್ಪ.... ಸ್ವ..ಲ್ಪ..ಸ್ವಲ್ಪ.. ಹುಂ! ಎಲ್ಲಿ, ಈಗ ಸ್ವಲ್ಪ ಹಿಂದಕ್ಕೆ ಒರಗಿಕೋ-ಕೊರಳು-ಗಲ್ಲ ಕಾಣೋ ಹಾಗೆ (ಅವಳು ಹಾಗೆಯೇ ಮಾಡಲು) ಹಾ! ಅದೀಗ ಸರಿ! ಸೊಗಸು!..ಸೊಗಸು!!

ಚಂಪ— ಅಬ್ಬ!-ಇದೆಷ್ಟೋ ವಾಸಿ ಮೊದಲಿಗಿಂತ! (ಗಿರಿಯು ಅವಳನ್ನು ಕ್ಷಣಕ್ಷಣಕ್ಕೆ ನೋಡುತ್ತ ರೇಖೆಗಳನ್ನೆಳೆಯುವನು. ಒಂದು ನಿಮಿಷ ನಿಶ್ಶಬ್ದವಾಗಿರುವುದು. ಆ ಮೇಲೆ)

ಚಂಪ- ಸರಿಯಾಯ್ತು ಬಿಡಿ!....ನೀವೇ ಕಟ್ಟಿದಿರಿ- ನನ್ನ ಮೈ ಕೈ ಆಡಿಸದ ಹಾಗೆ!

ಗಿರಿ— ಇವತ್ತು, ನಿನ್ನ ನಿಲುವಿನ ಭಂಗಿ ಚೆನ್ನಾಗಿಲ್ಲ (ತಲೆ ಅಲ್ಲಾಡಿಸುತ್ತ) ಊ ಹುಂ! .... ಏನೇನೂ ಚೆನ್ನಾಗಿಲ್ಲ!.. ತೀ..ರ ಸಾಧಾರಣವಾಗಿದೆ!

ಚಂಪ— ಸರಿಯಾಯ್ತು ಬಿಡಿ! .. ನೀವೇ ಕಟ್ಟಿದಿರಿ- ನನ್ನ ಮೈ ಕೈ ಆಡಿಸದ ಹಾಗೆ! .... ನಿಮಗೆ ಹೇಗೆ ಬೇಕೋ ಹಾಗೆ ನಿಲ್ಲಿಸಿ ಕಟ್ಟಿದಿರಿ- ಈಗ ನೀವೇ ಚೆನ್ನಾಗಿಲ್ಲಾಂತೀರಿ- ನಾನೇನು ಮಾಡಲಿ ?

ಗಿರಿ— ಕಟ್ಟಿರೋದೇನೋ ಸರಿ; ಆದರೆ ನಿಲುವು ಚೆನ್ನಾಗಿಲ್ಲ.

ಚಂಪ— ಅಂದರೆ ?

ಗಿರಿ— (ಪುನಃ ಸಿಗರೇಟನ್ನು ಸೇದುತ್ತ- ತಲೆಯನ್ನು ಹಾಗೆ

ಚಂಪ— (ಆಯಾಸ ಬೇಸರ ಬೆರೆತ ದನಿಯಲ್ಲಿ) ಅಯ್ಯೋ!

ಗಿರಿ— (ಚಿತ್ರಿಸುವುದನ್ನು ನಿಲ್ಲಿಸಿ ಅವಳ ಕಡೆ ತಿರುಗಿ) ಯಾಕೆ ಚಂಪಾ!

ಚಂಪ— ತೂಕಡಿಕೆ ಬರುತ್ತಿದೆ...."

ಗಿರಿ— ಅರರೆ! ಎಲ್ಲಾದರೂ ನಿದ್ದೇ ಹೋಗಿಬಿಟ್ಟೀಯ!.. ಇನ್ನು ಸ್ವಲ್ಪ ಇದೆ.... ಎಲ್ಲಿ, ನಿನ್ನ ತಲೇನ ಸ್ವಲ್ಪ ಎಡಕ್ಕೆ.. ಸ್ವಲ್ಪ.. ಹಾ! ಸಾಕು ಸಾಕು.

ಚಂಪ— ಸ್ವಲ್ಪ ತಗ್ಗಿಸಿಕೊಂಡರಾಗದೆ?.. ಕುತ್ತಿಗೆ ಬಹಳ ನೋಯುತ್ತಿದೆ.

ಗಿರಿ— ಇಲ್ಲ- ಇಲ್ಲ! ಈಗ ಬಹಾ..ಳ ಸೊಗಸಾಗಿದೆ! ಸ್ವಲ್ಪ ಹಾಗೇ ಇರು.

ಚಂಪ— (ಯಾತನೆಯ ದನಿಯಲ್ಲಿ) ಅಮ್ಮಯ್ಯಾ! ಈ ಹಾಳು ಸರಪಳಿ ಬೇರೆ ನನ್ನ ಕೊಡೇನ ತುಂಡು ಮಾಡ್ತಾ ಇದೆ!

ಗಿರಿ— (ನಗುತ್ತಾ) ಯಾರೆ ಅವಳು ಅಮ್ಮಯ್ಯ?

ಚಂಪ— ಯಾರೋ! ಸದ್ಯ ಬೇಗ ಮುಗಿಸಿರಿ! ಬದುಕ್ತೇನು!

ಗಿರಿ— ಇನ್ನೇನು ಆಗಿಹೋಯ್ತು (ಎಂದು ಪುನಃ ಚಿತ್ರಿಸ ತೊಡಗುವನು. ಸ್ವಲ್ಪ ಕಾಲ ನೀರವವಾಗಿರುವುದು.)

ಚಂಪ— (ಮುಗುಳುನಗೆನಗುತ್ತ)... ಇಲ್ಲಿ ನೋಡಿ,

ಗಿರಿ— (ತಲೆ ಎತ್ತಿ– ಬರೆಯುವುದನ್ನು ನಿಲ್ಲಿಸಿ) ಏನು?

ಚಂಪ— ನನ್ನನ್ನ ನೀವು– ಏನೂಂತ ತಿಳಿದುಕೊಂಡಿದ್ದೀರಿ?

ಗಿರಿ— ಏನೂಂತಲೆ? ಏನೆಂದು ಹೇಳಲಿ ಚಂಪಾ? ಯಾವುದೋ ಜನ್ಮದ ಕರ್ಮದ ಫಲವಾಗಿ ಈ ಕಲೆಯ ನಂದಾದೀಪ ನನ್ನ ಹೃದಯದಲ್ಲಿ ನೆಲಸಿತು– ಆದರೆ ಒಂದುದಿನ ದೊಡ್ಡ ಬಿರುಗಾಳಿ ಬೀಸಿ– ನನ್ನೆದೆಯ ನಂದಾದೀಪ ಆರಿಹೋಯ್ತು– ನನ್ನ ಹೃದಯ ಬಹಳ ಕತ್ತಲಾಯಿತು ಚಂಪಾ– ನಾನೂ ನನ್ನ ಕಲೆಯೂ ನಿರ್ನಾಮವಾಗುವ ಕಾಲಬಂದಿತ್ತು! ಆದರೆ ಕಲಾದೇವಿ ನನ್ನ ಕೈಬಿಡಲಿಲ್ಲ– ಪುನಃ ನನ್ನೆದೆಯಲ್ಲಿ ದೀವಿಗೆಯನ್ನು ಹಚ್ಚಿದಳು– ಚಂಪಾ! ಇಂದು ನೀನು ಆ ದೀವಿಗೆಗೆ ಅಕ್ಷಯವಾದ ಪರಿಮಳ ತೈಲ!

ಚಂಪ— ಇದೆಲ್ಲಾ ಬರೀ ಬಾಯಿ ಮಾತೂ ಅನ್ನಿ! (ಎಂದು ಮೆಲುನಗೆ ನಗುವಳು)

ಗಿರಿ— ಬಾಯಿಮಾತಲ್ಲ ಇದು ಚಂಪಾ– ಹೃದಯದ ಮಾತು–

ಚಂಪ— ಎಲ್ಲಾ ಸುಳ್ಳು!– ನಾನಂಬೋಲ್ಲ!

ಗಿರಿ— ಏಕೆ?

ಚಂಪ— ಏಕೆ?– ನೋಡಿ! ನಿತ್ಯವೂ ನನ್ನ ಹೀಗೆ ಸರಪಳಿಯಿಂದ ಬಿಗೀತೀರಲ್ಲ– ನನ್ನ ಮೈ ಏನಾಗಬೇಕು?

ಗಿರಿ— ನನ್ನ ಚಿತ್ರಗಳಿಗಾಗಿ ಚಂಪ,– ಅಷ್ಟೆ.

ಚಂಪ— ನಿಮ್ಮ ಹೆಂಡತೀನ್ನೂ ಹೀಗೇ ಬಿಗೀತಿದ್ದಿರಾ?

ಗಿರಿ— ಹೌದು; ಹೀಗೇ ಬಿಗೀತಿದ್ದೆ.

ಚಂಪ— ನಾನು ಕಂಡ ಹಾಗೇ ನೀವು ಬರಿ ಈ ತರಹಾ ಚಿತ್ರಗಳನ್ನೇ ಬರೀತಿದ್ದೀರಲ್ಲ!– ಹೆಂಗುಸನ್ನ ಸರಪಳೀಲಿ ಬಿಗಿದಿರೋ ಹಾಗೆ! ಇಂಥಾ ಚಿತ್ರಗಳು ಹೆಚ್ಚಾಗಿ ಮಾರಾಟವಾಗುತ್ತವೆಯೇ?

ಗಿರಿ— ಇಲ್ಲ.

ಚಂಪ— ಹಾಗಾದರೆ ಯಾಕೆ ಅಂಥಾದ್ದನ್ನ ಬರೀತೀರಿ?

ಗಿರಿ— ನನಗೆ ಅದೊಂದು ಹುಚ್ಚು ಹಿಡಿದು ಹೋಗಿದೆ ಚಂಪ! ಈ ಹುಚ್ಚಿನಲ್ಲಿ ಬಿಗಿದು ಬಂಧಿಸಲ್ಪಟ್ಟ ಹೆಂಗಸು ನನ್ನ ಕಣ್ಣಿಗೆ ಬಲು ಸೊಗಸಾಗಿ ಕಾಣುತ್ತಾಳೆ!– ಆ ಸೊಗಸಿನ ಬಗೆಬಗೆಯ ಭಂಗಿಗಳನ್ನು ನನ್ನ ಚಿತ್ರಗಳಲ್ಲಿ ಶಾಶ್ವತ ಮಾಡುತ್ತಿದ್ದೇನೆ ಅಷ್ಟೆ.

ಚಂಪ— ಹೆಂಗಸರು, ಅಬಲೆಯರು–ನಿಸ್ಸಹಾಯರು ಎಂದೆ?– ನಿಮಗೆ ಇಂಥಾ ಭಾವನೆ?

ಗಿರಿ— ಛೆ! ಛೆ!!– ಎಲ್ಲಾದರೂ ಉಂಟೆ? ಅಬಲೆಯರು!– ನಿಸ್ಸಹಾಯರು!!– ಪಾಪ! ಹಾಗೆನ್ನಿಸಿಕೊಂಡೆ ಅವರ ಹಾವಳಿ ತಡೆಯದಾಗಿದೆ! ನಿಜವಾಗಿ ಚಂಪ!– ಅವರ ದೌರ್ಬಲ್ಯ– ಅವರ ನಿಸ್ಸಹಾಯತೆ ಶುದ್ಧ ಮೋಸ! ತತ್ತರ ಬಡಿಸುವ ಮೋಸ!

ಚಂಪ— ಹಾಗಾದರೆ ಅವರ ಬಂಧನದಲ್ಲಿ ನಿಮಗೇಕೆ ಇಷ್ಟು ಆಸಕ್ತಿ?

ಗಿರಿ— ಏಕೆ ಎಂದು ನಾನು ಹೇಳಲಾರೆ ಚಂಪ; ಅಂತೂ ನನ್ನ ಕಣ್ಣಿಗೆ ಬಂಧಿಸಲ್ಪಟ್ಟ ಹೆಣ್ಣು ಬಲು ಚೆನ್ನಾಗಿ ಕಾಣುತ್ತಾಳೆ. ಎಷ್ಟೆಷ್ಟು ಬಿಗಿದು ಕಟ್ಟಿದರೆ ಅಷ್ಟಷ್ಟೂ ಹೆಚ್ಚುತ್ತೆ ಅವಳ ಸೌಂದರ್ಯ! ತೀರ ಸಾಧಾರಣ ಹೆಂಗುಸೂ ಮೋಹಿಸುವಂತಾಗುತ್ತಾಳೆ– ಸರಪಳಿ ಬಂಧನದಿಂದ! ಅಂಥಾದ್ದರಲ್ಲಿ ರೂಪಸಿಯ ಲಾವಣ್ಯವು ಬಂಧನದಲ್ಲಿ ಇನ್ನು ಹೇಗೆ ಕಂಡೀತು!

ಚಂಪ— ಅದನ್ನು ನೀವೇ ಕಾಣಬೇಕು!

ಗಿರಿ— ನಿಜ ನಾನೇ ಕಾಣುತ್ತಿದ್ದೇನೆ. (ಚಿತ್ರಿಸತೊಡಗುವನು–ಸ್ವಲ್ಪ ಹೊತ್ತು ನಿಶ್ಶಬ್ದವಾಗಿರುವುದು) ಚಂಪ, ಎಡದ ಮಂಡೀನ ಸ್ವಲ್ಪ ಮೇಲಕ್ಕೆತ್ತು (ಅವಳು ಎತ್ತಲು) ಹಾ!–ಸಾಕು.

ಚಂಪ— ನೀವು ನಿಮ್ಮ ಹೆಂಡ್ತೀನ ಹೀಗೇ ಕಟ್ಟಿ ಚಿತ್ರಿಸಿದ ಮೇಲೆ ....

ಗಿರಿ— ಹುಂ....

ಚಂಪ— ....ಚಿತ್ರಿಸಿದ ಮೇಲೆ ಚಿತ್ರ ಹಿಂಸೆ ಮಾಡುತ್ತಿದ್ದಿರಂತೆ– ನಿಜವೆ?

ಗಿರಿ— ಹೌದು-ಹೌದು; ಚಿತ್ರಹಿಂಸೆ!– ವಿಚಿತ್ರ ಹಿಂಸೆ!! (ಸ್ವಲ್ಪ ಗಂಭೀರವಾಗಿ ಅವಳನ್ನೇ ದಿಟ್ಟಿಸಿ ನೋಡುತ್ತ) ಚಂಪಾ, ನಿನಗೆ ಯಾರು ಹೇಳಿದೋರು ಇದನ್ನೆಲ್ಲಾ?

ಚಂಪ— ನನಗೆ ರಾಜ ಎಲ್ಲಾ ಹೇಳಿದ.

ಗಿರಿ— (ಬರೆಯುವುದನ್ನು ನಿಲ್ಲಿಸಿ–ಸೊಂಟದ ಮೇಲೆ ಕೈಗಳನ್ನಿಟ್ಟು) ಚಂಪ!– ನೀನು ಸ್ವಲ್ಪ ಹದ್ದು ಮೀರುತ್ತಿದ್ದೀಂತ ಕಾಣುತ್ತೆ!

ಚಂಪ— ಏನು ಹಾಗೆಂದರೆ?

ಗಿರಿ— ರಾಜನ ಹತ್ತಿರ ಏನು ಅಷ್ಟು ಏಕಾಂತ ನಿನಗೆ?–ಅವನು ಇನ್ನೂ ಏನೇನು ಹೇಳಿದ?

ಚಂಪ— ಏನೋ ಕೆಟ್ಟ ಅನುಮಾನ ನಿಮಗೆ!–, ಪಾ–ಪ, ನೀವೂಂದ್ರೆ ರಾಜನಿಗೆ ಎಷ್ಟು ಗೌರವ– ಭಕ್ತಿ.

ಗಿರಿ— ನೀನೂಂದ್ರೆ?

ಚಂಪ— ನಿಮಗೆ ಏನೋ ಹೊಸ ಹುಚ್ಚು ಹಿಡಿದಹಾಗಿದೆ!

ಗಿರಿ— ಇದು ಪ್ರಪಂಚದಲ್ಲಿ ಬಹಳ ಹಳೆಯ ಹುಚ್ಚು ಚಂಪಾ! ನಾನು ಮೊದಲು ಹೇಳಿದೆನಲ್ಲಾ ಆ ಹುಚ್ಚು ಈ ಹುಚ್ಚು ಅವಳಿಜವಳಿ! ಇವೆರಡಕ್ಕೂ ಮೂಲ ಒಂದೇ.

ಚಂಪ— ಅದ್ಯಾವುದು?

ಗಿರಿ— ಹೆಣ್ಣು!

ಚಂಪ— ಇವತ್ತು ನಿಮ್ಮ ಮಾತು ಒಂದೂ ಅರ್ಥವಾಗೊಲ್ಲ; ಶಾಲ್ಲ ಒಗಟೆ.

ಗಿರಿ— ಹೆಂಗಸಿಗಿಂತ ಕಷ್ಟವಾದ ಒಗಟೆಯೇ?

ಚಂಪ— ಏನೋ, ನನಗೊಂದೂ ಗೊತ್ತಿಲ್ಲ; ಸದ್ಯ ಬೇಗ ಮುಗಿಸಿ– ನನ್ನ ಕಾಲು ಕಡಿದುಬೀಳುವಂತಿದೆ (ಎಂದು ಮಂಡಿ ಯನ್ನು ಸ್ವಲ್ಪ ಕೆಳಗಿಳಿಸುವಳು).

ಗಿರಿ— ಇದೋ– ಸ್ವಲ್ಪ ನಿಧಾನಿಸು– ಮುಗಿಸಿಬಿಟ್ಟೆ; ಕಾಲು ಅಲುಗಿಸಬೇಡ– ನಾನು ಈಗ ಅದೇ ಭಾಗವನ್ನೇ ಬರೀತಾ ಇರೋದು.

ಚಂಪ— ಅಯ್ಯೋ – ನಿಂತೂ ನಿಂತೂ ಸಾಕಾಗಿದೆ ಮಲ್ಲಾಂದ್ರೇ.

ಗಿರಿ— ಆಗಿಹೋಯ್ತು!– ಇನ್ನು ಒಂದೇ ನಿಮಿಷ! – ಎಲ್ಲಿ ನಿನ್ನ ಬಲಹೆಜ್ಜೆಯನ್ನು ಸ್ವಲ್ಪ ಬಲಕ್ಕೆ ಸರಿಸು – ನೋಡಿದೆಯಾ, ಎಡದ ಮಂಡಿ ತಗ್ಗಿಸಿಬಿಟ್ಟೆ – ಮೇಲಕ್ಕೆ – ಇನ್ನು ಸ್ವಲ್ಪ; ಹುಂ— ಸಾಕು –

ಚಂಪ— ಇದೇನೂಂದ್ರೆ, ಬಟ್ಟೆ ಸರಿಯಾಗಿ ನನ್ನ ಮೈ ಮುಚ್ಚಿಲ್ಲ–

ಗಿರಿ— ಮುಚ್ಚದೆ ಇದ್ದರೆ ಏನಾಯ್ತು!

ಚಂಪ— ಚನ್ನಾ–ಯ್ತು! ನಾಚಿಕೆಗೇಡು!!

ಗಿರಿ— ಮತ್ತೆ?— ರೂಪಸಿ ಅಬಲೆಯಲ್ಲ – ಪ್ರಬಲೆ ಎಂದು ತಿಳಿಯುವುದು ಹೇಗೆ!

ಚಂಪ— ತಿಳಿದು ಏನಾಗಬೇಕು?

ಗಿರಿ— ಹಾ, ಚಂಪಾ ಅದರಲ್ಲಿದೆ ಸರಪಳಿಬಂಧನದ ಗುಟ್ಟು!

ಚಂಪ— ಚೀ – ನಿಮ್ಮ ಹಾಳುಗುಟ್ಟಿಗೆ – ನಾನು ರಟ್ಟಾಗ ಬೇಕೂ?

ಗಿರಿ— (ಅವಳ ಮಾತನ್ನು ಗಮನಿಸದೆ) – ಎಲ್ಲಿ ಮುಖದಲ್ಲಿ ಬಂಧನದ ಯಾತನೆ – ಆಕ್ರೋಶ ಕಾಣಲಿ– ಕಾಲ ಬೆರಳುಗಳನ್ನು ಅದುಮಿ ಮಡಿಸಿಕೋ!

ಚಂಪ— ನೀವು ಮೊದಲು ನನ್ನ ಮೈಮೇಲೆ ಬಟ್ಟೆ ಸರಿಮಾಡಿ!

ಗಿರಿ— ಊಹುಂ–ಈಗ ನೀನು ಹೇಗೆ ಕಾಣುತ್ತೀಯಾ ಹೇಳಲೆ?

ಚಂಪ— ಹೇಗೆ!

ಗಿರಿ— ಎಲೆಗಳ ಮರೆಯಿಂದ ಇಣಿಕಿ ನೋಡುತ್ತಿರುವ– ಚೆನ್ನಾಗಿ ಮಾಗಿ ರಸಪೂರ್ಣವಾದ ಕಿತ್ತಿಲೆ ಹಣ್ಣಿನಂತೆ ಕಾಣುತ್ತೀಯೆ! (ಎಂದು ಮೆಚ್ಚುಗೆಯಿಂದ ಅವಳನ್ನೇ ನೋಡುತ್ತ ಹಲ್ಲು ಕಿರಿ ಯುತ್ತಾನೆ)

ಚಂಪ— ಹೀಗೆ ಇನ್ನೂ ಸ್ವಲ್ಪ ಹೊತ್ತು ನಿಂತಿದ್ದರೆ ಜಜ್ಜಿದ ಹುಣಿಸೆಹಣ್ಣಿನಂತಾಗುತ್ತೇನೆ!– ಅದು ಗೊತ್ತೇನು?– ಬೇಗ ಮುಗಿಸಿ–ಅಥವಾ ಎಷ್ಟಾಗಿದೆಯೋ ಅಲ್ಲಿಗೇ ನಿಲ್ಲಿಸಿ.

ಗಿರಿ— ಆಗಲಿ–ಚಂಪ; ಇವತ್ತು ಇಷ್ಟಕ್ಕೇ ಸಾಕು–(ಎಂದು ಎದ್ದು ನಗುತ್ತ ಅವಳ ಸಮೀಪಕ್ಕೆ ನಿದಾನವಾಗಿ ಹೋಗುತ್ತಾನೆ).

ಚಂಪ— ಅವನ (ಇಂಗಿತವನ್ನು ತಿಳಿದು) ಬೇಡ!–ಬೇಡ!! ನನ್ನ ಮೈ ನುಚ್ಚುನುರಿಯಾಗಿದೆ! (ಅವನು ಅವಳ ಮೇಲೆ ಕೈ ಹಾಕಲು ಹೋಗುತ್ತಾನೆ.) ಇದೇನೂಂದ್ರೆ! ಇಷ್ಟು ಹಿಂಸೆ?– ಕೈ ಕಾಲು ಆಡಿಸದ ಹಾಗೆ ಕಟ್ಟಿ?

ಗಿರಿ— ಓ! ನಿಜ ಮರೆತೇಬಿಟ್ಟಿದ್ದೆ ಚಂಪ–ನನಗೆ ಆ ಎಲೆಯ ಮರೆ ಕಿತ್ತಿಲೆ ಹಣ್ಣಿನ ಜ್ಞಾನ! ಇದೋ ಬಿಚ್ಚಿದೆ–(ಎಂದು ಬಿಚ್ಚಿ ಅವಳ ಹೆಗಲ ಮೇಲೆ ಕೈಹಾಕುವನು– ಅಷ್ಟು ಹೊತ್ತಿಗೆ ಹೊರಗೆ ಏನೋ ಸದ್ದಾದಂತಾಗುವುದು.)

ಚಂಪ— (ಸದ್ದನ್ನು ಆಲೈಸಿ) ಸ್ವಲ್ಪ ಸುಮ್ಮನಿರಿ–ಗಂಭೀರ ವಾಗಿ! ಯಾರಾದರೂ ಬರೋ ಹೊತ್ತು! ಹೆದರಿಕೆ ನಾಚಿಕೆ ತೀರಾ ಬಿಟ್ಟರೆ ಹೇಗೆ! (ಪುನಃ ಆಲಿಸಿ) ಕೇಳಿತೆ? ಬಾಗಿಲು ತೆರೆದ ಸದ್ದಾಯಿತು!....ಬಹುಶಃ ರಾಜ ಒಂದಂತೆ ಕಾಣುತ್ತೆ.

ಗಿರಿ— (ಬೇಸರದಿಂದ ತೋಳುಗಳನ್ನು ಒದರುತ್ತ) ಹುಂ! ಹಾಳು ಏನಾದರೂ ಒಂದು ವಿಘ್ನ!

(ಹೊರಗೆ ಯಾರೋ ಕೂಗಿದ ಸದ್ದಾಗುವುದು)

ಚಂಪ— ರಾಜನ ಧ್ವನಿಯಲ್ಲಾಂದ್ರೇ– ಇನ್ಯಾರೋಂತ ಕಾಣುತ್ತೆ. (ಗಿರಿಯು ಅಂಗಳದ ಹೊರಬಾಗಿಲಲ್ಲಿ ಕಣ್ಮರೆಯಾಗು ವನು. ಚಂಪಳು ತನ್ನನ್ನು ಬಿಗಿದಿದ್ದ ಸರಪಳಿಗಳನ್ನೆಲ್ಲಾ ಒಂದು ಕಡೆಗೆ ಎಸೆದು, ಗಿರಿ ಹೋದ ಕಡೆಯೇ ದಿಟ್ಟಿಸಿ ನೋಡುತ್ತ ಮಹಡಿಯ ಮೆಟ್ಟಲುಗಳನ್ನು ಹತ್ತಿ ಹೋಗುವಳು. ಗಿರಿಯು ಕಿಟ್ಟಣ್ಣ ಮತ್ತು ರೋಹಿಣಿಯರೊಡನೆ ಕುಶಲಪ್ರಶ್ನೆಗಳನ್ನು ಮಾಡುತ್ತ ಪ್ರವೇಶಿಸುವನು. ರೋಹಿಣಿಯ ಮುಖದಲ್ಲಿ ಒಳ್ಳೆಯ ತಿಳುವಳಿಕೆಯ ಕಳೆ ಇದ್ದರೂ ಅದರಲ್ಲಿ ಯಾವುದೋ ಖಿನ್ನತೆ ಬೆರೆತಿದೆ. ಮಾಸಿದ ಬಿಳಿಯ ಸೀರೆಯನ್ನುಟ್ಟಿದ್ದಾಳೆ. ಎರಡು ಕೈಗಳಲ್ಲೂ ಒಂದೊಂದು ಗಾಜಿನ ಬಳೆ. ಇನ್ನೇನೂ ಒಡವೆಯಿಲ್ಲ. ಜಡೆ ಹೆಣೆದುಕೊಂಡಿದ್ದಾಳೆ. ಏನೋ ಭಯಗೊಂಡಂತೆ ಕಾಣುತ್ತಾಳೆ. ಕಿಟ್ಟಣ್ಣನು ಸ್ವಲ್ಪ ಸ್ಥೂಲಕಾಯ– ಬಿಳೀ ಜುಬ್ಬ– ಹೂವು ಅಂಚಿನ ಖಾದಿಧೋತ್ರ– ಗೀರಂಚಿನ ಪಂಚೆ– ತಲೆಗೆ ಖಾದಿ ತೋಪಿ– ಕಾಲಿಗೆ ಹಳ್ಳಿನಾಡಿನ ನಾಜೂಕಲ್ಲದ ಮೆಟ್ಟು– ಕೈಲಿ ಕೋಲು– ಅಲ್ಲಾದೊಣ್ಣೆ; ಇಷ್ಟು ಅವನ ಅಲಂಕಾರ–)

ಗಿರಿ— ಏನು ಕಿಟ್ಟಣ್ಣ, ಬಹಳ ಅಪರೂಪವಾಗಿ ಬಂದು ಬಿಟ್ಟೆ?

ಕಿಟ್ಟಣ್ಣ— ಹೌದಪ್ಪಾ, ಸ್ವಲ್ಪ ಅಪರೂಪವೇ; ಮನೇಲಿ··

ಗಿರಿ— ನಿನ್ನ ಹೆಂಡತಿ ಕ್ಷೇಮವಷ್ಟೆ?

ಕಿಟ್ಟಣ್ಣ— ಇಲ್ಲಪ್ಪಾ, ಅದಕ್ಕೇ ಬಂದದ್ದು ಇವತ್ತು.

ಗಿರಿ— ಓ, ಹಾಗೆಯೇ! ಏನು ವಿಚಾರ!– ಏನಾಗಿದೆ?

(ಕಿಟ್ಟಣ್ಣನೂ ರೋಹಿಣಿಯೂ ಸೋಫಾದಮೇಲೆ ಕುಳಿತು ಕೊಳ್ಳುವರು– ಗಿರಿ ನಾಚಿಕೊಂಡೇ ಮಾತನಾಡುವನು.)

ಕಿಟ್ಟಣ್ಣ— ನೋಡೂ.... (ಎಂದು ಅಲ್ಲಿಗೇ ನಿಲ್ಲಿಸುವನು)

ಗಿರಿ— ಅದೇನು ಇಷ್ಟು ಹಿಂಜರಿತದೀಯ?– ಹೇಳು.

ಕಿಟ್ಟಣ್ಣ— ನೋಡು ಗಿರಿ, ಕಳೆದ ಸುಗ್ಗೀಲಿ ಅವಳು ಹಾಸಿಗೆ ಹಿಡಿದು ಮಲಗಿದಳು, ಇನ್ನೂ ಹಾಸಿಗೆ ಬಿಟ್ಟಿಲ್ಲ.

ಗಿರಿ— ಅಯ್ಯೋ ಗ್ರಹಚಾರವೆ!- ಏನಾಗಿದೆ ಅವಳಿಗೆ?

ಕಿಟ್ಟಣ್ಣ— ಏನೋ ಸೊಂಕಿನಿಂದ ಬಂದ ರೋಗವಂತೆ.

ಗಿರಿ-- ಕ್ಷಯ-ಗಿಯಾನೋ?

ಕಿಟ್ಟಣ್ಣ— ಏನೋ ಹಾಗಂತಾರಪ್ಪ.

ಗಿರಿ— ಅಲ್ಲಾ ಕಿಟ್ಟಣ್ಣಾ, ನಾನು ಬೇರೆ ಅವಳಿಗೆ ಆ ಕಾಯಿಲೆ ಬರುತ್ತೇಂತ ಕನಸಿನಲ್ಲೂ ತಿಳಿದಿರಲಿಲ್ಲ !- ಏನು ಗ್ರಹಚಾರ !

ಕಿಟ್ಟಣ್ಣ— ನಾನೂ ತಿಳಿದಿರಲಿಲ್ಲ ಗಿರಿ; ಗಟ್ಟಿಮುಟ್ಟಾಗಿದ್ದಳು- ಒಳ್ಳೇ ಗಾಳೀ ಬಿಸಿಲಲ್ಲಿ ಓಡಾಡಿಕೊಂಡು- ನಮ್ಮ ಗ್ರಹಚಾರ- ಈಗ ಹೀಗಾಗಿ ಬಿಟ್ಟಿದ್ದಾಳೆ- ಈಗಿನ ನಮ್ಮ ಕಷ್ಟ ಹೇಳಿ ತೀರದು ಗಿರಿ;-ನಾಯಿ ಪಾಡು !.... ಅದಕ್ಕೇ.... ಇವತ್ತು ಇಲ್ಲೀಗೆ ಬಂದೆ;.... ಇದೇ..ಈ.....ರೋಹಿಣೀ ವಿಚಾರ .... ನಿನ್ನ ಹತ್ತಿರ.... ಮಾತಾಡೋಕಾಂತ.

ಗಿರಿ— (ಸ್ವಲ್ಪ ಗಂಭೀರವಾಗಿ) ಹುಮ್-ಮ್-ಮ್-ಮ್ !

ಕಿಟ್ಟಣ್ಣ— (ತಡೆ ತಡೆದು) ನೋಡು ಗಿರೀ, ನಿನ್ನ.... ಹೆಂಡತಿ ಸತ್ತು.... ಏಳುವರ್ಷವಾಯ್ತು.... ಆಗ ಕರೆದು ಕೊಂಡು ಹೋದೆ ಈ ಮಗೂನ. ಏಳುವರ್ಷ ನಮ್ಮ ಮನೆಯ ಗಂಜಿ ಅಂಬಲಿ ಕುಡಿದುಕೊಂಡು ಬೆಳೆದಳು. ಇವಳು ಮಗುವಾಗಿ ದ್ದಾಗ ಇದ್ದಷ್ಟು ತೊಂದರೆ.... ಈಗ ಇಲ್ಲಾ ಅನ್ನು....ಆದರೆ ಈಗ ಕಾಲ ಬದಲಾಯಿಸಿದೆ.... ರೋಹಿಣಿಗೆ ಈಗ ಹದಿನಾಲ್ಕು ವರ್ಷ.... ಇನ್ಯಾವ ವಿಷಯದಲ್ಲೂ ಅವಳು.... ನಮಗೆ ಸ್ವಲ್ಪವೂ ಭಾರವಲ್ಲ- ಅನ್ನಾ ಬಟ್ಟೆ ನಮಗಾದ್ದೇ ಅವಳಿಗೂ ಆಗುತ್ತೆ.... ನನ್ನ ತಂಗೀಮಗಳು ನಮಗೇನೂ ಹೊರಗಿನವಳಲ್ಲ. ಈ ಏಳುವರ್ಷಗಳಲ್ಲಿ ನಿನ್ನ ಮಗಳು ಎಷ್ಟೋ ಮನೆಗೆಲಸಗಳನ್ನು ಕಲಿತಿದ್ದಾಳೆ. ಒಂದು ವರ್ಷದಿಂದ ಈಚೆಗಂತೂ ಅವಳ ಸಹಾಯ ನಮಗೆ ಅಷ್ಟಿಷ್ಟಲ್ಲ- ಆದರೆ ಹಾಗೇಂತ ಹದಿನಾಲ್ಕುವರ್ಷದ ಹೆಣ್ಣನ್ನು ಸುಮ್ಮನೇ ಮನೇಲಿ ಇಟ್ಟುಕೊಂಡಿರೋಕಾಗುತ್ತೆಯೆ ಗಿರಿ?.. ಅದ ಇವತ್ತು.... ನಿನ್ನ.... ನೋಡೋಕೆ ಬಂದೆ; ರೋಹಿಣಿ ಎಷ್ಟಾದರೂ ನಿನ್ನ..

ಗಿರಿ— (ಕಿಟ್ಟಣ್ಣನ ಮನೋಗತವನ್ನು ತಿಳಿದು- ಅಷ್ಟರಲ್ಲೇ ಬಾಯಿ ಹಾಕಿ) ನನಗೆ ಏನೂ ತೋಚಿಲ್ಲ- ಈ ವಿಷಯದಲ್ಲಿ. ಏಳು ವರ್ಷದ ಹಿಂದೆ ಎಲ್ಲಾ ಕಳೀತು ಎಂದು ಮಾಡಿದ್ದೆ. ಈಗ- ಹೀಗೆ- ಏಕಾಏಕಿ ಹುಡುಗೀನ ಕರೆದುಕೊಂಡು ಬಂದರೆ ನಾನು ಏನು ಹೇಳಲಿ?

ಕಿಟ್ಟಣ್ಣ— ಯಾಕೆ ಹುಡುಗೀ ಅಂತೀಯ? ರೋಹಿಣಿ ನ್ನೋಕೆ ಬಾಯಿ ಬರೊಲ್ಲವೆ? – ನಿನ್ನ ಮಗಳಲ್ಲವೆ ರೋಹಿಣಿ?

ಗಿರಿ— ಆ ಮಾತೆಲ್ಲಾ ಬೇಡ ಈಗ ಕಿಟ್ಟಣ್ಣ!.... ಅವಳೇನೋ ನನ್ನ ಮಗಳು ನಿಜ, ಒಪ್ಕೋಣ! ಅದೇ ಎದುರೋದು ಫಜೀತಿ!

ಕಿಟ್ಟಣ್ಣ— ಇದೇನೋ ವಿಚಿತ್ರವಾಗಿ ಮಾತಾಡ್ತೀಯಲ್ಲ ಗಿರಿ! ಯಾವತ್ತಿನಿಂದ ಹೀಗಾದೆ?

ಗಿರಿ— ಏಳುವರ್ಷವಾಯ್ತು ಹೀಗಾಗಿ ! (ಮುಗುಳುನಗೆ ನಗುತ್ತಾನೆ) ಅವತ್ತು ನೀನು ಕರೆದುಕೊಂಡು ಹೋದೆಯಲ್ಲ ಅವಳನ್ನ- ಅವತ್ತೇ ನಾನು ಎಲ್-ಲ್ಲಾ ತೊಡೆದುಹಾಕಿಬಿಟ್ಟೆ!

ಕಿಟ್ಟಣ್ಣ— ಏನು ಎಲ್ಲ ತೊಡೆದು ಹಾಕಿದ್ದು?

ಗಿರಿ— ನಾನು ತಂದೆ- ಅವಳು ಮಗಳು ಅನ್ನೋದನ್ನ !

ಕಿಟ್ಟಣ್ಣ— ನಿನ್ನ ಬುದ್ಧಿ ನೆಟ್ಟಗಿಲ್ಲ- ಗಿರಿ !

ಗಿರಿ— ಹೌದು ಕಿಟ್ಟಣ್ಣ- ಏಳುವರ್ಷದ ಹಿಂದೆ ಅದು ಸ್ವಲ್ಪ ಡೊಂಕಾಯಿತು !- ಏಟು ತಗಲಿ.

ಕಿಟ್ಟಣ್ಣ— ಸರಿಯಪ್ಪ ! ಉದ್ಧಾರವಾದ ಹಾಗೇ ಆಯ್ತು !!

ಗಿರಿ— ಅಲ್ಲವೊ ಕಿಟ್ಟಣ್ಣ, ಏಳುವರ್ಷದ ಹಿಂದೆ ಕಿತ್ತುಹೋದ ದಾರಾನ ಇವತ್ತು ಮತ್ತೆ ಗಂಟು ಹಾಕೋಕೆ ನೋಡ್ತೀಯಲ್ಲಾ ಏನು ಹೇಳಲಿ ನಿನಗೆ !

ಕಿಟ್ಟಣ್ಣ— ಸರಿ! ಸರಿ! ಹೇಳೋದು ಕೇಳೋದು ಇನ್ನೇನೂ ಉಳಿದಿರೋ ಹಾಗೆ ಕಾಣೆ! (ಎಂದು ನೆಲವನ್ನೇ ನೋಡುತ್ತ ಯೋಚನಾಪರನಾಗುತ್ತಾನೆ. ಹಾಗೆಯೇ ನಿಧಾನವಾಗಿ ಪಕ್ಕಕ್ಕೆ ತಿರುಗಿ ರೋಹಿಣಿಯನ್ನು ನೋಡುತ್ತಾನೆ. ರೋಹಿಣಿ ಅವನನ್ನು ನೋಡುತ್ತಾಳೆ. ಅವಳ ಕಣ್ಣುಗಳಲ್ಲಿ ಯಾತನೆ- ದೈನ್ಯತೆ ಹೊಮ್ಮುತ್ತಿದೆ.)

ಗಿರಿ— ಏನು ಕಿಟ್ಟಣ್ಣೋರೇ- ಬಹಳ ಯೋಚನೆ ಮಾಡು ತ್ತಿರೋ ಹಾಗೆ ಕಾಣುತ್ತಲ್ಲಾ?

ಕಿಟ್ಟಣ್ಣ— ಯೋಚನೇ ಮಾಡುತ್ತಿದೆ! ನೀನು ನಿಜವಾಗಿಯೂ ಮನುಷ್ಯನೋ ಅಥವಾ ರೂಪದಲ್ಲಿ ಮಾತ್ರ ಮನುಷ್ಯನೋ- ಎಂದು !

ಗಿರಿ— ಹ-ಹ್ಹ-ಹ್ಹ-ಹ್ಹ-ಹ್ಹಾ !!!

ಕಿಟ್ಟಣ್ಣ— ಗಿರಿ,.... ನಾನು ಅವತ್ತು ಈ ಮಗೂನ ಕರೆದು ಕೊಂಡು ಹೋದೆನಲ್ಲಾ ಆಗ ನೀನು ಏನು ಭಾವಿಸಿಕೊಂಡೆ?

ಗಿರಿ— ನಿಜವಾಗಿ ಹೇಳಲೆ?

ಕಿಟ್ಟಣ್ಣ— ಹೇಳು-ನಿನಗೇನು ಹೆದರಿಕೆ?

ಗಿರಿ— ಕಿಟ್ಟಣ್ಣ ಬಹಳ ಉಪಕಾರಿ-ನನ್ನ ಮನೆಲಿದ್ದ ಮುಳ್ಳನ್ನ ತೆಗೆದುಕೊಂಡು ಹೋದಾಂತ- (ಎಂದು ಮತ್ತೆ ಹಲ್ಲುಕಿರಿದು ನಗುವನು)

ಕಿಟ್ಟಣ್ಣ— ಆಹಾ!- ಪಾಪೀ! ನಿನ್ನ ರೋಹಿಣಿ ನಿನಗೇ ಮುಳ್ಳಾದಳೇ!.... ಅಂದು ರೋಹಿಣಿ ತಾಯಿಯನ ಕಳೆದು ಕೊಂಡು ತಬ್ಬಲಿಯಾದಳು. (ರೋಹಿಣಿ ಮೆಲ್ಲಗೆ ಸೆರಗಿನ ತುದಿ ಯಿಂದ ಕಣ್ಣು ಒರೆಸಿಕೊಳ್ಳುವಳು) ನನಗೆ ನೋಡಿ ಸಂಕಟ ವಾಯಿತು-ನಿನ್ನ ಒಪ್ಪಿಗೇ ಮೇಲೆ ಕರೆದುಕೊಂಡು ಹೋಗಿ, ಮನೇ ಮಕ್ಕಳ ಜೊತೆಗೆ ಇದೂ ಒಂದೂಂತ ಸಾಕಿದೆ- ಅಷ್ಟೆ; ನಾನು ಅವಳನ್ನು ದಕ್ಕು ತೆಗೆದುಕೊಳ್ಳಲಿಲ್ಲ-ತಿಳಿಯಿತೆ?

ಗಿರಿ— ಈಗಲೂ ಅದಕ್ಕೆ ಕಾಲವೇನೂ ಮೀರಿಲ್ಲ. (ಎಂದು ನಗುವನು)

ಕಿಟ್ಟಣ್ಣ— ನಿನ್ನ ವಕ್ರಬುದ್ಧಿ ಮಾತು ಹಾಗಿರಲಿ.....ನಾನು ಕರೆದುಕೊಂಡು ಹೋಗಿ ಏಳು ವರ್ಷವಾಯಿತಲ್ಲಾ– ಈ ಏಳು ವರ್ಷದಲ್ಲಿ ಒಂದು ಕ್ಷಣವಾದರೂ–ಹೆತ್ತ ತಂದೆ–ನೀನು ಅವಳನ್ನ ಜ್ಞಾಪಿಸಿಕೊಂಡಿದ್ದೀಯಾ? ಅವಳು ಇದ್ದಾಳೆಯೋ ಸತ್ತಿದ್ದಾಳೆಯೋ ವಿಚಾರಿಸಿದೆಯಾ? ಮಗು ಸಂತೋಷಪಡಲಿ–ಎಂದು ಒಂದು ಕಿಲುಬು ಕಾಸನ್ನಾದರೂ ಕಳಿಸಿದೆಯಾ. ನಾವು ಆಗಾಗ ಹಾಸ್ಯವಾಗಿ ಮಾತಾಡಿಕೊಳ್ಳುತ್ತಿದ್ದೆವು–ಗಿರಿ ತನಗೆ ಒಬ್ಬಳು ಮಗಳಿದ್ದಾಳೇ ಅನ್ನೋದನ್ನೇ ಮರೆತಹಾಗೆ ಕಾಣುತ್ತೇಂತ!....”

ಗಿರಿ— ಅದೊಂದು ಮಾತು ನಿಜ ನೋಡು ಕಿಟ್ಟಣ್ಣ!

ಕಿಟ್ಟಣ್ಣ–ಏನು ನಾಚಿಕೆಯಿಲ್ಲದ ಮಾತನಾಡುತ್ತೀ–ಗಿರಿ! ನನಗೆ ನಾಚಿಕೆಯಾಗುತ್ತಪ್ಪ ನಿನ್ನ ಮಾತು ಕೇಳಿ– ಇದೇನು ಹುಡುಗಾಟಿಕೆಗೆ ಇಳಿದುಬಿಟ್ಟೆಯಲ್ಲ!....ಗಿರಿ, ರೋಹಿಣಿ ನನ್ನ ಮನೇಲಿ ಇರೋದರಿಂದ–ಅನ್ನಾ ಬಟ್ಟೆಗೆ ಭಾರ, ಅದಕ್ಕೇ ಇಲ್ಲಿಗೆ ಬಂದಿದ್ದೇನೇಂತ ತಿಳಕೋಬೇಡ: ಅವಳಿಂದ ನಮಗೆ ಎಷ್ಟೋ ಸಹಾಯ. ನಮ್ಮ ಅಂಬಲಿಯೋ ಗಂಜಿಯೋ ಚಿಂದಿ ಚೂರೋ ಅವಳಿಗೂ ಆಗುತ್ತೆ– ಅದನೂ ಇನ್ನುಮೇಲೆ ಅವಳ ಜವಾಬ್ದಾರಿ ನಿನಗೆ ಸೇರಿದ್ದು–ಅವಳು ಇಲ್ಲಿ ಇರೋದೇ ಸರಿ–ಯಾಕೇ ಅಂತೀಯೋ?–ಅದಕ್ಕೆ ಎರಡು ಕಾರಣ ಇದೆ ಒಂದು ಅವಳಿಗೆ ವಯಸ್ಸಾಗಿದೆ– ನಾವು ಬಡವರು– ಹಳ್ಳೀಲಿ ಜನರ ಬಾಯಿ ಕಟ್ಟೋಕೆ ಆಗೊಲ್ಲ– ಇನ್ನೊಂದು ನನ್ನ ಹೆಂಡತಿ ಕಾಯಿಲೆ. ಅದರದ್ದೇ ನನಗೆ ಹೆಚ್ಚು ಯೋಚನೆ.

ಗಿರಿ— ಅದೇನಪ್ಪ– ಅಂಥಾ ಯೋಚನೆ?

ಕಿಟ್ಟಣ್ಣ— ನೋಡು ನನ್ನ ಹೆಂಡತೀಗೆ ಕ್ಷಯ– ನೊಂಕು ಜಾಡ್ಯ. ನಾಳೆ ಇವಳಿಗೆ ಏನಾದರೂ ಆಯಿತಪ್ಪ– ಆಗ ನಾನು ತಾನೆ ತಲೇಕೊಡೋನು? ತಿಳಿದೂ ತಿಳಿದೂ ಬೆನ್ನಲ್ಲಿ ಬಿದ್ದ ತಂಗೀ ಮಗೂನ ಕ್ಷಯರೋಗೀ ಹತ್ತಿರ ಇಟ್ಟುಕೊಂಡಿರೋದು ಹೇಗೆ? ಅದು ಖಂಡಿತಾ ನನ್ನಿಂದ ಆಗದ ಕೆಲಸ.... ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ – ತಬ್ಬಲಿ ಮಗೂನ ಸಾಕ್ತೀನೇಂತ ಕರಕೊಂಡು ಹೋಗಿ ಸುಡುಗಾಡಿಗಟ್ಟಿದ ಸೋದರಮಾವಾಂತ ನೀನೇ ಅಂತೀಯ, ಬಿಡ್ತೀಯೇನು?

ಗಿರಿ— ಛೆ! ಛೆ! ಛೆ!! ಎಂಥಾ ಅನ್ಯಾಯದ ಮಾತಾಡ್ತೀ ಕಿಟ್ಟಣ್ಣ!

ಕಿಟ್ಟಣ್ಣ— ನೀನೆಷ್ಟು ನ್ಯಾಯವಾಗಿ ಮಾತಾಡುತ್ತಿದ್ದೀ ನೋಡು!

ಗಿರಿ— ಅಲ್ಲವೋ ಕಿಟ್ಟಣ್ಣ– ಮೊದಲೇ ಇದೆ– “ಹರಿಣಾಪಿ– ಹರೀಣಾಪಿ....” ಅಂತ; ಅದರ ಹಣೇಲಿ ಹಾಗೆ ಬರೆದಿದ್ದರೆ ಅದು ನಿನ್ನ ತಪ್ಪೇ? ಪ್ರಮಾಣವಾಗಿಯೂ ಹೇಳುತ್ತೇನೆ ಕಿಟ್ಟಣ್ಣ–ನಾನು ಅಂಥಾ ಅನ್ಯಾಯದ ಮಾತನ್ನ ಎಂದಿಗೂ ಆಡೋಲ್ಲ! – ಏನೇ ಆಗಲಿ!

ಕಿಟ್ಟಣ್ಣ— ಆಹಾ! ನಿನ್ನ ಪ್ರಮಾಣ– ನಿನ್ನ ನ್ಯಾಯ ಎಲ್ಲಾ “ದನಾತಿನ್ನೋನಿಗೆ ಗೊಬ್ಬರದಾಣೆ” ಅಂತಾರಲ್ಲಾ ಹಾಗೆ!.. (ಪುಸಲಾಯಿಸುವ ದನಿಯಲ್ಲಿ) ಗಿರಿ, ಗಿರಿ, ಹೊಟ್ಟೇಲಿ ಹುಟ್ಟಿದ ಮಗು ಕಸಕ್ಕೆ ಕಡೆಯಾಯಿತಲ್ಲವೆ?..ಲೋ, ಗಿರಿ, ನನ್ನ ಮಾತು ಸ್ವಲ್ಪ ಕೇಳು– ಹುಡುಗಾಟಿಕೆ ಸಾಕು. ಕೆಡಕು ಆಗೋಕೆ ಮುಂಚೆ ಹುಷಾರಾಗಬೇಕು. ನೊಂಕು ಏನಾದರೂ ತಗುಲಿ ರೋಗ ಬಲೀತೂಂದ್ರೆ ಆ ಮೇಲೆ ಏನು ಮಾಡಿದರೂ ಪ್ರಾಣ ದಕ್ಕೋದಿಲ್ಲ.

ಗಿರಿ— ಸರಿ ಅದಕ್ಕೆ ನಾನೇನು ಮಾಡಬೇಕೂಂತೀಯೆ? ಇದ್ದಕಿದ್ದಹಾಗೆ ಆಕಾಶದಿಂದ ಇಳೀಬಿದ್ದು ಈ ಮಾತು ಎತ್ತುತ್ತೀಯಲ್ಲಾ– ನಿಂತ ಕಾಲ್ಮೇಲೆ ಉತ್ತರ ಹೇಳೋಕೆ ಆಗುತ್ತೆಯೇ? ಈಗ ನನ್ನ ಸುಮ್ಮನೆ ಪೀಡಿಸಬೇಡ....ಸ್ವಲ್ಪ ನಿಧಾನಿಸು,....”

ಕಿಟ್ಟಣ್ಣ— ಏನಂದೆ?

ಗಿರಿ— ನನ್ಮಾತು ಕೇಳು; ಸದ್ಯಕ್ಕೆ ನಿಮ್ಮನೆಗೇ ವಾಪಸು ಕರೆದುಕೊಂಡು ಹೋಗಿರು – ಜನ ಬೇಕಾದ್ದಾಡಲಿ – ನೀನು ಅದನ್ನೆಲ್ಲಾ ಕಿವೀ ಮೇಲೆ ಹಾಕಿಕೋ ಬೇಡ – ಬೊಗಳೋವ್ರು ಬೊಗಳಿಕೊಳ್ಳಲಿ! ನಾನೂ ಸಧ್ಯದಲ್ಲೇ ಏನಾದರೂ....ಸ್ವಲ್ಪ.. ಕಳಿಸುತ್ತೇನೆ– ಯೋಚನೆಮಾಡಬೇಡ.

ಕಿಟ್ಟಣ್ಣ— (ಕೋಪದಿಂದ) ಏನಂದೇ? ಏನಾದರೂ–ಸ್ವಲ್ಪ!– ಕಳಿಸುತ್ತೀನಿ!!– ಗಿರೀ! ನಿನ್ನ ಮನೆ ಬಾಗಿಲಿಗೆ ಯಾಚನೆಗೆ ಬಂದೇಂತ ತಿಳಿದೆಯಾ?

ಗಿರಿ— ಏನೋ ತೊಂದರೆ ಮನೇಲೀಂತ ಅಂದೆ?

ಕಿಟ್ಟಣ್ಣ— ಅದೇನೋ ನಿಜ! ಆದರೆ ಗಿರೀ, ನಿನ್ನ ಗೋಪಾಳದ ಕಾಸಿಗೆ ಕೈಯೊಡ್ಡಲು ಬರಲಿಲ್ಲ! ಅಂಥಾ ಹೊತ್ತು ಬಂದರೆ ಕಲ್ಲು ಮಣ್ಣು ಹೊತ್ತು ಸಂಪಾದಿಸುತ್ತೇನೆ!

ಗಿರಿ— ಹಾಗಾದರೆ ನಿನ್ನ ಇಷ್ಟ– ನಾನೇನೂ ಹೇಳಲಾರೆ–

ಕಿಟ್ಟಣ್ಣ— ಗಿರಿ, ಸ್ವಲ್ಪ ಮನುಷ್ಯನ ಹಾಗೆ ಮಾತನಾಡು! ಏನು ನಿನಗೆ ಇಷ್ಟು ಗೊತ್ತಾಗೊಲ್ಲವೆ? ನನ್ನ ಹೆಂಡತಿ ಸ್ಥಿತಿ ಸ್ವಲ್ಪಾನೂ ಚೆನ್ನಾಗಿಲ್ಲ– ಬಲು ಕಷ್ಟದಿಂದ ಉಸಿರಾಡುತ್ತಾಳೆ. ಒಂದೊಂದು ಸಲ ಕೆಮ್ಮಿದಳೆಂದರೆ ಇಷ್ಟಿಷ್ಟು ರಕ್ತಬರುತ್ತೆ! ಮನೆಯೋ ಔಷಧಿವಾಸನೆಯಿಂದ ತುಂಬಿಹೋಗಿದೆ. ನನ್ನ ಈಗಿನ ಸ್ಥಿತಿಯಲ್ಲಿ ಅವಳನ್ನ ಈ ಊರಿಗೆ ತಂದು ಆಸ್ಪತ್ರೆಯಲ್ಲಿ ಇಡಲು ಸುತರಾಂ ಸಾಧ್ಯವಿಲ್ಲ– ಮನೆಯೋ ತೀರಾ ಚಿಕ್ಕದು– ಹುಡುಗರು ಮೂರು ಹೊತ್ತು ಅವಳ ಹಾಸಿಗೆ ಹತ್ತಿರಲೇ ಓಡಾಡುತ್ತಿರುತ್ತವೆ. ಅವಕ್ಕೆ ಅದು ತಪ್ಪಿದ್ದಲ್ಲ– ಅವರ ಹಣೇಬರಹ! ಆದರೆ ನಿನ್ನ ಮಗಳ ವಿಷಯ ಬೇರೆ– ನೀನೋ ಹೆಸರಾದ ಚಿತ್ರಗಾರ– ನಿನ್ನ ಉಳಿದ ವಿಚಾರ ಹೇಗೇ ಇರಲಿ– ಚೆನ್ನಾಗಿ ಸಂಪಾದಿಸುತ್ತಿದ್ದೀಯೆ. ಇಂತಹ ದೊಡ್ಡ ಊರಿನಲ್ಲಿ ನೆಮ್ಮದಿಯಾಗಿ ಇರೋದಕ್ಕೆ ನಿನಗೆ ಯೋಗ್ಯತೆ ಇದೆ– ಇನ್ನು ಮೇಲೆ ನಿನ್ನ ಮಗಳು ನಿನ್ನ ಹತ್ತಿರ ಇರೋದೇ ನ್ಯಾಯ. ಇಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಅವಳನ್ನ ವಾಪಸು ಕರೆದುಕೊಂಡು ಹೋಗಿ ರೋಗಕ್ಕೆ ತುತ್ತುಮಾಡಬೇಕೆಂತ ನನಗೆ ಸ್ವಲ್ಪವೂ ಇಷ್ಟವಿಲ್ಲ. ಗಿರಿ, ಖರ್ಚಿಗೆ ಹೆದರಿ ಈ ಮಾತು ಹೇಳುತ್ತೇನೇಂತ ಭಾವಿಸಬೇಡ. ನನಗೆ ಅದು ಮುಖ್ಯವಲ್ಲ. ಇವಳು ಸುಖವಾಗಿ ಬದುಕಿ ಬಾಳೋದು ಮುಖ್ಯ.

ಮನೆಯಲ್ಲಿ ಅವಳ ಕಾಯಿಲೆ ವಿಷಯ ಹೀಗೇಂತ ಹೇಳೋದು ಕಷ್ಟ. ಪಂಡಿತರು ಹೇಳೋದರಲ್ಲಿ ಅವಳು ಈ ವರ್ಷ ಕಳೆಯೋದೇ ಕಷ್ಟವಾಗಿ ಕಾಣುತ್ತೆ; ಅಥವಾ ಇನ್ನು ಮೂರು ನಾಲ್ಕು ವರ್ಷ ತಳ್ಳಬಹುದು— ರೋಗದ ವಿಷಯ ಯಾವುದೂ ಖಂಡಿತವಲ್ಲ. ಹೀಗಿರೋವಾಗ ರೋಹಿಣೀನ ನಾನು ಮನೆಗೆ ಕರೆದುಕೊಂಡು ಹೋದರೆ ಅವಳಿಗೆ ಅಪಾಯ ಖಂಡಿತ. ಆಗ ನಾನೇನು ಮಾಡಲಿ?

ಗಿರಿ— ಅದಕ್ಕೆ ಯಾರು ಏನು ಮಾಡೋಣಾಗುತ್ತೆ ಕಿಟ್ಟಣ್ಣ? ಎಲ್ಲಾ ಗ್ರಹಚಾರ ಅಷ್ಟೇ! ನಿನ್ನ ಮಕ್ಕಳಿಗೆ ಇರೋ ಅಪಾಯವೇ ಅವಳಿಗೂ ಇರುತ್ತೆ! ಇದನ್ನು ಖಂಡಿತ ತಿಳಿ— ಏನೇ ಆಗಲಿ, ಅದಕ್ಕೆ ನೀನು ಹೊಣೇಂತ ನಾನೆಂದಿಗೂ ಹೇಳೊಲ್ಲ— ಭಾಷೆ ಕೊಡುತ್ತೇನೆ!

ಕಿಟ್ಟಣ್ಣ— ಪಿಶಾಚಿ ಭಾಷೆ! ....ಗಿರೀ, ಪ್ರಾಣಿಮಾತ್ರಕ್ಕೆ ಸಹಜವಾದ ಮಮತೆಯೂ ಇಲ್ಲವಾಯಿತೇ ನಿನಗೆ!

ಗಿರಿ— (ನಿರ್ಲಿಪ್ತನಂತೆ ನಿದಾನವಾಗಿ ತಲೆ ಅಲ್ಲಾಡಿಸುತ್ತ) ಉಹುಂ!— ಇಲ್ಲ.

ಕಿಟ್ಟಣ್ಣ— ದಯೆ? ಕನಿಕರ?

ಗಿರಿ— ಯಾವುದೂ ಇಲ್ಲ.

ಕಿಟ್ಟಣ್ಣ— ಮಾನಾವಮಾನ?

ಗಿರಿ— ಹೇಳಿದೆನಲ್ಲ— ಯಾವುದೂ ಇಲ್ಲಾಂತ.

ಕಿಟ್ಟಣ್ಣ— ಎಷ್ಟುದಿನವಾಯ್ತು— ಎಲ್ಲಾ ಮಾರಿಕೊಂಡು?

ಗಿರಿ— ಏಳು ವರ್ಷ!

ಕಿಟ್ಟಣ್ಣ— ಗಿರಿ, ಹೋಗಲಿ, ಮಮತೆ, ದಯೆ- ಕನಿಕರ ಯಾವುದೂ ಬೇಡ— ರೋಹಿಣಿ ಮನೆಗೆಲಸಗಳನ್ನೆಲ್ಲಾ ಚೆನ್ನಾಗಿ ಮಾಡುತ್ತಾಳೆ. ಅದಕ್ಕಾದರೂ ಅವಳಿಗೆ ನೆರಳುಕೊಡು.

ಗಿರಿ— ಉಹುಂ! ಅದೆಲ್ಲಾ ಆಗದಮಾತು— ಅದಕ್ಕೆಲ್ಲಾ ಬೇರೇ ಇದ್ದಾರೆ. ನೋಡು ಕಿಟ್ಟಣ್ಣ ನಾನು ಹಿಂದೆ— ಏಳುವರ್ಷಕ್ಕೆ ಹಿಂದೆ ಪಟ್ಟ ಕಷ್ಟ ಸಂಕಟ ದೇವರಿಗೆ ಗೊತ್ತು....

ಕಿಟ್ಟಣ್ಣ— ಆಹಾ! ಪಿಶಾಚಿ ಬಾಯಲ್ಲಿ ದೇವರ ಹೆಸರು!

ಗಿರಿ— ನೀನು ಏನಾದರೂ ತಿಳಿದುಕೋ— ನನ್ನ ಜೀವನ ವಿಷಮಯವಾಗಿತ್ತು. ಎಷ್ಟೋ ಪ್ರಯತ್ನಮಾಡಿ ಅದನ್ನೆಲ್ಲಾ ತೊಳೆದು ಹಾಕಿದೆ— ಈಗ ಇಷ್ಟು ದಿನದ ಮೇಲೆ ನನಗೆ ಪುನಃ ಆ ವಿಷದ ಸೋಂಕು ಬೇಡ. ಇವಳನ್ನು ನೀನೇ ಕರೆದುಕೊಂಡು ಹೋಗು.

ಕಿಟ್ಟಣ್ಣ— ಊ ಹುಂ! ವಿಷದ ಸೋಂಕು!— ಅಲ್ಲವೆ! ನೀನೇ ವಿಷವಾದೆ ನಿನ್ನ ಹೆಂಡತಿಗೆ! ಈಗ, ಅವಳಲ್ಲಿ ಪಡೆದ ಮಗು ನಿನಗೆ ವಿಷವಾಯಿತಲ್ಲವೆ?

ಗಿರಿ— ಆ ಮಾತೆಲ್ಲಾ ಯಾಕೆ ಈಗ ಕಿಟ್ಟಣ್ಣ? ಇವಳನ್ನು ನೀನೇ ಕರೆದುಕೊಂಡು ಹೋಗು.

(ರೋಹಿಣಿ ಮೆಲ್ಲಗೆ ಕಿಟ್ಟಣ್ಣನ ತೋಳನ್ನು ಎಳೆಯುತ್ತಾಳೆ. ಕಿಟ್ಟಣ್ಣ ತಿರುಗಿ ನೋಡುತ್ತಾನೆ. ರೋಹಿಣಿ ಕಣ್ಣೊರೆಸಿಕೊಳ್ಳುತ್ತ ಹೋಗೋಣವೆಂದು ಸನ್ನೆ ಮಾಡುತ್ತಾಳೆ.)

ಕಿಟ್ಟಣ್ಣ— ಗಿರಿ, ರೋಹಿಣೀಗೇನೋ ನಮ್ಮ ಮನೆ ಬಿಟ್ಟು ಬರಲು ಅಷ್ಟು ಸುಲಭವಾಗಲಿಲ್ಲ. ನೆನ್ನೆ ರಾತ್ರೆ ಇದೇ ಮಾತು ಬಂದಾಗ, ಇಲ್ಲಿಗೆ ಬರಲು ರೋಹಿಣಿಯೂ ಒಪ್ಪಲಿಲ್ಲ— ನನ್ನ ಹೆಂಡತಿಯೂ ಒಪ್ಪಲಿಲ್ಲ— ಆದರೆ ನಾನು ಬಲವಂತ ಪಡಿಸಿದೆ— ನನಗೆ ಇವಳ ವಯಸ್ಸು— ಅವಳ ಖಾಯಿಲೆ ದಿಗಿಲು ಎರಡೂ ಬಾಧಿಸುತ್ತಿದ್ದವು— ಇವಳಿಗೆ ನನ್ನ ಹುಡುಗೀರ ಹಾಗೆ ದೇಹದಾರ್ಢ್ಯವಿಲ್ಲ. ಬಲು ಸೂಕ್ಷ್ಮ; ಇಂಥವಳು ರೋಗೀಹತ್ತಿರ ಮೂರು ಹೊತ್ತೂ ತಿರುಗಾಡುತ್ತಿರುವುದು ನನಗೆ ಸರಿತೋರಲಿಲ್ಲ. ಅದಕ್ಕೇ ಇಲ್ಲಿಗೆ ಕರೆತಂದೆ. ಏಳುವರ್ಷ ನನ್ನ ಮಕ್ಕಳ ಜೊತೆಯಲ್ಲಿ ಸಾಕಿದ ಈ ಮಗೂನ ಇಲ್ಲಿ ತೊರೆದು ಹೋಗೋದೆಂದರೆ ನನಗೂ ಸಂಕಟ; ಕರುಳನ್ನು ಕಿತ್ತೆಸೆದ ಹಾಗಾಗುತ್ತೆ. ಇಲ್ಲಿಗೆ ಹೊರಟುಬರುವ ಮುಂಚೆ ಮನೆಯಲ್ಲಿ ಹುಡುಗರ ಗೋಳು ಹೇಳತೀರದು— ಎಷ್ಟಾದರೂ ಜೊತೆಯಲ್ಲಿ ಬೆಳೆದವು— ಈಗ ಪುನಃ ಇವಳನ್ನು ಕರೆದುಕೊಂಡು ಹೋದರೆ ಎಷ್ಟು ಸಂತೋಷವೋ ಮಕ್ಕಳಿಗೆ-ಅವಳಿಗೆ—

ಗಿರಿ— ಹಾ! ಅದೀಗಾ ಸರಿಯಾದ ಮಾತು! ಅದು ಬಿಟ್ಟು ಆಗದ ಹೋಗದ ಮಾತೆಲ್ಲಾ ಆಡ್ತೀಯಲ್ಲ ಕಿಟ್ಟಣ್ಣ! ಇನ್ಯಾರ ಹೊಟ್ಟೇಲಾದರೂ ಹುಟ್ಟಿದ್ದರೆ ಅವಳ ಬಾಳು ನೆಟ್ಟಗಾಗುತ್ತಿತ್ತೋ ಏನೋ— ಇಲ್ಲಿ ಹುಟ್ಟಿದಳು— ಜೊತೆಗೇ ಹುಟ್ಟಿತು ದುರದೃಷ್ಟ— ನಿನ್ನ ಮನೆಯೇ ಸರಿ ಅವಳಿಗೆ— ಕಿಟ್ಟಣ್ಣ— ಏಳು ವರ್ಷಗಳಿಂದ ಅವಳು ಸಂಪೂರ್ಣವಾಗಿ ನಿಮ್ಮವಳಾಗಿದ್ದಾಳೆ. ಇನ್ನು ಮೇಲಾದರೂ ಅಷ್ಟೇ— ಅವಳ ಮದುವೆಯೋ— ಮಾರಾಟವೋ ಯಾವುದಕ್ಕೂ ನಿನಗೆ ಪೂರ್ಣ ಸ್ವಾತಂತ್ರ್ಯ— ನಾನೊಂದು ಮಾತೂ ಆಡೋಲ್ಲ— ಇದೊಂದು ವಿಷಯಕ್ಕೆ ಮಾತ್ರ ನಾನು ಇಲ್ಲವೇ ಇಲ್ಲಾಂತ ತಿಳಿದುಕೋ—

ಕಿಟ್ಟಣ್ಣ— ಲೋ, ಗಿರೀ, ನೀನು ಮನುಷ್ಯ ಜಾತಿಗೇ ಕಳಂಕ! ನೀನು ಮಾನಾ ಮಾರಿಕೊಂಡೆ—ಇನ್ನು ನಿನ್ನ ಮಗಳ ಮಾರಾಟವಾಗ ಬೇಕಲ್ಲವೆ? ಪಾಪಿ!— ಜ್ಞಾಪಕವಿರಲಿ ಅವಳ ತಾಯಿ ನನ್ನ ತಂಗಿ!

ಗಿರಿ— ಅದರ ಜ್ಞಾಪಕ ಚೆನ್ನಾಗಿದೆ! ಅದಕ್ಕೇ ಅವಳು ಇಲ್ಲಿ ಬೇಡಾ ಅಂದಿದ್ದು! ಅದೇ ಕಣ್ಣು— ಅದೇ ಹಣೆ— ಅದೇ ಗಲ್ಲ! ಎಲ್ಲಾ ಅದೇ- ಇದನ್ನೆಲ್ಲಾ ಮೂರು ಹೊತ್ತೂ ನೋಡುತ್ತ ಹಾಳಾದ ನೆನಪಿನ ಕಿಚ್ಚಿನಲ್ಲಿ ಬೇಯುವುದು ನನ್ನಿಂದಾಗದು! ಉಹುಂ!!— ಆಗದು!

ಕಿಟ್ಟಣ್ಣ— ನಿನ್ನ ಸ್ವಭಾವಕ್ಕೆ ತಕ್ಕ ಮಾತು ನೀನು ಆಡುತ್ತಿದ್ದೀಯೆ. ತಿಪ್ಪೆಯಿಂದ ಪರಿಮಳ ಹೊರಟೀತೆ?

ಗಿರಿ— ತಿಪ್ಪೆಗೆ ಬಂದು ಪರಿಮಳ ಬಯಸಿದರೆ ಆಗುತ್ತೆಯೇ? ಹ ಹ್ಹ ಹ್ಹ ಹ್ಹಾ!

ಕಿಟ್ಟಣ್ಣ— ಏನು ನಾಚಿಕೆಯಿಲ್ಲದೆ ನಗುತ್ತೀಯೋ!

ಗಿರಿ— ವಿಷಯ ಅಷ್ಟು ಸ್ವಾರಸ್ಯವಾಗಿದೆ! ಹ ಹ್ಹ ಹ್ಹ ಹ್ಹಾ!

ರೋಹಿಣಿ— ಮಾವಾ, ಸಾಕು ನಡಿ ಮನೆಗೆ ಹೋಗೋಣ. ನೀನೇ ಬಲವಂತ ಮಾಡಿದೆ.... ಬಂದಿದ್ದಾಯಿತು. ಕೇಳಿದ್ದಾಯಿತು—ಇನ್ನೂ ನಿಂತಿರಬೇಕೇ ಇಲ್ಲಿ? ಬಾ.

ಕಿಟ್ಟಣ್ಣ— (ಅವಳ ತಲೆಯನ್ನು ಸವರುತ್ತ) ಹೌದು ರೋಹಿಣಿ-ನಾವಿಲ್ಲಿಗೆ ಬರಬಾರದಾಗಿತ್ತು. ಇದು ತಪ್ಪು! ಇಗೋ ಇನ್ನು ಮುಂದೆ ಇವನಿಗೂ ನಿನಗೂ ತೀರಿದು ಹೋಯ್ತು! ನಿಮ್ಮಪ್ಪಾನ್ನಿಸಿಕೊಂಡವನು ನಿನ್ನ ಭಾಗಕ್ಕೆ ಸತ್ತುಹೋದಾಂತ ತಿಳಿದುಕೋ! ನನ್ನ ನಾಲ್ಕು ಹುಡುಗರೊಂದಿಗೆ ನೀನೂ ಒಬ್ಬಳು-ಐದನೆಯವಳು. ಬಾ (ಎಂದು ರೋಹಿಣಿಯೊಡನೆ ಹೊರಡಲನುವಾಗುವನು)

ಗಿರಿ— (ವ್ಯಂಗ್ಯವಾಗಿ) ಹೊ ಹ್ಹೊ ಹ್ಹೊ ಹ್ಹೋ !!

(ಕಿಟ್ಟಣ್ಣನು ಹೊರಟಿದ್ದವನು ನಿಂತು ತಿರುಗಿ ಗಿರಿಯನ್ನೇ-ಮೇಲೆ ಬೀಳುವ ತೆರದಲ್ಲಿ-ದಿಟ್ಟಿಸಿ ನೋಡುವನು)

ರೋಹಿಣಿ— (ಕಿಟ್ಟಣ್ಣನನ್ನು ತಡೆಯುತ್ತ) ಬಾ ಮಾವಾ, ಇನ್ನ್ಯಾಕೆ ಮಾತು? ಎಲ್ಲಾ ಮುಗೀತಲ್ಲ-ಬಾ.

ಕಿಟ್ಟಣ್ಣ— (ರೋಹಿಣಿಯ ಬೆನ್ನು-ಮುಂದಲೆ ಸವರುತ್ತ) ಹೌದು-ಹೌದು ಕಂದ-ಇನ್ನು ಪ್ರಾಣವಿರೋ ತನಕ ಈ ಪಾಪಿಯ ಮನೆಯನ್ನು ಮೆಟ್ಟಬಾರದು!- ಬಾ ಹೋಗೋಣ (ಎಂದು ಇಬ್ಬರೂ ಹೊರಟು ಹೋಗುವರು.)

(ಗಿರಿ ಒಬ್ಬನೇ ನಿಂತು ಏನೋ ಯೋಚನೆಯಲ್ಲಿ ಮುಳುಗುತ್ತಾನೆ. ಇವನ ಶಿಷ್ಯ ರಾಜ ಪ್ರವೇಶಿಸುತ್ತಾನೆ. ರಾಜ ಲಕ್ಷಣವಾದ ಆಳು. ತಲೆ ಕ್ರಾಪನ್ನು ಚೆನ್ನಾಗಿ ಬಾಚಿಕೊಂಡಿದ್ದಾನೆ. ಸಡಿಲವಾದ ಬಿಳಿ ಪಾಯಿಜಾಮ, ಅದರ ಮೇಲೆ ಮೊಳಕಾಲವರೆಗೂ ಬರುವ ಜುಬ್ಬ-ಜುಬ್ಬದ ಮೇಲೆ ಒಂದು ಕರೀ ವೆಸ್ಟುಕೋಟು ಇಷ್ಟು ಅವನ ಉಡುಪು. ಕಾಲಿಗೆ ನಯವಾದ ಮೆಟ್ಟು ಹಾಕಿಕೊಂಡಿದ್ದಾನೆ. ಮೀಸೆಯಿಲ್ಲದ ಮುಖ.)

ರಾಜ— ಉಶ್ಶಪ್ಪ! (ಎಂದು ಆಯಾಸವನ್ನು ಪ್ರಕಟಿಸಿ, ಗಿರಿಯು ಮೌನವಾಗಿರುವುದನ್ನು ನೋಡಿ) ಗುರುಗಳೇ, ಈಗ ತಾನೇ ಇಲ್ಲಿಂದ ಹೋದರಲ್ಲಾ, ಅವರು ಕಿಟ್ಟಣ್ಣೋರಲ್ವೇ?

ಗಿರಿ— ಹೌದು-ಅವನೇ!

ರಾಜ— ಓಹೋ-ಹಾಗಾದರೆ ಅವರ ಜೊತೆಯಲ್ಲಿದ್ದವಳು ರೋಹಿಣಿ! ಅದಕ್ಕೇ ಅವಳನ್ನ ನೋಡುತ್ತಿದ್ದ ಹಾಗೆಯೇ.... ಕನಕಮ್ಮನವರ ಜ್ಞಾಪಕವಾಯ್ತು-ಎಂಥಾ ಹೋಲಿಕೆ! ಯಾರ ಪ್ಪಾಂತಿದ್ದೆ!- ಎಷ್ಟು ಬೆಳೆದು ಬಿಟ್ಟಿದ್ದಾಳೆ! ಆಗಲೆ! ....ಛೆ! ಎಂಥಾ ಕೆಲಸವಾಯ್ತು! ಸ್ವಲ್ಪ ಮುಂಚೆ ಬಂದಿದ್ದರೆ ಮಾತಾಡಿಸಬಹುದಿತ್ತು.....ಅದೇನು ಈಗ ಬಂದಿದ್ದರು- ಗುರುಗಳೇ?

ಗಿರಿ— ಅದೇನೋ ಅವನ ಹೆಂಡತೀಗೆ ಏನೋ ರೋಗವಂತೆ-ಮನೇಲಿ ತೊಂದರೆಯಂತೆ- ಎಷ್ಟು ನಿಜವೋ ಎಷ್ಟು ಸುಳ್ಳೋ! ಅಂತೂ ಮೆಲ್ಲಗೆ ಅವಳ್ನ ಇಲ್ಲಿ ತಗಲುಗಟ್ಟಿ ಹೋಗೋಣಾಂತ ಬಂದಿದ್ದ!

ರಾಜ— ಅದಕ್ಕೆ ನೀವೇನಂದಿರಿ?

ಗಿರಿ— ಆಗೊಲ್ಲಾಂದೆ-ನನಗೆ ಅದು ಸ್ವಲ್ಪವೂ ಇಷ್ಟವಿರಲಿಲ್ಲ.

ರಾಜ— ಅಯ್ಯೋ ಪಾಪ! ಕಷ್ಟ!

ಗಿರಿ— ಅಲ್ಲವೆ?- ನೀನೇ ಹೇಳು?- ಎಷ್ಟು ಕಷ್ಟ ಅವಳನ್ನ ಇಲ್ಲಿ ಇಟ್ಟುಕೊಂಡಿರೋದು!

ರಾಜ— ಸರಿಯಾಯ್ತು ಬಿಡಿ! ನಾನು ಕಷ್ಟಾಂತ ಹೇಳಿದ್ದು ಯಾರಿಗೆ?

ಗಿರಿ— ನನಗಲ್ಲವೆ?

ರಾಜ— ಹಾಸ್ಯ ಮಾಡ್ತೀರಲ್ಲ! (ಜೇಬಿನಿಂದ ಹಣ ತೆಗೆದು) ಇಗೋ ಅವರಿಬ್ಬರೂ ಹಣ ಕೊಟ್ಟರು.

ಗಿರಿ— ಸರಿ, ಆ ಜಮೀನುದಾರನಿಂದ ಎಷ್ಟು ಬಂತು?

ರಾಜ— ಎಪ್ಪತ್ತು ರೂಪಾಯಿ. ಇಬ್ಬರದ್ದೂ ಸೇರಿ ಒಟ್ಟು ನೂರಹತ್ತು ರೂಪಾಯಿ ಇದೆ.

ಗಿರಿ— ಸದ್ಯ ಹಗುರವಾಯ್ತು! ಆ ಭಂಡರು ಕೊಡೊಲ್ಲಾಂತನೇ ಮಾಡಿದ್ದೆ; ಅದರಲ್ಲೂ ಆ ಜಮೀನುದಾರನಿದ್ದಾನಲ್ಲಾ ಅವನು ತಗಲುಬಸಾವಿ - ತಿಂಗಳಿಗೊಬ್ಬ ಹುಡುಗೀನ ಕರೆಕೊಂಡು ಬಂದು ಅವಳ ಚಿತ್ರ ಬರಕೊಡೂಂತಾನೆ! ದುಡ್ಡಿಗೆ ಮಾತ್ರ ಕಪಿಮುಷ್ಟಿ!.... ಹುಂ, ಸರಿ. ಅವತ್ತು ನಿನ್ನಿಂದ ಇಪ್ಪತ್ತು ರೂಪಾಯಿ ಸಾಲ ತೆಗೆದುಕೊಂಡಿದ್ದೆನಲ್ಲಾ- ಅದನ್ನ ವಾಪಸು ತೆಗೆದುಕೋ-ನನಗೊಂದು ಐವತ್ತು ಕೊಡು. ಉಳಿದದ್ದನ್ನು ಚಂಪಳ ಕೈಗೆ ಕೊಡು.

ರಾಜ— ಓಹೋ, ಅಗತ್ಯವಾಗಿ- (ಗಿರಿಗೆ ಐವತ್ತು ರೂಪಾಯಿ ಕೊಡುವನು) ಗುರುಗಳೇ, ಈಚೆಗೆ ನೀವು ಬಹಳ ಬದಲಾಯಿಸಿದ್ದೀರಿ!

ಗಿರಿ— ಏನು ಬದಲಾವಣೆ?

ರಾಜ— ಅಮ್ಮಾವರು ಬದುಕಿದ್ದಾಗ ದುಡ್ಡನ್ನ ಬಲು ಹಿಡಿತದಲ್ಲಿಟ್ಟಿದ್ದಿರಿ. ಹತ್ತು ಸರ್ತಿ ಕೇಳಿಸಿಕೊಂಡು ಒಂದು ಸಲ ಕೊಡುತ್ತಿದ್ದಿರಿ. ಕೊನೆಕೊನೆಗೆ ಅದೂ ನಿಂತು ಹೋಗಿತ್ತು. ಆದರೆ ಈಚೆಗೆ ಬಹಳ ಧಾರಾಳವಾಗಿದೆ ನಿಮ್ಮ ಕೈ! ವಯಸ್ಸಿಗೂ ಧಾರಾಳಕ್ಕೂ ಏನೋ ಸಂಬಂಧವಿರಬೇಕು!

ಗಿರಿ— (ನಗುತ್ತ) ಏನು ಚಂಪಳಿಗೆ ನಲವತ್ತು ರೂಪಾಯಿ ಕೊಡು ಅಂದೆನಲ್ಲಾ ಅದಕ್ಕೋ?

ರಾಜ— ಹುಂ.

ಗಿರಿ— ನೋಡು ರಾಜ-ಎಲ್ಲಿ ಬಲವಂತವಿಲ್ಲವೋ ಅಲ್ಲಿ ಧಾರಾಳ ಹೆಚ್ಚು-ಗಂಡ ಹೆಂಡತಿ ಒಬ್ಬರನ್ನೊಬ್ಬರು ಪ್ರೀತಿಸಬಹುದು. ಆದರೆ ಅದರ ಹಿಂದೆ ಮದುವೆ ಸಂಬಂಧದ ಬಲಾತ್ಕಾರವಿದ್ದೇ ಇದೆ. ಈ ಮದುವೆ ಅನ್ನೋದು, ಸಮಾಜವು ಸುಖವನ್ನು ಹಿಡಿಯೋಕೆ ತಯಾರು ಮಾಡಿದ ಒಂದು ಭ್ರಮೆಯ ಬಲೆ; ಕಟ್ಟಿ ಹಾಕಿದರೆ ಮನೆ ನಾಯಿಯೂ ಕಿತ್ತುಕೊಂಡು ಹೋಗೋಕೆ ಒದ್ದಾಡುತ್ತೆ-ಕಟ್ಟದೆ ಇದ್ದರೆ ಮನೆ ಬಾಗಿಲಲ್ಲಿ ಬಿದ್ದಿರುತ್ತೆ-ನಾಯಿಗೆ ಸರಪಳಿ ಹೇಗೋ-ಸಮಾಜದಲ್ಲಿ ಈ ಮದುವೆಯ ಬಂಧನ ಹಾಗೆ-

ರಾಜ— ಇದೇನು ಗುರುಗಳೇ, ನಾನು ಏನೋ ಒಂದು ಮಾತಾಡಿದರೆ ನೀವು-ನಾಯಿ-ಮದುವೆ-ಸರಪಳಿ ಅಂತ ಏನೇನೋ ಹೇಳ್ತೀರಿ!

ಗಿರಿ— ಹೌದೋ ರಾಜ, ಈ ಗಂಡು ಹೆಣ್ಣಿನ ಸಂಬಂಧದಲ್ಲಿ ಮನುಷ್ಯರಿಗೂ- ನಾಯಿಗಳಿಗೂ ಅಷ್ಟೇನೂ ವ್ಯತ್ಯಾಸವಿಲ್ಲ! ಬಂಧನ ಎಲ್ಲಿದೆಯೋ ಅಲ್ಲಿ ಬಲಾತ್ಕಾರವಿದೆ. ಗಂಡೇ ಆಗಲಿ- ಹೆಣ್ಣೇ ಆಗಲಿ- ಗಂಡನೇ ಆಗಲಿ-ಹೆಂಡತಿಯೇ ಆಗಲಿ- ನಾಯಿಯೇ ಆಗಲಿ- ನರಿಯೇ ಆಗಲಿ- ಬಲಾತ್ಕಾರವನ್ನು ಎದುರಿಸೋದು ಅವಕ್ಕೆ ಹುಟ್ಟುಗುಣ. ನನ್ನ- ಚಂಪಳ- ಸಂಬಂಧದಲ್ಲಿ ಹಿಂದೆ ಇದ್ದ ಬಂಧನ- ಬಲಾತ್ಕಾರವಿಲ್ಲ. ಅದಕ್ಕೇ ನನ್ನಲ್ಲೂ ಬದಲಾವಣೆ ಯಾಗಿದೆ. ಚಂಪಳು ನನ್ನ ಚಿತ್ರಗಳಿಗೆ ಮಾದರಿ; ಮದುವೆ ಬಂಧನವಿಲ್ಲದ ನನ್ನ ಹೆಣ್ಣು- ಈ ಬಂಧನವಿಲ್ಲದ ಸಂಬಂಧದಲ್ಲಿ- ಮದುವೆಗಿಂತ ಹೆಚ್ಚು ಅವಕಾಶವಿದೆ ಪ್ರೀತಿ- ಪ್ರಣಯಗಳಿಗೆ. ನನಗೊಬ್ಬ ಸ್ನೇಹಿತನಿದ್ದ- ಅವನಿಗೆ ಚೆಲುವೆಯಾದ ಹೆಂಡತಿ ಇದ್ದಳು. ಆದರೂ ಅವನು ಬೇರೊಬ್ಬಳಲ್ಲಿ ಸ್ನೇಹ ಬೆಳೆಸಿದ್ದ- ಏಕೆ?- ಮದುವೆಯ ಬಂಧನದ ಹೊರಗೆ ಪ್ರಣಯಕ್ಕೆ ಒಂದು ಹೊಸ ರುಚಿ ಹುಟ್ಟುತ್ತೆ, ಅದಕ್ಕೆ. ಆ ರುಚಿ ಹೃದಯಕ್ಕೆ ಅಪ್ಯಾಯಮಾನ. ಪ್ರಣಯ ವಧುವಿನ ಒಲವಿಗಿಂತ ಹೆಂಡತಿಯ ಪ್ರೀತಿಯೇ ಹೆಚ್ಚು ರುಚಿ ಯೆಂದು ಹೇಳುವವರು ಯಾರಾದರೂ ಇದ್ದಾರೆಯೇ? ಹೆಂಡತಿಗೂ ಪ್ರಣಯವಧುವಿಗೂ ಇರುವ ವ್ಯತ್ಯಾಸವನ್ನು ತಿಳಿಯದವರ ಮಾತು ನಾನು ಹೇಳುತ್ತಿಲ್ಲ. ಎರಡು ಸಂಬಂಧಗಳಿಗೂ ಬಹಳ ವ್ಯತ್ಯಾಸವಿದೆ. ಹೆಂಡತಿಯೊಡನೆ ನೆಮ್ಮದಿಯಾಗಿ- ತೃಪ್ತನಾಗಿರ ಬೇಕಾದರೆ ಗಂಡ ಅವಳನ್ನ ಸ್ವಲ್ಪ- (ಎಂದು ಹಲ್ಲು ಕಚ್ಚಿ- ಮುಷ್ಟಿ ತೋರುವನು) ಹೌದು ಅದೇ ಸರಿ ಅವರಿಗೆ!..

(ಚಂಪಳು ಮೆಟ್ಟಿಲುಗಳನ್ನು ಇಳಿದು ಬರುತ್ತಾಳೆ)

ಚಂಪ— (ಮುಖದಲ್ಲಿ ಹರ್ಷವನ್ನು ಸೂಚಿಸುತ್ತ) ಓಹೋ! ರಾಜ ಯಾವಾಗ ಬಂದೆ?

ರಾಜ— ಬಂದು ಎಷ್ಟೋ ಹೊತ್ತಾಯಿತು.

ಚಂಪ— ಯಾರೋ ಬಂದಿದ್ದರಲ್ಲ- ಅವರು ಹೋದಕೂಡಲೆ ನೀನೂ ಬಂದಿರಬೇಕು- ಅಲ್ಲವೆ? ಹಾಗೇ ಉರುಳಿಕೊಂಡೆ- ನಿದ್ದೆ ಬಂದುಬಿಟ್ಟಿತು- ಎಚ್ಚರವಾಯ್ತು- ನಿನ್ನ ಧ್ವನಿ ಕೇಳಿಸಿತು- ಅವರು ಹೊರಟುಹೋಗಿರಬಹುದೂಂತ ಇಳಿದು ಬಂದೆ.

ರಾಜ— ಇಗೋ ನಿನಗೊಂದಿಷ್ಟು ರೂಪಾಯಿ ಇದೆ.

ಚಂಪ— ಓಹೋ ಕೊಟ್ಟುಬಿಟ್ಟರೋ?.... ನಿನ್ನ ಹತ್ತಿರಲೇ ಇರಲಿ- ಎಲ್ಲಾ ಒಂದೇ.

(ಗಿರಿಯ ಹುಬ್ಬುಗಳು ಸ್ವಲ್ಪ ಮಾತ್ರ ಗಂಟಾಗಿ ಅವನು ಬೇರೇ ಕಡೆ ಮುಖ ತಿರುಗಿಸಿಕೊಳ್ಳುತ್ತಾನೆ.)

ರಾಜ— ಉಹುಂ, ಬೇಡ- ನನ್ನ ಹತ್ತಿರ ಇದ್ದರೆ ಎಲ್ಲಾ ಖರ್ಚಾಗಿ ಬಿಡುತ್ತೆ. ನನ್ನ ಹಣಾನೂ ನೀನೇ ಇಟ್ಟುಕೊಂಡಿರು. (ಹಣವನ್ನು ಕೊಡುವನು)

ಚಂಪ— (ಹಣವನ್ನು ತೆಗೆದುಕೊಂಡು ಗಿರಿಯನ್ನು ನೋಡುತ್ತ ಮುಗುಳುನಗೆಯಿಂದ) ಹುಂ, ಇನ್ನೇನು, ನಿಮ್ಮ ಕಾಲು ಮನೇಲಿ ನಿಲ್ಲುತ್ತೆಯೇ?- ಜೇಬಿನಲ್ಲಿ ದುಡ್ಡಿರೋತನಕ?- ಇನ್ನೂ ಇಲ್ಲಿ ನಿಂತಿರೋದೇ ಆಶ್ಚರ್ಯ!

ಗಿರಿ— ಹುಂ—ಮ್.

ಚಂಪ— ನೀವು ಹೊರಗೆ ಹೋಗೋದಾದರೆ ನನ್ನದೊಂದು ಪ್ರಾರ್ಥನೆ! ಮೊದಲೆಲ್ಲಾದರೂ ಹೋಗಿ ಕ್ಷೌರಮಾಡಿಸಿಕೊಳ್ಳಿ! ನೋಡಲಾರೆ ನಿಮ್ಮ ಅವತಾರಾನ!- ಎರಡು ತಿಂಗಳಾಯಿತೂಂತ ಕಾಣುತ್ತೆ!

ಗಿರಿ— ಅಯ್ಯೊ- ಆಮೇಲೆ?

ಚಂಪ— ಆಮೇಲೆ- ನಾ ಹೇಳಿದ್ದು ಜ್ಞಾಪಕವಿದೆಯೇ?

ಗಿರಿ— ಯಾವಾಗ?

ಚಂಪ— ನೆನ್ನೆ ರಾತ್ರಿ-

ಗಿರಿ— ಏನು?

ಚಂಪ— ಚೆನ್ನಾಯ್ತು! ದೊಡ್ಡಪೇಟೆ ರಾಮಲಾಲನ ಅಂಗಡೀಲಿ ರೋಜಾ ಬಣ್ಣದ ಸೀರೆಗೆ ಹೇಳಿರಲಿಲ್ಲವೇ? ಅದನ್ನ ನೀವು ತರಲೇ ಬೇಕು ಇವತ್ತು- ಇವತ್ತು ಬಿಟ್ಟರೆ ಆಮೇಲೆ ನೀವು ತಾರಮ್ಮಯ್ಯನ್ನಾಡ್ತೀರಿ. ಆಮೇಲೆ- ಗೋವಿಂದಾಚಾರೀಗೆ ಒಳ್ಳೇ ಮಾಡೋಕೆ ಚಿನ್ನ ಕೊಟ್ಟಿತ್ತಲ್ಲ- ವಿಚಾರಿಸಿ- ಆಗಿದ್ದರೆ ತನ್ನಿ- ಹಾಗೇ ಮಾರ್ಕೆಟ್ಟಿಗೆ ಹೋಗಿ ನೋಡಿ ಚೆನ್ನಾಗಿರೋ ಕಿತ್ತಲೆ ಹಣ್ಣು ಏಳ್ಳೇದೆಲೆ ತೆಗೆದುಕೊಂಡು ಬನ್ನಿ.

ಗಿರಿ— ಹುಂ—ಮ್!

ಚಂಪ— ಮರೆತಿದ್ದೆ!- ಮೈಗೆ ಹಚ್ಚಿಕೊಳ್ಳೋ ಸೋಪು ನಾಲ್ಕು ತನ್ನಿ (ನಗುತ್ತ) ನಿಮಗೆ ಒಂದು ಸಾಕಾಗೊಲ್ಲ- ಮೂರು ವಾರದ ಕೊಳೇ ತೊಳೆಯೋಕೆ!

ಗಿರಿ— ಹುಂ- ಸರಿ- ಹೊರಟೆ- ಇಷ್ಟೆಲ್ಲಾ ಮುಗಿಸಿಕೊಂಡು ಬರೋ ಹೊತ್ತಿಗೆ ಸಾಯಂಕಾಲವೇ ಆಗುತ್ತೆ.

ಚಂಪ— ಹೊರಡಿ ಹಾಗಾದರೆ- ಸಾಬೂನು ಮಾತ್ರ ಮರೀಬೇಡಿ!

ಗಿರಿ— ಸಾಬೂನೂ ಬೇಡ- ಗೀಬೂನೂ ಬೇಡ!- ಏನೂ ಬೇಕಾಗಿಲ್ಲ.

ಚಂಪ— ಯಾಕೇ?- ಮೂರುವಾರದ ಆಸ್ತಿ ತೊಳೆದು ಹೋಗುತ್ತೆ ಅಂತಲೋ?- (ಗಿರಿಯು ಕಿವಿಯಮೇಲೆ ಹಾಕಿ ಕೊಳ್ಳದೆ ಹೊರಟುಹೋಗುತ್ತಾನೆ- ಚಂಪಳು ಅವನು ಹೋದ ಕಡೆಯೇ ದಿಟ್ಟಿಸಿ ನೋಡುತ್ತ- ಆಮೇಲೆ ರಾಜನ ಕಡೆಗೆ ತಿರುಗಿ) ರಾಜ, ನಿಮ್ಮ ಗುರುಗಳು ಒಳ್ಳೆ ಪುನುಗಿನ ಬೆಕ್ಕು- ಅಲ್ಲ- ಪುನುಗಿನ ಕರಡಿ!! (ಹೀಗೆಂದು ಹೇಳಿ- ಬಾಗಿಲ ವರೆಗೂ ಹೋಗಿ ನೋಡಿ ಬಂದು ಸೋಫಾದ ಮೇಲೆ ಕುಳಿತುಕೊಂಡು) ರಾಜ, ನೀನು ಬಹಳ ಹೊತ್ತುಮಾಡಿಬಿಟ್ಟೆ.

ರಾಜ— ಏನು ಹೊತ್ತು ಮಾಡಿದೆ?

ಚಂಪ— ವಾಪಸು ಬರುವುದಕ್ಕೆ-

ರಾಜ— ಏನು ಚಂಪ- ಹೀಗಂತೀಯಲ್ಲ! ಎಷ್ಟು ಬೇಗ ವಸೂಲು ಮಾಡಿಕೊಂಡು ಬಂದೆ!

ಚಂಪ— ನನಗೇನೋ ಬಹಳ ಹೊತ್ತಾದ ಹಾಗೆ ಕಂಡಿತು. (ಸ್ವಲ್ಪ ಹೊತ್ತು ಮೌನವಾಗಿದ್ದು) ರಾಜ, ಅವರು ಎಷ್ಟು ದುಡ್ಡು ಇಸಕೊಂಡರು?

ರಾಜ— ಐವತ್ತು ರೂಪಾಯಿ.

ಚಂಪ— ಸರಿ, ಹಾಗಾದರೆ ಇವತ್ತು ಅವರು ಮನೆ ಸೇರೋಲ್ಲ! ಕೈಯ್ಯಲ್ಲಿ ದುಡ್ಡಿರೋ ತನಕ!....ಅವರ ಹುಟ್ಟಿಗೇ ಬಂದದ್ದಲ್ಲ.

ರಾಜ— ನಿಜ- ದುಡ್ಡು ಇಟ್ಟುಕೊಂಡು ಮನೇಲಿ ಕೂತಿದ್ದರೆ ಏನು ಬಂತು?

ಚಂಪ— ನ್ಯಾಯವಾಗಿ ಖರ್ಚು ಮಾಡಿದರೆ ಪರವಾಗಿಲ್ಲ- ಸಿಕ್ಕಿಸಿಕ್ಕಿದ್ದಕ್ಕೆ ಪೋಲು ಮಾಡಿದರೆ?- ಇನ್ನು ಎಷ್ಟು ಸ್ನೇಹಿತರಿಗೆ ಎಷ್ಟು ಹೋಟಲುಗಳಲ್ಲಿ ತಿಂಡಿತೀರ್ಥ ಆಗಬೇಕೋ ನಾಕಾಣೆ. ನೋಡು ಬೇಕಾದರೆ ನಾನು ಪಂಥ ಕಟ್ತೀನಿ- ಅವರು ಬೇರೆ ಇವತ್ತು ರಾತ್ರೆ ಖಂಡಿತ ಮನೆಗೆ ಬರೊಲ್ಲ!

ರಾಜ— ಎಲ್ಲಾದರೂ ಉಂಟೆ!.... ಅವರು ಮೊದಲಿಗೂ ಈಚೆಗೂ ಬಹಳ ಬದಲಾಯಿಸಿ ಬಿಟ್ಟಿದ್ದಾರೆ- ಮೊದಲು ಮನೆ ಅಂದರೆ ಅವರಿಗೆ ಆಗುತ್ತಿರಲಿಲ್ಲ; ಎಲ್ಲೋ ಹೋಗುತ್ತಿದ್ದರು- ಯಾವಾಗಲೋ ಬರುತ್ತಿದ್ದರು- ಎಲ್ಲಾ ಹುಚ್ಚು ಹುಚ್ಚು. ಆದರೆ ಈಗ ಹಾಗಿಲ್ಲ- ಬಹಳ ಬದಲಾಯಿಸಿದ್ದಾರೆ.

ಚಂಪ— ಏನು ಬದಲಾವಣೆ?

ರಾಜ— ನಿನ್ನ ಕಂಡರೆ ಬಹಳ ಮಮತೆ ಅವರಿಗೆ- ಅವರೇ ಹೇಳಿದರು.

ಚಂಪ— (ಎದ್ದು ಅವನ ಸಮೀಪಕ್ಕೆ ಬಂದು) ಆಹಾ?- ಏನು ಹೇಳಿದರು ರಾಜ?

ರಾಜ— ಅವರಿಗೆ ಹೆಂಡತೀಲಿ ಇದ್ದದ್ದಕ್ಕಿಂತ ನಿನ್ನಲ್ಲಿ ಮೋಹ ಹೆಚ್ಚಂತೆ.

ಚಂಪ— ಬಡಕೊಂಡರು- ಈ ಕರಡೀ ಮೋಹಕ್ಕೆ! (ಮತ್ತೆ ಸೋಫಾದ ಮೇಲೆ ಕುಳಿತುಕೊಳ್ಳುವಳು)

ರಾಜ— ಲೇ ಚಂಪಾ, ಎಂಥಾ ಮಾತಾಡ್ತೀಯೋ!

ಚಂಪ—ದಿನಾ ಸರಪಳೀಲಿ ಒಂದೊಂದು ಗಂಟೆ ಬಿಗಿಯೋದು ಎಂಥಾ ಮೋಹ!— ಸುಡುಗಾಡು ಮೋಹ!!

ರಾಜ— ಏನು ಬೇಕಂತ ಮಾಡ್ತಾರೆಯೆ – ಚಿತ್ರಕ್ಕೋಸ್ಕರ- ಅಷ್ಟೆ.

ಚಂಪ— ಅವರ ಚಿತ್ರ ಹಾಳಾಯ್ತು!— ನನ್ನ ಮೈ ಕೈ ಹ್ಯಾಗಾಗಿದೆ ಗೊತ್ತೇನು?

ರಾಜ — (ನಗುತ್ತ) ನನಗೆ ಹೇಗೆ ಗೊತ್ತಾಗಬೇಕು?

ಚಂಪ— ಏನಂದೆ?

ರಾಜ— ಏನೂ ಇಲ್ಲ.

ಚಂಪ— ಅದೇನೋ ಹೇಳಿದೆಯಲ್ಲ - ಬಾ ಇಲ್ಲಿ - (ರಾಜ ಸ್ವಲ್ಪ ಹತ್ತಿರ ಹೋಗುವನು) ಅವರು ಹೆಂಡತೀಗೂ ಹೀಗೇ ಮಾಡುತ್ತಿದ್ದರು ಅಂದೆಯಲ್ಲ ಅದ್ಯಾಕೆ?

ರಾಜ— ಇಷ್ಟೇ ಮಾಡುತ್ತಿದ್ದರೆ!- ಇದಕ್ಕೆ ನೂರರಷ್ಟು!

ಚಂಪ— ಯಾಕೆ?

ರಾಜ— ಯಾಕೇ ಅಂದರೆ ನಾನು ಏನು ಬಲ್ಲೆ- ನಾನು, ಅವರು ಸಾಯೋದಕ್ಕೆ ಒಂದು ವರ್ಷ ಮುಂಚೆ ಇವರ ಹತ್ತಿರ ಕೆಲಸ ಕಲಿಯೋಕೆ ಬಂದೆ. ಆಗಲೂ ಇದೇ ಚಿತ್ರಗಳನ್ನು ಬರೀತಿದ್ದರು. ಅವರನ್ನ ಕಟ್ಟಿಹಾಕುತ್ತಿದ್ದುದೇನು ಆಶ್ಚರ್ಯವಲ್ಲ - ಚಿತ್ರಗಳ ಮಾದರಿಗೆ ಅದೆಲ್ಲಾ ಮಾಡಬೇಕಾಗುತ್ತೆ- ಆದರೆ ಅವರ ಹಿಂಸೆ ಬಹಳವಾಗಿತ್ತಂತೆ.

ಚಂಪ-- ಇತ್ತಂತೆ-ಅಂದರೆ-ನೀನು ನೋಡುತ್ತಿರಲಿಲ್ಲವೆ?

ರಾಜ— ಇಲ್ಲ- ನಾನು ಆಗ ಗುರುಗಳ ಹತ್ತಿರ ಇಷ್ಟು ಬಳಕೆಲಿ ಇರಲಿಲ್ಲ. ಯಾವಾಗಲಾದರೂ ನಾನೊಬ್ಬನೇ ಸಿಕ್ಕಾಗ- ಹೇಳಿಕೊಂಡು ಕಣ್ಣೀರು ಹಾಕುತ್ತಿದ್ದರು - ಯಮಹಿಂಸೆ ಮಾಡುತ್ತಿದ್ದರಂತೆ- ಮೈಮೇಲೆಲ್ಲಾ ಗಾಯ.

ಚಂಪ— ಆಹಾ!-ನಿಂಗೆ ಹೇಗೆ ಗೊತ್ತಾಯ್ತು? (ನಗುವಳು)

ರಾಜ — ಛಿ! ನೀನೊಬ್ಬಳು ನಾಚಿಕೆಕೆಟ್ಟವಳು!....ಪಾಪ, ಒಂದುದಿನ- ತೋಳಿನಮೇಲೆ ಇವರು ಕಚ್ಚಿದ್ದನ್ನ ತೋರಿಸಿದರು- ಎಂಥಾ ಗಾಯ!- ಒಂದು ತಿಂಗಳಾಯಿತು ವಾಸಿಯಾಗೋಕೆ!

ಚಂಪ— ಕರಡಿ - ಕಚ್ಚತ್ತೋ- ಪರಚತ್ತೋ- ರಾಜ!-

ರಾಜ— ನಿನಗೆ ಹ್ಯಾಗೆ ಗೊತ್ತಾಗಬೇಕು ಹೇಳು?- ನೀನೂ ಹೆಂಡತಿಯಾಗಿದ್ದರೆ- ಆಗ ಗೊತ್ತಾಗುತ್ತಿತ್ತು!

ಚಂಪ-- ಹೂ!- ಇನ್ನು ಹೆಂಡತಿ ಆಗಿ ಮುಂಡಮೋಚಿಕೋಬೇಕಾಗಿತ್ತು!

ರಾಜ— ಇಷ್ಟಾದರೂ ನೋಡು ಆಕೆ ತುಟಿ ಪಿಟಕ್ಕೆನ್ನದೆ ಎಲ್ಲಾ ಸಹಿಸಿಕೊಂಡಿರೋದು- ಆದೆಂತಹಾ ತಾಳ್ಮೆಯೋ ನಾ ಬೇರೇ ಕಾಣೆ. ನನ್ನಲ್ಲಿ ಆಕೆಗೆ ಬಹಳ ವಿಶ್ವಾಸ- ನಂಬಿಕೆ. ಸಮಯ ಸಿಕ್ಕಾಗ ಎಲ್ಲಾ ಬಿಚ್ಚಿ ಹೇಳಿಕೊಳ್ಳೋರು; ಕೇಳಿ ಸಂಕಟವಾಗೋದು.

ಚಂಪ— ಊ ಹುಂ? ಹಾಗಾದರೆ ನಿಮ-ನಿಮಗೆ ಬಹಳ ಏಕಾಂತ ನಡೀತಿತ್ತು?

ರಾಜ— ಸರಿ!- ನಿನಗಿನ್ನೇನು ಯೋಚನೆ ಹೇಳು?

ಚಂಪ— (ಅವನನ್ನು ಎಳೆದು ಹತ್ತಿರ ಕುಳಿತುಕೊಳ್ಳುವಂತೆ ಬಲವಂತ ಮಾಡುತ್ತ) ಲೇ ಕಳ್ಳಾ! ನನ್ನ ಹತ್ತಿರ ಹೇಳ- ಪರವಾಗಿಲ್ಲ!

ರಾಜ— ನೀನು ಶುದ್ಧ ಭಂಡಳು! (ಎಂದು ಸೋಫಾದ ಮೇಲೆ ಕುಳಿತುಕೊಳ್ಳುವನು)

ಚಂಪ— ಹೀಗೆ ಮಾತು ಮರೆಸೋಕೇನು!

ರಾಜ— ಲೇ ಆಕೆ ನನಗಿಂತ ಕೊನೇಪಕ್ಷ ಹತ್ತು ವರ್ಷ ಹಿರಿಯರಾಗಿದ್ದರು- ನನಗೆ ತಾಯಿಗೆ ಸಮಾನ!

ಚಂಪ— ಓಹೋ ಹಾಗೋ!.... (ನಗುತ್ತ) ಈಗ ನಿನಗೆ ಎಷ್ಟು ವರ್ಷ?

ರಾಜ— ಇಪ್ಪತ್ತೆಂಟು.

ಚಂಪ— ನನಗೆಷ್ಟು– ಗೊತ್ತೆ ?– ರಾಜ ? (ಅವನನ್ನು ಉದ್ರೇಕಿಸುವ ದೃಷ್ಟಿಯಿಂದ ನೋಡುವಳು)

ರಾಜ— (ಅನ್ಯಮನಸ್ಕತೆಯಿಂದ) ಇಲ್ಲ.

ಚಂಪ— ಇಪ್ಪತ್ತನಾಲ್ಕು.

ರಾಜ— (ಅದೇ ಅನ್ಯಮನಸ್ಕತೆಯಿಂದ) ಸರಿ.

ಚಂಪ— ಸರಿಯೋ ?– ಇಪ್ಪತ್ತೆಂಟು– ಇಪ್ಪತ್ತನಾಲ್ಕು ?

ರಾಜ— ಏನಂದೆ ?

ಚಂಪ— ರಾಜ ! (ಅವನ ಕೈಹಿಡಿದು) ಇವತ್ತು ನೀನು ಸ್ವಲ್ಪವೂ ಸರಿಯಾಗಿಲ್ಲ.

ರಾಜ— ಚಂಪಾ, ಈಗ ನನ್ನ ಪೀಡಿಸಬೇಡ– ನನಗೆ ಬಹಳ ಕೆಲಸ ಇದೆ. ಆ ಸಾವ್ಕಾರನ ಮಗೂಚಿತ್ರ ಬೇಗ ಮುಗಿಸಿ ಬಿಡಬೇಕು– ಇಲ್ಲದೆ ಇದ್ದರೆ ದುಡ್ಡಿಗೇ ತಾಪತ್ರಯ (ಎಂದು ಏಳಲು ಹೋಗುವನು)

ಚಂಪ— (ಅವನನ್ನು ಏಳುವುದಕ್ಕೆ ಬಿಡದೆ) ರಾಜ, ರಾಜ, ನೀನು ಬಹಳ ಕಲ್ಲೆದೆಯವನೋ ! ...... ರಾಜ, ನಾನು ಇಲ್ಲಿಂದ ತಲೆತಪ್ಪಿಸಿಕೊಂಡು ಹೋಗಿ ಎಷ್ಟೋ ದಿನವಾಗ ಬೇಕಾಗಿತ್ತು.... ನಾನಿರೋದ್ಯಾಕೆ ಇಲ್ಲಿ· ಗೊತ್ತೆ ?

ರಾಜ— ಇಂಥಾ ಮನೆ– ಅನ್ನ–ಬಟ್ಟೆ ಎಲ್ಲಾ ಬಿಟ್ಟು ಹೋದರೆ ಹುಚ್ಚಿ ಅಂತಾರೆ !

ಚಂಪ— ನಾಯಿ ಜನ್ಮಕ್ಕಿಂತ ಹುಚ್ಚಿ ಜನ್ಮ ಲೇಸು !

ರಾಜ— ನಿನಗೇನು ಅಂಥಾದ್ದು ಆಗಿರೋದು ?

ಚಂಪ— ಏನು ಅಂಥಾದ್ದೇ?– ನನ್ನ ಮೈಮೇಲೆಲ್ಲಾ ಸರಪಳಿ ಗುರುತು ! ಆಹಾ ! ನಿನ್ನ ಗುರುಗಳೊ !!– ಹೇಳಿದೆನಲ್ಲ ಪುನುಗಿನ ಕರಡಿ !!– ನೀನು ಅವರಿಂದ ಏನು ಬೇಕಾದರೂ ಕಲಿತುಕೋ– ಅವರ ಆ ಶ್ವಪಚತನ– ಗಲೀಜುತನ ಕಲೀಬೇಡ ! ಅವರ ಉಸಿರು ವಿಷ !– ಅಂಥಾ ಕೆಟ್ಟ ವಾಸನೆ !!.... ಹುಂ ! ಮೊದಲು ತಿಳೀ ಲಿಲ್ಲ.... ಆ ಮೇಲೆ ಹೋಗೋಕಾಗಲಿಲ್ಲ.

ರಾಜ— ಯಾಕೆ ?

ಚಂಪ— ಯಾಕೆ ?.... ಯಾಕೆ ಹೇಳು ರಾಜ ?– ನಿಂಗೊತ್ತಿ ಲ್ಲವೆ ?

ರಾಜ— ಇಲ್ಲ....ಬಿಡು ಚಂಪ, ನಾನು ಕೆಲಸಕ್ಕೆ ಶುರು ಮಾಡಬೇಕು.

ಚಂಪ— ಇಲ್ಲ !– ಬೇಕಾದ್ದಾಗಲಿ ಇವತ್ತು ನಿನ್ನ ಬಿಡೊಲ್ಲ ! (ಅವನ ತೋಳನ್ನು ತನ್ನ ಎರಡು ಕೈಗಳಿಂದಲೂ ಭದ್ರವಾಗಿ ಹಿಡಿದುಕೊಳ್ಳುತ್ತಾಳೆ.)

ರಾಜ— ಇದ್ಯೇನೇ ಚಂಪಾ, ಇಷ್ಟು ಒರಟುತನ ನಿನ್ನದು !

ಚಂಪ— ಮೊನ್ನೆ ರಾತ್ರೆ ನೀನು ಮನೆಗೆ ಬಂದಾಗ ಒಂದು ಗಂಟೇ ಮೇಲಾಗಿತ್ತು; ಅಷ್ಟು ಹೊತ್ತಿನ ತನಕ ಎಲ್ಲಿಗೆ ಹೋಗಿದ್ದೆ ನೀನು ?

ರಾಜ— ಇದೇನು ಹೀಗೆ ಕೇಳುತ್ತೀ ?– ಯಾರೋ ಒಬ್ಬ ಸ್ನೇಹಿತರ ಮನೆಗೆ ಹೋಗಿದ್ದೆ.

ಚಂಪ— ಎಲ್ಲಿ ಅವರ ಮನೆ ?

ರಾಜ— ಸೇತುವೆ ಆಚೆ ಹೊಸಬಡಾವಣೆಯಲ್ಲಿ.

ಚಂಪ— ಯಾರು ಅವರು !

ರಾಜ— "ಕಲಾಲೋಕ" ಅಂತ ಇಲ್ಲಿಗೊಂದು ಮಾಸಪತ್ರಿಕೆ ಬಂದಿಲ್ಲವೆ ?– ಅದರ ಸಂಪಾದಕರು– ಕುಮಾರಶರ್ಮ ಅಂತ.

ಚಂಪ— ಸರಿ ; ಆದರೆ ಅದ್ಯಾಕೆ ಅಷ್ಟು ಹೊತ್ತಾಯ್ತು ?– ರಾತ್ರೆ ಒಂದು ಗಂಟೆ !

ರಾಜ— ಹೌದು– ಅವರ ಮನೇಲಿ ಅವತ್ತು ರಾತ್ರಿ ಭಾರಿ ಊಟ– ಅಮೇಲೆ– ಎಲೆಅಡಿಕೆ– ಮಾತುಕಥೆ ಎಲ್ಲಾ ಮುಗೀಬೇಕಲ್ಲ!

ಚಂಪ— ನೀನು ಸುಳ್ಳು ಹೇಳುತ್ತಿದ್ದೀಯೋ ನಿಜ ಹೇಳು ತ್ತಿದ್ದೀಯೋ ಪರೀಕ್ಷೆ ಮಾಡ್ತೀನಿ !

ರಾಜ— ಹೇಗೆ ?

ಚಂಪ— ನಿನ್ನೆದೆಮೇಲೆ ಕಿವಿ ಇಟ್ಟು ಕೇಳಿದರೆ– ನೀನು ಸುಳ್ಳು ಹೇಳುತ್ತಿದ್ದರೆ ಡವ–ಡವ ಅಂತ ಹೊಡೆಕೊಳ್ಳುತ್ತೆ !

ರಾಜ— ಪರೀಕ್ಷೆ ಮಾಡು.

ಚಂಪ— (ಅವನ ಎದೆಯ ಮೇಲೆ ಕಿವಿಯಿಟ್ಟು ಕಣ್ಣುಮುಚ್ಚಿ ಕೊಂಡು ಮುಗುಳುನಗೆನಗುವಳು)

ರಾಜ— ಗೊತ್ತಾಯಿತೆ ?

ಚಂಪ— ಡವ–ಡವ ಅಂತಿವೆ !

ರಾಜ— ಯಾಕೆ ಗೊತ್ತೆ ?

ಚಂಪ— ನೀನು ಸುಳ್ಳು ಹೇಳುತ್ತಿದ್ದೀ ಅದಕ್ಕೆ !

ರಾಜ— ಅದಕ್ಕಲ್ಲ.

ಚಂಪ— ಮತ್ತೆ ?

ರಾಜ— ನೀನು ನನ್ನೆದೆಮೇಲೆ ತಲೆ ಇಟ್ಟಿದ್ದೀಯೆ ಅದಕ್ಕೆ.

ಚಂಪ— ಓ– ಹಾಗೋ– ಹಾಗಾದರೆ ಇನ್ನೂ ಸ್ವಲ್ಪ ಕೇಳ್ತೀನಿ.

ರಾಜ— ಚಂಪ, ಏಳು– ಸಾಕು ನಿನ್ನ ಹುಡುಗಾಟ !

ಚಂಪ— ರಾಜ, ನಿನಗೊಂದು ಕಾಗದ ಬಂದಿತ್ತು.

ರಾಜ— ಎಲ್ಲಿ– ಯಾವತ್ತು ?

ಚಂಪ— ನೆನ್ನೆ ಬಂತು.

ರಾಜ— ನನಗೆ ಮೊದಲೇ ಏಕೆ ಕೊಡಲಿಲ್ಲ ?– ಎಲ್ಲಿ ತಾ.

ಚಂಪ— ಯಾರೋ ಹೆಂಗಸು ಬರೆದಿದ್ದಾಳೆ !

ರಾಜ— ನೀನು ಒಡೆದು ನೋಡಿದೆಯಾ ? (ಚಂಪಳು ಮೌನ ವಾಗಿರುತ್ತಾಳೆ. ರಾಜ ಚಂಪಳ ತಲೆಯನ್ನು ಮೇಲಕ್ಕೆತ್ತಿ) ಚಂಪಾ, ನೀನೇಕೆ ನನ್ನ ಕಾಗದಪತ್ರ ನೋಡ್ಬೇಕಿತ್ತು ಹೇಳು.

ಚಂಪ— ನೋಡಿದರೇನಾಯ್ತು ? [illegible] ತೆಗೆದುಕೊಳ್ಳು

ರಾಜ— ನನ್ನ ಕಾಗದ ಇನ್ನೊಬ್ಬರು ! ಅವಳನ್ನು ನೆಲಕ್ಕೆ

ಚಂಪ— ರಾಜ, ರಾಜ, (ಹತ್ತಿರ ಸರಿದು) ನಾನು ಇನ್ನೆಷ್ಟು ಪ್ಟಳೆ ನಿನಗೆ ?– ಹೇಳು ರಾಜ.

ರಾಜ— ಹೌದು !– ನೀನು ಮಾಡಿದ್ದು ಬಹಳ ತಪ್ಪು !– ಹೋಗು– ಇನ್ನುಮೇಲೆ ನಿನ್ನ ಮಾತಾಡಿಸೊಲ್ಲ ! (ಏಳುತ್ತಾನೆ) ಕಾಗದ ಕೊಡು.

ಚಂಪ— (ದುಃಖದಿಂದ) ರಾಜ ! ರಾಜ ! ನಿನ್ನ ಪರೀಕ್ಷೆ ಮಾಡೋಣಾಂತ ಸುಳ್ಳು ಹೇಳಿದೆ– ಕಾಗದವೂ ಇಲ್ಲ– ಗೀಗದವೂ ಇಲ್ಲ.... ಹೋಗು ನಿಂದೆಲ್ಲಾ ಗೊತ್ತಾಯಿತು ! (ಮುಖ ಮುಚ್ಚಿಕೊಂಡು ಅಳುತ್ತಾಳೆ)

ರಾಜ— (ಪುನಃ ಕುಳಿತುಕೊಂಡು) ಚಂಪಾ, ಸುಳ್ಳು ಹೇಳಿ ಪರೀಕ್ಷೆ ಮಾಡಬೇಕೇ ನನ್ನ ?

ಚಂಪ— ಹೋಗು !– ನನ್ನ ಮಾತಾಡಿಸಬೇಡ !– ನಾನಿವತ್ತೇ ಸಾಯ್ತೀನಿ !

ರಾಜ— ಬಿಡು ಬಿಡು ಚಂಪ,– ಇದೆಲ್ಲಾ ಏನು ?– ನೀನೂ ಹುಡುಗಾಟ ಮಾಡಿದೆ– ನಾನೂ ಹುಡುಗಾಟ ಮಾಡಿದೆ ! ಅದಕ್ಕ ಸಕ್ಕೆ ಊಫ಼ ! ಏಳು, ಇ–ದ–ಕ್ಕೆ–ಲ್ಲಾ ಕಣ್ಣೀರು ಹಾಕ್ತೀಯಲ್ಲ ! (ಚಂಪಳು ಮಾತನಾಡುವುದಿಲ್ಲ) ಏಳೇ, ಇದೇನೆ, ಮಾತೇ ಆಡೊಲ್ಲ ?

ಚಂಪ— ನೀನೇ ಹೇಳಿದೆ– ಮಾತಾಡಿಸೊಲ್ಲಾಂತ !

ರಾಜ— ಅದೆಲ್ಲಾ ಮರೆತುಬಿಡು !

ಚಂಪ— ಊ– ಮ–ರೆ–ತುಬಿಡು !– ರಾಜ, ನಿನ್ನಿಂದ– ಅ ಗರಡಿ ಹಿಂಸೆ– ಅಸಹ್ಯ– ಮರೀತಿದ್ದೆ– ಈಗ ನೀನೂ ಹೀಗಾಗಿ ಬಿಟ್ಟರೆ ಇನ್ಯಾರು.... (ಅವನ ಭುಜದಮೇಲೆ ತಲೆಯನ್ನಿಟ್ಟು ನಿಟ್ಟುಸಿರು ಬಿಡುವಳು.)

(ಬಾಗಿಲ ಹೊರಗೆ ಏನೋ ಸದ್ದಾಗುವದು. ಇಬ್ಬರೂ ಸ್ವಲ ದೂರ ಸರಿಯುತ್ತಾರೆ. ಗಿರಿ ಪ್ರವೇಶಿಸುತ್ತಾನೆ– ಹೊರಟಾಗ ಹೇಗಿದ್ದನೋ ಈಗಲೂ ಹಾಗೇ ಇದ್ದಾನೆ– ರೂಪ– ವೇಷಗಳಲ್ಲಿ– ಮುಖದಲ್ಲಿ ನೋವು– ಕೋಪಗಳ ಸಮರವಾಗುತ್ತಿದೆ. ಬಂದವನೇ ಸೊಂಟದಮೇಲೆ ಕೈ ಇಟ್ಟುಕೊಂಡು, ಭೀಷಣವಾದ ಮೌನದಿಂದ ಇಬ್ಬರನ್ನೂ ಬಿರುನೋಟದಿಂದ ನೋಡುತ್ತಾನೆ– ರಾಜನದು ಧಿಕ್ಕಾರದ ಮೌನ.)

ಚಂಪ— (ದಿಗ್ಭ್ರಮೆಯಿಂದ) ಇದೇನು ?.... ಇಷ್ಟು ಬೇಗ !.... ಬರೀ ಕೈಲಿ ?.... ಸೀರೆ ?.... ಬಳೆ !.... (ಗಿರಿ ಮೌನ. ಅದೇ ನೋಟ– ಅದೇ ಭಂಗಿ) ಅಕ್ಕಸಾಲೆ ಏನಂದ ?.... ಸ್ನಾನ ಮಾಡ್ತೀರೇನು ?.... ನೋವು ತಂದಿರಾ ? (ಗಿರಿ ನೀರವ) ಇದೇನಿದು ?– ಇದ್ದಕ್ಕಿದ್ದ ಹಾಗೇ !.... ಏನಾಗಿದೆ ನಿಮಗೆ ?.... ಏನೋ ವಿಚಿತ್ರ ! (ನಗಲು ಪ್ರಯತ್ನ ಪಡುತ್ತಾ– ಏನಸ್ಟುಟ್ಟುಕೊಟ್ಟ ಮೌನದಲ್ಲಿದ್ದಾನೆ– ರಾಜ ಮಹದಿ

ಚಂಪ— ಅದೇನೆನ್ನುತ್ತಾನೆ)

ಸ್ವಲ್ಪ ಹತ್ತಿರ ಹೋ(ನೋಡುತ್ತ ಹಲ್ಲು ಕಚ್ಚಿ) ನಿಲ್ಲು ! ಮಾಡುತ್ತಿದ್ದರು ಅಂದೇ

ರಾಜ— (ನಿಂತು ಗಂಭೀರ ಧ್ವನಿಯಿಂದ) ಏನು ?

(ಗಿರಿಯು ಆವನ ಕಡೆಗೆ ರಭಸದಿಂದ ನುಗ್ಗಿ ಹಠಾತ್ತಾಗಿ ಎರಡುಮೂರು ಏಟುಗಳನ್ನು ಕೊಡುತ್ತಾನೆ. ರಾಜ ಅವನನ್ನು ತಳ್ಳುತ್ತಾನೆ– ಗಿರಿ ಕೆಳಗುರುಳಿ ಒಂದು ಕ್ಷಣದಲ್ಲಿ ಎದ್ದು ಪುನಃ ಅವನ ಮೇಲೆ ಎರಗಿ ಅವನ ಕುತ್ತಿಗೆಗೆ ಕೈಹಾಕುತ್ತಾನೆ– ರಾಜ ಗಿರಿಯ ತೋಳುಗಳನ್ನು ಬಲವಾಗಿ ಹಿಡಿದುಕೊಳ್ಳುತ್ತಾನೆ.)

ರಾಜ— ಏನು ?– ಏನಿದರರ್ಥ ?

ಗಿರಿ— ಅರ್ಥ !– ಅರ್ಥವೇ ? ಹೇಳ್ತೀನಿ ಅರ್ಥ ಕೇಳು ! (ಎಂದು ಒದೆಯುವನು. ಈ ಕಾದಾಟವನ್ನು ನೋಡಿ ಚಂಪಳು ದಿಗ್ಭ್ರಾಂತ ಳಾಗಿದ್ದಾಳೆ. ಕೈ ಕೈ ಹಿಸುಕಿಕೊಳ್ಳುತ್ತ, ಮುಖದಲ್ಲಿ ಸಂಕಟ ವನ್ನು ತೋರುತ್ತ– ಗಿರಿಯ ಸಮೀಪಕ್ಕೆ ಹೋಗಿ ಅವನನ್ನು ಎಳೆಯುತ್ತ)

ಚಂಪ— ಇದೇನು ಬಂತು ಇವತ್ತು ನಿಮಗೆ !– ಇದೇನು ಅರ್ಥಟ ಆವೇಶ ! (ಗಿರಿ ಅವಳ ಮಾತನ್ನು ಲಕ್ಷಿಸದೆ ರಾಜನನ್ನು ಕೆಳಗೆ ಕೆಡವಿಕೊಂಡು ಗುದ್ದುತ್ತಾನೆ. ಇಬ್ಬರೂ ಕಾದಾಡು ತ್ತಾರೆ) ಅಯ್ಯೋ ! ಇವತ್ತೇನೋ ಬಂದಿದೆ ಬರಬಾರದ್ದು ಇವ ರಿಗೆ ! ಅಯ್ಯೋ ! ಖೂನಿ !–ಖೂನಿ !– ರಾಜ ಸಾಯ್ತಾನೆ ! (ಗಿರಿ ಹತ್ತಿರದಲ್ಲಿ ಇದ್ದ ಒಂದು ಬಣ್ಣದ ಮಡಕೆಯನ್ನು ತೆಗೆದುಕೊಂಡು ರಾಜನ ತಲೆ ಮೇಲೆ ಕುಟ್ಟುತ್ತಾನೆ. ಮಡಕೆ ಚೂರುಚೂರಾಗಿ ರಾಜನ ತಲೆ ಒಡೆದು ರಕ್ತ ಬರುತ್ತದೆ. ಚಂಪಳು ಇದನ್ನು ನೋಡಿ ತಡೆಯಲಾರದೆ ಹಿಂದಿನಿಂದ ಗಿರಿಯ ಮೇಲೆ ಬಿದ್ದು ಅವನನ್ನು ಹಿಂದಕ್ಕೆಳೆಯಲು ಪ್ರಯತ್ನಿಸುತ್ತಾಳೆ.)

ಗಿರಿ— (ಬುಸುಗುಟ್ಟುತ್ತ ಎದ್ದು, ನಿದಾನವಾಗಿ ಏಳುತ್ತಿದ್ದ ರಾಜನನ್ನು ನೋಡುತ್ತ– ಹಲ್ಲುಕಚ್ಚಿ– ಉತ್ಕಟ ಕೋಪದಿಂದ) ಹೊಲೆಯ!– ಹೊಲೆಯ !! ಹರಾಮಖೋರ !!!

ಚಂಪ— (ಉದ್ವೇಗದಿಂದ) ರಾಜ, ಹೋಗೋ ! ಬೇಗ ಹೋಗೋ ! ಇಲ್ಲಿರಬೇಡ ಹೋಗು !

ಗಿರಿ— ತೊಲಗೋ ! ನಾಯಿಮಗನೆ ! ತೊಲಗು ! ಇತಃಪರಃ ಈ ಮನೆ ಒಳಗೆ ಕಾಲಿಟ್ಟರೆ– ತಿಗಣೆ !– ತಿಗಣೆ !– ತಿಕ್ಕಿದ ಹಾಗೆ ತಿಕ್ಕಿಬಿಡ್ತೀನಿ ! (ಎಂದು ಕಾಲುಬೆರಳಿಂದ ನೆಲವನ್ನು ಉಜ್ಜಿ ಮಾತನ್ನು ಅನುಕರಿಸುವನು. ರಾಜ ಕದಲದೆ ಗಿರಿಯ ನೋಟಕ್ಕೆ ನೋಟ ಬೆರೆಸಿ ನಿಂತಿದ್ದಾನೆ. ಅವನ ಮುಖದಲ್ಲಿ ಕಾರ್ಮುಗಿಲು ಕೂಡಿ ನಿಂತಿದೆ.

ಚಂಪ— ಅಲ್ಲಾ !– ಇದೇನಿದು ಹುಚ್ಚು ?....ನೀವೇನೋ ತಪ್ಪು ತಿಳಿದುಕೊಂಡಿರೋ ಹಾಗಿದೆಯಲ್ಲ ?.... ಹೀಗಾದರೆ ಚೆನ್ನಾಯ್ತು !

ಗಿರಿ— (ಸೊಂಟದ ಮೇಲೆ ಕೈಯಿಟ್ಟು–ಚಂಪಳನ್ನೇ ದಿಟ್ಟಿಸಿ ನೋಡುತ್ತ) ಊ–ಹುಂ ? ತಪ್ಪು ತಿಳಿದುಕೊಂಡಿರೋದೆ ?– ತಪ್ಪು ತಿಳಿದುಕೊಂಡಿರೋದಲ್ಲ– ನಿನ್ನ ತಪ್ಪನ್ನ ತಿಳಿದುಕೊಂಡೆ ! – ವಿಶ್ವಾಸಘಾತುಕಿ !

ಚಂಪ— ಸಾಕು! ಸಾಕು! ಬಿಡಿ; ನಿಮ್ಮ ಅನುಮಾನಕ್ಕೆ ಂಕಿ ಬಿದ್ದು ಹೋಗ! ....ತಲೆ ನರೆತರೂ ನಾಚಿಕೆ ಬರಲಿಲ್ಲ ಲ್ಲ! (ಗಿರಿ ಅವಳ ಕೆನ್ನೆಗೆ ಬಲವಾಗಿ ಏಟು ಕೊಡುವನು. ಅವಳು ಟ್ಟಿಯಾಗಿ ಕೂಗುತ್ತ ಕೆಣಕಿದ ಸಿಂಹಿಣಿಯಂತೆ-ಹೆಡೆ ಬಿಟ್ಟ ಸರ್ಪ ಂತೆ- ವಿಸ್ಫಾರಿತ ನೇತ್ರ ಳಿಂದ) ಎಷ್ಟು ಧೈರ್ಯವೋ ನಗೆ-ನನ್ನ ಹೊಡೆಯೋಕೆ? ಾಚಿಕೆಗೆಟ್ಟ ಧೈರ್ಯ!.... ನು ಬಿಟ್ಟೇ ಬಿದ್ದು ಹೋದೆನೋ ?..ಇದೆಲ್ಲಾ ಟ್ಟಿಟ್ಟು ಬಿಡು!

ಗಿರಿ— ಊಹೂಂ?.. ಟ್ಟಿಡ್ತೀನಿ!-ಕಟ್ಟಿಡ್ತೀನಿ! ಸ್ವಲ್ಪ ನಿಧಾನಿಸು!

ಚಂಪ— ನಾಚಿಕೆಯಾ ಗೊಲ್ಲವೇ-ಹೆಣ್ಣು ಹೆಂಗಸಿನ ಮೇಲೆ ಕೈಮಾಡೋಕೆ ?- ಥೂ!-ಥೂ! ಥೂ!!

ಗಿರಿ—(ಉನ್ಮತ್ತನಾಗಿ ಗುತ್ತ) ಹ ಹ್ಹ ಹ ಹ್ಹಾ! ಜ! ನಿಜ! ಪಿಶಾಚಿ! ನ್ನ ಕೈಯಿಂದ ಮುಟ್ಟ ಕೂಡದು! ಕಾಲೇ ಸರಿ! ಒದೆಯುವನು.)

ಚಂಪ-(ನೋವಿನಿಂದ) ಯ್ಯೋ!.. (ಉದ್ವೇಗ ದಿಂದ) ನಿನ್ನ ಕಾಲು ಸೇದಿ ಹೋಗ – ಮುದಿಗೂಬೆ!- ನ್ನ ಮನೆಹಾಳಾಗ!!

ಗಿರಿ— (ಚಂಪಳ ಮುಂ ದಲೆ ಜಗ್ಗಿಸಿ- ದೂರಕ್ಕೆ ತಳ್ಳಿ) ಹುಂ!-ನನ್ನ ಅನ್ನ!- ನನ್ನ ಬಟ್ಟೆ!-ನನ್ನ ಹಾಸಿಗೆ!- ಎಲ್ಲ ಕ್ಕೂ ದ್ರೋಹ ಮಾಡಿದೆ ಪಾಪಿರಂಡೆ!.. ಹಹಾ! ಒಂದಾಯ್ತು.... ಎರಡಾಯ್ತು. ಎಲ್ಲಿ ಬಲವಂತವಿಲ್ಲವೋ ಅಲ್ಲೂ ದ್ರೋಹ! ಅಲ್ಲೂ ಮೋಸ!!....ಆಗಲಿ, ಆಗಲಿ-ಸೋಲು ಒಂದು ಸಲವಾಯ್ತು, ಇನ್ನು ಗೆಲುವು ನನಗೆ! (ಎಂದು ಚಂಪಳನ್ನೇ ನೋಡುತ್ತ ತಲೆ ತೂಗುವನು).

ಚಂಪ— ನೀನು ಏನು ಬೇಕಾದರೂ ಬೊಗಳಿಕೋ- ನನ್ನ ದಾರಿ ನನಗೆ- (ಎಂದು ರಾಜನ ಕಡೆ ಮೆಲ್ಲಗೆ ನೋಡುತ್ತಾಳೆ. ಗಿರಿ ಅದನ್ನು ನೋಡಿ ಪುನಃ ಉದ್ರೇಕಗೊಂಡು ರಾಜನ ಮೇಲೆ ಬೀಳಲು ಹೋಗುತ್ತಾನೆ. ಚಂಪಳು ಅಲ್ಲಿಯೇ ಮೇಜಿನ ಮೇಲಿನ ಒಂದು ದೊಡ್ಡ ಚಾಕು ವನ್ನು ತೆಗೆದುಕೊಂಡು ಗಿರಿಯನ್ನು ಹೆದರಿಸುತ್ತ) ನೀನೇನಾದರೂ ಆತನ ಮೈ ಮುಟ್ಟಿದರೆ ನೋಡು!

ಗಿರಿ— (ಚಂಪಳ ಕೈ ಯಿನ ಚಾಕುವನ್ನು ನೋಡಿ ರಾಜನ ಮೇಲೆ ಬೀಳಲು ಹಿಂತೆಗೆದು) ತೊಲಗೋ- ನಾಯಿ! .. ಹೇಳಿದ್ದು ಕೇಳಿಸಲಿಲ್ಲ ?- ತೊಲಗು! (ರಾಜನು ಗಂಭೀರದೃಷ್ಟಿ ಯಿಂದ ಒಂದೆರಡು ಬಾರಿ ಗಿರಿಯನ್ನೂ- ಚಂಪಳನ್ನೂ ನೋಡಿ ಹೊರಟು ಹೋಗು ತ್ತಾನೆ. ಗಿರಿ ಆವನು ಹೋದ ಮೇಲೆ ಚಂಪಳ ಕಡೆ ತಿರುಗಿ ಅವಳನ್ನು ಆಪಾದ ಮಸ್ತಕವೂ ನೋಡಿ) ಏನೇ ಅನ್ನ ದ್ರೋಹಿ!.. ನನ್ನ ಮೇಲೆ ಕೈ ಮಾಡುವಷ್ಟು ಧೈರ್ಯ ಬಂತೆ ನಿನಗೆ?

ಚಂಪ — ಓ ಹೋ ಮಾಡೇ ಮಾಡ್ತೀನಿ! ನಿನಗೂ ಹೆದರೊಲ್ಲ-ನಿಮ್ಮ ಪ್ಪನಿಗೂ ಹೆದರೊಲ್ಲ!

ಗಿರಿ — ಮುಚ್ಚು ಬಾಯಿ!-ಚರಂಡಿ ನಾಯಿ

ಚಂಪ — ಚರಂಡಿ ನಾಯೀನೋ-ಊಹುಂ!- ಚರಂಡಿನಾಯೀ ಮೂಸಿ ಕೊಂಡು ಬರೋನು ನೀನೆಲ್ಲೀ ನಾಯಿ?

ಗಿರಿ— ಕೇ! (ಎಂದು ಅವ ನೆಲಕ್ಕೆ ಕೆಡಹು- ಅವಳ ಕೈಲಿ ಹಾಗೆಯೆ ದಲ್ಲಿ ಬಿದ್ದಿದ್ದ ಸರಪಳಿಗ ತ್ತಾನೆ. ತನ್ನ ಮೊಳಕಾಲಿನಿಂದ ಳಮೇಲೆ ಚಟಕ್ಕನೆ ಬಿದ್ದು ಚಾಕು ಕಿತ್ತು ಎಸೆದು ನ್ನು ತೆಗೆದುಕೊಳ್ಳು ಅವಳನ್ನು ನೆಲಕ್ಕೆ

'ಜಯಂತಿ'ಯ ಲೇಖಕರಿಗೆ:

(೧) ಜಯಂತಿಗೆಂದು ಬರಲಿರುವ ಪ್ರತಿಯೊಂದು ಲೇಖನವೂ ಪಂಡಿತ-ಪಾಮರರಿಬ್ಬರ ಮನಸ್ಸನ್ನೂ ಸೆಳೆದುಕೊಳ್ಳುವಂತಹ ವಿಷಯಗೌರವದಿಂದ ಕೂಡಿದ್ದು, ಜನಸಾಮಾನ್ಯರಿಗೆ ತಿಳಿಯುವಂತೆ ಭಾಷೆ, ಶೈಲಿಗಳು ಸರಲವೂ ಸುಲಭವೂ ಇರಬೇಕು.

(೨) ಯಾವುದೇ ಲೇಖನವು ಜಯಂತಿಯ ಮೂರು-ನಾಲ್ಕು ಪುಟಗಳನ್ನು ಮಿಕ್ಕಿ ಇರಲಾಗದು. ಜಯಂತಿಯ ಒಂದು ಪುಟದಲ್ಲಿ ಸುಮಾರು ನಾನೂರರಷ್ಟು ಶಬ್ದಗಳು ಕೂಡುವುವು. ಈ ಪ್ರಮಾಣವನ್ನರಿತು ಲೇಖಕರು ತಮ್ಮ ಲೇಖನಗಳನ್ನು ಅನುಗೊಳಿಸಬೇಕು. ಉದ್ದುದ್ದ ಕವನಗಳಿಗಿಂತ ಸಣ್ಣ ಸಣ್ಣ ಭಾವಗೀತಗಳಿದ್ದರೆ ಹೆಚ್ಚು ಒಳ್ಳೆಯದು.

(೩) ತಮ್ಮ ಲೇಖನವು ಅಚ್ಚಾಗಬೇಕಾದುದೆಂಬುದನ್ನು ಪ್ರತಿಯೊಬ್ಬ ಲೇಖಕನೂ ಲಕ್ಷ್ಯದಲ್ಲಿಟ್ಟುಕೊಂಡಿರಬೇಕಾದುದು ಅತ್ಯಗತ್ಯ. ಆದಕ್ಕಾಗಿ ಅಚ್ಚಿಗೆ ತೊಂದರೆಯಾಗದಂತೆ, ಬರೆಯುವ ಹಾಳೆಗಳಿಗೆ ಸಾಕಷ್ಟು ಬದಿಯಂಚು (Margin) ಬಿಟ್ಟು, ಸ್ಫುಟವಾದ ಅಕ್ಷರಗಳಿಂದ ಒಂದೇ ಮಗ್ಗಲು ಬರೆಯಬೇಕು.

(೪) ಯಾವುದೇ ಪರಭಾಷೆಯ ಲೇಖನದ ಅನುವಾದ ಇಲ್ಲವೆ ಭಾಷಾಂತರವಿದ್ದಲ್ಲಿ ಆ ಮಾತನ್ನು ಸ್ಪಷ್ಟೀಕರಿಸುವುದಕ್ಕೆ ಮರೆಯಲಾಗದು.

(೫) ಜಯಂತಿಗೆಂದು ಬರುವ ಲೇಖನಗಳು ಆ ಮೊದಲು ಇನ್ನೆಲ್ಲಿಯೂ ಅಚ್ಚಾಗಿರಬಾರದು. ಮುಂದೆ ಅಚ್ಚಾಗಬೇಕಾದರೆ ನಮ್ಮ ಸಮ್ಮತಿ ಕೇಳಿಕೊಳ್ಳಬೇಕು.

(೬) ತಮ್ಮ ಲೇಖನಗಳಲ್ಲಿ ಚಿತ್ರಗಳನ್ನು ಬಯಸುವವರು, ಸಾಧ್ಯವಿದ್ದಲ್ಲಿ ಯುಕ್ತವಾದ ಚಿತ್ರಗಳನ್ನು ಯಾರಿಂದಾದರೂ ಬರೆಯಿಸಿ ಲೇಖನದ ಜೊತೆಗೆ ಕಳುಹಿಸಬಹುದು. ಒಪ್ಪಿಗೆಯೆನಿಸಿದರೆ ಅವುಗಳ ಪಡಿಯಚ್ಚನ್ನು ನಾವೇ ಮಾಡಿಸುವೆವು.

(೭) ತಮ್ಮ ಲೇಖನವು 'ಸ್ವೀಕೃತ-ಅಸ್ವೀಕೃತ' ಎಂಬುದನ್ನು ಕೂಡಲೆ ತಿಳಿದುಕೊಳ್ಳಲಪೇಕ್ಷಿಸುವವರು ಲೇಖನದ ಜೊತೆಗೆ ಮುಕ್ಕಾಲಾಣೆಯ ಅಂಚೆಯ ಟಿಕೇಟುಗಳನ್ನಿಟ್ಟಿರಬೇಕು.

(೮) ಅಸ್ವೀಕೃತ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆಯ ಟಿಕೇಟುಗಳನ್ನು ಕಳುಹಬೇಕು. ಅಚ್ಚಾದ ಲೇಖನಗಳ ಮೂಲಪ್ರತಿಗಳನ್ನು ಮರಳಿ ಅಪೇಕ್ಷಿಸುವವರು ಮೊದಲೇ ನಮಗೆ ಬರೆದು ತಿಳಿಸಿರಬೇಕು.

ಸಂಪಾದಕ : 'ಜಯಂತಿ' ಧಾರವಾಡ.

ಒತ್ತಿಕೊಂಡು ಅವಳನ್ನು ಸರಪಳಿಗಳಿಂದ ಭದ್ರವಾಗಿ ಬಿಗಿಯುತ್ತಾ) ಈಗ ನೋಡು !– ನೀನು ಹೇಳಿದೆಯಲ್ಲಾ ಕಟ್ಟಿಡು ಅಂತ–ಕಟ್ಟಿಟ್ಟೆ!

ಚಂಪ– (ಬಿಡಿಸಿಕೊಳ್ಳಲು ಒದ್ದಾಡುತ್ತ) ಬಿಡೋ, ಬಿಡೋ ನನ್ನ !– ಮುದಿಕತ್ತೆ !!.... ನಿನ್ನ ಮನೆ ಹಾಳಾಗ !!

ಗಿರಿ — ನೀನು ಕಾಲಿಟ್ಟ ದಿನವೇ ಹಾಳಾಯ್ತು !! (ಎಂದು ಅವಳನ್ನು ಎಳೆದುಕೊಂಡು ಹೋಗಿ, ಮೊದಲು ಕಟ್ಟಿದ್ದ ಕಂಭಕ್ಕೆ ಅಲುಗದ ಹಾಗೆ ಬಲವಾಗಿ ಬಿಗಿದು ಕಟ್ಟುತ್ತಾನೆ.)

ಚಂಪ— ಆಗಲಿ, ಏನೇನು ಮಾಡುತ್ತೀಯೋ ನನಗೂ ದೇವರಿದ್ದಾನೆ!

ಗಿರಿ— ಏನಂದೆ? ದೇವರೆ? ಹಹ್ಹಹ್ಹಾ !!—... ದೇವರು! ಎಲ್ಲಿದ್ದಾನೆ ದೇವರು?.... ನೀನಿದ್ದ ಊರಿನಲ್ಲಿ ಇರೊಲ್ಲ ದೇವರು! ದೇವರಂತೆ !– ದೇವರು ! ಅಬ್ಬಾ ! ಪಿಶಾಚಿ !– ಆಹಹಹಹಾ !– ಅದೆಂಥಾ ಕಳ್ಳಮೋಹ– ಸುಳ್ಳು ನಟನೆ !.... ವಿಷದ ಮೊಟ್ಟೆ!!

ಚಂಪ— ಊ! ಮೋಹ! .... ಮೋಹವಂತೆ ಈ ಮುದಿ ಕರಡಿಗೆ! ಆಹಾಹಾ! ನೀನೇನೋ–ನಿನ್ನ ರೂಪೋ !– ನಿನ್ನ ದುರ್ನಾತವೋ? ನಿರ್ವಾಹವಿಲ್ಲ !– ಮುದಿಮುಂಗನ ಮೋಹ! .... ನಿನ್ನ ಆಸ್ತಿ ಹೊಟ್ಟೆಗೆ ಬೇರೆಗಾಗಿ 'ಇಲ್ಲ ಇದ್ದೇ [illegible] ?—.... ತಿಳಿಗೇಡಿ!

ಗಿರಿ— (ಅಲ್ಲೇ ಬಿದ್ದಿದ್ದ ಒಂದು ಚಾಕುವನ್ನು ತೆಗೆದುಕೊಂಡು ಅವಳ ಬಾಯಿಗೆ ತುರುಕಿ) ಈಗ?.... ಈಗ?– ಮಾತಾಡು ನೋಡೋಣ– ನನ್ನರಗಿಣಿ! (ಹುಬ್ಬು ಹಾರಿಸಿ ತಲೆ ಆಡಿಸುತ್ತ) ಈಗ ಸರಿಯಾಯ್ತು ನಿನಗೆ!.... ಲೇ ಚಂಪೆ!– ಆಯಿತಲ್ಲ ನಿನ್ನ ಮಾತು– ಇನ್ನು ನಾನು ಸ್ವಲ್ಪ ಮಾತಾಡ್ತೀನಿ– ಕೇಳು.. ಚಂಪಾ, ನಿನ್ನನ್ನು ಎಷ್ಟು ಪ್ರೀತಿಸುತ್ತಿದ್ದೆ ! .... ನೀನು ಸಿಕ್ಕಾಗ.... ಹಳೇ ವಿಷವೆಲ್ಲಾ ನನ್ನ ಹೃದಯದಿಂದ ತೊಡೆದು ಹೋಯ್ತೇಂತ ಮಾಡಿದ್ದೆ!.... ಆಹಾ! ನೀನೊಂದು ಹೊಸ ವಿಷವಾದೆ !!.... ಪ್ರೀತಿಯ ಬಂಧನವೇ ಶಾಶ್ವತ– ಎಂದು ತಿಳಿದಿದ್ದೆ– ನೀನು ಅದನ್ನೂ ಮಣ್ಣುಪಾಲು ಮಾಡಿದೆ!...... ಹೆಣ್ಣು ಹೂವಿನಂತೆ ಕೋಮಲವಾದ್ದು– ದೇವಿಯಂತೆ ಪೂಜ್ಯವಾದ್ದು– ಅಂತ ನಾನೂ ಒಂದು ಕಾಲದಲ್ಲಿ ನಂಬಿದ್ದೆ!.... ಏಳುವರ್ಷದ ಹಿಂದೆ ಅದೆಲ್ಲಾ ನಿರ್ನಾಮವಾಯಿತು!.... ನೀನು ನನ್ನ ಕಣ್ಣಿಗೆ ಬಿದ್ದೆ– ಪುನಃ ಎಲ್ಲಾ ಬದಲಾಯಿಸಿತು! ಚಂಪಾ!.. ನೀನು ನನ್ನ ಮನೇ ಬಾಗಿಲಿಗೆ ಭಿಕ್ಷಕ್ಕೆ ಬಂದ ದಿನ!– ಅದೆಂಥಾ ಕೆಟ್ಟದಿನ! .... ಹುಂ! ...."ನಸ್ತ್ರೀಸ್ವಾತಂತ್ರ್ಯಮರ್ಹತಿ" ಪಾಪ, ಹಾಗೆ ಹೇಳಿದ ಮಹಾನುಭಾವ ಬಲು ಶೋಕರ್ ತಿಂದಿರಬೇಕು !! ಈಗ ಗೊತ್ತಾಯಿತೆ!– ಹೆಣ್ಣು ಬಂಧನದಲ್ಲಿರೋ ಹಾಗೆ ಯಾಕೆ ಚಿತ್ರಗಳನ್ನ ಬರೀತಿದ್ದೇಂತ?.. ಇಷ್ಟು ಸುಂದರವಾದ ಭಗವಂತನ ಸೃಷ್ಟಿಯಲ್ಲಿ ಒಬ್ಬನೇ ಒಂದು ಡೊಂಕು !–..ಹೆಣ್ಣು! ಸಮಾಜ ಅನ್ನೋ ನಾಯಿಗಳು ಡೊಂಕುಬಾಲ ಹೆಣ್ಣು !! .... ಆಹಾ, ಎಲ್ಲರೂ ನನ್ನನು ಹುಚ್ಚಾಂತ ತಿಳಿಕೊಂಡಿದ್ದರು!– ಹುಟ್ಟು–ಹುಚ್ಚರು! ಆಹಾ!–ಚಂಪಾ, ಈಗ ನೀನು ನನ್ನ ಭಾವನೆಯ ಮೂರ್ತಿಮತ್ತಾದ ರೂಪ !.. ಇದಕ್ಕೆ ಮೊದಲು, ಎಂದೂ ನೀನು ಮುಖದಲ್ಲಿ ಈ ಯಾತನೆ– ಈ ರೋಷ ತೋರಿಸುತ್ತಿರಲಿಲ್ಲ !.. ಅದಿಲ್ಲದೇ ನನ್ನ ಚಿತ್ರಗಳು ಅಪೂರ್ಣವಾಗುತ್ತಿದ್ದುವು. ಆಗ ಅದೆಲ್ಲಾ ನಾಟಕದ ಬಂಧನ, ನಾಟಕದ ಯಾತನೆ– ನಾಟಕದ ರೋಷ! ಈಗಲೀಗ ಸರಿ!– ಬಹಳ ಸ್ವಾಭಾವಿಕವಾಗಿದೆ!.. ಬಹಳ! ಬಹಳ!!– ಬಹಳ ಸೊಗಸಾಗಿದೆ!.. ಆಹಾ ಇಂದು ನನ್ನ ಚಿತ್ರ ಪೂರ್ಣವಾಯ್ತು!.. ಸಂಪೂರ್ಣವಾಯ್ತು !! ನೀನು ಹದಿನಾರಾಣೆ ದಿವಾಸ್ವೈರಿಣಿಯಾದರೇನು!.. ಈ ಸ್ಥಿತಿಯಲ್ಲಿ ನಿನ್ನ ರೂಪ ಕಣ್ಣಿಗೆ ಹೆಂಡದಂತಿದೆ !! ಹ್ಹ–ಹ್ಹ–ಹ್ಹ–ಹ್ಹಾ! (ಅವಳ ಸಮೀಪಕ್ಕೆ ಬಂದು ಅವಳ ಮುಡಿಯನ್ನು ಬಿಚ್ಚಿ ಕೆದರಿ ಅವಳ ಭುಜಗಳಮೇಲೆ ಕೆದರುತ್ತ) ಇನ್ನೂ ಚೆನ್ನಾಯಿತೀಗ .. ತಾಳು! ತಾಳು! ರಕ್ತ!.. ರಕ್ತ ಚಿತ್ರಕ್ಕೆ ರಂಗುಕೊಡುತ್ತೆ! (ಅಲ್ಲೇ ಕೆಳಗೆ ಬಿದ್ದಿದ್ದ ಚಾಕುವನ್ನು ಹುಡುಕಿ ತೆಗೆದುಕೊಂಡು ಅವಳ ಕೆನ್ನೆಯ ಮೇಲೆ ಗಾಯವುಮಾಡುವನು. ರಕ್ತ ಚಿಮ್ಮುವುದು– ಚಂಪಳು ಮುಖದಲ್ಲಿ ಬಹಳ ಯಾತನೆಯನ್ನು ತೋರುವಳು) ಹೋ!– ಹೋ! ಹೋ!! ರಕ್ತಚಿತ್ರ!– ಮಹಾಚಿತ್ರ!!.. ಸಫಲವಾಯ್ತು!–.. ಗೆದ್ದೆ! ಗೆದ್ದೆ !!!– (ಎದೆತಟ್ಟಿಕೊಂಡು ಉನ್ಮತ್ತನಾಗಿ ಕುಣಿಯುತ್ತಾನೆ).. ಚಂಪಾ, ಈ ಏಳು ವರ್ಷದಲ್ಲಿ ಇಂಥಾ ಚಿತ್ರಕ್ಕೆ ನೂರಾರುಸಲ ಪ್ರಯತ್ನಪಟ್ಟೆ– ಸಫಲವಾಗಲಿಲ್ಲ; ಇಂಥಾ ಮಾದರಿ ಎಂದೂ ನನ್ನ ಮುಂದಿರಲಿಲ್ಲ! ಇಂದು– ನನ್ನ ಈ ಜನ್ಮದ ಕಾರ್ಯ ಮುಗೀತು! ಗೆದ್ದೆ! .. (ಸ್ವಲ್ಪ ಹೊತ್ತು ಮೌನವಾಗಿರುತ್ತಾನೆ) .... ಚಂಪಾ, ಚಂಪಾ, ನೀನು ಎಲ್ಲಿದ್ದೆ?.. ಎಲ್ಲಿಗೆ ಬಂದೆ? .. ಚಿಪ್ಪು ಹಿಡಿದು ಬೀದಿ ಬೀದಿ ಅಲೆಯುತ್ತಿದ್ದೆ– ಭಿಕಾರಿಣಿ!– ಚರಂಡಿಯಲ್ಲಿ ಬಿದ್ದು ಹೊರಳಾಡುತಿದ್ದೆ!– ಚಾಂಡಾಲಿ! ಕೈಹಿಡಿದೆತ್ತಿ– ಚಂಪಾ ಎಂದು ಕರೆದು– (ಎದೆ ತಟ್ಟಿಕೊಳ್ಳುತ್ತ) .. ಇಲ್ಲಿ ಧರಿಸಿದೆ!.. ಅದರೇನು!– ನೀನು ನಿನ್ನ ಚರಂಡಿ ಚಾಳಿ ತೋರಿಸಿಯೇ ಬಿಟ್ಟೆ! ನನಗೇ ಮೋಸ ಮಾಡಿದೆಯಲ್ಲಾ ನೀನು! .. ಹುಂ! ಅದರೇನು? ಮೋಸ ನಿನ್ನದಾಯಿತು!– ಗೆಲುವು ನನ್ನದಾಯಿತು! ಸ್ತ್ರೀರೂಪದ ನಾಯಿ ಮುಂಡೆ! .. ಚಂಪ, ನಿನಗೆ ಏನು ಕಟ್ಟುಕಟ್ಟಳೆ ಇತ್ತು?.. ನೀನೂ ಕೊಟ್ಟೆಯಲ್ಲಾ ಕೈ!.. ಹುಂ! ಹೆಣ್ಣಿನ ಕುಲವೇ ಹೀಗೆ! ಸತಿಯಾಗಲಿ– ಸೂಳೆಯಾಗಲಿ– ಹೆಂಗಸನ್ನು ನಂಬಿ ಸುಖಿಯಾದೇ ಅನ್ನುವ ನರಪ್ರಾಣಿಯಾದರೂ ಇದೆಯೇ ಈ ಲೋಕದಲ್ಲಿ? .. ಹೊಲೆತೀ, ನಿಮಗೆ ಒಡವೆ– ಬಟ್ಟೆ, ಪ್ರೇಮ–ಒಲವು, ನಂಬಿಕೆ, ಒಂದೂ ಒಪ್ಪುವುದಿಲ್ಲ! ನಿಮಗೆ ಒಪ್ಪುವುದು ಒಂದೆ!–ಒಂದೇ!!– ಬಂಧನ!–ಕಬ್ಬಿಣದ ಸರಪಳಿ ಬಂಧನ!....ಹಿಂದೆ– (ಕೈ ತೋರಿಸುತ್ತ) ನನ್ನ ಕೈ ಹಿಡಿದು ಹೆಂಡತಿ ಅನ್ನಿಸಿಕೊಂಡವಳು, ನನಗೆ ಕಲಿಸಿದ ಗುರುವಿಗೇ ಮನಸೋತು ಮೈಸೋತಳು. ಇಂದು, ನಾನು ಕೈ ಹಿಡಿದೆತ್ತಿದ ನೀನು ನನ್ನ ಶಿಷ್ಯನಿಗೆ ಮೈಸೋತೆ!– ಅಂದು ಆದ ಗಾಯ ಗುಣವಾಯ್ತು–ಇಂದು ಆಗ್ತೀರೋ ಗಾಯ ಗುಣವಾಗುವುದಲ್ಲ!....(ವ್ಯಂಗ್ಯವಾಗಿ) ನಗುತ್ತ ಹುಂ!–ಕಟ್ಟಿದ ಹೊರತ

ಕಣ್ಣನ್ನ ಇಟ್ಟುಕೊಳ್ಳೋ ಉಪಾಯವೇ ಇಲ್ಲಾಂತ ಕಾಣುತ್ತೆ! ಪೂರ್ಣವಾಗಿ ನಂಬಿದವನನ್ನು ಸಹ ಅಡಿಗಡಿಗೆ ಮೋಸಗೊಳಿಸಿ ಅವನಿಗೆ ನರಕಯಾತನೆ ಕೊಡುವುದಕ್ಕೆ– ಸ್ವಲ್ಪವೂ ಹಿಂತೆಗೆಯುವುದಿಲ್ಲ! – ಹೇಸುವುದಿಲ್ಲ!– ಸ್ತ್ರೀ ಜಾತಿ!! ...... ಅಬ್ಬಾ! ಇದೇನು ತಲೆ ತಿರುಗುತ್ತಾ ಇದೆ.... (ಎಂದು ಸ್ವಲ್ಪ ತೂರಾಡುವನು; ಆ ಮೇಲೆ ಹಾಗೆಯೇ ಚೇತರಿಸಿಕೊಂಡು) ....ಹುಂ! ಹುಟ್ಟುಗುಣ ಸುಟ್ಟರೂ ಹೋದೀತೇ!....ಹಾ! ಹಾ!!–ಸುಟ್ಟರೆ ಹೋಗಬಹುದು! ಹೌದು! ಹೌದು! ಸುಡಬೇಕು!— ಈ ಹುಳುವನ್ನು ಸಜೀವವಾಗಿ ಸುಟ್ಟು ಬೂದಿ ಮಾಡಿಬಿಡಬೇಕು!!– ಅದೇ ಸರಿ!...., ಚಂಪಾ, ನಿನಗೆ ಬೆಂಕಿ ಇಡುತ್ತೇನೆ! (ಚಂಪಳು ಗಾಬರಿಯಿಂದ ಒದ್ದಾಡುತ್ತಾಳೆ. ನರಳುತ್ತಾಳೆ) – ನರಳುತ್ತೀಯಾ?– ನರಳು! – ನರಳು!!–ಬಹಳ ಹೊತ್ತಿಲ್ಲ ಇನ್ನು ನರಳುವುದು! ....(ಚಂಪಳು ತಲೆ ಅಲ್ಲಾಡಿಸುತ್ತಾಳೆ) ಏನು? ಬೇಡವೇ? ಬೆಂಕಿ ಹಚ್ಚೋದು? ಹ-ಹ್ಹಾ! ನೀನು– ಚಂಪಾ– ನೀನು ನನ್ನ ಎದೆಗೇ ಬೆಂಕಿ ಇಟ್ಟೆ!– ನಾನು ನಿನ್ನ ಕಾಲಿಗಾದರೂ ಬೆಂಕಿ ಇಡಬೇಡವೇ?- ನೀನೇ ಹೇಳು? (ಚಂಪಳು ಮಾತನಾಡಲಾರಳು) ಹುಂ! ಹಚ್ಚಲೋ? ಅಗ್ನಿಹೋತ್ರಕ್ಕೆ ಅಪ್ಪಣೆಯೋ? (ಚಂಪಳು ನಿಶ್ಚಲಳಾಗುತ್ತಾಳೆ) ಸರಿ, ನಿನ್ನ ಒಪ್ಪಿಗೆಯಾಯ್ತು! (ಅಲ್ಲೇ ಬಿದ್ದಿದ್ದ ಕೆಲವು ಹಳೇ ಕಾಗದ–ಕಸದ ಬುಟ್ಟಿ–ಚಿಂದಿ ಬಟ್ಟೆ ಎಲ್ಲವನ್ನೂ ಸೇರಿಸಿ ಅವಳ ಕಾಲುಬುಡದಲ್ಲಿ ಗುಡ್ಡೆ ಹಾಕುತ್ತಾನೆ-ಅವಳು ಅಲ್ಲಾಡುವುದಿಲ್ಲ) ಹುಂ! ಆಯ್ತು (ಕೈಕೊಡವಿಕೊಳ್ಳುತ್ತ ಏಳುತ್ತಾನೆ) ಈಗೆಲ್ಲಾ ಸಿದ್ಧವಾಯ್ತು! ಇನ್ನು ನಿನ್ನ ದಹನ! ಸಜೀವವಾದ ದಹನ!!–ಚಂಪಾ; ಹ–ಹ್ಹ- ಹ್ಹ–ಹ್ಹಾ!– ಹ್ಹ-ಹ್ಹ-ಹ್ಹ-ಹ್ಹಾ!! (ಎಂದು ಉನ್ಮಾದದುದ್ರೇಕದಿಂದ ಕುಣಿಯುವನು. ಅವನಿಗೆ ರಾಜ ಹೊರಗಿನಿಂದ ಬಂದು ನಿಂತಿದ್ದು ಗೊತ್ತಾಗುವುದಿಲ್ಲ. ಚಂಪಳು ಸ್ವಲ್ಪ ಅಲುಗುತ್ತಾಳೆ)..ಚಂಪಾ, ಸ್ವಲ್ಪ ಹಾಗೇ ಇರು-ಅಲುಗಬೇಡ! ಈ ಚಿತ್ರ, ಚಂಪಾ, ನಾನು ಬರೆದ ಎಲ್ಲಾ ಚಿತ್ರಗಳಿಗಿಂತ ಚೆನ್ನಾಗಿದೆ! ಬೆಂಕಿ ಇಟ್ಟುಬಿಟ್ಟರೆ-ಓ-ಹೋ ಹೋ-ಹೋ!! ಇನ್ನೂ ಕಳೆಯೇರುವುದು! .... ಆಹಾ! ಸುಮ್ಮನಿರು ಚಂಪಾ, ನಿನ್ನ ಈ ದಹನಚಿತ್ರವನ್ನ-ಅಮರವಾಗಿ – ಆಚಂದ್ರಾರ್ಕವಾಗಿರುವಂತೆ ಮಾಡುತ್ತೇನೆ! .. ಆ ಮುಂದಿನ ಕೀರ್ತಿಯ ಕನಸು ಕಾಣುತ್ತ- ಹೊರಡು- ಬೆಂಕಿಯ ಬೆನ್ನಿನ ಮೇಲೆ! ....ಇಗೋ, ಇಟ್ಟೆ ಬೆಂಕಿ! (ಗಿರಿಯು ಕಡ್ಡಿ ಗೀರಿ ಬೆಂಕಿ ಹೊತ್ತಿಸಲು ಹೋಗುವನು. ಅಷ್ಟರಲ್ಲಿ ರಾಜ ಹಿಂದಿನಿಂದ ಅವನ ಮೇಲೆ ಹಾರಿ ಕೆಳಗೆ ಕೆಡವಿಕೊಂಡು, ಬಲವಾಗಿ ಅವನ ಕುತ್ತಿಗೆಯನ್ನು ಹಿಸುಕುವನು ಒಂದು ಕ್ಷಣದಲ್ಲಿ ಗಿರಿ- ನಿಶ್ಚೇಷ್ಟಿತನಾಗುವನು- ರಾಜ ಎದ್ದು ಚಂಪಳ ಬಾಯಿ ಬಟ್ಟೆ ತೆಗೆದು ಸರಪಳಿಗಳನ್ನು ಬಿಚ್ಚುತ್ತಿದ್ದ ಹಾಗೆಯೇ)

—ತೆರೆ *

ಐದು ವರ್ಷದ ಯೋಜನೆ

ರಶಿಯಾದಲ್ಲಿ ಸರಕಾರವು ಹೂಡಿದ ಐದು ವರ್ಷದ ಯೋಜನೆಯ ವಿಷಯವಾಗಿ ಅನೇಕ ವಿನೋದಗಳಿವೆ. ಅವುಗಳಲ್ಲಿ ಮಾರ್ಮಿಕವಾದುದೊಂದು ಹೀಗಿದೆ:—

ಒಬ್ಬ ರಶಿಯನ ಮನುಷ್ಯನು ಅಮೇರಿಕದ ಪ್ರವಾಸಿಗೆ ಪಟ್ಟಣವನ್ನು ತೋರಿಸುತ್ತ ನಡೆದಿದ್ದನು. ದಾರಿಯಲ್ಲಿ ಒಂದೆಡೆ ಕಲ್ಲು ಇಟ್ಟಿಗೆಗಳು ಹೇರಳವಾಗಿ ಬಿದ್ದಿದ್ದುವು. ಇದೇನು? ಎಂದು ಪ್ರವಾಸಿಕನು ಕೇಳಿದನು. 'ನಮ್ಮಲ್ಲಿ ಐದು ವರ್ಷದ ಯೋಜನೆ ಹೂಡಿದೆ. ಇನ್ನು ಐದು ವರ್ಷಗಳಾದ ಮೇಲೆ ಬಂದು ನೋಡಿದರೆಂದರೆ ನಿಮ್ಮ ಗಗನಚುಂಬಿತ ಮಂದಿರಗಳಿಗಿಂತಲೂ ಉನ್ನತವಾದ ಕಟ್ಟಡಗಳು ಈ ಸ್ಥಾನದಲ್ಲಿ ನಿಂತುದನ್ನು ನೋಡುವಿರಿ' ಎಂದು ರಶಿಯನನು ಉತ್ತರ ಕೊಟ್ಟನು. ಮುಂದೆ ಮತ್ತೊಂದೆಡೆ ಸಣ್ಣಸಣ್ಣ ಕಬ್ಬಿಣದ ತುಂಡು ಬಿದ್ದಿದ್ದುವು. 'ಇನ್ನು ಐದು ವರ್ಷಗಳ ನಂತರ ಬಂದರೆ ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡದಾದ ಕಬ್ಬಿಣದ ಕಾರ್ಖಾನೆಯನ್ನು ಇಲ್ಲಿ ನೋಡುವಿರಿ' ಎಂದು ರಶಿಯನನು ಲಗುಬಗೆಯಿಂದ ಹೇಳಿದನು.

ಕೊನೆಗೆ ಒಂದು ಅಂಗಡಿಯ ಎದುರು ನೂರಾರು ಜನರು ಗುಂಪುಗುಂಪಾಗಿ ನಿಂತ ದೃಶ್ಯವು ಪ್ರವಾಸಿಗನಿಗೆ ಕಾಣಿಸಿತು. 'ಇದೇನು?' ಎಂದು ಅವನು ಆಶ್ಚರ್ಯದಿಂದ ಕೇಳಿದನು. ಅದಕ್ಕೆ ರಶಿಯನನು ಹೀಗೆ ಉತ್ತರ ಕೊಟ್ಟನು —

'ನಮ್ಮ ಐದುವರ್ಷದ ಯೋಜನೆಯಲ್ಲಿ ಅನ್ನವನ್ನು ಒದಗಿಸುವ ಅಂಗಡಿ ಇದು. ಈಗೇನೊ ನೂರಾರು ಜನರೆ ಅನ್ನದ ತುತ್ತಿಗಾಗಿ ಕಾದುಕೊಂಡು ನಿಂತಿದ್ದಾರೆ. ಇನ್ನು ಐದು ವರ್ಷಗಳ ತರುವಾಯ ಅದೇ ಅನ್ನದ ತುತ್ತಿಗಾಗಿ ಕಾದುಕೊಂಡು ನಿಲ್ಲಬೇಕೆಂದರೆ ಮಾಸ್ಕೋ ನಗರವೆ ಸಾಲಲಿಕ್ಕಿಲ್ಲ. ಅಷ್ಟು ಜನಸಂದಣಿಯನ್ನು ನೀವು ಕಾಣುವಿರಿ'!

—— :o: ——

* ಈ ಕೃತಿಯು, ಒಂದು ಜಪಾನೀ ಏಕಾಂಕನಾಟಕದ, ಇಂಗ್ಲೀಷು ತರ್ಜುಮೆಯ ಕನ್ನಡ ರೂಪಾಂತರ

ರುದ್ರಪ್ಪ

(ಸಣ್ಣ ಕತೆ) *

ಲೇಖಕರು : ಅ. ನ. ಕೃಷ್ಣರಾಯರು.

ಸಂಪಾದಕರು : " ವಿಶ್ವವಾಣಿ "

ಬೆಂಗಳೂರು ನಗರ

ಶನಿವಾರ ಸಂಜೆ, ಭಾನುವಾರ ಬೆಳಗ್ಗೆ ಆಕಸ್ಮಾತ್ ಶ್ರೀನಿವಾಸಾಚಾರ್ಯರ ಬೀದಿಯಲ್ಲಿ ಹೋಗುವುದೆಂದರೆ ನನಗೊಂದು ಸಂತೋಷ. ಇತರರ ಕಣ್ಣಿಗೆ ಬೀಳದ ಸೊಗಸೂ, ಮನಸ್ಸಿಗೆ ವೇದ್ಯವಾಗದ ಸುಖವೂ ನನ್ನದಾಗುವುದಕ್ಕೆ ನಮ್ಮ ಊರಿನ ಪ್ರತಿಯೊಂದು ಭಾಗವನ್ನೂ ಪ್ರತಿಯೊಂದು ಬೀದಿಯನ್ನೂ ನಾನು ಪ್ರೀತಿಸುತ್ತಿದ್ದುದೇ ಕಾರಣವಾಗಿರಬಹುದು. ಎಷ್ಟೋ ಸಲ ಜೊತೆಯಲ್ಲಿ ಬರುತ್ತಿದ್ದ ಗೆಳೆಯರು ' ಆ ಬೀದಿ ಬೇಡಯ್ಯಾ, ಅಲ್ಲಿ ಅಸಾಧ್ಯ ಗಲಭೆ. ಜನಸಂದಣಿಗೆ ದೂರವಾದ ಬೇರೊಂದು ರಸ್ತೆಯನ್ನು ಹಿಡಿಯೋಣ " ಎಂದು ಹೇಳುತ್ತಿದ್ದರೂ ಆ ಎರಡು ದಿವಸಗಳು ಅವರ ಮಾತುಗಳು ನನ್ನ ಕಿವಿಯ ಮೇಲೆ ಬೀಳುತ್ತಿರಲಿಲ್ಲ.

ಇದಕ್ಕೆ ರುದ್ರಪ್ಪನೂ ಕಾರಣವಿರಬಹುದು. ರುದ್ರಪ್ಪನನ್ನು ಕಾಣದಿದ್ದವರು ವಿರಳ. ಆದರೆ ನನ್ನ ಹಾಗೆ ಯಾರೂ ಕಂಡಿರಲಿಲ್ಲವೆಂದು ಸಹಜ ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದು. ಅವನ ಅಂಗಡಿಯಲ್ಲಿ ಎಷ್ಟೋ ಜನ ವ್ಯಾಪಾರ ಮಾಡಿದ್ದರು, ಚೌಕಾಸಿ ಮಾಡಿ ಬಯ್ಯಿಸಿಕೊಂಡಿದ್ದರು, ಅಗ್ಗವಾಗಿ ಉತ್ತಮ ಪದಾರ್ಥ ದೊರೆಯಿತೆಂದು ಹಿಗ್ಗಿಯೂ ಇದ್ದರು. ಅವನೊಂದಿಗೆ ಬಗೆಬಗೆಯಾಗಿ ವ್ಯವಹರಿಸಿದ್ದರು. ಆದರೂ ರುದ್ರಪ್ಪನನ್ನು ಯಾರೂ ಕಂಡಿರಲಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ.

ವಾರದ ಐದು ದಿವಸ ಕುಟುಕುಜೀವ ಧರಿಸಿರುತ್ತಿದ್ದ ರುದ್ರಪ್ಪನ 'ಏಲಂ ಅಂಗಡಿ'ಗೆ (ಆಕ್ಷನ್ ಷಾಪ್) ಶನಿವಾರ ಸಂಜೆ, ಭಾನುವಾರ ಬೆಳಗ್ಗೆ ಈ ಎರಡು ಹೊತ್ತು ಪೂರ್ಣ ಪ್ರಾಣ ಬಂದುಬಿಡುತ್ತಿತ್ತು. ಆದರಿಂದ ರುದ್ರಪ್ಪನಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡುತ್ತಿರಲಿಲ್ಲ. ಸಿರಿ ಬಂದಾಗ ಹಿಗ್ಗಿ ಬರಬಂದಾಗ ಕುಗ್ಗುವ ಸ್ವಭಾವ ತನ್ನದಲ್ಲವೆನ್ನುವ ಹಾಗೆ ರುದ್ರಪ್ಪನು ಏಲಂ ದಿವಸಗಳಲ್ಲಿ ಕೂಡ ತನ್ನ ಆರಾಮಾಸನವನ್ನೇ ಬಿಟ್ಟೇಳುತ್ತಿರಲಿಲ್ಲ. ಯಾವನೋ ಒಬ್ಬ ಮುಸಲ್ಮಾನನು ಆ ದಿವಸಗಳು ಬಂದು ಸಾಮಾನುಗಳ ಹರಾಜು ಕೂಗಿ, ಮಾರಿ, ತನ್ನ ದಳ್ಳಾಳಿಯನ್ನು ಮುರಿದುಕೊಂಡು ಉಳಿದ ಹಣವನ್ನು ರುದ್ರಪ್ಪನಿಗೆ ಕೊಟ್ಟುಹೋಗುತ್ತಿದ್ದನು.

ರುದ್ರಪ್ಪನ ಅಂಗಡಿಯಲ್ಲಿ ಸಿಕ್ಕದಿದ್ದ ಸಾಮಾನೇ ಇರಲಿಲ್ಲವೆಂದರೂ ತಪ್ಪಲ್ಲ. ' ಸೂಜಿಯಿಂದ ಮೋಟಾರುಕಾರಿನ ವರೆಗೆ' ಎಂದು ಸಾಮತಿ ಹೇಳಿದ ಹಾಗೆ ಕುರ್ಚಿ ಬೆಂಚು, ಮೇಜು, ಅಲ್ಮೀರಾಗಳು, ಕನ್ನಡಿಗಳು, ಬಗೆಬಗೆಯ ಮಂಚಗಳು, ಕಟ್ಟುಹಾಕಿದ ಪಟಗಳು, ಹಿತ್ತಾಳೆ ಕಂಚಿನ ಪಾತ್ರೆಗಳು, ವಿಗ್ರಹಗಳು, ದೀಪದ ಕಂಬಗಳು, ಆಟದ ಸಾಮಾನುಗಳು, ಮರಗೆಲಸಕ್ಕೆ ಬೇಕಾಗುವ ಕಬ್ಬಿಣದ ಸಾಮಾನುಗಳು, ಗಾಜಿನ ಸಾಮಾನುಗಳು ಮತ್ತು ಪುಸ್ತಕಗಳು ಎಲ್ಲಕ್ಕೂ ಅಲ್ಲಿ ಸ್ಥಾನವಿದ್ದೇ ಇತ್ತು. ಒಂದೊಂದು ವಾರ ಒಂದೊಂದು ಹರಾಜಾಗುತ್ತಿರುವುದು ನನ್ನ ಕಣ್ಣಿಗೆ ಬೀಳುತ್ತಿದ್ದಿತಲ್ಲದೆ ಹರಾಜು ಕೂಗುವ ಮುಸಲ್ಮಾನ ಬದಲಾಗುತ್ತಿರಲಿಲ್ಲ; ರುದ್ರಪ್ಪ ತನ್ನ ಆರಾಮ ಕುರ್ಚಿಯಿಂದಿಳಿದು ಬರುತ್ತಿರಲಿಲ್ಲ. ಆದರೆ ಅವನು ಎಲ್ಲಿ ಕೂತಿರಲಿ, ಎಲ್ಲಿ ನಿಂತಿರಲಿ, ಒಮ್ಮೆ ನೋಡಿದವರು ಯಾರೂ ಮರೆಯುವ ಹಾಗಿರಲಿಲ್ಲ. ಕಾವ್ಯಗಳಲ್ಲಿ ವಿದೂಷಕನನ್ನು ಸೃಷ್ಟಿಮಾಡಿ ಹಾಸ್ಯರಸ ಪ್ರತಿಪಾದನೆ ಮಾಡಿದೆನೆಂದು ಭುಜ ತಪ್ಪರಿಸಿಕೊಳ್ಳುತ್ತಿದ್ದ ಕಾಳಿದಾಸ, ಭವಭೂತಿ ಶ್ರೀಹರ್ಷಾದಿ ಕವಿಗಳು ರುದ್ರಪ್ಪನನ್ನು ನೋಡಿದ್ದರೆ ಖಂಡಿತವಾಗಿಯೂ ಕಾವ್ಯಗಳನ್ನು ತಿದ್ದುವ ಯೋಚನೆಯನ್ನು ಮಾಡದಿರುತ್ತಿರಲಿಲ್ಲ. ವಯಸ್ಸಿಗೆ ವಿಪರಿ ಬೆಳೆದ ಹೊಟ್ಟೆ, ಅದನ್ನು ಹೊರಲಾರದೆ ಕುಂಬಳಬಳ್ಳಿಯಂತೆ ಜಗ್ಗುತ್ತಿದ್ದ ದೇಹ, ಇದಕ್ಕೆ ಒಪ್ಪವಿಟ್ಟಂತೆ ತ್ರಿವರ್ಣರಂಜಿತ ಗಡ್ಡ. ತನ್ನ ಕಾಲವನ್ನು ನಿರ್ಣಯಿಸಿಕೊಳ್ಳುತ್ತಿದ್ದಂ ಸದಾ ಷರಾಯಿ ಕೋಟು ಬೂಟ್ಸುಗಳನ್ನು ರುದ್ರಪ್ಪನು ಧರಿಸಿರುತ್ತಿದ್ದನು. ಮಣಕಗಟ್ಟಿದ್ದ ಓಪನ್ ಕಾಲರ್ ಕೋಟಿನ ಒಳ ಬಿಳಿಯಿಂದ ಕೆಂಪಿಗೆ ತಿರುಗಿದ್ದ ಷರಟು ಅದರ ಕುತ್ತಿಗೆಗೆ ಹರಕು ಸೀರೆಯ ತುಂಡಿ ಹಾಗೆ ಕಾಣುತ್ತಿದ್ದ ನಕ್ಷತ್ರ ಕೆತ್ತಿದ ಕರಿಯ ಟೈ. ಕೋಟಿಗೆ ಷರಾಯಿ ಯಾವ ರೀ ಯಲ್ಲಿ ಅಗೌರವವನ್ನುಂಟುಮಾಡುತ್ತಿ ಲ್ಲಿಲ್ಲ. ಮೊಣಕಾಲಿನ ಹತ್ತಿರವೂ ಅಕ್ಕಪಕ ದಲ್ಲಿಯೂ ಬೇರೆ ಬೇರೆ ಬಣ್ಣಗಳ ತುಂಡ ಬಟ್ಟೆಗಳು ಷರಾಯಿಯನ್ನಲಂಕರಿಸಿದ್ದವ ನೀಲಿಯ ಕೊಳವೆಗಳನ್ನು ಉದ್ದುದ್ದವಾ ನಿಲ್ಲಿಸಿ ರುದ್ರಪ್ಪ ಅವುಗಳೊಳಗೆ ಕಾಲುಗಳನ್ನು ಹಾಕಿದಂತಿದ್ದವು. ಇವೆಲ್ಲವನೂ ರುದ್ರಪ್ಪನ ಪಾದಭೂಷಣವು ವಿಪರಿ ಬಟ್ಟಿತ್ತು. ಒಂದು ಕಾಲಿಗೆ ಕರಿಯ ಕಾಲು ಚೀಲ, ಇನ್ನೊಂದು ಕಾಲಿಗೆ ಕೆಂಪು ಕಾಲ ಚೀಲ; ಎರಡೂ ಕಾಲಮೇಲೆ ನಿಲ್ಲಲಾರ ಕುಸಿದು ಕಾಲಗೆಣ್ಣಿನ ತಲೆಯ ಮೇ ಬಂದು ಕುಳಿತಿರುತ್ತಿದ್ದವು. ಕೊಂಚಾ ಬಿಳಿಯ ಬಣ್ಣ ಧರಿಸಿದ್ದ ಬೋಜುಗಳು ತಮ್ಮ ಸ್ವರೂಪವನ್ನು ಮರೆತು ರುದ್ರಪ್ಪ ಪಾದಗಳನ್ನು ಆಶ್ರಯಿಸಿದ್ದವು ಬ ಮೋಜಿನಲ್ಲಿ ಹೆಬ್ಬೆರಳು ಇಣಿಕಿ ನೋಡು ತ್ತಿತ್ತು, ಎಡ ಮೋಜಿನಲ್ಲಿ ಕಿರಿಬೆರ ಇಣಿಕಿ ನೋಡುತ್ತಿತ್ತು. ತಲೆಯಮೇ 'ಹಳೆಯ ಬಾಗಿಲ ಕಂಬಿ'ಯನ್ನೇ ಎದು ನೋಡುತ್ತಿದ್ದ ಗುಲಾಬಿ ಬಣ್ಣದ ರುಮಾಲ

* ಸದ್ಯದಲ್ಲೇ ಪ್ರಕಟವಾಗುವ ಶ್ರೀಯುತರ ' ಕಾಮನ ಸೋಲು ' ಎಂಬ ಕಥಾಸಂಗ್ರಹದಿಂದ

ಆದರ ಜರಿ ಕಪ್ಪು ಹಿಡಿದು ಎಳೆಎಳೆಯಾಗಿ ಕಿತ್ತುಬರುತ್ತಿತ್ತು. ರುದ್ರಪ್ಪ ಧರಿಸುವಾಗ ಮುಖದ ಮೇಲೆ ನೇರವಾಗಿ ಕೂರುತ್ತಿದ್ದ ರುಮಾಲು ಕ್ರಮಕ್ರಮೇಣ ಕಿವಿಯಮೇಲೆ ಬಂದುಬಿಡುತ್ತಿತ್ತು. ಹಾಗೆಯೇ ಇರಲೆಂದು ರುದ್ರಪ್ಪ ನಿರಾತಂಕವಾಗಿರುತ್ತಿದ್ದನು. ಆದರೆ ಒಟ್ಟಿನಲ್ಲಿ ರುದ್ರಪ್ಪನ ವೇಷಭೂಷಣವು ಎಲ್ಲಿಯೂ ರಸಾಭಾಸವನ್ನು ಸೂಚಿಸದೆ ತನ್ನದೇ ಆದ ವೈಚಿತ್ರ್ಯ, ದ್ದರೂ ರುದ್ರಪ್ಪನನ್ನು ಕೇಳಿ ಆ ಪ್ರಶ್ನೆಗಳಿಗೆ ಸಮಾಧಾನಹೊಂದುವುದು ಸಾಧ್ಯವಾಗುತ್ತಿರಲಿಲ್ಲ. ರುದ್ರಪ್ಪನ ಮುಖದ ಗಭೀರ ಭಾವನೆಯು ಕುತೂಹಲವನ್ನು ಎದುರಿಸಿ ಮುರಿದುಬಿಡುತ್ತಿತ್ತು.

ನನಗೂ ರುದ್ರಪ್ಪನಿಗೂ ಸ್ವಲ್ಪ ಪರಿಚಯವಾಗಿತ್ತು. ಒಂದೆರಡು ಸಲ ಅವನ ಅಂಗಡಿಯಲ್ಲಿ ಅತ್ಯಲ್ಪ ಬೆಲೆಗೆ ನನಗೆ ಕೆಲವು ಉತ್ತಮ ಗ್ರಂಥಗಳು ದೊರೆತಿದ್ದವು.

ಒಂದು ದಿವಸ ನನ್ನಷ್ಟಕ್ಕೆ ನಾನು ಬೀದಿಯಲ್ಲಿ ಹೋಗುತ್ತಿರಲು ರುದ್ರಪ್ಪನ ಅಂಗಡಿಯ ಕಡೆಯಿಂದ ಕೂಗು ಕೇಳಬಂತು. ರುದ್ರಪ್ಪನ ವೇಷಭೂಷಣ, ಅವನು ನನ್ನನ್ನು ಕರೆಯುತ್ತಿದ್ದ ಉದ್ವೇಗ ತುಂಬಾ ನಗೆಬರಸಿದವು. ಒಳಗೆ ಹೋಗುತ್ತಲೆ ರುದ್ರಪ್ಪ ನನ್ನ ಕೈಗೆ ಕಣ್ಣು ಕೋರೈಸುವಂತಹ ಒಂದು ಗ್ರಂಥವನ್ನಿತ್ತನು. "ಷೆಲ್ಲಿ ಮಹಾಕವಿಯ ಪೂರ್ಣ ಕಾವ್ಯ-

"ಅದು ದೊಡ್ಡ ಕಥೆ ಸ್ವಾಮಿ, ಕೇಳುತ್ತೀರೇನು ?"

ಸಮರಸಗಳಿಂದ ಅವನನ್ನು ಕೂಡಿಕೊಂಡಿತ್ತು.

ಈ ರುದ್ರಪ್ಪ ಯಾರು ? ಈ ಸ್ವಾರಸ್ಯವಾದ ವ್ಯಾಪಾರವನ್ನು ಹೇಗೆ ಆರಂಭಿಸಿದ ? ಇವನಿಗೆ ಮನೆ, ಮಠ, ಹೆಂಡತಿ, ಮಕ್ಕಳು ಇದ್ದಾರೆಯೋ ? ಇದ್ದರೆ ಇದೇನು ಇವನ ಅವತಾರ? ಏನು ಈ ಸ್ನಾನ ಕ್ಷೌರ ಕಾಣದ ರೂಪ! ಎಂಬಿವೇ ಪ್ರಶ್ನೆಗಳು ಲೋಕಾಭಿರಾಮವಾಗಿ ನನ್ನಲ್ಲಿ ಜನಿಸುತ್ತಿ ಹೆಂಡದ ಅಮಲಿನ ರುಚಿಗಂಡ ಕುಡುಕನು ಮತ್ತೆ ಮತ್ತೆ ಹಡಖಾನೆಯನ್ನು ಹುಡುಕಿಕೊಂಡು ಹೋಗುವಂತೆ ನಾನು ಮತ್ತೆ ಮತ್ತೆ ಹೋಗಿ ರುದ್ರಪ್ಪನ ಅಂಗಡಿಯ ಸಂಬಂಧವನ್ನು ನಿಕಟವಾಗಿ ಬೆಳಸಿದ್ದೆ. ಪುಸ್ತಕಗಳು ದೊರೆಯದಿದ್ದ ದಿವಸ ಕೂಡಾ ನನಗೆ ಆಶಾಭಂಗವಾಗುತ್ತಿರಲಿಲ್ಲ. ರುದ್ರಪ್ಪನ ಮುಖದಲ್ಲಿ ತೇಲುತ್ತಿದ್ದ ಕನಿಕರ ನನ್ನ ನಿರಾಶೆಯನ್ನು ಮರೆಸುತ್ತಿತ್ತು.

ಸಂಗ್ರಹ." ಉದ್ಗ್ರಂಥ; ಅದಕ್ಕೊಪ್ಪುವ ಸುರಮ್ಯ ಬಾಹ್ಯರೂಪ. ಗ್ರಂಥವನ್ನು ನಾನು ನುಂಗುವಂತೆ ನೋಡುತ್ತಿರಲು ರುದ್ರಪ್ಪ :

"ನಿಮಗೆಂದೇ ಈ ಪುಸ್ತಕ ತೆಗೆದಿಟ್ಟಿದ್ದೆ. ಯಾರು ಯಾರೋ ಕೇಳಿದರು. ಆದರೆ ಕೊಡಲಿಲ್ಲ."

ಆ ಮಾತಿನಲ್ಲಿ ಕೃತ್ರಿಮತೆಯಿರಲಿಲ್ಲ. ವ್ಯಾಪಾರಗಾರ ತನ್ನ ಮಾಲನ್ನು ಹಾಡಿ

ಹೊಗಳಿ, ಕೊಳ್ಳಲು ಬಂದವನಿಂದ ಹೆಚ್ಚು ಹಣ ಕಸಿಯುವ ವ್ಯಾಪಾರ ಸೂಕ್ಷ್ಮ ಅಡಕವಾಗಿರಲಿಲ್ಲ. ನನ್ನ ವಿಚಾರವಲ್ಲಿ ಒಂದುಬಗೆಯ ಪ್ರೀತಿಯನ್ನೂ ಗೌರವವನ್ನೂ ವ್ಯಕ್ತಪಡಿಸಿದಂತಿತು.

"ಇದಕ್ಕೆ ಎಷ್ಟು ಕೊಡಬೇಕು ರುದ್ರಪ್ಪನವರೇ?"

"ನಿಮ್ಮ ಸಂತೋಷ ಸ್ವಾಮಿ ಅವಕ್ಕೆಲ್ಲಾ ಬೆಲೆಯಿಲ್ಲ. ತಿಳಿದವರಿಗೆ ಗೊತ್ತು ಬೆಲೆ."

ಬೆಲೆಯ ಮೇಲೆ ಅವನು ಒತ್ತಿ ಆಡಿದ ಮಾತು ನನ್ನ ಮೊದಲಿನ ನಂಬಿಕೆಯನ್ನು ಸ್ವಲ್ಪ ಅಳ್ಳಾಡಿಸಿತು. "ಮಂಗನಿಗೇನು ಗೊತ್ತು ಮಾಣಿಕ್ಯದ ಬೆಲೆ; ಇದು ಹೆಚ್ಚು ದುಡ್ಡು ಕೊಟ್ಟರೆ ಇದೇ ಅವನಿಗೆ ಉತ್ತಮ ಪದಾರ್ಥ" ಎಂದುಕೊಂಡೆ. ಆದರೆ ಗ್ರಂಥವನ್ನು ಬಿಡುವುದಕ್ಕೆ ಮನಸ್ಸಿಲ್ಲ.

"ಹೇಳಿ ರುದ್ರಪ್ಪನವರೇ. ಬೆಲೆ ಹೇಳದಿದ್ದರೆ ನಾನು ಗ್ರಂಥವನ್ನು ಕೊಳ್ಳುವುದು ಹೇಗೆ?"

"ನಿಮ್ಮ ಸಂತೋಷ ಎಂದು ಹೇಳಿದೆನಲ್ಲಾ ಸ್ವಾಮಿ; ನಿಮಗೇನು ತೋರತ್ತೋ ಅದನ್ನು ಕೊಡಿ!"

ಅವನ ಕೈಗೆ ಒಂದು ರೂಪಾಯಿಯನ್ನಿತ್ತೆ. ಅದನ್ನೇ ಸಂತೋಷವಾಗಿ ಕಿಸೆ ಸೇರಿಸಿದನು.

"ಕಡಿಮೆಯಾಯಿತೇ ರುದ್ರಪ್ಪನವರೇ."

* * *

"ಏನೂ ಇಲ್ಲ ಸ್ವಾಮಿ."

"ಸಂಕೋಚಪಟ್ಟುಕೊಳ್ಳದೆ ಹೇಳಿ. ಈಗ ನನ್ನಹತ್ತಿರ ಇರುವುದಷ್ಟೇ. ನಾಳೆ ಈ ಕಡೆ ಹೋಗುವಾಗ ಮಿಕ್ಕಿದ್ದನ್ನು ತಂದುಕೊಡುತ್ತೇನೆ."

"ಸರಿ ಸರಿ ಬಿಡಿ ಸ್ವಾಮಿ. ಇದಕ್ಕೆಲ್ಲಾ ಏನು? ನಾಳೆ ಭಾನುವಾರ ಕೆಲವು ಹಳೆಗನ್ನಡ ಪುಸ್ತಕಗಳೂ, ಇನ್ನೂ ಕೆಲವು ಕಾವ್ಯಸಂಗ್ರಹಗಳೂ ಬರುತ್ತವೆ.... ನಿಮಗೆ ಬೇಕೇನು?"

"ಅಯ್ಯೋ! ಏನು ಹೀಗೆ ಕೇಳುತ್ತೀರಲ್ಲಾ. ಅವಶ್ಯವಾಗಿ ಬೇಕಪ್ಪಾ."

"ಹಾಗಾದರೆ ಹರಾಜು ಮುಗಿಯುವ ಹೊತ್ತಿಗೆ.... ಸುಮಾರು ೧೨ ಘಂಟೆಗೆ.. ಬನ್ನಿ. ನಾನು ತೆಗೆದಿಟ್ಟಿರುತ್ತೇನೆ. ನೀವು ಬೇಕಾದ್ದು ತೆಗೆದುಕೊಂಡು ಹೋಗಬಹುದು."

"ಹಾಗೇ ಆಗಲಿ, ಬಹಳ ಉಪಕಾರವಾಯಿತು ರುದ್ರಪ್ಪನವರೇ! ನಮಸ್ಕಾರ!"

ನನ್ನ 'ನಮಸ್ಕಾರ'ಕ್ಕೆ ರುದ್ರಪ್ಪನ 'ಗುಡ್ ಮಾರ್ನಿಂಗ್' ದೊರೆತದ್ದು ಸ್ವಲ್ಪ ನಗೆಯನ್ನುಂಟುಮಾಡಿತು. ರುದ್ರಪ್ಪನಿಗೆ ಸ್ವಲ್ಪ ಇಂಗ್ಲೀಷೂ ಬರುತ್ತೆ ಎಂದು ನಿರ್ಧರವಾದಹಾಗಾಯಿತು.

೨

ಭಾನುವಾರ ೧೨ ಘಂಟೆಯಾದರೂ 'ಹರಾಜು' ಮುಗಿದಿರಲಿಲ್ಲ. ಒಂದಾಗುತ್ತಲೊಂದು ಸಾಮಾನುಗಳು "ಒಂದನೆಯ ಸಾರಿ— ಎರಡನೆಯ ಸಾರಿ— ಮೂರನೆಯ ಸಾರಿ" ಹೇಳಿಸಿಕೊಂಡು ಮಾಯವಾಗುತ್ತಿದ್ದುವಲ್ಲದೆ ಹರಾಜು ಮುಗಿಯುವ ಸಂಭವವೇ ಕಾಣಲಿಲ್ಲ. ಸಾಮಾನುಗಳನ್ನು ಕೂಗಿ ಕೂಗಿ ಮುಸಲ್ಮಾನ ಸಾಹೇಬನಿಗೆ ಬಾಯಿ ಒಣಗುತ್ತ ಬಂದಿತ್ತು. ಅವನೂ ಅವಸರದಲ್ಲಿ ಕೈಗೆ ಸಿಕ್ಕಿದ ಸಾಮಾನುಗಳನ್ನು ಹರಾಜು ಹಾಕುತ್ತಿದ್ದಂತಿತ್ತು. ಈ ಅವಸರದಲ್ಲಿ ನಕ್ಷೀ ಕೆಲಸಮಾಡಿದ ಹಂಸದ ಮುಖಮಲ್ಲಿನ ಚಿತ್ರಪಟವೊಂದು ಸಾಹೇಬರ ಕೈ ಬಾಯಿಗೆ ಬಿದ್ದಿತ್ತು. ಅದಕ್ಕೂ "ಮೊದಲನೆಯ ಸಾರಿ— ಎರಡನೆಯ ಸಾರಿ" ಕೂಗುತ್ತಿದ್ದಂತೆ ರುದ್ರಪ್ಪ ಮಿಂಚಿನ ಹಾಗೆ ಎದ್ದು ಬಂದು ಕಿತ್ತುಕೊಂಡನು. ಬೆಕ್ಕಸ ಬೆರಗಾಗಿ ನೋಡುತ್ತಿದ್ದ ಸಾಹೇಬನನ್ನು ಗದ್ದರಿಸಿ "ಕ್ವಾಜಿ ತುಮ್ಮು ಅಖ್ಬಲ್ ನೈ" ಎಂದು ಬಯ್ದು ಹರಾಜನ್ನು ಸಾಕುಮಾಡಿಬಿಟ್ಟನು.

ನನಗೆ ರುದ್ರಪ್ಪನ ನಡತೆಯು ಪರಮಾಶ್ಚರ್ಯವನ್ನುಂಟುಮಾಡಿತು. ಎಂದು ಯಾವ ಸಾಮಾನನ್ನೂ ನೋಹಿಸದಿದ್ದ ರುದ್ರಪ್ಪ ಈ ಹಳೆಯ ಪಟವನ್ನು ಇಷ್ಟು ಜೋಪಾನದಿಂದ ಸಂಗ್ರಹಿಸಲು ಕಾರಣವೇನು? ಈ ಚಿತ್ರಕ್ಕೂ ರುದ್ರಪ್ಪನ ಜೀವನಕ್ಕೂ ಏನಾದರೂ ಸಂಬಂಧವಿರಬಹುದೇ? ಎಂದೆನಿಸಿತು. ಆ ಹೊತ್ತಿಗೆ ರುದ್ರಪ್ಪ ಒಳಕ್ಕೆ ಕರೆಯಲು ದಿದ್ರಿಕ್ಕೆಯನ್ನು ಸಾಕುಮಾಡಿ ಒಳಗೆ ಹೋಗಿ ಕುಳಿತೆನು. ರುದ್ರಪ್ಪ ನನ್ನ ಮುಂದೆ ಪುಸ್ತಕದ ಒಂದು ಕಟ್ಟನ್ನು ಹಾಕಿ ಸಾಹೇಬನೊಂದಿಗೆ ಲೆಕ್ಕಾಚಾರಕ್ಕೆ ಕುಳಿತನು.

ಕಟ್ಟುಬಿಚ್ಚಿ ನೋಡಿದೆನು. ನನಗೆ ಬ್ರಹ್ಮಾನಂದವಾಗಿ ಹೋಯಿತು. "ರನ್ನನ ಗದಾಯುದ್ಧ—ಜನ್ನನ ಯಶೋಧರಚರಿತ್ರೆ—ಮುದ್ದಣನ ರಾಮಾಶ್ವಮೇಧ— ಅಜ್ಞಾತ ಕವಿಯ ಕನ್ನಡ ಉತ್ತರ ರಾಮಚರಿತ್ರೆ—ಹರಿಹರನ ಗಿರಿಜಾಕಲ್ಯಾಣ— ಬಸವಣ್ಣನವರ ವಚನಗಳು— ಸರ್ವಜ್ಞನ ತ್ರಿಪದಿಗಳು—ದುರ್ಗಸಿಂಹನ ಪಂಚತಂತ್ರ— ಹೊನ್ನಮ್ಮನ ಹದಿಬದೆಯ ಧರ್ಮ— ನಾಗರಸನ ಭಗವದ್ಗೀತೆ— ಕೆಲವು ಆಧುನಿಕ ಕಥಾ ಕವಿತಾ ಗ್ರಂಥಗಳು." ಒಟ್ಟು ೨೦—೨೫ ಪುಸ್ತಕಗಳ ಮೇಲಿದ್ದುವು. ರುದ್ರಪ್ಪನ ಕಡೆ ತಿರುಗಿ ನೋಡಿದೆನು. ಸಾಹೇಬರ ಲೆಕ್ಕ ಮುಗಿದಿತ್ತು, ಅವರು ಹೊರಟಿದ್ದರು.

"ಇವುಗಳಿಗೆಲ್ಲಾ ಎಷ್ಟು ಕೊಡಲಿ ರುದ್ರಪ್ಪನವರೇ."

"ನಾನು ಐದು ರೂಪಾಯಿ ಕೊಟ್ಟೆ ಸ್ವಾಮಿ. ಅದರ ಮೇಲೆ ತಾವು ಎಷ್ಟು ಕೊಟ್ಟರೂ ಸಂತೋಷ."

ರುದ್ರಪ್ಪನ ಕೈಗೆ ಆರು ರೂಪಾಯಿಗಳನ್ನಿತ್ತೆ. ಅವನ ಮುಖ ಪ್ರಫುಲ್ಲವಾಯಿತು. ನನ್ನ ವ್ಯಾಪಾರ ಯಾವ ಬಗೆಯ ಅಸಂತುಷ್ಟಿಯನ್ನೂ ಉಂಟುಮಾಡಲಿಲ್ಲವೆಂದು ತಿಳಿದು ನನಗೂ ಸಂತೋಷವಾಯಿತು. ರುದ್ರಪ್ಪನನ್ನು ಕೆಣಕಲು ಇದೇ ಉತ್ತಮ ಸಮಯವೆಂದು ನೆನೆದೆ.

"ಈ ಸಂಪಾದನೆಯನ್ನೆಲ್ಲಾ ಏನು ಮಾಡುತ್ತೀರಿ ರುದ್ರಪ್ಪನವರೇ?"

"ಏನು ಸಂಪಾದನೆ ಸ್ವಾಮಿ. ಅಲ್ಲಿಗಲ್ಲಿಗೆ ಸರಿಹೋಗುತ್ತೆ."

"ಸಂಸಾರಕ್ಕೆ!"

"ಸಂಸಾರ ಎಲ್ಲಿಂದ ಬಂತು ಸ್ವಾಮಿ. ನಾನೇ ನನ್ನ ಸಂಸಾರ. ಈ ಹಳೆಯ

ಕೊಗಳ, ಕೊಳ್ಳಲು ಬಂದವನಿಂದ ಹೆಚ್ಚು ಹಣ ಕಸಿಯುವ ವ್ಯಾಪಾರ ಸೂಕ್ಷ್ಮ ಅಡಕವಾಗಿರಲಿಲ್ಲ. ನನ್ನ ವಿಚಾರದಲ್ಲಿ ಒಂದು ಬಗೆಯ ಪ್ರೀತಿಯನ್ನೂ ಗೌರವವನ್ನೂ ವ್ಯಕ್ತಪಡಿಸಿದಂತಿತ್ತು.

"ಇದಕ್ಕೆ ಎಷ್ಟು ಕೊಡಬೇಕು ರುದ್ರಪ್ಪನವರೇ?"

"ನಿಮ್ಮ ಸಂತೋಷ ಸ್ವಾಮಿ. ಇವಕ್ಕೆಲ್ಲಾ ಬೆಲೆಯಿಲ್ಲ. ತಿಳಿದವರಿಗೆ ಗೊತ್ತು ಬೆಲೆ."

ಬೆಲೆಯ ಮೇಲೆ ಅವನು ಒತ್ತಿ ಆಡಿದ ಮಾತು ನನ್ನ ಮೊದಲಿನ ಸಂಚಿಕೆಯನ್ನು ಸ್ವಲ್ಪ ಅಳ್ಳಾಡಿಸಿತು. "ಮಂಗನಿಗೇನು ಗೊತ್ತು ಮಾಣಿಕ್ಯದ ಬೆಲೆ: ಇದು ಹೆಚ್ಚು ದುಡ್ಡು ಕೊಟ್ಟರೆ ಇದೇ ಅವನಿಗೆ ಉತ್ತಮ ಪದಾರ್ಥ" ಎಂದುಕೊಂಡೆ. ಆದರೆ ಗ್ರಂಥವನ್ನು ಬಿಡುವುದಕ್ಕೆ ಮನಸ್ಸಿಲ್ಲ.

"ಹೇಳಿ ರುದ್ರಪ್ಪನವರೇ. ಬೆಲೆ ಹೇಳದಿದ್ದರೆ ನಾನು ಗ್ರಂಥವನ್ನು ಕೊಳ್ಳುವುದು ಹೇಗೆ?"

"ನಿಮ್ಮ ಸಂತೋಷ ಎಂದು ಹೇಳಿದೆನಲ್ಲಾ ಸ್ವಾಮಿ; ನಿಮಗೇನು ತೋರತ್ತೋ ಅದನ್ನು ಕೊಡಿ!"

ಅವನ ಕೈಗೆ ಒಂದು ರೂಪಾಯಿಯನ್ನಿತ್ತೆ. ಅದನ್ನೇ ಸಂತೋಷವಾಗಿ ಕಿಸೆ ಸೇರಿಸಿದನು.

"ಕಡಿಮೆಯಾಯಿತೇ ರುದ್ರಪ್ಪನವರೇ."

* * *

"ಏನೂ ಇಲ್ಲ ಸ್ವಾಮಿ."

"ಸಂಕೋಚಪಟ್ಟುಕೊಳ್ಳದೆ ಹೇಳಿ. ಈಗ ನನ್ನ ಹತ್ತಿರ ಇರುವುದಷ್ಟೇ. ನಾಳೆ ಈ ಕಡೆ ಹೋಗುವಾಗ ಮಿಕ್ಕದ್ದನ್ನು ತಂದುಕೊಡುತ್ತೇನೆ."

"ಸರಿ ಸರಿ ಬಿಡಿ ಸ್ವಾಮಿ. ಇದಕ್ಕೆಲ್ಲಾ ಏನು? ನಾಳೆ ಭಾನುವಾರ ಕೆಲವು ಹಳೆಗನ್ನಡ ಪುಸ್ತಕಗಳೂ, ಇನ್ನೂ ಕೆಲವು ಕಾವ್ಯಸಂಗ್ರಹಗಳೂ ಬರುತ್ತವೆ .... ನಿಮಗೆ ಬೇಕೇನು ?"

"ಅಯ್ಯೋ! ಏನು ಹೀಗೆ ಹೇಳುತ್ತೀರಲ್ಲಾ. ಅವಶ್ಯವಾಗಿ ಬೇಕಪ್ಪಾ."

"ಹಾಗಾದರೆ ಹರಾಜು ಮುಗಿಯುವ ಹೊತ್ತಿಗೆ.... ಸುಮಾರು ೧೩ ಘಂಟೆಗೆ.. ಬನ್ನಿ. ನಾನು ತೆಗೆದಿಟ್ಟಿರುತ್ತೇನೆ. ನೀವು ಬೇಕಾದ್ದು ತೆಗೆದುಕೊಂಡು ಹೋಗಬಹುದು."

"ಹಾಗೇ ಆಗಲಿ. ಬಹಳ ಉಪಕಾರವಾಯಿತು ರುದ್ರಪ್ಪನವರೇ! ನಮಸ್ಕಾರ!"

ನನ್ನ 'ನಮಸ್ಕಾರ'ಕ್ಕೆ ರುದ್ರಪ್ಪನ 'ಗುಡ್ ಮಾರ್ನಿಂಗ್' ದೊರೆತದ್ದು ಸ್ವಲ್ಪ ನಗೆಯನ್ನುಂಟುಮಾಡಿತು. ರುದ್ರಪ್ಪನಿಗೆ ಸ್ವಲ್ಪ ಇಂಗ್ಲೀಷೂ ಬರುತ್ತೆ ಎಂದು ನಿರ್ಧರವಾದಹಾಗಾಯಿತು.

೨

ಭಾನುವಾರ ೧೨ ಘಂಟೆಯಾದರೂ 'ಹರಾಜು' ಮುಗಿದಿರಲಿಲ್ಲ. ಒಂದಾಗುತ್ತಲೊಂದು ಸಾಮಾನುಗಳು "ಒಂದನೆಯ ಸಾರಿ– ಎರಡನೆಯ ಸಾರಿ– ಮೂರನೆಯ ಸಾರಿ" ಹೇಳಿಸಿಕೊಂಡು ಮಾಯವಾಗುತ್ತಿದ್ದುವಲ್ಲದೆ ಹರಾಜು ಮುಗಿಯುವ ಸಂಭವವೇ ಕಾಣಲಿಲ್ಲ. ಸಾಮಾನುಗಳನ್ನು ಕೂಗಿ ಕೂಗಿ ಮುಸಲ್ಮಾನ ಸಾಹೇಬನಿಗೆ ಬಾಯಿ ಒಣಗುತ್ತ ಬಂದಿತ್ತು. ಅವನೂ ಅವಸರದಲ್ಲಿ ಕೈಗೆ ಸಿಕ್ಕಿದ ಸಾಮಾನುಗಳನ್ನು ಹರಾಜು ಹಾಕುತ್ತಿದ್ದಂತಿತು. ಈ ಅವಸರದಲ್ಲಿ ನಕ್ಕೀ ಕೆಲಸಮಾಡಿದ ಹಂಸದ ಮುಖಮಲ್ಲಿನ ಚಿತ್ರಪಟವೊಂದು ಸಾಹೇಬರ ಕೈ ಬಾಯಿಗೆ ಬಿದ್ದಿತ್ತು. ಅದಕ್ಕೂ "ಮೊದಲನೆಯ ಸಾರಿ– ಎರಡನೆಯ ಸಾರಿ" ಕೂಗುತ್ತಿದ್ದಂತೆ ರುದ್ರಪ್ಪ ಮಿಂಚಿನ ಹಾಗೆ ಎದ್ದು ಬಂದು ಕಿತ್ತುಕೊಂಡನು. ಬೆಕ್ಕಸ ಬೆರಗಾಗಿ ನೋಡುತ್ತಿದ್ದ ಸಾಹೇಬನನ್ನು ಗದ್ದರಿಸಿ "ಕ್ವಾಜಿ ತುಮ್ಕು ಅಖ್ಖಲ್ ನೈ" ಎಂದು ಬಯ್ದು ಹರಾಜನ್ನು ಸಾಕುಮಾಡಿಬಿಟ್ಟನು.

ನನಗೆ ರುದ್ರಪ್ಪನ ನಡತೆಯು ಪರಮಾಶ್ಚರ್ಯವನ್ನುಂಟುಮಾಡಿತು. ಎಂದು ಯಾವ ಸಾಮಾನನ್ನೂ ಮೋಹಿಸದಿದ್ದ ರುದ್ರಪ್ಪ ಈ ಹಳೆಯ ಪಟವನ್ನು ಇಷ್ಟು ಜೋಪಾನದಿಂದ ಸಂಗ್ರಹಿಸಲು ಕಾರಣವೇನು? ಈ ಚಿತ್ರಕ್ಕೂ ರುದ್ರಪ್ಪನ ಜೀವನಕ್ಕೂ ಏನಾದರೂ ಸಂಬಂಧವಿರಬಹುದೇ? ಎಂದೆನಿಸಿತು. ಆ ಹೊತ್ತಿಗೆ ರುದ್ರಪ್ಪ ಒಳಕ್ಕೆ ಕರೆಯಲು ದಿದ್ರಿಕ್ಕೆಯನ್ನು ಸಾಕುಮಾಡಿ ಒಳಗೆ ಹೋಗಿ ಕುಳಿತೆನು. ರುದ್ರಪ್ಪ ನನ್ನ ಮುಂದೆ ಪುಸ್ತಕದ ಒಂದು ಕಟ್ಟನ್ನು ಹಾಕಿ ಸಾಹೇಬನೊಂದಿಗೆ ಲೆಕ್ಕಾಚಾರಕ್ಕೆ ಕುಳಿತನು.

ಕಟ್ಟುಬಿಚ್ಚಿ ನೋಡಿದೆನು. ನನಗೆ ಬ್ರಹ್ಮಾನಂದವಾಗಿ ಹೋಯಿತು. "ರನ್ನನ ಗದಾಯುದ್ಧ–ಜನ್ನನ ಯಶೋಧರಚರಿತ್ರೆ– ಮುದ್ದಣನ ರಾಮಾಶ್ವಮೇಧ– ಅಜ್ಞಾತ ಕವಿಯ ಕನ್ನಡ ಉತ್ತರ ರಾಮಚರಿತ್ರೆ– ಹರಿಹರನ ಗಿರಿಜಾಕಲ್ಯಾಣ– ಬಸವಣ್ಣನವರ ವಚನಗಳು– ಸರ್ವಜ್ಞನ ತ್ರಿಪದಿಗಳು– ದುರ್ಗಸಿಂಹನ ಪಂಚತಂತ್ರ– ಹೊನ್ನಮ್ಮನ ಹದಿಬದೆಯ ಧರ್ಮ– ನಾಗರಸನ ಭಗವದ್ಗೀತೆ– ಕೆಲವು ಆಧುನಿಕ ಕಥಾ ಕವಿತಾ ಗ್ರಂಥಗಳ.." ಒಟ್ಟು ೩೦–೩೪ ಪುಸ್ತಕಗಳ ಮೇಲಿದ್ದುವು. ರುದ್ರಪ್ಪನ ಕಡೆ ತಿರುಗಿ ನೋಡಿದೆನು. ಸಾಹೇಬರ ಲೆಕ್ಕ ಮುಗಿದಿತ್ತು, ಅವರು ಹೊರಟಿದ್ದರು.

"ಇವುಗಳಿಗೆಲ್ಲಾ ಎಷ್ಟು ಕೊಡಲಿ ರುದ್ರಪ್ಪನವರೇ."

"ನಾನು ಐದು ರೂಪಾಯಿ ಕೊಟ್ಟೆ ಸ್ವಾಮಿ. ಅದರ ಮೇಲೆ ತಾವು ಎಷ್ಟು ಕೊಟ್ಟರೂ ಸಂತೋಷ."

ರುದ್ರಪ್ಪನ ಕೈಗೆ ಆರು ರೂಪಾಯಿಗಳನ್ನಿತ್ತೆ. ಅವನ ಮುಖ ಪ್ರಫುಲ್ಲವಾಯಿತು. ನನ್ನ ವ್ಯಾಪಾರ ಯಾವ ಬಗೆಯ ಅಸಂತುಷ್ಟಿಯನ್ನೂ ಉಂಟುಮಾಡಲಿಲ್ಲವೆಂದು ತಿಳಿದು ನನಗೂ ಸಂತೋಷವಾಯಿತು. ರುದ್ರಪ್ಪನನ್ನು ಕೆಣಕಲು ಇದೇ ಉತ್ತಮ ಸಮಯವೆಂದು ನೆನೆದೆ.

"ಈ ಸಂಪಾದನೆಯನ್ನೆಲ್ಲಾ ಏನು ಮಾಡುತ್ತೀರಿ ರುದ್ರಪ್ಪನವರೇ?"

"ಏನು ಸಂಪಾದನೆ ಸ್ವಾಮಿ. ಅಲ್ಲಿಗಲ್ಲಿಗೆ ಸರಿಹೋಗುತ್ತೆ."

"ಸಂಸಾರಕ್ಕೆ!"

"ಸಂಸಾರ ಎಲ್ಲಿಂದ ಬಂತು ಸ್ವಾಮಿ. ನಾನೇ ನನ್ನ ಸಂಸಾರ. ಈ ಹಳೆಯ

ಶ್ಮಶಾನುಗಳೇ ನನ್ನ ಹೆಂಡತಿ ಮಕ್ಕಳು, ಬಂಧು-ಮಿತ್ರರು, ಬಳಗ-ಬಂಡವಾಳ.''

"ನಿಮ್ಮ ಹೆಂಡತಿ ಮಕ್ಕಳು....''

"ನನಗೆ ಮದುವೆಯೇ ಆಗಿರಲಿಲ್ಲ ಸ್ವಾಮಿ"

"ಹಾಗಾದರೆ..? ಹೀಗೆಲ್ಲಾ ಕೇಳುತ್ತಿದ್ದೀನೆಂದು ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡಿ ರುದ್ರಪ್ಪನವರೇ. ಯಾವ ದುರುದ್ದೇಶವೂ ಇಲ್ಲ. ನೀವು ನನ್ನ ವಿಚಾರದಲ್ಲಿ ತೋರಿಸಿದ ವಿಶ್ವಾಸದಿಂದ ನನಗೂ ಒಂದು ಬಗೆಯ ವಿಶ್ವಾಸ ಹುಟ್ಟಿತು.. ಆದ್ದರಿಂದ..''

"ನನ್ನದೇನು ವಿಶ್ವಾಸ ಬಿಡಿ ಸ್ವಾಮಿ. ನಿಮ್ಮ ದುಡ್ಡಿಗೆ ಪುಸ್ತಕ ಕೊಟ್ಟೆ. ಸುಮ್ಮನೆ ಕೊಟ್ಟೆನೆ?''

''ಹಾಗಲ್ಲ ಆದರೂ..ಮದುವೆ ಮಾಡಿಕೊಳ್ಳದೆಯೇ ಜೀವನವನ್ನೆಲ್ಲ ಸವೆಯಿಸಿರುವಿರಾ?"

''ಹೂ! ಹಾಗೆಂದೇ ಹೇಳಬೇಕು."

"ಆ ಕಸೂತಿಪಠ ಯಾರದು?"

ನಾನು ಆ ಪ್ರಶ್ನೆಯನ್ನು ಹೆದರಿ ಹೆದರಿಯೇ ಕೇಳಿದೆ. ಕೇಳಬಾರದಾಗಿತ್ತೇನೋ ಎಂದೆನಿಸಿತು. ರುದ್ರಪ್ಪನ ಕಣ್ಣುಗಳಲ್ಲಿ ತೊಟತೊಟನೆ ಹನಿಗಳುದುರಿದವು. ಕೆಂಪುಗೊಂಡ ಮುಖ, ಅದರಲಾರಂಭಿಸಿದ ತುಟಿಗಳು ಅವನ ಮನಸ್ಸಿನ ಉಮ್ಮಳವನ್ನು ಎತ್ತಿ ತೋರಿಸುತ್ತಿದ್ದವು. ಸ್ವಲ್ಪ ಹೊತ್ತು ಸುಧಾರಿಸಿಕೊಂಡು:

''ಅದು ದೊಡ್ಡ ಕಥೆ ಸ್ವಾಮಿ; ಕೇಳುತ್ತೀರೇನು?''

''ಆಗಲಿ."

ಈಗಲೇ ಹೊತ್ತು ಬಹಳವಾಗಿ ಆಗಿದೆಯಲ್ಲಾ. ಒಂದು ಘಂಟೆ ಸಮಯ. ನಿಮಗೆ ಊಟಕ್ಕೆ ಹೊತ್ತಾಗುದಿಲ್ಲವೇ?"

"ಚಿಂತೆಯಿಲ್ಲ ಹೇಳಿ ರುದ್ರಪ್ಪನವರೇ. ಈ ಹಬ್ಬದೂಟದಿಂದ (ಗ್ರಂಥಗಳ) ನನಗೆ ನಿಬ್ಬರ ಬರಿಸಿರುವಿರಿ. ಹಸಿವಿನ ಕಾಟ ಹರಿಸಿರುವಿರಿ."

"ಬಹಳ ಹಿಂದಿನ ಮಾತು. ಇಪ್ಪತ್ತು ವರ್ಷದ ಹಿಂದಿನ ಮಾತು. ನಮ್ಮ ತಂದೆಗೆ ನಾನು ಒಬ್ಬನೇ ಮಗ. ತಕ್ಕಮಟ್ಟಿಗೆ ಅನುಕೂಲವಾಗಿಯೇ ಇದ್ದರು. ನನ್ನನ್ನು ಬಹಳ ಮುದ್ದಿನಿಂದ ಬೆಳೆಸಿದರು. ತಾಯಿಯಿಲ್ಲದ ಮಗುವೆಂದು ನನ್ನನ್ನು ಯಾವುದಕ್ಕೂ ಆಕ್ಷೇಪಿಸುತ್ತಿರಲಿಲ್ಲ, ಯಾವುದಕ್ಕೂ ಕೊರತೆಯನ್ನುಂಟುಮಾಡುತ್ತಿರಲಿಲ್ಲ. ನಾನಾಗ ಓದುತ್ತಿದ್ದೆ. ನಾಲ್ಕನೆಯ ಫಾರಂ. ನಮ್ಮ ಮನೆಯಲ್ಲಿ ಅಷ್ಟು ಓದಿದವರು ಯಾರೂ ಇರಲಿಲ್ಲ. ಅದೇ ನಮ್ಮ ತಂದೆಗೆ ದೊಡ್ಡ ಹೆಮ್ಮೆಯಾಗಿತ್ತು.

''ನ್ಯಾಯವೇ. ಆ ಮೇಲೆ...."

''ನಮ್ಮ ಮನೆಯ ಪಕ್ಕದಲ್ಲಿ ತಾಯಿ ಮಕ್ಕಳಿಬ್ಬರಿದ್ದರು. ನಮ್ಮ ಜಾತಿ. ಅವರಿಗೆ ಸ್ವಲ್ಪ ಭತ್ತ, ರಾಗಿ ಬರುತ್ತಿತ್ತು. ಅದರಲ್ಲಿಯೇ ಜೀವನ ಮಾಡಿಕೊಂಡು ಮರ್ಯಾದೆಯಾಗಿದ್ದರು. ನಮ್ಮ ಮನೆಗೆ ಬಂದು ಹೋಗುವುದೂ ರೂಢಿಯಲ್ಲಿತ್ತು. ನನಗೆ ೩೦-೩೫ ವಯಸ್ಸು. ಆ ಹುಡುಗೀಗೆ ಸುಮಾರು ೧೫-೧೬. ಮೊದಲಿಂದಲೂ ನಮ್ಮ ನಮ್ಮಲ್ಲಿ ವಿಶ್ವಾಸವಿದ್ದೇ ಇತ್ತು. ನಾನು ನಾಲ್ಕನೆಯ ಫಾರಂ ಪರೀಕ್ಷೆ ಪಾಸಾದ ವರ್ಷ ಅದು ಉಲ್ಬಣಾವಸ್ಥೆಗೆ ಬಂತು. ಚೆನ್ನನಿಗೆ ಮದುವೆ ಏರ್ಪಾಟು ಆರಂಭವಾಯಿತು. ಅವಳ ಸೋದರಮಾವನ ಮಗ ವೀರಪ್ಪನಿಗೆ ನಿಶ್ಚಯವಾಯಿತು.

ಒಂದು ದಿನ ಸಾಯಂಕಾಲ ನಾನು ಆಟ ಮುಗಿಸಿಕೊಂಡು ಮನೆಗೆ ಬರುತ್ತಿದ್ದೆ. ದಾರಿಯಲ್ಲಿ ಒಂದು ಮರದ ಹಿಂದೆ ನಿಂತು ಚೆನ್ನ ಕರೆದಳು. 'ಮಾತನಾಡಬೇಕಾಗಿದೆ ಅಪ್ಪಾಜಿ; ಕೆರೆಯ ದಂಡೆಗೆ ಬಾ' ಎಂದು ಹೇಳಿ ಮಾಯವಾದಳು. ನಾನು ನೇರವಾಗಿ ಕೆರೆಯ ದಂಡೆಗೆ ಹೋದೆ. ಅಲ್ಲಿ ಚೆನ್ನ ಮದುವೆ ಏರ್ಪಾಟಿನ ಕಥೆಯನ್ನೆಲ್ಲಾ ಹೇಳಿ ವೀರಪ್ಪನನ್ನು ಕೂಡಿ ಬಾಳಲು ತನಗೆ ಸ್ವಲ್ಪವೂ ಇಷ್ಟವಿಲ್ಲವೆಂದು ತಿಳಿಸಿದಳು.

ಅದು ಹೇಳುತ್ತ ಹೇಳುತ್ತ ಅವಳ ಕಣ್ಣಲ್ಲಿ ಗಂಗಾಪ್ರವಾಹವೇ ಹೊರಟಿತು. ನನ್ನ ಕುತ್ತಿಗೆ ತಬ್ಬಿಕೊಂಡು 'ನಿನ್ನೇ ನಾನು ಪ್ರೀತಿಸಿದ್ದು ಅಪ್ಪಾಜಿ. ನನಗೆ ಯಾವಾಗಲೂ ನೀನೇ ಗಂಡ.. ಬಲವಂತ ಮಾಡಿ ಜನಾ ವೀರಪ್ಪನಿಗೆ ನನ್ನನ್ನು ಕಟ್ಟಿದರೆ ಇದೇ ಕೆರೆಯಲ್ಲಿಯೇ ಬಿದ್ದು ಪ್ರಾಣಬಿಡುತ್ತೇನೆ, ಎಂದು ಶಪಥಮಾಡಿದಳು.

ನಾನು ಸಮಾಧಾನ ಮಾಡುತ್ತಾ "ಹಾಗೆಲ್ಲಾ ಚೆನ್ನಾ. ತಾಯಿ ಮಾತು ಮೀರಬಾರದು. ನನಗೇನು ನಿನ್ನ ಮೇಲೆ ಪ್ರೀತಿಯಿಲ್ಲ ಎಂದು ತಿಳಿದಿದ್ದೀಯಾ. ನಿಮ್ಮಪ್ಪ ನಮ್ಮಪ್ಪ ವ್ಯಾಜ್ಯ ಕಾಯದಿದ್ದರೆ ಈ ಕಷ್ಟ ಇಬ್ಬರಿಗೂ ಏತಕ್ಕೆ ಬರುತ್ತಿತ್ತು?''

"ನೀನು ನನ್ನ ಪ್ರೀತಿಸುವದು ನಿಜವೇ ಅಪ್ಪಾಜಿ."

''ಗಂಗಾತಾಯಿ ಆಣೆಗೂ ನಿಜ ಚೆನ್ನಾ."

''ಹಾಗಾದರೆ ನಡಿ ಇಬ್ಬರೂ ಹೊರಟು ಹೋಗೋಣ. ಎಲ್ಲಿಯಾದರೂ ಜೀವನ ಮಾಡಿಕೊಂಡು ಸುಖವಾಗಿರೋಣ. ನನ್ನ ಮೇಲೆ ಸ್ವಲ್ಪ ಒಡವೆ ಇದೆ. ಅದು ಮುಗಿಯುವ ಹೊತ್ತಿಗೆ ನೀನು ಏನಾದರೂ ಕೆಲಸ ಸಂಪಾದಿಸು."

''ಇಷ್ಟು ಅವಸರ ಏಕೆ. ನನಗೆ ಸ್ವಲ್ಪ ಯೋಚನೆಗೆ ಅವಕಾಶ ಕೊಡು. ನಾಳೆ ಜವಾಬು ಹೇಳುತ್ತೇನೆ."

ಮೂರನೆಯ ದಿವಸ ಅವಳಿಗೆ ನಾನು ಹೇಳಿದ ಜವಾಬೆಂದರೆ ಬುಧವಾರ ಮದ್ರಾಸಿಗೆ ಹೋಗುವುದೆಂದು! ಇಬ್ಬರೂ ಕೆಲವು ತಿಂಗಳು ಸುಖವಾಗಿದ್ದೆವು. ಸ್ವರ್ಗಸುಖವನ್ನೇ ಅನುಭವಿಸಿದೆವು. ಅಷ್ಟು ಹೊತ್ತಿಗೆ ಇದ್ದದ್ದು ಕರಗುತ್ತಾ ಬಂದಿತ್ತು. ನಾನು ಕಷ್ಟಪಟ್ಟು ಒಂದು ಕೆಲಸವನ್ನು ಸಂಪಾದಿಸಿಕೊಂಡು ತಿಂಗಳಿಗೆ ೩೦ ರೂಪಾಯಿಯಷ್ಟು ಗಳಿಸುತ್ತಿದ್ದೆ. ಅದರಲ್ಲಿಯೇ ಮಿತವಾಗಿ ಸುಖವಾಗಿ ಜೀವನ ಮಾಡಿಕೊಂಡಿದ್ದೆವು.

ಆದರೆ ನನ್ನ ಚಪಲಬುದ್ಧಿ ಕಪಿಯಂತೆ ಆಡತೊಡಗಿತು. ಸ್ವಲ್ಪ ಕಷ್ಟವಾದರೂ ಚೆನ್ನನ ಮೇಲೆ ಹಾಕಲಾರಂಭಿಸಿದೆ. ಹಿಂಸೆಗೆ ಮೊದಲು ಮಾಡಿದೆ. ಅಹಸ್ಯಹನಿ ಜೀವನದ ಕಷ್ಟ ಕಾರ್ಪಣ್ಯವನ್ನು ಮರೆಯಲು ದುಷ್ಟ ಚಟಗಳಿಗೆ ಬೀಳತೊಡಗಿದೆ. ಆದರೆ ಚೆನ್ನಾ..ಎಲ್ಲವನ್ನೂ ಸಹಿಸಿದಳು; ಎಲ್ಲವನ್ನೂ ಉಪಭೋಗಿಸಿದಳು. ಊಟವಿಲ್ಲದೆ ಮಲಗುವ ದಿನಗಳಲ್ಲಿ ''ಏನಂತೆ, ಇದ್ದಾಗ ಮೂರು ಹೊತ್ತು ಉಣಲಿಲ್ಲವೇ. ಒಪ್ಪತ್ತು ಅನ್ನವಿಲ್ಲವೆಂದು ಈಗೇಕೆ ಅಳಬೇಕು" ಎಂದು ಸಮಾಧಾನಪಟ್ಟುಕೊಳ್ಳುತ್ತಿದ್ದಳು.

ಒಂದೊಂದು ಸಲ ನನ್ನ ನಡತೆಯನ್ನು ಕಂಡು ಮುನಿಯುವಳು. ರೋಷದಲ್ಲಿ ಒಂದೊಂದು ಮಾತು ಬಾಯಿಮೀರಿ ಬಂದು ಬಿಡುತ್ತಿತ್ತು. ಆ ಮರುಕ್ಷಣವೇ ನನ್ನ ಕಾಲು ಹಿಡಿದು "ಕ್ಷಮಿಸು, ಅಪ್ಪಾಜಿ. ನಾನು ಹುಚ್ಚಿ; ಬುದ್ಧಿಯಿಲ್ಲದ ಹಳ್ಳಿ ಮುಕ್ಕ" ಎಂದು ನೋಯುತ್ತಿದ್ದಳು.

ಕೊನೆಕೊನೆಗೆ ದಾರಿದ್ರ್ಯದ ಹಾವಳಿ ಹೆಚ್ಚಾಯಿತು. ನಮ್ಮ ತಂದೆಯವರು ತೀರಿ ಹೋದ ಸುದ್ದಿ ಗೊತ್ತಾಯಿತು. ಅವರು ಕೋಪದಲ್ಲಿ ಇದ್ದ ಆಸ್ತಿಯನ್ನೆಲ್ಲಾ ದೇವಸ್ಥಾನಕ್ಕೆ ಬರೆದುಬಿಟ್ಟಿದ್ದರು. ಆ ದುಃಖವೂ ನನ್ನ ಮನಸ್ಸಿನಲ್ಲಿ ಮನೆಮಾಡಿತು. ಈ ಎಲ್ಲ ಅನರ್ಥಗಳಿಗೂ 'ಇವಳೇ' ಕಾರಣ ಎಂಬ ಭಾವನೆಯು ದೃಢವಾಗಿ ಮನಸ್ಸಿನಲ್ಲಿ ನೆಡುತ್ತ ಬಂದಿತು.

ಒಂದು ದಿನ— ಗೌರಿಹಬ್ಬವೆಂದು ತಿರಿದು ತಂದು ಪಾಯಸದ ಅಡಿಗೆ ಮಾಡಿದ್ದಳು. ಊಟಮಾಡಿ "ಎರಡು ಮೂರು ದಿವಸಗಳಲ್ಲಿ ಬರುವೆ. ಆಫೀಸಿನ ಕೆಲಸದ ಮೇಲೆ ಕಾಟಪಾಡಿ ತನಕ ಹೋಗಿ ಬರಬೇಕಾಗಿದೆ" ಎಂದು ನಂಬಿಸಿ ಹೊರಟೆ. ಅವಳಿಗೊಂದು ಕಾಗದ, ಅವಳ ತಾಯಿಗೊಂದು ಟೆಲಿಗ್ರಾಂ ದಾರಿಯಲ್ಲಿ ಸಿಕ್ಕಿದ ಪೋಸ್ಟಾಫೀಸಿನಲ್ಲಿ ಕೊಟ್ಟು ನಾನು ಅಲ್ಲಿಂದ ಮುಂಬಯಿಗೆ ಹೊರಟುಬಿಟ್ಟೆ."

ರುದ್ರಪ್ಪನ ಗಂಟಲು ಬಿಗಿಯುತ್ತ ಬಂತು. ತಲೆಯಮೇಲೆ ಕೈ ಹೊತ್ತು ಸ್ವಲ್ಪ ಕಾಲ ಹಾಗೆಯೇ ಕುಳಿತುಬಿಟ್ಟನು. ನಾನು ಧೈರ್ಯಮಾಡಿಕೊಂಡು

"ಚೆನ್ನನ ಗತಿ?"

ಅವರ ತಾಯಿ ಬಂದು ಕರೆದುಕೊಂಡು ಹೋದರು. ಆದರೆ ಮತ್ತೆ ನನಗೆ ಅವಳ ದರ್ಶನ ಸಿಗಲಿಲ್ಲ. ಆರು ತಿಂಗಳ ಕಾಲ ತಲೆ ಹುಳುಕ ನಾಯಿಯಹಾಗೆ ಅಲೆದು ಚೆನ್ನನಿಗೆ ನಾನು ಮಾಡಿದ್ದ ದ್ರೋಹವನ್ನು ನೆನೆದು ಊರಿಗೆ ಹೋದೆ. ನಮ್ಮ ಮನೆಯಿದ್ದ ಜಾಗದಲ್ಲಿ ಹುಡುಗರ ಶಾಲೆ ಒಂದು ಬಿಟ್ಟಿತ್ತು. ಚೆನ್ನನ ಮನೆಗೆ ಹೋದೆ. ಅವಳ ತಾಯಿಯೇ ಬಂದರು. ನನ್ನನ್ನು ಒಳಕ್ಕೆ ಕರೆದುಕೊಂಡು ಹೋಗಿ ಉಪಚರಿಸಿದರು. ನಾನು ತಬ್ಬಲಿಯಂತೆ ಅವರ ಕಡೆ ನೋಡಿ,

"ಚೆನ್ನಾ ಎಲ್ಲಿ?"

ಎಂದೆ. ನನ್ನನ್ನು ನೋಡಿ ಗೊಳೋ ಎಂದು ಅತ್ತರು. ಅಂದಿಗೆ ಚೆನ್ನಾ ಮಣ್ಣಿನೊಂದಿಗೆ ಒಂದಾಗಿ ನಾಲ್ಕು ತಿಂಗಳಾಗಿತ್ತು. ತವರುಮನೆಗೆ ಬಂದಮೇಲೆ ಹಾಗೂ ಹೀಗೂ ಒಂದೆರಡು ತಿಂಗಳು ಬದುಕಿ ಶಿವಾಧೀನಳಾದಳಂತೆ. ಕೊನೆಯಲ್ಲಿ.. ನನ್ನ ಹೆಸರು ಹೇಳಿ.. ಈ ಪಟವನ್ನು ನಾನು ಸಿಕ್ಕಿದರೆ ಕೊಡಹೇಳಿ.. ಮಾತು ನಿಲ್ಲಿಸಿದಳಂತೆ.."

ರುದ್ರಪ್ಪನವರ ಮಾತೂ ನಿಂತುಹೋಯಿತು. ಕತ್ತು ತಗ್ಗಿಸಿ ನೋಡಿದೆ. ನನ್ನ ಕನ್ನ ಮುದ್ದಣ್ಣಾರಿಗೆ ಕಣ್ಣೀರಿನ ಅಭಿಷೇಕವಾಗುತ್ತಿದ್ದುದನ್ನು ಕಂಡೆ. ರುದ್ರಪ್ಪನವರೊಂದಿಗೆ ಆಡಲು ಮಾತುಗಳನ್ನು ಹುಡುಕುವಂತಾಗಿತ್ತು. ಮೆಲ್ಲನೆ ರುದ್ರಪ್ಪನವರ ಬಳಿ ಸಾರಿ ಅವರ ಕೈಗಳನ್ನು ಹಿಡಿದು, ಮನಸ್ಸು ಹೇಳಬೇಕೆಂದಿದ್ದುದನ್ನು ಸೂಚಿಸಿದೆ.

ಆ ವೇಳೆಗೆ "ಟಿಫಿನ್ ಕ್ಯಾರಿಯರ್" ನಲ್ಲಿ ಒಬ್ಬ ಹುಡುಗ ರುದ್ರಪ್ಪನವರ ಊಟವನ್ನು ತಂದು ಒಂದು ಮೂಲೆಯಲ್ಲಿಟ್ಟ. ರುದ್ರಪ್ಪನವರು ನನ್ನನ್ನು ನೋಡಿ ತಮ್ಮ ದುಃಖವನ್ನು ಅಣಗಿಸಿಕೊಂಡು,

"ನನ್ನ ಶಿವಪೂಜೆ ಬಂತು. ನಿಮ್ಮ ಶಿವಪೂಜೆ...."

"ಈಗ ಹೊರಡುತ್ತೇನೆ ರುದ್ರಪ್ಪನವರೇ."

ಎಂದು ಪುಸ್ತಕದ ಗಂಟನ್ನೆತ್ತಿಕೊಂಡು ಹೊರಟೆ. ಯಾವದೋ ಶಕ್ತಿ ಒಳಕ್ಕೇ ಎಳೆಯುವಂತಿತ್ತು. ರುದ್ರಪ್ಪ ನನ್ನನ್ನು ನೋಡಿ ನಗುನಗುತ್ತಲೇ,

"ಮತ್ತೆ ಬರಬೇಕು ಸ್ವಾಮಿ. ಹೊತ್ತು ಬಹಳವಾಯಿತು. ಕ್ಷಮಿಸಬೇಕು.... ಗುಡ್ ಮಾರ್ನಿಂಗ್."

"ಗುಡ್ ಮಾರ್ನಿಂಗ್."

ಎಂದು ನಾನೂ ಹೇಳಿ ಹೊರಟೆ. ಆದರೆ ಈ ಸಲ ರುದ್ರಪ್ಪನ 'ಗುಡ್ ಮಾರ್ನಿಂಗ್" ನನಗೆ ನಗೆಯನ್ನುಂಟುಮಾಡಲಿಲ್ಲ.

ದಿವಂಗತ ವಿಜಯ ಬೆಟಗೇರಿ ಬಿ. ಎ. ಅವರ ಕತೆಗಳ ಸಂಗ್ರಹ

'ಮುಗಿಲ ಮಲ್ಲಿಗೆ'

ತಾರುಣ್ಯದ ರಮ್ಯಜೀವನದ ಕನಸಿನ ರಂಜಕ ಚಿತ್ರಗಳೇ ಇದರಲ್ಲಿವೆ.
ಅಚ್ಚಾಗುತ್ತಲಿದೆ. ಬೇಕಾದವರು 'ಜಯಂತಿ'
ಕಾರ್ಯಾಲಯಕ್ಕೆ ಬರೆಯಿರಿ!

ಸಾರ್ವಭೌಮ ನಿರಂತರ ವರ್ಷಾ-ಭವಿಷ್ಯ

ALL WORLD PERPETUAL RAIN CALENDAR

ಓದಿರಿ! ಮಳೆಯ ಭವಿಷ್ಯ!! ಸಮಾಧಾನ ಪಡೆಯಿರಿ!!!

(ಮಹಾ— ತ್ರಿಭುವನ ಸುಂದರ ಶಾಸ್ತ್ರಿಗಳಿಂದ ಬರೆದು ಬಂದುದು.)

(All rights reserved)

(ಇದರ ಹಕ್ಕು ಕಾದಿಡಲಾಗಿವೆ.)

●

ಭವಿಷ್ಯ ಬರೆಯುವ ಹುಚ್ಚು— ಇತ್ತೀಚೆ ಜನರಿಗೆ ಎಲ್ಲದರ ಭವಿಷ್ಯಬರೆಯುವ ಹುಚ್ಚು ಹಿಡಿದಿದೆ. ಬಲ್ಲವರು ಬಲ್ಲಂತೆ ಬರೆದರೂ ಬರೆಯಲಿ ; ಆದರೆ ಸಿಕ್ಕವರು ಸಿಕ್ಕಂತೆ ಬರೆಯುವ ದಾಗಲಿ, ಬೇಕಾದವರು ಬೇಕಾದಂತೆ ಬರೆಯುವದಾಗಲಿ ನಮಗೆ ಒಂದಿಷ್ಟೂ ಸರಿಬರುವದಿಲ್ಲ. ಹನ್ನೆರಡು ರಾಶಿಗಳ ಹೆಸರು ಗಳನ್ನು ಕೂಡ ಹೇಳಲು ಬಾರದವರು ಜಗತ್ತಿನ ಭವಿಷ್ಯವನ್ನು ಸಾರಲು ಮುಂದೆ ಬರುತ್ತಿದ್ದಾರೆ. ಸಾರುವ ಅಯ್ಯನವರಿಗೂ ಇವರಿಗೂ ಏನು ಭೇದ? ಚೇಳಿನ ಮಂತ್ರ ಕೂಡ ಗೊತ್ತಿಲ್ಲದೆ ಹಾವಿನ ಗುದ್ದಿನಲ್ಲಿ ಕೈಹಾಕುವ ಜನರು ಈ ಕಲಿಯುಗದಲ್ಲಿ ಬಹಳಾಗಿದ್ದಾರೆ. ಇದಕ್ಕೆ ಒಂದೇ ಉಪಾಯವೆಂದರೆ ನಮ್ಮಂಥ ಅನುಭವಿಕರು ಲೋಕೋಪಕಾರಕ್ಕಾಗಿ ಬರೆದು ಜನರ ಅಜ್ಞಾನ ವನ್ನು ದೂರಮಾಡಬೇಕು. ಮತ್ತು ಸುಳ್ಳು ಭವಿಷ್ಯಸಾರುವ ಅರಣ್ಯಪಂಡಿತರ ಅಡವಿಯನ್ನು ತುಂಡುಮಾಡಬೇಕು.

ಮಳೆಯ ಭವಿಷ್ಯ— ವರ್ಷವರ್ಷವೂ ಪ್ರಕಟವಾಗುವ ಅನೇಕ ಮಳೆಯ ಭವಿಷ್ಯಗಳನ್ನು ಓದಿ, ಅದರ ಹುಚ್ಚುಚ್ಚು ನೋಡಿ, ಸಿಟ್ಟಿಗೆದ್ದು, ನಮಗೆ ಗವ್ಮ್ಮಕುಚ್ಚಿದಂತಾಗಿ, ಬೆವರು ಬಂದು, ಕೊನೆಗೆ ನಾವೇ ತಣ್ಣಗಾಗಿದ್ದೇವೆ. ಅನೇಕ ಒಕ್ಕಲಿಗರು ಈ ಭವಿಷ್ಯಗಳಿಗಾಗಿ ಬಾಯಿಬಿಟ್ಟು ಮಳೆಬರದ್ದನ್ನು ಕೊನೆಗೆ ಕಂಡು ಕಣ್ಣೀರುಸುರಿಸಿದ್ದಾರೆ. ಮಳೆಯ ಭವಿಷ್ಯಗಳಿಗೂ ನೀರಿಗೂ ಏನಾದರೂ ಸಂಬಂಧವಿದ್ದರೆ ಅದಿಷ್ಟೆ! ಮೊನ್ನೆ ನಮ್ಮೂರ ದೊಡ್ಡ ಧಣೇರು ಮತ್ತೊಮ್ಮೆ ಮಳೆಯ ಭವಿಷ್ಯ ಓದುವದಿಲ್ಲೆಂದು ನೀರುಬಿಡುವವರಿದ್ದರು. 'ಸುಳ್ಳೇ ನೀರು ದಂಡ, ಅಷ್ಟಾದರೂ ನೀರು ಯಾಕೆ ಹಾಳುಮಾಡಿಕೊಳ್ಳುತ್ತೀರಿ, ನನ್ನ ವರ್ಷಾ-ಭವಿಷ್ಯ ವನ್ನಷ್ಟು ಓದಿದ ಮೇಲೆ ಏನು ಮಾಡುವದನ್ನು ಮಾಡಿರಿ' ಎಂದು ಅವರ ಕೈ ತಡೆದೆವು. ಅವರಿಗೆ ನಮ್ಮ ಸಾರ್ವಭೌಮ ನಿರಂತರ ವರ್ಷಾ-ಭವಿಷ್ಯ'ವನ್ನು ಕೊಟ್ಟೆವು. ಅದನ್ನು ನೋಡ ನೋಡುತ್ತಿರುವಾಗಲೆ ಅವರ ಕಣ್ಣೊಳಗಿಂದ ದಳದಳನೆ ಆನಂದ ಬಾಷ್ಪಗಳುದುರಿದವು. ಮಳೆಗೆ ಬೇರೆ ಶುಭಶಕುನವೇನು ಬೇಕು? ಧಣೇರು ಆನಂದ ಸಮಾಧಿಯೊಳಗಿಂದೆಚ್ಚತ್ತು ಮೇಲೆ ಕಣಿ ಹೇಳು ವವರಂತೆ ಅವರ ಬಾಯೊಳಗಿಂದ ಈ ಶಬ್ದಗಳು ಬಂದವು 'ಮಳೆ ಬೀಳುವದು ಬಿಡುವದು ದೇವರ ಕೈಯೊಳಗಿನ ಮಾತು. ಶಾಸ್ತ್ರಿಗಳ ಮಳೆಯ ಭವಿಷ್ಯ ಮಾತ್ರ ಕಲ್ಪಾಂತಕಾಲಕ್ಕೂ ಸುಳ್ಳಾಗದು ; ನಮ್ಮ 'ನಿರಂತರ ವರ್ಷಾ-ಭವಿಷ್ಯ' ದ ಬಗ್ಗೆ ಇದಕ್ಕೂ ಹೆಚ್ಚಿನ ಸಿಫಾರಸು ಪತ್ರ ಯಾವುದಿರಬಹುದು ? ಮಂದಿಯ ಒತ್ತಾಯ ಕ್ಕಾಗಿ ಬರೆದ ನೂರು ಅಭಿಪ್ರಾಯಗಳಿಗಿಂತ ತಾವಾಗಿ ಬರೆದ ಒಂದು ಅಭಿಪ್ರಾಯವೂ ಮೇಲು !

ಸಾರ್ವಭೌಮ ನಿರಂತರ ವರ್ಷಾಭವಿಷ್ಯ—ಇದನ್ನು ಶೋಧ ಮಾಡಲು ನಾವು ಮಾಡಿದ ತಪಸ್ಸು ದೇವರಿಗೆ ಗೆ… ಗೊತ್ತು. ಅದನ್ನು ಬಾಯಿಬಿಟ್ಟು … ಸಹಾ… ಮಾಸ, ಪಕ್ಷ… ತಿಳಿಯುವವು. ಇಷ್ಟೆ ಅಲ್ಲ, ಪಂಜಾಬು …

ಹಿಮಾಲಯ-ಹಿಂದುಸ್ಥಾನ, ನೀಲಗಿರಿ-ನೈಲನದಿ, ಉತ್ತರಧ್ರುವ-ದಕ್ಷಿಣ ಅಮೇರಿಕಾ, ಸಹರಾ ಮತ್ತು ಸೊಲ್ಲಾಪುರ ಇಂಥ ಭಿನ್ನ ಪ್ರದೇಶಗಳಲ್ಲಿ ಕೂಡ ಮಳೆಯಾಗುವ ತಿಥಿಗಳನ್ನು ಇದು ತಿಳಿಸು ವದು. ಇಂಥ ವ್ಯಾಪಕಭವಿಷ್ಯದಲ್ಲಿ ಒಂದೆರಡು ತಿಥಿಗಳು ಹೆಚ್ಚು ಕಡಿಮೆ ಬಂದರೆ ಅದನ್ನು ಯಾರೂ ತಡೆದುಕೊಳ್ಳಬಹುದು. ಒಂದು ವರ್ಷ ಹೇಳಿದ ಮಳೆಗಳು ಇನ್ನೊಂದು ವರ್ಷ ಬಿದ್ದದ್ದನ್ನು ನಾವು ನೋಡಿದ್ದೇವೆ. ಅಂಥ ಕೀಳು ಭವಿಷ್ಯವೇನೂ ನಮ್ಮದಲ್ಲ.

ಈ ಭವಿಷ್ಯವನ್ನು ಉಪಯೋಗಿಸುವ ರೀತಿ— ಒಡಬಗ್ಗ ರಿಗೆ ಕೂಡ ಇದರ ಉಪಯೋಗವಾಗಬೇಕೆಂದು, ಈ ವರ್ಷಾ-ಭವಿಷ್ಯಯಂತ್ರವನ್ನು ವಿಶೇಷರೀತಿಯಿಂದ ಮುದ್ರಿಸಿದ್ದೇವೆ ಇದನ್ನು ಹರಕೊಂಡು ತಮಗೆ ಬೇಕಾದಲ್ಲಿ ಅಂಟಿಸಿಕೊಳ್ಳಬಹುದು. ಉತ್ಪನ್ನದಾರರಾದ ಶ್ರೀಮಂತರು ಇದನ್ನು ಬಂಗಾರ ಬೆಳ್ಳಿ, ತಗಡು

ಗೆ ಅಂಟಿಸಿ ದೇವರಮನೆಯಲ್ಲಿ ಇಡಬಹುದು. ಸಾಮಾನ್ಯ ರು ಪುಕ್ಕಟೆ ಸಿಗುವ ಯಾವ ಕ್ಯಾಲಂಡರಿಗೂ ಇದನ್ನು ಹಚ್ಚ ಕು. ಆದರೆ ಇದರ ಉಪಯೋಗವು ತಲೆತಲಾಂತರವಾಗುವ ುವದರಿಂದ ಯಾವುದಾದರೂ ಅಬಾಧ ಕ್ಯಾಲೆಂಡರಿಗೆ ಹಚ್ಚುವ ಳಿತು. ಅವೂ ಪುಕ್ಕಟ್ಟೆ ಸಿಗುವವು. ಇಷ್ಟೂ ಗತಿಯಿಲ್ಲದ ದ್ರರು 'ಪ್ರ-ಚ-ಸ-ದ-ತ್ರ' ಎಂಬ ಮಂತ್ರವನ್ನು ಪಾಠ ಮಾಡ ಕು. ಈ ಮಂತ್ರದ ಉಪಯೋಗ ಹೇಗೆ ಮಾಡಬೇಕು ಇದನ್ನು ಗೆ ಬರೆಯಲಾಗುವದು.

'ಪ್ರಚಸದತ್ರ' ಎಂಬ ಪಂಚಾಕ್ಷರೀ ಮಂತ್ರ—'ಯಾವಾಗ್ಗೆ ಳೆಯಾದೀತು' ಎಂದು ಯಾವ ದೇಶದವರೂ ಯಾವ ಕಾಲಕ್ಕೂ ಿದರೂ ನಿರ್ಣಯವಾಗಿ ಹೇಳಿರಿ ಈ ಪಂಚಾಕ್ಷರೀ ಮಂತ್ರವನ್ನು. ್ರಚಸದತ್ರ-ಪ್ರಚಸದತ್ರ' ಇದಕ್ಕೂ ನಿಜವಾದ ಮಳೆಯ ಭವಿಷ್ಯವೆ ಲ್ಲ. ಪ್ರ ಎಂದರೆ ಪ್ರತಿಪದೆ; ಚ ಎಂದರೆ ಚತುರ್ಥಿ ; ಸ ಎಂದರೆ ಪ್ತಮಿ, ದ ಎಂದರೆ ದಶಮಿ; ತ್ರ ಎಂದರೆ ತ್ರಯೋದಶಿ ' ಎಂದು ಳಿದವರೆ 'ಇನ್ನೇನು ಒಂದೆರಡು ತಿಥಿ ಹಿಂದೆಮುಂದಾಗ ಹುದು. ಯಾಕೆಂದರೆ ಇದು ಸಾರ್ವಭೌಮ ನಿರಂತರ ವರ್ಷಾ- ವಿಷ್ಯ' ಎಂದು ಕೊನೆಗೆ ಹೇಳುವದನ್ನು ಮರೆಯಬೇಡಿರಿ.

ನಮ್ಮ ವರ್ಷಾಭವಿಷ್ಯ ಯಂತ್ರದ ಹೆಚ್ಚಿನ ಗುಣವೇನು ?:- ಳೆಯು ಯಾರಪ್ಪನ ಮನೆಯ ಗಂಟೂ ಅಲ್ಲ. ಮಳೆಗೆ ಮಳೆಯೂ ಲ್ಲ; ಭವಿಷ್ಯಕ್ಕೆ ಭವಿಷ್ಯವೂ ಸುಳ್ಳು-ಹೀಗೆ ಎರಡು ನಿರಾಶೆಗಳನ್ನು ಪ್ಪಿಸಲು ಇದು ಮಹಾಶಕ್ತಿಯಾಗಿದೆ. ನಮ್ಮ ಮಳೆಯ ವಿಷ್ಯವು ಸುಳ್ಳಾದ ಬಗ್ಗೆ ಇನ್ನೂ ಯಾರೂ ನಮಗೆ ಬರೆದು ಳಿಸಿಲ್ಲ. ಇಷ್ಟೇಕೆ ? ಕರ್ನಾಟಕದ ಮಳೆಯ ಭವಿಷ್ಯವನ್ನು ೀದ ವರ್ಷ ಮಾಡಿದ್ದಾಗ್ಗೆ ಒಂದಿಲ್ಲ ಒಂದು ಹಳ್ಳಿಯವರು ಮ್ಮ ಭವಿಷ್ಯವು ನಿಜವಾದ ಬಗ್ಗೆ ಸಂತೋಷದ ಪತ್ರಗಳನ್ನು ರೆದಿದ್ದರು. ಇನ್ನೇನು ತಮ್ಮ ...ಗಳುಟ್ಟಾಗಿಗೆ ಮಳೆಯಾಗಲಿಲ್ಲ ಎಂಬ ಷ್ಟಿನಿಂದ ಕೆಲವು ಸ್ವಾರ್ಥಪರರಾದ ಸಭ್ಯಗೃಹಸ್ಥರು ನಮ್ಮ ಮೇಲೆ ಸಿಟ್ಟಿಗೆದ್ದು-ನಮ್ಮ ಭವಿಷ್ಯವನ್ನು ದೂಷಿಸಿದ್ದರು. ಇಂಥ ಿಂದಮತಿಗಳು ಜಗತ್ತಿನಲ್ಲಿ ಯಾವಾಗಲೂ ಇರತಕ್ಕವರೇ. ವರನ್ನು ನಾವು ಲೆಕ್ಕಿಸುವದಿಲ್ಲ. ಅತಿ ಸೂಕ್ಷ್ಮ ಗಣಿತ ಮಾಡಿ, ಹಳ ಅನುಭವದಿಂದ ಈ ಯಂತ್ರವನ್ನು ಸಿದ್ಧಮಾಡಿದ್ದೇವೆ. ಈ ವಿಷ್ಯವು ಎಂದಾದರೂ ಎಲ್ಲಿಯಾದರೂ ಯಾರಾದರೂ ಸಿದ್ಧಮಾಡಿದರೆ ನಾವು ತಾತ್ಕಾಲ ಈ ಯಂತ್ರವನ್ನು ತಿರುಗಿ ತಕ್ಕೊಂಡು ಪಾವತಿ ಕೊಟ್ಟು ಆ ಪಂಡಿತರ ಹೆಸರನ್ನು ಎಲ್ಲ ಪತ್ರಿಕೆಗಳಲ್ಲಿ ಪ್ರಸಿದ್ಧಿಸಲು ಸಿದ್ಧರಿದ್ದೇವೆ. ಅವರ ಕೀರ್ತಿ ಹಬ್ಬಲಿ. ನಮಗೆ ಹೊಟ್ಟೆಕಿಚ್ಚಿಲ್ಲ. ನಮ್ಮ ಯಂತ್ರವನ್ನು ಉಪಯೋಗಿಸುವವರು ಒಂದು ಮಾತನ್ನು ಮಾತ್ರ ನೆನಪಿನಲ್ಲಿಡ ಬೇಕು. ಇದು **ಮಳೆಯಾಗಬಹುದಾದ** ಸಂಶಯದ ದಿವಸಗಳನ್ನು ಹೇಳುವ ಬುರುಡೆ ಯಂತ್ರವಲ್ಲ. ನಿಶ್ಚಯವಾಗಿ **ಮಳೆಯಾದ** ದಿವಸಗಳನ್ನು ತಪ್ಪದೆ ತೋರಿಸುವ ಸತ್ಯ ಯಂತ್ರ. ಎಂದೆಂದೂ ಭೂಮಿಯ ಯಾವ ಭಾಗದಲ್ಲಿಯೂ, ಸಾಮಾನ್ಯವೃಷ್ಟಿ, ಅತಿವೃಷ್ಟಿ, ಅಕಾಲವೃಷ್ಟಿ ಏನೇ ಆಗಲಿ ಈ ಯಂತ್ರದಲ್ಲಿ ತಾತ್ಕಾಲ ನೋಡಿರಿ. ಒಂದೆರಡು ತಿಥಿಗಳ ಹೆಚ್ಚು ಕಡಿಮೆಯಿಂದ ಆ ತಿಥಿ ಸಿಗಲೇಬೇಕು. ಈ ಕಲಿಯುಗದಲ್ಲಿ ಇಷ್ಟು ಧೈರ್ಯದಿಂದ ಸತ್ಯ ಹೇಳುವವರು ತೀರ ಕಡಮೆ ! ನಮ್ಮ ಭವಿಷ್ಯವು ಸುಳ್ಳೆಂದು ಅವಿಚಾರದಿಂದ ಎನ್ನು ವವರಿಗೆ ಬಬಲಾದಿಯ ಜಂಗಮರು ಕೊಡುವ ಎಲ್ಲ ಶಾಪಗಳು ಹತ್ತುವವೆಂದು ಸ್ವಲ್ಪದರಲ್ಲಿ ಎಚ್ಚರಿಕೆ ಕೊಡುತ್ತಿದ್ದೇವೆ.

ಧಾರವಾಡ ಎಪ್ರಿಲ್ ಫೂಲ್ಸ್ ಡೇ	**ಮಹಾ....ತ್ರಿಭುವನಸುಂದರಶಾಸ್ತ್ರಿ** C/o 'ಜಯಂತಿ' ಕಚೇರಿ, ಧಾರವಾಡ (Box) ಬೋಕ್ಸ್ ನಂ. A 1.

ಓಂ	ಮಳೆಯ ಯಂತ್ರ	ಓಂ
	ಸಾರ್ವಭೌಮ ನಿರಂತರ ವರ್ಷಾ ಭವಿಷ್ಯ	
ಪ್ರ	ಪ್ರತಿಪದೆ ಚತುರ್ಥಿ	ಚ
	ಸ ಸಪ್ತಮಿ	
ದ	ದಶಮಿ ತ್ರಯೋದಶಿ	ತ್ರ
ಓಂ	ಪರ್ಜನ್ಯರಾಜ ಪ್ರಸನ್ನ	ಓಂ

ಬೇಕಾದವರು ಹರಕೊಳ್ಳಬಹುದು.

ವಿ. ಸೂ:—ನಮ್ಮಲ್ಲಿ ಪೂರ್ವಜನ್ಮಪುನರ್ಜನ್ಮ ಜಾತಕಗಳು, ನಿರಾಶರಾದವರು ಜಪಿಸಬೇಕಾದ ಮಹಾಮಂತ್ರಗಳು **ಕೇವಲ ಧರ್ಮಾರ್ಥ**ವಾಗಿ ಸಿಗುವವು. ಬೇಕಾದವರು ೧ ರೂಪಾಯಿ ತಿಕೀಟು ಕಳಿಸಿ ಪತ್ರವ್ಯವಹಾರ ಮಾಡಬೇಕು. ಪತ್ರವ್ಯವಹಾರವು ಗುಪ್ತವಿಡಲಾಗುವದು. ಯಾರೂ ನಾಚಿಕೊಳ್ಳುವ ಕಾರಣವಿಲ್ಲ.

—ಶು. ಶಾ.

ನಗೀಗೆ ನೇವಿದ್ಯ

(ಕಳಲಿ ನಾರಾಯಣಾಚಾರ್ಯರಿಂದ)

"ಏನು, ರಾಯರೆ, ನಿಮ್ಮ ಮನೆಯು ಗೋಡೆ ಬಹಳೇ ತೆಳ್ಳಗಿದ್ದಂತೆ ಕಾಣೋದಲ್ಲ? ನಿಮ್ಮಲ್ಲಿಯ ಮಾತುಗಳೆಲ್ಲ ನಿಮ್ಮ ನೆರೆಮನೆಯವರಿಗೆ ಕೇಳಿಸೋದಂತೆ!"

"ತೆಳ್ಳಗಂತೆ! ಆದರೆ ಎಷ್ಟು ತೆಳ್ಳಗೆ ಅನ್ನೋ ಕಲ್ಪನೆ ನಿಮಗಿಲ್ಲ. ನಮ್ಮ ನೆರೆಮನೆಯವರು ಅಮೃತಾಂಜನ ಹಚ್ಚಿಕೊಂಡರೆ ನಮ್ಮ ಮನೆಯೊಳಗಿನ ತಲೆಶೂಲಿ ಗುಣ ಆಗ್ತದೆ, ಗೊತ್ತಾಯಿತೆ?"

* * *

ಒಂದು ಮನೆಗೆ ಬಣ್ಣ ಕೊಡುವುದಕ್ಕೆ ಅಂತ ಬಣ್ಣಗಾರ ಒಬ್ಬ ತನ್ನ ಆಳನ್ನು ಕರೆದುಕೊಂಡು ಬಂದನು. ಅವರಿಬ್ಬರನ್ನು ನೋಡಿ ಮನೆಯ ಯಜಮಾನಿತಿ ಅಡಿಗೆಯವನಿಗೆ ಹೇಳಿದಳು—'ನಾರಾಯಣಾ, ಬೆಳ್ಳಿಯ ತಾಟುಗಳನೆಲ್ಲಾ ಕಪಾಟಿನೊಳಗಿಟ್ಟು ಕೀಲಿ ಹಾಕಿಬಿಡು.'

ಬಣ್ಣಗಾರನಿಗೆ ಈ ಮಾತಿನ ಮರ್ಮ ತಿಳಿಯದೆ ಹೋಗಲಿಲ್ಲ. ಅವನಾದರೂ ತನ್ನ ಕೋಟು, ರುಮಾಲು, ಚಪ್ಪಲಿಗಳನ್ನು ತೆಗೆದು ತನ್ನ ಆಳಿನ ಕೈಯೊಳಗೆ ಕೊಟ್ಟು ಹೇಳಿದನು.

'ಏ, ಇವನ್ನೆಲ್ಲ ಒಯ್ದು ನಮ್ಮ ಮನೆಯೊಳಗೆ ಇಟ್ಟು ಬಾ; ಈ ಮನೆಯ ಲಕ್ಷಣ ಏನು ಚೆನ್ನಾಗಿ ಕಾಣೋದಿಲ್ಲ?

* * *

ತನ್ನ ಮದಿವೆಗೆ ಅವಸರವಸರವಾಗಿ ಹೋಗುವ ಮದಿಮಗನಿಗೆ ರೈಲುಗಾಡಿ ತಪ್ಪಿತು. ಮುಂದೆ ಅವನಿಗೆ ಏನೂ ಯೋಚನೆ ಹೊಳೆಯದಂತಾಯಿತು. ಕೊನೆಗೆ ಮದಿವೆಯಾಗುವ ಊರಿನಲ್ಲಿ ತನ್ನ ಬೀಗರಿಗೆ ಒಂದು ತಂತಿಯನ್ನು ಕಳುಹಿಸಿಕೊಟ್ಟ.

'ರೈಲು ತಪ್ಪಿತು. ನಾನು ಬರೋವರೆಗೆ ಮದಿವೆ ಮಾಡಬಾರದು.

* * *

ತರತರದ ರತ್ನಗಂಬಳಿಗಳನ್ನೂ ಹಾಸಿಗೆಗಳನ್ನೂ ಮೋಟಾರಿನಲ್ಲಿ ಹೇರಿಕೊಂಡು ಮಾರಾಟಗನೊಬ್ಬನು ಬಂದನು. ಒಂದು ಮನೆಯಲ್ಲಿ ಗಂಟುಗಳನ್ನೆಲ್ಲ ಹರವಿ ಅವುಗಳನ್ನು ಬಿಚ್ಚುತ್ತ,

'ಬೇಕಾದರೆ ಕಾಶ್ಮೀರಿ, ಬೇಕಾದರೆ ಪರ್ಶಿಯನ್, ಬೇಕಾದರೆ—' ಎಂದು ಮಾತು ಪ್ರಾರಂಭಿಸಿದನು.

'ನಮಗೆ ಬೇಡ' ಎಂದನು ಮನೆಯ ಯಜಮಾನ.

ಮೊದಲು ವಸ್ತುಗಳನ್ನಾದರೂ ನೋಡಿರಿ?

'ನಮಗೆ ಬೇಡ, ನೋಡುವುದೆ ಬೇಡ?

ಕೊನೆಗೆ ಮಾರಾಟಗನು ಈ ಹಟವನ್ನು ಸೋಲಿಸಲು ಹೀಗೆ ಯುಕ್ತಿಯನ್ನು ಹೂಡಿದನು.

'ನಿಮಗೆ ನೋಡುವುದು ಬೇಡಾದರೆ ಬಿಡಿರಿ. ಇಂದಿಗೆ ೧೫ ದಿವಸಗಳಿಂದ ನಾನೇ ಇವುಗಳನ್ನು ನೋಡಿಲ್ಲ. ನಾನು ನೋಡಲು ನಿಮ್ಮ ಅಡ್ಡಿ ಇಲ್ಲವಷ್ಟೆ?' ಎಂದು ವಸ್ತುಗಳನ್ನು ಹರವಿದನು.

* * *

"ಅಲ್ಲವ, ಇಂದ ತಾರೀಖು ಹತ್ತು; ಆದರ ಪತ್ರದ ಮ್ಯಾಲ ಹದಿನೈದೂಂತ ಬರದೀದಿಯಲ್ಲಾ!"

"ಹೌದು! ನಾನು ಆ ಪತ್ರಾ ಪೋಸ್ಟ ಮಾಡಲಿಕ್ಕೆ ನಿಮ್ಮ ಕೈಯಾಗ ಕೊಡಬೇಕಂತ ಮಾಡೀನಿ!"

—ಯಂತ್ರಿ

ಬ್ಯಾಂಕು ಮುಳುಗುವುದೆಂದು ಊರ ಎಂಬ ಸುದ್ದಿ ಹರಡಿತ್ತು. ಅದನ್ನು ಕೇಳಿ ಮಾರವಾಡಿಗೆ ಬಹಳೇ ಆಶ್ಚರ್ಯವಾಯಿತು. ಕೊನೆಗೆ ಬ್ಯಾಂಕಿನಲ್ಲಿದ್ದ ತನ್ನ ಹಣವನ್ನೆಲ್ಲ ತೆಗೆದಿಡಬೇಕೆಂದು ನಿರ್ಧಾರ ಮಾಡಿ, ಅಲ್ಲಿಗೆ ಹೋಗಿ ತನ್ನ ಸಿಲ್ಕಿನ ಚೆಕ್ಕನ್ನು ನಡುಗುವ ಕೈಗಳಿಂದ ಮುಂದೆ ಚಾಚಿದನು.

ಕ್ಲಾರ್ಕನು ಆ ಚೆಕ್ಕನ್ನು ನೋಡಿಕೊಂಡು ನೋಟು ಬೇಕೋ, ರೂಪಾಯಿಗಳೇ ಬೇಕೋ?' ಎಂದು ಕೇಳಿದನು. ಮಾರವಾಡಿಯು ತುಟಿ ನವರುತ್ತ

'ದುಡ್ಡು ನಿಮ್ಮಲ್ಲಿ ಅದಾವಂದರ ನಮಗೇನು ಬೇಡ. ನಿಮ್ಮಲ್ಲಿ ದುಡ್ಡು ಇರೋವ್ರಿಲ್ಲ ಅಂದ್ರ ಮಾತ್ರ ನಮಗ ಎಲ್ಲಾ ರೊಕ್ಕ ಬೇಕಾಗೇದ' ಎಂದನು.

* * *

ಮುಂಬಯಿ ವಿಶ್ವವಿದ್ಯಾಲಯದ ಪದವೀಧರಳಾದ ಯುವತಿಯೊಬ್ಬಾಕೆ ಭಾರತದ ಸಂಚಾರವನ್ನು ಮಾಡುತ್ತಿದ್ದಳು. ಆಕೆ ಸಮಾಜಸತ್ತಾವಾದ (ಸೋಶಲಿಸ್ಟ)ಪಕ್ಷದ ಸದಸ್ಯಳಾಗಿದ್ದಳು. ಸಂಚಾರದಲ್ಲಿ ಮದರಾಸ ಪಟ್ಟಣಕ್ಕೆ ಹೋದಳು. ಆ ನಗರದ 'ರಿಕ್‌ಶಾ' ಎಂಬ ವಾಹನವನ್ನು ನೋಡಿ ಅವಳಿಗೆ ಬಹಳೇ ಆಶ್ಚರ್ಯವಾಯಿತು. ಅದನ್ನು ಮನುಷ್ಯರೆ ಎಳೆಯುವರೆಂಬುದು ಅವಳಿಗೆ ಗೂಢವಾಯಿತು. ತನ್ನ ಗೆಳತಿಗೆ ಹೀಗೆ ಪತ್ರದಲ್ಲಿ ಬರೆದಳು.

'ಮದರಾಸೀ ಜನರ ತಂತ್ರಗಾರಿಕೆ ಹೊಗಳತಕ್ಕದ್ದು ಎಂಬ ಮಾತು ಸುಳ್ಳಲ್ಲ. ನನ್ನ ಅನುಭವವನ್ನೆ ಹೇಳುವೆ. ಈ ನಗರದಲ್ಲಿ ವಾಹನಕ್ಕೆ ಹೂಡಿದ ಕುದುರೆಗಳು ತದ್ರೂಪ ಮನುಷ್ಯರಂತೆಯೆ ಕಾಣುವುವು!'

* * *

ಪತಿರಾಜರ ಸ್ವಭಾವ ಮರೆವಿನದು. ಪ್ರಿಯತಮೆಯ ಸ್ವಭಾವ ನಾಚಿಕೆಯದು. ಹೀಗಾಗಿ ಈ ದಿನ ಇಕ್ಕಟ್ಟಿನ ಪ್ರಸಂಗ -dead lock- ಪ್ರಾಪ್ತವಾಗಿದೆ. ಯಾಕೆಂದರೆ ಪತಿಯು ಒಂದೇಸವನೆ ಸತಿಯನ್ನು ದಿಟ್ಟಿಸುತ್ತ ನಿಂತಿದ್ದಾನೆ. ಆಫೀಸಿನ ಹೊತ್ತಾದರೂ ಸರಿಯಲಿಲ್ಲ. ಕೊನೆಗೆ ನಾಚಿಕೆಯಿಂದ ತಲೆವಾಗಿ ಸತಿಯೆ ಕೇಳಿದಳು

'ಹೊತ್ತಾಗಿ ಹೋಯಿತು. ಆಫೀಸಿಗೆ ಹೋಗುವುದಿಲ್ಲವೆ?

ಪತಿಯು ಬೆಚ್ಚಿಬಿದ್ದನು.

'ಆಂ! ಆಫೀಸು? ಹೊತ್ತು ಆಯ್ತೋ—ಮರೆತೆ ಬಿಟ್ಟಿದ್ದೆ. ನಾನು ಕನ್ನಡಿಯ ಮುಂದೆ ನಿಂತಿರುವೆನೆಂದು ತಿಳಿದಿದ್ದೆ. ಆದರೂ ನನ್ನ ಪ್ರತಿಬಿಂಬವೆ ಕಾಣಿಸಲಿಲ್ಲ. ಅದಕಾಗಿ ನಾನು ಆಫೀಸಿಗೇ ಹೋಗಿದ್ದೇನೆಂದು ತಿಳಿದುಕೊಂಡೆ?

* * *

ಆಚಾರ್ಯರಿಗೆ ದಿಗಿಲು. ಶ್ರಾದ್ಧಕರ್ಮವೇನೊ ಸರಿಯಾಗಿ ನಡೆದಿದೆ. ಆದರೆ ಪ್ರತಿಯೊಂದು ಸಲ ಯಜಮಾನನು ನೀರು ಬಿಟ್ಟಾಕ್ಷಣ, ಉಸ್ಸೆಂದು ಕೈಜಾಡಿಸುವನು ಕೊನೆಗೆ ಆಚಾರ್ಯರು ತಡೆಯದೆ ಕೇಳಿ ಬಿಟ್ಟರು.

'ಇದೇನು, ನೀರು ಬಿಟ್ಟಾಗೊಮ್ಮೆ ಉಸ್ಸೆಂದು ಕೈಜಾಡಿಸುವಿರಿ?'

'ನೀರು ಬಹಳೇ ಬಿಸಿಯಾಗಿದೆ' ಎಂದು ಮುಖ ಕಿವುಚಿ ಹೇಳಿದನು ಯಜಮಾನನು

'ಆದರೆ ಬಿಸಿನೀರು ಯಾಕೆ!' ಎಂದ ಆಚಾರ್ಯರ ಕುತೂಹಲ.

'ನಮ್ಮ ತಂದೆಯವರು ಉಕ್ಕು ಬಂದ ಆರಿದ ನೀರೇ ಕುಡಿಯುತ್ತಿದ್ದರು ಯಾವಾಗಲೂ. ಸ್ವರ್ಗದಲ್ಲಿ ಅವರಿಗೆ ಟಾಯಿಫಾಡಿ (ವಿಷಮಜ್ವರದ) ಪ್ರಸಂಗ ಬೇಡ ಎಂದ ಬಿಸಿ ನೀರನ್ನೆ ಬಿಡುತ್ತಿರುವೆ' ಎಂ ಪಿತೃಭಕ್ತ.

* * *

'ಮದ್ಯಪಾನನಿರೋಧವಾದರೆ ಸ್ವರ್ಗ ಹೋಗೋದು ಹೇಗೆ?' ಎಂದು ಒಬ್ಬ ಸಂಶಯ.

'ಮದ್ಯ ಕುಡಿಯೋದು ಪಾಪ ಅದನ್ನ ಬಿಟ್ಟುಕೊಟ್ಟರೆ ಅನಾಯಾಸವ ಸ್ವರ್ಗಕ್ಕೆ ಹೋಗಬಹುದು' ಎ ಇನ್ನೊಬ್ಬ. ಮೊದಲಿನವ ಹೇಳಿದ. 'ಸ್ವರ್ಗ ಹೋಗಬಹುದು. ಆದರೆ ಅಲ್ಲಿ ಸುರಾಪ ಮಾಡ್ಬೇಕಾಗುವುದಂತೆ. ನಮಗೆ ಆ ಪ ಇಲ್ಲ ಅಂದರೆ ಹೊರಗೆ ಹಾಕಬಹುದೇ ಅಂತ ಹೆದರಿಕೆ'

ಸ್ಟಾಲಿನ್ ಜೊತೆಗಾರನನ್ನು ಕೇಳಿದ:
ಏನ್ರಿ! ಗಣನೆ ನೀವು ಇಷ್ಟು ಬೋಲ್ಶೆವಿಕ್ ಜನರಲ್ಲಿ ಇನ್ನು ಯಾರು ಉಳಿದಂತಾಯಿತು?
ಜೊತೆಗಾರ ಸ್ಟಾಲಿನ್ ಕಡೆಗೆ ಬೆರಳು ತೋರಿಸಿ ಹೇಳಿದ.
"ನೀನು ಒಬ್ಬನೇ ಒಬ್ಬ"

ನಾಲ್ಕೂ ನಿಟ್ಟಿನ ನೋಟ

(ನಿರೀಕ್ಷಕರು)

ಜಗತ್ತಿನಲ್ಲಿ ಜರ್ಮನರೋಗ

ತನ್ನದನ್ನು ತಾನು ಸಾಧಿಸಿಕೊಳ್ಳುವ ಕಲೆಯನ್ನು ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನು ಪೂರ್ತಿಯಾಗಿ ಅರಿತಿದ್ದಾನೆಂದು ಹೇಳಬಹುದು. ಆದರೆ ಆ ಕಲೆಯನ್ನು ಇನ್ನೊಬ್ಬರು ಕಲಿಯಬಹುದೊ ಹೇಗೆ ಎಂಬ ಪ್ರಶ್ನೆ ಮಾತ್ರ ಎಂದಿಗೂ ಉದ್ಭವಿಸುವುದಿಲ್ಲ. ಯಾಕೆಂದರೆ ಹಿಟ್ಲರನ (ಮನೋ) ರಾಜ್ಯದಲ್ಲಿ 'ಇನ್ನೊಬ್ಬ' ಎಂಬ ವಸ್ತುವಿಗೆ ಸ್ಥಾನವೆ ಇಲ್ಲ. ನೀವು ಯಾರಾದರೂ ಜರ್ಮನ ಭಾಷೆಯಲ್ಲಿ ಮಾತನಾಡಬಲ್ಲಿರಾದರೆ ಇನ್ನು ಮುಂದೆ ಎಚ್ಚರದಿಂದಿರಬೇಕಾಗುವುದು; ಒಂದು ವೇಳೆ ಹಿಟ್ಲರನಿಗೆ ಗೊತ್ತಾದರೆ ಅವನು ನಿಮ್ಮನ್ನು ತನ್ನ ಪ್ರಜೆಯನ್ನಾಗಿ ಮಾಡಿಕೊಳ್ಳುವನು. ಹಿಟ್ಲರನ ಪ್ರಭುತ್ವದ ಹೊರಗೆ ಜರ್ಮನ ಭಾಷೆಯನ್ನು ಮಾತನಾಡುವಂತಿಲ್ಲ. ಆಸ್ಟ್ರಿಯಾ ಎಂಬಲ್ಲಿ ಜರ್ಮನವು ಆ ದೇಶದ ಭಾಷೆಯಾಗಿದ್ದಿತು. ಆದುದರಿಂದ ಕಳೆದ ಮಾರ್ಚ ತಿಂಗಳ ಹನ್ನೆರಡನೆಯ ತಾರೀಖಿಗೆ ಹಿಟ್ಲರನು ಇಡಿಯ ದೇಶವನ್ನೆ ತನ್ನ ಪ್ರಭುತ್ವದಲ್ಲಿ ಸೇರಿಸಿಕೊಂಡನು.

ಆಸ್ಟ್ರಿಯಾ ದೇಶವು ಬಹುಕಾಲದಿಂದ ಸ್ವತಂತ್ರವಾಗಿದ್ದಿತು. ಎಷ್ಟೋ ನೂರಾರು ವರ್ಷಗಳ ವರೆಗೆ ಆಸ್ಟ್ರಿಯಾ ದೇಶವು ಸಾಮ್ರಾಜ್ಯವಾಗಿದ್ದಿತು. ಕಳೆದ ಮಹಾಯುದ್ಧದಲ್ಲಿ ಜರ್ಮನಿಯ ಬೆನ್ನು ಕಟ್ಟಿ ಸೋತ ಮೇಲೆ, ಆಸ್ಟ್ರಿಯಾ ದೇಶವು ಸಾಮ್ರಾಜ್ಯವನ್ನು ಕಳೆದುಕೊಂಡು ಬರಿಮೈಯಿಂದ ನಿಂತಿತು. ತನ್ನನ್ನು ತಾನು ಪೋಷಿಸಿಕೊಳ್ಳುವಷ್ಟು ಆರ್ಥಿಕ ಶಕ್ತಿ ಕೂಡ ಅದರಲ್ಲಿದ್ದಿರಲಿಲ್ಲ. ಭಾಷೆ ಮೊದಲಾದ ಕಾರಣಗಳಿಂದ ಅದು ಜರ್ಮನಿಯಲ್ಲಿ ಸೇರಬಹುದಾಗಿತ್ತು. ಆದರೆ ಅವೆರಡೂ ಕೂಡಿದರೆ ಜರ್ಮನಿಯು ಮತ್ತೆ ಬಲಿಷ್ಠವಾಗುವುದೆಂದು ಫ್ರಾನ್ಸದ ಹೆದರಿಕೆ. ಆದುದರಿಂದ ಯುದ್ಧದ ಒಪ್ಪಂದದಲ್ಲಿ ಆಸ್ಟ್ರಿಯಾ ದೇಶವು ಸ್ವತಂತ್ರವಾಗಿಯೆ ಉಳಿಯತಕ್ಕದು ಎಂಬ ಕರಾರನ್ನು ಹಾಕಲಾಯಿತು. ಅದರಂತೆಯೆ ಹಣದ ಸಹಾಯದಿಂದ ರಾಷ್ಟ್ರಸಂಘವು ಆಸ್ಟ್ರಿಯಾ ದೇಶವನ್ನು ಪೋಷಿಸತೊಡಗಿತು. ಆದರೆ ಇಂದು ಹಿಟ್ಲರನು ಆ ಒಪ್ಪಂದದ ಕರಾರನ್ನು ಮುರಿದಿದ್ದಾನೆ—ಆಸ್ಟ್ರಿಯಾದ ಸ್ವಾತಂತ್ರ್ಯ ಕಟ್ಟಡವನ್ನೂ ಮುರಿದಿದ್ದಾನೆ! ರಾಷ್ಟ್ರಸಂಘವಾಗಲಿ, ಇಂಗ್ಲಂಡ, ಫ್ರಾನ್ಸ ಮೊದಲಾದವರಾಗಲಿ ಆಸ್ಟ್ರಿಯಾದ ಸ್ವಾತಂತ್ರ್ಯ ನಾಶವನ್ನು ನೋಡುತ್ತಲಿದ್ದಾರೆ, ನೋಡಿ ನುಂಗಿಕೊಳ್ಳುತ್ತಲಿದ್ದಾರೆ!

ಹಿಟ್ಲರನ ಈ ಕಾರ್ಯದಲ್ಲಿ ಅನೇಕ ಅಪಾಯಕಾರಕ ತತ್ತ್ವಗಳು ಅಡಕವಾಗಿವೆ. ಯುರೋಪದ ಕೆಲವು ಚಿಕ್ಕ-ಪುಟ್ಟ ರಾಷ್ಟ್ರಗಳಲ್ಲಿ ಜರ್ಮನ ಭಾಷೆಯ ಜನರ ಸಂಖ್ಯೆ ದೊಡ್ಡದಿದೆ. ಆಸ್ಟ್ರಿಯಾ ದೇಶವನ್ನು ನುಂಗಿದ ಕಾರಣಗಳಿಗಾಗಿಯೆ ಆ ದೇಶಗಳನ್ನೂ ಹಿಟ್ಲರನು ನುಂಗಬಹುದಲ್ಲವೆ? ರಾಷ್ಟ್ರಸಂಘವು ಅಂತಹ ಪ್ರಸಂಗದಲ್ಲಿ ಏನೂ ಮಾಡಲಾರದು. ಅಮೇರಿಕಾ, ಜಪಾನ, ಇಟಲಿ, ಜರ್ಮನಿಗಳು ರಾಷ್ಟ್ರಸಂಘದ ಹೊರಗಿವೆ. ಮಿಕ್ಕ ರಾಷ್ಟ್ರಗಳವರೂ ಏನೂ ಮಾಡಲಾರರು. 'ಈ ಕಾರ್ಯವನ್ನು ಯುದ್ಧದಿಂದಲೆ ತಡೆಯಬಹುದಾಗಿತ್ತು; ಆದರೆ ಯುದ್ಧಕ್ಕೆ ನಾವು ಸಿದ್ಧರಿಲ್ಲ' ಎಂದು ಇಂಗ್ಲಂಡ ಮುಖ್ಯ ಪ್ರಧಾನರಾದ ಚೇಂಬರಲೇನರು ಹೇಳಿದರು. ಯುದ್ಧದಿಂದ ಅಪಾರವಾದ ಹಾನಿಯಾಗುವುದು. ನಿಜ; ಆದರೆ ಯಾವ ಪ್ರಸಂಗದಲ್ಲೂ ಯುದ್ಧಕ್ಕೆ ಸಿದ್ಧರಾಗಲಿಲ್ಲವೆಂದರೆ ಅಂತಹ ರಾಷ್ಟ್ರಗಳೊಡನೆ ಉಳಿದ ರಾಷ್ಟ್ರಗಳು ಒಪ್ಪಂದವನ್ನು ಮಾಡಿಕೊಂಡಲ್ಲಿ ಲಾಭವೇನು? ಇದಲ್ಲದೆ ಕೊಟ್ಟ ಮಾತನ್ನು ಮುರಿದು, ಶಕ್ತಿಯಿಂದ ಸ್ವಾರ್ಥ ಸಾಧಿಸುವ ಹಿಟ್ಲರನಂತಹ ವ್ಯಕ್ತಿಗಳಿರುವಾಗ, ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಪ್ರಾಮಾಣಿಕತೆಯಾಗಲಿ ಸುರಕ್ಷಿತತೆಯಾಗಲಿ ಉಳಿಯುವುದಾದರೂ ಹೇಗೆ? ಶಕ್ತಿ ಇದ್ದವನೆ ಶ್ರೇಷ್ಠನೆಂದು ಒಪ್ಪಿಕೊಂಡು ಅವನ ದಾಸ್ಯದಲ್ಲಿ ಕೊಳೆಯಬೇಕು, ಇಲ್ಲವೆ ಯುದ್ಧದಂತಹ ಅನರ್ಥದಿಂದ ಆತ್ಮನಾಶದ ಹಾದಿಯನ್ನು ಹಿಡಿಯಬೇಕು. ಸದ್ಯಕ್ಕೆ ಇವೆರಡರ ಹೊರತು ಮೂರನೆಯ ದಾರಿಯೇ ಇಲ್ಲದಂತಾಗಿದೆ. ಚಿಕಿತ್ಸಿಸುವ ಡಾಕ್ಟರನಿಗೆ ಮನೆ-ಮಾರುಗಳನ್ನು ಬರೆದುಕೊಡಬೇಕು, ಇಲ್ಲವೆ ಬೇನೆಯಿಂದ ಸಾಯಬೇಕು; ಇದೊಂದು ಜರ್ಮನಿಯ ಬುದ್ಧಿಮತ್ತೆಯು ಶೋಧಿಸಿ ಜಗತ್ತಿನಲ್ಲಿ ಹರಡಿದ ರೋಗ.

* * * *

ವಿದ್ಯಾರ್ಥಿಗಳೂ 'ವಿದ್ಯಾರ್ಥಿ'ಗಳೂ

'ನಮಗೆ ಶಕ್ಯವಿದ್ದಷ್ಟು ಪ್ರಾರಂಭಿಸಿದ ಕಾರ್ಯದಲ್ಲಿ ಸಾರ್ವಜನಿಕರ, ಮುಖ್ಯವಾಗಿ ವಿದ್ಯಾರ್ಥಿಗಳ ಬೆಂಬಲ ಸಹಾಯಗಳು ಬೇಕು. ಇಲ್ಲವಾದರೆ ರಾಜಕೀಯ, ಆರ್ಥಿಕ, ಸಾಮಾಜಿಕ ಪ್ರಗತಿಯಾಗದು' ಎಂದು ಮಿಸೂರದ ಶಿಕ್ಷಣಮಂತ್ರಿಗಳಾದ ಡಾ. ಸಯ್ಯದ ಮಹಮ್ಮದರು ತಾವು ಹೊರಡಿಸಿದ ಒಂದು ವಿಜ್ಞಾಪನಾಪತ್ರಿಕೆಯಲ್ಲಿ ಹೇಳಿದ್ದಾರೆ. ಸಾರ್ವಜನಿಕರ ಮತ್ತು ಸರಕಾರದ ಸಹಕಾರವು ನಮ್ಮ ಪ್ರಗತಿಗೆ ಅಗತ್ಯವೆಂದು ಎಲ್ಲರೂ ಒಪ್ಪಬೇಕಾ

ಗಿದೆ. ಆದರೆ ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಯಾವ ಸ್ಥಾನವಿದೆ-ಎಂಬುದು ಮೊದಲನೆಯ ಪ್ರಶ್ನೆ. ವಿದ್ಯಾರ್ಥಿಗಳನ್ನು ಉಪದೇಶಿಸದವರು ಈ ಮಾನವಪ್ರಪಂಚದಲ್ಲಿಯೆ ಇಲ್ಲವೆಂದು ಹೇಳಬಹುದು. ಇಂತಹ ಸ್ಥಿತಿಯಲ್ಲಿ ಉಪದೇಶಗಳು ಪರಸ್ಪರ ವಿರೋಧಕವಾದರೆ ಆಶ್ಚರ್ಯವಿಲ್ಲ. ವಿದ್ಯಾರ್ಥಿಗಳು ದಿನಂದಿನದ ರಾಜಕಾರಣದಲ್ಲಿ ಭಾಗವಹಿಸಬಾರದು ಎಂದು ಇತ್ತಿತ್ತಲಾಗಿ ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ ಮೊದಲಾದ ಮುಂದಾಳುಗಳು ಹೇಳುತ್ತಲಿದ್ದಾರೆ. ಇತ್ತ ಅಧಿಕಾರದಲ್ಲಿದ್ದ ಮಂತ್ರಿಗಳು 'ರಾಜಕೀಯ' ಪ್ರಗತಿಗೆ ವಿದ್ಯಾರ್ಥಿಗಳ ಬೆಂಬಲವು 'ಮುಖ್ಯವಾಗಿ' ಬೇಕು ಎಂದು ಅಭಿಪ್ರಾಯಪಡುತ್ತಿದ್ದಾರೆ. ಇವರ ಜೊತೆಗೆ ಮನೆಯಲ್ಲಿ ಹಿರಿಯರು, ಮಠದಲ್ಲಿ ಧರ್ಮಗುರುಗಳು, ಮರೆಯಲ್ಲಿ (ಮದುವೆಯಾಗಿದ್ದರೆ) ಹೆಂಡಂದಿರೂ, ಸಂಸ್ಥೆಗಳಲ್ಲಿ ಶಿಕ್ಷಕರೂ ಇನ್ನೂ ಏನೇನು ಹೇಳುತ್ತಿರುವರೊ ?

ಹೀಗಿರುವಾಗಲೂ ಸಾರ್ವಜನಿಕ ವ್ಯವಹಾರದಲ್ಲಿ ವಿದ್ಯಾರ್ಥಿಗಳಿಗೆ ಸ್ಥಾನವಿದೆ ಎಂದು ಒಪ್ಪೋಣ. ಆದರೆ ಎರಡನೆಯದೊಂದು ಮಹತ್ತ್ವದ ಪ್ರಶ್ನೆ ಈಗ ನಮ್ಮೆದುರು ನಿಲ್ಲುವುದು. ಇಂತಹ ವ್ಯವಹಾರಕ್ಕಾಗಿ ವಿದ್ಯಾರ್ಥಿಗಳಿಗೆ ಯೋಗ್ಯತೆ ಎಷ್ಟಿದೆ ? ದಾರಿದ್ರ್ಯ ಮತ್ತು ನಿರಕ್ಷರತೆಗಳನ್ನು ಹೋಗಲಾಡಿಸುವ ಕೆಲಸದಲ್ಲಿ ವಿದ್ಯಾರ್ಥಿಗಳು 'ಸೈನಿಕರಾಗಬೇಕು, ಸೇನಾಪತಿಗಳಾಗಬೇಕು' ಎಂದು ಡಾ॥ ಸಯ್ಯದರ ಪತ್ರಿಕೆಯಲ್ಲಿದೆ. ಆದರೆ ವಿದ್ಯಾರ್ಥಿಗಳು ಈಗ ತಾವು ಪಡೆಯುತ್ತಿರುವ ಶಿಕ್ಷಣದಿಂದ ಅಂತಹ ಕಾರ್ಯವನ್ನು ಮಾಡಲು ಸಮರ್ಥರಾಗಬಹುದೆ- ಎಂದು ಸಂಶಯ. ವಿದ್ಯಾರ್ಥಿಗಳಿಗೆ ವರ್ಷಕ್ಕೆ ಸಾಮಾನ್ಯವಾಗಿ ಎರಡು ತಿಂಗಳ ರಜೆ (ಸೂಟಿ) ದೊರೆಯುವುದು. ಆ ಎರಡು ತಿಂಗಳುಗಳಲ್ಲಿ 'ದಾರಿದ್ರ್ಯ'ವನ್ನು ಹೋಗಲಾಡಿಸಲು ಅವರು ಯಾವ ಕಾರ್ಯಕ್ರಮವನ್ನು ಕೈಕೊಳ್ಳಬಹುದು. ಒಂದು, ಸರಕಾರದವರೆ ಯಾವುದಾದರೊಂದು ಯೋಜನೆಯನ್ನು ಸಿದ್ಧಪಡಿಸಿದ್ದರೆ ಅದರ ಪ್ರಚಾರವನ್ನು ಕೈಕೊಳ್ಳಬಹುದು; ಈ ಪ್ರಚಾರವು ಶಿಸ್ತಿನಿಂದ ನಡೆಯಬೇಕಾದರೆ ಅದರಲ್ಲಿ ತೊಡಗಿದ ವಿದ್ಯಾರ್ಥಿಗಳಿಗೆ ಯಾವುದಾದರೊಂದು 'ಅಧಿಕಾರ ಸಂಕೇತ' (badge of authority) ಬೇಕು. ಇಲ್ಲವಾದರೆ ಒಂದು ಕಡೆ ಜನರ ಉದಾಸೀನತೆ, ಇನ್ನೊಂದು ಕಡೆ ಅಧಿಕಾರಿಗಳ ಸಂಶಯದೃಷ್ಟಿ ಹೀಗಾಗಿ ಕೆಲಸವು ಕುಂಠಿತವಾಗುವುದು. ಈ ಅಧಿಕಾರಸಂಕೇತ ದೊರಕಿದರೂ ವಿದ್ಯಾರ್ಥಿಗಳಲ್ಲಿ ಕೆಲಸದ ಯೋಗ್ಯತೆ ಬಂದೀತೆಂದು ಹೇಳುವಂತಿಲ್ಲ. ಜನರು ತಮ್ಮ ಮಾತನ್ನು ಕೇಳಬೇಕು, ಅವರು ಕೇಳುವಂತೆ ಇವರು ಹೇಳಬೇಕು, ತಿಳಿಯದವರಿಗೆ ತಿಳುಹಿಸಬೇಕು- ಈ ಕಲೆಯು ವ್ಯವಸಾಯದ ಶಿಕ್ಷಕರಿಗೆ ಕೂಡ ಸಾಧಿಸದಿರುವಾಗ ವಿದ್ಯಾರ್ಥಿಗಳಿಗೆ ಸಾಧಿಸೀತೆಂದು ಹೇಳುವುದು ಧಾರ್ಷ್ಟ್ಯವಾಗುವುದು.

ನಿಜವಿದ್ದ ಮಾತೆಂದರೆ- ಹಳ್ಳಿಗಳ ಜ್ಞಾನವನ್ನೂ ಅಲ್ಲಿಯ ಪ್ರಚಾರಕಾರ್ಯದ ಸ್ವರೂಪವನ್ನೂ ಶಿಕ್ಷಣಕ್ರಮದಲ್ಲಿಯೆ ಸೇರಿಸದ ಹೊರತು ವಿದ್ಯಾರ್ಥಿಗಳ ವೇಳೆ ಮತ್ತು ಉತ್ಸಾಹಗಳ ಅಪವ್ಯಯವೆ ಆಗುವುದು. ಹಳ್ಳಿಯ ಜೀವನದಲ್ಲಿ ಮೊದಲು ಆರೋಗ್ಯದ ಮತ್ತು ಸ್ವಚ್ಛತೆಯ ಅವಶ್ಯವಿದೆ. ಆ ಆವಶ್ಯಕತೆಯ ಸ್ವರೂಪವನ್ನು ಮೊದಲು ವಿದ್ಯಾರ್ಥಿಗಳಲ್ಲಿ ಬಿಂಬಿಸಬೇಕು. ಆರೋಗ್ಯದ ಮಾರ್ಗವನ್ನೂ ಸ್ವಚ್ಛತೆಯ ಉಪಾಯಗಳನ್ನೂ ಅವರಿಗೆ ತಿಳುಹಿಸಿ ಕೊಡಬೇಕು. ಈ ಜ್ಞಾನದಲ್ಲಿ ಪ್ರಾವೀಣ್ಯವನ್ನು ತೋರಿಸಿದವರಿಗೆ ಮಾತ್ರ ಹಳ್ಳಿಯ ಪ್ರಚಾರಕಾರ್ಯವನ್ನು ಒಪ್ಪಿಸಬೇಕು. 'ಹಳ್ಳಿಯ ಪ್ರಚಾರಕಾರ್ಯ' ಎಂಬ ದೊಡ್ಡ ಮಾತೇಕೆ ? ವಿದ್ಯಾರ್ಥಿಯು ತಾನಿದ್ದ ಹಳ್ಳಿಯೊಂದರಲ್ಲಿಯೆ ಈ ಕಾರ್ಯವನ್ನು ಕೈಕೊಂಡರೆ ಸಾಕು. 'ಕೈಕೊಂಡು' ಎಂಬ ಶಬ್ದವನ್ನು ಲಕ್ಷ್ಯದಲ್ಲಿಡಬೇಕು. ಗ್ರಾಂಥಿಕ ಜ್ಞಾನವನ್ನು ಉಪನ್ಯಾಸಗಳಲ್ಲಿ ತುಂಬುವುದು ಪ್ರಚಾರಕಾರ್ಯವಲ್ಲ. ತನ್ನ ಕೈಯಿಂದ ಮಾಡಿ ತೋರಿಸುವ ಯೋಗ್ಯತೆಯು ಈ ವಿದ್ಯಾರ್ಥಿಯಲ್ಲಿರಬೇಕು.

ಅನರಂತೆಯೆ ಸಾಕ್ಷರತೆಯ ಪ್ರಚಾರಕಾರ್ಯ. 'ಅಕ್ಷರ ಕಲಿತು ನಮಗೇನು ಮಾಡೋದಿದೆ ?' ಎನ್ನುವ ಹಳ್ಳಿಗರ ಸಂಖ್ಯೆಯೆ ಇನ್ನೂ ಹೆಚ್ಚಾಗಿದೆ. ಇಂತಹರಲ್ಲಿ ಆಸಕ್ತಿಯನ್ನು ಹುಟ್ಟಿಸುವುದು ಸಾಕ್ಷರತೆಯ ಮಹತ್ತ್ವವನ್ನು ತೋರಿಸಿಕೊಡುವುದು ಸಣ್ಣ ಕೆಲಸವಲ್ಲ. ಇದಲ್ಲದೆ ಸಾಕ್ಷರತಾಪ್ರಚಾರಕ್ಕಾಗಿ ತಕ್ಕ ಸಾಹಿತ್ಯವನ್ನು ನಿರ್ಮಾಣಮಾಡಬೇಕಾಗುವುದು. ಸಾಕ್ಷರಿಗನಾದ ಹಳ್ಳಿಗನು ತನ್ನ ವಿದ್ಯೆಯನ್ನು ಉಳಿಸಿಕೊಳ್ಳಬೇಕಾದರೆ ಅವನ ಮನಸ್ಸು ಹಿಡಿಯುವಂತಹ ಸಾಹಿತ್ಯಬೇಕು; ಸಚಿತ್ರ ಗ್ರಂಥಗಳ ಆವಶ್ಯಕತೆ ಹೆಚ್ಚಾಗಿದೆ. ಈ ಕೆಲಸವು ಸರಕಾರವೆ ಮುಂದಾಗದ ಹೊರತು ನೀಗದಂತಹದು.

ಈಗಿನ ವಿದ್ಯಾರ್ಥಿಗಳ ವಿದ್ಯೆಯೆ ಅರ್ಧಮರ್ಧವಾಗಿದೆ. ಇವರ ಜೊತೆಗೆ ವಿಕ್ರಮವರನ್ನು ವಿದ್ಯಾರ್ಥಿಗಳನ್ನಾಗಿ ಮಾಡುವುದರಿಂದ ನಮ್ಮ ಪ್ರಗತಿಯಾಗದು. ಸುಸಂಘಟಿತ ಯೋಜನೆ ಇಲ್ಲದೆ, ಅದನ್ನು ನೆರವೇರಿಸುವ ಶಿಸ್ತು-ಶಿಕ್ಷಣ- ಶಕ್ತಿಗಳಿಲ್ಲದೆ ಸಾರ್ವಜನಿಕ ಕಾರ್ಯಗಳನ್ನು ಕೈಕೊಂಡಲ್ಲಿ ವೇಳೆ-ಶಕ್ತಿಗಳ ಅಪವ್ಯಯವಲ್ಲದೆ ಉತ್ಸಾಹಭಂಗವೂ, ಧ್ಯೇಯನಿರಾಶೆಯೂ ಹುಟ್ಟುವ ಹೆದರಿಕೆ ಹೆಚ್ಚು. ಇಂದು ಅಧಿಕಾರಾರೂಢರಾದ ದೇಶಭಕ್ತರಿಗೆ ಸಲಕರಣೆ- ಸೌಕರ್ಯಗಳಿವೆ. ಅವುಗಳನ್ನು ಪಯೋಗಿಸಿ ಈ ಕಾರ್ಯದ ಮಹತ್ತ್ವವನ್ನೂ ಯಶಸ್ಸನ್ನೂ ತೋರಿಸಿಕೊಡುವರೆಂದು ಆಶಿಸೋಣ.

* * *

ಸ್ವರಾಜ್ಯದ ಶಿಫಾರಸಪತ್ರಿಕೆ

ಮಾರ್ಚ್ ತಿಂಗಳ ಕೊನೆಗೆ ಅಲಹಾಬಾದದಲ್ಲಿ ನಡೆದ ಹಿಂದು ಮುಸಲ್ಮಾನ ದಂಗೆಯ ವಿಷಯವಾಗಿ ಮಹಾತ್ಮಾ ಗಾಂಧಿಯವರು ತಮ್ಮ ಹರಿಜನಪತ್ರಿಕೆಯಲ್ಲಿ ಬರೆಯುತ್ತ ಹೀಗೆ ಹೇಳಿದ್ದಾರೆ; 'ಕಾಂಗ್ರೆಸ್ ಚಟುವಟಿಕೆಗಳ ರಾಜಧಾನಿಯಾದ ಅಲಹಾಬಾದದಲ್ಲಿ ನಡೆದ ಸಂಗತಿಗಳನ್ನು ನೋಡಿದರೆ ಬ್ರಿಟಿಶರ ಬದಲಾಗಿ ನಾವು—ಭಾರತೀಯರು — ರಾಜ್ಯವನ್ನು ನಡೆಸಲು

ಇಸನ್ನೂ ಅಯೋಗ್ಯರಾಗಿದ್ದೇವೆ.' ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ತಮ್ಮ ಜೀವದ ಆಹುತಿಗೊಡಲು ಹಿಂಜರಿಯದ ಮಹಾತ್ಮರು ಕಳವಳಗೊಂಡುದರಲ್ಲಿ ಆಶ್ಚರ್ಯವಿಲ್ಲ. ಇಂತಹ ಜಾತೀಯ ಕಲಹಗಳಿಂದ ಪ್ರತಿಯೊಬ್ಬ ರಾಷ್ಟ್ರೀಯ ವ್ಯಕ್ತಿಯವನಿಗೆ ಅಪಮಾನವೂ ಖೇದವೂ ಎನಿಸುವುದು ಸಹಜವಿದೆ. ಅಹಿಂಸಾ ತತ್ತ್ವವನ್ನೆ ತಮ್ಮ ಜೀವದುಸಿರನ್ನಾಗಿ ಮಾಡಿದ ಮಹಾತ್ಮರಿಗೆ ಮತ್ತು ಅವರ ಕೋಟ್ಯನುಕೋಟಿ ಅನುಯಾಯಿಗಳಿಗೆ ದಂಗೆಯ ಹಿಂಸಾಕೃತ್ಯಗಳನ್ನು ನೋಡಿ ಹೃದಯಕ್ಕೆ ಆಘಾತವಾಗುವುದೂ ಸಹಜವಿದೆ. ಆದರೆ—?

ಸ್ವರಾಜ್ಯಕ್ಕಷ್ಟೆ ಅಲ್ಲ, ಬ್ರಿಟಿಶರಿಂದ ಆಡಳಿತದ ಸೂತ್ರಗಳನ್ನು ತೆಗೆದುಕೊಳ್ಳಲುಕೂಡ ನಾವು ಅನರ್ಹರೆಂಬ ಮಾತು, ದಂಗೆಗಳಿಂದ ನಿಷ್ಕರ್ಷವಾಗುವ ಸತ್ಯವೊ, ದಯಾರ್ದ್ರಹೃದಯದ ಕಳಕಳಿಯ ಅತಿಶಯೋಕ್ತಿಯೊ? ಇಂತಹ ಜಾತೀಯ ಗಲಭೆಗಳ ಕಾರಣವೇನು? ಅವುಗಳಲ್ಲಿ ಭಾಗವನ್ನು ವಹಿಸುವವರು ಯಾರು? ಧಾರ್ಮಿಕ ಭಾವನೆಯೆ ಈ ಕಲಹಕ್ಕೆ ಕಾರಣವೆಂದು ಯಾವಾಗಲೂ ಹೇಳುವಂತಿಲ್ಲ. ಒಮ್ಮೊಮ್ಮೆ—ಮುಂಬಯಿಯಲ್ಲಿ ಆಗುವಂತೆ ವೈಯಕ್ತಿಕ ಕಲಹವು ಒಮ್ಮೆಲೆ ಜಾತೀಯ ಕಲಹವಾಗಿ ಪರಿಣಮಿಸುತ್ತದೆ. ಇದರಲ್ಲಿ ಭಾಗವಹಿಸುವವರು ಸಾಮಾನ್ಯವಾಗಿ ನಿರುದ್ಯೋಗಿಗಳಾದ ಹುಂಬರೆ ಇರುತ್ತಾರೆ. ಕಲಹ—ಗಲಭೆ—ಏನಾದರೊಂದು ಕಿಡಿಗೇಡಿತನ ಮಾಡುವುದಿಷ್ಟೆ ಇವರ ಉದ್ದೇಶವಿರುತ್ತದೆ. ಈ ಕಿಡಿಗೇಡಿಗಳಿಗೆ ಪುಟ ಕೊಡಲು ಎರಡೂ ಧರ್ಮಗಳೊಳಗಿನ ಕೆಲ ಸುಶಿಕ್ಷಿತ (?) ಸ್ವಾರ್ಥಸಾಧುಗಳು ಕಾರಣರಾಗುತ್ತಾರೆ. ಈ ಸುಶಿಕ್ಷಿತರಾದರೂ ಧರ್ಮಭಾವನೆಯಿಂದ ಪ್ರೇರಿತರಾದವರಲ್ಲ: ರಾಜಕಾರಣದ ವಿಚಾರಗಳಿಂದ ಪ್ರೇರಿತರಾದವರು. ಹಿಂದುಗಳು ಬಹುಸಂಖ್ಯಾಕರಾದುದರಿಂದ ತಮಗೆ ರಾಜಕೀಯ—ಸಾಮಾಜಿಕ ಜೀವನಗಳಲ್ಲಿ ಸ್ಥಾನ – ಸಂರಕ್ಷಣೆಗಳು, ಸಿಕ್ಕಲಿಕ್ಕಿಲ್ಲವೆಂದು ಮಹಮ್ಮದೀಯರ ಭಯ; ಅಲ್ಪಸಂಖ್ಯಾಕರಾದ ಮಹಮ್ಮದೀಯರು ಹೆದರಿಕೆ ತೋರಿಸಿ ಹೆಚ್ಚಿನ ಸವಲತ್ತುಗಳನ್ನು ಪಡೆಯುವರಲ್ಲ—ಎಂದು ಹಿಂದುಗಳ ಅವಿಶ್ವಾಸ; ಈ ಮನಃಸ್ಥಿತಿಗೆ ಕಾರಣವು ಇದುವರೆಗೆ ಸರಕಾರವು ತೋರಿಸಿದ ಧೋರಣೆಯೆ. ಶಿಕ್ಷಣದಿಂದ ನೋಕರಿಯ ವರೆಗೆ ಪ್ರತಿಯೊಂದು ವ್ಯವಹಾರದಲ್ಲಿ ಸರಕಾರವು ಜಾತಿಗೆ (ಪಂಥಕ್ಕೆ) ಮಹತ್ತ್ವವನ್ನೂ ವಿಶಿಷ್ಟ ಸ್ಥಾನವನ್ನೂ ಕೊಡುತ್ತಲಿದೆ. ಜಾತೀಯ ಕಲಹಕ್ಕೆ ಇದೇ ಮೂಲಕಾರಣ. ವ್ಯವಹಾರದಲ್ಲಿ ಸ್ಥಾನಮಾನ — ಆರ್ಥಿಕ ಅನುಕೂಲತೆ—ರಾಜಕಾರಣದಲ್ಲಿ ಅಲ್ಪ ಬಹುಮತತ್ವ—ಧರ್ಮದ ನೆವ—ಕಿಡಿಗೇಡಿಗಳ ಕೈಗಾರಿಕೆ ಈ ಪಂಚಮಹಾಭೂತಗಳು ನಮ್ಮ 'ಜಾತೀಯ' ಕಲಹಗಳ ಉತ್ಪಾದಕಗಳು. ಇಂತಹ ಕಲಹಗಳು ನಿರ್ಮೂಲವಾಗಬೇಕಾದರೆ ಅವುಗಳ ಕಾರಣವನ್ನೆ ಕಿತ್ತೊಗೆಯಬೇಕಲ್ಲವೆ? ಮಹಾತ್ಮರು ಹೇಳುವಂತೆ ಸಾವಿರಾರು ಪಶುಪತಿನಾಥಗುಪ್ತರು ಅಹಿಂಸಾವ್ರತದ ವೀರರಾಗಿ ದಂಗೆಗಳಲ್ಲಿ ಶಾಂತರಾಗಿ, ಆಹುತಿಯಾಗಿ ಧುಮುಕುವುದು ಒಂದೆರಡು ದಂಗೆಗಳನ್ನು ತಡೆಯಬಹುದು. ಆದರೆ ದಂಗೆಯ ಮೂಲಕಾರಣರಾಗುವವರ ಮನಃಸ್ಥಿತಿಯು ಅಸಂತೋಷದ್ದೂ ಅವಿಶ್ವಾಸದ್ದೂ ಆಗುವವರೆಗೆ ದಂಗೆಗಳು ಇಲ್ಲದಂತಾಗಬಹುದೆಂದು ಹೇಳಲಾಗುವುದಿಲ್ಲ. ದೇಶಕ್ಕಾಗಿ ಜೀವದ ಆಹುತಿಯನ್ನಾದರೂ ಕೊಡುವುದು ದೇಶಭಕ್ತನ ಕರ್ತವ್ಯ. ಆದರೆ ಜೀವದ ಆಹುತಿಯನ್ನು ಕೊಡುವುದೆ ದೇಶಭಕ್ತಿ ಎಂದು ಹಟತೊಡುವ ಕಾರಣವಿಲ್ಲ.

ಸಂಯುಕ್ತಪ್ರಾಂತದ ಕಾಂಗ್ರೆಸ್ ಮಂತ್ರಿಮಂಡಳವು ಪೋಲೀಸರನ್ನೂ ಸೈನಿಕರನ್ನೂ ಸಹಾಯಕ್ಕಾಗಿ ಕರೆದು, ತಮ್ಮ ದೌರ್ಬಲ್ಯವನ್ನೂ ಅಯೋಗ್ಯತೆಯನ್ನೂ ತೋರಿಸಿದರೆಂದು ಮಹಾತ್ಮರು ಅಭಿಪ್ರಾಯಪಟ್ಟಿದ್ದಾರೆ. ಪೋಲೀಸರೂ ಆದರಲ್ಲಿ ಸೈನಿಕರೂ ಮೇಲಿಂದಮೇಲೆ ನಮ್ಮ ಸಹಾಯದಾತೃಗಳಾಗುವುದು ಯಾವ ಸಯುಕ್ತಿಕ ಬುದ್ಧಿಗೂ ಒಪ್ಪುವುದಿಲ್ಲ. ಆದರೂ ಶಿಸ್ತಿಗಾಗಿ, ಸಂರಕ್ಷಣೆಗಾಗಿ ಪೋಲೀಸದಳದಲ್ಲಿ ಅಡಕವಾಗಿರುವ ತತ್ತ್ವವು ಯಾವ ಸಮಾಜಕ್ಕಾದರೂ (ವಿಶೇಷವಾಗಿ ಅಜ್ಞಾನ ಅಂಧಶ್ರದ್ಧೆಗಳಿಗೊಳಗಾದ ನಮ್ಮ ಸಮಾಜಕ್ಕೆ) ಅವಶ್ಯಕವೆಂದೇ ಹೇಳಬಹುದು. ಕಾಂಗ್ರೆಸ್ ಅನುಯಾಯಿಗಳಾದ, ಮುಂಬಯಿಯ ಗೃಹಮಂತ್ರಿಗಳಾದ ಮುನಶಿಯವರು ಪೋಲೀಸದಳವನ್ನು ಹೆಚ್ಚಿಸಬೇಕೆಂದು ನಿರ್ಣಯಿಸಿದಾಗ ಇಂತಹ ಅಭಿಪ್ರಾಯವನ್ನೇ ಸೂಚಿಸಿದರು. ಹೊರಗೆ ಪೋಲೀಸರು ಬೇಡಾಗಿದ್ದರೆ ಒಳಗೆ—ಹೃದಯದೊಳಗೆ— ಪೋಲೀಸರು ಬೇಕಾಗುವರು. ಹೃದಯದಲ್ಲಿ ಪೋಲೀಸರಿದ್ದರೆ ಪರಸ್ಪರ ಅಸೂಯೆ— ಅವಿಶ್ವಾಸಗಳು ದೂರಾಗುವುವು. ವ್ಯವಹಾರದಲ್ಲಿ ಸ್ಥಾನವು ಯೋಗ್ಯತೆಗನುಸರಿಸಿ ದೊರೆಯುವಂತೆ, ರಾಜಕಾರಣದ ಗುಂಪುಗಳು ಜೀವನದ ತಳಹದಿಯಾದ ಆರ್ಥಿಕ ಪರಿಸ್ಥಿತಿಗನುಸರಿಸಿರುವಂತೆ, ಕಾಂಗ್ರೆಸದವರು ಉಪದೇಶದಿಂದಲೂ ತಮ್ಮ ಆಚರಣೆಯಿಂದಲೂ ತೋರಿಸಿದರೆ ಸ್ವಲ್ಪಾವಧಿಯಲ್ಲಿಯೆ ನಮ್ಮ ಸಾರ್ವಜನಿಕ ಜೀವನದ ಒಂದು ಕಲಂಕ ಅಳಿಸಿಹೋಗುವುದೆಂದು ನಿರ್ಭಯವಾಗಿ ಹೇಳಬಹುದು.

ಗಾಂಧೀ ಸೇವಾಸಂಘದ ನಾಲ್ಕನೆಯ ಅಧಿವೇಶನ

ಕಳೆದ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ, ಓಡಿಸಾ ಪ್ರಾಂತ್ಯದ ದೇಲಾಂಗ ತಾಲೂಕಿನ 'ಬಾರಬೋಯಿಮ' ಎಂಬ ಹಳ್ಳಿಯಲ್ಲಿ ಗಾಂಧೀ ಸೇವಾಸಂಘದ ನಾಲ್ಕನೆಯ ಸಮ್ಮೇಲನವು ಸೇರಿದ್ದಿತು. ಕಳೆದವರ್ಷದ ಮೂರನೆಯ ಸಮ್ಮೇಲನವು ನಮ್ಮ ನಾಡಿನ 'ಹುದಲಿ' ಎಂಬ ಹಳ್ಳಿಯಲ್ಲಿಯೇ ಯಶಸ್ವಿಯಾಗಿ ಜರುಗಿದುದನ್ನು ಕನ್ನಡಿಗರಾರೂ ಮರೆತಿರಲಾರರು. ಹುದಲಿಯ ಸಮ್ಮೇಲನದಿಂದ ಮೊದಲು ಮಾಡಿ ಗಾಂಧೀ ಸೇವಾಸಂಘವು ಭಾರತೀಯರೆಲ್ಲರ ಲಕ್ಷ್ಯವನ್ನೂ ತನ್ನ ಕಡೆಗೆ ಸೆಳೆದುಕೊಂಡಿದೆ. ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಲದ ಹಲವು ಜನ ಸದಸ್ಯರು ಗಾಂಧೀ ಸೇವಾ ಸಂಘದಲ್ಲಿಯೂ ಸದಸ್ಯರಾಗಿ ಇರುವುದರಿಂದ, ಈ ಸಂಘದ ವಾರ್ಷಿಕ ಅಧಿವೇಶನದಲ್ಲಿ ಮನ್ನಣೆಪಡೆದ ಠರಾವುಗಳ ನೆರಳು ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಲದಲ್ಲಿ ಪಾಸಾಗುವ ಗೊತ್ತುವಳಿಗಳಮೇಲೆ ಬೀಳುತ್ತಿರುವುದೆಂಬುದು ಕಂಡುಂಡ ಮಾತಾಗಿದೆ. ಈ ಸಲದ ಬಾರಬೋಯಿಯ ಸಮ್ಮೇಲನ

ದಲ್ಲಿ ಮನ್ನಣೆಪಡೆದ ಗೊತ್ತುವಳಿಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿಯೂ ಹಣೆಯಿಕ್ಕ ಬಹುದಾದುದರಿಂದ, ಆ ಗೊತ್ತುವಳಿಗಳನ್ನು ಅಲಕ್ಷ್ಯದಿಂದ ಕಾಣುವಂತಿಲ್ಲ.

ಗಾಂಧೀ ಸೇವಾಸಂಘದ ತೀರ ಕೆಲವು ಜನ ಪ್ರಮುಖ ಸದಸ್ಯರ ಹೊರತು ಮಿಕ್ಕವರೆಲ್ಲ ಇದುವರೆಗೂ ರಾಜಕೀಯ ಚಟುವಟಿಕೆಗಳಿಂದ ಅಲಿಪ್ತರಾಗಿ ಉಳಿಯುತ್ತಿದ್ದರು. ಇನ್ನು ಮೇಲೆ ಮಾತ್ರ ಸಂಘದ ಸದಸ್ಯರೆಲ್ಲರೂ ರಾಜಕಾರ್ಯದಲ್ಲಿ ಪ್ರತ್ಯಕ್ಷವಾಗಿ ಕಾರ್ಯಮಾಡಬೇಕೆಂದು ಸಮ್ಮೇಲನದಲ್ಲಿ ಸರ್ವಸಮ್ಮತ ನಿರ್ಣಯವೊಂದು ಪಾಸಾಯಿತು. ರಾಜಕಾರ್ಯದಲ್ಲಿದ್ದರೂ ಸಂಘದ ಸದಸ್ಯರು ತಮ್ಮ ವಿಧಾಯಕ ಕಾರ್ಯಕ್ರಮವನ್ನು ನಿಲ್ಲಿಸುವಂತಿಲ್ಲ. ಈಗ ಮದರಾಸಿನ ಮುಖ್ಯಮಂತ್ರಿಗಳಾದ ಸಿ. ರಾಜಗೋಪಾಲಾಚಾರ್ಯರು ಮದ್ಯಪಾನ ಚಳವಳಿಯನ್ನು ಪುರಸ್ಕರಿಸಿ ಪ್ರಚಾರದಲ್ಲಿ ತಂದಂತೆ, ಬಹುಶಃ ಈ ನಿರ್ಣಯವು ರಾಜಗೋಪಾಲಾಚಾರ್ಯರನ್ನೆ ಆದರ್ಶವನ್ನಾಗಿ ಇಟ್ಟುಕೊಂಡಿರಬಹುದು. ಕಳೆದ ಇಲೆಕ್ಷನ್ನಿನಿಂದ ಗಾಂಧೀ ಸೇವಾಸಂಘವು ಕಲಿತ ಪಾಠದ ಪರಿಣಾಮವೇ ಈ ನಿರ್ಣಯವಿರಬಹುದಲ್ಲವೇ ?

* * * *

ಹಿಂದೂ-ಮುಸಲ್ಮಾನರ ಜಾತೀಯ ಪ್ರಶ್ನೆಯ ಚರ್ಚೆ ಈ ಸಮ್ಮೇಲನದಲ್ಲಿ ಇನ್ನೊಂದು ಮುಖ್ಯ ವಿಷಯವಾಗಿದ್ದಿತು. ಅಲಹಾಬಾದಿನಲ್ಲಿ ನಡೆದ ಹಿಂದು-ಮುಸಲ್ಮಾನ್ ದೊಂಬಿಯಿಂದ, ಗಾಂಧಿಯವರ ಮನಸ್ಸನ್ನು ತಿನ್ನುತ್ತಿದ್ದ ವಿಷಯವೆಂದರೆ ಇದೊಂದೆ ಒಂದು ಪ್ರಶ್ನೆ. ಪದ್ಧತಿಯಂತೆ ಮೊನ್ನೆಮೊನ್ನೆಯೆ ಮಹಾತ್ಮಾ ಗಾಂಧಿಯವರು 'ಹಿಂದು-ಮುಸಲ್ಮಾನರ ದೊಂಬಿಗಳನ್ನು ನಿಲ್ಲಿಸುವುದಕ್ಕಾಗಿ ಪ್ರಸಂಗ ಬಂದರೆ ಪ್ರಾಣಗಳನ್ನು ಕೊಡ ಬಲ್ಲ ಪ್ರಾಮಾಣಿಕ ಸ್ವಯಂಸೇವಕರ ದಲವೊಂದನ್ನು ನಿರ್ಮಿಸಬೇಕು!' ಎಂದು ಹರಿಜನಪತ್ರಿಕೆಯಲ್ಲಿ ಘೋಷಿಸಿದ್ದಾರೆ; ಈ ದೊಂಬಿಗಳು ತಲೆಯೆತ್ತದಂತೆಯೆ ಆಗಬೇಕಾದರೆ ಮೊದಲೆ ತಾವೇನು ಮಾಡಬೇಕೆಂಬುದರ ಯೋಜನೆಯನ್ನು ಸಿದ್ಧಗೊಳಿಸುವುದರಲ್ಲಿ ಮಹಾತ್ಮಾಜಿಯವರ ಮನಸ್ಸೀಗ ತೊಡಕಿಕೊಂಡಿದೆ. ಅವರು ತೆಗೆಯಲಿರುವ ಯೋಜನೆಯ ಮೇಲೆ ಏಟು ಹಾಕುವುದಕ್ಕಾಗಿ ಮುಸ್ಲೀಮ್ ಲೀಗಿನವರೂ ಹಿಂದೂ ಮಹಾಸಭೆಯವರೂ ಶಸ್ತ್ರಾಸ್ತ್ರಗಳನ್ನು ಸಾಣೆಹಿಡಿಸುವುದರಲ್ಲಿ ತೊಡಗಿರಬಹುದು. ಒಲವಿಂದಲೇ ಆಗಬಹುದಾದ ಕಾರ್ಯವನ್ನು ಬುದ್ಧಿಯಿಂದಲೂ ಭಾವನೆಯಿಂದಲೂ ಮಾಡಬೇಕೆಂದಿದ್ದಾರೆ ಮಹಾತ್ಮರು. ಅದರ ಸಾಧ್ಯಾಸಾಧ್ಯಗಳು ನಮ್ಮ ಕಣ್ಣೆದುರಿಗಂತೂ ಪರದೆಗಳನ್ನೆ ಇಳಿಬಿಟ್ಟಿವೆ.

* * * *

ಈ ಸಮ್ಮೇಲನದಲ್ಲಿ ಚರ್ಚಿತವಾದ ವಿಷಯಗಳಲ್ಲಿ ಮೇಲಿನದಕ್ಕಿಂತ ಮಹತ್ವದ ಪ್ರಶ್ನೆಯೊಂದೆಂದರೆ ಕೂಲಿಕಾರರ ಸಂಘಟನೆಗೆ ಸಂಬಂಧಿತವಾದುದು. ಕೂಲಿಕಾರರ ಸಂಘಟನೆಯ ಚಟುವಟಿಕೆಯಲ್ಲಿ ಮಹಾತ್ಮಾಜಿಯವರ ಅನುಯಾಯಿಗಳಾರೂ ಇದುವರೆಗೆ ಮನಸ್ಸು ಹಾಕಿರಲಿಲ್ಲ. ಇನ್ನು ಮುಂದೆ ಕೂಲಿಕಾರರ ಸಂಘಟನೆಯ ಕಾರ್ಯವನ್ನು 'ಸತ್ಯಾಗ್ರಹ' ದಾರಿಯಿಂದ ಪ್ರಾರಂಭಿಸಬೇಕೆಂದು ಈ ಸಮ್ಮೇಲನದಲ್ಲಿ ಇದೇ ಮೊದಲನೆಯ ಸಲ ನಿರ್ಣಯಿಸಲ್ಪಟ್ಟಿತು. ಆದರೆ ಇದರ ಪರಿಣಾಮವು ಸಮಾಜಸಮತಾವಾದಿಗಳ ಮೇಲೆ ಹೇಗಾಗಬಹುದೆಂಬುದನ್ನು ನೋಡಬೇಕಾಗಿದೆ. ಏಕೆಂದರೆ: ಕೂಲಿಕಾರರ ಸಂಘಟನೆಯ ಕ್ಷೇತ್ರವನ್ನು ಮೊದಲಿನಿಂದಲೂ ವ್ಯಾಪಿಸಿದವರು ಇವರು. ಈ ಸಮಾಜಸಮತಾವಾದಿಗಳಿಗೂ ಕಮ್ಯೂನಿಸ್ಟರಿಗೂ ಮಹಾತ್ಮರ ಸತ್ಯಾಗ್ರಹಮಾರ್ಗವು ಬೇಕಾಗಿಲ್ಲ. 'ಸತ್ಯ' 'ಅಹಿಂಸೆ'ಗಳಲ್ಲಿ ಅವರಿಗೆ ಎಂದಿನಿಂದಲೂ ನಂಬುಗೆಯಿಲ್ಲ. ಬಂಡವಾಳಿಗರ ತಂಡವು ಬಡವರನ್ನು ಸುಲಿದುಕೊಳ್ಳುತ್ತಿರುವುದನ್ನು ಸತ್ಯಾಗ್ರಹ ಮಾರ್ಗದಿಂದ ನಿಲ್ಲಿಸಲಿಕ್ಕಾದೀತೆಂಬುದು ಕೇವಲ ಹುಚ್ಚುತನವೆಂದು ಅವರ ಭಾವನೆ. ಸಮತಾವಾದಿಗಳ ಕಾರ್ಯದ ಕಟ್ಟಡವು ವರ್ಗಕಲಹದ ನೆಲಗಟ್ಟಿನ ಮೇಲೆಯೆ ನಿಲ್ಲಿಸಲಾಗಿದೆ. ವರ್ಗಕಲಹದ ಹೊರತು ಸಮಾಜದಲ್ಲಿಯ ವಿಷಮತೆಯು ಇಲ್ಲದಂತಾಗದೆಂದೂ, ಸಮಾಜದ ಅಧಿಕಾರವು ಪ್ರಸ್ಥಾಪಿತವಾಗಲಾರದೆಂದೂ ಅವರ ಖಂಡಿತ ಅಭಿಪ್ರಾಯ. ಸತ್ಯ, ಪ್ರೇಮ, ಅಹಿಂಸೆಗಳಿಂದ ಕೂಡಿದ ಸತ್ಯಾಗ್ರಹ ಮಾರ್ಗವು, ಹೆಮ್ಮೆಯಿಂದ ಗಡ್ಡೆಗಟ್ಟಿದ ಬಂಡವಾಳಿಗರ ಹೃದಯವನ್ನು ಎಂದೂ ಕರಗಿಸಲಾರದೆಂದು ಅವರ ಸ್ಪಷ್ಟವಾದ ತಿಳಿವಳಿಕೆ. ಕಾಂಗ್ರೆಸ್ಸು ಕೂಲಿಕಾರರ ಸಂಘಟನೆಯ ಕಾರ್ಯವನ್ನು ಕೈಕೊಂಡಿತೆಂದರೆ ಆಗ ಬೇರೆ ಬೇರೆ ಬಗೆಯ ಎರಡು ವಿಚಾರಗಳಲ್ಲಿ ತಿಕ್ಕಾಟನಡೆದು ಗೊಂದಲವುಂಟಾಗಬಹುದೆಂಬುದನ್ನು ಹೇಳಲಿಕ್ಕೆ ಯಾವ ಭವಿಷ್ಯವಾದಿಯೂ ಬೇಕಾಗಿಲ್ಲ, ಎರಡೂ ವಿಚಾರಗಳ ಗುರಿಯು ಒಂದೆ ಇದ್ದರೂ ಸಾಧನಗಳು ಬೇರೆಯಾಗಿವೆ. ದೇಶದಲ್ಲಿಯ ದಾರಿದ್ರ್ಯ, ದೀನತೆ, ಪಾರತಂತ್ರ್ಯ ಇವೆಲ್ಲ ನಷ್ಟವಾಗಬೇಕಾಗಿವೆಯೆಂಬುದನ್ನು ಎಲ್ಲರೂ ಒಪ್ಪುತ್ತಿದ್ದಾರೆ. ಆದರೆ ಹೇಗೆ ನಷ್ಟಪಡಿಸಬೇಕೆಂಬ ವಿಚಾರದ ಜಗಳದಲ್ಲಿಯೆ ವೇಳೆಗಳೆಯತೊಡಗಿದರೆ ಆ ದಾರಿದ್ರ್ಯ, ದೀನತೆ, ಪಾರತಂತ್ರ್ಯಗಳು ದಿನದಿನಕ್ಕೂ ತಮ್ಮ ಬಿಗಿತವನ್ನು ಬಲಗೊಳಿಸಬಹುದಲ್ಲ! ಅದರ ವಿಚಾರವನ್ನು ಯಾರು ಮಾಡುವರು ?

ಧರ್ಮದ ಅಭಿಮಾನ ದೇಶಾಭಿಮಾನವಾದರೆ....!

ಹಿಂದುಸ್ಥಾನಕ್ಕೆ ಬೇಗನೆ ಬಿಡುಗಡೆಯಾಗದುದಕ್ಕೆ ಕಾರಣ ಬೇರೆ ಇನ್ನಾವುದೂ ಅಲ್ಲ; ಹಿಂದೀಯರ ಬುದ್ಧಿ-ಬಲ-ದುಡ್ಡು-ಅಭಿಮಾನಗಳು ಎಲ್ಲೆಲ್ಲಿಯೂ ಹಂಚಿಹೋಗುತ್ತಲಿವೆ. ಅವುಗಳ ಎಲ್ಲ ಶಕ್ತಿಯೂ ದೇಶಕ್ಕಾಗಿ ಕೇಂದ್ರೀಕೃತವಾದರೆ ಗುರುನಿಮಿಷದವೆ ನಾವು ಸ್ವತಂತ್ರ ಭಾರತಮಾತೆಯ ಉಲ್ಲಸಿತ ಮುಖವನ್ನು ಕಾಣಬಹುದು. ಹಿಂದುಸ್ಥಾನದಲ್ಲಿ ಹುಟ್ಟಿ ಬೆಳೆದು ಹಿಂದುಸ್ಥಾನದಲ್ಲಿ ದೇಹವನ್ನಿಡುವ ಹಿಂದೀ ಮುಸಲ್ಮಾನರಿಗೆ ದೇಶಕ್ಕಿಂತ ಧರ್ಮವು ದೊಡ್ಡದಾಗಿ ಕಾಣುವುದು. ಹಿಂದುಗಳಾಗಿಯೇ ಹುಟ್ಟಿ ತಮ್ಮ ತಲೆಗೋ ತಮ್ಮ ಹಿಂದಿನ ತಲೆಗೋ ಧರ್ಮಾಂತರ ಮಾಡಿದ ಕ್ರೈಸ್ತಧರ್ಮೀಯರು ಹಿಂದುಸ್ಥಾನದ ಋಣವು ತಮ್ಮ ಮೇಲೆ ಏನೂ ಇಲ್ಲವೆಂಬಂತೆ ವರ್ತಿಸುತ್ತಿರುವರು. ಸೀಖರ ಅಭಿಮಾನ ಒಂದು

ಕಡೆಗೆ ಹರಿಯುತ್ತಿದ್ದರೆ ಬೌದ್ಧ-ಜೈನರ ಮನಸ್ಸು ಇನ್ನೊಂದು ಕಡೆಗೆ ಹರಿಯುತ್ತಿದೆ. ಆದರೆ ಸದ್ಯ ತಮ್ಮ ಎಲ್ಲ ಶಕ್ತಿಯೂ ರಾಷ್ಟ್ರೋದ್ಧಾರಕ್ಕೆ ಒಟ್ಟುಗೂಡಬೇಕಾಗಿದೆಯೆಂಬ ಮಾತನ್ನು ಬಹಳ ಜನರು ಲಕ್ಷ್ಯಕ್ಕೆ ತರಲೊಲ್ಲರು. ಬೆಂಗಳೂರಿನ ರಾಷ್ಟ್ರೀಯ ಕ್ರೈಸ್ತ ಸಮಾಜದ ಕಾರ್ಯಾಲಯದ ಪ್ರಾರಂಭೋತ್ಸವದಲ್ಲಿ ಶ್ರೀ ಜೆ. ಸ್ವಾಮಿದಾಸ ಅವರು ಆಡಿದ ಮಾತುಗಳನ್ನು, ಕೇವಲ ಧರ್ಮಾಭಿಮಾನಿಗಳೆಲ್ಲರೂ ಅವಶ್ಯವಾಗಿ ಮನದೆದುರು ಇರಿಸಿಕೊಂಡು ನಡೆಯುವುದರಿಂದ ನಾಡಿಗೆ ಎಷ್ಟೋ ಹಿತವಾದೀತು. ಅವರು ಹೇಳಿದುದರಲ್ಲಿ ಮುಖ್ಯವಾದ ಮಾತು ಇಷ್ಟು:-

" ಬಿಳಿಯ ಮಿಶನರಿಗಳ ತಂತ್ರ ತಗಲಾಟಗಳನ್ನೂ ಅವರ ನಡೆ-ನುಡಿ- ಕೆಲಸಗಳನ್ನೂ ನಾನು ಕಳೆದ ೨೫ ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಪರಿಶೋಧಿಸುತ್ತ ಬಂದಿದ್ದೇನೆ. ಈ ದೀರ್ಘ ಕಾಲದ ನನ್ನ ಅನುಭವವು ಸಾವಿರಾರುಜನ ನನ್ನ ಬಂಧುಗಳಿಗೆ ಬೆಳಕನ್ನು ಕೊಡಲೆಂದು ನಾನು ಹಾರಯಿಸುತ್ತೇನೆ. ಈ ಬಿಳಿಯ ಮಿಶನರಿಗಳಿಂದ ಖಂಡಿತ ನಮ್ಮ ನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಪ್ರಗತಿಗೆ ಬಲವಾದ ಆಘಾತವುಂಟಾಗಿದೆ. ವಿಧರ್ಮಿಯರಿಂದಲೂ ಮುಖ್ಯವಾಗಿ ವಿದೇಶೀಯ ಮಿಶನರಿಗಳಿಂದಲೂ ಉಂಟಾಗುತ್ತಿರುವ ಹಾವಳಿಗಳನ್ನು ಮೂಲೋತ್ಪಾಟನ ಮಾಡುವ ಪರಮ ಪವಿತ್ರಕಾರ್ಯದಲ್ಲಿ ನಾನು ನನ್ನ ಸರ್ವಸ್ವವನ್ನೂ ಸಮರ್ಪಣೆ ಮಾಡಿರುತ್ತೇನೆ. ಜನರ ಬೆಂಬಲ ಹೆಚ್ಚು ಹೆಚ್ಚಾಗಿ ದೊರೆತಂತೆ, ಹೆಚ್ಚು ಹೆಚ್ಚಾಗಿ ದುಡಿಯಬೇಕೆಂದು ನನ್ನ ಅಪೇಕ್ಷೆ.

" ಬಿಳಿಯ ಮಿಶನರಿಗಳು ಮತ ಮತ್ತು ಧರ್ಮಪ್ರಚಾರಗಳ ಮರೆಯಲ್ಲಿ ಹಿಂದೂಧರ್ಮವನ್ನು ನಾಶಮಾಡಲಿಕ್ಕೂ, ಪರಮ ಪವಿತ್ರವಾದ ರಾಷ್ಟ್ರೀಯತ್ವವೆಂಬ ತೇಜಸ್ಸನ್ನು ನಂದಿಸುವುದಕ್ಕೂ, ನಮ್ಮ ಸಂಸ್ಕೃತಿಯನ್ನು ಮಣ್ಣುಗೂಡಿಸಿ ಗೊಬ್ಬರವನ್ನಾಗಿ ಮಾಡಿ ಅಲ್ಲಿ ತಮ್ಮ ಸಂಸ್ಕೃತಿಯ ಬಳ್ಳಿಯನ್ನು ಬೆಳೆಯಿಸಲಿಕ್ಕೂ ಅಖಂಡವಾಗಿ ಪ್ರಯತ್ನಮಾಡುತ್ತ ಬಂದಿದ್ದಾರೆ. ಇದಕ್ಕಾಗಿ ನಮ್ಮ ಮೈಸೂರು ದೇಶವೊಂದರಲ್ಲಿಯೆ ನಾಲ್ಕು ಆಸ್ಪತ್ರೆ, ಅನಾಥಾಲಯ, ಮುದ್ರಣಾಲಯ ಮೊದಲಾದ ಅನೇಕ ಸಂಸ್ಥೆಗಳನ್ನು ಏರ್ಪಡಿಸಿದ್ದಾರೆ.

* * *

"ಈ ರಾಷ್ಟ್ರೀಯ ಜೀವನವು ಮುಂದುವರಿದಂತೆಲ್ಲ ಧಾರ್ಮಿಕ ಜೀವನವೂ ಮುಂದುವರಿಯುತ್ತಿರಬೇಕು. ಇನ್ನುಮೇಲೆ ಮಿಶನರಿಗಳ ಯಾವ ಹೊಸ ಸಂಸ್ಥೆಗಳೂ ನಮ್ಮ ನಾಡಿನ ಯಾವ ಮೂಲೆಯಲ್ಲಿಯೂ ತಲೆಯೆತ್ತದಂತೆ ನಮ್ಮ ನಾಡಿನ ಮುಂದಾಳುಗಳೂ ಸರಕಾರವೂ ತಕ್ಕ ಕಾರ್ಯಕ್ರಮಗಳನ್ನೂ ಕಠರಾವುಗಳನ್ನೂ ಹಾಕಬೇಕು. ಬಿಳಿಯ ಮಿಶನರಿಗಳು ಬಾಡಿಗೆಯಾಳುಗಾರರ ಗುಂಪಿಗೆ ಸೇರಿದವರು. ಧರ್ಮಪ್ರಚಾರವನ್ನು ಮಾಡುವ ನೆಪದಿಂದ ಭರತಖಂಡದಲ್ಲಿ ಅನೇಕ ಕೋಟಿಗಳ ಹಣವನ್ನು ಅಧೀನದಲ್ಲಿ ಇರಿಸಿಕೊಂಡಿರುವರು. ಇನ್ನುಮುಂದೆ ಸುವ್ಯವಸ್ಥಿತ ಸಂಸ್ಥೆಯಿಂದ-ಸುಶಿಕ್ಷಣದ ಮೂಲಕ ದಕ್ಷರಾದ ಯುವಕರನ್ನು ಅನುಗೊಳಿಸಿ, ತನ್ಮೂಲಕ ಮಿಶನರಿಗಳ ಕಾರ್ಯಕ್ರಮಗಳನ್ನು ನಿರೋಧಿಸಬೇಕು. ಯಾವ ದೇಶದಲ್ಲಿ ಮಿಶನರಿಗಳ ಪ್ರಾಬಲ್ಯವು ಹೆಚ್ಚಾಗುತ್ತಿರುವುದೋ ಆ ದೇಶಗಳಲ್ಲಿಂದು ಅಶಾಂತಿಯು ತಾಂಡವವಾಡುತ್ತಿದೆ. ಚೀನ್, ಜಪಾನ್, ಜರ್ಮನಿ, ಇಟಲಿ, ಫ್ರಾನ್ಸ್ ಇವೆಲ್ಲ ರಾಷ್ಟ್ರಗಳಲ್ಲಿಯೂ ಮಿಶನರಿಗಳ ಕೈಚಳಕವು ಕೆಲಸಮಾಡುತ್ತಿದೆ.

* * *

"ಹಿಂದುಸ್ಥಾನಕ್ಕೆ ಸಂಬಂಧಿಸಿದ ಯಾವುದೇ ಒಂದು ಸುಧಾರಣಾ ಸಮಿತಿಯಲ್ಲಿ ಬಿಳಿಯ ಪಾದ್ರಿಗಳಿರುವುದೆಂದರೆ ಅದು ನಮ್ಮ ರಾಷ್ಟ್ರಕ್ಕೇ ಅಗೌರವವನ್ನು ತರುವಂತಹದು; ಅಲ್ಲದೆ ಅನುಚಿತವೂ ಅಹುದು. ಉದಾಹರಣೆಗಾಗಿ; ಸಂಯುಕ್ತ ರಾಜ್ಯಾಂಗ ರಚನೆಯ ಸಮಿತಿಯಲ್ಲಿ ರೆ. ಜಿ. ಡಬ್ಲ್ಯು ಸಾಡೆಯವರು ಏತಕ್ಕಿರಬೇಕು? ಮೈಸೂರಿನ ರಾಜಕೀಯ ಸುಧಾರಣಾ ಸಮಿತಿಯಲ್ಲಿ ರೆ. ಡಬ್ಲ್ಯು. ಇ. ಟಾಮ್ಲಿನ್‌ಸನ್ ಅವರು ಏತಕ್ಕಿರಬೇಕು? ನಾವು ಭಾರತೀಯರು, ಅವರು ವಿದೇಶೀಯರು. ನಾವು ಕಪ್ಪು ಜನರು, ಅವರು ಬಿಳಿಯ ಜನರು. ನಮ್ಮ ಭಾಷೆ, ಸಮಾಜಗಳೆ ಬೇರೆ; ಅವರ ಭಾಷೆ-ಸಮಾಜಗಳೆ ಬೇರೆ; ನಮ್ಮ ಗುಣಕರ್ಮಗಳಿಗೂ ಅವರ

೭ನೆಯ ಪುಟದಿಂದ ಮುಂದುವರಿದುದು.

ಮುಂದೇನು ?

ಹರಿಪುರ ಕಾಂಗ್ರೆಸ್ಸಿನ ನಿರ್ಣಯವು ಸ್ಪಷ್ಟವಿದೆ. ಸಂಯುಕ್ತ ಘಟನೆಯನ್ನು ನಡೆಬಡೆಯುವ ವೇಳೆಯೇ ಬರಲಿಕ್ಕಿಲ್ಲ. ಒಂದು ವೇಳೆ ಬಂದರೆ ರಾಷ್ಟ್ರಪತಿಗಳಾದ ಬಾಬೂ ಸುಭಾಸರು ಈ ಬರೆಹದ ತಲೆಕಟ್ಟಿನಲ್ಲಿ ಹೇಳಿದಂತೆ, ಸಾರ್ವತ್ರಿಕ ಕಾಯದೇಭಂಗದ ಚಳವಳಿಯನ್ನು ಕೈಕೊಳ್ಳಲಾದೀತು ಮತ್ತು ಆ ಚಳವಳಿಯಲ್ಲಿ ಸಂಸ್ಥಾನದ ಪ್ರಜರಿಗೂ ಭಾಗವಹಿಸಿಕೊಳ್ಳಬೇಕಾದೀತು. ಇಂದಿಲ್ಲ ನಾಳೆ ಹಿಂದುಸ್ಥಾನದಲ್ಲಿ ಸಂಪೂರ್ಣ ಸ್ವಾತಂತ್ರ್ಯವುಳ್ಳ ರಾಜ್ಯ ಘಟನೆಯು ಜಾರಿಗೆ ಬಂದೇತೀರುವದೆಂಬ ದೃಢನಿಶ್ಚಯದಿಂದ ಭಾರತೀಯರೆಲ್ಲರೂ ಯತ್ನಿಸಲಿಕ್ಕೆಬೇಕು. ಈ ನಿಚ್ಚಳವಾದ ಧ್ಯೇಯವನ್ನು ಎಲ್ಲ ಪಕ್ಷಪಂಗಡದವರು ಎಲ್ಲ ಜಾತಿಪಂಥದವರು ಸರಿಯಾಗಿ ತಮ್ಮೆದುರಿಗೆ ಇಟ್ಟುಕೊಂಡರೆ ಅದು ಕೈಸೇರುವದು ತಡವಲ್ಲ. ಈ ವಿಶಾಲವಾದ ಭರತಖಂಡದ ಏಕೀಕೃತ ಸಾಮರ್ಥ್ಯದ ಎದುರಿಗೆ ಯಾವದೇ ಸಾಮ್ರಾಜ್ಯಶಾಹಿಯು ನಡುಗುವದು. ಆದರೆ ನಾವೆಲ್ಲರೂ ಒಂದು, ನಮ್ಮೆಲ್ಲರ ಹಿತಾಹಿತಗಳೂ ಒಂದು; ಎಂಬ ಭಾವನೆಯಿಂದ ಪ್ರೇರಿತರಾಗಿ, ಅವಶ್ಯವಿರುವ ತ್ಯಾಗವನ್ನು ಮಾಡಲು ಸಿದ್ಧರಾಗಿ ಮುಂದೆ ಸಾಗಿದರೆ ಕಾಂಗ್ರೆಸ್ಸಿನ ಬೇಡಿಕೆಯಂತೆ ಸಂಪೂರ್ಣ ಸ್ವಾತಂತ್ರ್ಯವು ಬೇಗನೆ ಕೈಗೂಡುವದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಗುಣಕರ್ಮಗಳಿಗೂ ಯಾವ ಬಗೆಯ ಸಂಬಂಧವೂ ಇರುವುದಿಲ್ಲ. ಸುಧಾರಣೆ ಬೇಕೆಂದು ಬೇಡಿದವರಾರು? ಅಲ್ಲದೆ ರಾಜಕೀಯ ಸುಧಾರಣೆಯ ಕಾರ್ಯದಲ್ಲಿ ವೈದಿಕರದೇನು ಕೆಲಸ? ಪಾದ್ರಿಗಳು ಲೌಕಿಕರೇನು? ಪಾದ್ರಿಗಳನ್ನು ರಾಜಕೀಯ ಸುಧಾರಣಾ ಸಮಿತಿಗಳ ಸದಸ್ಯರನ್ನಾಗಿ ಸೇರಿಸುವ ಪಕ್ಷಕ್ಕೆ, ಮಠಾಧಿಪತಿಗಳು ಪಾದ್ರಿಗಳಿಗಿಂತ ಯಾವ ವಿಷಯದಲ್ಲಿ ಕಡಿಮೆಯಾಗಿದ್ದಾರೆ?"

* * *

ಕೊನೆಯದಾಗಿ ಶ್ರೀ. ಜೆ. ಸ್ವಾಮಿದಾಸರು ಹೇಳಿದುದು ಹೀಗೆ "ದೇಶೀಯ ಕ್ರೈಸ್ತರು ಬಿಳಿಯ ಮಿಶನರಿಗಳ ಹಿಡಿತದಿಂದ ಬಿಡಿಸಿಕೊಳ್ಳಬೇಕು. ಭಾರತೀಯ ಬಾಂಧವರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಬೇಕು. ಪರಮತ ದೂಷಣೆಯ ಕೆಟ್ಟ ಪದ್ಧತಿಗಳನ್ನು ವರ್ಜಿಸಬೇಕು. ಮತಾಂತರದ ಭ್ರಾಂತಿಯನ್ನು ಬಿಡಬೇಕು. ಮಾಂಸಾಹಾರ ಮದ್ಯಪಾನಗಳನ್ನು ಬಿಟ್ಟು ದೇವತಾರಾಧನೆಯಲ್ಲಿಯೂ ಮತಾಚಾರಗಳಲ್ಲಿಯೂ ತುಂಬಿಕೊಂಡಿದ್ದ ಪಾಶ್ಚಾತ್ಯರ ಪದ್ಧತಿಗಳನ್ನು ನಿಲ್ಲಿಸಬೇಕು. ರಾಷ್ಟ್ರಕ್ಕೆ ತಮ್ಮಿಂದಾದಷ್ಟು ಹೆಚ್ಚಿನ ಸೇವೆಯನ್ನು ಸಲ್ಲಿಸಬೇಕು."

ಭಾರತೀಯ ಕ್ರೈಸ್ತ ಬಾಂಧವರೆಲ್ಲರೂ ಅನುಭವಿಕರಾದ ಶ್ರೀ. ಜೆ. ಸ್ವಾಮಿದಾಸರ ಮಾತುಗಳನ್ನು ಕುರಿತು ವಿಚಾರವನ್ನಾದರೂ ಮಾಡುವರೇ?

ಏಕೀಕರಣ

ಅನೇಕ ವರುಷಗಳಿಂದ ಕುದಿಯುತ್ತಿದ್ದ ಏಕೀಕರಣದ ಚಳವಳವು ಇಂದು ಕೆನೆಗಟ್ಟುತ್ತಲಿದೆ— ಏನು ಕೊನೆಗಟ್ಟುತ್ತಲಿದೆಯೊ?— ಬ್ರಿಟಿಶ ಕರ್ನಾಟಕದ ಭಾಗವು ಮುಂಬಯಿ ಮತ್ತು ಮದ್ರಾಸ ಇಲಾಖೆಗಳಲ್ಲಿದ್ದು, ಈ ಎರಡೂ ಪ್ರಾಂತೀಯ ಸರಕಾರದಲ್ಲಿ ಕಾಂಗ್ರೆಸದ ಮಂತ್ರಿಮಂಡಲಗಳಿವೆ. ಈ ಸಂಗತಿಯು ಅತ್ಯಂತ ಮಹತ್ವದ್ದಾಗಿದೆ. ಇಂದಿಗೆ ಹದಿನೆಂಟು ವರ್ಷಗಳ ಮುಂಚೆ ಕಾಂಗ್ರೆಸ್ಸು ಹೂಡಿದ ಸ್ವಾತಂತ್ರ್ಯ ವಾತಾವರಣದಲ್ಲಿ ಏಕೀಕರಣದ ಬೀಜವು ಮೊಳೆಯಿತು. ಕಾಂಗ್ರೆಸಿನ ಘಟನೆಯು ಭಾಷಾನುಗುಣ ಪ್ರಾಂತರಚನೆಯದಾಗಿ ಕರ್ನಾಟಕದ ಎಲ್ಲ ಭಾಗಗಳು ರಾಷ್ಟ್ರೀಯ ಚಳವಳಿಗಾಗಿ ಒಂದುಗೂಡಿದುವು. ಇದರಿಂದ ಬೇರೆ ಬೇರೆ ಕಡೆಯ ಕನ್ನಡಿಗರಲ್ಲಿ ಪರಸ್ಪರ ಪರಿಚಯವೂ ಸೌಹಾರ್ದವೂ ಬೆಳೆದುವು. ಇದರ ಫಲವಾಗಿಯೇ ಇಂದು ಏಕೀಕರಣದ ಬೇಡಿಕೆಯು ಎಲ್ಲ ಕನ್ನಡ ಜಿಲ್ಲೆಗಳ, ಕರ್ನಾಟಕದ ಎಲ್ಲ ಪಕ್ಷಗಳ ಸಂಪೂರ್ಣ ಸಮ್ಮತಿಯಮೇಲೆ ಸ್ಥಿರವಾಗಿ ನಿಂತಿದೆ. ಜನತೆಯ ಬೆಂಬಲವು ಇಷ್ಟು ಸ್ಥಿರವಾಗಿ, ಸರ್ವವ್ಯಾಪಕವಾಗಿ ಇದ್ದುದರಿಂದ ಲೋಕನಿಯುಕ್ತರಾದ ಶಾಸನಸಭೆಯ ಸದಸ್ಯರಾದ ಶ್ರೀಮಾನ್ ಜೋಗ ವಿಶ್ವನಾಥರಾಯರು, ಮುಂಬಯಿ ಪ್ರಾಂತೀಯ ಸರಕಾರವು ಏಕೀಕರಣವನ್ನು ಮೇಲಧಿಕಾರಿಗಳು ಕಾರ್ಯರೂಪದಲ್ಲಿ ತರುವಂತೆ ಮಾಡಬೇಕೆಂಬ ಗೊತ್ತುವಳಿಯನ್ನು ಮಂಡಿಸಿದ್ದರು.

ಕಾಂಗ್ರೆಸ್ಸು ತನ್ನ ಘಟನೆಯಲ್ಲಿ ಕರ್ನಾಟಕವನ್ನು ಒಂದುಗೂಡಿಸಿ ಇಪ್ಪತ್ತು ವರುಷಗಳಾದುವೆಂದೂ, ಭಾಷಾನುಗುಣ ಪ್ರಾಂತರಚನೆಯ ತತ್ತ್ವವು ಕಾಂಗ್ರೆಸಿಗೆ ಮಾನ್ಯವಿದೆ ಎಂದೂ ಲಕ್ಷ್ಯದಲ್ಲಿಟ್ಟುಕೊಂಡರೆ ಏಕೀಕರಣವು ಕೂಡಲೇ ಸಾಧಿಸಬಹುದೇನೊ ಎನ್ನುವಂತಿದೆ. ಆದರೇನು? ಅಧಿಕಾರಪದದಲ್ಲಿದ್ದ ಕಾಂಗ್ರೆಸ್ಸು ಮುಂಚಿನ ಕಾಂಗ್ರೆಸ್ಸು ಅಲ್ಲ ಎಂದು ಹೇಳಬೇಕಾಗಿದೆ. ಈ ಮಾತಿನಲ್ಲಿ ಖೇದವಿಲ್ಲ, ಆಶ್ಚರ್ಯವಿಲ್ಲ; ಮುಂಚೆ ಯಾವ ಕಾರ್ಯದ ಹೊಣೆಗಾರಿಕೆಯೂ ಲಕ್ಷ್ಯದಲ್ಲಿದ್ದಿರಲಿಲ್ಲ, ಈಗ ತಾನೇ ಸರಕಾರವೆನಿಸುವುದರಿಂದ ತೂಗಿ ಮಾತನಾಡುವ ಪ್ರಸಂಗ ಕಾಂಗ್ರೆಸಿಗೆ ಬಂದಿದೆ. ಏಕೀಕರಣಕ್ಕೆ ಅವಸರವಿಲ್ಲ ಎಂದು ಕೆಲರು ಹೇಳುವರಂತೆ! ಮನೆಯನ್ನು ಕಟ್ಟುವಾಗ ತಳಹದಿಯನ್ನು ಹಾಕುವ ಅವಸರವಿಲ್ಲ.. ಎಂಬ ಮಾತನ್ನು ನಾವು ನಂಬೋಣವೆ? ಕರ್ನಾಟಕದಲ್ಲಿ ಯಾವ ಚಳವಳವು ನಡೆಯಬೇಕಾದರೂ ಏಕೀಕರಣವಿಲ್ಲದೆ ಸಾಕಷ್ಟು ಶಕ್ತಿಯಾಗಲಿ ಪ್ರೋತ್ಸಾಹವಾಗಲಿ ಸ್ಥಿರತೆಯಾಗಲಿ ದೊರೆಯುವುದು ಶಕ್ಯವಿಲ್ಲ. ಶಿಕ್ಷಣದ ಪ್ರಸಾರಕ್ಕೂ ಏಕೀಕರಣಕ್ಕೂ ನಿಕಟವಾದ ಸಂಬಂಧವಿದೆ. ಆದುದರಿಂದ ಏಕೀಕರಣಕ್ಕೆ ಅವಸರವಿಲ್ಲ ಎಂದರೆ ಭಾರತದ ಪ್ರಗತಿಗೆ ಕರ್ನಾಟಕದ ಸಹಕಾರವೇ ಅಗತ್ಯವಿಲ್ಲ ಎಂದಂತಾಯಿತೆಂದು ಈ ಕೂರ್ಮಗತಿವಾದಿಗಳು— ಲಕ್ಷ್ಯದಲ್ಲಿಡಲಿ.

ಇದಲ್ಲದೆ ಇಂದಿನ ರಾಜನೀತಿಯ ಮಹತ್ತ್ವದ ತತ್ತ್ವವೊಂದು ಏಕೀಕರಣದ ಪ್ರಶ್ನೆಯಲ್ಲಿ ಅಡಕವಾಗಿದೆ. (No taxation without representation)— ಕರವನ್ನು ಕೊಡುವ ಕೈಗೆ ಫಲವನ್ನು ಉಣ್ಣುವ ಅನುಕೂಲತೆ ಬೇಕು. ಇಂದು ಕನ್ನಡಿಗರು ಕರವನ್ನು ಕೊಡುತ್ತಾರೆ. ಹಾಗೆ ಕೊಟ್ಟ ಹಣದ ಪ್ರತಿಫಲ ಕನ್ನಡಿಗರಿಗಾಗಲಿ, ಕರ್ನಾಟಕಕ್ಕಾಗಲಿ ಎಷ್ಟರಮಟ್ಟಿಗೆ ದೊರೆತಿದೆ? ಬೇರೆ ಪ್ರಾಂತೀಯರಿಗಾಗಿ ಅಸೂಯೆ ನಮಗಿಲ್ಲ; ನಮ್ಮದಕ್ಕೆ ಮಾತ್ರ ಅಧಿಕಾರ ನಮಗಿರಬೇಕು. ಶಿಕ್ಷಣವು ಕರ್ನಾಟಕದಲ್ಲಿ ಬಹಳೇ ಕೆಳಮಟ್ಟಲಿಗಿದೆ; ಬರಗಾಲದ ಧರ್ಮಸಾಲೆಯಂತಿದ್ದ ನಮ್ಮ ಅನೇಕ ಜಿಲ್ಲೆಗಳಲ್ಲಿ ನಮ್ಮನ್ನು ಅಣಕಿಸುವಂತೆ ನದಿಗಳು ಮೈಯುಬ್ಬಿಸಿ ಸಾಗುತ್ತಲಿವೆ, ಅವುಗಳ ಉಪಯೋಗವನ್ನು ಮಾಡಿಕೊಂಡಿಲ್ಲ; ಕನ್ಯಾಗತಕ್ಕೊಮ್ಮೆ ಭಾವಿಕರನ್ನು ಪೀಡಿಸುವ ಬ್ರಾಹ್ಮಣರಂತೆ ವರಿಷ್ಠಾಧಿಕಾರಿಗಳು ಬಂದು ಅರ್ಥವಾಗದ ಮಂತ್ರಗಳನ್ನು ನಿರಿ ಹೋಗುತ್ತಾರೆ. ಸಾರ್ವಜನಿಕ ಕೆಲಸಕ್ಕೆ ಜನರು ತಾವಾಗಿಯೇ ಮುಂದಾಗಬೇಕೇನೊ ನಿಜ. ಆದರೂ ಸರಕಾರವೆಂಬುದಕ್ಕೆ ಅಧಿಕಾರದಂತೆ ಕರ್ತವ್ಯವಾದರೂ ಇರುವುದಲ್ಲವೆ? (ಏನು ಕೇವಲ 'ಕರ'-ತನ್ವವೆ ಇದೆಯೊ?) ಹಳ್ಳಿಗಳಿಗಾಗಿ, ರೈಲುದಾರಿಯ ಸವಲತ್ತಿಗಾಗಿ, ಜನರ ಆರೋಗ್ಯ- ಶಿಕ್ಷಣಕ್ಕಾಗಿ ನಮ್ಮ ಹಣದ ಅಲ್ಪಾಂಶದಿಂದಾದರೂ ಪ್ರೋತ್ಸಾಹಿಸಬೇಕಲ್ಲ? ಸರಕಾರವನ್ನು ಬತ್ತಾಯಪಡಿಸಬೇಕೆಂದರೆ ನಾವು ದ್ರೌಪದಿಯ ಗಂಡಂದಿರಂತೆ ಐದು ಸರಕಾರಗಳ ಅಧೀನರಾಗಿದ್ದೇವೆ. ಎಲ್ಲ ಗಂಡಂದಿರನ್ನು ಏಕಕಾಲಕ್ಕೆ ಮನವೊಲಿಸದ ಹೊರತು ನಮ್ಮ ಕಾರ್ಯವೆ ಸಾಧಿಸುವಂತಿಲ್ಲ.

ಇನ್ನೊಂದು ಕಾರಣವು ಈಗ ನಮಗೆ ಅಡ್ಡಬರುತ್ತಿದೆಯಂತೆ; ಆರ್ಥಿಕ ದೃಷ್ಟಿಯಿಂದ ಕರ್ನಾಟಕವು ಪ್ರಾಂತವಾದಲ್ಲಿ ಸಮರ್ಥ

ಹೋಗುವುದಿಲ್ಲವಂತೆ ! ಆರ್ಥಿಕ ವಿಷಯವು ತಜ್ಞರ ವಿಚಾರವಾಗಿದೆ. ತಜ್ಞರ ಸಮಿತಿಯನ್ನು ಏರ್ಪಡಿಸುವೆನೆಂದು ಹೇಳುವಷ್ಟು ಕೂಡ ನಮ್ಮ ರಾಷ್ಟ್ರೀಯ ಸರಕಾರವು ಉದಾರ ಮನಸ್ಸನ್ನು ತೋರಿಸಲಿಕ್ಕಿಲ್ಲವೆ ? ಇಲ್ಲವೆ ನಮ್ಮಲ್ಲಿ ಚಳವಳಿವನ್ನು ಹೂಡುವ, ನಡೆಸುವ ಹಟವು ತೋರದವರೆಗೆ– ನಮ್ಮವರದೆ ಆಗಲಿ, ಇನ್ನೊಬ್ಬರದೆ ಆಗಲಿ– ಯಾವ ಸರಕಾರವೂ ನಮಗೆ ಸಹಾನುಭೂತಿಯನ್ನು ತೋರಿಸುವುದಿಲ್ಲೆಂದು ಹೇಳೋಣವೆ ?

* * *

ಗೊತ್ತುವಳಿಯೊ 'ಗತ್ತು'ವಳಿಯೊ ?

ಈ ಸಲ ಕನ್ನಡಿಗರ ಚಳವಳಿಕ್ಕೆ ಕೆಲಮಟ್ಟಿಗೆ ಯಶಸ್ಸು ದೊರೆಯಿತೆಂದು ಹೇಳುವಂತಹ ಒಂದೆರಡು ಸಂದರ್ಭಗಳು ಇಷ್ಟರಲ್ಲಿಯೆ ಜರುಗಿದುವು. ಮದರಾಸ ಮತ್ತು ಮುಂಬಯಿ ಶಾಸನ ಸಭೆಗಳಲ್ಲಿ ಏಕೀಕರಣದ ಗೊತ್ತುವಳಿಯು ಸ್ವೀಕೃತವಾಯಿತಲ್ಲದೆ ಅಲ್ಲಿಯ ಕಾಂಗ್ರೆಸ ಮಂತ್ರಿಮಂಡಲಗಳಿಂದ ಸಮರ್ಥಿತವೂ ಆಯಿತೆಂದು ಹೇಳಬಹುದು. ಈ ಸಂಗತಿಯಿಂದ ಆನಂದವಾಗದೆ ಇದ್ದ ಕನ್ನಡಿಗನಿಲ್ಲ; ಸಂತೋಷಸನ್ನಿಪಾತವಾದ ಕನ್ನಡಿಗರೂ ಅಲ್ಲಲ್ಲಿ ಇದ್ದಾರೆ. ಆಯಾ ಮಂತ್ರಿಮಂಡಲಗಳನ್ನು ಅಭಿನಂದಿಸಿದ್ದಾರೆ. ಯಾಕೆ? ಭಾಷಾನ್ವಯ ಪ್ರಾಂತರಚನೆಯು ಕಾಂಗ್ರೆಸಿನ ತತ್ತ್ವವಾಗಿರುವಾಗ ಕಾಂಗ್ರೆಸ ಮಂತ್ರಿಮಂಡಲದವರು ಅದನ್ನು ಆಡಳಿತದಲ್ಲಿ ತರಬೇಕೆಂಬ ಸವಿನಯ ಪ್ರಾರ್ಥನೆಯ ಗೊತ್ತುವಳಿಯನ್ನು ಸ್ವೀಕಾರ ಮಾಡಿ ತಮ್ಮ ಕರ್ತವ್ಯವನ್ನು ನೀಗಿಸಲಿಲ್ಲವೇ ? ಕರ್ತವ್ಯವನ್ನೆ ಮಾಡಿದರೆ ಅಭಿನಂದಿಸಬೇಕಾಗುವ ಪರಿಸ್ಥಿತಿ ಇದೆಯೆ ನಮ್ಮ ಆಡಳಿತದಲ್ಲಿ ? ಕಾಂಗ್ರೆಸ ಮಂತ್ರಿಮಂಡಲದವರು ಕಾಂಗ್ರೆಸೇತರ ಸಭಾಸದರ ಮನ ಒಲಿಸಿದ್ದರೆ ಆ ಮಾತೇ ಬೇರೆ. ಇಲ್ಲವೆ, ಕಾಂಗ್ರೆಸ ಮಂತ್ರಿಮಂಡಲದವರು ತಮ್ಮ ವತಿಯಿಂದಲೆ ಇಂತಹ ಗೊತ್ತುವಳಿಯನ್ನು ಮಂಡಿಸಿದ್ದರೆ ಅದಾದರೂ ಅಭಿನಂದನೀಯವೆನಿಸುತ್ತಿದ್ದಿತು.

ಸದ್ಯದ ಗೊತ್ತುವಳಿಗಳನ್ನಾಗಲಿ ಅವುಗಳ ವಿಷಯವಾಗಿ ಮಂತ್ರಿಗಳು ಮಾಡಿದ ಭಾಷಣಗಳನ್ನಾಗಲಿ ನೋಡಿದರೆ ಅಭಿನಂದನೆಗೆ ತಕ್ಕಷ್ಟು ಆಸ್ಪದವಿಲ್ಲವೆಂದೇ ಹೇಳಬಹುದು. ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ. ರಾಜಗೋಪಾಲಾಚಾರಿಯವರಿಗೆ ಕರ್ನಾಟಕ ಏಕೀಕರಣದ ಅಗತ್ಯವು ಸಯುಕ್ತಿಕವಾಗಿ ಸಿದ್ಧವಾಗಿಲ್ಲ ಎಂದು ಅಭಿಪ್ರಾಯವಾದಂತಿದೆ. ಅವರು ತಮ್ಮ ಭಾಷಣದಲ್ಲಿ ಆಂಧ್ರರನ್ನೂ ಆಂಧ್ರ ಪ್ರಾಂತರಚನೆಯನ್ನೂ ಇಷ್ಟೇ ಕುರಿತು ಹೇಳಿದ್ದಾರೆ. 'ಆಂಧ್ರಪ್ರಾಂತವು ಎಲ್ಲ ದೃಷ್ಟಿಗಳಿಂದ ಸಯುಕ್ತಿಕವೂ ಸ್ವಾವಲಂಬಿಯೂ ಆದುದರಿಂದ ಇದಕ್ಕೆ ನನ್ನ ಸಂಪೂರ್ಣ ಅನುಮತಿ ಇದೆ; ಇಷ್ಟೆ ಅಲ್ಲ, ಇನ್ನು ಬೇರೆ ಕೆಲವು ಪ್ರಾಂತಗಳು ಸ್ವಾವಲಂಬಿಯಾಗಲು ಇನ್ನೂ ಕೆಲವುಕಾಲ ಕಳೆಯಬೇಕಾಗುವುದು. ಇಲ್ಲಿಯವರೆಗೆ ಆಂಧ್ರಪ್ರಾಂತರಚನೆಯನ್ನು ತಡೆಯುವುದಗತ್ಯವಿಲ್ಲೆಂದೂ ನನ್ನ ಅಭಿಪ್ರಾಯ' ಎಂದಿದ್ದಾರೆ. ಮಂತ್ರಿಗಳ ಭಾಷೆ 'ಮಾಂತ್ರಿಕ' ಭಾಷೆ. ಅದೇ ಮಾತನ್ನು ನಮ್ಮ ಭಾಷೆಯಲ್ಲಿ ಹೇಳುವುದಾದರೆ 'ಕರ್ನಾಟಕಕ್ಕೆ ಏಕೀಕರಣವು ಸದ್ಯಕ್ಕೆ ಅಗತ್ಯ ಮತ್ತು ಸಯುಕ್ತಿಕ ಎಂದು ತೋರುವುದಿಲ್ಲ; ಆರ್ಥಿಕ–ಸಾಂಸ್ಕೃತಿಕ– ರಾಜಕೀಯ ಮೊದಲಾದ ದೃಷ್ಟಿಗಳಿಂದ ಆಂಧ್ರ ಪ್ರಾಂತರಚನೆಯೊಂದೇ ಈಗ ತಕ್ಕುದಾಗಿದೆ. ಆದುದರಿಂದ ಅದನ್ನಷ್ಟೆ ನಾವು ಮಾಡೋಣ, ಎಂದು ಶ್ರೀ. ರಾಜಗೋಪಾಲಾಚಾರಿಯವರ ಅಭಿಪ್ರಾಯ.

ಮುಂಬಯಿಯ ಮುಖ್ಯ ಮಂತ್ರಿಗಳಾದ ಶ್ರೀ. ಖೇರರು ಮದರಾಸಿನ 'ಗತ್ತು'ವಳಿಯ ಶೈಲಿಯಲ್ಲಿ ಮಾತಾಡದಿದ್ದರೂ ಅದೇ ಮಾತನ್ನೆ ಹೇಳಿದ್ದಾರೆ ಎಂಬುದನ್ನು ನಾವು ಲಕ್ಷ್ಯದಲ್ಲಿಡೋಣ. 'ನಮಗೆ ಈ ಗೊತ್ತುವಳಿಯು ಮೊದಲಿನಿಂದಲೂ ಮಾನ್ಯವಿದೆ. ಆದರೆ ಹೆಚ್ಚು ಮಹತ್ತ್ವದ ಸಂಗತಿಗಳಲ್ಲಿ ನಾವು ತೊಡಗಿದ್ದರಿಂದ ಈ ಗೊತ್ತುವಳಿಯನ್ನು ಇಲ್ಲಿಯ ವರೆಗೆ ಮಂಡಿಸುವುದಾಗಲಿಲ್ಲ' ಎಂದು ಶ್ರೀ. ಖೇರರು ಶಾಸನಸಭೆಯಲ್ಲಿ ಹೇಳಿದರು. ಮುಖ್ಯ ಮಂತ್ರಿಯವರು ತಮ್ಮ ಅಭಿಪ್ರಾಯವನ್ನು ಪ್ರಾಮಾಣಿಕತನದಿಂದಲೂ ಸರಳ ಶಬ್ದಗಳಿಂದಲೂ ಹೇಳಿದ್ದಾರೆ. ನಮಗೆ ಏಕೀಕರಣವು ಅತ್ಯಂತ ಮಹತ್ತ್ವದ್ದೆನಿಸಿದರೆ ಕಾಂಗ್ರೆಸಿನ ಮುಖ್ಯ ಮಂತ್ರಿಗಳಿಗೂ ಅದು ಮಹತ್ತ್ವದ್ದೆ ಎನಿಸಬೇಕೆಂಬ ಹಟವಿಲ್ಲ; ಅವರಿಗೂ ಹಾಗೆ ಎನಿಸಲ್ಲ. ಆಯಿತಲ್ಲವೆ? ಪ್ರಶ್ನೆಯ ಮಹತ್ತ್ವವು ತೋರದಿದ್ದರೆ ಅದಕಾಗಿ ಮಂತ್ರಿಮಂಡಲದವರು ಪ್ರಯತ್ನಗಳನ್ನು ಹೇಗೆ ಹೇಗೆ ಮಾಡುವರು ಎಂದು ಊಹಿಸಬಹುದು. ಆದರೆ....

ನಮ್ಮ ಕೆಲಸವೇನು ? ಗೊತ್ತುವಳಿಯು ಸ್ವೀಕೃತವಾದ ಮಾತ್ರಕ್ಕೆ ಕಾರ್ಯದ ದೃಷ್ಟಿಯಿಂದ ನಾವು ಒಂದು ಹೆಜ್ಜೆಯನ್ನೂ ಮುಂದೆ ಇಟ್ಟಂತಾಗಲಿಲ್ಲ. ಗೊತ್ತುವಳಿಗಳನ್ನು ಆಶೀರ್ವದಿಸಿದ ಕಾಂಗ್ರೆಸ ಮಂತ್ರಿಮಂಡಲಗಳಲ್ಲಿ–ಮೇಲೆ ಹೇಳಿದ ಕಾರಣಕ್ಕಾಗಿ ಪೂರ್ತಿಯಾಗಿ ವಿಶ್ವಾಸವನ್ನಿಡುವಂತಿಲ್ಲ.

ಅಂತೂ ಏಕೀಕರಣದ ಕಾರ್ಯವನ್ನು ಎಂದಿನಂತೆ ನಾವೇ ನಮ್ಮ ವತಿಯಿಂದಲೆ- ಆದರೆ–ಇನ್ನೂ ಹೆಚ್ಚು ಜೋರಾಗಿ ನಡೆಸಬೇಕಾಗುವುದು.

ಈ ಕಾರ್ಯದಲ್ಲಿ ನಾವು ಹೆಚ್ಚು ಜಾಗರೂಕತೆಯನ್ನು ವಹಿಸಬೇಕಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಇದ್ದುದನ್ನು ಎಂದಿಗೂ ಬದಲಾಯಿಸಬಾರದೆಂಬ ಸನಾತನ ವೃತ್ತಿಯವರು, ಏಕೀಕೃತ ಕರ್ನಾಟಕವೂ ಭಾಷಾನ್ವಯರಚಿತ ಪ್ರಾಂತಗಳೂ ಹೆಚ್ಚು ಸಂಘಟಿತವಾಗುವುದರಿಂದ ನಮ್ಮ ದೇಶದ ಬಲ–ಸಾಮರ್ಥ್ಯವೆ ಬೆಳೆಯುವುದೆಂಬ ಬೆದರಿಕೆಯಿಂದ ಟಾಯಿಮ್ಸ್‌ಕಾರರಂತಹ ಬ್ರಿಟಿಶ ಸಾಮ್ರಾಜ್ಯವಾದಿಗಳೂ, ಪ್ರತಿಯೊಂದರಲ್ಲೂ ತನ್ನದೊಂದು ರೀತಿಯೆ ಬೇರೆಯಾಗಿರಬೇಕೆಂಬ ಹಟದ ಸ್ವಭಾವಕ್ಕಾಗಿ ಡಾ. ಅಂಬೇಡಕರರಂತಹರೂ, ಕೆಲವು ಸ್ವಾರ್ಥಸಾಧುಗಳೂ ಹೀಗೆ ಅನೇಕರು ಅನೇಕ ಕಾರಣಗಳಿಗಾಗಿ ನಮ್ಮ ಕಾರ್ಯಕ್ಕೆ ಎಡರುಗಳನ್ನು ತಂದೊದಗಿಸುವುದು ಖಂಡಿತ. ಆದರೆ ಏಕೀಕರಣವನ್ನು ಕರ್ನಾಟಕದ ಎಲ್ಲ ರಾಜಕೀಯ ಪಕ್ಷಗಳೂ, ಎಲ್ಲ ಜಾತಿಯವರೂ ಒಮ್ಮತದಿಂದ ಒಪ್ಪಿಕೊಂಡಿದ್ದಾರೆ. ಈ ಒಮ್ಮತದ ಕಟ್ಟಡವು ಭದ್ರವಾಗಿರುವಂತೆಯೂ ಟೀಕಾಕಾರರಿಗೆ ಅಂಕಿ–ಸಂಖ್ಯೆಗಳನ್ನು ಕಣ್ಣಲ್ಲಿ ತಿವಿಯುವಂತೆಯೂ ಮಾಡುವುದು ಶೀಘ್ರದಲ್ಲಿ ನೆರೆಯಲಿರುವ ಏಕೀಕರಣ ಸಭೆಯ ಅಧಿವೇಶನದ ಮೊದಲ ಕರ್ತವ್ಯ.

ಸ್ವೀಕಾರ

೧. ಪ್ರಪಂಚದ ಕೆಲಸಗಾರರು— ಲೇಖಕರು ಶ್ರೀಮಾನ್ ದಿನಕರ. ದೇಸಾಯಿ ಎಂ. ಎ. ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಆಜೀವ ಸಭಾಸದರು ಪ್ರಕಾಶಕರು: ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮುಂಬಯಿ ಶಾಖೆ. ಕ್ರಾ. ಅ. ೭೨ ಪುಟಗಳು. ಬೆಲೆ ೦–೪–೦

೨. ಸರ್. ಎಂ. ವಿಶ್ವೇಶ್ವರಯ್ಯನವರು— (ಜೀವನ ಚರಿತ್ರೆ) ಇಂಗ್ಲಿಷ ಭಾಷೆಯ ಪುಸ್ತಕ. ಬೆಂಗಳೂರು ಪ್ರೆಸ್ಸಿನ ಪ್ರಕಟನೆ ಕ್ರಾ. ಅ. ೧೨ ಪುಟ. ಪುಕ್ಕಟೆ ದೊರೆಯುವುದು.

೩. ಸಮುದ್ರದಾಚೆಯಿಂದ— (೩ನೆಯ ಭಾಗ. ಸಚಿತ್ರ) ಲೇಖಕರು: ಪ್ರೊ. ವಿ. ಕೃ. ಗೋಕಾಕ ಎಂ. ಎ. ಅವರು. ಮನೋಹರ ಗ್ರಂಥಮಾಲೆಯ ಪ್ರಕಟನೆ ಕ್ರಾ. ಅ. ೧೪೧ ಪುಟ. ಬೆಲೆ ೧–೦–೦

೪. ದಸರೆಯ ಕಾಣಿಕೆ— (ಕವನಗಳು) ಲೇಖಕರು ಶ್ರೀ. ಜಿ. ಎಸ್. ಲಕ್ಷ್ಮಣ ಪೈ. ಪುತ್ತೂರು. ಪ್ರಕಾಶಕರು: ಹರಿಹರ ಪುಸ್ತಕಾಲಯ ಪುತ್ತೂರು. ಡೆಮಿ ಅಷ್ಟರ ೧೮ ಪುಟಗಳು. ಬೆಲೆ ೦–೨–೦

೫. ಕೃಷ್ಣ ಚರಿತ್ರೆ— (ಬಂಗಾಲಿಯ ಕನ್ನಡ ಅನುವಾದ) ಅನುವಾದಕರು ಶ್ರೀ. ಆರ್. ವ್ಯಾಸರಾವ ಬೆಂಗಳೂರು. ಪ್ರಕಾಶಕರು: ಬೆಂಗಳೂರು ಪ್ರೆಸ್ ಬೆಂಗಳೂರು ಸಿಟಿ. ಕ್ರಾ. ಅ. ೪೪೪ ಪುಟಗಳು. ಬೆಲೆ ೩–೦–೦

'ಜಯಂತಿ'ಯಲ್ಲಿ ಬರುವ ವಿಮರ್ಶೆಗಳು ಅಧಿಕೃತ ವಿಮರ್ಶಕರಿಂದ ಬರೆಯಲ್ಪಡುವುವು. ಯಾವುವೆ ಬಗೆಯ ವೈಯಕ್ತಿಕ ನಿಷ್ಠೆ-ತಿರಸ್ಕಾರಗಳಿಗೆ ಈ ವಿಮರ್ಶೆಗಳಲ್ಲಿ ಎಡೆಯಿಲ್ಲ. ಮುಂದಿನ ಸಂಚಿಕೆಯಲ್ಲಿ ಬರಲಿರುವ ಗ್ರಂಥವಿಮರ್ಶೆಯ ಭಾಗವನ್ನು ಓದಿದರೆ ಈ ಮಾತು ತಾನೇ ಮನವರಿಕೆಯಾಗುವುದು.

ದಿ ಯುನಿವ್ಹರ್ಸಲ್

ಹೋಮಿಯೋಪೆಥಿಕ್ ಮತ್ತು ಬಾಯೋಕೆಮಿಕ್

ಫಾರ್ಮಸಿ ಮತ್ತು ದವಾಖಾನೆ.

ಮಾರ್ಕೆಟ ರೋಡು, ಧಾರವಾಡ

ನಮ್ಮಲ್ಲಿ ಎಲ್ಲತರದ ಮತ್ತು ಶಕ್ತಿಯ **ಹೋಮಿಯೋಪೆಥಿಕ್ ಮತ್ತು ಬಾಯೋಕೆಮಿಕ್ ಔಷಧಗಳೂ,** ಗೃಹಚಿಕಿತ್ಸೆಯ (Family medicine chests) ಪೆಟ್ಟಿಗೆಗಳೂ, ಹೊಮಿಯೋಪೆಥಿಕ್ ಮತ್ತು ಬಾಯೋಕೆಮಿಕ್ ಚಿಕಿತ್ಸೆಯ ಕನ್ನಡ ಇಂಗ್ಲೀಷ ಗಾಯಿಡುಗಳೂ ಯೋಗ್ಯಬೆಲೆಗೆ ದೊರೆಯುವವು.

ನಮ್ಮಲ್ಲಿಯ ಬಾಯೋಕೆಮಿಕ್ ಔಷಧಗಳನ್ನೂ, ಹೋಮಿಯೋಪೆಥಿಕ್ ಗೃಹಚಿಕಿತ್ಸೆಯ ಪ್ರತಿಗಳನ್ನೂ ಕುಟುಂಬರಕ್ಷಣೆಯ ಔಷಧ ಪೆಟ್ಟಿಗೆಗಳನ್ನೂ ಮಾರಲು ಯೋಗ್ಯ ಏಜಂಟರು ಬೇಕಾಗಿರುವರು.

ಡಾಕ್ಟರ್ ಜನರಿಗೂ ವ್ಯಾಪಾರಸ್ಥರಿಗೂ ಭರಪೂರ ಕಮಿಶನ್ ಕೊಡಲಾಗುವದು.

ರೋಗಿಗಳಿಗೆ ಚಿಕಿತ್ಸೆಯನ್ನೂ ಮಾಡಲಾಗುವದು. ಪರಸ್ಥಳದವರಿಗೆ ಪೋಸ್ಟದ್ವಾರಾ ಚಿಕಿತ್ಸೆಯನ್ನು ಮಾಡಲಾಗುವದು.

ಶಸ್ತ್ರಚಿಕಿತ್ಸೆಯ ರೋಗಗಳು ಸಹಿತ ಔಷಧದಿಂದಲೇ ಗುಣಮಾಡಲ್ಪಡುವವು.

Attending Physician :—

Dr. V. G. Nadgir, (Homeo) M. B. (Cal).

Specialist in Chronic and Children diseases; a veteran Homeopath of ten years standing consulting Physician and Dispensing Chemist.

ಜಯಂತಿಯಲ್ಲಿ ಜಾಹೀರಾತನ್ನು ಕೊಟ್ಟರೆ ಕೈತುಂಬ ಲಾಭವುಂಟು!

ಅದು ಹೇಗೆ ಎನ್ನುವಿರಾ?

ಪ್ರತಿಯೊಬ್ಬ ಕಲಿತ ಕನ್ನಡಿಗನ ಕಣ್ಣಿಗೂ ನಿಮ್ಮ ಜಾಹೀರಾತು ಬೀಳುವುದು. ಕರ್ನಾಟಕದಲ್ಲಿಯಷ್ಟೇ ಅಲ್ಲ; ಪರಪ್ರಾಂತ-ಪರದೇಶಗಳಿಗೂ ಜಯಂತಿ ಹೋಗುವುದು. ಕನ್ನಡನಾಡಿನ ಪ್ರತಿಯೊಂದು ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಜಯಂತಿಯ ಪ್ರಚಾರಕರುಂಟು.

ಎಂತಲೇ ಜಾಹೀರಾತನ್ನು ಕೊಡುವವರು ತ್ವರೆ ಮಾಡಿರಿ!

ವಾರ್ಷಿಕ ವರ್ಗಣಿ ರೂ. ೩—೦—೦ .... ಬಿಡಿಸಂಚಿಕೆ ೪ ಆಣೆ.

ಸವಲತ್ತು : ೧೯೩೮ ಜೂನ್ ೩೦ನೆಯ ತಾರೀಖಿನೊಳಗಾಗಿ ಚಂದಾದಾರರಾಗುವವರಿಗೆ ಮಾತ್ರ ರೂ. ೨—೧೨—೦

ಸಲಹೆಗಾರ ಮಂಡಲ

ಪ್ರೊ. ಡಿ. ಪಿ. ಪಟ್ಟಣಶೆಟ್ಟಿ ಎಂ. ಎ., ಬಾರ್-ಅಟ್-ಲಾ. ಮುಂಬಯಿ
ಪ್ರೊ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ., ಮೈಸೂರು
ಪ್ರೊ. ಎಸ್. ಎಸ್. ಮಾಳವಾಡ ಎಂ. ಎ., ಧಾರವಾಡ
ಶ್ರೀ. ವ್ಹಿ. ಎಂ. ಇನಾಮದಾರ ಬಿ. ಎ., ವಿಜಾಪುರ
ಶ್ರೀ. ಅ. ನ. ಕೃಷ್ಣರಾಯರು ಬೆಂಗಳೂರು
ಶ್ರೀ. ತಲಚೇರಿ ರಂಗರಾಯರು ಎಲ್‌ಎಲ್. ಬಿ., ಮಂಗಳೂರು
ಶ್ರೀ. ಎಸ್. ವ್ಹಿ. ಅಡ್ಡಣಗಿ ಎಲ್‌ಎಲ್. ಬಿ., ಬೆಳಗಾಂವಿ
ಶ್ರೀ. ಎಂ. ಪಿ. ಪಾಲಿ ಎಂ. ಎ., ಚೀಫ್ಆಫೀಸರ್ ಡಿ. ಎಲ್. ಬಿ. ಬೆಳಗಾಂವಿ
ಶ್ರೀ. ಕೋಟ ಶಿವರಾಮ ಕಾರಂತ ಮಂಗಳೂರು
ಶ್ರೀ. ಆರ್. ಎಚ್. ದೇಸಾಯಿ ಬಿ. ಎ., ಧಾರವಾಡ.

ಪ್ರಕಾಶಕರು:

ವಿ. ಜಿ. ಪಾಟೀಲ, ' ಜಯಂತಿ ' ಕಾರ್ಯಾಲಯ ಕ. ಪ್ರಿಂ. ವರ್ಕ್ಸ್, ಧಾರವಾಡ

ಮುಖ್ಯಪ್ರಸಾರಕರು :

ದಿ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

BOMBAY OFFICE :

Dr. Parekh's Building, Room No. 8
Bhatwadi 2nd Lane Girgaon, BOMBAY

ಮುಂದಿನ ಸಂಚಿಕೆಯಲ್ಲಿ:

ಅಯರ್ಲಂಡಿನ ಅವತಾರ ಪುರುಷ (ಡಿ. ವೆಲರಾ)
' ಚಾಡಿಯ ಚಾಣಕ್ಯ '

ಕಟ್ (Cut) ಉ ಆರ್ಥಾತ್ ಬಿಕ್ಕಟ್ಟು (ವಿನೋದಲೇಖನ)
' ಶ್ರೀರಂಗ '

ಗುಂಡನ ತೊಡಕು (ಸಣ್ಣ ಕತೆ)
ದಿವಂಗತ 'ವಿಜಯ' ಬೆಟಗೇರಿ ಬಿ. ಎ.

ಗೆಳೆಯರ ಸುಳಿದಾಟ, ಹೆಂಡಂದಿರಿಗೆ ಪ್ರಾಣಸಂಕಟ
ಶ್ರೀ. ಸೌ. ವಿಮಲಾ ದೇಶಪಾಂಡೆ ಬಿ. ಎ.

ಕನ್ನಡ ನಾಡ ಸಿರಿ (ಸ್ಥಲ ಪರಿಚಯ)
' ನಾಡಾಡಿಗ '

ಸೇಬು (ಸಣ್ಣ ಕತೆ)
ಶ್ರೀ. ಗೋವಿಂದ ಹಳ್ಳಿಪ್ಪನವರ

ಹಳ್ಳಿಗಳೂ ಆಯುರ್ವೇದವೂ
ಪಂಡಿತ ತಾರಾನಾಥರಾಯರು

ಪುರಾಣದ ಪೂರ್ವರಂಗ (ವಾಸ್ತವದೃಶ್ಯ)
ಶ್ರೀ. ಎನ್. ಕೆ. ಕುಲಕರ್ಣಿ ಬಿ. ಎ.

ಅಲ್ಲದೆ ಇನ್ನೂ ಬೇರೆಯವರ ಲೇಖನಗಳೂ ಕಥೆ–ಕವಿತೆಗಳೂ ' ಮಂಗನ ಮಲ್ಲಿನಾಥನ' 'ನಗೀಗೆ ನೈವೇದ್ಯ' ' ನಾಲ್ಕು ನಿಟ್ಟಿನ ನೋಟ' ಗಳೂ ಸುಂದರ ಸುಂದರ ಚಿತ್ರಗಳೂ ಬರುವುವು.

ಆದರ್ಶ ಶಿಕ್ಷಣಸಂಸ್ಥೆ ! **ನಿಮಗೆ ಮಕ್ಕಳ ಶಿಕ್ಷಣದ ಚಿಂತೆಯೆ ?**

ಹಿಂದೂ ಹೈಸ್ಕೂಲು ಪಂಚಗಣಿ

ಹಿಂದೂ ವಿದ್ಯಾಮಂದಿರದ ನಿಸರ್ಗರಮಣೀಯ ದೃಶ್ಯ

ಮಕ್ಕಳ ಆರೋಗ್ಯವನ್ನು ಕುರಿತೂ ಯೋಚಿಸಬೇಕಾಗಿಲ್ಲ. ೪೩೦೦ ಫೂಟು ಎತ್ತರವಾದ ನಿಸರ್ಗರಮಣೀಯ ಪ್ರದೇಶದಲ್ಲಿ ಈ ವಿದ್ಯಾಲಯವು ಸ್ಥಾಪಿತವಾಗಿದೆ. ಕಳೆದ ಹದಿನೈದು ವರುಷಗಳಿಂದ ದಿನದಿನಕ್ಕೂ ಇದು ಜನಾದರಕ್ಕೆ ಪಾತ್ರವಾಗುತ್ತ ನಡೆದಿದೆ. ಹಿಂದೂ ಹುಡುಗರ ಸಲುವಾಗಿ ತೆರೆದ ಈ ಬಗೆಯ ಆದರ್ಶಸಂಸ್ಥೆ ಇನ್ನೊಂದಿಲ್ಲ.

ಭಾರತದ ಒಳಗಿರುವ ಹೊರನಾಡಿನೊಳಗಿರುವ ಅನೇಕ ಜನ ಸಿರಿವಂತರೂ, ಅಧಿಕಾರಿಗಳೂ, ಜಮೀನದಾರರೂ ತಮ್ಮ ತಮ್ಮ ಮಕ್ಕಳನ್ನು ಒಳ್ಳೆಯ ಸಂಸ್ಕಾರವಂತರನ್ನಾಗಿಸಬೇಕೆಂಬ ಅಪೇಕ್ಷೆಯಿಂದ ನಮ್ಮ ಈ ವಿದ್ಯಾಮಂದಿರಕ್ಕೆ ಕಳುಹುತ್ತಾರೆ.

ಹಳ್ಳಿಯ ಸರಲಜೀವನವೂ ನಗರದ ಸುಂದರ ಸಂಸ್ಕೃತಿಯೂ ಸಮನ್ವಯಗೊಳ್ಳಬೇಕಾದರೆ ವಿದ್ಯಾರ್ಥಿಗಳು ಪಂಚಗಣಿಯ ಹಿಂದೂ ಹೈಸ್ಕೂಲಿಗೇ ಬರಬೇಕು. ವೆಚ್ಚವೂ ಹೆಚ್ಚಾಗಿ ಬಾರದು. ಬರುವ ಮೇ ತಿಂಗಳ ೧೫ ರಿಂದ ಹೊಸ ವರುಷದ ಅಭ್ಯಾಸಕ್ಕೆ ಆರಂಭವಾಗುವುದಲ್ಲದೆ ಬೇಕಾದಾಗ ಕಳುಹಿದರೂ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಮ್ಯಾಟ್ರಿಕ್ಯುಲೇಶನ್‌ವರೆಗೆ ಕಲಿಸುವ ಏರ್ಪಾಡಿವೆ. ವಿ. ವಿ. ನಿಲಯ, ಸರಕಾರಗಳ ಮನ್ನಣೆಯೂ ಇದೆ. ಕನ್ನಡ, ಹಿಂದೀಭಾಷೆಗಳನ್ನು ಕಲಿಸುವುದರ ಏರ್ಪಾಡೂ ನಡೆದಿದೆ.

ನಮ್ಮ ವಿಳಾಸ :

ಸುಪರಿಂಟೆಂಡೆಂಟ್ ಹಿಂದೂ ಹೈಸ್ಕೂಲ್
ಪಂಚಗಣಿ (ಮಹಾಬಳೇಶ್ವರ)

ಅಥವಾ

ಎಂ. ಎ. ಪಂಡಿತ,
ದ್ವಾರಕಾದಾಸ ಮ್ಯಾನಶನ್ಸ್. ನಂ. ೧೭
ಸ್ಯಾಂಢರ್ಸ್ಟ್ ರೋಡ್, ಬಾಂಬೆ

Printed by K. R. Bhise at the Karnatak Printing Works Dharwar, and Edited & Published by M. G. Patil at the Jayanti Office, Dharwar.

ಜಯಂತಿ

ಜೂನ
[illegible]



4 ANNAS

ಪಂ. ತಾರಾನಾಥ, 'ಶ್ರೀರಂಗ', ಸೌ. ವಿಮಲಾಬಾಯಿ ದೇಶಪಾಂಡೆ ಇ. ಇ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

ಸಂಪಾದಕೀಯ ಮಂಡಲ :

ಪ್ರೊ. ಆರ್. ವಿ. ಜಾಗೀರದಾರ ಎಂ. ಎ. (ಲಂಡನ್) ಶ್ರೀ. ಜೋಶಿ ಶಂಕರರಾಯರು

ಪ್ರೊ. ವಿ. ಜಿ. ಕುಲಕರ್ಣಿ ಎಂ. ಎ., ಎಲ್‌ಎಲ್. ಬಿ. ಶ್ರೀಮತಿ ಸೌ. ವಿಮಲಾಬಾಯಿ ದೇಶಪಾಂಡೆ ಬಿ.ಎ.

೧ನೆಯ ವರ್ಷ | ಜೂನ್ ೧೯೩೮ | ೨ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಮರಳಿ ಬಂದ ಬಳಿಕ (ಸಚಿತ್ರ ಕವಿತೆ)	ಶ್ರೀ. 'ಆನಂದಕಂದ'	೬೯
ಸಂಪಾದಕೀಯ	ಸಂಪಾದಕರು	೭೦
ಮಂಗನ ಮಲ್ಲಿನಾಥತನ	ಶ್ರೀ. 'ಮಲ್ಲಿನಾಥ'	೭೧
ಹಕ್ಕಿಗಳಲ್ಲಿ ಆಯುರ್ವೇದ (ಪ್ರಾಸ್ತಾವಿಕ ಲೇಖನ)	ಪಂಡಿತ ತಾರಾನಾಥರು	೭೩
ಖಲೀಲ್ ಗಿಬ್ರಾನನ ಕೃತಿಯ ಸವಿ	'ರುಚಿಗಾರ' ಸಂಗ್ರಹಿಸಿದುದು	೭೫
ಕಸಪೊರಕೆ (ಕವಿತೆ)	ಶ್ರೀ. 'ಅಂಬಿಕಾತನಯದತ್ತ'	೭೬
ಮುಚ್ಚಂಜೆ (ಕವಿತೆ)	ಶ್ರೀ. 'ದತ್ತಾತ್ರೇಯ'	,,
ಯೋಧನ ಕೊನೆಯ ನುಡಿ (ಕವಿತೆ)	ಶ್ರೀ. ಶ್ರೀಕೃಷ್ಣ 'ಶಾರದಾಮಂಡಲ'	..
ಸೇಬು (ಸಣ್ಣಕತೆ)	ಶ್ರೀ. ಗೋ. ಲ. ಹಳ್ಳಿಪ್ಪನವರ	೭೭
ಕಟ್ (Cut) ಉ ಅರ್ಥಾತ್ ಬಿಕ್ಕಟ್ಟು (ವಿನೋದ ಪ್ರಬಂಧ)	ಶ್ರೀ. 'ಶ್ರೀರಂಗ'	೮೦
ಋಣಾನುಬಂಧ (ಸಣ್ಣಕತೆ)	ಶ್ರೀ. ದತ್ತಾತ್ರೇಯ ಕುಲಕರ್ಣಿ	೮೫
ಕನ್ನಡನಾಡ ಸಿರಿ (ಸ್ಥಳಪರಿಚಯ)	ಪ್ರೊ. ಸಿ. ಡಿ. ದೇಶಪಾಂಡೆ ಎಂ. ಎ.	೮೭
ಪುರಾಣದ ಪೂರ್ವರಂಗ (ನಗೆಯಾಟ)	ಶ್ರೀ. ಎನ್. ಕೆ. ಕುಲಕರ್ಣಿ ಬಿ. ಎ.	೯೦
ಐರ್ಲಂಡದ ಅವತಾರ ಪುರುಷ (ಡಿ. ವ್ಯಾಲೇರಾ)	ಶ್ರೀ. 'ಚಾಡಿಯ ಚಾಣಕ್ಯ'	೯೩
ಕರ್ನಾಟಕದ ಕೂಲಿ	ಶ್ರೀ. ಶ್ರೀ. ದಿನಕರ ದೇಸಾಯಿ ಎಂ. ಎ.	೯೬
ಗೆಳೆಯರ ಸುಳಿದಾಟ, ಹೆಂಡಂದಿರಿಗೆ ಪ್ರಾಣಸಂಕಟ (ಚಿತ್ರಾವಲಿ) ..	ಶ್ರೀಮತಿ ಸೌ. ವಿಮಲಾಬಾಯಿ ದೇಶಪಾಂಡೆ ಬಿ. ಎ.	೯೮
ಗುಂಡನ ತೊಡಕು (ಸಣ್ಣ ಕತೆ)	ದಿವಂಗತ 'ವಿಜಯ' ಬೆಟಗೇರಿ ಬಿ. ಎ	೧೦೫
ಅಖಿಲಭಾರತದ ಕನ್ನಡ ಸೇನಾಪತಿ (ಡಾ. ಹರಡೀಕರರು)	ಶ್ರೀ. 'ಅಜ್ಞಾತ'	೧೧೦
ವಿಲಾಸ (ಕಿರುಗತೆ)	ಶ್ರೀ. ಹನುಮಂತರಾವ್ ವಾಂಜರೇಕರ ಬಿ. ಎ.	೧೧೪
ನಗೀಗೆ ನೈವಿದ್ಯ	ನಕಲಿಯ ನಾರಾಯಣಾಚಾರ್ಯರು	೧೧೫
ಸಾಹಿತ್ಯ ಸಮೀಕ್ಷಣ	ಶ್ರೀ. 'ವಿ. ಎಮ್.'	೧೧೭
ನಾಲ್ಕು ನಿಟ್ಟಿನ ನೋಟ	'ನಿರೀಕ್ಷಕರು'	೧೧೯
ಸ್ವೀಕಾರ	.. .. ..	೧೨೪
೭ ನೆಯ ಕರ್ನಾಟಕ ಏಕೀಕರಣ ಪರಿಷತ್ತು	"ವಿಹಂಗಮ"	೧೨೫

ಜಯಂತಿ

ಜೂನ್ ೧೯೩೮
ವರ್ಷ ೧
ಸಂಚಿಕೆ ೨

ಮರಳಿ ಬಂದ ಬಳಿಕ

— ಆನಂದಕಂದ —

ಆತ :—

ನಾವಿಬ್ಬರೂ ಕೂಡಿ ಇರುವಾಗ ನನ ಚೆನ್ನಿ !
  ನೋವಂದರೇನ– ನಗಿಯೇನs ?
ನೋವಂದರೇನ– ನಗಿಯೇನ ? ಈ ತೂಕ
  ನಿಲಕಿದ್ದಿತೇನ ಮನವನ್ನ ? ೧
ಹೋಗ್ಯೋಗಿ ಬರತಿರುವ ಹೊಸ ಹೊಚ್ಚ ದಿನಗೋಳು
  ಹೆಚ್ಚು ಹೆಚ್ಚಾದ ಹುರಪೀನ–
ಹೆಚ್ಚು ಹೆಚ್ಚಾದ ಹುರಪೀನ ಹೊರಿಹೊತ್ತು
  ತುಂಬತಿದ್ದೂವ ಬರಿವ್ಯಾನ ! ೨
ಹರಿಯೂವ ಹೊಳಿಯಾಗ ಬುರುಡಿಗುಂಬಳ ಕಟ್ಟಿ
  ತೆರಿವ್ಯಾಲ ತೇಲಿ ಹೊರಟ್ಹಾಂಗ–
ತೆರಿವ್ಯಾಲ ತೇಲಿ ಹೊರಟ್ಹಾಂಗ ನನ ಬದುಕು
  ನಡದಿತ್ತು ಕಾಲ ಕಡಲಾಗ ! ೩

ಆಕೆ :—

ನಾವಿಬ್ಬರೂ ಕೂಡಿ ಇರುವಾಗ ನನ ನೀರ !
  ನಾ ಬ್ಯಾರೆ ಮತ್ತ ನೀ ಬ್ಯಾರೆ–
ನಾ ಬ್ಯಾರೆ ಮತ್ತ ನೀ ಬ್ಯಾರೆ– ಈ ಮಾತು
  ನೆನಪಾಗತಿತ್ತೆ ಎಂದಾರೆ ? ೧
ಯಾತಕ್ಕ ನಾ ಹೋದೆ ಗಾತೂಕ ತವರಿಗೆ
  ‘ನಾ ಬ್ಯಾರೆ ನಲ್ಲ ನೀ ಬ್ಯಾರೆ’
‘ನಾ ಬ್ಯಾರೆ ನಲ್ಲ ನೀ ಬ್ಯಾರೆ’ ಎಂಬರಿವ
  ಮೂಡಿಸಿದರಲ್ಲೆ ನಮ್ಮವರೇ ! ೨
‘ನಾ ಬ್ಯಾರೆ’ ಎಂದಾಗ ನಡಗೀತು ನರನರ !
  ನೀರಾಗ ಬಿದ್ದು ಮುಣುಗುವ–
ನೀರಾಗ ಬಿದ್ದು ಮುಣುಗವರ ಹರಿ ಉಸರು
  ತೊಡಕಿ ಮಿಡಕೀತು ನನಜೀವ ! ೩

ಅಭಿನಂದನೆ

'ಜಯಂತಿ'ಯ ಮೊದಲನೆಯ ಸಂಚಿಕೆಯನ್ನು ನೋಡಿದ ಹಲವು ಜನರು ಅದರ ಅಂತರ್ಬಾಹ್ಯಾಂಗಗಳ ಗುಣವನ್ನೂ, ಅವುಗಳ ಮಾನದಿಂದ ನೋಡಿದಲ್ಲಿ 'ಜಯಂತಿ'ಗಿಟ್ಟ ೩ ರೂಪಾಯಿಗಳ ವಾರ್ಷಿಕ ವರ್ಗಣಿಯು ತೀರ ಕಡಿಮೆಯೆಂಬುದನ್ನೂ ಪ್ರಶಂಸೆ ಮಾಡಿ ಬರೆದಿದ್ದಾರೆ. ಮೊದಲನೆಯ ಸಂಚಿಕೆಯ ಬಾಹ್ಯಾಂಗದ ವಿಚಾರದಲ್ಲಿ ನಮಗೇ ಅತೃಪ್ತಿಯಿರುವಾಗ, ಅದನ್ನು ಪ್ರಶಂಸೆ ಮಾಡಿದವರೆಲ್ಲರಲ್ಲಿಯೂ ನಮ್ಮ ವಿಚಾರದಲ್ಲಿ ತುಂಬ ಪ್ರೀತಿ-ವಿಶ್ವಾಸಗಳಿರಬಹುದು. ಇದಕ್ಕಾಗಿ ಅವರೆಲ್ಲರಿಗೂ ನಮ್ಮ ಕೃತಜ್ಞತೆಯ ಅಭಿನಂದನೆಗಳು.

ಈ ಸಂಚಿಕೆ

ಮೊದಲನೆಯ ಸಂಚಿಕೆಗಿಂತ ಈ ಎರಡನೆಯ ಸಂಚಿಕೆಯಲ್ಲಿ ಹಲವು ಬಗೆಯ ಸುಧಾರಣೆಗಳನ್ನು ಕಾಣಬಹುದು. ಪ್ರತಿಯೊಂದು ಸಂಪಾದಕೀಯ ಲೇಖನಗಳಿಗೂ ಸುಂದರವಾದ ತಲೆಬರೆಹದ ಪಡಿಯಚ್ಚುಗಳನ್ನು ಮಾಡಿಸಲಾಗಿದೆ. ಲೇಖನಸಂದರ್ಭ ಚಿತ್ರಗಳೂ ಹಿಂದಿನ ಸಂಚಿಕೆಗಿಂತ ಸುಂದರಿಯಿಟ್ಟವುಗಳಾಗಿವೆ. ಮುಖಚಿತ್ರದ ಮುದ್ರಣದ ಓರಣವೂ ಚೆನ್ನಾಗಿದೆ. ಲೇಖನಗಳಂತೂ ಭಾಷೆ, ಶೈಲಿಗಳ ನೂತನತೆಯಿಂದ ಕೂಡಿದ್ದು ಪಂಡಿತಪಾಮರರಿಬ್ಬರ ಮನವನ್ನೂ ಮೆಚ್ಚಿಸುವಂತಹವಾಗಿವೆ.

ತುಂಬ ಸುಲಭ ಬೆಲೆ

ಇಷ್ಟೊಂದು ಪುಟಗಳಿಂದ ಕೂಡಿದ, ಹೊಸ ಹೊಸ ಚಿತ್ರಗಳಿಂದ ಮನೋಹರವಾದ, ಅಖಂಡ ಕರ್ನಾಟಕದ ಸಾಹಿತಿಗಳೆಲ್ಲರ ಸಾಹಿತ್ಯದ ಸವಿಯನ್ನುಣ್ಣಿಸುವ ನಮ್ಮ ಪತ್ರಿಕೆಗೆ ಮೂರೆ ಮೂರು ರೂಪಾಯಿಗಳ ವರ್ಗಣಿಯನ್ನಿಟ್ಟಿರುವುದೆಂದರೆ ತುಂಬ ಸಾಹಸದ ಸಂಗತಿಯೆಂಬುದನ್ನು ಯಾರೂ ಒಪ್ಪಿಕೊಳ್ಳಬಹುದು. ಇಷ್ಟೊಂದು ಗುಣದಿಂದ ಕೂಡಿದ ಇಷ್ಟೊಂದು ಅಲ್ಪಮೂಲ್ಯದ ಪತ್ರಿಕೆಯು ಕರ್ನಾಟಕದಲ್ಲಿ ಇನ್ನಾವುದೂ ಇಲ್ಲವೆಂಬುದನ್ನು ಯಾರೂ ಮರೆಯಲಾಗದು. ಕೆಲವರ ಸೂಚನೆ: ಒಳಗಿನ ಕಾಗದಗಳು ಇನ್ನಿಷ್ಟು ಬಿಳಿಯವಾಗಿರಬೇಕೆಂದು. ಆದರೆ ಬೆಲೆಯ ಪ್ರಮಾಣದಿಂದ ನೋಡಿದರೆ ಅವರ ಸೂಚನೆಯನ್ನು ಸದ್ಯದ ಸ್ಥಿತಿಯಲ್ಲಿ ಬದಿಗಿರಿಸಲೇಬೇಕಾಗುವುದು. 'ಜಯಂತಿ'ಯನ್ನು ಸರ್ವಾಂಗಸುಂದರವಾಗಿ ಮಾಡಬೇಕೆಂಬ ಇಚ್ಛೆ ಬೇರೆ ಯಾರಿಗಿಂತಲೂ ನಮ್ಮಲ್ಲಿ ಏತಕ್ಕಾಗಿ ಕಡಿಮೆಯಾಗಿರಬೇಕು ?

ಅನುಕೂಲ ಪರಿಸ್ಥಿತಿ ಒದಗಿದಂತೆಲ್ಲ ಜಯಂತಿಯಲ್ಲಿ ಹೊಸ ಹೊಸ ಸುಧಾರಣೆಗಳಾಗುವುದನ್ನು ಕನ್ನಡಿಗರು ಕಾಣಬಹುದು.

ಕಳೆದ ಸಂಚಿಕೆ

ನಮಗೆ ಇನ್ನೂ ಅಂಚೆಯ ರಿಯಾಯಿತಿ ದೊರೆತಿಲ್ಲವಾದುದರಿಂದ ಟಪ್ಪಾಲಿನ ಮೇಲೆ ಕಳುಹಬೇಕಾದವರಿಗೆ ಯಾರಿಗೂ ನಮ್ಮ ಮೊದಲನೆಯ ಸಂಚಿಕೆಯನ್ನು ಕಳಿಸಿಲ್ಲ. ಬರೀ ಏಜಂಟರ ಮುಖಾಂತರವಾಗಿ ಸಾಧ್ಯವಿದ್ದ ಕಡೆಗಳಲ್ಲಿ ಮಾತ್ರ ಕಳುಹಲಾಗಿದೆ. ಉತ್ತರ-ದಕ್ಷಿಣ ಕನ್ನಡಜಿಲ್ಲೆಗಳಲ್ಲಿ 'ಜಯಂತಿ' ಕಾಲನ್ನೇ ಇಕ್ಕಿಲ್ಲವೆಂದು ಹೇಳಬಹುದು. ಬಳ್ಳಾರಿ ಜಿಲ್ಲೆಯ ಬಹಳ ಭಾಗದಲ್ಲಿಯೂ, ನೈಝಾಮ್ ಕರ್ನಾಟಕದಲ್ಲಿಯೂ ಅದರ ಪ್ರವೇಶವಾಗಿಲ್ಲ. ಆದರೂ ನಮ್ಮ ಮೊದಲನೆಯ ಸಂಚಿಕೆಗಳು, ಸಂಪೂರ್ಣ ತೀರಿಹೋಗಿವೆಯೆನ್ನುವಷ್ಟು ಕಡಿಮೆ ಪ್ರತಿಗಳು ಉಳಿದಿವೆ. ಆ ಸಂಚಿಕೆ ಬೇಕಾಗಿದ್ದವರು ಕೂಡಲೆ ಪತ್ರಬರೆದು ಹೆಸರುಗಳನ್ನು ತಿಳಿಸಬೇಕು.

ತರುಣ ಲೇಖಕರು

ಸಂಪಾದಕರ ಮೇಲೆ ತರುಣ ಲೇಖಕರದೊಂದು ಆಕ್ಷೇಪ : 'ಹೊಸ ಲೇಖಕರಿಗೆ ಪ್ರೋತ್ಸಾಹವು ದೊರೆಯುವಂತೆ ಅವರ ಕೃತಿಗಳಿಗೆ ಅವಕಾಶವನ್ನೇ ಕಲ್ಪಿಸಿಕೊಡುವುದಿಲ್ಲ ಇಂದಿನ ಅನೇಕ ಜನ ಸಂಪಾದಕರು; ಬರೀ ಪದವಿ-ಅಧಿಕಾರಗಳನ್ನು ನೋಡಿ ಮೋರೆ ಕಂಡು ಮಣೆ ಹಾಕುವ ಸಂಪ್ರದಾಯ ಅವರದು.' ಇದು ಅವರ ಆಕ್ಷೇಪಣೆಯ ಅಭಿಪ್ರಾಯ. ಸಂಪಾದಕರು ನಿಜವಾಗಿಯೂ ಹೀಗೆ ಮಾಡುತ್ತಿದ್ದರೆ ಅದು ಖಂಡನೀಯವೇ! ಆದರೆ ಸಮಾಜದ ಶಿಕ್ಷಣಕ್ಕಾಗಿ ಕೆಲಸಮಾಡುವ ಪತ್ರಿಕೆಗಳಲ್ಲಿ ಅಭ್ಯಾಸ-ಅನುಭವಗಳಿಂದ ಪರಿಪಕ್ವವಾದ ವಿಚಾರಗಳನ್ನೊಳಗೊಂಡ ಲೇಖನಗಳೇ ಬರಬೇಕಲ್ಲವೇ? ಆದುದರಿಂದಲೆ 'ನನ್ನದೊಂದು ಲೇಖನ ಮುದ್ರಣವಾದರೆ ಸಾಕು !' ಎಂದು ತರುಣ ಲೇಖಕರು ಅಪೇಕ್ಷೆ ಪಡುವುದಕ್ಕಿಂತಲೂ 'ನಾನು ಬರೆಯುವ ಲೇಖನ ಒಳ್ಳೆಯದಾದೀತು ಹೇಗೆ ?' ಎಂಬುದನ್ನು ಯೋಚಿಸುತ್ತಿರಬೇಕು. ಅದಕ್ಕಾಗಿ ಹಳೆಯ-ಹೊಸ ಒಳ್ಳೊಳ್ಳೆಯ ವಿಚಾರ ಭರಿತ ವಾಙ್ಮಯವನ್ನು ಓದುತ್ತಿರಬೇಕು; ವಿವಿಧ ದೃಷ್ಟಿಯಿಂದ ಜಗತ್ತಿನ ಬೇರೆ ಬೇರೆ ಅಂಗಗಳ ಪರಿಚಯ ಮಾಡಿಕೊಳ್ಳುತ್ತಿರಬೇಕು. ಮಾನವ ಸ್ವಭಾವದ ವೈಚಿತ್ರ್ಯಗಳನ್ನು ತೂಗಿ ನೋಡುವಂತಹ ಮನಶ್ಶಾಸ್ತ್ರದ ಅಧ್ಯಯನ ಬೇಕು. ಇದರಿಂದ ತರುಣರ ವಿಚಾರಗಳು ರೂಪುಗೊಳ್ಳುವುವು. ಹೀಗೆ ರೂಪುಗೊಂಡ ವಿಚಾರಗಳನ್ನು ವ್ಯಕ್ತ ಮಾಡಿ ತೋರಿಸುವುದಕ್ಕೆ ಭಾಷೆಯ ಪಾಂಡಿತ್ಯವು ಅವಶ್ಯವಾಗಿ ಬೇಕು. ಇವಾವುವೂ ಇಲ್ಲದೆ ಹಸಿ ಹಸಿಯ ವಿಚಾರಗಳನ್ನು ಹರುಕುಮುರುಕಾದ ಭಾಷೆಯಲ್ಲಿ ಬರೆದು ಕಳಿಸಿ, ಹಾಗೆಯೆ ಹಿಂದಿರುಗಿದಾಗ ಸಂಪಾದಕರನ್ನು ಆಕ್ಷೇಪಿಸತೊಡಗಿದರೆ ಸಂಪಾದಕರೇನು ಮಾಡಬೇಕು ? ಕರ್ನಾಟಕದಲ್ಲಿ ಒಳ್ಳೊಳ್ಳೆಯ ಹೊಸ ಲೇಖಕರನ್ನು ಉಂಟುಮಾಡಬೇಕಾಗಿದ್ದ ಜಯಂತಿಗೆ ಕನ್ನಡ ತರುಣರೊಂದಿಗೆ ಇನ್ನೂ ಸಾಕಷ್ಟು ಮಾತನ್ನಾಡಬೇಕಾಗಿದೆ. ಈಗ ಸ್ಥಳವೂ ಇಲ್ಲ, ಕಾಲವೂ ಇಲ್ಲ. ಮುಂದಿನ ಸಂಚಿಕೆಯಲ್ಲಿ ಈ ಮಾತನ್ನು ಮುಂದುವರಿಸೋಣ! ನಮಸ್ತೇ.

—ಸಂಪಾದಕರು

ಜೂನ್ ೧೯೩೮

ಶುನಿಚೈವ ಶ್ವಪಾಕೇಚ
ಪಂಡಿತಾಃ ಸಮದರ್ಶಿನಃ

ಕನ್ನಡ ನಾಡಿನಲ್ಲಿಯದೇ ಒಂದು ನಗರ. ಅಲ್ಲಿಯ ಮನುಷ್ಯರಿಂದ ಲಾಭಹೊಂದಿ ಬಾಳುತ್ತಿರುವ ಅನೇಕ ಜನ ಉತ್ತರದೇಶದ ಸೇಟಜಿಗಳು ತಾನಿದ್ದ ಊರಲ್ಲಿಯ ಬಿಡಾಡಿ ನಾಯಿಗಳಿಗೆಲ್ಲ ಕೂಳುದೊರೆಯುವಂತೆ ಏರ್ಪಾಡು ಮಾಡಿರುವರಂತೆ. ನಿತ್ಯವೂ ಐದು ಸೂಳಿಗೆಯ ರೊಟ್ಟಿಗಳು ನಾಯಿಗಳ ಹೊಟ್ಟೆಯಲ್ಲಿ ಸೇರುವುವು ಸರಿ! ನಾಯಿಗಳ ಹೊಟ್ಟೆಯ ಚಿಂತೆ ತಪ್ಪಿತು. ಆದರೆ ಅಲ್ಲಿಯ ಮನುಷ್ಯರ ಹೊಟ್ಟೆಯ ಚಿಂತೆಯನ್ನು ಯಾರಾದರೂ ಮಾಡುವವರುಂಟೇ? ಆ ನಗರವು ನಾಯಿಗಳ ನಗರವೇ ಆಗಬೇಕೆಂದು ಆ ಸೇಟಜಿಗಳ ವಿಚಾರವಿದ್ದಂತೆ ತೋರುವುದು. ಆದರೆ ನಾಯಿಗಳ ನಗರದ ವ್ಯಾಪಾರಿಗಳ ಲೆಕ್ಕದ ಪುಸ್ತಕದಲ್ಲಿ, ಜಮೆಯ ಬದಿಯು ಬಿಳಿಯದಾಗಿಯೆ ಉಳಿಯಬಹುದೆಂಬುದನ್ನು ಆ ಸೇಟಜಿಗಳು ಯೋಚಿಸಿಲ್ಲವೆಂದು ತೋರುವುದು!

ಕಲಿಯುಗದ ಮಹಿಮೆಯು ಕಾಣಬಂತೀಗ!

ನಮ್ಮ ಮಠಾಧಿಪತಿಗಳು ನಡೆದುಬಂದ ದಾರಿಯನ್ನು ಬಿಡುತ್ತಿದ್ದಾರೆ. ಇದೇನು ಒಳ್ಳೆಯ ಲಕ್ಷಣವಾಗಿ ತೋರದು. ನಮ್ಮ ಕನ್ನಡನಾಡಿನ ಒಬ್ಬ ಮಠದ ಸನ್ಯಾಸಿ ಗೋದಾವರಿತೀರದಲ್ಲಿ ನಿಂತು, ಸನಾತನ ಸಂಪ್ರದಾಯಗಳಿಗೆಲ್ಲ ಬಾರೆಣ್ಣೆಯನ್ನೆ ಬಡಿಯುತ್ತಲಿದ್ದಾನೆ. ಇನ್ನೊಬ್ಬ ಸನ್ಯಾಸಿ ಕೇರಿಗಳಲ್ಲಿಯಲ್ಲಿ ನಿಂತು ಹರಿಜನರ ಉದ್ಧಾರಕ್ಕಾಗಿ ಹೆಣಗುತ್ತಿದ್ದಾನೆ. ಮತ್ತೊಬ್ಬ ಮಠಾಧಿಪತಿ ಕರ್ನಾಟಕ ಏಕೀಕರಣ 'ಕರ್ನಾಟಕ ಏಕೀಕರಣ' ಎಂದು ಆಧಿಭೌತಿಕ ಮಂತ್ರದ ಜಪ ನಡೆಯಿಸಿದ್ದಾನೆ. ಕೂಲಿಕಾರರ ಜಟಪಟಕೆಯ ಬೆಂಬಲಕ್ಕೆ ನಿಂತ ಮಠದಯ್ಯನವರೂ ನಮ್ಮಲ್ಲಿ ಮುಂದೆ ಬರತೊಡಗಿದ್ದಾರೆ. ಕಲಿಯುಗದ ಮಹಿಮೆಯು ಕಾಣಬಂತೀಗ! ಸನ್ಯಾಸಿಗಳಿಗೇಕೆ ಬೇಕು ಸಂಸಾರಿಗಳ ದುಃಖ?'

ಕೀರ್ತಿಯ ದೀರ್ಘನಿದ್ರೆ

ಸಿರಮೂರ ಎಂಬ ಸಂಸ್ಥಾನದಲ್ಲಿ ಕೀರ್ತಿ ಎಂಬ ಹಳ್ಳಿ ಇದೆಯಂತೆ. ಅಲ್ಲಿ ಒಂದು ವಿಚಿತ್ರ ರೋಗ ಹುಟ್ಟಿದೆ ಎಂದು ಟಾಯಿಮ್ಸ್ ಆಫ್ ಇಂಡಿಯಾದಲ್ಲಿ ಸುದ್ದಿ ಬಂದಿದೆ. ಮೊದಲು ಅನಾವರ ನಿದ್ರೆಬರುವುದಂತೆ, ಆ ವೇಳೆ ಮೂರು ದಿವಸಗಳ ವರೆಗೆ ನಿದ್ರೆಯು ಕಣ್ಣನ್ನೆ ಬಿಡುವುದಿಲ್ಲವಂತೆ. ನಾಲ್ಕನೆಯ ದಿವಸ ನೋಡಿದರೆ ನಿದ್ರೆ ಬಿಟ್ಟಿರುವುದು, ಅದರ ಕೂಡ ಜೀವವೂ ಬಿಟ್ಟಿರುವುದಂತೆ!

ಮೊನ್ನೆ ನಾವು ಥರ್ಡ್‌ಕ್ಲಾಸಿನ ಪ್ರವಾಸ ಮಾಡುವಾಗ ದಟ್ಟವಾಗಿ ಜನರಿಂದ ತುಂಬಿದ ಕಂಪಾರ್ಟ್‌ಮೆಂಟಿನಲ್ಲಿ ಮಲಗಿಕೊಂಡ ೩-೪ ಜನರು ಏನು ಮಾಡಿದರೂ ಏಳಲಿಲ್ಲವೆಂಬುವರ ಗೂಢ ಈಗ ಬಿಟ್ಟಿತು ನಮಗೆ 'ದೇವರೆ, ಎಂದಿನಂತೆ ಇನ್ನು ಮುಂದಾದರೂ ನಿಂತುಕೊಂಡೇ ಪ್ರವಾಸಮಾಡುವ ವರವನ್ನು ನೀಡು' ಎಂದು ಬೇಡಿಕೊಳ್ಳೋಣ! (ಕಂಪಾರ್ಟಮೆಂಟಿನಲ್ಲಿ ಜನಸಂದಣಿ ಇದ್ದುದರಿಂದ ಕೈಗಳನೆತ್ತಿ ಮುಗಿಯುವುದು ಶಕ್ಯವಾಗಲಿಲ್ಲ, ಕ್ಷಮೆ ಇರಲಿ.)

ಪ್ರಶಂಸನೆ—ಪ್ರದೂಷಣೆ

ಕೆ. ಪಿ. ಸಿ. ಸಿ. ಅಧಿವೇಶನದ ಕಾಲದಲ್ಲಿ ಕಮಿಟಿಯ ಸದಸ್ಯರಿಗೆಲ್ಲ ಹೊಟ್ಟೆತುಂಬ ಅನ್ನ ದೊರೆಯುವಂತೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಏರ್ಪಾಡು ಮಾಡಿದ್ದರಂತೆ. ಸ್ತುತ್ಯವಾದ ಏರ್ಪಾಡು. ಈ ಎರಡು ದಿನದ ಊಟದಿಂದ ಮೈಯಲ್ಲಿ ಸೇರಿದ ವಿಟ್ಯಾಮಿನ್ಸು ಖಂಡಿತವಾಗಿ ಸದಸ್ಯರಲ್ಲಿ ಉತ್ಸಾಹವನ್ನು ಹೆಚ್ಚಿಸಿರಬಹುದು. ಆದರೆ ಈ ಹೆಚ್ಚಿದ ಉತ್ಸಾಹವನ್ನು ಸದಸ್ಯರೆಲ್ಲ ಕಮಿಟಿಯ ಮಿಟಿಂಗಿನ ಕಾಲದ ಕೂಗಾಟದಲ್ಲಿ ಖರ್ಚುಮಾಡಿದರೆ ಕಾರ್ಯದರ್ಶಿಗಳು ಏನು ಮಾಡಬೇಕು? ಕಾರ್ಯದರ್ಶಿಗಳ ಕರ್ತವ್ಯ ಪರಿಪಾಲನೆ ಪ್ರಶಂಸನೀಯ! ಸದಸ್ಯರ ಮಂದಬುದ್ಧಿ ಪ್ರದೂಷಣೀಯ!

ನಿರಂಕುಶಾಃ ಕವಯಃ

ಕರ್ನಾಟಕ ಮಹಾರಾಷ್ಟ್ರಗಳು ಭಾರತಾಂತರ್ಗತ ರಾಷ್ಟ್ರಗಳಾದುದರಿಂದ ಅವೆರಡೂ ಸೋದರ ರಾಷ್ಟ್ರಗಳೆಂದೂ, ಕನ್ನಡಿಗರಿಗೂ ಮಹಾರಾಷ್ಟ್ರಿಗೂ ಕ್ರಮವಾಗಿ ಅವು ಮಾತೃಭೂಮಿಗಳಾದುದರಿಂದ ಅವೆರಡರ ನಡುವಿರುವ ಸಂಬಂಧವು ಅಕ್ಕತಂಗಿಯರದಾಗಿ ಇರುವುದೆಂದೂ ಇದುವರೆಗೆ ಎಲ್ಲರ ಕಲ್ಪನೆಯಿತ್ತು. ಆದರೆ ಕರ್ನಾಟಕದಲ್ಲಿರುವ ಮರಾಟಿ ಕವಿಗಳೊಬ್ಬರು ಮಹಾರಾಷ್ಟ್ರವನ್ನು ತಾಯಿನಾಡೆಂದೂ ಕರ್ನಾಟಕವನ್ನು ತಂದೆನಾಡೆಂದೂ ಹಾಡಿ, ಅವೆರಡೂ ದೇಶಗಳಲ್ಲಿ ದಾಂಪತ್ಯ ಸಂಬಂಧವನ್ನು ಸಾರಿರುವರು. ಕನ್ನಡನಾಡು ಮಹಾರಾಷ್ಟ್ರದೇವಿಗೆ ಗಂಡನೆಂದು ಮರಾಟಿಗರೇ ಒಪ್ಪಿಕೊಂಡುದಕ್ಕೆ ಕನ್ನಡಿಗರು ಹೆಮ್ಮೆಪಡಬೇಕೋ ವ್ಯಸನಪಡಬೇಕೋ? ತಿಳಿಯದಂತಹ ಮಾತಿನ ಮೇಲೆ ಮಲ್ಲಿನಾಥತನವನ್ನು ಹೇಗೆ ಮಾಡಬಹುದು? ಅಂತೂ ಕವಿಯು ತನ್ನ ಅನುಕೂಲಕ್ಕಾಗಿ ಅಕ್ಕ-ತಂಗಿಯರನ್ನು ಗಂಡ-

ಹೆಂಡತಿಯರನ್ನಾಗಿ ಮಾಡಿದ್ದಾನೆ. ಕವಿಗಳು ನಿರಂಕುಶರಲ್ಲವೇ?

ಪರಿಷತ್ತಿನ ಪರಿಶೋಧ

ಮೈಸೂರ ಸರಕಾರದವರು ಸಂಸ್ಥಾನದಲ್ಲಿಯ ಕನ್ನಡ ಪತ್ರಿಕೆಗಳ ಪ್ರಕಟನೆಯನ್ನು ತಡೆದಿದ್ದಾರೆ. ಇದನ್ನು ನೋಡಿ ಅತ್ಯಂತ ಸಂತೋಷದಲ್ಲಿ ಮುಳುಗಿದವರೆಂದರೆ ನಾವು ಒಬ್ಬರೆ ಎಂದು ಹೇಳಬೇಕಾಗುವುದು. ನಮಗೆ ಸಂತೋಷವಾದುದಕ್ಕೆ ಕಾರಣಗಳಿವೆ. ಕನ್ನಡ ಪತ್ರಿಕೆಗಳನ್ನೆ ತಡೆದಿದ್ದರಿಂದ ಕೆಳಗಿನ ಸಂಗತಿಗಳು ತರ್ಕಬದ್ಧವಾಗಿ ಸ್ಪಷ್ಟವಾಗುವುದಿಲ್ಲವೆ?

(ಅ) ಸಂಸ್ಥಾನದ ಪ್ರಜಾಭಾಷೆ ಕನ್ನಡವಾಗಿರಲೇ ಬೇಕು.

(ಆ) ಸಂಸ್ಥಾನದಲ್ಲಿ ಕನ್ನಡ ಅಕ್ಷರಜ್ಞರ ಸಂಖ್ಯೆ ದೊಡ್ಡದಿರಲೇ ಬೇಕು.

(ಇ) ಕನ್ನಡ ಪತ್ರಿಕೆಗಳ ಪ್ರಚಾರವೂ ಪ್ರಸಾರವೂ ಅತ್ಯಂತ ವಿಶಾಲವಾಗಿಯೂ ವ್ಯಾಪಕವಾಗಿಯೂ ಇರಲೇಬೇಕು.

ವಿ. ಸೂ:

ಈ ನಿರ್ಬಂಧದಿಂದ ಇನ್ನುಳಿದ ಅಲ್ಪಸ್ವಲ್ಪ ಕನ್ನಡದ ಅನಭ್ಯಾಸಿಗಳಿಗೆ ಕನ್ನಡ ಪತ್ರಿಕೆಗಳನ್ನು ಓದಲೇಬೇಕು ಎಂದು ಕುತೂಹಲವು ಉಂಟಾಗುವುದು ಖಂಡಿತ. ಹೀಗೆ ಸರಕಾರದವರು ತಮ್ಮ ಕೃತಿಯಿಂದ ಕನ್ನಡದ ಮಹಿಮೆಯನ್ನೆ ಹೊರಗೆಡವಿದ್ದುದರಿಂದ ಸಾಹಿತ್ಯಪರಿಷತ್ತು ಈ ಕೃತಿಯನ್ನು ನಿಷೇಧಿಸಿಲ್ಲ— ಎಂದು ನಾವೆಲ್ಲರೂ ಪರಿಷತ್ತಿನ ಚಾಣಾಕ್ಷತೆಗಾಗಿ ಹೆಮ್ಮೆಪಡಬಹುದಲ್ಲವೆ?

ನಮ್ಮ ನಿಷ್ಕರ್ಷೆ

‘ಮಂಗನು ಮಲ್ಲಿನಾಥನಾದನೆ, ಮಲ್ಲಿನಾಥನೆ ಮಂಗನಂತಿರುವನೆ? ಮಂಗನ ಮಲ್ಲಿನಾಥತನ ಎಂಬುದರಲ್ಲಿ ನಿಮ್ಮ ಉದ್ದೇಶವೇನು?’ ಎಂದು ಕೆಲವು ವಾಚಕರು ಆತುರತೆಯಿಂದ—ಇಲ್ಲವೆ ಮಂಗತನದ ಕುತೂಹಲದಿಂದ ಎನ್ನಿ—ಕೇಳಿದ್ದಾರೆ. ಈ ಪ್ರಶ್ನೆಗೆ ಉತ್ತರ ಕೊಡುವುದಗತ್ಯವೆ—ಎಂದು ನಮಗೆ ಸಂಶಯ. ಯಾಕೆಂದರೆ:— ಮಂಗನೆ ಮಲ್ಲಿನಾಥನಾದರೆ ಬರೆಯುವುದು ಅಶಕ್ಯ; ಮಲ್ಲಿನಾಥನೆ ಮಂಗನಾಗುವುದು ನಿಸರ್ಗತಃ ಅಶಕ್ಯ. ನಿಜವಿದ್ದ ಮಾತೆಂದರೆ, ಬರೆಯುವುದಕ್ಕೂ ಆ ಹೆಸರಿಗೂ ಸಂಬಂಧವಿಲ್ಲ. ಹಾಗಾದರೆ—? ಓದುಗರಿಗೂ ಆ ಹೆಸರಿಗೂ ಅಥವಾ, ಕೇಳಿದ ಪ್ರಶ್ನಕ್ಕೆ ಉತ್ತರವನ್ನು ಕೊಡಲೇಬೇಕೆಂಬ ರೂಢಿಯ ಅನುಕರಣವೆ ಬೇಡ.

ಶಾಸ್ತ್ರೀಯ ತರ್ಕ

ಮಹಾಭಾರತವನ್ನು ನಿರಂತರವಾಗಿ ಅಭ್ಯಾಸ ಮಾಡಿದ ಪರಿಶೋಧಕ ಪಂಡಿತರೊಬ್ಬರು ತಮ್ಮದೊಂದು ಸಿದ್ಧಾಂತವನ್ನು ಪ್ರಕಟನೆಗಾಗಿ ಕಳುಹಿದ್ದಾರೆ. ಅದು ಹೀಗೆ:— ಮಾನಸಶಾಸ್ತ್ರದ ದೃಷ್ಟಿಯಿಂದ ಕೌರವರು ದುಷ್ಟರಾದುದಕ್ಕೆ ಎರಡು ಕಾರಣಗಳಿವೆ ಮೊದಲನೆಯದು ವಿದುರನ ನೀತಿ. ಮಹಾತ್ಮನಾದ ವಿದುರನು ಎಷ್ಟೆಷ್ಟು ನೀತಿಪಾಠಗಳನ್ನು ಉಪದೇಶಿಸುತ್ತಿದ್ದನೊ ಅಷ್ಟಷ್ಟು ಕೌರವರಾಯನಾದ ದುರ್ಯೋಧನನಿಗೆ ಅಹಂಕಾರ ಬೆಳೆಯುತ್ತಿದ್ದಿತು. ಎಲ್ಲರನ್ನು ಬಿಟ್ಟು ತನ್ನನ್ನೆ ವಿದುರನು ಉಪದೇಶಿಸುವನೆಂದ ಮೇಲೆ ತನ್ನ ಬೆಲೆಯೂ ಮಹತ್ತ್ವವೂ ಹೆಚ್ಚಿನದೆಂದು ದುರ್ಯೋಧನನ ಅಭಿಪ್ರಾಯ. ಇದಲ್ಲದೆ ಎರಡನೆಯದೊಂದು ಕಾರಣವಿದ್ದಿತು. ಅದೆಂದರೆ, ಬ್ರಾಹ್ಮಣನಾದ ಅಶ್ವತ್ಥಾಮನ ಸ್ವಭಾವ. ಅಶ್ವತ್ಥಾಮನು ದುರ್ಯೋಧನನ ಪಕ್ಷವನ್ನು ವಹಿಸಿದನಷ್ಟೇ ಅಲ್ಲ, ಯುದ್ಧದಲ್ಲಿಯ ಕೊಲೆಗೆ ಕೈಯೆತ್ತಿ ಸಹಾಯ ಮಾಡುತ್ತಿದ್ದನು. ಬ್ರಾಹ್ಮಣನಾದ ಅಶ್ವತ್ಥಾಮನು ಹಿಂಸೆಯನ್ನು ಸಮರ್ಥಿಸುವನೆಂದ ಮೇಲೆ ಅದು ಅನುಕರಣೀಯ ಆಚರಣೆ.. ಎಂದು ದುರ್ಯೋಧನನ ಅಭಿಪ್ರಾಯವಾಯಿತು. ಈ ಎರಡು ಕಾರಣಗಳಿಗಾಗಿ ದುರ್ಯೋಧನನು ದುಷ್ಟನಾದನು. ಇಂತಹ ಕಾರಣಗಳಿಗೆ ಮಾನಸಶಾಸ್ತ್ರದಲ್ಲಿ ಪಾರಿಭಾಷಿಕವಾಗಿ ‘ವಿದುರಾಶ್ವತ್ಥ’ ಎಂದು ಹೆಸರಿದೆ!

ಏಕೀಕರಣ ಬೇಕು ಯಾರಿಗೆ?

೧: “ಈ ಅಮೃತಕುಂಭದಿಂದ ತಾಯಿಯನ್ನು ಬದುಕಿಸಬಹುದು ಆದರೆ....ಇವಳದು ಮೊದಲಿನಿಂದಲೂ ಅಣ್ಣನ ಮೇಲೆ ಪ್ರೀತಿ!”

೨: “ಈ ಅಮೃತಕುಂಭದಿಂದ ಕನ್ನಡತಾಯಿ ಬದುಕಬಹುದು; ಆದರೆ .... ಈಕೆ ತಮ್ಮನ ಬಲವನ್ನೆ ಬೆಳೆಯಿಸುವವಳು!”

ಹಳ್ಳಿಗಳಲ್ಲಿ ಆಯುರ್ವೇದ

ಪಂಡಿತ ತಾರಾನಾಥ

(ಪ್ರಾಸ್ತಾವಿಕ ಲೇಖನ)

ಆಯುರ್ವೇದವು ಬರೀ ಚಿಕಿತ್ಸಾಪದ್ಧತಿಯಲ್ಲ; ನಮ್ಮ ದೊಡ್ಡ ಜನಾಂಗದ ಸಂಸ್ಕೃತಿಯದು. ಆಯುರ್ವೇದದ ತತ್ತ್ವಗಳೂ ಉಪಾಯಗಳೂ ಕೇವಲ ಚಿಕಿತ್ಸಾಲಯಕ್ಕೆ ಸೇರಿದುವಲ್ಲ; ಅಡಿಗೆಯಮನೆಗೂ, ಪಾಠಶಾಲೆಗೂ, ಸಂಸಾರದ ಒಂದೊಂದು ಅಂಗಕ್ಕೂ ಸಂಬಂಧಿಸಿದುವುಗಳಾಗಿವೆ. ಇಂತಹ ಆಯುರ್ವೇದದ ಪರಿಚಯ ನಾಡಿನ ತಾಯಿಯಾದ ಹಳ್ಳಿಯ ಜನತೆಗೆ ಬೇಕಾಗಿಲ್ಲವೇ?

ಇಲ್ಲಿ ಮೊದಲು ಎರಡು ವಿಷಯಗಳನ್ನು ತಿಳಕೊಳ್ಳಬೇಕಾಗಿದೆ. ಳ್ಳಿ ಎಂದರೇನು? ಆಯುರ್ವೇದ ಎಂದರೇನು? ಹಳ್ಳಿಗಳು ಂದರೆ ಬರೀ ಧನಾಢ್ಯರ ಹೊಲಗದ್ದೆಗಳನ್ನು ಮಾಡಿ, ಸಾಕಷ್ಟು ಾಳು ಕೂಳು ಸಹ ಬೇಡದೆ ಬದುಕುವ ದ್ವಿಪಾದ ಪಶುಗಳ ೀಡಲ್ಲ. ಹಳ್ಳಿಗಳು ಎಂದರೆ ಅಜ್ಞಾನ ಅವಿವೇಕಗಳ ತವರು ಮನೆಯಲ್ಲ. ಹಳ್ಳಿಗಳು ಎಂದರೆ ರೋಗ ರುಜಿನ ನಿರಕ್ಷರತೆಗಳಿಂದ ಕ್ಕಿಲ್ಲದೆ ಗತಿ ಕಾಣದೆ ಕೊಳೆಯುತ್ತಿರುವ ಜನಸಮುದಾಯದ ್ಮಶಾನಮಾರ್ಗಗಳಲ್ಲ. ಅವು ಧನಾಢ್ಯರ ಅಧಿಕಾರಿಗಳ ಪಟ್ಟಣ ಳಿಗೆ ಆಧಾರ, ಇಡೀ ಭರತವರ್ಷದ ಜೀವ ಜೀವಾಳ, ಅಷ್ಟೇ ಏಕೆ ಂಗ್ಲದೇಶದ ಸಾಕುತಾಯಿ ಕೂಡ– ಎಂಬುದನ್ನು ಮೊದಲು ಳಕೊಳ್ಳಬೇಕು.

ಹಳ್ಳಿಗಳನ್ನು ಕೆಡಿಸಿ ದೇಶಕೆಟ್ಟಿತು. ಅವುಗಳನ್ನು ಉದ್ಧರಿಸಿಯೇ ೀಶವೂ ಮುಂದಕ್ಕೆ ಬರಬೇಕು. ಈ ಸತ್ಯಕ್ಕೆ ತಕ್ಕ ಮಾನವನ್ನು ಾರ್ಯತಃ ಕೊಡದೆ, ಶಾಸನ ಸಭೆಗಳಲ್ಲಿ ಕೂತು ಎಷ್ಟು ಕಾನೂನು ಾಯಿದೆಗಳನ್ನು ಮಾಡಿದರೂ ಅವು ವ್ಯರ್ಥ; ಪಟ್ಟಣಗಳಲ್ಲಿದ್ದು ಷ್ಟು ವ್ಯಾಖ್ಯಾನಗಳನ್ನು ಕೊಟ್ಟರೂ ಅವು ಬರೀ ಶಬ್ದಗಳ ೀಲುವೆಚ್ಚ.

ಹಳ್ಳಿಗಳ ಸ್ಥಿತಿ-ಗತಿ ಸ್ಥಾನ-ಮಾನಗಳನ್ನು ಕುರಿತು ಇರುವ ತಪ್ಪು ಳುವಳಿಕೆಯನ್ನು ಕಿತ್ತೊಗೆಯುವುದು ಹೇಗೆ ಆವಶ್ಯಕವೋ ಾಗೆಯೇ ಆಯುರ್ವೇದವನ್ನು ಕುರಿತು ಜನರಿಗಿರುವ ತಪ್ಪು ಳುವಳಿಕೆಯನ್ನೂ ತೆಗೆದೊಗೆಯಬೇಕು. 'ಆಯುರ್ವೇದ' ಎಂದರೆ ಂದ ರೋಗಗಳನ್ನು ನಿವಾರಿಸುವ ಉಪಾಯಗಳ ಸಂಗ್ರಹ ಎಂದು ಜನಸಾಮಾನ್ಯದ ತಿಳುವಳಿಕೆ! ಅದು ಹಾಗಲ್ಲ; ರೋಗಗಳೇ ಾರದಂತೆ ಅನುಸರಿಸಬೇಕಾದ ತತ್ತ್ವಸೂತ್ರಗಳ ಭಾಂಡಾರವಿದು. ರೋಗ ನಿವಾರಣೆಯ ಉಪಾಯಗಳಿಗೆ ಅದರಲ್ಲಿರುವ ಸ್ಥಾನ ಎರಡನೆಯದು. ಆರೋಗ್ಯಸೂತ್ರಗಳ ಶಿಕ್ಷಣಕ್ಕೇ ಅದರಲ್ಲಿ ಮೊದಲ ಸ್ಥಾನ.

ಪಾಶ್ಚಿಮಾತ್ಯ ಚಿಕಿತ್ಸಾಪದ್ಧತಿಯಲ್ಲಿ ನಿತ್ಯಜೀವನದಲ್ಲಿ ತಪ್ಪದೆ ನಡೆಯಿಸತಕ್ಕ ಆರೋಗ್ಯಸೂತ್ರಗಳಿಗೆ ಮೊನ್ನೆ ಮೊನ್ನೆ ಒಂದು ಅಂತಸ್ತು ಬಂತು. 'ಹಲ್ಲುಜ್ಜಿ ಬಾಯಿತೊಳೆದ ಮೇಲೆಯೇ ಹಲ್ಲು ಬಾಯಿಗಳನ್ನು ಉಣ್ಣಲಿಕ್ಕೆ ಉಪಯೋಗಿಸಬೇಕು' ಎಂಬುದನ್ನು ಅವರಲ್ಲಿ ಮೊನ್ನೆಮೊನ್ನೆಯೇ ಕಲಿತರು. ಉಂಡ ಮೇಲೂ ಅವುಗಳನ್ನು ಸ್ವಚ್ಛವಾಗಿ ತೊಳೆಯಬೇಕು ಎಂಬುದನ್ನು ಅವರಲ್ಲಿ ಬಹುಮಂದಿ ಇನ್ನೂ ಕಲಿಯಲಿಲ್ಲ. ನಿತ್ಯಸ್ನಾನದ ಉಪಯೋಗವನ್ನು ಅವರಲ್ಲಿ ಅನೇಕರು ಮೊನ್ನೆ ಮೊನ್ನೆಯೇ ಕಲಿತರು. ವ್ರತ ನಿಯಮ–ಉಪವಾಸಾದಿಗಳ ತತ್ತ್ವಪ್ರಯೋಗಗಳು ಅವರ ತಲೆಯಲ್ಲಿ ಇನ್ನೂ ಪ್ರವೇಶಿಸಿಲ್ಲ. ಋತುಗಳಿಗೂ ರೋಗಗಳಿಗೂ ಇರುವ ಸಂಬಂಧ, ರಸ (ಉಪ್ಪು. ಹುಳಿ, ಖಾರ ಇತ್ಯಾದಿ) ಗಳಿಗೂ ರೋಗಗಳಿಗೂ ಇರುವ ಸಂಬಂಧ; ಋತುಗಳಿಗೂ ದೇಹ ಪ್ರಕೃತಿಗೂ, ಅದಕ್ಕೂ ರೋಗಗಳಿಗೂ, ಅವುಗಳಿಗೂ ರಸ-ಆಹಾರ-ವಿಹಾರಾದಿಗಳಿಗೂ, ಇವುಗಳಿಗೂ ಮನೋವೃತ್ತಿ ಪ್ರವೃತ್ತಿಗಳಿಗೂ, ಇವುಗಳಿಗೂ ಆರೋಗ್ಯ–ಅನಾರೋಗ್ಯಗಳಿಗೂ ಇರುವ ನಿಕಟ ಸಂಬಂಧವನ್ನು ಕುರಿತು ಅವರ ಚಿಕಿತ್ಸಾಗ್ರಂಥಗಳೇ ಸಾಕಷ್ಟು ವಿವೇಚನೆ ಮಾಡಿಲ್ಲ. ! ತತ್ತ್ವವನ್ನೇ ಗಮನಿಸದೆ ಇದ್ದ ಕಡೆ ಅದಕ್ಕೆ ತಕ್ಕಂತೆ ಆಚರಣವಾದರೂ ಎಲ್ಲಿಂದ ಬರಬೇಕು?

ಆದರೆ, ಆಯುರ್ವೇದವು ಹಾಗಿಲ್ಲ, ಅದರ ಮಹತ್ತ್ವವು ಹೀಗಿದೆ; ಅದಕ್ಕೆ (೧) ವ್ಯಕ್ತಿಯು ಸ್ವತಂತ್ರವಾಗಿಲ್ಲ, ವ್ಯಕ್ತಿ ತನ್ನೊಳಗಣ ಮನೋವೃತ್ತಿಗೂ ಹೊರಗಣ ಪರಿಸ್ಥಿತಿಗೂ ಅಧೀನವಾಗಿದೆ,

(೩) ಆದುದರಿಂದ ಇವೆರಡರ ಪರಿಣಾಮವನ್ನು ಪರೀಕ್ಷಿಸಿ ಯೋಗ್ಯ ವಾದುವುಗಳೊಡನೆ ಹೊಂದಿಕೊಳ್ಳುವದೇ ಆರೋಗ್ಯ ಅಥವಾ ಸಾಮ್ಯಾವಸ್ಥೆ ಎಂದು ಅದು ಒತ್ತಿ ಹೇಳುತ್ತದೆ. (೪) ಈ ಹೊಂದಿಕೆಯ ತತ್ತ್ವಗಳು ಮತ್ತು ಉಪಾಯಗಳು ಚಿಕಿತ್ಸಾಲಯಕ್ಕೆ ಸೇರಿಲ್ಲ; ಅಡಿಗೆಮನೆಗೆ ಪಾಠಶಾಲೆಗಳಿಗೆ ಸೇರಿವೆ, ಸಂಸಾರಕ್ಕೆ ಸೇರಿವೆ ಎಂದು ಅದು ಸಾರುತ್ತದೆ. (೫) ಇವನ್ನು ಆಯುರ್ವೇದವು ಎಷ್ಟೋ ಸೂಕ್ಷ್ಮರೀತಿಗಳಿಂದ ನಮ್ಮ ಜನರ ನಿತ್ಯ ಜೀವನದಲ್ಲಿಯೇ ಸೇರಿಸಿ ಹಾಕಿಬಿಟ್ಟಿದೆ. (ನಮ್ಮ ಇಂದಿನ ನಿತ್ಯ ಜೀವನವು ಪಾಶ್ಚಿಮಾತ್ಯ ಸಂಪರ್ಕದಿಂದಲೇ ಆಗಲಿ, ಸಾಮಾನ್ಯ ಮಾನವನ ಸ್ವಾರ್ಥಮದಾಂಧತೆಯಿಂದಲೇ ಆಗಲಿ, ಎಷ್ಟೇ ವಿಕಾರ ಹೊಂದಿದರೂ, ಅದರಲ್ಲಿ ಮೇಲೆ ಹೇಳಿದ ವಿಷಯಗಳ ಅಂಶವು ಇನ್ನೂ ಧಾರಾಳವಾಗಿದೆ). ಅದಕ್ಕೇ ಆಯುರ್ವೇದವು ಬರೀ ಚಿಕಿತ್ಸಾಪದ್ಧತಿಯಲ್ಲ, ನಮ್ಮ ದೊಡ್ಡ ಜನಾಂಗದ ಸಂಸ್ಕೃತಿ ಎನ್ನುವದು. ಜನರ ನಿತ್ಯಜೀವನದಲ್ಲಿ ಸಹಜ ಜೀವನದಲ್ಲಿ ರಕ್ತ ಮಾಂಸಾದಿಗಳಲ್ಲಿ ಒಂದಾಗಿ ಹೋದುದಕ್ಕೇ ಅಲ್ಲವೆ ಅವರ ಸಂಸ್ಕೃತಿ ಎನ್ನಬೇಕು? ಸಂಸ್ಕೃತಿ ಎಂದರೆ ಬುದ್ಧಿಗೆ ಚೆಂದವಾದದ್ದೋ, ಸಂಸಾರದಲ್ಲಿ ಒಂದಾದದ್ದೋ ?

ಆಯುರ್ವೇದ ಚಿಕಿತ್ಸಾಶಾಸ್ತ್ರವಲ್ಲ; ಆಯುರ್ವೇದ (ಆಯುಃ+ ವೇದ) ಆಯುಷ್ಯ ಸರ್ವಸ್ವದ ಒಂದೊಂದು ಭಾಗಕ್ಕೂ ಅದರ ವಿಕಾಸಕ್ಕೂ ಸಂಬಂಧಪಟ್ಟ ವಿಷಯವು. ಅದಕ್ಕೆ ತನು–ಮನಸ್ಸು–ಪರಿಸ್ಥಿತಿಗಳೂ ಒಂದೇ ಮಾಲೆಯ ಮಣಿಗಳೇ. ಇವೆಲ್ಲವುಗಳ ಸಮರಸ ಜ್ಞಾನಾನುಷ್ಠಾನಗಳಿಂದ ಆಯುಷ್ಯವನ್ನು ಸರ್ವಾಂಗ ಪರಿಪೂರ್ಣವಾಗಿ ಅರಳಿಸುವದೇ ಅದರ ಧ್ಯೇಯ ಮತ್ತು ಸೂತ್ರ. ಆಯುರ್ವೇದ ಶಾಸ್ತ್ರ ಎಂದರೆ ಆಯುರ್ವೇದಜೀವನ; ಆಯುಷ್ಯಕ್ಕೆ ಸಂಬಂಧಪಟ್ಟ ಸಕಲ ತತ್ತ್ವಗಳನ್ನು ಕಲಿತು ಕಲೆತು ಬದುಕುವ ಹಾದಿ.

ಸಂಸ್ಕೃತಿ ಮತ್ತು ಶಿಕ್ಷಣ

ಸಂಸ್ಕೃತಿ ಎಂದರೆ ವ್ಯಕ್ತಿ– ಸಮಾಜಗಳು ತಮ್ಮ ತಮ್ಮ ವಾತಾವರಣದಲ್ಲಿ ತಮ್ಮ ತಮ್ಮ ವೃತ್ತಿಪ್ರವೃತ್ತಿಗಳ ಗತಿಕರ್ಮಗಳಿಂದ ಸ್ವಾಭಾವಿಕವಾಗಿ ಸಂಪಾದಿಸಿ ಮೈಗೂಡಿಸಿಕೊಂಡ ಅನುಭವಶಕ್ತಿ. ಅದರಲ್ಲಿ ಆಚರಣದಿಂದುಂಟಾದ ಅನುಭವವೇ ಹೆಚ್ಚು, ಅಲ್ಲದೆ ಬರೀ ವಿಚಾರಗಳ ತೀರ್ಮಾನ ಅಷ್ಟಿಲ್ಲ. ಅದು ಒಂದು ವೇಳೆ ವಿಚಾರದ ಒರೆಗಲ್ಲಿಗೆ ಹತ್ತದೆಯೂ ಇರಬಹುದು; ಆದರೂ ಅಷ್ಟಕ್ಕಾಗಿ ಮಾತ್ರ ಸ್ವಾನುಭವವು ಅದನ್ನು ಬಹಿಷ್ಕರಿಸಲಿಕ್ಕಿಲ್ಲ, ಅಲ್ಲಗಳೆಯಲಿಕ್ಕಿಲ್ಲ– ಹಾಗೆ ಮಾಡುವದು ಸಾಧ್ಯವಾಗಲಿಕ್ಕೂ ಇಲ್ಲ– ಯಾಕೆಂದರೆ ಸ್ವಾನುಭವವು ಎಲ್ಲ ವಿಚಾರಗಳಿಗಿಂತಲೂ ಬಲವಾದುದು. ವಿಚಾರಕ್ಕೆ ಸರಿಹೋಗುವ ಮಾತಿಗಿಂತಲೂ, ನಮ್ಮ ಪ್ರಕೃತಿಗೆ ಒಗ್ಗಿದ ಅನುಭವವೇ ಹೆಚ್ಚಿನ ಬಲವುಳ್ಳದ್ದು ಎಂಬುದು ಸ್ವತಸ್ಸಿದ್ಧವೇ ಅಲ್ಲವೆ?

ಈಗ ಶಿಕ್ಷಣವೆಂದರೇನು? ಅದು ಹೇಗಿರಬೇಕು? ಎಂಬುದನ್ನು ನೋಡೋಣ. 'ಜನಾಂಗದ ಜೀವನಕ್ಕೇ ಮೈಗೂಡಿ ಅವ್ಯಕ್ತವಾಗಿ ಹೋದ ಗುಣ–ಶಕ್ತಿಗಳನ್ನು ವ್ಯಕ್ತಿಯಲ್ಲಿ ವ್ಯಕ್ತಪಡಿಸುವ ಉಪಾಯವೇ ಶಿಕ್ಷಣ'' ಎಂದು ಹಲವು ಶಿಕ್ಷಣವಿಧಾನ ವಿಶಾರದರ ಅಭಿಪ್ರಾಯ, ಶಿಕ್ಷಣವು ಒಳಗಿದ್ದದ್ದನ್ನು ಹೊರಗೆಡಹಬೇಕೇ ಹೊರತು ಹೊರಗಿನದನ್ನು ಒಳಗೆ ತುಂಬಿಸುವ ಕೆಲಸಕ್ಕೆ ಹೋಗಬಾರದು. ಹಾಗೆ ತುಂಬಿಸಿದ ತಲೆಗಳಿಗೆ "ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ'' ಎಂಬ ದಾಸರ ವಚನವು ಸರಿಯಾಗಿ ಒಪ್ಪುತ್ತದೆ. ಅದಕ್ಕೆ ಬದಲಾಗಿ, ಕಲಿಸಿದ್ದು ಕಲಿಯುವವನ ಹೃದಯವನ್ನೂ ಅಂತಃಶಕ್ತಿಗಳನ್ನೂ ಅರಳಿಸುವ ಉಪಾಯವಾದರೆ ಅದು ಉತ್ತಮ ಬೀಜವನ್ನು ಹೂತು ನೀರೆರೆದು ಮೊಳಕೆಯನ್ನು ಹೊರಡಿಸಿದಂತೆಯೇ. ಮುಂದೆ ಮರವಾಗಿ ಎಲೆ ಹೂ ಹಣ್ಣುಗಳಿಂದ ಮೆರೆಯುವ ಶಕ್ತಿಯು ಆ ಮೊಳಕೆಯಲ್ಲಿಯೇ ಇದೆಯಲ್ಲವೆ? ಶಿಕ್ಷಣವೂ ಹಾಗೆಯೇ ಸಂಪೂರ್ಣ ಜೀವನದ ಮೊಳಕೆಯನ್ನು ಜೀವಸ್ಥಾನದಿಂದ ಎಚ್ಚರಿಸಿ ಭೂಗರ್ಭದಿಂದ ಹಿಡಿದೆತ್ತಿ ಬೆಳೆಸುವದಾಗಿರಬೇಕಲ್ಲವೆ? ಅಹುದೆಂದರೆ, ಭಾರತೀಯನಿಗೂ ಆಯುರ್ವೇದ ವಿದ್ಯೆಯು ಪ್ರಾಥಮಿಕಶಿಕ್ಷಣದ ಒಂದು ಮುಖ್ಯಾಂಶವಾಗಿರಬೇಕು. ಅದೆಂಥ ಆಯುರ್ವೇದ ಎಂಬುದನ್ನು ಮೊದಲೇ ವಿವರಿಸಲಾಗಿದೆ. ಅದರ ನಿಜವ್ಯಾಖ್ಯೆಯನ್ನು ಹೇಳಿದ್ದಾಗಿದೆ.

ಇಂಡಿಯಾದೇಶದ ಆಧಾರವಾದ ಶಕ್ತಿಗಳಿಗೆಲ್ಲ; ತನುಮನಸ್ಸುಗಳ ಸುಖವಿಕಾಸಕ್ಕೂ ಆಧಾರವಾದ ಆಯುರ್ವೇದ ಶಿಕ್ಷಣವನ್ನು ಕೊಡುವದು ಆವಶ್ಯಕ ಎಂಬುದನ್ನು ಇನ್ನು ಬೇರೆಯಾಗಿ ಸಾಧಿಸುವದು ಅನಾವಶ್ಯಕವೇ ಅಲ್ಲವೆ? *

* ಆ ಶಿಕ್ಷಣವನ್ನು ಹೇಗೆ ಕೊಡಬೇಕೆಂಬುದನ್ನು ಮುಂದಿನ ಲೇಖದಲ್ಲಿ ವಿವರಿಸಲಾಗುವದು. ಲೇ.

ಮುಂದಿನ ಸಂಚಿಕೆಯಲ್ಲಿ

ಶಾಂಗ–ಕಿ–ಶೇಕ (ಚೀನಾದ ಚೈತನ್ಯಶಕ್ತಿ)
"ಚಾಡಿಯ ಚಾಣಕ್ಯ"

ದಿವಂಗತ (ಏಕಾಂಕ ನಾಟಕ)
ಪ್ರೊ. ಎನ್. ಎಮ್. ಕುಲಕರ್ಣಿ, ಎಂ. ಎ., ಬನಾರಸ

ಆತಿಥ್ಯ (ಸಚಿತ್ರ ನಾಟ್ಯಛಟಾ)
ಶ್ರೀ. ಕೌಜಲಗಿ ಹನುಮಂತರಾಯರು, ಎಲ್ಎಲ್. ಬಿ.

ಖಲಿಲ್‌ಗಿಬ್ರಾನನ ಕೃತಿಯ ರುಚಿ

'ರುಚಿಗಾರ' ಸಂಗ್ರಹಿಸಿದುವು

ಖಲಿಲ್‌ಗಿಬ್ರಾನನು ಸಿರಿಯಾ ದೇಶದಲ್ಲಿ ಮಿಂಚಿ ಮರೆಯಾದ ನೂತನ ಮಾರ್ಗದ ಕವಿ. ಅವನ ಅನೇಕ ಗ್ರಂಥಗಳು ಇಂಗ್ಲಿಷ್ ಭಾಷೆಗೆ ಪರಿವರ್ತಿತವಾಗಿವೆ. ಇಲ್ಲಿ ಕೊಟ್ಟ ಮೂರು ಭಾವಕಥೆಗಳು "The Wanderer" ಎಂಬ ಹೆಸರಿನ ಆತನ ಕೃತಿಯೊಂದರಿಂದ ಆಯ್ದುವುಗಳು.

ಹುಚ್ಚು ಹುಡುಗ

ಒಮ್ಮೆ ಹುಚ್ಚರ ಆಸ್ಪತ್ರೆಯೊಂದರ ಕೈತೋಟದಲ್ಲಿ ಒಬ್ಬ ತರುಣನನ್ನು ನೋಡಿದೆ. ಅವನ ಮುಖವು ಕಳೆಗುಂದಿದುದಾಗಿದ್ದರೂ ಮತ್ತೆ ಮತ್ತೆ ನೋಡಬೇಕೆಂಬ ಕುತೂಹಲವನ್ನುಂಟು ಮಾಡುವಂತಹದಾಗಿತ್ತು. ನಾನು ಅವನ ಬಳಿಯಲ್ಲಿಯೆ ಬೆಂಚಿನಮೇಲೆ ಕುಳಿತೆ. "ನೀನೇತಕ್ಕಯ್ಯಾ ಇಲ್ಲಿ?" ಎಂದು ಕೇಳಿದೆ.

ಅವನು ಬೆರಗುಗಣ್ಣುಗಳಿಂದ ನನ್ನನ್ನು ನೋಡಿದ; ಮಾತನಾಡಲು ತೊಡಗಿದ:

"ಎಂತಹ ಮಾತನ್ನು ಕೇಳುತ್ತಿದ್ದೀರಿ ನೀವು! ಹೀಗೆ ಯಾರೂ ಕೇಳುತ್ತಿರುವುದಿಲ್ಲ. ಆದರೂ ತಮ್ಮ ಪ್ರಶ್ನೆಗೆ ನಾನು ಉತ್ತರವನ್ನು ಕೊಡುತ್ತೇನೆ. ಇಲ್ಲಿ ಕೇಳಿ! ನನ್ನ ತಂದೆಯ ಇಚ್ಛೆಯೆಂದರೆ ನಾನು ಸಂಪೂರ್ಣವಾಗಿ ತನ್ನಂತಾಗಬೇಕೆಂದು. ನನ್ನ ಚಿಕ್ಕಪ್ಪನ ಬಯಕೆಯೇನೆಂದರೆ ನನ್ನನ್ನು ತನ್ನಂತೆಯೆ ಪಳಗಿಸಬೇಕೆಂದು. ಹೆಸರುವಾಸಿಯನ್ನು ಹೊಂದಿದ ತನ್ನ ತಂದೆಯ ಪಡಿಯಚ್ಚು ನಾನಾಗಬೇಕೆಂದು ನನ್ನ ತಾಯಿಯ ಪ್ರಯತ್ನ. 'ನೋಡು, ನಾವಿಕಕರ್ಮವನ್ನು ಮಾಡುವ ನನ್ನ ಗಂಡನನ್ನು ನೋಡು! .. ಹೇಗೆ ಹಗಲಿರುಳೂ ಕಡಲ ಪಯಣ ಮಾಡುತ್ತಿರುತ್ತಾನೆ. ಅವನಂತೆಯೆ ನೀನೂ ಏತಕ್ಕೆ ಆಗಬಾರದು?' ಎಂದು ನನ್ನ ಅಕ್ಕನ ಉಪದೇಶ. ಇನ್ನು ನಮ್ಮ ಅಣ್ಣನ ಮನಸ್ಸೆಂದರೆ ಆತನಂತೆಯೆ ನಾನೂ 'ಗರುಡಿಯಾಳು' ಆಗಬೇಕೆಂದು.

ಹೀಗೆಯೆ ನನ್ನ ಶಿಕ್ಷಕರು, ಸಂಗೀತಾಚಾರ್ಯರು, ಶಾಸ್ತ್ರಿಗಳು, ತರ್ಕತೀರ್ಥ—ವ್ಯಾಕರಣತೀರ್ಥರು, ವೇದಾಂತಶಿರೋಮಣಿಗಳು ಇವರೆಲ್ಲರೂ, ನನ್ನನ್ನು ತಮ್ಮ ತಮ್ಮ ಪ್ರತಿಬಿಂಬವನ್ನಾಗಿಸಬೇಕೆಂದು ನೊಂಟಬಿಗಿದೇ ಹೊರಟಿದ್ದರು.

ಕೊನೆಗೆ ನಾನು ಇಲ್ಲಿಗೆ ಬಂದೆ. ಇಲ್ಲಿ ಮಾತ್ರ ಸ್ವಲ್ಪ ಜಾಣತನಕ್ಕೆ ಆಸ್ಪದವಿದ್ದಂತೆನಿಸುತ್ತಿದೆ. ಏತಕ್ಕೆಂದರೆ ಇಲ್ಲಿ ಕನಿಷ್ಠ ಪಕ್ಷ ನಾನು ನಾನೇ ಆಗಿ ಉಳಿಯಲಿಕ್ಕೆ ಬರುವಂತಿದೆ ನನಗೆ."

ಇಷ್ಟು ಮಾತನಾಡಿ ತರುಣನು ಸುಮ್ಮಗಾದನು; ಹಠಾತ್ತಾಗಿ ನನ್ನ ಕಡೆಗೆ ಹೊರಳಿ ಕೇಳಿದನು. "ನಾನೊಂದು ಮಾತನ್ನು ಕೇಳಲೇ? ತಾವು ಇಲ್ಲಿಗೆ ಬಂದುದಕ್ಕೆ ಕಾರಣವೇನು? ಶಿಕ್ಷಣವೋ? ಹಿತಚಿಂತಕರ ಉಪದೇಶವೋ?"

"ನಾನು ಬಂದುದಕ್ಕೆ ಇನ್ನಾವ ಕಾರಣವೂ ಇಲ್ಲ: ಬರೀ ಇದನ್ನು ನೋಡಿ ಹೋಗುವುದಕ್ಕೆಂದು ಬಂದಿದ್ದೇನೆ" ನಾನು ಹೇಳಿದೆ.

ಬಳಿಕ ತರುಣನು ಮಾತನಾಡಿದ;

"ಓಹೋ! ಹೀಗೆಯೇನು? ಸರಿಸರಿ! ಈ ಗೋಡೆಯಿಂದಾಚೆಗಿರುವ ಹುಚ್ಚರ ಆಸ್ಪತ್ರೆಯಲ್ಲಿ ಇರುವವರೆಂದು ಕಾಣುತ್ತದೆ ನೀವು!"

* * *

ಜಾಣನಾಯಿ

ಪೌರ್ಣಿಮೆಯ ಪೂರ್ಣಚಂದ್ರನು ನಗರದ ಮೇಲೆಲ್ಲ ತನ್ನ ತಣ್ಣದಿರುಗಳನ್ನು ತೂರುತ್ತಲಿದ್ದ. ಬೆಳುದಿಂಗಳಿನ ಮಲ್ಲಿಗೆಯ ಮಳೆ ಎಡೆಬಿಡದೆ ಬೀಳುತ್ತಲಿದೆಯೆಂಬಂತಿದ್ದಿತು. ಆಗ ನಗರದಲ್ಲಿಯ ನಾಯಿಗಳೆಲ್ಲ ಕೂಡಿ ಚಂದ್ರನನ್ನು ನೋಡಿ ಬೊಗಳಲು ತೊಡಗಿದುವು. ಒಂದೆ ಒಂದು ನಾಯಿಯು ಮಾತ್ರ ಬೊಗಳಲಿಲ್ಲ; ಮಿಕ್ಕ ನಾಯಿಗಳಿಗೆಲ್ಲ ಬುದ್ಧಿ ಹೇಳಲು ತೊಡಗಿತು:

"ಗೆಳೆಯರೆ ಮೌನದೇವತೆ ಮಲಗಿ ನಿದ್ದೆಮಾಡುತ್ತಿದ್ದಾಳೆ. ಅವಳನ್ನು ನಿದ್ದೆಗೆಡಿಸಿ ಎಬ್ಬಿಸಬೇಡಿ! ಅಲ್ಲದೆ ಎಡೆಬಿಡದ ನಿಮ್ಮ ಈ ಬೊಗಳಿಕೆಯಿಂದ ಚಂದ್ರನು ಕಳಚಿ ಕೆಳಕ್ಕುರುಳುವಂತೆ ಮಾಡಬೇಡಿ!!"

ಈ ಜಾಣನಾಯಿಯ ಉಪದೇಶವು ಎಲ್ಲ ನಾಯಿಗಳಿಗೂ ಸರಿಯೆನಿಸಿತು. ಬೊಗಳುವುದನ್ನು ಬಿಟ್ಟು ಗಂಭೀರವಾದ ಶಾಂತಿಯನ್ನು ತಳೆದುನಿಂತುವು. ಮಿಕ್ಕೆಲ್ಲ ನಾಯಿಗಳು ಮೌನವಾಗಿ ಇದ್ದರೂ ಅವೆಲ್ಲಕ್ಕೂ ಜಾಣತನವನ್ನು ಕಲಿಸಲು ಬಂದ ನಾಯಿಯೊಂದು ಮಾತ್ರ ರಾತ್ರಿಯುದ್ದಕ್ಕೂ ಕೂಗಿಯೆ ಕೂಗುತ್ತಿತ್ತು.

"ಗೆಳೆಯರೆ, ಶಾಂತರಾಗಿ, ಸಮಾಧಾನಿಗಳಾಗಿ!"

* * *

ಕನಸಿಗ

ಒಂದು ಸಲ ಒಬ್ಬ ಕನಸೊಂದನ್ನು ಕಂಡ. ಕನಸು ತಿಳಿದು ಎಚ್ಚತ್ತೊಡನೆಯೆ ಅವನು ಒಬ್ಬ ಜಾಣ ಮನುಷ್ಯನ ಬಳಿಗೆ ಹೋದ; "ನಾನು ಇಂತಹದೊಂದು ಕನಸನ್ನು ಕಂಡೆ; ಆ ಕನಸಿನ ಅರ್ಥವೇನು ಒಡೆದು ಹೇಳುತ್ತೀರಾ?" ಎಂದು ಅಂಗಲಾಚಿ ಕೇಳಿದ.

ಆಗ ಜಾಣ ಮನುಷ್ಯ ಹೇಳಿದ:

"ಇದು ನೋಡು! ನೀನು ಎಚ್ಚತ್ತಿರುವಾಗ ಏನಾದರೂ ಕನಸನ್ನು ಕಂಡರೆ ಅದನ್ನು ನನಗೆ ಹೇಳುತ್ತಿರು; ಅದರ ಅರ್ಥವನ್ನು ಖಂಡಿತವಾಗಿ ಒಡೆದು ಹೇಳುತ್ತೇನೆ. ನಿದ್ದೆಯಲ್ಲಿರುವಾಗ ನೀನು ಕಂಡ ಕನಸುಗಳಿಗೆ ಅರ್ಥಹಚ್ಚುವುದಕ್ಕೆ ನನ್ನ ಬುದ್ಧಿಯೂ ಅಸಮರ್ಥವಾಗಿದೆ; ನಿನ್ನ ಕಲ್ಪನೆಯೂ ಅಸಮರ್ಥವಾಗಿದೆ. ಆದುದರಿಂದ ನೀನು ಈ ನಿನ್ನ ಇಚ್ಛೆಯನ್ನು ಬಿಟ್ಟುಬಿಡುವುದೇ ಲೇಸು!"

ಕಸಪೊರಕೆ

ಶ್ರೀ. 'ಅಂಬಿಕಾತನಯದತ್ತ'

೧

ಕಸಪೊರಕೆ ಕಸಪೊರಕೆ !
ಧ್ವಜವೆತ್ತಿ ಮೇಲಕ್ಕೆ
ಹೊರಟಿಹುದು ಈ ಜಗದ ಶುದ್ಧಿಕರಣಕ್ಕೆ ;
ಇದು ಅಹಿಂಸಾಯುದ್ಧ !
ಶುದ್ಧನಿದ್ದವ ಗೆದ್ದ ;
ಇಲ್ಲದವ ತುತ್ತಾದ ಮಸದ ಮರಣಕ್ಕೆ.

೨

ಕಡಲಸುಡುಗುವುದಕ್ಕೆ
ಒಬ್ಬ ಯಾವುದೊ ಮುದುಕ
ಹಿಡಿದ ಕಸಪೊರಕೆಯದು ಇದರ ದಾಯಾದಿ !
ಅಂತರಿಕ್ಷವಸುಡುಗು —
ತಿರುವ ಬೆಳಕಿನ ಪಿಡುಗು—
ಧೂಮಕೇತು ಅನಾದಿ, ಇದರದೇ ಹಾದಿ !

೩

ಮನೆಯೊಳಿದೆ ಇಲ್ಲಣವು
ಮೊಗದೊಳಿದೆ ತಲ್ಲಣವು
ಹಸನಾಗಿ ಗುಡಿಸಲಿಕೆ ಬೇಕು ಕಸಪೊರಕೆ ;
ಏಳು ತಲೆಮಾರಿನಲಿ
ಬಂದ ಕಸ ಹಾರುವಲಿ
ಗಾಳಿಯೊಲು ಬೀಸಿದರೆ ಕಸಪೊರಕೆ-ಹರಕೆ

ಮುಚ್ಚಂಜೆ

ಶ್ರೀ. 'ದತ್ತಾತ್ರೇಯ'

ಪಚ್ಚೆ ಪಯಿರಿನ ಮೇಲೆ ಹೊಬಿಸಿಲು ಒರಗಿತ್ತು ;
ಗಾಳಿ ತೊನೆಯುತಲಿತ್ತು; ಪಯಿರಿನೇರಿಳಿತಗಳು
ಕೊಳದ ಕಿರುದೆರೆಗಳೊಲು ಅಲ್ಲಿಯೇ ಸುಳಿಸುಳಿದು,
ಮನದ ದುಗುಡವನತ್ತ ಮೆಲ್ಲನೇ ಓಸರಿಸಿ,
ಮುದವ ಬೀರುತಲಿಹವು. ಅತ್ತ ಪಶ್ಚಿಮವನಿತೆ
ಕೆಂಪುತಿಲಕವನಿಟ್ಟು, ಮೇಲ್ಬದಿಯೊಳಾಡುತಿಹ
ತಿಳಿಗಪ್ಪು ಮೋಡಗಳ ಕುರುಳುಗಳ ಸರಿಸುತ್ತ
ರಾಗರಂಜಿತಳಾಗಿ ಮನವ ಹಿಗ್ಗಿಸುತಿಹಳು.

ಹಕ್ಕಿಗಳು ಸಂತಸದಿ ಹಾಡುತಿವೆ ; ಹಾರುತಿವೆ.
ಗೋವುಗಳ ಹಿಂದಿಂದೆ ಚಿಕ್ಕಕರು ಪುಟಿಯುತ್ತ
ಮುಂದೋಡಿ ಹಿಂದಿರುಗಿ ತಾಯ ಹಿಂಬಾಲಿಸುತ,
ಮೈಗೆ ಮೈಯನು ತಿಕ್ಕಿ ನಲ್ನೋಟ ಬೀರುತಿದೆ.

ಸಂತಸದ ಕಡಲಿನಲಿ ಪ್ರತಿಜೀವ ಈಜುತಿದೆ ;
ಸಂತಸವ ಸುರಿದವರು ಯಾರೆಂದು ತಿಳಿಯುವುದು ?

ಯೋಧನ ಕೊನೆಯ ನುಡಿ

ಶ್ರೀಕೃಷ್ಣ 'ಶಾರದಾಮಂಡಲ'

ಅರಿಗಳೆದೆಯನು ಸೀಳಿ, ತಾಯ್ನಾಡನುಳಿಸುವೊಡೆ,
ಮೃತ್ಯುವಿನ ಆಹ್ವಾನ ? ಛೀ ! ದುರಾತ್ಮಾ, ಮೃತ್ಯು !
ಒಸುವೆನೆದುರಿಸುವೆ ನಿನ್ನನು ! ನಿನ್ನ ಗಂಟಲನು
ಮೆಟ್ಟಿ ಮುರಳುವೆನು ! ಬಲಶಾಲಿಯಾಗುವೆನು !
ಎಲೆ, ನನ್ನ ದೇಹವಿದು ಹೂಳಿ ಹೋಗುವುದೇನು ?
ಬೆಂಕಿ ಸುಡುವುದೆ? ನಾಯಿ-ನರಿಗಳುಣ್ಣುವುವೇ ?

* * * *

ಬಿಡು ಬಿಡಲೆ ! ತೆಗೆ ! ನನಗೊಳಿಲ್ಲಿಯೂ ಕಲ್ಲಿಲ್ಲೆ ?
ಅನುಜರಿಗೆ ಭುಜವಿಲ್ಲೆ ? ಜನ್ಮಿಸುವೆ ನಾನಲ್ಲಿ !
ಜಜ್ಜುವೆನು; ಜಡಿಯುವೆನು; ಸದೆಯುವೆನು ವೈರಿಗಳ ;
'ತಾಯ್ನಾಡ ಶೃಂಖಲೆಯ ಮುರಿಯುವೆನು ; ಇಲ್ಲದಿರೆ
ಮಡಿಯುವೆನು, ಹುಟ್ಟುವೆನು, ಮತ್ತೊಮ್ಮೆ-ಇನ್ನೊಮ್ಮೆ !
ತಾಯಿ ತೊಳಲುತ್ತಿರಲು ಆತ್ಮಕಿದೆಯೇ ಶಾಂತಿ ?

ಸೇಬು!

●

(ಸಣ್ಣ ಕತೆ)

ಶ್ರೀ. ಗೋವಿಂದ ಲಕ್ಷ್ಮಣ ಹಳ್ಳೆಪ್ಪನವರ

ಬಂಗಾಲದ ಸುಪ್ರಸಿದ್ಧ ಸಾಹಿತಿಗಳಾದ ಸ್ವರ್ಗೀಯ ರವೀಂದ್ರನಾಥ ಮೈತ್ರರ ಒಂದು ಕತೆಯ ಅನುವಾದವಿದು. ಶ್ರೀ. ಮೈತ್ರರ ವಿಷಯದಲ್ಲಿ ಸಂಕ್ಷಿಪ್ತವಾಗಿ ಇಷ್ಟು ಹೇಳಬಹುದು:

ಸ್ವರ್ಗೀಯ ರವೀಂದ್ರನಾಥ ಮೈತ್ರರು ಬಂಗಾಲದ ಅತ್ಯಂತ ಪ್ರತಿಭಾ-ಸಂಪನ್ನ ಲೇಖಕರಲ್ಲೊಬ್ಬರು. ಅಕಾಲದಲ್ಲಿಯೆ ತೀರಿಕೊಂಡರು. ಆದರೂ ತಮ್ಮ ಜೀವಾವಧಿಯಲ್ಲಿ ಅವರು ಮಾಡಿದ ಸಾಹಿತ್ಯಸೇವೆಯು ಅವರ ಹೆಸರನ್ನು ವಂಗಸಾಹಿತ್ಯದಲ್ಲಿ ಅಜರಾಮರವಾಗಿ ಮಾಡಿದೆ. ಅವರ ಕಥೆಗಳ ನಾಲ್ಕಾರು ಸಂಗ್ರಹಗಳು ಪ್ರಕಟವಾಗಿವೆ. ಅವರ ಕಥೆಗಳಲ್ಲಿ ನಮ್ಮ ಜೀವನದಲ್ಲಿಯ ವಾಸ್ತವಾಂಶಗಳು ಅತ್ಯಂತ ಸ್ಪಷ್ಟವಾಗಿ ಚಿತ್ರಿತವಾಗಿವೆ.

ಕಥೆಗಳಲ್ಲದೆ ಅವರು "ಮಾನಮಯೀ ಗರ್ಲ್ಸ ಸ್ಕೂಲ್" ಎಂಬ ಸೊಗಸಾದ ಪ್ರಹಸನವನ್ನೂ ಬರೆದಿದ್ದಾರೆ. ಅದರ ಚಿತ್ರಪಟವು (Film) ತಯಾರಿಸಲ್ಪಟ್ಟು ಕಲಕತ್ತೆಯ ಸಿನೇಮಾಗೃಹಗಳಲ್ಲಿ ತಿಂಗಳುಗಟ್ಟಲೆ ಪ್ರದರ್ಶಿಸಲ್ಪಟ್ಟು ಅಲ್ಲಿಯ 'ರೆಕಾರ್ಡ' ಮುರಿದಿದೆ. ಅನೇಕ ಬಂಗಾಲೀ ಲೇಖಕರು ಅದನ್ನು ಅನುಕರಿಸಿ ತಾವೂ ಒಂದು ಪ್ರಹಸನವನ್ನು ಬರೆದು ಸ್ವ. ಮೈತ್ರರನ್ನ ಸರಿಗಟ್ಟಿ ಬೇಗನೆ ಕೀರ್ತಿಶಾಲಿಗಳಾಗಲು ಹವಣಿಸಿದ್ದಾರೆ. ಆದರೆ ಇದುವರೆಗೆ ಯಾರೂ ಸಫಲರಾಗಿಲ್ಲ.

ಮೈತ್ರರು ಹೆಚ್ಚಾಗಿ ಹಾಸ್ಯರಸದ ಲೇಖಕರೆಂದು ಹೆಸರಾಗಿದ್ದರೂ ಕರುಣರಸವನ್ನು ಚಿತ್ರಿಸುವದರಲ್ಲಿಯೂ ಬಹು ಕುಶಲರು. ಪ್ರಸ್ತುತ ಕಥೆಯಲ್ಲಿ ಕರುಣರಸವು ಸೊನಲು ಹೊಸಲಾಗಿ ಹರಿಯುತ್ತಿದೆ. ಈ ಕಥೆಯನ್ನು ಓದಿ ಮರಮರನೆ ಮರುಗದವರಾರು?

ಸೋಮವಾರ ನಸುಕಿನಲ್ಲಿ ಎದ್ದವನೇ, ಆರುವರ್ಷದ ಮಗುವಾದ ಬುಧಾ..ಮಲಗಿರುವ ತನ್ನ ತಂದೆಯ ಕಿವಿಯಲ್ಲಿ ಮೆಲ್ಲನೆ, "ಅಪ್ಪಾ, ಇವತ್ತಲ ಸೋಮವಾರಾ, ಇವತ್ತ ತರತೀ ಹೌದಲ್ಲೊ ಮತ್ತ?" ಎಂದು ನುಡಿದ.

ನಟವರನು ಹರಕು ಚಾಪೆಯ ಮೇಲೆ ಮತ್ತೊಂದು ಮಗ್ಗುಲಾಗಿ ನಿದ್ದೆಯ ದನಿಯಲ್ಲಿಯೆ "ಹೂಂ, ತರತೇನಿ" ಎಂದ. ಹುಡುಗನ ಮುಖ ನಗೆಯಿಂದ ತುಂಬಿಹೋಯಿತು. ಕೂಡಲೆ ಅವನು ಹೊರಗೆ ಓಡಿಹೋಗಿ, ಎದುರಿನ ಬಂಗ್ಲೆಯಲ್ಲಿರುವ ತನ್ನ ಗೆಳೆಯನಾದ ಶ್ರೀಕಾಂತನನ್ನು ಕರೆದು "ಇವತ್ತು ಸಂಜೀಮುಂದ ನಮ್ಮಪ್ಪ ತರತೇನಿ ಅಂತ ಹೇಳ್ಯಾನ; ನೋಡ್ಯಾರ ನೋಡು!" ಎಂದು ಹೇಳಿದ.

ತಂದೆಮಕ್ಕಳು ಇಷ್ಟು ಗುಟ್ಟಾಗಿ ಮಾತನಾಡುತ್ತಿದ್ದುದರ ವಿಷಯ, ಒಂದು ಸೇಬುಹಣ್ಣು. ಆ ದಿನ ಶ್ರೀಕಾಂತ ಮಹಾ ಉತ್ಸಾಹದಿಂದ ಒಂದು ಸೇಬುಹಣ್ಣನ್ನು ತಿನ್ನುತ್ತ ಬೀದಿಯಲ್ಲಿ ನಿಂತುಕೊಂಡಿದ್ದ. ಬುಧಾ, ಬಾಗಿಲಲ್ಲಿ ಇಳಿಬಿಟ್ಟ ಜಿಡುಗಿನ ಹರಕು ಪರದೆಯ ಸಂದಿನೊಳಗಿಂದ, ಶ್ರೀಕಾಂತನ ಈ ಅಶನಲೀಲೆಯನ್ನು ಎಷ್ಟೋ ಹೊತ್ತು ನೋಡಿಯೇ ನೋಡಿದ. ಕೊನೆಗೆ ಲೋಭವನ್ನು ತಡೆಯುವದು ದುಸ್ಸಾಧ್ಯವಾಗಲು, ಹೊರಗೆಬಂದು ಶ್ರೀಕಾಂತನಿಗೆ "ಏನೋ ಅದು ತಿಂಬೋದು, ಸಿರಿಕಾಂತಾ?" ಎಂದು ಕೇಳಿದ. ಶ್ರೀಕಾಂತ ನಿರ್ವಿಕಾರಭಾವದಿಂದ "ಸೇಬು" ಎಂದ. "ನನಗೊಂದು ಚೂರು ಕೊಡಲ್ಲಾ" ಎಂದು ಬುಧಾ ಬೇಡಿದ.

ಉಳಿದ ಚೂರು ಹಣ್ಣನ್ನೂ ಪಟಕ್ಕನೆ ಬಾಯಲ್ಲಿ ಹಾಕಿಕೊಂಡು ಶ್ರೀಕಾಂತ "ಊಂ ಹೂಂ" ಎಂದ. ಆ ಮೇಲೆ ಅದನ್ನೆಲ್ಲ ತಿಂದಾದನಂತರ "ನಮ್ಮಪ್ಪ ನನಗ ತಂದುಕೊಟ್ಯಾನs. ನಿಮ್ಮಪ್ಪ ಯಾಕ ತರೂದುಲ್ಲಪಾ?" ಎಂದು ಕೇಳಿದ.

ತಿಂಗಳಿಗೆ ಇಪ್ಪತ್ತೆರಡು ರೂಪಾಯಿ ಸಂಬಳದ ಕಾರಕೂನನ ಮಗನಿಗೆ, ಐದುನೂರು ರೂಪಾಯಿ ಸಂಬಳದ ತಂದೆಯ ಮಗನ ಈ ಜಟಿಲ ಪ್ರಶ್ನೆಗೆ ಉತ್ತರವನ್ನು ಕೊಡುವದಾಗಲಿಲ್ಲ. ಅತ ಅಳುಮೋರೆಯನ್ನು ಮಾಡಿಕೊಂಡು ತನ್ನ ತಂದೆಯ ಬಳಿಗೆ ಬಂದ. ನಟವರನಾಗ ಹರಕುಅಂಗಿಯ ಮೇಲೆ ಮಾಸಿದ ಶಾಲನ್ನು ಹೊದೆದುಕೊಂಡು, ಒಂಬತ್ತರ ಗಾಡಿಯನ್ನು ಹಿಡಿಯಬೇಕೆಂದು ಹೊರಟಿದ್ದನು. ಬುಧಾ, ಅತನೆದುರಿಗೆ ಒಂದು ನಿಂತುಕೊಂಡು

ಭಾವಾವೇಶದಲ್ಲಿ ನಟವರ ಅವೆರಡೂ ಹಣ್ಣುಗಳನ್ನು ಎತ್ತಿಕೊಂಡ. ಮರುಕ್ಷಣದಲ್ಲಿಯೆ ಯಾವನೋ ಬಂದು ಗಟ್ಟಿಯಾಗಿ ಅತನ ಕೈಹಿಡಿದು 'ಕಳ್ಳ ಕಳ್ಳ' ಎಂದು ಕೂಗಿದ. (ಪುಟ ೭೯)

“ಅಪ್ಪಾ, ಇವತ್ತು ನನಗೊಂದು ಸೇಬುಹಣ್ಣು ತಂದುಕೊಡು” ಎಂದು ಹೇಳಿದ. “ಒಳ್ಳೇದು” ಎಂದು ಹೇಳಿ ನಟವರ ಹೊರಟುಹೋದ.

ಸಂಜೆಯ ಗಾಡಿಯಿಂದ ನಟವರ ಆಫೀಸಿನಿಂದ ತಿರುಗಿ ಬರುತ್ತಿರುವಾಗ ದಾರಿಯಲ್ಲಿಯೆ ಬುಧಾ ಆತನ ಕಣ್ಣಿಗೆ ಬಿದ್ದ. ಉಳಿದ ದಿನಗಳಲ್ಲಿ ಇಷ್ಟು ಹೊತ್ತೆಂದರೆ ಬುಧನಿಗೆ ಆರುತಾಸು ರಾತ್ರಿ. ಆದರೆ ಇಂದು ಸೇಬುಹಣ್ಣಿನ ಆಸೆಯ ಮೂಲಕ ಅವನಿಗೆ ನಿದ್ದೆ ಹತ್ತಲಿಲ್ಲ. ತಾಯಿ ಒಲುಮೆಯಿಂದ ಅವನನ್ನು ಮಲಗಿಸಿ ಹೋಗಿದ್ದಳೇನೋ ನಿಜ; ಆದರೆ ಸಂಜೆಯಕಡೆಗೆ ರೈಲುಗಾಡಿಯು ಸಿಳ್ಳುಹೊಡೆದು ಸ್ಟೇಶನ್ನಿಗೆ ಬಂದಕೂಡಲೆ ಆತ ನಿದ್ದೆಯ ಸೋಗನ್ನು ತೊರೆದು, ಅಡಿಗೆಯಮನೆಯ ಕಡೆಗೊಮ್ಮೆ ಅಂಜುತ್ತ ನೋಡಿ, ಮನೆಯೊಳಗಿಂದ ಹೊರಗೆ ಓಡಿಬಂದ. ಸ್ವಲ್ಪ ದೂರ ಹೋಗುವದರಲ್ಲಿಯೆ ತಂದೆ ಬಂದ. ತಂದೆಯನ್ನು ಕಂಡಕೂಡಲೆ ಬುಧಾ ತನ್ನ ಕೈಚಾಚಿ, “ನನ್ನ ಸೇಬುಹಣ್ಣು ಎಲ್ಲಿ ಅದ ಕೊಡಪಾ!” ಎಂದು ಕೇಳಿದ. “ಚು ಚು ಚು! ಮರೆತು ಬಂದೆನಲ್ಲೋ ಬುಧಾ; ನಾಳೆ ತೊಗೊಂಡು ಬರತೇನಿ, ಆಂ!” ಎಂದು ನಟವರನೆಂದ.

ನಿಮಿಷದಲ್ಲಿ ಬುಧನ ಮುಖ ಇಷ್ಟಾಯಿತು. ಒಂದು ನಿಟ್ಟುಸಿರುಬಿಟ್ಟು “ಆತಪಾ. ಹಾಂಗಾಗಲಿ” ಎಂದು ಆತನೆಂದ. ನಟವರ ಹೇಳಿದ ಮಾತು ನಿಜವಾಗಿರಲಿಲ್ಲ. ದಾರಿಯಲ್ಲಿ ಬರುವಾಗ ಬುಧಾ ಹೇಳಿದ್ದು ಆತನಿಗೆ ನೆನಪಾಗಿತ್ತು. ಆದರೆ ಕಿಸೆಯಲ್ಲಿ ಒಂದು ಪೈ ಸಹ ಇರಲಿಲ್ಲ. ಆಫೀಸಿನ ಸಿಪಾಯಿಯಾದ ರಾಮಶರಣಸಿಂಹನ ಕಡೆಗೆ ನಾಲ್ಕಾಣೆ ಕೈಗಡ ಕೇಳಿದ; ಫಲವಾಗಲಿಲ್ಲ. ನಾಳೆ ನಾಲ್ಕಾಣೆ ಎಲ್ಲಿಂದ ತರಬೇಕೆಂಬುದು ನಟವರನಿಗೆ ಗೊತ್ತಿರಲಿಲ್ಲ; ಆದರೆ ಮಗನನ್ನು ಸಮಾಧಾನಪಡಿಸುವದಕ್ಕಾಗಿ ಮತ್ತೆ ಹೀಗೆ ಮಾತುಕೊಟ್ಟ.

ಆದರ ಮರುದಿನವೂ ಬುಧಾ ಇಡೀ ದಿನ ಸಂಜೆಯದಾರಿಯನ್ನು ನೋಡುತ್ತ ಕಳೆದ. ಇಂದು ಅಪ್ಪ ಸೇಬುಹಣ್ಣು ತರುವದರಲ್ಲಿ ಅವನಿಗೆ ಎಳ್ಳಷ್ಟಾದರೂ ಸಂಶಯವಿರಲಿಲ್ಲ. ಹೊರಗಿನ ಬಾಗಿಲ ಬಳಿಯಲ್ಲಿಯೆ ಆತ ನಿಂತುಕೊಂಡಿದ್ದ. ದೂರದಲ್ಲಿಯೇ ತಂದೆಯನ್ನು ಕಂಡು ಓಡಿಹೋಗಿ ಆತನ ಕೈಹಿಡಿದು “ಹೂಂ, ಎಲ್ಲ್ಯದ ನನ್ನ ಸೇಬುಹಣ್ಣು, ಕೊಡು ಮತ್ತ” ಎಂದು ಬೇಡಿದ. ಆ ಕ್ಷಣ ನಟವರನ ಮುಖ ವಿಕೃತವಾಯಿತು. “ಓಹೋಹೋ! ಇದೇ ಕಿಸೆಯಲ್ಲಿಟ್ಟಿದ್ದೆ. ಎಲ್ಲಿಯಾದರೂ ಬಿದ್ದುಹೋಯಿತೋ ಏನೋ! ಬಿದ್ದಿರಲಿಕ್ಕೇಬೇಕು” ಎಂದು ಕಿಸೆಯಲ್ಲಿ ಹಾಕಿ ನುಡಿದ. ಬುಧಾನನ್ನು ಸಮಾಧಾನಪಡಿಸಲು ಇದರ ಹೊರತು ಬೇರೊಂದು ಉಪಾಯವಿರಲಿಲ್ಲ. ಆದರೆ ಹೀಗೆ ತನ್ನ ಮಗನನ್ನು ಠಕ್ಕಿಸುವಾಗ ಆತನ ಕಣ್ಣುಗಳಲ್ಲಿ ನೀರು ತುಂಬಿಬಂದವು.

ಬುಧಾ ತನ್ನ ತಂದೆಯ ಕೈ ಬಿಟ್ಟುಬಿಟ್ಟ. ಆ ಮೇಲೆ ಹಾಗೆಯೇ ಹೊರಟವ ಹಿಂದಿರುಗಿ ಬಂದು “ಅಪ್ಪಾ ಆ ಹಣ್ಣು ಎಷ್ಟು ದೊಡ್ಡದಿತ್ತು?” ಎಂದು ಕೇಳಿದ.

ನಟವರ ಕೈ ಮಾಡಿ ಏನೋ ಒಂದು ಕಲ್ಪಿತ ಪರಿಮಾಣವನ್ನು ತೋರಿಸಿದ.

“ಹಾಂಗಾರ ಭಾಳ ದೊಡ್ಡದಿತ್ತಪ್ಪಾ! ಇರಲಿ. ನಾಳಿಗ್ಯಾರೆ ತೊಗೊಂಡು ಬರತೀಯೋ?” ಎಂದು ಬುಧಾ ಎಂದ.

ನಾಡದು ಸೋಮವಾರ ಸಂಬಳವಾಗುವ ದಿನ. ನಟವರ ಆತನಿಗೆ “ನಾಳೆ ಆಗೂದಿಲ್ಲಾ, ಸೋಮವಾರ ತೊಗೊಂಡು ಬರತೇನಿ” ಎಂದು ಹೇಳಿದ.

“ಸೋಮವಾರ ಅಂದ್ರ ಎಂದ?” ಎಂದು ಬುಧಾ ಕೇಳಿದ.

“ನಾಳೆ ಇಲ್ಲ! ನಾಡದು ಸೋಮವಾರ; ಎರಡು ಹಣ್ಣು ತರತೇನಿ, ಆತೋ ಇಲ್ಲೋ?” ಎಂದು ನಟವರ ಹೇಳಿದ.

ಬುಧಾ ಹಿರಿಹಿರಿ ಹಿಗ್ಗಿದ. “ಹಣ್ಣು ಒಳೇ ದೊಡ್ಡವಿರಬೇಕು, ಮತ್ತ, ಕೆಂಪಾಗಿ ಇರಬೇಕು ನೋಡು” ಎಂದು ಹೇಳಿದ.

“ಒಳ್ಳೇದು” ಎಂದು ನಟವರನೆಂದ.

ಬುಧಾ ಕುಣಿಯುತ್ತ ಕುಣಿಯುತ್ತ ಮನೆಯ ಒಳಕ್ಕೆ ಬಂದು ತನ್ನ ತಾಯಿಯ ಮುಂದೆ ಹೇಳಿದ: “ಅವ್ವಾ, ಅಪ್ಪ ನನಗ ಎರಡು ಸೇಬಹಣ್ಣು ತಂದು ಕೊಡತೇನಿ ಅಂತ ಹೇಳ್ಯಾನ. ನಿನಗ ಗೊತ್ತ ಅದು ಏನು? ಭಾಳ ದೊಡ್ಡವೂ!”

ಅಡಿಗೆಯ ಮನೆಯೊಳಗಿಂದ ಬುಧನ ತಾಯಿ ಪತಿಯ ಕಡೆಗೆ ನೋಡಿ, “ನೋಡಿದಿರಾ, ಇನ್ನೂ ಹಣ್ಣು ಸಿಕ್ಕಿಲ್ಲ, ಈಗಲೇ ಎಷ್ಟು ಸಂತೋಷ! ನಾಳೆ ಹಣ್ಣು ಕೈಗೆ ಬಂದರಂತೂ ಎಷ್ಟು ಕುಣಿದಾಡುತ್ತಾನೋ ಕಂದಯ್ಯ!” ಎಂದು ನುಡಿದಳು.

ಸೋಮವಾರ ದಿನ ಆಫೀಸಿಗೆ ಹೋಗುವಾಗ ಪೇಟೆಯಲ್ಲಿ ಹಣ್ಣು ಮಾರುವ ಒಬ್ಬ ಕಾಬೂಲಿಯ ಅಂಗಡಿಗೆ ಹೋಗಿ, ಆರಿಸಿ ಆರಿಸಿ ಎರಡು ಸೇಬುಹಣ್ಣುಗಳನ್ನು ತೆಗೆದು, ಅವುಗಳ ಬೆಲೆಯನ್ನು ಗೊತ್ತುಮಾಡಿ ಖಾನಸಾಹೇಬರಿಗೆ “ಇವೆರಡೂ ಹಣ್ಣುಗಳನ್ನು ಬೇರೆ ತೆಗೆದಿಡಿರಿ. ಆಫೀಸಿನಿಂದ ತಿರುಗಿ ಬರುವಾಗ ಇವನ್ನು ತೆಗೆದುಕೊಂಡು ಹೋಗುತ್ತೇನೆ” ಎಂದು ಹೇಳಿ ಹೋದ.

ಅಂಗಡಿಯಲ್ಲಿಯ ತುಂಬ ಸೊಗಸಾದ ಹಣ್ಣುಗಳೆರಡು. ಬಹು ದಿನಗಳಿಂದ ಹಂಬಲಿಸುತ್ತಿರುವ ತನ್ನ ಮಗನ ಕೈಯಲ್ಲಿ ಆತನು ಬಯಸಿದ ಹಣ್ಣುಗಳೆರಡನ್ನೂ ಹಾಕಿದಾಗ ಆತನ ಮುಖವು ಆನಂದದಿಂದ ಹೇಗೆ ಅರಳುವದೆಂಬುದನ್ನು ಕಲ್ಪನೆಯಲ್ಲಿಯೆ ನೋಡಿದಾಗ, ನಟವರನ ನಪ್ಪಗಿನ ಮುಖದ ಮೇಲೆಯೂ ಉಲ್ಲಾಸವು ಮಿನುಗಿತು.

ಮೂರು ಹೊಡೆದಕೂಡಲೆ ತಿಂಗಳ ಪಗಾರದ ಬಿಲ್ಲನ್ನು ತೆಗೆದುಕೊಳ್ಳುವದಕ್ಕಾಗಿ ಹೆಡ್‌ಕ್ಲಾರ್ಕನ ಕಡೆಗೆ ಹೋದ. ಹೆಡ್‌ಕ್ಲಾರ್ಕ ಬಿಲ್ಲನ್ನು ಆತನೆದುರಿಗೆ ಹಿಡಿದ.

ಬಿಲ್ ನೋಡಿದ ಕೂಡಲೆ ನಟವರನ ಎದೆ ಧಸಕ್ಕೆಂದಿತು. ಬಿಲ್ಲಿನ ಬದಿಯಲ್ಲಿ “ಕೆಲಸವನ್ನು ಪೂರ್ಣ ಮಾಡದೆ ಇದ್ದುದಕ್ಕಾಗಿ ನಟವರದಶ್ತನ ತಿಂಗಳ ಪಗಾರವನ್ನು ಸದ್ಯಕ್ಕೆ ಹಿಡಿದಿಟ್ಟಿದೆ” ಎಂದು ಬರೆಯಲಾಗಿತ್ತು. ಕೆಂಪು ಪೆನ್ಸಿಲಿನಿಂದ ಬರೆದ ಆ ಇಂಗ್ಲಿಷ್ ಅಕ್ಷರಗಳು ಆತನ ಎದೆಯ ಮೇಲೆ ಒಂದು

ಬಂಡೆಯನ್ನೆತ್ತಿ ಅಪ್ಪಳಿಸಿದಂತಾಯಿತು. ತುಸು ಹೊತ್ತು ಸ್ತಬ್ಧನಾಗಿ ನಿಂತು ಆಳುದನಿಯಲ್ಲಿ ಆತನೆಂದ : "ರಾಯರೆ—"

"ನನಗೇನೂ ಮಾಡಲಿಕ್ಕೆ ಬರುವಂತೆ ಇಲ್ಲರೀ. ಸಾಹೇಬ ಬಹಳ 'ಕಾಯ್ದೇಶೀರ' ಮನುಷ್ಯನೆಂಬುದು ನಿಮಗೆ ಗೊತ್ತಿದೆಯಷ್ಟೇ? ಬೇಕಾದರೆ ನೀವೇ ಸಾಹೇಬರ ಕಡೆಗೆ ಹೋಗಿ ಅವರನ್ನು ಭೆಟ್ಟಿಯಾಗಿ ಬನ್ನಿರಿ" ಎಂದರು ರಾಯರು.

ಬಿಲ್ಲನ್ನು ತೆಗೆದುಕೊಂಡು ನಟವರ ಅನೇಕ ವಿಧವಾಗಿ ಚಿಂತಿಸುತ್ತ ದೊಡ್ಡ ಸಾಹೇಬರ ಆಫೀಸಿನ ಬಾಗಿಲಲ್ಲಿ ಬಂದು ನಿಂತುಕೊಂಡ. ಸಿಪಾಯಿಯು ಒಳಗೆ ತಿಳಿಸಿದನಂತರ ಅಪ್ಪಣೆ ಆಯಿತು : "ಕಮ್ ಇನ್ !".

ನಟವರನು ದೊಡ್ಡದೊಂದು ಸಲಾಮು ಮಾಡಿ ಎಂದ, "ಸರ್, ನನ್ನ ತಿಂಗಳ ಪಗಾರ—"

ಸಾಹೇಬರು ಆಗ ವಾಲ್ಟೇಯರದಲ್ಲಿರುವ ತಮ್ಮ ಹೆಂಡತಿಗೆ ಮುಂಬರುವ ಕ್ರಿಸ್‌ಮಸ್ಸಿನ ನಿಮಿತ್ತವಾಗಿ ಉಪಹಾರವನ್ನು ಕಳುಹಿಸುವ ವ್ಯವಸ್ಥೆಯಲ್ಲಿ ತೊಡಗಿದ್ದರು. ನಟವರನ ಎಲ್ಲ ಮಾತುಗಳನ್ನೂ ಕೇಳುವಷ್ಟು ಅವಕಾಶವಿರಲಿಲ್ಲ. ಇಂಗ್ರೇಜಿಯಲ್ಲಿಯೇ ಹೇಳಿದರು, "ಆಗಾಗದು. ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಕೇಳುವವನಲ್ಲ ನಾನು! ಹೋಗಿರಿ."

ನಟವರ ಅತ್ತುಬಿಟ್ಟ. "ಸರ್, ನಾಳೆ ಇಡೀ ರಾತ್ರಿ ಕುಳಿತು ಎಲ್ಲವನ್ನೂ ಮುಗಿಸಿಬಿಡುವೆನು" ಎಂದು ಹೇಳಿದ.

ಸಾಹೇಬರು ಕಾಗದದ ಮೇಲಿಂದ ಲೇಖಣಿಯನ್ನೆತ್ತಿ "ಹಾಗಾದರೆ ನಾಡದು ಪಗಾರವನ್ನು ಕೊಡಲಾಗುವದು." ಎಂದರು.

"ಸರ್, ಒಂದು ರೂಪಾಯಿ — ಕಡೆಗೆ ಎಂಟಾಣೆಯಾದರೂ ಕೊಡಲು ಅಪ್ಪಣೆ ಮಾಡಿದರೆ—"

"ನಾಟ್ ಎ ಫಾರ್ದಿಂಗ್, ಗೋ ಆನ್" ಎಂದು ಗರ್ಜಿಸಿ ಸಾಹೇಬರು ಎರಡು ಹಣ್ಣಿನ ಬುಟ್ಟಿಗಳನ್ನು ಮೇಜಿನ ಮೇಲೆ ಇಟ್ಟು, ಮೇಲೆ 'ಲೇಬಲ್' ಅಂಟಿಸಿದರು : "ಫಾರ್ ಹ್ಯಾರೀ" "ಫಾರ್ ನೆಲೀ". ಹ್ಯಾರೀ ಸಾಹೇಬರ ಮಗ. ನೆಲೀ ಮಗಳು. ಇಬ್ಬರೂ ತಾಯಿಯ ಕೂಡ ಸ್ವಾಸ್ಥ್ಯವಾಸದಲ್ಲಿದ್ದರು.

ಒಂದು ನೀಳವಾದ ಉಸಿರನ್ನು ಬಿಟ್ಟು ನಟವರ ಹೊರಗೆ ಬಂದ. ಆ ಮೇಲೆ ಆ ಬಿಲ್ಲನ್ನು ಹೆಡ್‌ಕ್ಲಾರ್ಕನ ಕೈಯಲ್ಲಿ ಕೊಟ್ಟು "ಕೆಲಸವಾಗಲಿಲ್ಲ" ಎಂದು ಹೇಳಿದ. ಒಮ್ಮೆ ಆತನ ತಲೆಯಲ್ಲಿ ವಿಚಾರ ಬಂದಿತು— ರಾಯರ ಕೈಯಿಂದ ಒಂದು ರೂಪಾಯಿ ಕೈಗಡ ಇಸಿದುಕೊಳ್ಳಬೇಕೆಂದು. ಆದರೆ ಅಕಸ್ಮಾತ್ ಇಡೀ ಪ್ರಪಂಚದ ವಿಷಯವಾಗಿಯೆ ಆತನಿಗೆ ಏನೋ ಒಂದು ಬಗೆಯ ತಿರಸ್ಕಾರವುಂಟಾಯಿತು. ಮನಸ್ಸಿನಲ್ಲಿ ಬಂದ ವಿಚಾರವನ್ನು ಕಾರ್ಯದಲ್ಲೀಸುವ ಪ್ರವೃತ್ತಿಯುಂಟಾಗಲಿಲ್ಲ.

ದಾರಿಯಲ್ಲೆಲ್ಲ ಬುಧಾನ ಕನವರಿಕೆಯೇ ಕನವರಿಕೆ. ನಿನ್ನೆ ಆದಿತ್ಯವಾರ; ಸೋಮವಾರ ಹಣ್ಣು ತರುವೆನೆಂದು ಹೇಳಿದುದರ ನೆನಪನ್ನು ಬುಧಾ ತನಗೆ ಮತ್ತೆ ಮತ್ತೆ ಮಾಡಿಕೊಟ್ಟಿದ್ದಾನೆ. ಪಾಪ! ಇವತ್ತು ಆತ ಇಡೀ ದಿವಸ ದಾರಿಯ ಕಡೆಗೆ ಕಣ್ಣಿಟ್ಟುಕೊಂಡು ಕುಳಿತಿರಬಹುದು. ಇಷ್ಟು ಹೊತ್ತಿಗೆ ನಿಶ್ಚಯವಾಗಿಯೂ ಅವನು ಸ್ಟೇಶನ್ನಿನ ದಾರಿಯಲ್ಲಿ ನಿಂತುಕೊಂಡು ತನ್ನನ್ನು ನಿರೀಕ್ಷಿಸುತ್ತಿರಬಹುದು. ತನ್ನನ್ನು ನೋಡಿದ ಕೂಡಲೆ ಓಡಿ ಬರುವನು. ಆ ಮೇಲೆ?

ಹೀಗೆಯೇ ಯೋಚಿಸುತ್ತ ತಾನು ಪೇಟೆಗೆ ಬಂದು ಮುಟ್ಟಿದುದರ ಧ್ಯಾನವೇ ಇರಲಿಲ್ಲ. ನಟವರನಿಗೆ ಅಕಸ್ಮಾತ್ ಯಾವನೋ ಹಾಯ್ದುದರಿಂದ ಅವನಿಗೆ ಎಚ್ಚರಾದಂತಾಯಿತು. ದಾರಿಯ ಎದುರು ಬದಿಯಲ್ಲಿಯೆ ಆ ಹಣ್ಣಿನ ಅಂಗಡಿ. ನಾವಕಾಶವಾಗಿ ಆ ದಾರಿಯನ್ನು ದಾಟಿ ಅಂಗಡಿಯ ಎದುರಿಗೆ ನಿಂತುಕೊಂಡು ಆ ಎರಡೂ ಸೇಬುಹಣ್ಣುಗಳ ಕಡೆಗೆ ನೋಡಿದ. ಬುಧಾನ ನೆನಪಾಯಿತು. ಆಗ ಆತನಿಗೆ ಒಂದು ಸಣ್ಣ ಕಾಯ ಶಿಶುವು ಆಗ್ರಹದಿಂದ ಕೈ ಚಾಚಿ, ಆತನ ಮುಖದ ಕಡೆಗೆ ನೋಡುತ್ತ "ಅಪ್ಪಾ ಸೇಬು?" ಎಂದು ಕೇಳುತ್ತಿರುವಂತೆ ಭಾಸವಾಯಿತು.

ಭಾವಾವೇಶದಲ್ಲಿ ನಟವರ ಅವೆರಡೂ ಹಣ್ಣುಗಳನ್ನೆತ್ತಿಕೊಂಡ. ಮರುಕ್ಷಣದಲ್ಲಿಯೆ ಯಾವನೋ ಒಂದು ಗಟ್ಟಿಯಾಗಿ ಆತನ ಕೈ ಹಿಡಿದು "ಕಳ್ಳ ಕಳ್ಳ" ಎಂದು ಕೂಗಿದ. ಆಮೇಲೆ ಏನಾಯಿತೆಂಬುದು ಆತನಿಗೆ ತಿಳಿಯಲಿಲ್ಲ. ಪ್ರಜ್ಞೆಬಂದಾಗ ಆತ ಪೋಲೀಸರ 'ಲಾಕಪ್ಪಿ' ನಲ್ಲಿದ್ದ.

ಐದುಗಂಟೆಯಿಂದ ಬುಧಾ ಸ್ಟೇಶನ್ನಿನ ದಾರಿಯಲ್ಲಿ ನಿಂತುಕೊಂಡಿದ್ದ. ಆರುವರೆಯ ಗಾಡಿಯು ಭಸ್‌ಭಸ್ ಎನ್ನುತ್ತ ಸ್ಟೇಶನ್ನಿಗೆ ಬಂದಕೂಡಲೆ ಆನಂದದಿಂದ ಆತನ ಮೈ ನವಿರಿತು. ಆಮೇಲೆ ಒಬ್ಬೊಬ್ಬರೇ ಸ್ಟೇಶನ್ನಿನೊಳಗಿಂದ ಹೊರಬಿದ್ದು ದಾರಿಯನ್ನು ಸಾಗತೊಡಗಲು ಆತನಿಗೆ ಧೈರ್ಯವುಳಿಯಲಿಲ್ಲ. ಮುಂದೆ ಮುಂದೆ ಹೋಗತೊಡಗಿದ. ದೂರದಲ್ಲಿದ್ದ ಪ್ರತಿಯೊಬ್ಬ ಮನುಷ್ಯನೂ ತನ್ನ ತಂದೆಯಂತೆ ಕಾಣಿಸುತ್ತಿದ್ದ; ಆತುರತೆಯಿಂದ ಮುಂದೆ ಬಂದು ಆ ದಾರಿಕಾರನ ಮುಖವನ್ನು ನೋಡಿ ಮತ್ತೆ ತಿರುಗಿ ಬರುತ್ತಿದ್ದ. ಹೀಗೆಯೆ ಒಂದು ತಾಸು ಹೊತ್ತು ಕಳೆದು ಕೊನೆಗೆ ದಾರಿಯಲ್ಲಿ ಓಡಾಡುವವರು ಯಾರೂ ಕಾಣದಂತಾಗಲು ನಿರಾಶನಾಗಿ ಮೋರೆ ಬಣಗಿಸಿಕೊಂಡು ಮನೆಗೆ ಬಂದು "ಆವ್ವಾ, ಅಪ್ಪ ಇನ್ನೂ ಬರಲಿಲ್ಲ; ಬಂದಕೂಡಲೆ ನನ್ನನ್ನೆಬ್ಬಿಸಬೇಕು, ಅಂ!" ಎಂದು ಹೇಳಿ ಹಾಸಿಗೆಯ ಮೇಲೆ ಬಿದ್ದುಕೊಂಡ.

ಇದಾದನಂತರ ರಾತ್ರಿ ಒಂಬತ್ತರ ಗಾಡಿಯಿದ್ದಿತು. ಇಂದು ಪಗಾರದ ದಿನ; ಸಾಮಾನುಗಳನ್ನೆಲ್ಲಾ ಕೊಂಡುಕೊಂಡು ಬರಬೇಕೆಂದರೆ ತಡವಾಗಿರಬಹುದೆಂದು ಭಾವಿಸಿ ಹೈಮವತಿಯು "ಒಳ್ಳೇದು, ನೀನು ಮಲಗಿಕೋ ಹೊತ್ತು ಆಗೇದ" ಎಂದು ಹೇಳಿದಳು.

ರಾತ್ರಿ, ತನ್ನ ಹರಕು ಅಂಗಿಯ ಕಿಸೆಗಳೆರಡೂ ಸೇಬುಹಣ್ಣಿನಿಂದ ತುಂಬಿ ಉಬ್ಬಿವೆಯೆಂದು ಬುಧಾ ಕನಸುನೋಡುತ್ತಿರುವಾಗ, ಸಬ್‌ಇನಸ್ಪೆಕ್ಟರನು ರಿಪೋರ್ಟ್ ಬರೆಯುವದನ್ನು ಮುಗಿಸಿ, ಕಳವಿನ ಆರೋಪದ ಮೇಲೆ ನಟವರದತ್ತನನ್ನು ಕೋರ್ಟಿನಲ್ಲಿ ಹಾಜರ ಮಾಡಲು ಆರ್ಡರ್ ಬರೆಯುತ್ತಿದ್ದ. *

---

* ಸ್ವ. ರವೀಂದ್ರನಾಥ ಮೈತ್ರರ ಅನುವಾದಿತ ಕನ್ನಡ ಕಥಾಸಂಗ್ರಹವು ಬೇಗನೆ ಹೊರಡಲಿದೆ.

ಸದ್ಯಕ್ಕಂತೂ ನನ್ನ ಹೆಂಡತಿಯ ನಾಲಗೆಯಿಂದ ದಿನಾಲು ನನ್ನ ನಿದ್ದೆಯಲ್ಲಿ—
'ಹಾಗೆಯೆ ಎಲ್ಲಿಯೂ ನಡೆಯದ ನನ್ನ ಮಕ್ಕಳನ್ನು—'
'ಹಿರಿಯರ ಸತತ ಹಿಂಡುವಿಕೆಯಿಂದ ನನ್ನ ಕಿವಿಗಳು—'
'ಸರಕಾರದವರು ಪ್ರತಿಯೊಬ್ಬ ಭಾರತೀಯನ ಆಯುಷ್ಯವನ್ನು—
ಮೇಲಿನ ವಾಕ್ಯಗಳನ್ನು ಕಡಿದಿಟ್ಟಿದೆ. ಅದು ಯಾಕೆ? ಅವು ಏನು? ಎಂಬ ಮಹತ್ವದ ಪ್ರಶ್ನೆಗಳ ಉತ್ತರ ಈ ಲೇಖನದಲ್ಲಿದೆ

ಕಟ್(Cut)ಉ ಆರ್ಫ್ ಬಿಕ್ಕಟ್ಟು

ಎಂಬ

ಮಹಾತತ್ತ್ವಕ್ಕೆ ಮಹಾಭಾಷ್ಯವ

"ಶ್ರೀರಂಗ"

'ಅರ್ಥಕ್ಕೆ ವ್ಯತ್ಯಯ ಬರುವಲ್ಲಿ ಎರಡು ಶಬ್ದಗಳ ಸಂಧಿಯನ್ನು ಮಾಡಬಾರದು, ಉದಾಹರಣಾರ್ಥವಾಗಿ ರಾಮನು + ಅಂಥ ಜಾಣನೆ= ರಾಮನಂಥ ಜಾಣನೆ?'– ಎಂದು ವ್ಯಾಕರಣವು ಕೈಯೆತ್ತಿ ಸಾರುತಿದೆ... ಆದರೇನು ? ವಾಚಕಮಹಾಶಯರೆ, ಬಿಕ್ಕು + ಅಟ್ಟು=ಬಿಕ್ಕಟ್ಟು (ಎಂದರೆ ಬಿಕ್ಕನ್ನು ಹೊರಗಟ್ಟುವುದು ಎಂದರೆ ದುಃಖ) ಎಂದು ಹೇಳದೆ, ನಾನೀಗ ಬಿನ್+ಕಟ್ಟು=ಬಿಕ್ಕಟ್ಟು (ಎಂದರೆ ಕಟ್ಟು ಇಲ್ಲದಂಥಾದ್ದು) ಎಂದೇ ಸಂಧಿಯನ್ನು ಮಾಡಬೇಕಾಗಿದೆ. ಯಾಕೆ? 'ಬಿನ್+ಕಟ್ಟು' ಎಂಬುದೆ ಇಂದು ಸುಸಂಧಿಯಾಗಿದೆ; ಇದನ್ನು ಯಾರೂ ಕಳೆದುಕೊಳ್ಳುವಂತಿಲ್ಲ. ಆದರೆ ನನಗೆ ಮಾತ್ರ ಆ ಸುಸಂಧಿ ಇಲ್ಲ, ಇದ್ದಿದ್ದರೆ ನಾನು ಈ ಮಾತನ್ನೆ ಹೇಳುತ್ತಿರಲಿಲ್ಲ. ನನಗೆ ಇದ್ದುದು ಕಟ್(cut) ಉ! ಎಂದರೇನು ? ನಿಮಗೆ ತಿಳಿಯಬಹುದಲ್ಲವೆ? ಓಹೊ, ಮರೆತೆ! ಈಗ ಹಿಂದೀ ಭಾಷೆಯನ್ನು ಒತ್ತಾಯವಾಗಿ (ಕಡ್ಡಾಯದಿಂದ) ಕಲಿಸುವರಲ್ಲವೆ? ಹಿಂದೀ ಕಲಿತರೂ ನೀವು ಹೇರ್‌ಕಟ್ (hair-cut) ಮಾಡಿಸುತ್ತಿರಬಹುದಲ್ಲ? ಆಹಾ ! ಆ ಕಟ್ ಊ ಈ ಕಟ್ ಊ ಒಂದೇ ! ಇಷ್ಟೇ ವ್ಯತ್ಯಾಸ– ಒಂದು ಸರಕಾರೀ, ಇನ್ನೊಂದು ಖಾಸಗಿ.

ಸರಕಾರದ್ದೂ ಒಂದು ಕಟ್ಟು ಇದೆ. ನಾನು ಆ 'ಕಟ್ಟಿ'ಗೆ ಸೇರಿದವ. ಸೇಕಡಾ ದಹಾ–. ಒಳಿತೆನ್ನಿ– ನೂರಕ್ಕೆ ಹತ್ತು ಎಂಬ ಕಟ್ಟು. ಸರಕಾರದಿಂದ ನಿಮಗೆ ಸಲ್ಲತಕ್ಕ ಎಲ್ಲದರಲ್ಲಿ ನೂರಕ್ಕೆ ಹತ್ತು ಕಡಮೆ– ನೂರರಲ್ಲಿ ಹತ್ತು ಕಡಿದೊಗೆವುದು– ಟಿನ್ ಪರ್ಸೆಂಟ್‌ಕಟ್. ಹೀಗೆ ಹಿಂದುಸ್ತಾನದ ಮಾತೃಭಾಷೆಯಲ್ಲಿ ಹೇಳಬಹುದು. ನನಗೆ ತಿಂಗಳಿಗೆ ಎರಡು ನೂರು ಸಂಬಳ–ಇದ್ದಿತು; ಈಗ ಅದೇ ೧೮೦ ಆಗಿದೆ. ಆದುದರಿಂದ ನನಗೆ ತೊಂದರೆ ಇಲ್ಲವೆ ವ್ಯಸನವಾಗಿರಬಹುದೆಂದು ನೀವು ಕಲ್ಪಿಸಿದ್ದರೆ– ನಿಮ್ಮ ಕಲ್ಪನೆ ತಪ್ಪು ಎಂದು ತೋರಿಸಿಕೊಡುವೆ– ಆದುದರಿಂದ ಕಲ್ಪಿಸುವ ಗೋಜಿಗೆ ಹೋಗಬೇಡಿರಿ. ಈಗ ನಾನು ಉಡುವ ದೋತರ ೪೫ ಇಂಚು ಅಗಲು ಇದೆ, ಮೊದಲು ೫೦ ಇಂಚು ಇದ್ದಿತು; ಟಿನ್‌ಪರ್ಸೆಂಟ್ ಕಟ್ ! ನನ್ನ ಆಫೀಸ್ ಮೇಲಧಿಕಾರಿಗಳು ಕೇಳಿದರು, ಕಾಲು ಕಾಣಿಸುವಂತೆ ನಾನು ಅಸಹ್ಯವಾಗಿ ದೋತರವನ್ನುಟ್ಟುದೇಕೆ– ಎಂದು. Sir, cut your coat according to your cloth — ಎಂದು ಅವರದೆ ಗಾದೆಯ ಮಾತನ್ನು ಹೇಳಿದೆ. 'ಹಾಗಾದರೆ ನಿನ್ನ ಕೋಟನ್ನು ಯಾಕೆ ಕಡಮೆ ಅಳತೆಗಿಳಿಸಿಲ್ಲ?' ಎಂದರು ಸಾಹೇಬರು. ನಾನು ನಿರುತ್ತರನಾದೆ. ಕೋಟಿನ ಮೈಯನ್ನು ಕಡಮೆ ಮಾಡಿದರೆ ಕಿಸೆ (ಜೇಬು)ಗಳೆ ಕತ್ತರಿಸುವವಲ್ಲ ಎಂದು ಹೆದರಿಕೆ; ಕೋಟಿನ ತೋಳ್ಗಳನ್ನು ಕಡಮೆ ಮಾಡಿಸಿದರೆ ಯಾವಾಗಲೂ ಹನ್ನೆರಡು ಗಂಟೆಯನ್ನೆ ತೋರಿಸುವ, ಕೀಲಿ ಕೊಟ್ಟಾಗ ಮಾತ್ರ ನಡೆದಂತೆ ಮಾಡುವ, ಒಳಗಿನ ಮುಳ್ಳುಗಳನ್ನು ಮೈಮೇಲೆ ಎಬ್ಬಿಸುವಂತಹ ನನ್ನ ಕೈ ಗಡಿಯಾರದ ಸ್ವರೂಪ ಹೊರಬೀಳುವುದೆಂಬ ಹೆದರಿಕೆ ! ಇದಲ್ಲದೆ ಇನ್ನೂ ಒಂದು ಹೆದರಿಕೆ. ಸಿಂಪಿಗನಿಗೆ ಕೂಲಿಯಲ್ಲಿ ನೂರಕ್ಕೆ ಹತ್ತು ಕಡಮೆ ಕೊಡುವೆ ಎಂದಾಗ ಅವನು ಬಟ್ಟೆಯನ್ನಳೆಯುವ ಇಂಚುಪಟ್ಟಿಯಲ್ಲೂ ನೂರಕ್ಕೆ ಹತ್ತು ಕಡಮೆ ಎಂದನು ! ಅಂತೆ, ದೋತರವೊಂದನ್ನೆ ಅಗಲಿಗೂ, ಉದ್ದಕ್ಕೂ ನೂರಕ್ಕೆ ಹತ್ತರಷ್ಟು ಕಡಮೆ ಮಾಡಿದೆ; ಸುದೈವದಿಂದ 'ಶುದ್ಧ ಖಾದೀ' ಇದ್ದುದರಿಂದ ನೀರಿನಲ್ಲಿ ಹಾಕಿದಮೇಲೆ ೪೫ಕ್ಕೆ ೪೨ರಂತೆ ಇನ್ನೂ ಕಡಿಮೆಯಾಯಿತು. ಇದಲ್ಲವೆ ಸ್ವಾರ್ಥತ್ಯಾಗದ ಸಂಕೇತ? ಕೋಟು ಮೊದಲಿನ ಅಳತೆಯದೆ ಇದ್ದುದರಿಂದ ಒಳಗೆ ಶರ್ಟನ್ನು ಉಪಯೋಗಿಸುವ ಆವಶ್ಯಕತೆಯೆ ಬೀಳಲಿಲ್ಲ. ಆದುದರಿಂದ, ವಾಚಕರೆ, cut your shirt according to your coat !

ಅಂದಿನಿಂದ ಸಂಸಾರದಲ್ಲಿ ನನಗೆ ಯಾವ ತೊಂದರೆಯೂ ಎನಿಸಿಲ್ಲ. ಭಾರತೀಯರಾದ ನಮಗೆ, ಸನಾತನ ವೈದಿಕಧರ್ಮ ಪರಂಪರೆಯಲ್ಲಿ ಬೆಳೆದ ನಮಗೆ, ಅನೇಕ ರಾಜರಾಳಿದರೂ ಅನೇಕ ಧರ್ಮಗಳ ತಿಕ್ಕಾಟವಾದರೂ ಇದ್ದಂತೆಯೆ ಉಳಿದ ನಮಗೆ ಇಂತಹ ಸಂಗತಿಯಿಂದ ತೊಂದರೆಯಾದೀತೆ? ಯಥಾ ರಾಜಾ ತಥಾ ಪ್ರಜಾಃ, ನಮ್ಮನ್ನಾಳುವವರು ಬಾಳುವಂತೆ ಬಟ್ಟೆ ಧರಿಸುವಂತೆ ನಾವೂ ಬಾಳುವೆವು; ನಾವೂ ಬಟ್ಟೆ ಧರಿಸುವೆವು. 'ನಾವು' ಎಂದರೆ ನಾವು, ನೀವು ಗಂಡಸರೆಲ್ಲ ಎಂದರ್ಥ; 'ನಾವು' ಎಂದರೆ ನಾನು ಮತ್ತು ನನ್ನ ಹೆಂಡರು-ಮಕ್ಕಳು ಎಂದರ್ಥವಲ್ಲ. ಯಾಕೆಂದರೆ ಛೆ! ಅದನ್ನೇನು ಹೇಳುವದು

ತಮ್ಮಂತಹ ಸುಜ್ಞಜನರ ಮುಂದೆ? ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ ಎಂದು ನಮ್ಮ ಹಿರಿಯರೆ ಹೇಳಿಲ್ಲವೆ? ಆಯಿತು, ಅದಕಾಗಿ ಅವರುಡುವ ಸೀರೆಯು ಯಾವಾಗಲೂ ಮೊಳಕಾಲ ಕೆಳಗೆಯೆ ಇರತಕ್ಕದ್ದಂತೆ! ತಮ್ಮ ಬುದ್ಧಿ ಮತ್ತೊಬ್ಬರಿಗೆ ಕಾಣಬಾರದೆಂಬ ದುಃಬುರ್ದ್ಧಿ! 'ನೀವು ತಲೆಗೆ ಟೊಪ್ಪಿಗೆಯನ್ನು ಹಾಕುವುದು ಬಿಟ್ಟರೆಂದರೆ ನಾನೂ ಸೀರೆಯ ಅಗಲಿನಲ್ಲಿ ಟೆನ್ ಪರ್ಸೆಂಟ್ ಕಟ್ ಮಾಡಿ ಮೊಳಕಾಲ ಮೇಲೆ ಸೀರೆಯನ್ನುಡುವೆ—ಅಲ್ಲಿಯವರೆಗೆ—' ಎಂದು ನಾಲಗೆ ಕಚ್ಚಿ ಅಣಕಿಸುವಂತೆ ಮೂಗು ಮುರಿದರು ನಮ್ಮವರು. 'ಹೇ, ಕರ್ತುಮಕರ್ತುಮನ್ಯಥಾಕರ್ತುಂ ಶಕ್ತವಾದ ಕಾಂಗ್ರೆಸ್ ಸರಕಾರವೆ, ಹಂಗಸಿನ ನಾಲಗೆಯಲ್ಲಿ ಟೆನ್ ಪರ್ಸೆಂಟ್ ಕಟ್ ಮಾಡಬಾರದಾಗಿತ್ತೆ?' ಎಂದು ಒಳಗಿಂದೊಳಗೆಯೆ ಗೊಣಗಿದೆ ನಾನು. ಸದ್ಯಕ್ಕಂತೂ ನನ್ನ ಹೆಂಡತಿಯ ನಾಲಗೆಯಿಂದ, ದಿನಾಲು ನನ್ನ ನಿದ್ರೆಯಲ್ಲಿ ಟೆನ್ ಪರ್ಸೆಂಟ್ ಕಟ್ ಆಯಿತು.

ಹೆಂಡತಿಯ ಮಾತು ಹೋಗಲಿ—ಆದರೆ ಹುಡುಗರು? ಆ ಗೋಳನ್ನಂತೂ ದೇವನೇ ಬಲ್ಲ. 'ದೇವನೇ ಬಲ್ಲ' ಎಂದು ನಾನು ಬೇಕಾಗಿಯೆ ಹೇಳಿದ್ದೇನೆ. 'ಒಂದೂ ಸಾಯದೆ ಹತ್ತು ಮಕ್ಕಳನ್ನು ಹಡೆದವರಿಗೆ ಒಂದು ಮಗುವನ್ನು ಪುಕ್ಕಟೆಯಾಗಿ ಕೊಡಲಾಗುವದು' ಎಂದು ದೇವನು ಎಲ್ಲಾದರೂ ಜಾಹೀರಾತನ್ನು ಕೊಟ್ಟಿರುವನೊ ಏನೊ? ನನ್ನ ಅನುಭವದ ಮಾತನ್ನು ಹೇಳುವೆ—ಅನ್ಯಥಾಗ್ರಹಿಕೆ ಬೇಡ, ದಯವಿಟ್ಟು. ಮಕ್ಕಳನ್ನೆಲ್ಲ ಶಾಲೆಗೆ ಕಳುಹಿಸುತ್ತಿರುವೆ. ಒಂದು ದಿವಸ ಎಲ್ಲರೂ ಪರೀಕ್ಷೆಯಲ್ಲಿ ನಾಪಾಸ (ಫೇಲ್) ಆಗಿ ಬಂದರು! 'ಯಾಕೆ' ಎಂದು ಕೇಳಿದರೆ 'ನಮಗೆ ದೊರೆತ ಮಾರ್ಕ್ಸ (ಗುಣ) ಗಳಲ್ಲಿ ನೂರಕ್ಕೆ ಹತ್ತು ಕಡಿಮೆಮಾಡಬೇಕೆಂದು ಸರಕಾರದವರ ಆಜ್ಞೆಯಾಗಿದೆಯಂತೆ' ಎಂದು ಹೇಳಿದರು! ನೋಡಿದಿರಾ, ವಾಚಕರೆ, ಮಾಸ್ತರ ಜನರಿಗಾದ ಕಟ್ ಜೊಕ್ಕಟ ಆಯಿತೊ ಪುಕ್ಕಟ ಆಯಿತೊ? ವ್ಯವಹಾರದಲ್ಲಿ ನಡೆಯದ ನಾಣ್ಯಗಳನ್ನು ಟಂಕಸಾಲೆಯಲ್ಲಿ ತಿರುಗಿ ತೆಗೆದುಕೊಳ್ಳುವರಂತೆ; ಹಾಗೆಯೆ ಎಲ್ಲಿಯೂ ನಡೆಯದ ನನ್ನ ಮಕ್ಕಳನ್ನು ದೇವನು ತಿರುಗಿ ತೆಗೆದುಕೊಳ್ಳಬಾರದೆ? ಇಲ್ಲವೆ ಮಕ್ಕಳೆಂಬ ಇನ್‌ಕಮ್ (Income ಉತ್ಪನ್ನ) ಹೆಚ್ಚಾಗಿದ್ದ ನಮ್ಮಂತಹರಿಂದ ಹೆಚ್ಚಾದ ಮಕ್ಕಳನ್ನೆ ಸರಕಾರದವರು ಟ್ಯಾಕ್ಸ (Tax = ಕರ) ಎಂದಾದರೂ ತೆಗೆದುಕೊಳ್ಳಬಾರದೆ? ಇಲ್ಲವಾದರೆ

ಹೀಗೆ ಇಬ್ಬರೂ ಕೂಡಿ ತಿರುಗಾಡಲು ಹೊರಟರೆ ನಾವಿಬ್ಬರೂ ಈ ಶತಮಾನದ ನವನಾಗರಿಕರಂತೆ ಕಾಣುವೆವೊ ಇಲ್ಲವೆ ರವಿವರ್ಮನ ಚಿತ್ರದಲ್ಲಿಯ ವಿಶ್ವಾಮಿತ್ರ-ಮೇನಕೆಯರಂತೆ ಕಾಣುವೆವೊ?

ಮಕ್ಕಳು ಹುಟ್ಟುವುದರಲ್ಲಿಯೆ—ಹರಹರಾ ತ್ರೀಟಿನ್ನ ಕಟ್ಟೇಶ್ವರಾ!

ಮನೆಯಲ್ಲಿ ಹೆಂಡಿರು-ಮಕ್ಕಳು ಹೀಗಿದ್ದರೂ ನನಗೆ ಯಾವ ತೊಂದರೆಯೂ ಎನಿಸಿಲ್ಲ ಎಂದು ಹೇಳಿದೆ, ಈಗಲಾದರೂ ಹಾಗೆಯೆ ಹೇಳುವೆ. ಯಾಕೆಂದರೆ—ಹೆಂಡಿರು ಮಕ್ಕಳೆಂದರೇನು? ಸಂಸಾರಸಾಗರದ ಮೇಲೇಳುವ ಕ್ಷಣಿಕ ಬುದ್ಬುದಗಳು! ಇದರಲ್ಲಿ ದೂರದೃಷ್ಟಿಯಿಂದ ವಿಚಾರಮಾಡಿದಲ್ಲಿ ನನಗೆ ನನ್ನ ಹೆಂಡತಿಯ ಮತ್ತು ಮಕ್ಕಳ ಮಾತೇ ಯೋಗ್ಯವೆನಿಸಿತು. ಇಲ್ಲವಾದರೆ, ನೀವೇ ಊಹಿಸಿ ನೋಡಿರಿ; ಈ ಕಡೆ ಮೊಳಕಾಲ ಮೇಲೆ ಸೀರೆಯನ್ನುಟ್ಟು ನನ್ನ ಹೆಂಡತಿ, ಈ ಕಡೆ ಶರ್ಟ ಇಲ್ಲದೆ ಮೊಳಕಾಲ ಮೇಲೆ ದೋತರವನ್ನುಟ್ಟ ನಾನು; ಹೀಗೆ ಇಬ್ಬರೂ ಕೂಡಿ ತಿರುಗಾಡಲು ಹೊರಟರೆ ನಾವಿಬ್ಬರೂ ಈ ಶತಮಾನದ ನವನಾಗರಿಕರಂತೆ ಕಾಣುವೆವೋ ಇಲ್ಲವೆ ರವಿವರ್ಮನ ಚಿತ್ರದಲ್ಲಿಯ ವಿಶ್ವಾಮಿತ್ರ-ಮೇನಕೆಯರಂತೆ ಕಾಣುವೆವೊ? ಅದರಂತೆಯೆ ನನ್ನ ಹುಡುಗರೆಲ್ಲರು ಪರೀಕ್ಷೆಯಲ್ಲಿ ಪಾಸಾಗಿದ್ದರೆಂದ ತಿಳಿಯೋಣ. ಮುಂದೆ ಅವರ ಗತಿ ಏನು ಹೊಟ್ಟೆ-ಬಟ್ಟೆಗಳ ಸ್ಥಿತಿ ಏನು? ಹೀಗಾ

‘ಸದ್ಯಕ್ಕಂತೂ ನನ್ನ ಹೆಂಡತಿಯ ನಾಲಗೆಯಿಂದ ದಿನಾಲು ನನ್ನ ನಿದ್ದೆಯಲ್ಲಿ—’
‘ಹಾಗೆಯೆ ಎಲ್ಲಿಯೂ ನಡೆಯದ ನನ್ನ ಮಕ್ಕಳನ್ನು—’
‘ಹಿರಿಯರ ಸತತ ಹಿಂಡುವಿಕೆಯಿಂದ ನಮ್ಮ ಕಿವಿಗಳು—’
‘ಸರಕಾರದವರು ಪ್ರತಿಯೊಬ್ಬ ಭಾರತೀಯನ ಆಯುಷ್ಯವನ್ನು—’
ಮೇಲಿನ ವಾಕ್ಯಗಳನ್ನು ಕಡಿದಿಟ್ಟಿದೆ. ಅದು ಯಾಕೆ? ಅವು ಏನು? ಎಂಬ ಮಹತ್ತ್ವದ ಪ್ರಶ್ನೆಗಳ ಉತ್ತರ ಈ ಲೇಖನದಲ್ಲಿದೆ.

ಕಟ್ (Cut) ಉ ಫಾರ್ ಬಿಕ್ಕಟ್ಟು

ಎಂಬ

ಮಹಾತತ್ತ್ವಕ್ಕೆ ಮಹಾಭಾಷ್ಯವ

“ಶ್ರೀರಂಗ”

‘ಅರ್ಥಕ್ಕೆ ವ್ಯತ್ಯಯ ಒದಗುವಲ್ಲಿ ಎರಡು ಶಬ್ದಗಳ ಸಂಧಿಯನ್ನು ಮಾಡಬಾರದು, ಉದಾಹರಣಾರ್ಥವಾಗಿ- ರಾಮನು + ಅಂಥ ಜಾಣನೆ= ರಾಮನಂಥ ಜಾಣನೆ!’- ಎಂದು ವ್ಯಾಕರಣವು ಕೈಯೆತ್ತಿ ಸಾರುತಿದೆ. ಆದರೇನು? ವಾಚಕಮಹಾಶಯರೆ, ಬಿಕ್ಕು + ಅಟ್ಟು=ಬಿಕ್ಕಟ್ಟು (ಎಂದರೆ ಬಿಕ್ಕನ್ನು ಹೊರಗಟ್ಟುವುದು ಎಂದರೆ ದುಃಖ) ಎಂದು ಹೇಳದೆ, ನಾನೀಗ ಬಿನ್+ಕಟ್ಟು=ಬಿಕ್ಕಟ್ಟು (ಎಂದರೆ ಕಟ್ಟು ಇಲ್ಲದಂಥಾದ್ದು) ಎಂದೇ ಸಂಧಿಯನ್ನು ಮಾಡಬೇಕಾಗಿದೆ. ಯಾಕೆ? ‘ಬಿನ್+ಕಟ್ಟು’ ಎಂಬುದೆ ಇಂದು ಸುಸಂಧಿಯಾಗಿದೆ; ಇದನ್ನು ಯಾರೂ ಕಳೆದುಕೊಳ್ಳುವಂತಿಲ್ಲ. ಆದರೆ ನನಗೆ ಮಾತ್ರ ಆ ಸುಸಂಧಿ ಇಲ್ಲ, ಇದ್ದಿದ್ದರೆ ನಾನು ಈ ಮಾತನ್ನೆ ಹೇಳುತ್ತಿರಲಿಲ್ಲ. ನನಗೆ ಇದ್ದುದು ಕಟ್(cut) ಉ! ಎಂದರೇನು? ನಿಮಗೆ ತಿಳಿಯಬಹುದಲ್ಲವೆ? ಓಹೊ, ಮರೆತೆ! ಈಗ ಹಿಂದೀ ಭಾಷೆಯನ್ನು ಒತ್ತಾಯವಾಗಿ (ಕತ್ತಾಯದಿಂದ) ಕಲಿಸುವರಲ್ಲನೆ? ಹಿಂದೀ ಕಲಿತರೂ ನೀವು ಹೇರ್‌ಕಟ್ (hair-cut) ಮಾಡಿಸುತ್ತಿರಬಹುದಲ್ಲ? ಆಹಾ! ಆ ಕಟ್ ಊ ಈ ಕಟ್ ಊ ಒಂದೇ! ಇಷ್ಟೇ ವ್ಯತ್ಯಾಸ- ಒಂದು ಸರಕಾರೀ, ಇನ್ನೊಂದು ಖಾಸಗಿ.

ಸರಕಾರದ್ದೂ ಒಂದು ಕಟ್ಟು ಇದೆ. ನಾನು ಆ ‘ಕಟ್ಟಿ’ಗೆ ಸೇರಿದವ. ಸೇಕಡಾ ದಹಾ- ಒಳತೆನ್ನಿ- ನೂರಕ್ಕೆ ಹತ್ತು ಎಂಬ ಕಟ್ಟು. ಸರಕಾರದಿಂದ ನಿಮಗೆ ಸಲ್ಲತಕ್ಕ ಎಲ್ಲದರಲ್ಲಿ ನೂರಕ್ಕೆ ಹತ್ತು ಕಡಮೆ- ನೂರರಲ್ಲಿ ಹತ್ತು ಕಡಿದೊಗೆವುದು- ಟೆನ್ ಪರ್ಸೆಂಟ್‌ಕಟ್ ಹೀಗೆ ಹಿಂದುಸ್ತಾನದ ಮಾತೃಭಾಷೆಯಲ್ಲಿ ಹೇಳಬಹುದು.. ನನಗೆ ತಿಂಗಳಿಗೆ ಎರಡು ನೂರು ಸಂಬಳ– ಇದ್ದಿತು; ಈಗ ಅದೇ ೧೮೦ ಆಗಿದೆ. ಆದುದರಿಂದ ನನಗೆ ತೊಂದರೆ ಇಲ್ಲವೆ ವ್ಯಸನವಾಗಿರಬಹುದೆಂದ. ನೀವು ಕಲ್ಪಿಸಿದ್ದರೆ- ನಿಮ್ಮ ಕಲ್ಪನೆ ತಪ್ಪು ಎಂದು ತೋರಿಸಿಕೊಡುವೆ- ಆದುದರಿಂದ ಕಲ್ಪಿಸುವ ಗೋಜಿಗೆ ಹೋಗಬೇಡಿರಿ. ಈಗ ನಾನು ಉಡುವ ದೋತರ ೪೫ ಇಂಚು ಅಗಲು ಇದೆ, ಮೊದಲು ೫೦ ಇಂಚು ಇದ್ದಿತು; ಟೆನ್‌ಪರ್ಸೆಂಟ್ ಕಟ್! ನನ್ನ ಆಫೀಸ್ ಮೇಲಧಿಕಾರಿಗಳು ಕೇಳಿದರು, ಕಾಲು ಕಾಣಿಸುವಂತೆ ನಾನು ಅಸಹ್ಯವಾಗಿ ದೋತರವನ್ನುಟ್ಟುದೇಕೆ- ಎಂದು. Sir, cut your coat according to your cloth — ಎಂದು ಅವರದೆ ಗಾದೆಯ ಮಾತನ್ನು ಹೇಳಿದೆ. ‘ಹಾಗಾದರೆ ನಿನ್ನ ಕೋಟನ್ನು ಯಾಕೆ ಕಡಮೆ ಅಳತೆಗಿಳಿಸಿಲ್ಲ?’ ಎಂದರು ಸಾಹೇಬರು. ನಾನು ನಿರುತ್ತರನಾದೆ. ಕೋಟಿನ ಮೈಯನ್ನು ಕಡಮೆ ಮಾಡಿದರೆ ಕಿಸೆ (ಜೇಬು)ಗಳೆ ಕತ್ತರಿಸುವುವಲ್ಲ ಎಂದು ಹೆದರಿಕೆ; ಕೋಟಿನ ತೋಳ್ಗಳನ್ನು ಕಡಮೆ ಮಾಡಿಸಿದರೆ ಯಾವಾಗಲೂ ಹನ್ನೆರಡು ಗಂಟೆಯನ್ನೆ ತೋರಿಸುವ, ಕೀಲಿ ಕೊಟ್ಟಾಗ ಮಾತ್ರ ನಡೆದಂತೆ ಮಾಡುವ, ಒಳಗಿನ ಮುಳ್ಳುಗಳನ್ನು ಮೈಮೇಲೆ ಎಬ್ಬಿಸುವಂತಹ ನನ್ನ ಕೈ ಗಡಿಯಾರದ ಸ್ವರೂಪ ಹೊರಬೀಳುವುದೆಂಬ ಹೆದರಿಕೆ! ಇದಲ್ಲದೆ ಇನ್ನೂ ಒಂದು ಹೆದರಿಕೆ. ಸಿಂಪಿಗನಿಗೆ ಕೂಲಿಯಲ್ಲಿ ನೂರಕ್ಕೆ ಹತ್ತು ಕಡಮೆ ಕೊಡುವೆ ಎಂದಾಗ ಅವನು ಬಟ್ಟೆಯನ್ನಳೆಯುವ ಇಂಚುಪಟ್ಟಿಯಲ್ಲೂ ನೂರಕ್ಕೆ ಹತ್ತು ಕಡಮೆ ಎಂದನು! ಅಂತೂ, ದೋತರವೊಂದನ್ನೆ ಅಗಲಿಗೂ, ಉದ್ದಕ್ಕೂ ನೂರಕ್ಕೆ ಹತ್ತರಷ್ಟು ಕಡಮೆ ಮಾಡಿದೆ; ಸುದೈವದಿಂದ ‘ಶುದ್ಧ ಖಾದೀ’ ಇದ್ದುದರಿಂದ ನೀರಿನಲ್ಲಿ ಹಾಕಿದಮೇಲೆ ೪೫ಕ್ಕೆ ೪೩ ದಂತೆ ಇನ್ನೂ ಕಡಿಮೆಯಾಯಿತು. ಇದಲ್ಲವೆ ಸ್ವಾರ್ಥತ್ಯಾಗದ ಸಂಕೇತ? ಕೋಟು ಮೊದಲಿನ ಅಳತೆಯದೆ ಇದ್ದುದರಿಂದ ಒಳಗೆ ಶರ್ಟನ್ನು ಉಪಯೋಗಿಸುವ ಆವಶ್ಯಕತೆಯೆ ಬೀಳಲಿಲ್ಲ. ಆದುದರಿಂದ, ವಾಚಕರೆ, cut your shirt according to your coat!

ಅಂದಿನಿಂದ ಸಂಸಾರದಲ್ಲಿ ನನಗೆ ಯಾವ ತೊಂದರೆಯೂ ಎನಿಸಿಲ್ಲ. ಭಾರತೀಯರಾದ ನಮಗೆ, ಸನಾತನ ವೈದಿಕಧರ್ಮ ಪರಂಪರೆಯಲ್ಲಿ ಬೆಳೆದ ನಮಗೆ, ಅನೇಕ ರಾಜರಾಳಿದರೂ ಅನೇಕ ಧರ್ಮಗ ... ತಿಕ್ಕಾಟವಾದರೂ ಇದ್ದಂತೆಯೆ ಉಳಿದ ನಮಗೆ ಇಂತಹ ಸಂಗತಿಯಿಂದ ತೊಂದರೆಯಾದೀತೆ? ಯಥಾ ರಾಜಾ ತಥಾ ಪ್ರಜಾಃ ನಮ್ಮನ್ನಾಳುವವರು ಬಾಳುವಂತೆ ಬಟ್ಟೆ ಧರಿಸುವಂತೆ ನಾವೂ ಬಾಳುವೆವು; ನಾವು ಬಟ್ಟೆ ಧರಿಸುವೆವು. ‘ನಾವು’ ಎಂದರೆ ನಾವು, ನೀವು ಗಂಡಸರೆಲ್ಲ ಎಂದರ್ಥ. ‘ನಾವು’ ಎಂದರೆ ನಾನು ಮತ್ತು ನನ್ನ ಹೆಂಡರು-ಮಕ್ಕಳು ಎಂದರ್ಥವಲ್ಲ. ಯಾಕೆಂದರೆ ಛೆ! ಅದನ್ನೇನು ಹೇಳುವದ

ತಮ್ಮಂತಹ ಸುಜ್ಞಜನರ ಮುಂದೆ? ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ ಎಂದು ನಮ್ಮ ಹಿರಿಯರೇ ಹೇಳಿಲ್ಲವೆ? ಆಯಿತು, ಅದಕಾಗಿ ಅವರುಡುವ ಸೀರೆಯು ಯಾವಾಗಲೂ ಮೊಳಕಾಲ ಕೆಳಗೆಯೇ ಇರತಕ್ಕದ್ದಂತೆ! ತಮ್ಮ ಬುದ್ಧಿ ಮತ್ತೊಬ್ಬರಿಗೆ ಕಾಣಬಾರದೆಂಬ ದುರ್ಬುದ್ಧಿ! 'ನೀವು ತಲೆಗೆ ಟೊಪ್ಪಿಗೆಯನ್ನು ಹಾಕುವುದು ಬಿಟ್ಟರೆಂದರೆ ನಾನೂ ಸೀರೆಯ ಅಗಲಿನಲ್ಲಿ ಟೆನ್ ಪರ್ಸೆಂಟ್ ಕಟ್ ಮಾಡಿ ಮೊಳಕಾಲ ಮೇಲೆ ಸೀರೆಯನ್ನುಡುವೆ—ಅಲ್ಲಿಯವರೆಗೆ—' ಎಂದು ನಾಲಗೆ ಕಚ್ಚಿ ಅಣಕಿಸುವಂತೆ ಮೂಗು ಮುರಿದರು ನಮ್ಮವರು. 'ಹೇ, ಕರ್ತುಮಕರ್ತುಮನ್ಯಥಾಕರ್ತುಂ ಶಕ್ತವಾದ ಕಾಂಗ್ರೆಸ್ ಸರಕಾರವೆ, ಹೆಂಗಸಿನ ನಾಲಗೆಯಲ್ಲಿ ಟೆನ್ ಪರ್ಸೆಂಟ್ ಕಟ್ ಮಾಡಬಾರದಾಗಿತ್ತೆ?' ಎಂದು ಒಳಗಿಂದೊಳಗೆಯೆ ಗೊಣಗಿದೆ ನಾನು. ಸದ್ಯಕ್ಕಂತೂ ನನ್ನ ಹೆಂಡತಿಯ ನಾಲಗೆಯಿಂದ, ದಿನಾಲು ನನ್ನ ನಿದ್ದೆಯಲ್ಲಿ ಟೆನ್ ಪರ್ಸೆಂಟ್ ಕಟ್ ಆಯಿತು.

ಹೆಂಡತಿಯ ಮಾತು ಹೋಗಲಿ—ಆದರೆ ಹುಡುಗರು? ಆ ಗೋಳನ್ನಂತೂ ದೇವನೇ ಬಲ್ಲ. 'ದೇವನೇ ಬಲ್ಲ' ಎಂದು ನಾನು ಬೇಕಾಗಿಯೆ ಹೇಳಿದ್ದೇನೆ. 'ಒಂದೂ ಸಾಯದೆ ಹತ್ತು ಮಕ್ಕಳನ್ನು ಹಡೆದವರಿಗೆ ಒಂದು ಮಗುವನ್ನು ಪುಕ್ಕಟೆಯಾಗಿ ಕೊಡಲಾಗುವದು' ಎಂದು ದೇವನು ಎಲ್ಲಾದರೂ ಜಾಹೀರಾತನ್ನು ಕೊಟ್ಟಿರುವನೊ ಏನೊ? ನನ್ನ ಅನುಭವದ ಮಾತನ್ನು ಹೇಳುವೆ—ಅನ್ಯಥಾಗ್ರಹಿಕೆ ಬೇಡ, ದಯವಿಟ್ಟು. ಮಕ್ಕಳನ್ನೆಲ್ಲ ಶಾಲೆಗೆ ಕಳುಹಿಸುತ್ತಿರುವೆ. ಒಂದು ದಿವಸ ಎಲ್ಲರೂ ಪರೀಕ್ಷೆಯಲ್ಲಿ ನಾಪಾಸ (ಫೇಲ್) ಆಗಿ ಬಂದರು! 'ಯಾಕೆ' ಎಂದು ಕೇಳಿದರೆ 'ನಮಗೆ ದೊರೆತ ಮಾರ್ಕ್ಸ (ಗುಣ) ಗಳಲ್ಲಿ ನೂರಕ್ಕೆ ಹತ್ತು ಕಡಿಮೆಮಾಡಬೇಕೆಂದು ಸರಕಾರದವರ ಆಜ್ಞೆಯಾಗಿದೆಯಂತೆ' ಎಂದು ಹೇಳಿದರು! ನೋಡಿದಿರಾ, ವಾಚಕರೆ, ಮಾಸ್ತರ ಜನರಿಗಾದ ಕಟ್ ಚೊಕ್ಕಟ ಆಯಿತೊ ಪುಕ್ಕಟ ಆಯಿತೊ? ವ್ಯವಹಾರದಲ್ಲಿ ನಡೆಯುದ ನಾಣ್ಯಗಳನ್ನು ಟಂಕಸಾಲೆಯಲ್ಲಿ ತಿರುಗಿ ತೆಗೆದುಕೊಳ್ಳುವರಂತೆ; ಹಾಗೆಯೆ ಎಲ್ಲಿಯೂ ನಡೆಯದ ನನ್ನ ಮಕ್ಕಳನ್ನು ದೇವನು ತಿರುಗಿ ತೆಗೆದುಕೊಳ್ಳಬಾರದೆ? ಇಲ್ಲವೆ ಮಕ್ಕಳೆಂಬ ಇನ್‌ಕಮ್ (Income ಉತ್ಪನ್ನ) ಹೆಚ್ಚಾಗಿದ್ದ ನಮ್ಮಂತಹರಿಂದ ಹೆಚ್ಚಾದ ಮಕ್ಕಳನ್ನೆ ಸರಕಾರದವರು ಟ್ಯಾಕ್ಸ (Tax = ಕರ) ಎಂದಾದರೂ ತೆಗೆದುಕೊಳ್ಳಬಾರದೆ? ಇಲ್ಲವಾದರೆ ಮಕ್ಕಳು ಹುಟ್ಟಿದ್ದರಲ್ಲಿಯೆ— ಹರಹರಾ ಶ್ರೀಚೆನ್ನಕಟ್ಟೇಶ್ವರಾ!

ಮನೆಯಲ್ಲಿ ಹೆಂಡಿರು-ಮಕ್ಕಳು ಹೀಗಿದ್ದರೂ ನನಗೆ ಯಾವ ತೊಂದರೆಯೂ ಎನಿಸಿಲ್ಲ ಎಂದು ಹೇಳಿದೆ, ಈಗಲಾದರೂ ಹಾಗೆಯೆ ಹೇಳುವೆ. ಯಾಕೆಂದರೆ— ಹೆಂಡಿರು ಮಕ್ಕಳೆಂದರೇನು? ಸಂಸಾರಸಾಗರದ ಮೇಲೇಳುವ ಕ್ಷಣಿಕ ಬುದ್ಬುದಗಳು!

ಹೀಗೆ ಇಬ್ಬರೂ ಕೂಡಿ ತಿರುಗಾಡಲು ಹೊರಟರೆ ನಾವಿಬ್ಬರೂ ಈ ಶತಮಾನದ ನವನಾಗರಿಕರಂತೆ ಕಾಣುವೆವೊ ಇಲ್ಲವೆ ರವಿವರ್ಮನ ಚಿತ್ರದಲ್ಲಿಯ ವಿಶ್ವಾಮಿತ್ರ-ಮೇನಕೆಯರಂತೆ ಕಾಣುವೆವೊ?

ಇದರಲ್ಲಿ ದೂರದೃಷ್ಟಿಯಿಂದ ವಿಚಾರಮಾಡಿದಲ್ಲಿ ನನಗೆ ನನ್ನ ಹೆಂಡತಿಯ ಮತ್ತು ಮಕ್ಕಳ ಮಾತೇ ಯೋಗ್ಯವೆನಿಸಿತು. ಇಲ್ಲವಾದರೆ, ನೀವೇ ಊಹಿಸಿ ನೋಡಿರಿ; ಈ ಕಡೆ ಮೊಳಕಾಲ ಮೇಲೆ ಸೀರೆಯನ್ನುಟ್ಟು ನನ್ನ ಹೆಂಡತಿ, ಈ ಕಡೆ ಶರ್ಟು ಇಲ್ಲದೆ ಮೊಳಕಾಲ ಮೇಲೆ ದೋತರವನ್ನುಟ್ಟ ನಾನು; ಹೀಗೆ ಇಬ್ಬರೂ ಕೂಡಿ ತಿರುಗಾಡಲು ಹೊರಟರೆ ನಾವಿಬ್ಬರೂ ಈ ಶತಮಾನದ ನವನಾಗರಿಕರಂತೆ ಕಾಣುವೆವೊ ಇಲ್ಲವೆ ರವಿವರ್ಮನ ಚಿತ್ರದಲ್ಲಿಯ ವಿಶ್ವಾಮಿತ್ರ-ಮೇನಕೆಯರಂತೆ ಕಾಣುವೆವೊ? ಅದರಂತೆಯೆ ನನ್ನ ಹುಡುಗರೆಲ್ಲರೂ ಪರೀಕ್ಷೆಯಲ್ಲಿ ಪಾಸಾಗಿದ್ದರೆಂದು ತಿಳಿಯೋಣ. ಮುಂದೆ ಅವರ ಗತಿ ಏನು? ಹೊಟ್ಟೆ-ಬಟ್ಟೆಗಳ ಸ್ಥಿತಿ ಏನು? ಹೀಗಾಗಿ

ನನಗೆ ನಿಜವಾಗಿಯೂ ಯಾವ ತೊಂದರೆ ಎನಿಸಿಲ್ಲ, ಎನಿಸುವಂತಿಲ್ಲ.

ಒಂದೇ ಒಂದು ತೊಂದರೆ ಮಾತ್ರ ಇದೆ. ನನ್ನ ಸಂಬಳದಲ್ಲಿ ನೂರಕ್ಕೆ ಹತ್ತು ಕಡಿತವಾಯ್ತೆಂದಲ್ಲ; ನೂರರಲ್ಲಿ ಹತ್ತು ಕಳೆದರೆ ಒಂದೇ ಸೊನ್ನೆ ಉಳಿಯುವುದೆಂದು ಯಾರೋ ಹೇಳಿದರಂತೆ, ಆ ಮಾತು ನಿಜ ಎಂದು ನನಗೀಗ ತೋರುತ್ತಿದೆ. ನನ್ನ ನೂರರಲ್ಲಿ ನನ್ನ ಹತ್ತು ಕಳೆದುದಕ್ಕೆ ನನ್ನ ಎಷ್ಟೋ ಸಾಹುಕಾರರಿಗೆ ಒಂದೇ ಒಂದು ಸೊನ್ನೆ ಉಳಿದಂತಾಗಿದೆ. ಆದುದರಿಂದ ನನಗೆ ನನ್ನ ವಿಷಯವಾಗಿ, ಒಂದು ವ್ಯಕ್ತಿಯ ವಿಷಯವಾಗಿ ಯಾವ ತೊಂದರೆಯೂ ಎನಿಸಿಲ್ಲ. ವಿಶಾಲದೃಷ್ಟಿಯಿಂದ ವಿಚಾರಮಾಡಿದಾಗ ಮಾತ್ರ ನನಗೆ ತೊಂದರೆ ಎನಿಸಿತು, ಒಂದು ಮಹಾತತ್ತ್ವದ ದುರುಪಯೋಗವಾಗುವುದಲ್ಲ ಎಂದು ವ್ಯಸನವೂ ಎನಿಸಿತು. ನೂರರಲ್ಲಿ ಹತ್ತು ಕಡಮೆ ಮಾಡಬೇಕೆಂಬುದು ಜಗತ್ತನ್ನು, ಸುವರ್ಣಭೂಮಿಯಾದ ನಮ್ಮೀ ಭಾರತವನ್ನು ಉಳಿಸುವ, ಉದ್ಧರಿಸುವ ತತ್ತ್ವ; ಆ ತತ್ತ್ವದ ಸದ್ವಿನಿಯೋಗವಾದಲ್ಲಿ ಮಾತ್ರ ಉದ್ಧಾರವಾಗುವುದೆಂದು ನನ್ನ ವಿಚಾರ. ನೂರಕ್ಕೆ ಹತ್ತು ಕಡಮೆ ಮಾಡಬೇಕಾದ ವಸ್ತುಗಳ ಮತ್ತು ವಿಷಯಗಳ ಪಟ್ಟಿಯೆ ಸರಕಾರಕ್ಕೆ ಸಮರ್ಪಕವಾಗಿ ತೋಚಿಲ್ಲ ಎಂದು ನಾನು ಧಾರ್ಷ್ಟ್ಯದಿಂದಲೂ ವಿನಯದಿಂದಲೂ ಹೇಳಬಯಸುತ್ತೇನೆ; ಮತ್ತು ಸರಕಾರದ ಅವಗಾಹನೆಗಾಗಿ ಆ ವಸ್ತುಗಳ ಮತ್ತು ವಿಷಯಗಳ ಪಟ್ಟಿಯನ್ನೂ ಇಲ್ಲಿ ಕೊಡ ಬಯಸುತ್ತೇನೆ.

೧. ಗೊತ್ತುವಳಿಗಳು (Resolutions). ಭಾರತದ ಚಳಿಗಾಲದ ವೈರು ಎಂದರೆ ಗೊತ್ತುವಳಿಗಳು ಎಂದು ಚಳಿಗಾಲದ ಅನೇಕ ಸಮ್ಮೇಳನಗಳಿಗೆ ಹೋಗಬೇಕಾಗುವ ಅನೇಕ ಜನರ ಅನಿವಾರ್ಯ ಅನುಭವಗಳಿಂದ ಹೇಳಬಹುದು. ಈ ಸಮ್ಮೇಳನಗಳ ಮುಖ್ಯ ಕೆಲಸವೆಂದರೆ ಗೊತ್ತುವಳಿಗಳನ್ನು ಸ್ವೀಕಾರಮಾಡುವುದು. ಇಂದು ಬೇಕಾದಲ್ಲಿ ರಜೆಯ ದಿನಗಳಲ್ಲಿ ತಿರುಗಾಡಿ ಬರುವಂತೆ ಝೋನ್ ಟಿಕೆಟ್ಟುಗಳಿದ್ದರೂ ಒಂದಕ್ಕಿಂತ ಹೆಚ್ಚು ಸಮ್ಮೇಳನವನ್ನು ನೋಡುವುದು ಸಹಸಾ ಯಾರಿಗೂ ಸಾಧ್ಯವಾಗುವುದಿಲ್ಲ. ಇದರಿಂದ ದೇಶದ ಜನರಲ್ಲಿ ಪರಸ್ಪರ ಪರಿಚಯ-ಸಹಕಾರಗಳು ಬೆಳೆಯುವುದಕ್ಕೆ ತೊಂದರೆಯಾಗುವುದು. ಅನೇಕ ಭಿನ್ನ-ಭಿನ್ನ ಜಾತಿ-ಭಾಷೆಗಳಿಂದ ಒಂದೆನಿಸಿದ ಭಾರತವನ್ನು ಒಂದುಗೂಡಿಸಲು ನಿಂತ ರಾಷ್ಟ್ರೀಯ ಸರಕಾರದವರು ಈ ಪರಿಚಯ-ಸಹಕಾರಗಳು ಬೆಳೆಯುವಂತಲೇ ಮಾಡಬೇಕಲ್ಲವೆ? ಎಂದರೆ ಅನೇಕ ಜನರು ಅನೇಕ ಭಾಗಗಳಲ್ಲಿ ನಡೆಯುವ ಅನೇಕ ಸಮ್ಮೇಳನಗಳನ್ನು ನೋಡುವಂತೆ ಮಾಡಬೇಕಲ್ಲವೆ? ಅದಕಾಗಿ ಸಮ್ಮೇಳನಗಳಲ್ಲಾಗುವ ಗೊತ್ತುವಳಿ (ಇದರ ಹೊರತಾಗಿ ಮತ್ತೇನೂ ಅಲ್ಲಿ ಇರುವುದಿಲ್ಲವಾದ್ದರಿಂದ) ಗಳ ಅಳತೆಯಲ್ಲಿ ನೂರಕ್ಕೆ ಹತ್ತರಷ್ಟಾದರೂ ಕಡಮೆ ಮಾಡುವುದು ವಿಹಿತವಲ್ಲವೆ? ಉದಾಹರಣಾರ್ಥವಾಗಿ ಪ್ರತಿಯೊಂದು ಗೊತ್ತುವಳಿಯಲ್ಲಿಯ 'ಇಂದು ಇಂತಹ ಊರಲ್ಲಿ ಇಷ್ಟನೆಯ ಅಧಿವೇಶನಕ್ಕಾಗಿ ನೆರೆದ...... ಜೋರಾಗಿ, ತಲೆವಾಗಿ, ಹಟದಿಂದ ಕೈಮುಗಿದು ಪ್ರಾರ್ಥಿಸುತ್ತಿದೆ' ಎಂಬ ಶಬ್ದಗಳನ್ನು ತೆಗೆದರೆ? ಗೊತ್ತುವಳಿಯನ್ನು ಓದುವುದರಲ್ಲೂ ಸ್ವಲ್ಪ ವೇಳೆ ವೆಚ್ಚವಾಗುವುದು; ಒಂದೊಂದು ಸಲ ಎಲ್ಲ ಓದಿದ ಮೇಲೆ ಅದರಂತೆ ನಡೆಯಲು ಯತ್ನಿಸಲು ಐದಾರು ನಿಮಿಷಗಳವರೆಗಾದರೂ ಸಮಯ ದೊರೆಯಬಹುದು. ಮುಖ್ಯವಾಗಿ ಬಂದವರಿಗೆ ಅಲ್ಲಿಂದ ಬೇಗನೆ ಎದ್ದು ಹೊರಹೊರಟು ಮುಂದಿನ ಸಮಾರಂಭದಲ್ಲಿ ಭಾಗವಹಿಸಲು ಬರುವುದು. ಇದಲ್ಲದೆ ಭಾರತದ ಇತಿಹಾಸವನ್ನು ಬರೆಯುತ್ತಿರುವ ಚಿತ್ರಗುಪ್ತರಿಗೆ ಸಪ್ತಸಮುದ್ರಗಳ ಮಸಿಯನ್ನೆಲ್ಲ ಗೊತ್ತುವಳಿಗಳಿಗಾಗಿಯೆ ವೆಚ್ಚಿಸುವ ಹೆದರಿಕೆ ತಪ್ಪುವುದು. ಅಂತೂ ಸರಕಾರದವರು ಈ ವಿಷಯವನ್ನು ಹೆಚ್ಚಾಗಿ ಗಮನಿಸಿದರೆ ದೇಶದ ಐಕ್ಯಕ್ಕಾಗಿ ದೊಡ್ಡದೊಂದು ಹೆಜ್ಜೆಯನ್ನಿಟ್ಟಂತಾಗುವುದು.

೨. ಎರಡನೆಯ ವಿಷಯವು ತುಸು ಸೂಕ್ಷ್ಮವಿದೆ. ತಾವು ವಿಶಾಲಹೃದಯ (ಟೆನ್‌ಪರ್ಸೆಂಟ್ ಹೃದಯವಲ್ಲ) ದಿಂದ ಕೇಳುವಿರೆಂಬ ಆಸೆಯಿಂದಲೆ ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಇಂದು ಅನೇಕ ಜಾತಿಗಳಿವೆ. ಪ್ರತಿಯೊಂದು ಜಾತಿಗೂ ಒಂದು ಸಾಂಕೇತಿಕ ಬಾಹ್ಯಚಿಹ್ನವಿದೆ. ಈ ಚಿಹ್ನವಸ್ತುವಿನ ಆಕಾರ-ಅಳತೆಗಳಲ್ಲಿ ನೂರಕ್ಕೆ ಹತ್ತರಷ್ಟಾದರೂ ಕಡಮೆ ಮಾಡಲೇಬೇಕೆಂದು ನನ್ನ ಹಟವಿದೆ. ಇದೇನು ಹುಚ್ಚು? ಎಂದು ತಾವು ಹೀಯಾಳಿಸ ಬಾರದು. ವಿಶಾಲಹೃದಯದೊಡನೆ ದೂರದೃಷ್ಟಿಯನ್ನೂ ಬೆರಸಿದರೆ ನನ್ನ ಸೂಚನೆಯ ಮಹತ್ತ್ವವು ತಮಗೆ ತಿಳಿಯಬಹುದು. ಇಂದು ಧರ್ಮವೀರರಾದ ನಾವು- ಭಾರತೀಯರು-ಜಾತಿಯ ಅಭಿಮಾನದಿಂದ ಜೀವ ಕೊಡಲು ಕೂಡ ಸಿದ್ಧರಿದ್ದೇವೆ. ಆದರೆ ರಾಷ್ಟ್ರೀಯ ದೃಷ್ಟಿಯಿಂದ ಜೀವದ ಮಹತ್ತ್ವವು ಕೊಡುವುದಕ್ಕಿಂತ ಇಡುವುದರಲ್ಲಿದೆ. ಇಂದು ಜಾತಿಯ ನಿಮಿತ್ತವಾಗಿ ಕೆಲಸ ಸಿಕ್ಕದ ಒಬ್ಬನು ನಿರಾಶೆಗೊಳಗಾಗಿ ಜಾತಿಯ ಚಿಹ್ನವಸ್ತುವಿನಿಂದ ಉರುಲನ್ನು ಹಾಕಿಕೊಂಡಾಗಲಿ ಮರ್ಮಗಾಯವನ್ನು ಮಾಡಿಕೊಂಡಾಗಲಿ ಸಾಯಬಹುದು; ಅದರಂತೆಯೆ ಜಾತಿಯ ನಿಮಿತ್ತವಾಗಿಯೆ ಕೆಲಸವನ್ನು ದೊರಕಿಸಿದ ಇನ್ನೊಬ್ಬನು ಆಫೀಸಿನಲ್ಲಿ ಚಿಹ್ನವಸ್ತುವಿನ ಅರ್ಚನೆ ಆರಾಧನೆಗಳನ್ನು ನಡೆಸಬಹುದು, ಆ ಮೇಲೆ ಮೇಲಧಿಕಾರಿಯು ಅವನನ್ನು- ಅಂತೂ, ಅಪಾಯವಾಗದಂತೆ ನೋಡಿಕೊಂಡು, ಜೀವಗಳನ್ನು ಉಳಿಸಿಕೊಂಡು, ರಾಷ್ಟ್ರದ ಹಿತವನ್ನೆ ಮಾಡುವ ಉದ್ದೇಶದಿಂದ ಪ್ರತಿಯೊಂದು ಜಾತಿಯ ಸಾಂಕೇತಿಕ ಚಿಹ್ನವಸ್ತುಗಳ ಆಕಾರ ಅಳತೆಗಳಲ್ಲಿ ನೂರಕ್ಕೆ ಇಂತಿಷ್ಟರನ್ನು ಕಡಿಮೆಯಾಗಲೇಬೇಕು. ಕೈಗೆ ಸಹಜವಾಗಿ ನಿಲುಕುವಂತೆ ಕೀಲಿ (ಬೀಗದ) ಕೈಗಳನ್ನು ತೂಗಬಿಡಲು ಸಣ್ಣದಾದ ಜನಿವಾರವು ಅನುಕೂಲವಾಗುವುದಿಲ್ಲವೆಂದೂ ಇದಲ್ಲದೆ ಆ ಕೀಲಿ (ಬೀಗದ) ಕೈಗಳ ಸುರಕ್ಷಿತತೆಗಾಗಿ ಜನಿವಾರವು ದಾರಕ್ಕಿಂತ ತಂತಿಯದಾಗಿರಬೇಕೆಂದೂ ನನ್ನ ಬ್ರಾಹ್ಮಣ ಗೆಳೆಯರೊಬ್ಬರು ಸೂಚಿಸಿದ್ದಾರೆ. ಆದರೆ ಸಮಾಜದ ನಿಸ್ವಾರ್ಥ

ಸೇವಕರೆನಿಸಬೇಕಾದ ಬ್ರಾಹ್ಮಣರಿಗೆ ಕೀಲಿ ಕೈಗಳೇಕೆ? (ಏ. ಸೂ. ಕೀಲಿಕೈ ಎಂದರೆ ಊಟದ ಕೈಯಲ್ಲ ಎಂಬುದನ್ನು ವಾಚಕರು ಗಮನಿಸಬೇಕಾದ ವಿಷಯ; ಊಟವಾದ ಮೇಲೆ ಹಲ್ಲುಗಳಲ್ಲಿ ಸಿಕ್ಕ ಅನ್ನದ ತುಣುಕುಗಳನ್ನು ತೆಗೆಯುವುದು ಕೀಲಿಕೈ).

೩. ಮೂರನೆಯದು ಬಹಳೇ ಮಹತ್ವದ ವಸ್ತುವಾಗಿದೆ; ಸರಕಾರದ ಒಂದು ಡಿಪಾರ್ಟ್‌ಮೆಂಟಿಗೆ ಸಂಬಂಧಿಸಿದೆ. ಅದಾವುದೆಂದರೆ ಮನಿಯಾರ್ಡರ್ ಫಾರ್ಮು. ಇಷ್ಟೊಂದುದ್ದವಾದ ಫಾರ್ಮನ್ನು ತಯಾರಿಸಿ ಸರಕಾರಕ್ಕೆ ಕಾಗದದ ವೆಚ್ಚವು ಹೆಚ್ಚಾಗುವುದು. ಆದುದರಿಂದ ಈ ಫಾರ್ಮಿನ ಕಾಗದದ ಅಳತೆಯಲ್ಲಿ ನೂರಕ್ಕೆ ಹತ್ತರಷ್ಟು ಕಡಮೆಮಾಡಿದರೆ ಜನತೆಗೂ ಹಿತ, ಸರಕಾರಕ್ಕೂ ಮಿತ. ಈಗಿದ್ದ ಫಾರ್ಮಿನಲ್ಲಿ 'ಪೇಯಿ' (ಮನಿಯಾರ್ಡರನ್ನು ಸ್ವೀಕರಿಸುವವ) ಎಂಬ ಒಂದು ಮಾತಿಗಾಗಿ ಒಂದು-ಒಂದೂವರೆ ಇಂಚು ಕಾಗದ ಬೇಕಾಗುವುದು. ಇದನ್ನಷ್ಟು ತೆಗೆದುಬಿಟ್ಟರೆಂದು ತಿಳಿಯುವಾ. ಸರಕಾರಕ್ಕೆ ಅಷ್ಟು ಕಾಗದದ ಉಳಿತಾಯವಾದಂತಾಯಿತು; ಇತ್ತ 'ಪೇಯಿ' (ಸ್ವೀಕರಿಸುವವನೆ) ಇಲ್ಲದಂತಾಗಿ ಮನಿಯಾರ್ಡರು ಕಳುಹಿಸುವ ವೆಚ್ಚವೂ ನಾಗರಿಕನಿಗೆ ಉಳಿದಂತಾಯಿತು. ಒಟ್ಟು, ಪರಸ್ಪರಂ ಭಾವಯಂತಃ ಶ್ರೇಯಃಪರಮವಾಪ್ಸ್ಯಥ ಎಂಬ ಭಗವದುಕ್ತಿಯನ್ನೂ ನಡೆಸಿದಂತಾಯಿತು. ಅಲ್ಲೆಂದರೆ ನರಕ ತಪ್ಪೀತೆ?

೪. ನಾಲ್ಕನೆಯ ವಿಷಯವನ್ನು ಹೇಳುವುದಕ್ಕೆ ಮುಂಚೆ ನನ್ನದೊಂದು ಪ್ರಾರ್ಥನೆ ಇದೆ; ಆ ಮಾತು ಅರಸಿಕತನವೆಂದು ತಾವು ಕೊಳ್ಳನೆ ನಕ್ಕುಬಿಡಬಾರದು. ನಿಜವಾಗಿಯೂ ನಾನು ಹೇಳುವ ವಸ್ತುವಿನಲ್ಲಿ 'ಕಡಿತವಾದರೆ ನಮ್ಮ ಸಾಮಾಜಿಕ ಮತ್ತು ನೈತಿಕ ಪ್ರಗತಿಯಾಗುವುದು ಖಂಡಿತ. ಸದ್ಯಕ್ಕೆ ಆ ವಸ್ತುವು ಅನಾವಶ್ಯಕವಾಗಿ ಅಷ್ಟೊಂದು ಉದ್ದ ಇದೆ; ಅದು ಅಷ್ಟೊಂದು ಉದ್ದವಾಗಿರುವುದರಿಂದ ಅದಕ್ಕೆ ಹಾನಿಯೂ ಇಲ್ಲ, ನಮಗೆ ಲಾಭವೂ ಇಲ್ಲ. ಸುಮ್ಮಸುಮ್ಮನೆ ಪರಮಾತ್ಮನ ಸೃಷ್ಟಿಯಲ್ಲಿ ಕೀಳು ಮೇಲುಗಳನ್ನು ಕಲ್ಪಿಸಲು ಮಾತ್ರ ಅವಕಾಶಕೊಟ್ಟಿದೆ. ಮಾರ್ಮಿಕರಾದ ವಾಚಕರಿಗೆ ಆ ವಸ್ತು ಯಾವುದೆಂದು ಬಿಡಿಸಿಹೇಳುವ ಆವಶ್ಯಕತೆಯೆ ಇಲ್ಲ, ಯಾಕೆಂದರೆ ಅದು ಸಾಕ್ಷಾತ್ ಕತ್ತೆಯ ಕಿವಿ ಎಂಬುದು ಈಗಾಗಲೆ ತಮಗೆ ಹೊಳೆದಿರಬಹುದು. ಈ ಕಿವಿಯ ಅಳತೆಯಲ್ಲಿ ನೂರಕ್ಕೆ ಇಂತಿಷ್ಟರಂತೆ ಕಡಿತವನ್ನು ಮಾಡಬೇಕು. ಸದ್ಯಕ್ಕೆ ಭಾರತೀಯರಿಗೂ ಆ ಪ್ರಾಣಿಗೂ ವ್ಯತ್ಯಾಸ ಇದೆ ಎಂಬುದೊಂದು ಕಲ್ಪನೆ ರೂಢವಾಗಿದೆ. ವ್ಯತ್ಯಾಸ ಎಲ್ಲಿದೆ? ಕಿವಿಯ ಅಳತೆಯಲ್ಲಿ? ಅಯ್ಯೊ, ಅಜ್ಞಾನವೆ! ಜನ್ಮದಾರಭ್ಯ ಹತ್ತು-ಹನ್ನೆರಡು ವರ್ಷಗಳ ವರೆಗೆ ಮನೆಯಲ್ಲಿ ತಂದೆತಾಯಿಂದಿರೂ ಶಾಲೆಯಲ್ಲಿ ಗುರುಗಳೂ ಮೇಲಿಂದಮೇಲೆ 'ಹಿಂಡು'ತ್ತಿದ್ದುದರಿಂದ, ಸಹಜವಾಗಿಯೆ ಉದ್ದವಾಗಿ ಬೆಳೆಯಬೇಕಾದ ನಮ್ಮ ಕಿವಿಗಳು ಈ 'ಕಡಿತ' ದಿಂದ ಮಾತ್ರ ಸಣ್ಣವಾಗಿ ಉಳಿದಿವೆ ಎಂಬುದನ್ನು ನಾವು ಮರೆಯಬಹುದೆ? ತನಗೆ ಅಂತಹ ತಾಯ್ತಂದೆಗಳಾಗಲಿ ಶಿಕ್ಷಕರಾಗಲಿ ಇಲ್ಲವೆಂಬ ಮಾತ್ರಕ್ಕೆ ಕತ್ತೆಯು ಉದ್ದ ಕಿವಿಗಾಗಿ ಹಾಸ್ಯಕ್ಕೀಡಾಗಬೇಕೆ? ತಂದೆ- ತಾಯಿ- ಗುರು- ಹಿರಿಯರು ಪ್ರತಿನಿತ್ಯ ತಪ್ಪದೆ 'ಹಿಂಡಿ' ದ್ದಿಲ್ಲವೆಂದರೆ ನಮ್ಮ ಕಿವಿಗಳೆ ಇಷ್ಟೊತ್ತಿಗೆ ಎಷ್ಟು ನಿರರ್ಗಳವಾಗಿ ಬೆಳೆಯಬಹುದಾಗಿತ್ತೆಂಬುದನ್ನು ರಸಿಕರಾದ, ಕಲ್ಪನಾಕನಸಿಗರಾದ ವಾಚಕರು ಕಣ್ಣು ಮುಚ್ಚಿ ಊಹಿಸಲಿ! ಇದಲ್ಲದೆ ದುಡಿಮೆ (being exploited) ಮತ್ತು ಭಾರವಾಹಕತ್ವ (serfdom) ದಲ್ಲಿ ತನಗೆ ಯಾರೂ ಇದಿರಿಲ್ಲವೆಂಬ ಹೆಮ್ಮೆಯು ಇಂದಿನ ಭಾರತೀಯರನ್ನು ನೋಡಿ ವರ್ಣಕವಾಹನನಿಗೆ ಉಳಿಯಲಾಗದು. ಯೋಗ್ಯತೆ ಇಲ್ಲದಾಗ ಅದರ ಸಂಕೇತವಾದ ಲಂಬಕರ್ಣತ್ವವೇಕೆ? ಹೊರಡಲಿ ಸರಕಾರೀ ಗೆಝೆಟ್, ಕಡಿತವಾಗಲಿ ಕಿವಿ ಗರ್ದಭೇಶ್ವರನ! ಬೋಲೊ ಭಾರತಮಾತಾಕೀ ಜಯ! ಛೋಟಾ ಕಾನ ಝಿಂದಾಬಾದ್!

೫. ತಾವು ಯಾರಾದರೂ ಆಯುಷ್ಯದಲ್ಲಿ ಒಮ್ಮೆಯಾದರೂ ದೇಶೀಯ ಚಿತ್ರಪಟವನ್ನು ನೋಡಿದ್ದೀರಾ? 'ಒಮ್ಮೆಯಾದರೂ' ಎಂದು ಬುದ್ಧಿಪೂರ್ವಕವಾಗಿ ಕೇಳಿದ್ದೇನೆ; ಯಾಕೆಂದರೆ, ಒಂದೇ ಆಯುಷ್ಯವು ಎರಡು ಸಲ ದೇಶೀಯ ಚಿತ್ರಪಟವನ್ನು ನೋಡಲು ಸಾಲುವುದಿಲ್ಲ ಎಂಬುದು ನನ್ನಂತೆ ನಿಮಗೂ ಗೊತ್ತಿರಲು ಸಾಕು. ದೇಶೀಯ ಪಟಗಳ ಉದ್ದಳತೆ (length) ಯ ವಿಷಯವಾಗಿ ಅನೇಕ ಇತಿಹಾಸಜ್ಞರು ಅನೇಕ ಮಾತುಗಳನ್ನು ಹೇಳಿದ್ದಾರೆ. ದ್ರೌಪದಿಯು ವಸ್ತ್ರಾಪಹರಣದ ಕಾಲದಲ್ಲಿ ದೇಶೀಯ ಚಿತ್ರಪಟದ ಪಟ್ಟಿಯನ್ನೆ (roll of film) ಉಟ್ಟಿರಬಹುದೆಂದೂ ಅದಕಾಗಿಯೆ ದುಃಶಾಸನನಿಗೆ ಅದನ್ನು ಪೂರ್ತಿಯಾಗಿ ಸೆಳೆಯುವುದು ಸಾಧ್ಯವಾಗಲಿಲ್ಲವೆಂದೂ ಒಬ್ಬ ಪರಿಶೋಧನಕಾರರು ಅಭಿಪ್ರಾಯಪಟ್ಟಿದ್ದಾರೆ; ಲಂಕೆಯಲ್ಲಿ ಹನುಮಂತನು ನಮ್ಮ ದೇಶೀಯ ಚಿತ್ರಪಟದ ಪಟ್ಟಿಯನ್ನೆ ತನ್ನ ಬಾಲಕ್ಕೆ ಕೂಡಿಸಿಕೊಂಡನೆಂದೂ ಚಿತ್ರಪಟದ ಪಟ್ಟಿಗೆ ಬೆಂಕಿ ಹತ್ತುವುದು ಸುಲಭವೆಂದು ಅವನಿಗೆ ಗೊತ್ತಿದ್ದಿತೆಂದೂ ಆ ಜ್ಞಾನದಿಂದಲೆ ಲಂಕೆಯನ್ನು ಸುಡುವುದು ಸಾಧ್ಯವಾಯಿತೆಂದೂ ರಾಮಾಯಣದ ಅಭ್ಯಾಸ ಮಾಡಿದ ಜರ್ಮನ್ ಪಂಡಿತರೊಬ್ಬರು ಹೇಳಿದ್ದಾರಂತೆ! ಈಗಲಾದರೂ ಮಾವುಂಟ್ ಎವರೆಸ್ಟ್ (ಧವಲಗಿರಿ) ಗಿಂತ ಉನ್ನತವಾಗಿ ನಿಲ್ಲಿಸುವಷ್ಟು ಉದ್ದಳತೆಯನ್ನಿಡಬೇಕೆಂದು ನಮ್ಮ ಚಿತ್ರಪಟದ ವ್ಯವಸಾಯಪಟುಗಳ ಆಕಾಂಕ್ಷೆ ಇದೆಯಂತೆ! ಆ ಆಕಾಂಕ್ಷೆಯು ಈಡೇರಿದರೆ ಅಂದು ಪಟವನ್ನು ನೋಡುವ ನಾವು ಕೈಲಾಸದರ್ಶನದ ಭಾಗ್ಯವನ್ನು ಪಡೆಯಬಹುದೇನೊ? ಅದಿರಲಿ ಕೈಲಾಸವು ನಮ್ಮ ಮಕ್ಕಳು- ಮೊಮ್ಮಕ್ಕಳಿಗೆ ದೊರೆಯಲಿ, ಆದರೆ ಸದ್ಯಕ್ಕೆ ನಾವು ಶಿವನ ಮತ್ತೊಂದು ಆಶ್ರಯಸ್ಥಾನವಾದ ಮಸಣದ ಅನುಭವವನ್ನು ಪಡೆಯುತ್ತಿದ್ದೇವಲ್ಲ? ಅದರಿಂದ ನಮ್ಮನ್ನುಳಿಸುವ ಧೀರರು ಯಾರು? ನಮ್ಮ ರಾಷ್ಟ್ರೀಯ ಸರಕಾರಗಳೇ ನಮ್ಮ ಧೀರನಾಯಕರಾಗಬಹುದೆಂದು ನನಗೆ ತೋರುತ್ತಿದೆ. ಚಿತ್ರಪಟದ ಉದ್ದಳತೆಯಲ್ಲಿ ನೂರಕ್ಕೆ ನೂರಾಹತ್ತರಂತೆ (ಆದಾಗದಿದ್ದರೆ ಹತ್ತರಂತೆ) ಕಡಮೆಯಾಗಬೇಕೆಂಬ ಕಾನೂನನ್ನು ಜಾರಿಯಲ್ಲಿ ತರಬೇಕು. ಹೀಗೆ ಮಾಡಿದಲ್ಲಿ ಆಯುಷ್ಯದ ಅರ್ಧಭಾಗವನ್ನಷ್ಟೆ

ಸಿನೇಮಾಗೃಹದಲ್ಲಿ ಕಳೆದು ಉಳಿದರ್ಧಭಾಗವನ್ನು ಆಹಾರ ನಿದ್ರಾದಿಗಳಲ್ಲಿ ಕಳೆಯಲು ಸಾಧ್ಯವಾದೀತು; ಜನಾಂಗದ ಕಸುವು ಬೆಳೆದೀತು; ರಾಷ್ಟ್ರದ ಬಲ ಹೆಚ್ಚೀತು. ಸದ್ಯಕ್ಕೆ ನಮ್ಮಂತಹ ನೌಕರರಿಗಂತೂ ದೇಶಾಭಿಮಾನದಿಂದಾದರೂ ದೇಶೀಯ ಪಟವೊಂದನ್ನು ಪೂರ್ತಿಯಾಗಿ ನೋಡಬೇಕೆನಿಸಿದರೆ ವರ್ಷಕ್ಕೊಂದು ವರ್ಷ ರಜೆ ತೆಗೆದುಕೊಳ್ಳಬೇಕಾಗುವುದು. ನೋಡಿ ಬಂದೆವು ಎಂದು ತಿಳಿಯೋಣ, ಆ ಮೇಲೆ ಹೊರಗಿನ ಜಗತ್ತನ್ನು ನೋಡುವಷ್ಟು ತ್ರಾಣ ಕಣ್ಣುಗಳಿಗೆ ಉಳಿದಿರುವುದಿಲ್ಲ. ಆದುದರಿಂದ ಶ್ರೀಕೃಷ್ಣನ ಸಂಸಾರದಂತೆ ೧೬೦೦೦ ಪ್ರಮಾಣದಲ್ಲಿ ದೀರ್ಘವಾದ ಈ ಘಟನೆಯನ್ನು ಕಲಿಯುಗದಲ್ಲಿ ಕಡಿಮೆ ಮಾಡಬೇಕೆಂದು ಬೇಡುತ್ತೇನೆ.

೬. ರಾಷ್ಟ್ರೀಯ ಧೋರಣೆಯಿಂದ ಮಾತನಾಡುತ್ತ ಒಂದು ಅತ್ಯಂತ ಮಹತ್ತ್ವದ ವಸ್ತುವನ್ನೆ ಯಾದಿಯಲ್ಲಿ ಸೇರಿಸಲು ಮರೆತುಬಿಟ್ಟಿದ್ದೆ; ಅದೆಂದರೆ ನಮ್ಮ ನೆರೆಮನೆಯವರ ಅಂಗಾಂಗಗಳು. ಇದೇನು ಹುಚ್ಚು? ಇಲ್ಲವೆ ಸ್ವಾರ್ಥದ ಕ್ಷುಲ್ಲಕ ವಿಚಾರ? ಎನಬೇಡಿ. ಉದಾಹರಣಾರ್ಥವಾಗಿ ನಮ್ಮ ನೆರೆಮನೆಯವರ ಕೈಯುದ್ದದ ಕಲ್ಪನೆ ನಿಮಗಿದೆಯೆ? ನಾನು ಹೇಳುವ ಒಂದು ಮಾತಿನಿಂದ ಹತ್ತರಷ್ಟಾದರೂ ಕಲ್ಪನೆ ತಮಗಾಗಬಹುದೆಂಬು ನನ್ನ ಭರವಸೆ. ಇದು ನೋಡಿ, ಅವರ ಊಟದ ಮನೆಯಿಂದ ನಮ್ಮ ಮನೆಯಂಗಣಕ್ಕೆ ನೂರು ಫೂಟುಗಳಿಗೆ ಮಿಕ್ಕುವಷ್ಟು ಅಂತರವಿದೆ. ಆದರೂ ಅವರ ಊಟ ಮುಗಿದಾಕ್ಷಣ ಒಂದು ನಿಮಿಷಾರ್ಧದಲ್ಲಿ ಆ ಎಂಜಲೆಲೆಗಳು ನಮ್ಮ ಅಂಗಣದಲ್ಲಿ! ಇನ್ನೊಂದು ಮಾತು: ನಮ್ಮ ಮಲಗುವ ಕೋಣೆಗೂ ಅವರು ತಮ್ಮ ಮನೆಯಲ್ಲಿ ಮಲಗುವ ಕೋಣೆಗೂ ಏನಿಲ್ಲೆಂದರೂ ೨೦೦ ಫೂಟುಗಳಷ್ಟು ಅಂತರವಿದೆ; ಆದರೂ ರಾತ್ರಿ ನಮ್ಮಲ್ಲಿ ನಡೆದ ಮಾತು-ಕತೆ ಶಬ್ದಕ್ಕೆ ಶಬ್ದ ಅವರಿಗೆ ಕೇಳಿಸುವದು—ಎಂಬುದನ್ನು ಅನುಭವದಿಂದ ಕಂಡಿದ್ದೇವೆ. ನಮ್ಮ ಮಾತು-ಕತೆ ಉದ್ದವಾಗಿರಬಹುದೊ ಇಲ್ಲವೆ ಅವರ ಕಿ....ನೀವೇ ವಿಚಾರ ಮಾಡಿರಿ. ಇಂತಹ ಪರಿಸ್ಥಿತಿಯಲ್ಲಿ ಸರಕಾರದವರು ಲಕ್ಷ್ಮಣ – ಶೂರ್ಪನಖಾ ನ್ಯಾಯದ ಕಾಯದೆಯನ್ನು ಗೊತ್ತು ಮಾಡಬೇಕು. ಇಲ್ಲವೆ ಫುಕ್ಕಟೆಯಾಗಿ ನಮ್ಮ ನೆರೆಮನೆಯವರನ್ನೆ ಸಿ. ಆಯ್. ಡಿ. ಎಂದು ನಿಯಮಿಸಿ ಜನತೆಯ ಹಣದ ಅಪವ್ಯಯವನ್ನು ತಡೆಯಬೇಕು.

೭. ವಾಚಕಮಹಾಶಯರೆ, ಇನ್ನೂ ಎಷ್ಟೋ ಮಾತುಗಳನ್ನು ನಾನು ಹೀಗೆಯೆ ಕಾಣಿಸಬಹುದು. ಆದರೆ ಆಡಿದಂತೆ ಮಾಡಿ ತೋರಿಸಬೇಕೆಂಬ ಹಟದಿಂದ, ಸದುದ್ದೇಶದಿಂದ ನಾನು ಹೇಳಬೇಕೆಂಬುದರಲ್ಲಿಯೇ ಟೆನ್‌ಪರ್ಸೆಂಟ್ ಕಟ್ ಮಾಡುವವನಿದ್ದೇನೆ; ಅದರಂತೆಯೆ ಬರೆದುದರಲ್ಲಿ ಅಚ್ಚಿಗೆ ಕಳುಹಿಸುವಾಗ ಟೆನ್ ಪರ್ಸೆಂಟ್, ಅಚ್ಚಿನ ಮೊಳೆಗಳಲ್ಲಿ ಜೋಡಿಸುವಾಗ ಟೆನ್‌ಪರ್ಸೆಂಟ್, ಪ್ರೂಫ್ ಕರೆಕ್ಶನ್ ಮಾಡುವಾಗ ಟೆನ್ ಪರ್ಸೆಂಟ್, ಸ್ಟ್ರಾಯಿಕ್ ಆರ್ಡರ ಕೊಡುವಾಗ ಟೆನ್ ಪರ್ಸೆಂಟ್, ಬಾಯಿಂಡಿಂ ಮಾಡುವಾಗ ಟೆನ್ ಪರ್ಸೆಂಟ್, ಆಮೇಲೆ ತಾವಾದರೂ ನನ್ನ ಉದಾಹರಣೆಯನ್ನನುಕರಿಸಿ ಓದುವಾಗ ಟೆನ್ ಪರ್ಸೆಂಟ್, ಓದಿದ ಮೇಲೆ ಟೆನ್ ಪರ್ಸೆಂಟ್, ನೆನಪಿಡುವಾಗ ಟೆನ್ ಪರ್ಸೆಂಟ್, ಅದರಂತೆ ಆಚರಿಸುವಾಗ ಟೆನ್ ಪರ್ಸೆಂಟ್ ಹೀಗೆ ಕಡಿಮೆ ಮಾಡುತ್ತ ಹೋಗಬೇಕೆಂದು ಸೂಚನೆ ಇದೆ. ಆದುದರಿಂದ ಕೊನೆಗೆ ಒಂದೇ ಒಂದು ಎಚ್ಚರಿಕೆಯ ಮಾತನ್ನು ಹೇಳಿಬಿಡುತ್ತೇನೆ. ನನ್ನ ವಿಷಯವಾಗಿ ಯಾರೋ ಸುಳ್ಳು ಸುದ್ದಿಯನ್ನು ಹರಡಿರುವರಂತೆ; ಮ್ಯುನಿಸಿಪಾಲಿಟಿಯ ಮೆಂಬರರಲ್ಲಿ ರಶಿಯಾದಲ್ಲಿ ಸ್ಟಾಲಿನನು ರೂಢಮಾಡಿದ ಕಟ್ ಜಾರಿಯಲ್ಲಿ ತರಬೇಕೆಂದು ನಾನು ಅಭಿಪ್ರಾಯಪಟ್ಟಿರುವೆನಂತೆ! ಇದು ಸುಳ್ಳು, ಸುಳ್ಳು ಎಂದು ಹತ್ತು ಸಲ ಸಾರುತ್ತೇನೆ (ಒಂಬತ್ತು ಸಲವೆ ಉಳಿಯುವುದು). ರಶಿಯಾದಲ್ಲಿ ಅನೇಕ ಮುಂದಾಳುಗಳಿಗೆ ತಲೆ ಇದ್ದಿತು; ಆದುದರಿಂದ ಸ್ಟಾಲಿನನಿಗೆ ಅದನ್ನು ಕಟ್ ಮಾಡುವುದು ಸುಲಭವಾಯಿತು. ಆದರೆ ನಮ್ಮ ಮ್ಯುನಿಸಿಪಾಲಿಟಿ- ಅಥವಾ ನಾನಾದರೂ ಹೆಚ್ಚಿಗೆ ಹೇಳಬೇಕೆ? ಇಂತಹ ವಿಚಾರವು ನನಗೆ ತೋಚುವುದಾದರೂ ಶಕ್ಯವಿದೆಯೆ? ಇದರಂತೆ ಇನ್ನೊಂದು ತಪ್ಪು ಗ್ರಹಿಕೆಯನ್ನೂ ಇಲ್ಲಿ ದೂರ ಮಾಡಬಯಸುವೆ. ನಾನು ಸರಕಾರೀ ನೌಕರನಿದ್ದು ತಿಂಗಳ ಮುವ್ವತ್ತು ದಿವಸಗಳಲ್ಲಿ ನೂರಕ್ಕೆ ಹತ್ತರಂತೆ ಕಡಿಮೆ ಮಾಡಬೇಕೆಂದೂ ಹಾಗಾದರೆ ನನ್ನಂತಹರಿಗೆ ಇಪ್ಪತ್ತೇಳು ದಿವಸಗಳಿಗೆಯೆ ತಿಂಗಳ ಸಂಬಳ ದೊರೆಯಬಹುದೆಂಬ ಆಸೆಯಿಂದ ನಾನು ಹಾಗೆ ಮಾಡಿರುವೆನೆಂದೂ ಯಾರೊ ಗುಲ್ಲು ಎಬ್ಬಿಸಿದ್ದಾರೆ. ಶಿವಶಿವಾ! ಹರಿಹರೀ! ಯಾ ಅಲ್ಲಾ! (ಮಿಕ್ಕ ಜಾತಿಯವರು ತಂತಮ್ಮ ದೇವತೆಯ ಹೆಸರನ್ನು ಕೂಡಿಸಿಕೊಳ್ಳಲಿ) ನಾನು ಇಂತಹ ಸ್ವಾರ್ಥಿಯೆ? ಇಷ್ಟು ಸಂಕುಚಿತ ಭಾವನೆಯವನೆ? ನಾನು ಹೇಳಿದ ಮಾತೇ ಬೇರೆಯಾಗಿದೆ. ರಾಷ್ಟ್ರೀಯ ಹಿತದ ದೃಷ್ಟಿಯಿಂದ, ಸಮಾಜದ ಬೆಳವಣಿಗೆಯ ದೃಷ್ಟಿಯಿಂದ, ಆರ್ಥಿಕ ಉನ್ನತಿಯ ದೃಷ್ಟಿಯಿಂದ ಸರಕಾರದವರು ಪ್ರತಿಯೊಬ್ಬ ಭಾರತೀಯನ ಆಯುಷ್ಯವನ್ನು ನೂರಕ್ಕೆ ಹತ್ತರಂತೆ ಕಡಮೆ ಮಾಡಬೇಕೆಂದು ನಾನು ಹೇಳಿದ್ದು. ಆದರೆ ನನ್ನ ಮಾತಿನಲ್ಲಿಯ ಸತ್ಯ, ನನ್ನ ಮನಸ್ಸಿನಲ್ಲಿಯ ಅಹಿಂಸೆ ಇವು ದುಷ್ಟರ ಬಾಯಲ್ಲಿ (ಅವರ ನಾಲಗೆ ಕಡಿದು ಬೀಳಲಿ!) – ಅಥವಾ ಶಾಂತಂ ಪಾಪಂ.. ಅತ್ಯತಿಷ್ಠತ್ ದಶಾಂಗುಲ (ಹತ್ತರ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದರೆ ಹತ್ತರಷ್ಟು ಕಡಮೆ ಮಾಡುವುದು ಯುಕ್ತವಾದುದು) ಎಂದು ವೇದವೆ ಸಾರುವಾಗ ಬೇರೆ ಹೇಳಲು ನಾನು ಯಾರು?

ಋಣಾನುಬಂಧ

—(ಸಣ್ಣ ಕಥೆ)—

ಉಗಿಬಂಡಿಯಲ್ಲಿ ಯಾರೊಂದಿಗೆ
ಕಾದಾಡಬೇಕಾಗಿ ಬಂದಿದ್ದಿತೋ
ಅವರ ಮಗಳೇ ಹೆಂಡತಿಯಾಗಿ
ಮನೆಗೆ ಬಂದುದ್ದು,
ಮಾವನ ಚಿತ್ರ ನೋಡಿದ ಮೇಲೆ
ಗೊತ್ತಾಯಿತು ರಾಯರಿಗೆ.

ಶ್ರೀ. ದತ್ತಾತ್ರೇಯ ಕುಲಕರ್ಣಿ, ಧಾರವಾಡ

ನಾನು ನನ್ನ ಕೆಲಸ ತೀರಿಸಿಕೊಂಡು ನಿಲ್ಮನೆಗೆ ಬಂದಾಗ ಎಂಟು ಬಾರಿಸಿತ್ತು. ಕುದುರೆ ಗಾಡಿಗಳು ನಿಲ್ಮನೆಯಿಂದ ಸ್ವಲ್ಪ ದೂರನಿಲ್ಲಬೇಕೆಂದು ಕಟ್ಟಳೆಯಿತ್ತು-ಆ ಊರಲ್ಲಿ. ಒಂದು ಹಾಸಿಗೆಕಟ್ಟು, ಒಂದು ಭಾರವಾದ ಟ್ರಂಕು. ಈ ಎರಡು ವಸ್ತುಗಳನ್ನೂ ಹೊತ್ತು ರೈಲು ನಿಲ್ಲುವ ಸ್ಥಳಕ್ಕೆ ಒಯ್ಯಬೇಕು. ಅಲ್ಲಿ ಒಬ್ಬ ಕೂಲಿ ಇದ್ದ. ನಾಲ್ಕಾಣೆ ಬೇಡಿದ. ಒಂಬತ್ತು ಗಂಟೆಗೆ ಗಾಡಿ ಬರುತ್ತಿತ್ತು-ಇನ್ನೂ ಒಂದು ತಾಸು ಅವಧಿಯಿದೆ. ನಾನೇ ಹೇಗಾದರೂ ಒಯ್ದರೆ ' ನಾಲ್ಕಾಣೆ ಚಹಾಕ್ಕೆ ' ಎಂದು ಅವನಿಗೆ ಬೇಡವೆಂದು ಹೇಳಿಕಳಿಸಿದೆ. ಅವನು ಅಲ್ಲಿಯೆ ನಿಂತ. ಟ್ರಂಕನ್ನು ಕುದುರೆಗಾಡಿಯಿಂದ ಕೆಳಗಿಳಿಸಿ ಹಾಸಿಗೆಕಟ್ಟನ್ನು ಎತ್ತಿದೆ. ಹಗುರಾಗಿತ್ತು. ಒಳ್ಳೇ ಠೀವಿಯಿಂದ- ಕೂಲಿಯವನು ನಾಚುವ ಹಾಗೆ ಕೈಲಿಹಿಡಿದು, ಧಡಧಡನೆ ಹೋಗಿ ನಿಲ್ದಾಣದಲ್ಲಿ ಒಂದು ಆಸನದ ಮೇಲಿಟ್ಟು, ಟ್ರಂಕಿಗಾಗಿ ಬಂದೆ. ಹಿಡಿದು ಎತ್ತಿದರೆ ನನ್ನನ್ನೇ ನಾನು ಎತ್ತಿದಂತಾಯಿತು. ಒಳ್ಳೇ ದೃಢನಿಶ್ಚಯದಿಂದ,-ಹುರುಪಿನಿಂದ- ಅಷ್ಟೇ ಆಢ್ಯತೆಯಿಂದ- ಸವಿಾಪದಲ್ಲಿ ಕೂಲಿ ನಿಂತಿದ್ದ- ಒಮ್ಮೆ ಮೇಲಕ್ಕೆತ್ತಿದೆ. ಆದರೆ ಸಾಗಲು ಬರಲೊಲ್ಲದು. ಒಂದಡಿ ಮುಂದಿಡಹೋದರೆ ಎರಡೂ ಕಾಲು ಒಮ್ಮೆಲೇ ಎಳೆದಂತಾದವು. ಇದನ್ನು ಕುಣಿತ ಎಂದು ನೋಡಿದವರು ತಿಳಿದಿರಬೇಕು. ಅಂತೂ ಹೀಗೆ ಕುಣಿಯುತ್ತ ನಿಲ್ಮನೆಯ ವರೆಗೆ ಹೋದೆ. ನಾಲ್ಕಾಣೆಯ ಚಿಂತೆ ಇದ್ದಿಲ್ಲ ಈಗ. ಕೂಲಿಯ ಮುಂದೆ ನನ್ನ ಶಕ್ತಿಪ್ರದರ್ಶನವಿತ್ತು ! ಆದರೆ ಅವನು ಅಲ್ಲಿಯೇ ನಿಂತು ಮುಗುಳುನಗೆ ನಗುತ್ತಿದ್ದ. ನನಗೆ ಒಂದು ವಿಚಾರ ಹೊಳೆಯಿತು : ' ಕೂಲಿಯಾದರೂ ಮನುಷ್ಯ. ಟ್ರಂಕು ಹಗುರ್ರು ತಗಡಿನದೇ. ಆದರೆ ಅದರಲ್ಲಿ ತುಂಬಿದ ವಸ್ತುಗಳು ಕಲ್ಲು-ಪಾಷಾಣ. ಅವನಿಗೂ ಇಷ್ಟೇ ಕಷ್ಟವಾಗುತ್ತಿತ್ತು. ಅಂತೂ ಒಬ್ಬನ ಕಷ್ಟ ಉಳಿಸಿದೆ'- ಎಂದು ಹೆಮ್ಮೆಪಡುವವನಿದ್ದೆ. ಕೂಲಿ ಬಂದು ಖೊಕ್ಕೆಂದು ನಕ್ಕ. ಅವ ನನಗೆ ' ಇಂದು ನಿಮ್ಮ ಜೀವ ಉಳಿಸಿದ್ದೀರಾ ?' ಎಂದು ಕೇಳಿದಂತೆ ಇತ್ತು. ನನಗೆ ಸಿಟ್ಟುಬಂತು. "ಹೋಗೋ ಆಚೆಗೆ'' ಎಂದೆ. ಅವನು ' ನಿಮ್ಮ ಮನೆಯಲ್ಲವಿದು' ಎನ್ನುವಹಾಗೆ-ಹಾಗೇ ನಿಂತಿದ್ದ.

ಬೆವರು ಇಳಿಯುತ್ತಿತ್ತು. ವೇಳೆ ನೋಡಿದರೆ ಗಾಡಿ ಬರಲು ಇನ್ನೂ ಇಪ್ಪತ್ತು ನಿಮಿಷ. ಟಿಕೀಟು ಸುರುವಾಗಿವೆ. ಹೋಗಿ ಟಿಕೀಟು ತಂದೆ. ಒಂದು ಭಾರ ಇಳಿಸಿದಂತಾಯ್ತು ; ನಾನು ಕೊಟ್ಟ ಹಣಕ್ಕಿಂತ ಟಿಕೀಟು ಹಗುರಾಗಿತ್ತು. ಒಂದು ದೊಡ್ಡ ಉಸಿರೆಳೆದು ಹಾಗೇ ಕುಳಿತೆ. ಥಟ್ಟನೆ ಒಂದು ವಿಚಾರ ಬಂತು. ಗಾಡಿ ಬಂದಮೇಲೆ ಇದನ್ನೆಲ್ಲ ಒಯ್ಯುವುದು ಅಸಾಧ್ಯ. ಮೇಲಾಗಿ ಬರಿ ಡಬ್ಬಿ (Compartment) ನೋಡಬೇಕು. ಅಂದರೆ ಮಲಗಿ ಹೋಗಬಹುದು. ಈಗ ಪಟ್ಟ ಶ್ರಮ ಬೇಗಾಗುವ ವರೆಗೂ ಆರಲಿ. ಈಗಲೇ ಮತ್ತೆ ಟ್ರಂಕು ಹೊರಬೇಕು. ಗಾಡಿ ನಿಲ್ಲುವ ಸ್ಥಳದಲ್ಲಿ ಇಟ್ಟುಕೊಂಡು ಕುಳಿತಿರಬೇಕು. ಅಂದರೆ ಸರಿ. ಎಂದು ಮತ್ತೆ ಹೊತ್ತೆ. ಹಳಿಯಮೇಲಿನ ಕಟ್ಟೆಯ ತುದಿಗೇ ಟ್ರಂಕು ಇಟ್ಟು ಅಲ್ಲಿಯೇ ಕುಳಿತೆ. ಈ ಎರಡನೆಯ ಸಲ ಪಟ್ಟ ಶ್ರಮಕ್ಕೆ ಬರಿ ಡಬ್ಬಿ ನೋಡುವ ಆಸೆ ಉಳಿಯಲಿಲ್ಲ. ಮತ್ತೆ ಬರಿ ಡಬ್ಬಿಯ ವರೆಗೆ ಇವನ್ನು ಹೊರಬೇಕಲ್ಲ ! ಎಂದು, ಟ್ರಂಕು ಇಟ್ಟ ಸ್ಥಳಕ್ಕೆ ಯಾವ ಡಬ್ಬಿಯ ಬಾಗಿಲು ಬರುವದೋ ಅದನ್ನು ಹತ್ತುವದು. ಅದು ತಿಸಿಯ ಕ್ಲಾಸಿನ ಡಬ್ಬಿಯಾದರೆ ಟಿಕೀಟು ಬದಲಿಸುವದು- ಅನಿಸಿತು. ಚೆಕ್ ಎಂದು ನನ್ನ ಮೇಲೆ ಬೆಳಕುಬಿತ್ತು. ಗಾಡಿ ಬರುತ್ತಿತ್ತು.

ಗಾಡಿ ಒಮ್ಮೆ ಬಂತು. ನಾನು ಸ್ವಲ್ಪ ಹಿಂದೆ ಸರಿದು ಬರಿ ಡಬ್ಬಿ ನೋಡುತ್ತಿದ್ದೆ. ನನ್ನ ತಪಸ್ಸಿನ ಫಲವಾಗಿ ನಾನು ನಿಂತಲ್ಲಿಯೇ ಒಂದು ಚಿಕ್ಕ ಬರಿ ಡಬ್ಬಿ ಬಂತು- ಎನ್ನುವಷ್ಟರಲ್ಲಿ ' ಧಡಂ!' ಎಂದು ಸಪ್ಪಳಾಯಿತು. ಮಗ್ಗುಲಲ್ಲಿ ನೋಡಿದೆ. ಒಬ್ಬ ಚರದ ರುಮಾಲಿನ ಯುಜಮಾನ ನನ್ನ ಟ್ರಂಕು ಎಡವಿ ಬಿದ್ದಿದ್ದ. ಎಬ್ಬಿಸಬೇಕೆನ್ನುವಷ್ಟರಲ್ಲಿ " ಯಾವ ಇವನು ? ಹಾದಿಯಲ್ಲಿ ಟ್ರಂಕು ಇಟ್ಟಿದ್ದಾನೆ. ಬುದ್ಧಿ ಇಲ್ಲವೇನಿವನಿಗೆ ?" ಎಂದು ಬೈಯುತ್ತ ಎದ್ದ. ನನಗೆ ಎಬ್ಬಿಸುವದಿರಲಿ ; ಮಾತಾಡಿಸುವಷ್ಟೂ ಕರುಣೆ ಉಳಿಯಲಿಲ್ಲ. " ಕಾಲಿಗೆರಡು ಕಣ್ಣು ಕೊಡಲಿಲ್ಲ ದೇವರು " ಎಂದುಕೊಂಡೆನಷ್ಟೆ. ಅವನು ರೇಗಿಕೊಂಡು ಇನ್ನೂ ಏನೇನೋ ಅಂದುಕೊಳ್ಳುತ್ತಿದ್ದ. ಅವನೂ ಈ ಬರಿ ಡಬ್ಬಿಗೇ ಧಾವಿಸಿ ಬಂದಿರಬೇಕು. ನಾನು ಸುಮ್ಮನಿದ್ದೆ. ಅವನು ಕುಂಟುತ್ತ ಅದೇ ಡಬ್ಬಿಯನ್ನು ಹತ್ತಿದ. ನಾನು ಅವನಿದ್ದ ಡಬ್ಬಿಗೆ ಹೋಗ

ಬಾರದೆಂದರೆ ಟ್ರಂಕು ಹೊರಬೇಕಲ್ಲ ಮತ್ತೆ! ಅಂತೂ ಅದರಲ್ಲಿಯೇ ಹತ್ತುವುದೆಂದು ನಿರ್ಧರಿಸಿದೆ. ಟ್ರಂಕು ಹಿಡಿದು "ಜಯ ಬಲಭೀಮ" ಎಂದು ಎತ್ತಿದೆ. ಗಾಡಿ ಎತ್ತರವಾಗಿತ್ತು. ಅಲ್ಲಿಯ ವರೆಗೆ ಹೊರುವದಾಗಲಿಲ್ಲ. ಅವನು ಬೀಳದಿದ್ದರೆ ಸಹಾಯ ಮಾಡಲು ಕೇಳಬಹುದಾಗಿತ್ತು; ಅವನೂ ಕೈಗೊಡುತ್ತಿದ್ದ. ಈಗೇನು! ಮತ್ತೊಮ್ಮೆ "ಜಯ ಬಲಭೀಮ– ಬಜರಂಗಬಲೀಕೀ ಜೈ!" ಎಂದು ಎತ್ತಿ ಡಬ್ಬಿಯಲ್ಲಿ ಸರಿಸಿದೆ. ಹಾಸಿಗೆಯನ್ನು ಹೊತ್ತು ಗಾಡಿಯನ್ನು ಹತ್ತಿದೆ. ಗಾಡಿಯಲ್ಲಿ ನಾನು,– ನನ್ನ ಆ ಜರದ ರುಮಾಲಿನ ಯಜಮಾನ ಇಬ್ಬರೆ. ಎರಡೇ ಸೀಟುಗಳು, ನನ್ನ ಹಾಸಿಗೆ ಬಿಡಿಸಿದೆ, ಕುಳಿತೆ. ಒಬ್ಬರಿಗೊಬ್ಬರು ಎದುರಾದೆವು. ಅವನು ಕಾಲುತಿಕ್ಕಿಕೊಳ್ಳುತ್ತಿದ್ದ. ಮೊಳಕಾಲು ಕೆತ್ತಿ ರಕ್ತ ಸೋರುತ್ತಿತ್ತು.

"ಫೇಡೆ–ಬೀಡಾ–ಬೀಡಿ–ಸಿಗರೇಟ್– ಬಾಳೀಹಣ್ಣು" ಎಂದು ಹೊರಗೆ ಕೂಗು. ನಾಲ್ಕಾಣೆ ಉಳಿಸಿದ ನೆನಪಾಯ್ತು. ಕರೆದು ಕೆಲವು ಹಣ್ಣು ಕೊಂಡೆ. ಹಣಕೊಡುವಾಗ ನೋಡುತ್ತೇನೆ– ಆ ಕೂಲಿಯವ. ಅಂತೂ ಅವನಿಗೇ ಹೋಯಿತೇ ಹಣ! ಅವನೊಂದು ಸಲಾಮುಹಾಕಿ ನಡೆದ.

ಯಜಮಾನನ ಎದುರು ಕುಳಿತು ನಾನೊಬ್ಬನೇ ಹಣ್ಣು ತಿನ್ನಬೇಕೆ? ಇದು ಅವನಿಗೆ ಮತ್ತಿಷ್ಟು ಅಪಮಾನ. ಅವನ ಮೇಲೆ ಕರುಣೆಹುಟ್ಟಿದರೂ ಅವನೊಡನೆ ಮಾತಾಡುವ ಧೈರ್ಯ ಬರಲಿಲ್ಲ. ಹಣ್ಣು ಹಾಗೇ ಕಟ್ಟಿಟ್ಟೆ. ಹಾಸಿಗೆಯ ಮೇಲೆ ಒರಗಿದೆ. ಅವನಿಗೆ ಹಾಸಿಗೆ ಇದ್ದಿಲ್ಲ. ಇದ್ದುದೊಂದು ಜರಿ ಸೆಲ್ಲೆ. ಹಾಗೇ ಅಡ್ಡಾಗಿದ್ದ ಅವನೂ. ನನ್ನಲ್ಲಿ ಹೆಚ್ಚಿಗೆ ಹಾಸಿಗೆ ಇತ್ತು. ಹಣ್ಣು ಕೊಡಲು ಧೈರ್ಯವಿಲ್ಲದ ನನಗೆ ಹಾಸಿಗೆ ಕೊಡುವ ಧೈರ್ಯ ಎಲ್ಲಿಯದು? ಕಣ್ಣು ತೆರೆದಿದ್ದರೆ ಅವನನ್ನು ನೋಡುತ್ತಿರಬೇಕಾಗುತ್ತದೆಂದು ಮುಸುಕೆಳೆದು ಮಲಗಿಬಿಟ್ಟೆ.

* * * *

ಆ ಮಾತಿಗೆ ಮೂರು ವರುಷವಾಗಿದೆ. ಇಂದು ನನ್ನಾಕೆಯ ಟ್ರಂಕಿನಲ್ಲಿ ಒಂದು ಭಾವಚಿತ್ರ ನೋಡಿದೆ. ಜರದ ರುಮಾಲಿನ ಯಜಮಾನ! ಗಾಬರಿಯಾಯ್ತು. "ಯಾರೇ ಇದು?" ಎಂದೆ.

ಅಂತೂ ಅದರಲ್ಲಿಯೆ ಹತ್ತುವುದೆಂದು ನಿರ್ಧರಿಸಿದೆ.
ಟ್ರಂಕು ಹಿಡಿದು 'ಜಯ ಬಲಭೀಮ' ಎಂದು ಎತ್ತಿದೆ.

"ನನ್ನ ಮದುವೆಗಾಗಿ ಮಡಿದ ತಂದೆ" ಎಂದಳು. "ಅದು ಹೇಗೆ?" ಎಂದೆ. ವರ ಹುಡುಕಲು ಹೋದಾಗ ಬಿದ್ದ ಗಾಯದಿಂದ ನೆಲಹಿಡಿದವರು ಮೇಲೇಳಲಿಲ್ಲ" ಎಂದಳು.

ಜಯಂತಿಯಲ್ಲಿ ಜಾಹೀರಾತನ್ನು ಕೊಟ್ಟರೆ ಕೈತುಂಬ ಲಾಭವುಂಟು!

ಅದು ಹೇಗೆ ಎನ್ನುವಿರಾ?

ಪ್ರತಿಯೊಬ್ಬ ಕಲಿತ ಕನ್ನಡಿಗನ ಕಣ್ಣಿಗೂ ನಿಮ್ಮ ಜಾಹೀರಾತು ಬೀಳುವುದು. ಕರ್ನಾಟಕವಲ್ಲಿಯಷ್ಟೇ ಅಲ್ಲ; ಪರಪ್ರಾಂತ-ಪರದೇಶಗಳಿಗೂ ಜಯಂತಿ ಹೋಗುವುದು. ಕನ್ನಡನಾಡಿನ ಪ್ರತಿಯೊಂದು ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಜಯಂತಿಯ ಪ್ರಚಾರಕರುಂಟು.

ಎಂತಲೇ ಜಾಹೀರಾತನ್ನು ಕೊಡುವವರು ತ್ವರೆ ಮಾಡಿರಿ!

ಕನ್ನಡ ನಾಡ ಸಿರಿ

ಲೇಖಕ :- ನಾಡಾಡಿಗ

[ಇಂದಿನ ಭಾರತೀಯನಿಗೆ, ಪರದೇಶ-ಪರಸ್ಥಳಗಳ ವಿಷಯವಾಗಿಯೆ ಹೆಚ್ಚು ಪರಿಚಯವಿರುವುದೆಂದೂ, ದೀಪದ ಸುತ್ತಲಿನ ಕತ್ತಲೆಯಂತೆ ತನ್ನ ಸುತ್ತು-ಮುತ್ತಲಿನ ಅಜ್ಞಾನವೆ ಆವರಿಸಿರುವುದೆಂದೂ ನಮ್ಮ ಶಿಕ್ಷಣಪದ್ಧತಿಯನ್ನರಿತವರಿಗೆ ಬೇರೆ ಹೇಳಬೇಕಾಗಿಲ್ಲ. ನಮ್ಮ ಅನೇಕ ವಿದ್ಯಾರ್ಥಿಗಳಿಗೆ ಇಂಗ್ಲಂಡಿನ ಕೆರೆವೀಡು (Lake District) ತಮ್ಮ ನೆಲೆನಾಡಿಗಿಂತಲೂ ಹೆಚ್ಚು ಪರಿಚಿತವಿರುವದು. ಇಂತಹ ಪರಿಸ್ಥಿತಿಗೆ ಇನ್ನೂ ಒಂದು ಕಾರಣವಿದೆ. ಪಾಶ್ಚಾತ್ಯರಾಷ್ಟ್ರಗಳು ತಮ್ಮಲ್ಲಿಯ ಸೃಷ್ಟಿ ಸೌಂದರ್ಯದ ತಾಣಗಳನ್ನೆಲ್ಲ ಚೆನ್ನಾಗಿ ಅಭ್ಯಸಿಸಿ, ಪ್ರವಾಸಿಗರು ಅಲ್ಲಿಗೆ ಬರುವಂತೆ ಪ್ರಚಾರವನ್ನು ಮಾಡುತ್ತಾರೆ; ಪಥಿಕಪದ್ಧತಿ (Tourist System) ಯನ್ನು ಬೆಳೆಸಿಕೊಳ್ಳುತ್ತಾರೆ; ಪ್ರವಾಸಮಂಡಲ(Travel Bureau) ಗಳಿಂದಲೂ ಮಾಸಪತ್ರಿಕೆಗಳಿಂದಲೂ ಇಂತಹ ತಾಣಗಳ ಪ್ರಚಾರವ್ಯವಸ್ಥೆಯನ್ನು ಮಾಡುತ್ತಾರೆ; ಪಥಿಕರನೇಕರು ಹೋಗಿಬರುವುದರಿಂದ ದೇಶಕ್ಕೆ ಧನಪ್ರಾಪ್ತಿಯೂ ಇದೆ. ನಮ್ಮಲ್ಲಿ ಇಂತಹ ಧೋರಣೆಯೂ ಇದೀಗ ಇರುಳುಗಳ್ಳನಂತೆ ಹಣಿಕೆ ಇಕ್ಕುತ್ತಲಿದೆ. ಕನ್ನಡ ನಾಡು ಇಂದಿಗೂ ಸೊಬಗಿನ ಬೀಡಾಗಿದೆ; ಸೃಷ್ಟಿಯು ನವಿಲಿನಂತೆ ಅನೇಕ ವರ್ಣವಾಗಿ ತನ್ನ ಸೌಂದರ್ಯವನ್ನು ಪಸರಿಸಿ ನಿಂತಿದೆ. ನಿಸರ್ಗವು ರಮಣೀಯವಾಗಿ ನಿಂತಿದೆ; ಇತಿಹಾಸವು ಬೆರಗುಗೊಳಿಸುವಂತೆ ನಿಲ್ಲಿಸಿದೆ ತನ್ನ ವೈಭವವನ್ನು. ಈ ಸೃಷ್ಟಿಸಂಪತ್ತನ್ನು ಕನ್ನಡಿಗರೆದುರು ತಂದಿಡುವ ಪ್ರಯತ್ನವನ್ನು ‘ ಜಯಂತಿ ’ ಯಲ್ಲಿ ಕೈಕೊಳ್ಳಲಾಗಿದೆ; ಇದು ‘ ಜಯಂತಿ ’ ಯ ವೈಶಿಷ್ಟ್ಯವೆನ್ನುವದಕ್ಕಿಂತ ಕನ್ನಡ ಪತ್ರಿಕಾಪ್ರಪಂಚದಲ್ಲಿಯ ಅನುಪಮವಾದ ಪ್ರಯತ್ನ ಎನಬಹುದು. ಏಕೀಕರಣಕ್ಕೆ ಮುಂಚೆ ಸಾಕ್ಷಾತ್ಕರಣವಾಯಿತೆಂದು ವಾಚಕರಿಗೆನಿಸಿದಲ್ಲಿ ಲೇಖಕರು ಕೃತಾರ್ಥರಾಗುವರು.]

ಧಾರವಾಡಕ್ಕೆ ತೀರಸಮೀಪದಲ್ಲಿ ಒಂದು ರಮ್ಯದೃಶ್ಯವಿದೆ; ಅದು ಮುನವಳ್ಳಿಯ ಕೊರಕಲು (ಇಲ್ಲವೆ ಒಡಕು). ಧಾರವಾಡದಿಂದ ಗೋಕಾಕಕ್ಕೆ ಹೋಗುವ ಬಸ್ಸುಗಳಿಂದ ಅಗ್ಗವಾಗಿ ಮತ್ತು ಸುಲಭವಾಗಿ ಇಲ್ಲಿಗೆ ಮುಟ್ಟಬಹುದು. ಇಲ್ಲಿ ನನ್ನ ಪ್ರಯಾಣವನ್ನೆ ಬಣ್ಣಿಸಿದೆನೆಂದರೆ ವಾಚಕರು ಕ್ಷಮಿಸುವರೆಂದು ನಂಬಿದ್ದೇನೆ. ನಮ್ಮ ದೇಶದಲ್ಲಿ ನೋಟಗಳಷ್ಟೆ ಪ್ರವಾಸವಾದರೂ ಮನೋರಂಜಕವಾಗಿರುವುದು (ಮನೋನಿಗ್ರಹ ಮತ್ತು ಪಚನಶಕ್ತಿ ಸಾಕಷ್ಟಿದ್ದವರಿಗೆ ಮಾತ್ರ). ಇದಲ್ಲದೆ ಪ್ರವಾಸದಲ್ಲಿ ಎಷ್ಟೋ ಆಶ್ಚರ್ಯಕಾರಕ ಸಂಗತಿಗಳು ಘಟಿಸುವವು. ನಮ್ಮ ಪ್ರವಾಸದಲ್ಲಿ ಪ್ರಾರಂಭಕ್ಕೆಯೆ ಒಂದು ಅತ್ಯಂತ ಆಶ್ಚರ್ಯಕಾರಕ ಘಟನೆಯು ಸಂಭವಿಸಿತು. ಅದೆಂದರೆ, ಬಸ್ಸು ನಿಯಮಿತವಾದ ವೇಳೆಗೆ, ಗೊತ್ತುಪಡಿಸಿದ ನಿಮಿಷಕ್ಕೆ ಸರಿಯಾಗಿ ಹೊರಟಿತು! ನಗರವನ್ನು ಹಿಂದೆ ಬಿಟ್ಟು, ನಿಸರ್ಗದ ಪ್ರಾತಃಕಾಲದ ಸೌಂದರ್ಯವನ್ನು ಸವಿಯುತ್ತ, ನಮ್ಮ ಮನಸಿನೊಳಗಿನ ಉಲ್ಲಾಸಕ್ಕೆ ಸರಿಯಾಗಿ ತಾಳಕಟ್ಟುವಂತೆ ಕುಣಿಯುತ್ತ ನಡೆವ ಬಸ್ಸಿನಲ್ಲಿ ಪ್ರಯಾಣವನ್ನು ನಡೆಸಿದೆವು. ಅಲ್ಲಲ್ಲಿ ಪ್ರಯಾಣಿಕರನ್ನು ಇಳಿಸುತ್ತ, ಕುಳ್ಳಿರಿಸುತ್ತ ಸವದತ್ತಿಗೆ ತಲುಪಿದೆವು. ಸಮಭೂಮಿಯನ್ನು ಬಿಟ್ಟು ಉನ್ನತಪ್ರದೇಶಕ್ಕೆ ಬಂದೆವು. ನೀಲವರ್ಣಾಚ್ಛಾದಿತವಾದ ಬೆಟ್ಟದ ಸಾಲಿನಿಂದಲೂ, ತಂಪಿನ ತವರ್ಮನೆಯಂತಿದ್ದ ಕೊಳ್ಳದಿಂದಲೂ, ದೃಷ್ಟಿ ಹರಿವಂತೆ ನೀಟಾಗಿ ಕಾಣುವ ದಾರಿಯಿಂದಲೂ ಈಗ ಬಹಳೇ ಆಹ್ಲಾದವೆನಿಸುವಂತಿತ್ತು.

ಈಗ ನಾವು ೨೫೦ ಅಡಿ ಎತ್ತರದಲ್ಲಿದ್ದೇವೆ. ಕೆಳಗೆ ಮೆತ್ತನ್ನ ಹಾಸಿಗೆಯಂತೆ ನೆಲವು ಕಾಣುತ್ತಿದೆ. ದೂರದಲ್ಲಿ ಧಾರವಾಡವು ಮಂಜಿನಂತೆ ಮನೋಹರವಾಗಿ ಕಾಣುತ್ತಿದೆ. ವಾಹಕನಿಗೆ ಬಸ್ಸನ್ನು ತಡೆಯಲು ಹೇಳಿದೆ. ಕೆಳಗೆ ಅವಸರವಸರವಾಗಿ ಕುಡಿಯುವಾಗ ಬೆಕ್ಕು ಉರುಳಿಸಿದ ಪಾತ್ರೆಯಿಂದ ಸುರಿಯುವ ಹಾಲಿನ ಧಾರೆಯಂತೆ ಮಲಪ್ರಭೆಯು ಸುಳಿದಾಡುತ್ತಿದೆ! ಒಂದು ಕಡೆ ಎರಡು ಕಿರುಬೆಟ್ಟಗಳ ಮೇಲೆ ಸವದತ್ತಿಯ ಕೋಟೆ ಕಾಣುತ್ತಿದೆ! ಮನಸಿನೊಳಗೆ ಉದ್ಭವಿಸುವ ಅಭಿಮಾನದ ವಿಚಾರಗಳಿಂದ ಇಂದು ನಿನ್ನೆ ನಿಲ್ಲಿಸಿದ ಕೋಟೆಯಂತೆಯೆ ಕಾಣುವುದದು! ಅತ್ತಿತ್ತ ಸುಳಿದು ಮನೆಕಂಡು ತಟ್ಟನೆ ಒಳಗೆ ಓಡುವ ಹುಡುಗನಂತೆ ನದಿಯು ಬೆಟ್ಟದ ಬುಡದಲ್ಲಿ ಮರೆಯಾಗಿದೆ. ದೂರದಲ್ಲಿ ಸಣ್ಣಸಣ್ಣ ಹಳ್ಳಿಗಳು ನಕಾಶೆಯಲ್ಲಿಯ ಗುರುತುಗಳಂತೆ ಕಾಣುತ್ತಿವೆ. ನಾನೂ ನನ್ನ ಹತ್ತಿರವಿದ್ದ ನಕಾಶೆಯನ್ನು ತೆಗೆದು ನೋಡಿದೆ; ಈ ಪ್ರದೇಶದ ಗತಿ-ಸ್ಥಿತಿ ನನಗೀಗ ಚೆನ್ನಾಗಿ ತಿಳಿಯಿತು. ಪೂರ್ವಕ್ಕೆ ಇಳಿಯುತ್ತ ಹೋಗುವ ಬಯಲುಪ್ರದೇಶ ನನ್ನೆದುರಿಗಿದ್ದುದು; ಈ ಪ್ರದೇಶವು ಮಲಪ್ರಭೆಯಿಂದ ಹಸನಾಗುತ್ತಿದೆ. ಅನೇಕ ಬೆಟ್ಟಗಳಿದ್ದುದರಿಂದ ಈ ಬೆಟ್ಟದ ಬಂಡೆಗಲ್ಲುಗಳಿಂದ ಇಲ್ಲಿಯ ನೆಲವು, ಮಲಪ್ರಭೆ ಮತ್ತು ಅದಕ್ಕೆ ಕೂಡುವ ಹಳ್ಳಗಳಿಂದ ಸವೆದು ಹರಿದು ಹೋಗಲು ಶಕ್ಯವಿಲ್ಲ. ಬಯಲು ನೆಲದಲ್ಲಿ ಹರಿಯುವ ನದಿಯ ನೀರಿಗೆ ಬೆಟ್ಟದ ಸಾಲು ತಡೆಯನ್ನುಂಟುಮಾಡಿದೆ. ಆದುದರಿಂದ ಈ ಸಾಲಿನಲ್ಲಿ ಕೊರಕಲ (gorge) ವನ್ನು ಮಾಡಿಯೆ ಪ್ರವಾಹವು ಮುಂದೆ ಸಾಗಬೇಕಾಗಿದೆ. ಈ ಪ್ರದೇಶವೆಲ್ಲ ದೊಡ್ಡದಾದೊಂದು ಸರೋವರವಿದ್ದಿತೆಂದೂ, ಆ

ಸರೋವರದ ನೀರು ಒಂದು ಕೊರಕಲ ದಿಂದ ಸೂಸುತ್ತಿದ್ದಿತೆಂದೂ, ಬಹುಕಾಲ ದಿಂದ ನೆಲವನ್ನು ಸವೆಸಿ ಸವೆಸಿ ಇಂದಿನ ಈ ಕೊರಕಲವು ಸಿದ್ಧವಾಯಿತೆಂದೂ ಕ್ರಮೇಣ ಸರೋವರವಿದ್ದಲ್ಲಿ ಬಯಲು ನೆಲ ನಿಂತಿತೆಂದೂ ಭೂವಿಶಾಸ್ತ್ರಜ್ಞ



ಮುನವಳ್ಳಿಯ ಬಳಿಯ ಮಲಾಪಹಾರಿ

(geologist) ರು ಹೇಳುತ್ತಾರೆ. ಇದು ಪುರಾಣಕ್ಕಿಂತ ಪ್ರಾಚೀನವಾದ ಕಾಲದ ಕತೆ. ಸಕಾಶಿಯಿಂದ ಅರಿತುಕೊಂಡು ಈ ಕೊರಕಲವು ಇಲ್ಲಿಂದ ಅರ್ಧಮೈಲಿಯ ಮೇಲೆಯೆ ಇದೆ ಎಂದು ತಿಳಿದುಕೊಂಡೆ.

ಮುನವಳ್ಳಿಯ ದಾರಿಯನ್ನು ಹಿಡಿದು ಮುಂದೆ ಸಾಗಿದೆ; ಅಲ್ಲಿ ದಾರಿಕೂಟ (cross-road) ದಿಂದ ಮುಂದೆ ಎತ್ತಿನ ಗಾಡಿಯ ಹಾದಿಗುಂಟ ಸಾಗಿದೆ. ನೋಡಿ ದತ್ತೆಲ್ಲ, ಮಾನವನ ಸೌಖ್ಯಕ್ಕೆ ಸೃಷ್ಟಿ ಕೊಡುತ್ತಿರುವ ಸ ಲ ಕ ರ ಣೆ ಗ ಳ ನ್ನು ಕಣ್ಣೆದುರು ನೋಡಿದೆ. ಇಲ್ಲಿಯ ಕಲ್ಲುಗಳು ಬಿಳಿಯಾಗಿವೆ, ಗಟ್ಟಿಯಾಗಿವೆ; 'ಬದಾಮಿ' ಕಲ್ಲುಗಳೆಂದು ಅವುಗಳ ಹೆಸರು. ಈ ಕಲ್ಲುಗಳಲ್ಲಿರುವ ಗಚ್ಚಿನ ಅಂಶದಿಂದ ಮನೆ ಕಟ್ಟಲು ಇವು ಬಹಳೇ ಉಪಯುಕ್ತವೆನಿಸುವುವು. ಮುಂದೆ ಸಾಗಿದಂತೆ ಒಂದು ಕಡೆ ಹಚ್ಚಗಿದ್ದ ಕೊಳ್ಳ, ಇನ್ನೊಂದು ಕಡೆ ೩೦೦ ಅಡಿ ಎದ್ದು ನಿಲ್ಲುವ ಬೆಟ್ಟ; ಈ ಬೆಟ್ಟದ ಎತ್ತರಗುಂಟ ಗಿಡ-ಬಳ್ಳಿಗಳು ಬೆಳೆಯುವುದಿಲ್ಲ.

ಇದೀಗ ನಾನು ಕೊರಕಲದ ಸಮೀಪದಲ್ಲಿಯೇ ಬಂದಿದ್ದೇನೆ. ದಾರಿಯು ಒಮ್ಮೆಲೆ ಕೆಳಗೆ ಜಿಗಿದಂತಾಗಿದೆ, ಕೊರಕಲದ ಮಗ್ಗುಲಿಗೆ ಮುಟ್ಟಿದೆ. ಕೆಳಗೂ ಮೇಲೂ ಸೃಷ್ಟಿಯ ಅಪಾರವಾದ, ಅವ್ಯಯವಾದ ಸೌಂದರ್ಯವು ಸುತ್ತುಗಟ್ಟಿ ನಿಂತಿದೆ. ೩೦೦ ಅಡಿ ಕೆಳಗೆ ನದಿ ಸುಳಿಯುತ್ತಲಿದೆ, ತಳದಲ್ಲಿ ನಿಬಿಡವಾದ ಹಸಿರು ಇದೆ, ತುದಿಗೆ ಬಟ್ಟಬತ್ತಲೆಯಾದ ಬಂಡೆಗಲ್ಲುಗಳಿವೆ; ಸುತ್ತಲಿನ ಎತ್ತರದಿಂದ ಇಳಿದುಬಿದ್ದ ಅನೇಕ ಬಂಡೆಗಳಿಂದ ಪ್ರವಾಹಕ್ಕೆ ತಡೆಯಾಗಿದೆ. ಎರಡೂ ದಂಡೆಗೆ ಕೊರಕಲದ ಗೋಡೆಗಳು ಎದ್ದು ನಿಂತಿವೆ, ಹುಲ್ಲು–ಹಸಿರಿಲ್ಲದೆ ಹಸನಾಗಿ ಕಾಣುತ್ತಿವೆ. ಅಲ್ಪಗಲ್ಲು (Sedimentary rock) ಗಳಿವು.

ಸೃಷ್ಟಿಸೌಂದರ್ಯಕ್ಕೆ ಬೆ ರ ಗಾ ಗಿ ಬಾಯ್ದೆರೆದು, ಮುಂದೆಯೆ ಸಾಗಿವೆ. ಬಸವೇಶ್ವರನ ಆಲಯ ಬಂದಿದೆ. ಕಲ್ಲುಗಳಿಂದ ಕಟ್ಟಿದ ಭಾಗವೂ, ಬಂಡೆಗಲ್ಲಿನಲ್ಲಿ ಕೆತ್ತಿದ ಭಾಗವೂ ಸ್ಪಷ್ಟವಾಗಿ ಕಾಣುತ್ತಿವೆ. ಬೆರಗು, ಭಯ, ಭಕ್ತಿ ಇವನ್ನೆ ಹೆಜ್ಜೆಗಳನ್ನಾಗಿ ಮಾಡಿ ಮುಂದೆ ಸಾಗಿದೆ. ಕೊನೆಗೆ ಕೊರಕಲಿಗೆ ಬಂದು ಮುಟ್ಟಿದೆ. ಶ್ರಮವೂ ಆರಿತು, ಬಿಸಿಲಿನ ಉರಿಯೂ ಕಡಮೆ ಎನಿಸಿತು.. ಇಲ್ಲಿಯ ಸುಳಿಗಾಳಿಯಿಂದ.

ಕೈಯೊಳಗಿನ ಚೀಲ (ಇದರಲ್ಲಿಯೆ ನನ್ನ ಅನ್ನಪೂರ್ಣಾ ನಕಾಶೆ ಇದೆ) ವನು ಬಂಡೆಯ ಮೇಲಿಟ್ಟು, ಪಾದರಕ್ಷೆಗಳನು ತೆಗೆದಿಟ್ಟು ನೀರಿನೊಳಗೆ ನಡೆದೆ. ಮೈ ಮರೆತಂತಾಯಿತು, ಮನಸ್ಸು ಸುತ್ತಿನೊಡನೆ ಬೆರೆತುಕೊಂಡಿತು; ಎಲ್ಲಿನೋಟದಲ್ಲಿ ಶಾಂತತೆ ಮತ್ತು ಗಾಂಭೀರ್ಯ ಅಪ್ಪಳಿಸುವ ನೀರಿನಿಂದ ಶಾಂತತೆಯ ಆವರಣವು ಹೆಚ್ಚಾಗಿ ಮುಸುಕಿದಂತಾಯಿತು. ಕೆಲಹೊತ್ತು ವಿಶ್ರಮಿಸಿ ಒಂದು ಬಂಡೆಯನ್ನು ದಾಟಿ ಮತ್ತೊಂದು ದಂಡೆ ಬಂದು ಕೊರಕಲವನ್ನು ಅವ್ಯಾಹತವಾ ನೋಡಿದೆ. ಒಂದು ಕಡೆ ಉಸುಕಿ

ಬಯಲಿದೆ, ಹಿಂದೆ ಎತ್ತರ ಬಂಡೆಗೋಡೆ ಮುಂದ ಇಲ್ಲಿ ಬಿಸಿಲೂ ಇಲ್ಲ, ಆದುದರಿಂದ ಇದೇ ನಮ್ಮ ಮುಸಾಫರಖಾನಾ ಎಂದುಕೊಂಡೆ. ನೀರಿನಲ್ಲಿ ರವಿಸಿ ಕೊನೆಗೆ ಇಲ್ಲಿ ಬಂದು 'ಕುಳಿತುಕೊಂಡೆ. ತಲೆಯೊಳಗೆ ವಿಚಾರವೊಂದು ಸುಳಿಯಿತು. ಈ ಜಾಗೆಗೆ 'ನವಿಲುತೀರ್ಥ' ಎಂದು ಹೆಸರು. ದಂತಕತೆಯ ಸಂಗತಿ ಸುಳ್ಳಿರಲಿ ನಿಜವಿರಲಿ, 'ನವಿಲುತೀರ್ಥ' ಎಂಬ ಹೆಸರು ಮಾತ್ರ ಈ ಸ್ಥಾನಕ್ಕೆ ಅತ್ಯಂತ ಉಚಿತವಾಗಿದೆ ಎಂದೆನಿಸಿತು. ಒಂದಾನೊಂದು ಕಾಲದಲ್ಲಿ ಬೆಟ್ಟದ ತುದಿಯಲ್ಲಿದ್ದ ಒಂದು ನವಿಲು ಕೆಳಗೆ ಹರಿಯುವ ನದಿಯನ್ನು ಕಂಡು ತಿರಸ್ಕಾರದಿಂದ ನಕ್ಕಿತಂತೆ! 'ಈ ಸಣ್ಣ ಬೆಟ್ಟದಿಂದ ನಿನ್ನ ಪ್ರವಾಹಕ್ಕೆ ತಡೆಯಾಗಬೇಕೆ? ನಿನ್ನ ಸಾಮರ್ಥ್ಯವೂ ಇಷ್ಟು ಸಣ್ಣದಿದೆಯೆ?' ಎಂದು ಗಹಗಹಿಸಿತಂತೆ! ಈ ಅಪಮಾನದಿಂದ ಕಾದು ಕನಲಿದ ನದಿಯು ವೇಗವಾಗಿ ಬೆಟ್ಟವನ್ನು ಪ್ರವಾಹದಿಂದ ಕೊರೆಯಿತಂತೆ! ನವಿಲು ಬಂಡೆಯಾಯಿತಂತೆ! ಇದೆಂತಹ ಯೋಗ್ಯ ವಿಮರ್ಶೆ ನದಿಯ ರಭಸಕ್ಕೆ ಎನುವಾಗಲೆ ನಾನು ನಿದ್ರೆ ಹೋಗಿರಬೇಕು; ಕಣ್ದೆರೆದಾಗ ಮಧ್ಯಾಹ್ನದ ಬಿಸಿಲು ಇಳಿದಿತ್ತು; ಸಾಯಂಕಾಲದ ಮೆಲ್ಲಡಿ ಕೇಳಬರುತ್ತಿತ್ತು. ನಾನು ಸಾವರಿಸಿಕೊಂಡೆದ್ದೆ. ಕೆಲವು ಮಾದರಿಗಳೆಂದು ಬಂಡೆಚೂರುಗಳನ್ನಾಯ್ದುಕೊಂಡೆ. ಮನಸ್ಸು ಒಲ್ಲೆನುವುದು, ಸಾಯಂಕಾಲವು ಒತ್ತರಿಸುವುದು. ಕೊನೆಗೆ ನಿಸರ್ಗದ ಸೌಂದರ್ಯಾಗಾರವನ್ನು ಬಿಟ್ಟು 'ಸಂಸ್ಕೃತಿ'ಯ ಕಾರಾಗಾರಕ್ಕೆಂದು ಎದ್ದೆ.

ಅರ್ಧಗಂಟೆಯಲ್ಲಿ ಬಸ್ಸು ಬಂದಿತು. ಅದರಲ್ಲಿ ಜನರೂ ಇದ್ದರು. ಈಗ ಈ ಬಸ್ಸು, ಈ ಜನರು, ಅವರ ಮಾತುಕತೆ, ನಯ-ನಲ್ಲಾಟ ನನಗೆ ಅಸಹ್ಯವಾಗಿ ತೋರುತ್ತಿದೆ. ನವದತ್ತಿಗೆ ಬಂದು ತಲುಪಿದೆವು. ಜನರ ಕಿಲಕಿಲಾಟ, ವಾಹಕನ ಹೊತ್ತುಗಳೆಯುವ ಹಂಚಿಕೆ, ಇವುಗಳಿಂದ ಬೇಜಾರೆನಿಸಿದಾಗ ಗ್ರಾಮೋಫೋನಿನ ಚೀತ್ಕಾರ! ನದಿಯ ಮಂಜುಳ ಪ್ರವಾಹದ ಸುಳುಸುಳು ನಿನಾದವೆತ್ತ? ಈ ಚೀತ್ಕಾರವೆತ್ತ? ನಿಸರ್ಗದ ನಿಶ್ಶಬ್ದತೆಗಿಂತ ಮಧುರವಾದ, ಮೋಹಕವಾದ ಗಾಯನವು ಮಾನವನ 'ಸಂಸ್ಕೃತಿ'ಯಲ್ಲಿ ಸಾಧ್ಯವೆಯೆ? ಆವರಿಸುವ ಕತ್ತಲಲ್ಲಿ, ನನ್ನ ಒಳ ಅನುಭವಗಳ ಸ್ಮರಣೆಯ ಬೆಳಕಿನಿಂದಲೆ ಆನಂದದ ದಾರಿಯನ್ನು ಹುಡುಕುತ್ತಿದ್ದೆ. ಕನ್ನಡಿಗನಾದ ನನಗೆ ಹೆಜ್ಜೆಹೆಜ್ಜೆಗೆ ಇಂತಹ ರಮಣೀಯತೆಯನ್ನು ಆಯಾಸವಿಲ್ಲದೆ ವೆಚ್ಚವಿಲ್ಲದೆ ನೋಡುವುದು ಸಾಧ್ಯ ಇದೆ ಎಂಬ ಅಭಿಮಾನದಿಂದ ಧಾರವಾಡಕ್ಕೆ ಮರಳಿದೆ.

ತ್ವರೆಮಾಡಿರಿ! **ತ್ವರೆಮಾಡಿರಿ!**

ತ್ರಿಪದಿರೂಪವಾಗಿ ರಚಿಸಿದ

ಸರ್ವಜ್ಞ ವಚನಗಳು

ಸಂಶೋಧಿತವಾದ ಸಂಪೂರ್ಣ ಸಂಗ್ರಹ

ಜನಪದಾವೃತ್ತಿ

ಪ್ರಸ್ತಾವನೆ, ವಿಷಯಸೂಚಿಕೆ, ವಿಷಯವಿಭಜನೆ, ಶಬ್ದಕೋಶ
ಅಭಿಪ್ರಾಯಗಳ ಸಹಿತವಾದುದು

ಸಂಪಾದಕರು:
ಚನ್ನಪ್ಪ ಉತ್ತಂಗಿ

ಕರ್ನಾಟಕ ಕವಿಚರಿತಕಾರರಾದಿಯಾಗಿ
ಅನೇಕ ಸಾಹಿತಿಗಳೂ ಜನತೆಯೂ
ಮೆಚ್ಚಿರುವ ಉದ್ಗ್ರಂಥ

ಸಾಮಾನ್ಯ ಪ್ರತಿ ಒಂದಕ್ಕೆ ೨ ರೂ. ೨ ಆ.
ಉತ್ತಮ ಪ್ರತಿ ಒಂದಕ್ಕೆ ೨ ರೂ. ೧೨ ಆ.
ಅಂಚೆವೆಚ್ಚ ಬೇರೆ.

ಸಿಗುವ ಸ್ಥಳ:—
ಕರ್ನಾಟಕ ಪ್ರಿಂಟಿಂಗ ವರ್ಕ್ಸ್, ಧಾರವಾಡ

ರೋಗಪರೀಕ್ಷೆಯ ಕೈಪಿಡಿ:
ರೋಗಚಿಕಿತ್ಸೆಯ ಕೈಗನ್ನಡಿ:

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಅಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ

ಲೇಖಕರು:
ಡಾ. ಗೋ. ಸ. ಪಳಸುಲೆ L.M.&S. ಪುಣೆ

ಕನ್ನಡಿಸಿದವರು:
ಶ್ರೀ. ನಾ. ತಿ. ದಾತಾರ B.A. ಬೆಳಗಾವಿ

೬೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ
ಬೈಂಡಿನ ಸುಂದರ ಹೊತ್ತಿಗೆ
ಬೆಲೆ: ಮೂರೇ ರೂಪಾಯಿಗಳು

ಪುಸ್ತಕ ದೊರೆಯುವ ಸ್ಥಳ:
೧. ಮನೋಹರ ಗ್ರಂಥ ಭಾಂಡಾರ, ಧಾರವಾಡ
೨. ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

Head office:- Shri Krishna Homio Farmacy
Budhwar Peth, Poona.

ಪುರಾಣದ ಪೂರ್ವರಂಗ

(ಒಂದು ವಿನೋದ)

ಪುರಾಣಿಕರು ಹೇಳಿದ್ದನ್ನೆ ಹೇಳತಿರತಾರ,
ಶ್ರೋತೃಗಳು ಕೇಳಿದ್ದನ್ನೆ ಕೇಳತಿರತಾರ;
ಎಂತಲೆ
ನಮ್ಮ ಪುರಾಣಪ್ರಿಯರ ಬುದ್ಧಿ ನಿಂತಲ್ಲೇ ನಿಂತದ
ಸಮಾಜದ ಹೆಜ್ಜಿ ಇಟ್ಟಲ್ಲೇ ಇಟ್ಹಾಂಗದ.

ಪಾತ್ರಗಳು.

ಗಂಗಾ } ಬಾಯಿ. ತುಂಗಾಬಾಯಿ.
ಭಾಗೀರಥಿ } ವರದಾಬಾಯಿ.

ಶ್ರೀ. ಎನ್. ಕೆ. ಕುಲಕರ್ಣಿ, ಬಿ. ಎ. (ಆನರ್ಸ)

(ದೇವರಗುಡಿ, ನಮ್ಮ ಪುರಾಣದ ರಂಗಭೂಮಿ. ಇಂದೇಕೋ ಆಚಾರ್ಯರು ಬರಲು ತಡವಾದ್ದರಿಂದ ಬಂದವರು ಹೊತ್ತುಗಳೆಯಲು ಹರಟೆಕೊಚ್ಚುತ್ತ ಕೂತಿದ್ದಾರೆ. ಇದೂ ಒಂದು ಪುರಾಣ, ಅಲ್ಲಲ್ಲ—ಇದೊಂದು ಪುರಾಣದ ಪೂರ್ವರಂಗ.)

ಗಂಗಾಬಾಯಿ:— (ಬತ್ತಿ ಹೊಸೆಯುತ್ತಲೇ ಗೋಣು ಮೇಲೆತ್ತಿ ಆಕಳಿಸುತ್ತ) ಇದೇನ್ರೆ ನಮ್ಮವ್ವಾ— ಇನ್ನೂ ಬರವಲ್ರು ಆಚಾರು. ಮುನ್ಯಾಗಾರ ಬ್ಯಾಳಿಗಿಟ್ಟ ಬಂದೀನಿ.... ಎಲ್ಲಿ ಹೊತ್ತಿ ಹೋಗತಾವೋ ಏನಮಣ್ಣೋ!

ವರದಾಬಾಯಿ — (ಎಲೆ ಹಚ್ಚುತ್ತಲೇ) ಯಾಕ? ನಿಮ್ಮಲ್ಯಾ ಹತ್ತಘಂಟೇದ ಅವಸರ ಏನು?

(ಇಷ್ಟರಲ್ಲಿ ಭಾಗೀರ್ಥಿಬಾಯಿಯು ತುಂಗಾಬಾಯಿಯೊಡನೆ ಪ್ರವೇಶಿಸುವಳು)

ಗಂಗಾ:— ಅಲಾಲಾಲಾ! ಇದೇನ್ರೆವಾ ತುಂಗಾಬಾಯ್ರು, ಯಾವೂರ ರಾಜಾ ಸತ್ತ ಕೆಪತ್ತ? ಒಳ್ಳೇ ಅಡ್ಡಹೊತ್ತಿನೊಳಗ ಒಡಹಾಯ್ದಿರಿ ಗುಡೀಕಡೆ? ಪುರಾಣಕಂತs ಬಂದಿದ್ರ್ಯಾ? ....

ತುಂಗಾ:— ಅಲ್ಲಾ, ಉಪಸಾರ್ಣಿಗೆ ಕಗಣಿ ಇದ್ದಿದ್ದಿಲ್ಲ ಮನ್ಯಾಗ; ಅದಕ್ಕೆ ಇಲ್ಲೇ ಎಲ್ಲ್ಯಾರ ಬಿದ್ದದೇನೋ ಅಂತ ಹುಡಿಕ್ಕ್ಯಾತ ಹೊಂಟಿದ್ದೆ. ಹಾದ್ಯಾಗ ಭಾಗೀರ್ಥಿಬಾಯ್ರು ಒದರಿದ್ರುs; ಆತು ಹಂಗಾರ ಬಂದ ಹೋದ್ರಾತು ಅಂತ ಬಂದೆ.

ಭಾಗೀರ್ಥಿ:— (ಗಂಗಾಬಾಯಿಗೆ) ಸೀನಸಭ್ಯಾರ ಮಂಗಳ ಆತೇನ್ರೆ?

ಗಂಗಾ:— ಎಲ್ಲೀದ್ರೆ ನಮ್ಮವ್ವಾ. ಇನ್ನೂ ವಿಶ್ವಾಮಿತ್ರಾ ರಾಮಾಲಕ್ಷ್ಮಣರನ್ನ ಬ್ಯಾಟಿ ಆಡ್ಲಿಕ್ಕೆ ಕರಕೊಂಡು ಹೋಗಲಿಕ್ಕೆ ಬಂದಾನ.

ಭಾಗೀರ್ಥಿ:— ವಿಶ್ವಾಮಿತ್ರ್ಯಾ ಏನೂ s ವಸಿಷ್ಠರೆ?

ಗಂಗಾ:— ಯಾರ ಆದ ಭಾಗ್ಯಾ ಏನು? ಇಲ್ಲಿಗೆ ಬಂಧಾಂಗ ಕಾಣಸ್ತದ ನೋಡ್ರಿ.

ತುಂಗಾ:— ನವಣೂರ ಸೀತೂರಾಮಾಚಾರ ಸೊಸಿ ಹಡದ್ಲೇನ್ರೆ? ದಿನದಾಗ ಅಂತ ಕೇಳಿದ್ದೆ.

ವರದಾ:— (ಮುಂದೆ ಬಂದು) ಅಯ್ಯೋs ಅಯ್ಯೋs! ಹಡದ್ಲಲ್ಲಾ ಮೊನ್ನೆ ಪುಷ್ಟದಿವಸ.

ತುಂಗಾ:— ಆಂ? ಗಂಡೋ ಹೆಣ್ಣೋ?

ವರದಾ:— ಹೆಣ್ಣೋs, ಗಂಡೆಲ್ಲೀದ ಹುಟ್ಟಬೇಕು ಮಣ್ಣಾಗ.

ಗಂಗಾ:— ಏನರೆ ಯಾಕ ಆಕೆಗ್ಯಾಕೀವಶ್ಯಾಕ. ನುಸೂತ್ರ ಹಡದ್ಲಿಲ್ಲೋ ಸಾಕು.

ತುಂಗಾ:— ಹಂಗ ಅಂದ್ರ ಹೆಂಗ ಆದೀತ ಹೇಳ್ರಿ ಗಂಗಾಬಾಯ್ರು! ಮನೆತನ ಉದ್ಧಾರ ಮಾಡಲಿಕ್ಕಾರ ಒಬ್ಬ ಗಂಡಸ ಮಗಾ ಅಂತ ಬ್ಯಾಡ?

ವರದಾ:— ನೋಡ್ರೆವಾ ಇದೊಂದ ಹಿಡಿದರ ಐದ ಹೆಣ್ಣಾದವು. ಹಿರೇ ಹುಡುಗಿ ಅಂತೂ ಮನೀಯೊತ್ತಾ ಬೆಳದ ಕೂತsದ. ಎಲ್ಲೆಲ್ಲ್ಯಾ ವರಾ ಅನ್ನಿ ಸಿಗವಲ್ಲು. ಬಂದವ್ರೆಲ್ಲಾ ಹುಡಿಗಿ ಕಾಡು ಅಂತ ತಿರಿಗಿ ಹೋಗಲಿಕ್ಕೆ ಹತ್ಯಾರ.

ಗಂಗಾ:— ಈಗಿನವ್ರೇನ್ರೆ ನಮ್ಮವ್ವಾ! ಬರೇ ಛಂದಾಚಾರಕ್ಕ ಮೆಚ್ಯಾರ. ಜಲಿವ್ಕಿ ಏನ ಅರಕೊಂಡು ಕುಡೀತಾರೋ ಏನ ಮಣ್ಣೋ! .... ನಮ್ಮ ಮದಿವೀ ಕಾಲಕ್ಕ ನಮ್ಮನ್ನ ನೋಡಲಿಕ್ಕೆ ಸುದ್ಧೆ ಬರಲಿಲ್ರೆವಾ!

ಭಾಗೀರ್ಥಿ:— ಅಲ್ರೆ ಮೊನ್ನೆ ಯಾರೋ ಹೇಳತಿದ್ದರ್ರೆ.... ಆಂ.... ಇಂವಾ.. (ನೆನಪುಮಾಡಿಕೊಳ್ಳುತ್ತ) ಧೂ ಸುಡ್ಲಿ ಬಾಯಾಗs ಅದ ಹೆಸರು.... (ಮತ್ತೆ ನೆನಪುಮಾಡಿ ಕೊಳ್ಳುತ್ತ) ಅಂವಾ ಯಾರೋ ವಿಲಾಯತಿಗೆ ಹೋಗಿ ಬಂದಾನಂತಲ್ರೇ....

ವರದಾ:— ಹೂsಂ— ಅವನs! .... ಅಂವಾ ಒಳೇ ಮಾಡಿ ಕೊಂಡಾನು ವೈದಿಕ ಬ್ರಾಂಬರ ಕನ್ಯ್ಯಾನ; ಮಡ್ಡಮ್ಮನ್ನ ಮಾಡಿಕೊಂಬಾವಾ ಅಂವಾ.

ಗಂಗಾ— ಮಡ್ಡಮ್ಮನ್ನಾರೆ ಮಾಡಿಕೊಳ್ಳೀ, ಒಡ್ಡಮ್ಮನ್ನಾರೆ ಮಾಡಿಕೊಳ್ಳೀ, ಯಾ ಅಮ್ಮನ್ನಾರೆ ಯಾಕ ಮಾಡಿಕೋವಲ್ಲ-ನ್ಯಾಕ.... ಅಂವಾ ಏನ್ರೇ ನಮ್ಮವ್ವಾ! ವೈದಿಕ ಬ್ರಾಂಬರ ಕಂಡ್ರ ಆಗೂದಿಲ್ಲಾ; ನೋಡ್ರಿ ನಮ್ಮ ಸ್ವಾದರಳಿಯಾನ ಸ್ವಾದರ ಸೊಸಿ ನೆಗೆಣ್ಣಿ ಮಗಳು ಇದ್ದಾಳಲ್ಲಾ.. ಪಾಪ....(ಸುಳ್ಳುಸುಳ್ಳೆ ಕಣ್ಣೀರು ಸುರಿಸುತ್ತ) ಚಿಕ್ಕಾಕಿ ಇರೂವಾಗs ನಮ್ಮ ಹಾಂಗ ಆಗಿ ಬಿಟ್ಟ್ಯಾಳ. ಎರಡನೇ ಗಂಡಸೂರ ಮಾರಿ ಅಂಬೂದ ಕಂಡಿಲ್ಲಾ ಪ್ರಾಣಿ! ಅಂಥಾಕಿಗೆ ಬಯಿಕಿ ಆಗ್ತಾವ ಅಂತ ಸುದ್ದಿ ಹುಟ್ಟಿಸಿ ನಾಟಗಾ ಬರದಿದ್ನಂತೇಳ್ರೆವಾ ಆಕಿಮ್ಯಾಲೆ; ಎರಡ ಹೊತ್ತು ಪುರಾಣಕ ಅಂತ ಹೊರಬೀಳೂದು ಸುದ್ಧಾ ನಿರ್ಬಂಧ ಇನ್ನ. ವೈದಿಕ ಬ್ರಾಂಬರನ್ನ ಕಂಡ್ರ ಕೆಂಡಾಕಾರತಾನ ಮುಂಡೆ ಮಗಾ. ಅವರೇನು ಇವನ ತಲೀಮ್ಯಾಲೆ ನೀರುಸ ಆರಿಲಿಕೆ

ಕೊತಾರೋ ! ತಾನೂ ವೈದಿಕ ಬ್ರಾಹ್ಮಣ್ಣ ಆಗ್ಯಾನ ನೋಡಿದ್ರ-ತಮ್ಮ ಮಂದೀ ತಪ್ಪ ತಾನು ಎಣಿಸಬೇಕೇನ್ರೆವಾ ಹೀಂಗ ?

ತುಂಗಾ:— ಏನೋ ಜನರು ಸುಧಾರಿಸಲಿ ಅಂತ ನಾಟ್ಕಾ ರೀತಾರಂತ. ನನಗಾರ ಏನು ಗೊತ್ತು ತಾಯಿ, ನಮ್ಮ ಶಾಮು ಂತಿದ್ದಾ.... ಅಲ್ಲಾ ಅವರು ಏನಾರೆ ವಿಚಾರಮಾಡಿ ಬರದಿರತಿ ರ್ರಾರು. ಅಂಥಾದು ಅದು ನಿಮಗಂತನು ಯಾಕತಿಳಕೋಬೇಕು ?

ಗಂಗಾ:— ವಿಚಾರ ಎಲ್ಲೀದ ಬರತಾವ ಮಣ್ಣಾಗ ! ಸುಟ್ಟಿತು ವನ ವಿಚಾರ—ನಮ್ಮದ ನೋಡೇ ಬರದಾನವಾ ಸಹನ ಆಗದ್ದಕ್ಕ!

ವರದಾ:— ಅಂದ್ರ ?

ಗಂಗಾ:— ಯಾಕ ಏನೇನಾಗಬೇಕು ಅಡಿಗಿ

ತುಂಗಾ:— ಏನಾಗೋದೂ (ಎಡಗೈಯೊಳಗಿನ ಗೋಟು ಪಾಟ್ಲಗಳನ್ನು ಬಲಗೈಯಿಂದ ತಿರುವುತ್ತ)ಒಂದನ್ನಾ, ಒಂದ ಪಾಯಸಾ ಏನ್ರೆವಾ. ಹೂರಣಾ ಕಣಕಂತೂ ಸೈಯ್ಯಸೈಯ್ಯ. ಆತಕ ಒಂದ್ನಾಕ ಕ್ವಾಡಬೋಳಿ, ಅಷ್ಟ ಕರ್ಚಿಕಾಯಿನೂ ಕರೀಬೇಕಂತ ಮಾಡೀನಿ. ಹಬ್ಬಾ ಹುಣ್ಣಿವಿ ಅಂದಿಂಡ ಮತ್ತ ಆಗಬೇಕಲ್ರೆವಾ ಎಲ್ಲಾ ನೇಮದ ಪ್ರಕಾರ. ಒಂದ ಕಡಿಮಿ ಆಗೂತ್ಲೆ ಸಂಗಾತ್ಲೆ ನಮ್ಮ ಮನಸ್ಸಿಗೆ ಕಷ್ಟ ಅನಸ್ತದ. (ಹುಸಿ ನಗೆಯಿಂದ) ..ಒಂದ ವ್ಯಾಳ್ಯಾಕ್ಕ ತಂದ ಹಾಕಾವ್ರು ಇಲ್ಲಾಂತ ಗೋಳ್ಯಾಡಿದ್ರೂ ಕಡಾತಂದಾರೆ ಮಾಡ್ತೀನಿ

“ ಏನರೆ ಯಾಕ ಅಕ್ಕೋವಲ್ಲ್ಯಾಕ; ಸುಸೂತ್ರ ಹಡದ್ಲಿಲ್ಲೋ ! ಸಾಕು ! ” (ಪುಟ ೯೦)

ಗಂಗಾ:— ಅಂದ್ರೇನೂ .... (ಪೆಚ್ಚು ಮೋರೆಮಾಡಿ).... ಬೇನು ಎದ್ದ ಬಿಟ್ರಲ್ರೆ ತುಂಗಾಬಾಯ್ರು ?

ತುಂಗಾ— ಆಯ್ಯ ಹೋಗ್ತೀನ್ರೆವಾ ಹೊತ್ತ ಆತು. ಹೋಗುವಷ್ಟರಲ್ಲಿ)

ವರದಾ:— ಆಯ್ಯ ! ಹಂಗಹೊಂಟ್ರಲ್ರೆ ಗುಡಿಗೆ ಬಂದು, ದಕ್ಷಿಣೆ ನಮಸ್ಕಾರಾ ಹಾಕಲೇ ಇಲ್ಲಲ್ಲಾ ?

ತುಂಗಾ:— ಹೌದ ನೋಡ್ರೀ ಮರ್ತಬಿಟ್ಟೆ. ಮ್ಯಾಲೆ ಸುಟ್ಟ ರವು ಒಂದು !

('ಸ್ವಾಮಿ ನಮ್ಮಪ್ಪಾ ದಯಾನಿಧಿ, ಉದ್ಧಾರ ಮಾಡಪ್ಪಾ' ಎಂದು ಮಸ್ಕರಿಸಿ, ಪ್ರದಕ್ಷಣೆ ಹಾಕಿಬಂದು) ಇನ್ನಾನೆ, ಅಪ್ಪಣೆ ಕೊಡ್ರೆವಾ ಶಿಗ್ಗೆ ಹೊತ್ತಾಗತದ.

ನಾನೂ.... ಹೆಂಗ ಬಿಡಬೇಕ ಹೇಳ್ರಿ ?

ಗಂಗಾ:— ಹೌದ್ರೆವಾ ಖರೇ ಅದ. ಬ್ರಾಂಬರ ಭೋಜನಾ ಆದಿಂದ ಪುರಾಣದಾಗ ಹ್ಯಾಂಗ ಹೇಳತಾರ ಹಾಂಗ ಎಲ್ಲಾ ಆಗಲಿಕ್ಕೇ ಬೇಕಲ್ಲಾ.

ತುಂಗಾ:— ಹೋಗಿ ಬರ್ತಿನ್ರೆವಾ ಭಾಗೀರ್ತಿಬಾಯ್ರು. ಹರಟಿ ಗೇನು, ಅಂತಿಲ್ಲಾ, ಪಾರಿಲ್ಲಾ. ಗಂಗಾಬಾಯ್ರು, ಸಂಜೆಮುಂದ ಸವಡ ಆದ್ರ ಬರ್ರಿಲ್ಲಾ ಮನೀಕಡೆ.. ಬರೋ ಮುಂದ ಹಾಂಗು ಒಂದಿಷ್ಟು ತೀರ್ಥಾತಂದ ಬಿಡ್ರಲಾ, ಮತ್ತ ನನಗೆಲ್ಲೆ ಸವಡು ಆಗಬೇಕು ?

ಗಂಗಾ:—ಯಾಕ ನೀವು ನಮ್ಮ ಮನೀಕಡೆ ಬಂದ ಬಿಡ್ರಲ್ಲಾ! ಒಂದ ದಿವಸೇನು ಬಡವರ ಮನೀಗೆ ಭಾಗ್ಯಲಕ್ಷ್ಮಿ ಬರಬಾರದ ?

ತುಂಗಾ:— ಅತ ಹಂಗಾರ, ನಾಳೆ ಕಾರ್ತೀಕಕ್ಕ ಬಂದಿಷ್ಟು ಮಂಗಳಾರ್ತಿ ಬತ್ತೀನಾರ ಮಾಡಿಕೊಡೀರಂತ ಬರ್ತೀನಿ.

ಗಂಗಾ— ಎಂದ ಹಚ್ಚ ಸಬೇಕಂತ ಮಾಡೀರಿ ಕಾರ್ತೀಕಾ?

ಭಾಗೀರ್ಥಿ:— ಆಚಾರು ಬಂದು ಬಿಟ್ರ ನೋಡ್ರೆ. ಪುರಾಣ ಮುಗಿಸಿಕೊಂಡು ಹೋಗ್ರೆಲ್ಲಾ.

ತುಂಗಾ:— ತೀರಿ ಹೋತ್ರೆವಾ. ಇಲ್ಲಿ ಪುರಾಣ ಕೇಳಕೋತ ಕೂತ್ರ ಅಲ್ಲೆ ಪ್ರಾಣಾ ತೊಗೋತಾರ ನಮ್ಮದು ಹಿಂದಾಗಡೆ.

ಭಾಗೀರ್ಥಿ:— ಪ್ರಾಣದೇವರ ಗುಡ್ಯಾಗ ನಿಂತು ಪ್ರಾಣಕ್ಕ ಹೆದರ್ತಾರೇನ್ರಿ?

ಗಂಗಾ:—ಅಯ್ಯ! ಅವ್ರ ಪ್ರಾಣದೇವ್ರು ಬ್ಯಾರೆ, ನಮಗೊಂದು ಗತಿ ಇಲ್ಲಂತ ಈ ಪ್ರಾಣದೇವ್ರ ಕಡೆ ಬರ್ತೀವಿ.

(ತುಂಗಾಬಾಯಿಯು ಹೋಗುವುದಕ್ಕೂ ಆಚಾರ್ಯರು ಬರುವುದಕ್ಕೂ ಅಡ್ಡ-)

ತೆರೆ

—o—

ಭಾರತೀಯರಿಗೆ ಸಿಕ್ಕುವ ಹಾಲು-ಬೆಣ್ಣೆಗಳು

೧೯೩೦ ನೆಯ ಇಸ್ವಿಯಲ್ಲಿ ನಡೆದ ಪಶುಗಣನೆಯ ಬಗ್ಗೆ ಪ್ರಕಟವಾದ ಹಿಂದುಸ್ತಾನ್ ಸರಕಾರದ ವರದಿಯಂತೆ ನಮ್ಮ ದೇಶದಲ್ಲಿ ಆಕಳು ಎಮ್ಮೆಗಳ ಸಂಖ್ಯೆಯು ಕೆಳಗೆ ಬರೆದಂತಿದ್ದಿತು:—

	ಆಕಳು	ಎಮ್ಮೆ
ಬ್ರಿಟಿಷ್ ಹಿಂದುಸ್ತಾನದಲ್ಲಿ	೩,೮೭,೮೫,೪೬೨	೧,೭೭,೮೪,೫೩೭
ಎಲ್ಲ ಸಂಸ್ಥಾನಗಳಲ್ಲಿ ಸೇರಿ	೧,೪೬,೦೦,೦೦೦	೫೭,೦೦,೦೦೦
ಒಟ್ಟು	೫,೩೩,೮೫,೪೬೨	೨,೩೪,೮೪,೫೩೭

ಇವುಗಳಲ್ಲಿಯ ನಾಲ್ಕರಲ್ಲೊಂದು ಪಾಲಿನಷ್ಟು ಯಾವಾಗಲೂ ಕೆಲಸಕ್ಕೆ ಬಾರದುವುಗಳೆಂದು ತಿಳಿದುಕೊಳ್ಳತಕ್ಕದ್ದು. ಹಾಲು ಕೊಡದ ದಿನಗಳನ್ನೂ ಕರು-ಮರಿಗಳಿಗೆ ಉಣಿಸುವ ಹಾಲನ್ನೂ ಎಣಿಕೆಗೆ ಹಿಡಿದರೆ, ಒಂದು ವರ್ಷದಲ್ಲಿ ಒಂದು ಆಕಳು ಸುಮಾರು ಇನ್ನೂರು ಪೌಂಡು, ಒಂದು ಎಮ್ಮೆ ಸುಮಾರು ೧ ಸಾವಿರ ಪೌಂಡು ಹಾಲನ್ನು ಕೊಡುವುವೆಂದು ಸಾಧಾರಣವಾಗಿ ಊಹಿಸಲಾಗುವುದು. ಈ ಲೆಕ್ಕದಂತೆ ನೋಡಿದರೆ ಭಾರತದಲ್ಲಿಯ ಎಮ್ಮೆ-ಆಕಳುಗಳೆಲ್ಲ ಸೇರಿ, ವರ್ಷದುದ್ದಕ್ಕೂ ಕೊಡುವ ಹಾಲೆಂದರೆ ಸುಮಾರು ೩೦ ಕೋಟಿ ಮಣದಷ್ಟಾಗುವುದು. ಈ ಹಾಲನ್ನು ಹಿಂದುಸ್ತಾನದ ೩೫ ಕೋಟಿ ಜನರಲ್ಲಿ ಹಂಚಿಕೊಟ್ಟರೆ ತಲೆಯೊಂದಕ್ಕೆ ೩೦ ಸೇರು ಒಂದು ವರ್ಷಕ್ಕೆ ಸಿಕ್ಕಂತಾಗುವುದು. ಎಂದರೆ ಪ್ರತಿಯೊಬ್ಬನಿಗೆ ಒಂದು ದಿನಕ್ಕೆ ದೊರೆಯುವ ಹಾಲೆಂದರೆ ಬರೀ ಏಳು ತೊಲೆಯಷ್ಟಾಯಿತು. ಹಾಲೇ ಈ ಪ್ರಮಾಣದಲ್ಲಿ ಸಿಕ್ಕುತ್ತಿದೆಯೆಂದಮೇಲೆ ಬೆಣ್ಣೆಯೆಂಬ ವಸ್ತುವನ್ನು ನೋಡದವರೇ ನಮ್ಮಲ್ಲಿ ಬಹುಸಂಖ್ಯಾಕರಾಗಿರಬೇಕು.

ಒಂದು ಸೇರು ಆಕಳ ಹಾಲಿನಲ್ಲಿ ಅರ್ಧ ಛಟಾಕಿನಷ್ಟು ಬೆಣ್ಣೆ ಹೊರಡುತ್ತಿದ್ದರೆ ಒಂದು ಸೇರು ಎಮ್ಮೆಯ ಹಾಲಿನಲ್ಲಿ ಮುಕ್ಕಾಲು ಛಟಾಕಿನಷ್ಟು ಹೊರಡುತ್ತದೆ. ನಮ್ಮಲ್ಲಿ ಹುಟ್ಟುವ ಒಟ್ಟು ಹಾಲಿನಲ್ಲಿ ಅರ್ಧದಷ್ಟು ಹಾಲು ಹಾಗೆಯೆ ವೆಚ್ಚವಾಗುವುದೆಂದು ತಿಳಿದಲ್ಲಿ, ಮಿಕ್ಕ ಅರ್ಧ ಹಾಲಿನಲ್ಲಿ ಹೊರಡುವ ಬೆಣ್ಣೆಯ ಲೆಕ್ಕವನ್ನು ಮಾಡಿದರೆ ವರ್ಷದ್ದೆಲ್ಲ ಸೇರಿ ೧ ಕೋಟಿಯ ಮೇಲೆ ಬರೀ ಇಪ್ಪತ್ತೊಂದು ಮಣದಷ್ಟಾಗುವುದು. ನಮ್ಮ ೩೫ ಕೋಟಿ ಭಾರತೀಯರು ಇಷ್ಟು ಬೆಣ್ಣೆಯನ್ನು ವರ್ಷವೆಲ್ಲಕ್ಕೂ ಪೂರಯಿಸಿಕೊಳ್ಳಬೇಕು. ಈ ಲೆಕ್ಕದಂತೆ ಪ್ರತಿಯೊಬ್ಬ ಭಾರತೀಯನಿಗೆ ವರ್ಷವೊಂದಕ್ಕೆ ಸಿಕ್ಕಬಹುದಾದ ಬೆಣ್ಣೆಯೆಂದರೆ ಬರೀ ಮೂರು ಪೌಂಡು. ದಿನವೊಂದಕ್ಕೆ ಕೇವಲ ನಾಲ್ಕು ಮಾಸಿಯ ತೂಕ ಎಂದರೆ ೩ ತೊಲೆ ಸಿಕ್ಕಬೇಕಾದರೆ ಎಷ್ಟೋ ತೊಂದರೆ ಪಟ್ಟುಕೊಳ್ಳಬೇಕಾಗುವುದು. ಬೇರೆ ಬೇರೆ ದೇಶಗಳಲ್ಲಿಯ ಜನರಿಗೆ ಪ್ರತಿಯೊಬ್ಬನಿಗೆ ಒಂದು ವರ್ಷಕ್ಕೆ ಸಿಕ್ಕಬಹುದಾದ ಬೆಣ್ಣೆಯ ಪ್ರಮಾಣವನ್ನು ಕೆಳಗೆ ವಿವರಿಸಲಾಗಿದೆ:—

ಫಿನ್‌ಲ್ಯಾಂಡ್	೨೦·೭	ಪೌಂಡುಗಳು
ಸ್ವಿತ್ಸರ್‌ಲಂಡ್	೧೩·೦	,,
ಸ್ವೀಡನ್	೧೮·೬	,,
ಅಮೇರಿಕಾ	೧೭·೩	,,
ಕ್ಯಾನಡಾ	೨೯·೩	,,
ನೆದರ್‌ಲ್ಯಾಂಡ್	೧೨·೬	,,
ನ್ಯೂಝಿಲ್ಯಾಂಡ್	೩೪·೧	,,
ಆಸ್ಟ್ರೇಲಿಯಾ	೨೯·೮	,,
ಇಂಗ್ಲಂಡ್	೧೭·೦	,,
ಫ್ರಾನ್ಸ್	೮·೫	,,
ಡೆನ್ಮಾರ್ಕ್	೧೨·೨	,,

ಇದರಲ್ಲಿಯ ಅನೇಕ ದೇಶಗಳು, ತಮ್ಮ ಜನರಿಗೆ ಮೇಲೆ ಬರೆದ ಪ್ರಮಾಣದಲ್ಲಿ ಬೆಣ್ಣೆಯನ್ನು ಪೂರಯಿಸಿ ಕೊಟ್ಟು, ಹೊರನಾಡುಗಳಿಗೂ ಸಾಕಷ್ಟು ಕಳಿಸಿಕೊಡುತ್ತವೆ.

—o—

ಆಯರ್ಲಂಡದ ಅವತಾರಪುರುಷ

ಡಿ ವ್ಹಲೇರಾ (De Valera); ಒಂದು ದೈವೀ ಶಕ್ತಿ.

" ಚಾಡಿಯ ಚಾಣಕ್ಯ "

ಗಾಳಿಯಲ್ಲಿ ಗೋಪುರ ಕಟ್ಟುವು ದೆಂದರೆ ಯಾರಾದರೂ ನಗಬಹುದು. ಆದರೆ ಇಂದು ನಮ್ಮ ಕಣ್ಣೆದುರಿನಲ್ಲಿಯೆ ಗಾಳಿ ಗೋಪುರವನ್ನು ಮೂರ್ತಿಮತ್ತಾಗಿ ನಿಲ್ಲಿಸಿದ ವಿಶ್ವಕರ್ಮನಂತಹ ಶಿಲ್ಪಿಯಿದ್ದಾನೆ. ಯಮನನ್ನು ಕೂಡ ಎದುರಿಸಿ, ಸೋಲಿಸಿ, ಮರಣವನ್ನು ಗೆದ್ದು ಚಿರಂಜೀವಿಯೆನಿಸುವ ಮಹಾಪುರುಷನು ಕಲಿಯುಗದಲ್ಲಿಯೆ ಇದ್ದಾನೆ! ೧೯೧೬ರಲ್ಲಿ ದೇಹಾಂತಶಿಕ್ಷೆ ವಿಧಿಸಲ್ಪಟ್ಟಿತ್ತು— ಡಿ ವ್ಹಲೇರಾ ಇವರಿಗೆ. ಅದು ಅಕಸ್ಮಾತ್ತಾಗಿ ಒಂದು ವಿಚಿತ್ರ ಸಂಘಟನೆಯಿಂದ ತಪ್ಪಿತು. ೧೯೧೭ ರಲ್ಲಿ ಸೆರೆಮನೆಯಿಂದ ಪಾರಾದ ಡಿ ವ್ಹಲೇರಾ ಇವರನ್ನು ಪರಿಶೋಧಿಸಲು ಇಡಿಯ ಬ್ರಿಟಿಶ ಸಾಮ್ರಾಜ್ಯದ ಪ್ರಭುತ್ವವೆ ಸಡ್ಡು ಹೊಡೆದಿತ್ತು, ಆದರ ಕೈಗಳಿಂದ ಜಾರಿದ ಮಾಯಾವಿತ್ವವು ಡಿ ವ್ಹಲೇರಾ ಇವರದು! ಹೀಗೆ ಮರಣಕ್ಕೆ ಒಲಿಯಾಗಿಟ್ಟ ಜೀವ ದಿಂದಲೆ ಹೋರಾಡಿ ಯಶಸ್ವಿಯಾಗಿ, ಇಂದು ಆಯರ್ಲಂಡದ ಮೊದಲನೆಯ ಸ್ವಾತಂತ್ರ್ಯ ಸಿದ್ಧ ಪುರುಷನಾಗಿದೆ! ಈ ಮಹಾವಿಭೂತಿ! ಆಶ್ಚರ್ಯವೆನಬಹುದೆ? ದೈವೀಲೀಲೆ ಎನಬಹುದೆ? ಪೌರುಷದ ಪ್ರಭಾವವೆನಬಹುದೆ?

ಡಿ ವ್ಹಲೇರಾನನ್ನು ಕಣ್ಣಾರೆ ನೋಡಿದರೆ 'ಇದೊಂದು ಇಂದಿನ ಅಲೌಕಿಕ ವ್ಯಕ್ತಿ' ಎಂದು ಒಮ್ಮೆಲೆ ಹೇಳಲಾಗುವುದಿಲ್ಲ. ವೇಷದ ಆಡಂಬರವಿಲ್ಲ; ಎತ್ತರವಾದ ದೇಹ, ಬಡವಾದ ಮೈಕಟ್ಟು, ನಿಡಿದಾದ ಮೂಗು; ಬಡತನದಲ್ಲಿಯೆ ಅಭಿಮಾನ; ಧಾರ್ಮಿಕ ಮನೋವೃತ್ತಿ; ಹೆಂಡತಿ-ಮಕ್ಕಳೊಡನೆ ಸಂಸಾರ; ಹೀಗೆ ಸಾಮಾನ್ಯ ಮನುಷ್ಯನಲ್ಲಿ ಕಂಡುಬರುವ ಸಂಗತಿಗಳೆ ಇವರಲ್ಲೂ ಕಂಡುಬರುವುವು. ಆಯರ್ಲಂಡದ ಅನೇಕ ಜನರಿಗಿಂತ ಭಿನ್ನವಾದ ಇವರದೊಂದು ವಿಶೇಷವೆಂದರೆ ಇವರು

ಇಡಿಯ ಐರ್ಲಂಡಿನ ಜನರೆಲ್ಲರ ಅಂತಃಕರಣವನ್ನು ಸೆಳೆದುಕೊಂಡ ಡಿ ವ್ಹಲೇರಾನು ಅವರಿಂದ 'ಡೆವ್'(Dev)' ಎಂಬ ಮುದ್ದಿನಹೆಸರಿನಿಂದ ಕರೆಯಿಸಿಕೊಳ್ಳುತ್ತಿರುವನು. ಈ ಬಗೆಯಲ್ಲಿ ಐರ್ಲಂಡಿನ ಜನರೆಲ್ಲರ ಮನಸ್ಸನ್ನು ವಶಪಡಿಸಿಕೊಂಡವನೆಂದರೆ ಇವನೊಬ್ಬನೆ.

—ಡಿ ವ್ಹಲೇರಾನ ಚಿತ್ರದಲ್ಲಿ ಕಾಣಿಸುತ್ತಿರುವ ಉಗ್ರತೆ ಅವನ ಸ್ವಭಾವದಲ್ಲಿ ಸೌಮ್ಯತೆಯಾಗಿ ರೂಪುಗೊಂಡಿದೆ. ನಿಡಿದಾದ ಮೂಗೂ ಹಣೆಯಲ್ಲಿಯ ಆಳವಾದ ಗೆರೆಗಳೂ ಇವನ ಚುರುಕುತನವನ್ನು ಹೊರಕ್ಕೆ ತೋರಿಸುವುವು; ಸೌಶೀಲ್ಯಕ್ಕೆ ಸಾಕ್ಷಿಗಳಾಗಿರುವುವು.

● ● ●

ಅಮೇರಿಕೆ (ನ್ಯೂಯಾರ್ಕ) ಯಲ್ಲಿ ಹುಟ್ಟಿದವರು. ಈ ಕಾರಣಕ್ಕಾಗಿಯೆ. ಇವರಿಗೆ ವಿಧಿಸಿದ ದೇಹಾಂತಶಿಕ್ಷೆಯನ್ನು ಜಾರಿಯಲ್ಲಿ ತರುವುದಾಗಲಿಲ್ಲ. ಕಾಯಿದೆಗನ್ವಯಿಸಿ ಡಿ ವ್ಹಲೇರಾ— ಇಂದಿನ ಆಯರ್ಲಂಡದ ಪ್ರಜಾಪ್ರಭುವು — ೧೯೧೬ ರಲ್ಲಿ ಅಮೇರಿಕೆಯ ಪ್ರಜೆಗಳಾಗಿದ್ದರು. ಆಗ ನಡೆದ ಮಹಾಯುದ್ಧದಲ್ಲಿ ಅಮೇರಿಕೆಯು ತಟಸ್ಥರಾಜ್ಯವಾಗಿದ್ದಿತು. ತಟಸ್ಥ ರಾಜ್ಯದ ಪ್ರಜೆಯನ್ನು ಕೊಂದು ಅದರ ಶತ್ರುತ್ವವನ್ನು ಕಟ್ಟಿಕೊಳ್ಳುವುದೇಕೆ— ಎಂಬ ವಿಚಾರದಿಂದ ಬ್ರಿಟಿಶರು ಡಿ ವ್ಹಲೇರಾ ಇವರನ್ನು ಮರಣಕ್ಕೆ ಗುರಿಮಾಡಲಿಲ್ಲ!

ಇವರು ನ್ಯೂಯಾರ್ಕದಲ್ಲಿ ಹುಟ್ಟಿದರೂ ತಮ್ಮ ಬಾಲ್ಯದಿಂದಲೂ (೨ನೆಯ ವರ್ಷದಿಂದ) ಆಯರ್ಲಂಡದಲ್ಲಿ ತಮ್ಮ ಸೋದರ ಮಾವನ ಮನೆಯಲ್ಲಿ ಇದ್ದುಕೊಂಡರು. ಜನ್ಮದ ಅಲ್ಪಾವಧಿಯಲ್ಲಿಯೆ ತಂದೆ ತೀರಿಕೊಂಡನು; ತಾಯಿಯು ಅಮೇರಿಕೆಯಲ್ಲಿಯೆ ಉಳಿದುಕೊಂಡಳು. ಉಳಿದ ಅನೇಕ ಮಹಾಪುರುಷರಂತೆ ಇವರ ಜೀವನದಲ್ಲಿ ತಂದೆ-ತಾಯ್ಗಳ ಪ್ರಭಾವದ ಛಾಯೆಯನ್ನೆ ತೋರಿಸುವಂತಿಲ್ಲ. ಆಯರ್ಲಂಡದಲ್ಲಿಯೆ ಶಿಕ್ಷಣವನ್ನು ನಡೆಯಿಸಿ, ರಾಯಲ್ ಯುನಿವರ್ಸಿಟಿಯ ಪದವಿಯನ್ನು ಪಡೆದು ಇವರು ಶಿಕ್ಷಕನ ವೃತ್ತಿಯನ್ನು ಕೈಕೊಂಡರು. ಶಿಕ್ಷಣವನ್ನು ಪಡೆದು ಶಿಕ್ಷಣವನ್ನು ಕೊಡುವಂತಹ ಸುಸಂಸ್ಕೃತ ಹೃದಯದ ಮೇಲೆ ಆಯರ್ಲಂಡದ ಇತಿಹಾಸದ ಪರಿಣಾಮವು ಆಗದೆ ಹೋದೀತೆ? ಆಯರ್ಲಂಡಕ್ಕೆ ಅನೇಕ ಇತಿಹಾಸಕಾರರು 'The most unfortunate country on the face of this globe, ಭೂಮಂಡಲದಲ್ಲಿ ಅತ್ಯಂತ ಹತಭಾಗ್ಯವಾದ ದೇಶ' ಎಂದಿದ್ದಾರೆ. ಇಂಗ್ಲಂಡಿನ ಮಗ್ಗುಲಲ್ಲಿಯೆ ಇದ್ದುದು ಆಯರ್ಲಂಡದ ಭೂಗೋಲ, ಅದೇ ಆಯರ್ಲಂಡದ ಇತಿಹಾಸ ಎಂದೂ ಹೇಳಬಹುದು. ಇಂದಿಗೆ ೬೦೦ ವರ್ಷಗಳ ಹಿಂದಿನಿಂದ ಆಯರ್ಲಂಡಕ್ಕೂ ಇಂಗ್ಲಂಡಿಗೂ ವಿರೋಧ ಬೆಳೆಯುತ್ತ ನಡೆದಿದೆ. ಒಂದು ದೃಷ್ಟಿಯಿಂದ ಇಂಗ್ಲಂಡವು ಆಯರ್ಲಂಡದ ಬೇಲಿ ಎಂದು ಹೇಳಬಹುದು: ಆದರೆ ಕೊನೆಗೆ ಮುಳ್ಳು ಮುಸುಕಿದ ಬೇಲಿಯಾಯಿತು, ಆಯರ್ಲಂಡವು ಆ ಬೇಲಿಯಿಂದ ಹೊರಬೀಳದಂತಾಯಿತು; ಮುಂದೆ ಬೇಲಿಯೆ ಹೊಲವನ್ನು ಮೆಯ್ದಂತೆ ಇಂಗ್ಲಂಡವು ಆಯರ್ಲಂಡದ ಸ್ವಾತಂತ್ರ್ಯವನ್ನು ಕಸಿದುಕೊಂಡಿತು. ಆಯರ್ಲಂಡದ ಜನಸಾಮಾನ್ಯರು ರೋಮನ್ ಕ್ಯಾಥಲಿಕ್ ಪಂಥದವರು, ಪೋಪ (Pope, ಧರ್ಮಗುರು) ನ ಅನುಯಾಯಿಗಳು; ೧೬ನೆಯ ಶತಮಾನದಿಂದ ಈಚೆಗೆ ಇಂಗ್ಲಂಡವು ಪೋಪನ ಪ್ರಭುತ್ವವನ್ನು ನಿರಾಕರಿಸಿತು. ಇದೂ ಒಂದು ವೈರ ಬೆಳೆಯಲು ಕಾರಣ.

ವೆನಿಸಿತು. ಅಂತೂ ಆಯರ್ಲಂಡದ ಮೇಲೆ ಪ್ರಭುತ್ವವನ್ನು ನಡೆಸುವಾಗ ಇಂಗ್ಲಂಡ ದೇಶವು ದಯೆ-ಮಾಯೆಗಳನ್ನು ತೋರಿಸಿಲ್ಲ ಇಷ್ಟೇ ಅಲ್ಲ, ಅತ್ಯಂತ ಅನ್ಯಾಯವಾಗಿಯೂ ಕ್ರೂರವಾಗಿಯೂ ವರ್ತಿಸಿದೆ ಎಂದು ಆಯರ್ಲಂಡದ ಅನೇಕ ದೇಶಾಭಿಮಾನಿಗಳ ಗ್ರಹಿಕೆ ಇದೆ, ಆರೋಪವೂ ಇದೆ. ಡಿ ವ್ಹಲೇರಾ ಇವರು ಇತಿಹಾಸದ ಇಂತಹ ವಾತಾವರಣದಲ್ಲಿ ಬೆಳೆದರು. ಅವರ ಉಜ್ವಲವಾದ ಅಭಿಮಾನಕ್ಕೆ, ಕಳಕಳಿಯ ಹೃದಯಕ್ಕೆ ಆಯರ್ಲಂಡದ ಪಾರತಂತ್ರ್ಯವೆಂಬುದು ದೇವನಿಗೆ ದ್ರೋಹ- ಎನಿಸಿತು, ಸತ್ಯಕ್ಕೆ ಆಘಾತ ಎನಿಸಿತು. ಆದುದರಿಂದಲೆ ಅವರು ಶಿಕ್ಷಕನ ಸೌಮ್ಯವೃತ್ತಿಯಿಂದ ಸಂತೃಪ್ತರಾಗಿರಲಿಲ್ಲ. ಅವರ ಜೀವನವು ಅಷ್ಟೊಂದು ಧ್ಯೇಯವಾದಿ, ಅವರ ಸ್ವಭಾವ ಅಷ್ಟೊಂದು ಹಟವಾದಿ. ಒಂದು ಮಾರ್ಮಿಕವಾದ ಉದಾಹರಣೆ ಇದೆ ಅವರ ಜೀವನದಲ್ಲಿ. ಅವರಿಗೆ ಮೊದಲಿನಿಂದಲೂ ಹೊಗೆಬತ್ತಿ (Smoking) ಯ ಅಭ್ಯಾಸ ಬಹಳ. ಒಮ್ಮೆ ಅವರು ಬ್ರಿಟಿಶ ಸೈನಿಕರನ್ನು ತಪ್ಪಿಸಿ ಕಳ್ಳತನದಿಂದ ಅಲೆದಾಡುವಾಗ, ಒಂದು ಕಡೆ ವಿಶ್ರಾಂತಿಗೆಂದು ಕುಳಿತುಕೊಂಡರು. ಸ್ವಾಭಾವಿಕವಾಗಿಯೆ ಚಿಲುಮೆ(Pipe) ಯನ್ನು ಹೊರಗೆಳೆದು ಹೊಗೆ ಸೊಪ್ಪನ್ನು ತುಂಬ ತೊಡಗಿದರು. ತಟ್ಟನೆ ಅವರಿಗೆ ಏನು ಹೊಳೆಯಿತೊ! ಚಿಲುಮೆಯನ್ನೂ ಕಿಸೆಯೊಳಗಿನ ಹೊಗೆಸೊಪ್ಪನ್ನೂ ಬಿರ್ರೆಂದು ಬೀಸಾಡಿ ಚೆಲ್ಲಿದರು. 'ನಾನು ಜೇಲಿನಲ್ಲಿ ಹೋದಾಗ ನನಗೆ ಬೇಕಾಗುವ ಹೊಗೆಬತ್ತಿಯನ್ನು ಕೊಡದೆ ನನ್ನನ್ನು ಗೋಳಿಡಿಸುವ ಸಂತೋಷವು ಬ್ರಿಟಿಶರಿಗೆ ಬೇಡ' ಎಂದರು. ಇದು ೧೯೧೬ರ ಮಾತು; ಅಂದಿನಿಂದ ಇಂದಿನವರೆಗೆ ಹೊಗೆಬತ್ತಿಯನ್ನು ಅವರು ಕೈಬೆರಳ ತುದಿಯಿಂದ ಮುಟ್ಟಿಲ್ಲ!

ಆಯರ್ಲಂಡದ ಇಂದಿನ ಇತಿಹಾಸವೆಲ್ಲ ಡಿ ವಲ್ಹೇರಾ ಇವರ ಧ್ಯೇಯವಾದ ಮತ್ತು ಹಟವಾದ ಇವುಗಳ ಪರಿಣಾಮವೆಂದೇ ಹೇಳಬಹುದು. ಶಾಂತಿ ಇದ್ದಾಗ ಇಂಗ್ಲಂಡವು ಆಯರ್ಲಂಡವನ್ನು ಸುಖದಿಂದ ಆಳಬಹುದಾದರೂ ಯುದ್ಧದ ವೇಳೆಗೆ ಆಯರ್ಲಂಡವು ಇಂಗ್ಲಂಡದ ಕಾಲಲ್ಲಿ ನೆಟ್ಟ ಮುಳ್ಳಿನಂತೆ ಎಂದು ಹೇಳಬಹುದು. ಇಂಗ್ಲಂಡದ ಮೇಲಿನ ದ್ವೇಷದಿಂದ ಆಯರ್ಲಂಡವು ಇಂಗ್ಲಂಡದ ಶತ್ರುಗಳಿಗೆ ತನ್ನಲ್ಲಿ ಆಸ್ಪದ ಕೊಟ್ಟರೆ? ತನ್ನ ಬಂದರಗಳಲ್ಲಿ ಶತ್ರುಗಳ ಹಡಗುಪಡೆಯನ್ನು ಬರಗೊಟ್ಟರೆ? ಇಂಗ್ಲಂಡಕ್ಕೆ ಈ ಹೆದರಿಕೆ ಯಾವಾಗಲೂ ಇದ್ದುದೆ. ಕಳೆದ ಮಹಾಯುದ್ಧದಲ್ಲಿ ಇಂತಹ ಪ್ರಸಂಗ ಬಂದಿತು. ೧೯೧೬ರಲ್ಲಿ

ಡಿ ವ್ಹಲೇರಾ

ಡಿ ವ್ಹಲೇರಾ ಮೊದಲಾದ ಉಗ್ರವಾದಿಗಳು ಬಂಡಾಯವನ್ನೆಬ್ಬಿಸಲೆಣಿಸಿದರು. ಕೊನೆಗೆ ಜರ್ಮನಿಯ ಸಹಾಯವು ತಮಗೆ ನ್ಯಾಯವಾಗಿ ಸಿಗಲೆಂದೂ, ಇಂಗ್ಲಂಡವು ತೊಡಕಿನಲ್ಲಿದೆ ಎಂಬುದನ್ನು ಕಂಡುಕೊಂಡೂ ಇವರು 'ಆಯರ್ಲಂಡವು ಪ್ರಜಾಸತ್ತಾತ್ಮಕವಾದ ಸ್ವತಂತ್ರ್ಯ ರಾಜ್ಯ' ಎಂದು ಉದ್ಘೋಷಿಸಿದರು. ಆದರೇನು? ಸಾಮ್ರಾಜ್ಯದ ಶಕ್ತಿಯ ಎದುರು ಇವರ ಆಟ ನಡೆಯದಂತಾಗಿ, ಚಿಕ್ಕಪುಟ್ಟ ತಾಕಲಾಟಗಳಲ್ಲಿ ಅನೇಕರು ಮರಣಹೊಂದಿದರು. ಡಿ ವ್ಹಲೇರಾ ಮೊದಲಾದವರು ಸೆರೆಸಿಕ್ಕರು. ಈ ಸಂದರ್ಭದಲ್ಲಿಯೆ ಅವರಿಗೆ ದೇಹಾಂತ ಶಿಕ್ಷೆ ವಿಧಿಸಲ್ಪಟ್ಟದ್ದು, ಮತ್ತು ಮೇಲೆ ಹೇಳಿದಂತೆ ಅವರು ಅಕಸ್ಮಾತ್ತಾಗಿ ಉಳಿದು ಸೆರೆಮನೆಯ ನಿವಾಸಿಗಳಾದದ್ದು.

ಯುದ್ಧವು ಮುಗಿದ ಮೇಲೆ ಆಯರ್ಲಂಡ-ಇಂಗ್ಲಂಡಗಳ ನಡುವೆ ಸಂಧಾನದ ಮಾತುಕತೆಗಳು ನಡೆದುವು. ಆದರೆ ಡಿ ವ್ಹಲೇರಾ ಇವರು ಉಗ್ರವಾದಿಗಳು. ಇವರಿಗೆ ಬೇಕಾದದ್ದು ಸಂಧಾನವಲ್ಲ, ಸ್ವಾತಂತ್ರ್ಯ; ಆದುದರಿಂದ ಇವರು ತಮ್ಮ ಪಕ್ಷದಲ್ಲಿ ತಯಾರಾಗಿದ್ದ ಆವೇಶಯುಕ್ತ ವೀರ ತರುಣರನ್ನು ಕಟ್ಟಿಕೊಂಡು ಬ್ರಿಟಿಶ್ ಸೈನಿಕರೊಡನೆ ಯುದ್ಧವನ್ನೆ ಹೂಡಿದರು; ಕೊನೆಗೆ ಸೆರೆಸಿಕ್ಕರು; ಮತ್ತೆ-ಇವರನ್ನು ಕಾರಾಗೃಹದಲ್ಲಿ ಇಡಲಾಯಿತು. ಆಯುಷ್ಯದ ಬಹುಭಾಗವನ್ನು ಕಾರಾಗೃಹದಲ್ಲಿ ಕಳೆದುದರಿಂದ ಇವರಿಗೆ ಕಾರಾಗೃಹದ ಸಂದು-ಗೊಂದುಗಳೆಲ್ಲವೂ ಗೊತ್ತಾಗಿದ್ದವೇನೊ! ತಮ್ಮ ಕೋಣೆಯಲ್ಲಿಯ ಮೇಣಬತ್ತಿಯ ಮೇಣದಿಂದ ಕೋಣೆಯ ಬೀಗದ ಪಡಿಯಚ್ಚೊಂದನ್ನು ಮಾಡಿ ಹಾಗೂ ಹೀಗೂ ರಹಸ್ಯವಾಗಿ ಅದನ್ನು ತಮ್ಮ ಹಿತಚಿಂತಕರಿಗೆ ಕಳುಹಿಸಿದರು. ಅವರು ಆ ಪಡಿಯಚ್ಚಿನ ಅಳತೆಗೆ ಒಂದು ಬೀಗದ ಕೈಯನ್ನು ಮಾಡಿಸಿ, ಅದನ್ನು ತಮ್ಮ ನಾಯಕನಿಗೆ ಕಳುಹಿಸಿಕೊಟ್ಟರು. ಆಮೇಲೆ ಕೇಳುವುದೇನು? ಮನೆಯಿಂದ ಹೊರಬೀಳುವ ಗೃಹಸ್ಥನಂತೆ ನಿಧಾನವಾಗಿ ಬೀಗವನ್ನು ತೆಗೆದು ಯಾರ ಸುಳುವಿಲ್ಲದಾಗ ಡಿ ವ್ಹಲೇರಾ ಇವರು ಪಾರಾದರು! ಡಿ ವ್ಹಲೇರಾ ಪಾರಾದರು? ಬ್ರಿಟಿಶ ಪ್ರಭುತ್ವಕ್ಕೆ ಹೌಹಾರಿದಂತಾಯಿತು, ನಿದ್ದೆ ತಪ್ಪಿತು! ವಿಶ್ವಪ್ರಯತ್ನವನ್ನು ಮಾಡಿ ಡಿ ವ್ಹಲೇರಾನನ್ನು ಹಿಡಿದು ಕಾರಾಗೃಹದಲ್ಲಿರಿಸಬೇಕೆಂದು ಬ್ರಿಟಿಶರ ಹಟ; ವಿಶ್ವಸಾಕ್ಷಿಯಾದ ದೇವನನ್ನೂ ಕೂಡ ತಪ್ಪಿಸಿ ಜಾರುವಂತೆ ಡಿ ವ್ಹಲೇರಾ ಇವರ ಚಾತುರ್ಯ. ಕೊನೆಗೆ ವೇಷಬದಲಾಯಿಸಿ, ಅಮೇರಿಕೆಗೆ ಹೋಗುವ ಹಡಗದಲ್ಲಿ ಎಂಜಿನದ ಇದ್ದಲಿ ತುಂಬುವ ಆಳಾಗಿ,

ಡಿ ವ್ಹಲೇರಾ ಇವರು ಯಾವುದೂ ಗಂಡಾಂತರವಿಲ್ಲದೆ ಸುರಕ್ಷಿತವಾಗಿ ಅಮೇರಿಕೆಗೆ ಮುಟ್ಟಿದರು. ಅಲ್ಲಿ ಸಹಾನುಭೂತಿಯ ಚಳವಳವನ್ನು ಹೂಡಿ, ನಿಧಿಯನ್ನು ಕೂಡಿಸಿ, ಎಲ್ಲರ ಕಣ್ಣು ತಪ್ಪಿಸಿ ಒಂದು ವರ್ಷದೊಳಗಾಗಿ ಆಯರ್ಲಂಡಕ್ಕೆ ಬಂದು, ಬ್ರಿಟಿಶರೊಡನೆ ಸಂಧಾನ ನಡೆಸಿದ ತನ್ನ ದೇಶಬಾಂಧವರೊಡನೆ ಅಂತಃಕಲಹ (civil war) ವನ್ನು ಹೂಡಿದರು. ಆದರೆ ೧೯೨೧ ರಲ್ಲಿ ಇಂಗ್ಲಂಡ- ಆಯರ್ಲಂಡಗಳ ನಡುವೆ ಮುಕ್ತಸ್ವಿಯಾದ ಸಂಧಾನವಾಯಿತು. ಆಯರ್ಲಂಡಕ್ಕೆ ಸ್ವತಂತ್ರ ಪಾರ್ಲಮೆಂಟು ದೊರೆಯಿತು. ಈ ಸಂಧಾನಕ್ಕೆ ವಿರೋಧಿಗಳಾಗಿದ್ದರೂ ಡಿ ವ್ಹಲೇರಾ ಇವರು ತಮ್ಮ ಪಕ್ಷವನ್ನು ಚುನಾವಣೆಗೆ ನಿಲ್ಲಿಸಿ ಆರಿಸಿ ಬಂದಮೇಲೆ, ಪಾರ್ಲಮೆಂಟಿಗೆ ಬಹಿಷ್ಕಾರ ಹಾಕುವಂತೆ ಮಾಡಿದರು. ಇಷ್ಟೇಕೆ? ಸ್ವತಂತ್ರ ಆಯರ್ಲಂಡ' ಎಂಬ ತತ್ತ್ವವನ್ನು ಸಾರುತ್ತ ೮–೧೦ ವರ್ಷಗಳ ವರೆಗೆ ಪಾರ್ಲಮೆಂಟನ್ನೂ ಅಧಿಕಾರ ಪದವಿಯನ್ನೂ ಬಹಿಷ್ಕರಿಸುವ ಚಳವಳವನ್ನೆ ನಡೆಸಿದರು. ಆಯರ್ಲಂಡವು ಸ್ವತಂತ್ರವೆಂದೂ, ಡಿ ವ್ಹಲೇರಾ ಇವರು ಸ್ವತಂತ್ರ ಆಯರ್ಲಂಡದ ಅಧ್ಯಕ್ಷ (President of the Republic) ರೆಂದೂ ಇವರ ಪಕ್ಷವು ವ್ಯವಹಾರವನ್ನು ನಡೆಸಿತು. ಕೊನೆಗೆ ೧೯೩೨ರಲ್ಲಿ ಡಿ ವ್ಹಲೇರಾ ಇವರ ಪಕ್ಷಕ್ಕೆ ಬಹುಮತ ದೊರೆಯಿತು. ಅಂದಿನಿಂದ ಇಂದಿನವರೆಗೆ ಈ ಸಾಹಸ ಪುರುಷನು ಬ್ರಿಟಿಶ ಸಾಮ್ರಾಜ್ಯವನ್ನೂ ೧೯೨೧ರ ಒಪ್ಪಂದವನ್ನೂ ಪೂರ್ತಿಯಾಗಿ ಮರೆತವನಂತೆ ವ್ಯವಹರಿಸುತ್ತಲಿದ್ದಾನೆ! ಪಾರ್ಲಮೆಂಟಿನ ಸದಸ್ಯನ ಇಂಗ್ಲಂಡ ದ ಸಮ್ರಾಟನಿಗೆ ವಿಧೇಯತ್ವದ ಶಪಥ (Oath of allegiance) ವಹಿಸುವ ಕಾಯಿದೆಯನ್ನು ಇವರು ತೆಗೆದು ಹಾಕಿದರು; ಪ್ರಿವ್ಹಿ ಕೌನ್ಸಿಲಿಗೆ ಅಪೀಲಿನ ಅಧಿಕಾರ ಇಲ್ಲವೆಂದು ಸಾಧಿಸಿದರು; ಒಟ್ಟಾರೆ, ಆಯರ್ಲಂಡವು ಸ್ವತಂತ್ರ ಎಂಬ ಮಾತನ್ನು ಸಿದ್ಧಮಾಡುವದಲು, ಇವರದನ್ನು ತಳಹದಿಯಾಗಿ ಇಟ್ಟುಕೊಂಡರು! ಧೈರ್ಯವೆನ್ನೋಣವೆ? ಚಾತುರ್ಯವೆನ್ನೋಣವೆ?

ಡಿ ವ್ಹಲೇರಾ ಇವರ ಧೈರ್ಯ ಅಪಾರವಾಗಿದೆ. ವೈಯಕ್ತಿಕ ಧೈರ್ಯವಂತೂ ಹುಟ್ಟುಗುಣವಾಗಿದೆ. ಆದರೆ ಅವರಲ್ಲಿ ಇನ್ನೊಂದು ತರದ ಧೈರ್ಯವಿದೆ, ಪ್ರಜಾಪ್ರಭುತ್ವದ ಧೈರ್ಯ. ಜನರ ಬೆಂಬಲವು ತನಗಿದೆ, ಬಹುಮತವನ್ನು ಜನತೆಯು ತನಗೆ ಕೊಟ್ಟಿದೆ ಎಂಬುದರ ಧೈರ್ಯದಿಂದ ಅವರು ಬ್ರಿಟಿಶ ಸಾಮ್ರಾಜ್ಯಕ್ಕೆ ಸೊಪ್ಪು ಹಾಕಲಿಲ್ಲ. ಇದಲ್ಲದೆ ಮುಂದಾಳಿಗೆ ಅವಶ್ಯವಿದ್ದ ಇನ್ನೂ ಒಂದು ಗುಣವಿದೆ; ಜನಸಾಮಾನ್ಯರಲ್ಲಿ ಬೆರೆತುಕೊಳ್ಳುವುದು, ಅವರ ಸುಖದುಃಖಗಳನ್ನು ಅರಿತುಕೊಳ್ಳುವುದು, ತಾನು ಅವರ ನಮ್ರ ಮತ್ತು ನಂಬುಗೆಯ ಸೇವಕ ಎಂದು **ಪ್ರಾಮಾಣಿಕ ಬುದ್ಧಿಯಿಂದ** ಒಪ್ಪಿ ನಡೆಯುವುದು. ಇದು ತನ್ನ ಕರ್ತವ್ಯ ಎಂದು ನಿರ್ಣಯಿಸಿದಲ್ಲಿ ಸೆರೆಮನೆಯ ಹೆದರಿಕೆ ಇಲ್ಲ, ಮರಣದ ಬೆದರಿಕೆಯಿಲ್ಲ; ಎಲ್ಲರಿಗೂ ಮುಂದಾಗಿ ಅವಿಶ್ರಾಂತವಾಗಿ ಹೆಣಗಾಡುವುದು. ತಾರುಣ್ಯದಲ್ಲಿ ಕಷ್ಟಗಳನ್ನು ಸಹಿಸಿ ಇಂದು ಇಳಿವಯಸ್ಸಿನಲ್ಲಿ ಆಯರ್ಲಂಡದ ಹಿರಿಯನೆನಿಸಿದರೂ ಇವರಿಗೆ ವಿಶ್ರಾಂತಿ ಎಂಬುದಿಲ್ಲ, ಕರ್ತವ್ಯದಕ್ಷತೆ– ಕಷ್ಟಸಹಿಷ್ಣುತೆಗಳು ಕುಗ್ಗಿಲ್ಲ. ಈಗಲೂ ಬೆಳಗಿನ ೯½ ಗಂಟೆಗೆ ಇವರು ಆಫೀಸಿಗೆ ಹೋಗುವರು, ಮಧ್ಯಾಹ್ನ ಊಟಕ್ಕಾಗಿ ಮನೆಗೆ ಹೋಗಿ ಮರಳಿ ಆಫೀಸಿಗೆ ಬಂದು ಸಂಜೆಯ ೬ ಗಂಟೆಯ ವರೆಗೆ ಕೆಲಸವನ್ನು ನೋಡಿಕೊಳ್ಳುವರು. ಅನೇಕಸಲ ಮಧ್ಯರಾತ್ರಿಯವರೆಗೂ ಇವರು ಅಲ್ಲಿಯೆ ಕೆಲಸ ಮಾಡುತ್ತಿರುವರಂತೆ.

ಶತ್ರುವಿನ ಕಟುಕವೃತ್ತಿಯಿಂದ ಕಂಗಾಲಾದ ಇವರ ದೇಹವು ಕಟುಕವಾಗಿರಬಹುದು, ಆದರೆ ಇವರ ಮನಸ್ಸು ಮಾತ್ರ ಇನ್ನೂ ಎಂದಿನಂತೆಯೆ ಮಿದುವಾಗಿದೆ. ನಗುವ ಮತ್ತು ನಗಿಸುವ ಕೌಶಲ್ಯಕ್ಕಾಗಿ ಆಯರ್ಲಂಡದ ಜನರು ಹೆಸರಾಗಿದ್ದಾರೆ. ಡಿ ವ್ಹಲೇರಾ ಇವರಲ್ಲೂ ವಿನೋದವೃತ್ತಿ ಚುರುಕಾಗಿದೆ. ಒಮ್ಮೆ ಇವರು ಉಪನ್ಯಾಸವನ್ನು ನಡೆಸಿದಾಗ ಇವರನ್ನು ಬಂಧಿಸಿಕೊಂಡೊಯ್ದರು. ಇವರ ವಾಕ್ಯವನ್ನು ಕೂಡ ಮುಗಿಯಗೊಡಲಿಲ್ಲ. ಮುಂದೆ ಒಂದು ವರ್ಷ ಶಿಕ್ಷೆಯಾಯಿತು. ಬಿಡುಗಡೆಯಾದಮೇಲೆ ಅದೇ ಸ್ಥಾನದಲ್ಲಿ ಉಪನ್ಯಾಸವನ್ನಿಟ್ಟು 'ನಾನು ಹೇಳುತ್ತಿದ್ದಂತೆ' ಎಂದು ವರ್ಷದ ಹಿಂದಿನ ಅರ್ಧವಾಕ್ಯದಿಂದ ಉಪನ್ಯಾಸವನ್ನು ಪ್ರಾರಂಭಿಸಿದರಂತೆ. ವಿನೋದಬುದ್ಧಿಗನುಸರಿಸಿ ವಿಕ್ಷಿಪ್ತ ಬುದ್ಧಿಯೂ ಇವರಲ್ಲಿದೆ. ಇವರು ಮದ್ಯವನ್ನು ಸೇವಿಸುವುದಿಲ್ಲ. ಆದರೆ ಯುರೋಪಕ್ಕೆ ಹೋದಾಗ ಸಂಕೋಚವಿಲ್ಲದೆ ಮದ್ಯವನ್ನು ಸೇವಿಸುವರಂತೆ! ಇಂಗ್ಲಂಡ ಮತ್ತು ಆಯರ್ಲಂಡ ಎರಡೇ ದೇಶಗಳಲ್ಲಿ ಮದ್ಯಪಾನವನ್ನು ಮಾಡಲಿಕ್ಕಿಲ್ಲವೆಂದು ಇವರ ಮನಸಿನ ಪ್ರತಿಜ್ಞೆ ಇರಬಹುದೆ?

ಇವರ ಒಂದೇಒಂದು ಪ್ರತಿಜ್ಞೆ ಇನ್ನೂ ಈಡೇರದೆ ಉಳಿದಿದೆ. ಆಯರ್ಲಂಡವು ಸ್ವತಂತ್ರವಾಗಿದೆ, ಸಂಯುಕ್ತವಾಗಿಲ್ಲ. ಮೊನ್ನಿನ ಕಾಂಗ್ರೆಸದ ಅಧ್ಯಕ್ಷರಾದ ಶೂರ ಸುಭಾಷರು ಹೇಳಿದಂತೆ ಭೇದನೀತಿಯು ಬ್ರಿಟಿಶರ ಆಳಿಕೆಯ ವೈಶಿಷ್ಟ್ಯವಾಗಿದೆ. ಸದ್ಯಕ್ಕೆ ಅಲ್‌ಸ್ಟರ ಎಂಬುದೊಂದು ಪ್ರಾಂತವನ್ನು ಬ್ರಿಟಿಶರು ಬೇರೆ ಮಾಡಿಟ್ಟಿದ್ದಾರೆ. ಇದು ತನ್ನ ದೇಶದ ಭಾಗ, ಆದುದರಿಂದ ತನ್ನ ದೇಶದ ಪಾರ್ಲಮೆಂಟಿನ ಅಧೀನತೆಗೆ ಒಳಗಾಗಬೇಕೆಂದು ಡಿ ವ್ಹಲೇರಾ ಇವರ ಹಟ, ಹಾಗೆ ಮಾಡಿಯೆ ತೀರುವೆನೆಂದು ಪ್ರತಿಜ್ಞೆ. ಇವರ ಯಾವ ಪ್ರತಿಜ್ಞೆಯೂ ಸಾಧಿಸದೆ ಉಳಿದಿಲ್ಲ. ಮನಸಿನಲ್ಲಿ ಹಿಡಿದುದಕ್ಕಾಗಿ ಇವರು ಏಕಾಗ್ರರಾಗಿ ದುಡಿಯುವರು. ಇವರ ಹೌಸು (Hobby) ಗಳಾದರೂ ಏಕಾಗ್ರತೆಯ ಸಾಧನಗಳೆ ಆಗಿವೆ. ಇವರು ಆಡುವ ಆಟ ಚದುರಂಗ; ಇವರ ಪ್ರೀತಿಯ ವಿಷಯ, ಗಣಿತಶಾಸ್ತ್ರ; ಇವರ ಮನರಂಜನೆ, ರೇಡಿಯೋದಿಂದ. ಇವು ಮೂರಕ್ಕೂ ಸಹಿಷ್ಣುತೆ ಬೇಕು, ಏಕಾಗ್ರತೆ ಬೇಕು. ಡಿ ವ್ಹಲೇರಾ ಇವರಲ್ಲಿ ಈ ಗುಣಗಳು ಮೈಗೂಡಿಕೊಂಡಿವೆ. ಆದರಂತೆಯೆ ಪ್ರತಿಜ್ಞೆಯನ್ನು ಸಾಧಿಸಿಕೊಳ್ಳುವ ಇವರ ಕೌಶಲ್ಯವೂ ಅಗಾಧವಾಗಿದೆ. ಈ ಅವತಾರ ಪುರುಷನಿಗೆ ಯಾವುದು ಅಸಾಧ್ಯ?

> ಕೂಲಿಕಾರರು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನೂ ಭಾರತೀಯ ಬಂಡವಲಶಾಹಿಯನ್ನೂ ವಿರೋಧಿಸಬೇಕಾಗಿದೆ. ಸ್ವರಾಜ್ಯ ದೊರೆತ ಮೇಲೆ ಭಾರತೀಯ ರಾಷ್ಟ್ರೀಯ ಚಳವಳಿಯು ಮುಗಿಯುವುದು; ಆದರೆ ಕೂಲಿಕಾರರ ಆಂದೋಲನವು ಮಾತ್ರ ಅಂದಿಗೇ ಮುಗಿಯಲಿಕ್ಕಿಲ್ಲ.

ಕರ್ನಾಟಕದ ಕೂಲಿ

ಶ್ರೀ. ದಿನಕರ ದೇಸಾಯಿ, ಎಂ. ಎ., ಎಲ್ ಎಲ್. ಬಿ. ಮುಂಬೈ

ಸರ್ವಸಾಧಾರಣವಾಗಿ ಹೇಳುವುದಾದರೆ ಮುಂಬಯಿ ಕರ್ನಾಟಕವು ಫಲವತ್ತಾದ ಭೂಮಿ. ಧಾರವಾಡ ಬೆಳಗಾವಿ ಜಿಲ್ಲೆಗಳಷ್ಟು ಫಲವತ್ತಾದ ಭೂಪ್ರದೇಶವು ಗುಜರಾತದಲ್ಲಿಯ ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ಮುಂಬಯಿ ಇಲಾಖೆಯಲ್ಲಿ ವಿರಳ. ಆದರೆ ಇವೆರಡು ಜಿಲ್ಲೆಗಳ ಕೂಲಿಕಾರರ ಸ್ಥಿತಿಯು ಮಾತ್ರ ಅತ್ಯಂತ ಕರುಣಾಜನಕವಾಗಿದೆ. ಇದೇ ಮಾತು ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳ ಕೂಲಿಕಾರರಿಗೂ ಅನ್ವಯಿಸುವುದು.

ಉದಾಹರಣೆಗಾಗಿ ಹತ್ತಿಯ ಗಿರಣಿಗಳಲ್ಲಿಯ ಕೂಲಿಕಾರರ ಸಂಬಳವನ್ನು ಕುರಿತು ವಿಚಾರಿಸೋಣ. ಹೋದ ವರುಷ ಮುಂಬಯಿ ಸರಕಾರದವರು "ಸಂಬಳದ ಖಾನೇಸುಮಾರಿ" (Wage Census) ಯೊಂದನ್ನು ಪ್ರಕಟಿಸಿದ್ದಾರೆ. ಈ ಪ್ರಕಟನೆಯ ಪ್ರಕಾರ ಮುಂಬಯಿ ಇಲಾಖೆಯಲ್ಲಿಯ ಬೇರೆ ಬೇರೆ ಭಾಗಗಳ ಹತ್ತಿಯ ಗಿರಣಿಗಳಲ್ಲಿ ದುಡಿಯುವ ಕೂಲಿಕಾರರ ಒಂದು ದಿವಸದ ಸರಾಸರಿ (Average) ಕೂಲಿಯು ಈ ಕೆಳಗಿನ ಕೋಷ್ಟಕದಂತಿದೆ—

ಒಂದು ದಿನದ ಸರಾಸರಿ ಕೂಲಿ

ಭಾಗ	ಗಂಡಸರು			ಹೆಂಗಸರು		ಹುಡುಗರು	
	ರೂ.	ಆ.	ಪೈ.	ಆ.	ಪೈ.	ಆ.	ಪೈ.
ಮುಂಬಯಿ ಪಟ್ಟಣ	೧	೩	೭	೧೦	೮	೭	೫
ಕೊಂಕಣ	೧	೧	೬	೯	೧೧	೫	೧೧
ಅಮದಾಬಾದ ಪಟ್ಟಣ	೧	೬	೧೦	೧೨	೩	೬	೧
ಅಹಮದಾಬಾದ, ಖೈರಾ, ಪಂಚಮಹಾಲ ಜಿಲ್ಲೆಗಳು	೧	೧	೩	೯	೬	೩	೧೧
ಬಡೋಚ ಮತ್ತು ಸುರತ	೦	೧೫	೯	೮	೬	೪	೧೦
ಖಾನದೇಶ ಜಿಲ್ಲೆಗಳು	೦	೧೩	೬	೭	೩	೩	೨
ಪೂನಾ, ನಾಶಿಕ, ಅಹಮ್ಮದನಗರ	೧	೦	೧೦	೭	೭	—	
ಸೊಲ್ಲಾಪುರ ಪಟ್ಟಣ	೦	೧೩	೬	೬	೧	೪	೩
ಸೊಲ್ಲಾಪುರ-ಸಾತಾರಾ ಜಿಲ್ಲೆಗಳು	೦	೮	೧೨	೪	೪	೩	೦
ಕರ್ನಾಟಕ	೦	೯	೪	೭	೧	೨	೦
ಇಡಿಯ ಇಲಾಖೆ	೧	೩	೪	೧೦	೧	೩	೯

ಮೇಲಿನ ಅಂಕೆಗಳ ಪ್ರಕಾರ ಸಾತಾರಾ ಸೊಲ್ಲಾಪುರ ಜಿಲ್ಲೆಗಳನ್ನು ಬಿಟ್ಟರೆ, ಕರ್ನಾಟಕದ ಕೂಲಿಕಾರ ಗಂಡಸರ ಕೂಲಿಯು ಎಲ್ಲಕ್ಕೂ ಕಡಿಮೆ ಎಂದರೆ ೯ ಆಣೆ ೪ ಪೈಯಿದೆ. ಸೊಲ್ಲಾಪುರ-ಸಾತಾರಾ ಜಿಲ್ಲೆಗಳ ಸ್ವಲ್ಪ ಭಾಗವು ಕರ್ನಾಟಕವೆಂದು ಹೇಳಬಹುದಾದರೆ, ಇಡಿಯ ಕರ್ನಾಟಕ ಭಾಗದಲ್ಲಿ ದೊರಕುವ ಕೂಲಿಯು ಎಲ್ಲಕ್ಕೂ ಕಡಿಮೆಯೆಂದು ಹೇಳಬಹುದು. ಹೆಂಗಸರ ಕೂಲಿಯು ಕರ್ನಾಟಕದಲ್ಲಿ ೭ ಆಣೆ ೧ ಪೈಯಿದ್ದರೆ, ಸೊಲ್ಲಾಪುರ ನಗರದಲ್ಲಿ ಅದು ೬ ಆಣೆ ೧ ಪೈ ಮತ್ತು ಸೊಲ್ಲಾಪುರ-ಸಾತಾರೆ ಜಿಲ್ಲೆಗಳಲ್ಲಿ ಅದು ೪ ಆಣೆ ೪ ಪೈ ಇದೆ. ಮಿಕ್ಕುಳಿದ ೭ ಪ್ರದೇಶಗಳಲ್ಲಿ ಅದು ಕರ್ನಾಟಕದ ಕೂಲಿಗಿಂತ ಹೆಚ್ಚು ಅದೆ. ಸೊಲ್ಲಾಪುರ-ಸಾತಾರಾ ಜಿಲ್ಲೆಗಳ ಕೂಲಿಕಾರರಲ್ಲಿ ಅನೇಕರು ಕನ್ನಡಿಗರಿದ್ದಾರೆಂಬುದನ್ನು ನಾವು ಮರೆಯಲಾಗದು. ಹುಡುಗರ ಕೋಷ್ಟಕವನ್ನು ನೋಡಿದರಂತೂ ಕರ್ನಾಟಕದ ಸ್ಥಿತಿಯು ಇನ್ನೂ ಹೆಚ್ಚು ನಿರಾಶಾಜನಕವಾಗಿದೆ. ಕನ್ನಡ ಹುಡುಗರಿಗೆ ದೊರಕುವ ಕೂಲಿಯು ಬರೀ ಎರಡು ಆಣೆ. ಬೇರೆ ಪ್ರದೇಶಗಳಲ್ಲಿ ಅದು ಮೂರು ಆಣೆಗಿಂತ ಕಡಿಮೆಯಿಲ್ಲ.

ಮುಂಬಯಿ ಅಥವಾ ಅಮದಾಬಾದ ಪಟ್ಟಣಗಳಲ್ಲಿ ದೊರಕುವಷ್ಟು ಕೂಲಿಯು ಕರ್ನಾಟಕದಲ್ಲಿ ದೊರೆಯಬೇಕೆಂದು ನನ್ನ ಅಭಿಪ್ರಾಯವಲ್ಲ. ಏಕೆಂದರೆ ದೊಡ್ಡ ಪಟ್ಟಣಗಳಲ್ಲಿ ಜೀವನದ ವೆಚ್ಚವು (cost of living) ಹೆಚ್ಚಾಗಿರುವುದರಿಂದ, ಕೂಲಿಯೂ ಹೆಚ್ಚು ದೊರಕುವುದು ಸ್ವಾಭಾವಿಕವೂ ಯೋಗ್ಯವೂ ಆಗಿದೆ. ಆದರೆ ಗುಜರಾತ ಮತ್ತು ಮಹಾರಾಷ್ಟ್ರ ಪ್ರಾಂತಗಳ ಜಿಲ್ಲೆಗಳಲ್ಲಿ ದೊರಕುವಷ್ಟು ಕೂಲಿಯು ಕರ್ನಾಟಕದಲ್ಲಿ ದೊರಕಬೇಕೆಂದು ಹಟ ಹಿಡಿಯುವುದು ಸಮಂಜಸವಾಗಿದೆ. ಅದರಲ್ಲಿಯೂ ಧಾರವಾಡ ಬೆಳಗಾಂವಿ ಜಿಲ್ಲೆಗಳಲ್ಲಿಯ (ಈ ಜಿಲ್ಲೆಗಳಲ್ಲಿ ಮಾತ್ರ ಹತ್ತಿಯ ಗಿರಣಿಗಳಿವೆ) ಕೂಲಿಯು ಬಡೋಚ ಮತ್ತು ಸುರತ ಪ್ರದೇಶಗಳಲ್ಲಿ ದೊರಕುವ ಕೂಲಿಯಷ್ಟು ಇರಲೇಬೇಕು. ಏಕೆಂದರೆ ಇವೆರಡು ಪ್ರದೇಶಗಳು ಸಾಧಾರಣ ಮಟ್ಟಿಗೆ ಅಷ್ಟೇ ಫಲವತ್ತಾದ ಭೂಭಾಗಗಳೆಂದು ಹೇಳಬಹುದು. ಬಡೋಚ ಸುರತ ಜಿಲ್ಲೆಗಳ ಪ್ರಮಾಣದಂತೆ ಕರ್ನಾಟಕದಲ್ಲಿಯ ಗಿರಣಿಯ ಕೂಲಿಕಾರ ಗಂಡಸರಿಗೆ ೧೫ ಆಣೆ ೯ ಪೈ, ಹೆಂಗಸರಿಗೆ ೮ ಆಣೆ ೬ ಪೈ ಮತ್ತು ಮಕ್ಕಳಿಗೆ

೪ ಆಣೆ ೧೧ ಪೈ ಕೂಲಿಯು ದೊರಕಬೇಕಾದದ್ದು ಯೋಗ್ಯವು. ಮೇಲಿನ ಅಂಕೆಗಳು ಬರೀ ಸರಾಸರಿ (Average) ಕೂಲಿಯನ್ನು ಮಾತ್ರ ತೋರಿಸುತ್ತವೆ. ಇದರ ಅರ್ಥ ಅನೇಕರಿಗೆ ಇದಕ್ಕಿಂತ ಕಡಿಮೆ ಕೂಲಿಯು ದೊರಕುತ್ತದೆ. ಇದನ್ನು ಲಕ್ಷ್ಯದಲ್ಲಿ ಇಡಬೇಕು. ಇದು ಕರ್ನಾಟಕದ ಗಿರಣಿಯ ಕೂಲಿಕಾರರ ಹಣೆಬರಹ. ಇನ್ನು ಬೇಸಾಯದಲ್ಲಿ ದುಡಿಯುವ ಕೂಲಿಕಾರರ ಬಗ್ಗೆ ವಿಚಾರಿಸುವಾ.

ಬೇಸಾಯದಲ್ಲಿ ದುಡಿಯುವ ಕೂಲಿಕಾರರ (Agricultural Labourers) ಸಂಖ್ಯೆಯು ಕರ್ನಾಟಕದಲ್ಲಿ ಐದು ಲಕ್ಷಕ್ಕೆ ಏರಿದೆ. ಅಂತರಪ್ರಾಂತೀಯ ತುಲನಾತ್ಮಕ ದೃಷ್ಟಿಯಿಂದ ನೋಡಿದರೆ, ಬೇಸಾಯದ ಕೂಲಿಕಾರರಿಗೆ ಅತ್ಯಂತ ಕಡಿಮೆ ಕೂಲಿ ದೊರಕುವುದು ಕರ್ನಾಟಕದ ಪರಂಪರೆಯೆಂದು ಹೇಳಬಹುದು. ಇದು ಕೆಳಗಿನ ಅಂಕೆಗಳಿಂದ ಒಡೆದು ಕಾಣುವಂತಿದೆ.—

ಬೇಸಾಯ ಕೂಲಿಕಾರರ ದಿನದ ಸರಾಸರಿ ಕೂಲಿ

ವರ್ಷ	ಗುಜರಾತ		ಮಹಾರಾಷ್ಟ್ರ		ಕೊಂಕಣ		ಕರ್ನಾಟಕ	
	ಆ.	ಪೈ.	ಆ.	ಪೈ	ಆ.	ಪೈ	ಆ.	ಪೈ
೧೮೯೨	೨	೬	೩	೧	೩	೮	೨	೬
೧೮೯೭	೨	೮	೨	೯	೩	೬	೨	೫
೧೯೦೬	೨	೯	೭	೯	೩	೪	೨	೭
೧೯೧೦	೩	೧೦	೩	೮	೩	೧೧	೩	೭
೧೯೧೪	೪	೭	೪	೫	೪	೮	೪	೬
೧೯೨೧	೮	೧೦	೬	೭	೭	೧೦	೬	೫
೧೯೩೨	೬	೩	೫	೭	೬	೬	೪	೪
೧೯೩೬	೫	೫	೪	೬	೫	೧೧	೪	೫

ಕಳೆದ ಅರ್ಧಶತಮಾನದ ಅವಧಿಯಲ್ಲಿ ಕರ್ನಾಟಕದ ಕೂಲಿಕಾರರಿಗೆ ಬೇರೆ ಪ್ರಾಂತಗಳ ಕೂಲಿಕಾರರಿಗಿಂತ ಕಡಿಮೆ ಕೂಲಿಯು ದೊರಕುತ್ತಾ ಬಂದಿದೆ. ಕರ್ನಾಟಕದ ಕೂಲಿಕಾರರ ಸ್ಥಿತಿಯು ಸುಧಾರಿಸಬೇಕಾದರೆ ಕೂಲಿಕಾರರ ಚಳವಳಿಯು ಕರ್ನಾಟಕದಲ್ಲಿ ಅವ್ಯಾಹತವಾಗಿ ಸಾಗಬೇಕು. ಕೂಲಿಕಾರರ ಆಂದೋಲನ ನಡೆಸುವುದು ಸುಲಭವಲ್ಲ. ಕೂಲಿಕಾರರ ಚಳವಳಿಯು ರಾಜಕೀಯ ಚಳವಳಿಗಿಂತ ಬಿಗಿಯಾಗಿದೆ. ರಾಜಕೀಯ ಆಂದೋಲನಕ್ಕೆ ವ್ಯಾಪಾರಸ್ಥರು, ಬಂಡವಲದಾರರು, ಶ್ರೀಮಂತರು, ಸಾಹುಕಾರರು, ಜಾಗೀರದಾರರು, ಜಮಾನುದಾರರು ಸಹಾಯ ಮಾಡಬಹುದು. ಆದರೆ ಕೂಲಿಕಾರರ ಆಂದೋಲನವನ್ನು ಇವರು ಉಗ್ರವಾಗಿ ವಿರೋಧಿಸುವರು. ಏಕೆಂದರೆ ಕೂಲಿಕಾರರು ಬ್ರಿಟಿಶ್ ಸಾಮ್ರಾಜ್ಯಶಾಹಿಯನ್ನೂ ಅದರೊಂದಿಗೆ ಭಾರತೀಯ ಬಂಡವಲಶಾಹಿಯನ್ನೂ ವಿರೋಧಿಸಬೇಕಾಗಿದೆ. ನಮಗೆ ಸ್ವರಾಜ್ಯ ದೊರೆತ ಮೇಲೆ ಭಾರತೀಯ ರಾಷ್ಟ್ರೀಯ ಚಳುವಳಿಯು ಮುಗಿಯುವುದು. ಆದರೆ ಕೂಲಿಕಾರರ ಆಂದೋಲನವು ಮಾತ್ರ ಅಂದಿಗೆ ಮುಗಿಯಲಿಕ್ಕಿಲ್ಲ. ರಾಜಕೀಯ ಸ್ವಾತಂತ್ರ್ಯವನ್ನು ಅನುಭೋಗಿಸುವ ದೇಶಗಳಲ್ಲಿ ಸಹ ಕೂಲಿಕಾರರ ಚಳವಳಿಯು ಭರದಿಂದ ಸಾಗಿದೆ. ಇದನ್ನು ನಾವು ಮರೆಯಲಾಗದು.

ಕೂಲಿಕಾರರು ಕರ್ನಾಟಕದ ಬಹುಜನ ಸಮಾಜವು. ಆದುದರಿಂದ ಕೂಲಿಕಾರರ ಹಿತವೇ ಕರ್ನಾಟಕದ ನಿಜವಾದ ಹಿತ. ಕರ್ನಾಟಕವನ್ನು ಪ್ರೀತಿಸುವವನು ಕರ್ನಾಟಕದ ಕೂಲಿಕಾರರ ಸೇವೆಯನ್ನು ಮಾಡಲು ಪ್ರಯತ್ನಿಸುವನು. ಎಂದಿನ ವರೆಗೆ ಕರ್ನಾಟಕದಲ್ಲಿ ಕೂಲಿಕಾರರ ಆಂದೋಲನವು ಜೀವಂತವಿಲ್ಲವೋ ಅಂದಿನ ವರೆಗೆ ನಿಜವಾದ ಕರ್ನಾಟಕವು ಮೃತವಾಗಿದೆ.

ದಿವಂಗತ ವಿಜಯ ಬೆಟಗೇರಿ ಬಿ. ಎ. ಅವರ ಕತೆಗಳ ಸಂಗ್ರಹ

‘ ಮುಗಿಲ ಮಲ್ಲಿಗೆ ’

ತಾರುಣ್ಯದ ರಮ್ಯಜೀವನದ ಕನಸಿನ ರಂಜಕ ಚಿತ್ರಗಳೇ ಇದರಲ್ಲಿ ಅಚ್ಚಾಗುತ್ತಲಿದೆ. ಬೇಕಾದವರು ‘ ಜಯಂತಿ ’ ಕಾರ್ಯಾಲಯಕ್ಕೆ ಬರೆಯಿರಿ !

ಗೆಳೆಯರ ಸುಳಿದಾಟ
ಹೆಂಡಂದಿರಿಗೆ ಪ್ರಾಣಸಂಕಟ

ಗಂಡನಿಗೆ ಹೆಂಡತಿಯಾಗಿ ಬದುಕಿರುವ ಹೆಂಗುಸರಲ್ಲಿಯೂ
ವಿಚಾರಕ್ರಾಂತಿಯ ಗಾಳಿ ಹೇಗೆ ಬೀಸುವುದು ?
ದಾಂಪತ್ಯಪ್ರೇಮದ ಮಧುರಜೀವನವೂ ಏಕೆ ಕಹಿಯಾಗುವುದು ?
ನಲಿನಿಯನ್ನು ಕೇಳಿ ನೋಡಿ !

ಶ್ರೀಮತಿ ಸೌ. ವಿಮಲಾಬಾಯಿ ದೇಶಪಾಂಡೆ, ಬಿ. ಎ.

(ಚಿತ್ರಾವಲಿ)

ಅರವಿಂದ

ಮೊದಲನೆಯ ಸುರುಳಿ

೧

ಆಧುನಿಕ ರೀತಿಯಿಂದ ಅಲಂಕೃತವಾದ ದಿವಾಣಖಾನೆ; ಒಂದು ಮೂಲೆಗೆ 'ರೇಡಿಯೊ' ಇದೆ. ಅದಕ್ಕೆ ಎದುರಿನ ಮೂಲೆಯಲ್ಲಿ ಗ್ರಾಮೊಫೋನೊಂದು ಕಾಣುತ್ತಲಿದೆ. ಗೋಡೆಗಳ ಮೇಲ್‌ಬದಿಯನ್ನು, ತೂಗು ಹಾಕಿದ ಚಿತ್ರಪಟಗಳು ಮುಚ್ಚಿಬಿಟ್ಟಿವೆ. ನೆಲವೆಲ್ಲ ರತ್ನಗಂಬಳಿಯ ಹಾಸಿನ ಕೆಳಕ್ಕೆ ಅಡಗಿದ್ದು, ಎಲ್ಲೆಲ್ಲಿಯೂ ಬೆಲೆಬಾಳುವ 'ಫರ್ನಿಚರ್'ಗಳಿವೆ. ನಟ್ಟನಡುವೆ ಇದ್ದ ದುಂಡುಮೇಜಿನ ಮೇಲೆ ಪುಷ್ಪಪಾತ್ರೆಯೊಂದು; ಅದರೊಳಗೆ ಅಂದವಾಗಿ ತಲೆಯೆತ್ತಿ ನಿಂತಿದ್ದ ಹೂಗೊಂಚಲು ತನ್ನ ಪರಿಮಳವನ್ನು ಕಿರಿಕಿರಿಯಾಗಿ ದಿವಾಣಖಾನೆಯ ವಾತಾವರಣದಲ್ಲಿ ತುಂಬುತ್ತಲಿದೆ. ಎಲ್ಲಿ ನೋಡಿದಲ್ಲಿ ಪರದೆಗಳು ಜೋತು ಬಿದ್ದಿವೆ. ಎಲೆಕ್ಟ್ರಿಕ್ ಫ್ಯಾನೊಂದು ಗಿರುಗುಡುತ್ತ ತಿರುಗುತ್ತಿದೆ. ಈ ಹೊಸ ಕಾಲದ ಸಿರಿವಂತಿಕೆಯ ಅಧಿದೇವತೆಯೇನೊ ಎಂಬಂತಿದ್ದ ನಲಿನಿಯು ಜಾರ್ಜೆಟ್ಟನ್ನು ಉಟ್ಟು ತೊಟ್ಟುಕೊಂಡು, ಮುಂಡೆ ಗಾಲನ್ನೂರಿ, ಬಲಕ್ಕೊರಗಿದ ದೇಹ ಎಡಕ್ಕೊರಗಿದ ಮುಖಗಳಿಂದ ಕುಳಿತಿರುವಳು; ತನ್ನ ನಿಡಿದಾದ ಮೊಲುಬೆರಳುಗಳನ್ನು ಹಾರ್ಮೋನಿಯಮ್ಮಿನ ಮೇಲೆ ಕುಣಿದಾಡಿಸುತ್ತಲಿರುವಳು. ಹಠಾತ್ತಾಗಿ ಅಲ್ಲಿ ಪ್ರಭಾಕರನು ಪ್ರವೇಶಿಸುವನು.

"Hallo, darling ನಲಿನೀ, ಏನ ನಡದದ! . . ಬಗೂನs ಚಹಾ ಕೊಡತೀ ಏನು ? ನೋಡು; ನಾನು . . ಇಗಿಂದೀಗ ಹೋಗಬೇಕು ಎಂಗೇಜಮೆಂಟೊಂದದ."

ಸಲುಗೆಯ ದನಿಯಲ್ಲಿ ನಲಿನಿ ನುಡಿದಳು.

" ಇದೇನ ಮಾತು ಪ್ರಭಾಕರಾ ಇದು ? ಮುಂಜಾನೆ ಎದ್ದಕೂಡಲೆ ಹೊರಗ ಹ್ವಾದಾಂವಾ ಇದೀಗ ಮನಿಗೆ ಬಂದಿ ! ಮತ್ತ ಈಗಿಂದೀಗs ಹೊರಗ ಹೋಗೂ ಅವಸರ ಏನದ ? "

"I am sorry. ಆದರ ಈಗಿಂದೀಗs ಡ್ರೆಸ್ ಮಾಡಿಕೊಂಡು ಬರತೀನಂತ ಒಬ್ಬ ಫ್ರೇಂಡ್‌ಗ ಮಾತಕೊಟ್ಟು ಬಂದೀನಿ; ಅಂವ ಅಲ್ಲೆ ನನ್ನ ಹಾದೀ ನೋಡತಿದ್ದಾನು ! "

ಹುಸಿಮುನಿಸಿನಿಂದ ನಲಿನಿ ನಿಡಿ-ನುಡಿದಳು.

" ಚಲೋ ಆತು! ಚಹಾದ ದಸಿಂದ ನಿನ್ನ ಹಾದೀ ನಾನು ನೋಡಲಿಕ್ಕೆ ಹತ್ತಿ ತಾಸಿಂತಾಸಾತು. ನಿನಗೇನು ? ಗೆಳ್ಯಾನ ಹತ್ತರ ಹೋಗೂದs ದೊಡ್ಡದಾಗಿ ಕಾಣಿಸ್ತದಲ್ಲ ? "

" ಛೇ ! ಛೇ ! ? ಮೊಲಾ ಎದ್ದಾಗ ನಾಯಿ ಎಲ್ಯೊ ಹೋತಂತ ಹಾಂಗ-ವ್ಯಾಳ್ಯಾ ಇಲ್ಲಾ ಹೊತ್ತಿಲ್ಲಾ-ನಿನಗಂತೂ ಬೇಕಾದಾಗ ಬೇಕಾದದ್ದು ನಸನಾಗ ತಿರತsದ! ನೀವು Indian ಹೆಂಗಸರು ಎಲ್ಲರೂ ಹೀಂಗs ! ನಿಮಗ ವ್ಯಾಳ್ಯಾದ ಮಹತ್ವನs ಗೊತ್ತಿರೂದಿಲ್ಲ. ಏನು ? ಐದ ಮಿನೀಟಿನ್ಯಾಗ ಚಹಾ ಸಿಗೂಹಾಂಗ ಆದನೋ,ಏನ ಹಾಂಗs ಹೊಂಟಬಿಡಲ್ಯೊ?"

ಔದಾಸೀನ್ಯದ ಇಳಿದನಿಯಲ್ಲಿ ನಲಿನಿ ಉಸಿರಿದಳು.

"ಅಷ್ಟೇನೂ ಸಿಟ್ಟಿಗೇಳೂ ಕಾರಣಿಲ್ಲ. ತರಸ್ತೀನಿ ಚಹಾ ! ನಿಮ್ಮಂಥವರ ಮುಂದೆ ಮಾಡೂದೇನು! "

ಮಾತಿನ ಕೊನೆಗೆ ನಲಿನಿ ನಿಡುಸುಯಿಲೊಂದನ್ನು ಬಿಡುವಳು.

"That's good ! ಸರಿಯಾದ ಮಾತು ! ಸರಿಯಾದ ಮಾತು ! ನೋಡು ನಲೂ ! ಈಗ ಹ್ಯಾಂಗ ಮಾತಾಡಿದಿ ? "

೨

ಚಿಂತಾಭಾವದವಳಾಗಿ ನಲಿನಿ ಸುಮ್ಮನೆ ಕುಳಿತಿದ್ದಾಳೆ. ನಲಿನಿಯ ಗೆಳತಿ ಸುಧೆಯು ಅಲ್ಲಿ ಬಂದು, ಬೆರಗಿನ ದನಿಯಲ್ಲಿ ಒಮ್ಮೆಲೆ ಕೇಳುತ್ತಾಳೆ;

" ಅಯ್ಯ?! ಇದೇನು ನಲೂ! ಹೀಂಗ್ಯಾಕ ಮಾರೀ ಬಾಡಿಸಿಕೊಂಡು ಕೂತೀದಿ? ನಿನಗೇನು ಚಿಂತಿ? ಹೊಸದಾಗಿ ಮದುವಿಯಾದಾಕಿ; ಒಳ್ಳೆ ಇಂಗ್ಲಂಡ್ ರಿಟರ್ನ್ಡ ಜೋಡು ಸಿಕ್ಕ್ಯಾನ; ಹೀಂಗಿರುವಾಗ ಯಾವಾಗಲೂ ನಗನಗತ ಇರೂದು ಬಿಟ್ಟು ಇದೇನುತಾಯಿ ಅಳಮಾರಿ? ಅದೇನೋ ಹೇಳತಾರಲ್ಲಾ ದೈವಿದ್ದೂ ದತ್ತಗೇಡಿತನಾನೋ ಏನೋ!"

ಸುಧೆಯ ಮಾತಿಗೆ ನಲಿನಿಯಿಂದ ಉತ್ತರ ದೊರೆಯದಿರಲು ಆಕೆ ತೀರ ಹತ್ತಿರ ಹೋಗುವಳು. ಸಲುಗೆಯಿಂದ ಹೆಗಲಮೇಲೆ ಕೈಯನ್ನಿರಿಸಿ ಕೇಳುವಳು.

" ಇದೇನು! ಇದೇನು ಹುಚ್ಚಾಟಾ ನಡಿಸೀದಿ ಮತ್ತ! ಆದದ್ದಾದರೂ ಏನು? ಬಿಡು ಹುಚ್ಚೀ! ಸರೀ ಒರಸಿಗೋ ಕಣ್ಣೀರು! ಏನಾತು? ನನಗ ಹೇಳೂವಂಥಾದು ಅಲ್ಲೇನದು ಮತ್ತ?"

" ಸುಧಾ, ನೋಡು.. ಏನಬೇಕಾದ್ದಾದ್ರೂ ಹೆಣ್ಣಾಗಿ ಹುಟ್ಟಬಾರದು ನೋಡು! ಹೆಣ್ಣಿನ ಜನ್ಮಕ್ಕ ಎಲ್ಲಿಯ ಗಂಡ?– ಯಾವ ಹತ್ತೀಕಾಯಿ? ನಾ ಖರೋಖರ ಹೇಳ್ತೀನ ನೋಡು ಸುಧಾ.. ನೀ ಬಂದು ಸಹಾನುಭೂತೀವು ಒಂದೆರಡು ಮಾತಾಡಿದಿ; ಮನಸಿಗೆಷ್ಟೋ ಹಾಯ ಅನಿಸಿತು. ನೀನು ನನ್ನ ಖರೇ ಗೆಳತಿ ನೋಡು ಸುಧಾ! "

" ಅಲ್ಲ? ನೀ ಅನ್ನೂದರೆ ಏನಂತಿ? ನನಗ ಒಂದೂ ಅರ್ಥಾಗವಲ್ಲದು ನಿನ್ನ ಮಾತಿಂದು. ಇಷ್ಟ ಮನಸಿಗೆ ಕೆಟ್ಟಅನಿಸಿಗೊಳ್ಳೂಹಾಂಗ ಆದದ್ದಾದರೂ ಏನು? ಪ್ರಭಾಕರಂದು ನಿನ್ನ ಮ್ಯಾಲ ಪ್ರೀತಿ ಇಲ್ಲಾಂತೇನೂ ಅನಿಸಿಲ್ಲ ಹೌದಲ್ಲೊ?..ಹಾಂಗೇನಾದರೂ ಇದ್ದರ ಹೇಳು ಮತ್ತ!"

" ಬೇಡಕ ತಾಯಿ– ನೀ ಅಂತಹ ಏನಾರೆ ಇಲ್ಲದ್ದು ಮಾತಾಡತೀ. ಪ್ರೀತಿಯಿಲ್ಲಾಂತ ಎಂದಾದರೂ ಅನಿಸೀತೇನು? ನಮ್ಮೊಳಗ ಇರೂ ಅಷ್ಟು ಪ್ರೀತಿ ಇನ್ನ ಯಾರಲ್ಲಿದ್ದೀತು? ನೀ ಹೀಂಗ ಏನಾರೇ ಮಾತಾಡಿ ನಮ್ಮ ಸಂಸಾರಕ್ಕ ಕಣ್ಣಹಚ್ಚಬ್ಯಾಡ. ನೋಡು ಸುಧಾ, ನನ್ನ ಚಿಂತೀ ಕಾರಣನ ಬ್ಯಾರೇ ಅದ. ನಿನಗದು ಗೊತ್ತಿಲ್ಲ."

" ಹೌದು ಗೊತ್ತಿಲ್ಲ! ಅದಕ್ಕಂತನ ನಾ ಈಗ ನಿನ್ನ ಕೇಳತಿರೂದು!"

" ಒಂದ ಮಾತು ಬಿಟ್ಟರ ನನ್ನಂಥಾ ಸುಖಿದ ಹೆಣ್ಣು ನಾನ! ಆದರ ಆ ಮಾತಿನ ಕಡೆ ದುರ್ಲಕ್ಷ ಮಾಡಬೇಕಂದರ ನನ್ನಿಂದ ಆಗವೊಲ್ಲದಾಗೇದ; ನಾನರೆ ಏನಮಾಡಲೆಪ್ಪಾ ಸುಧಾ!"

" ಅಲ್ಲನ ಇದೇನು ಅಡ್ಡಡ್ಡ ಮಾತಾಡಲಿಕ್ಕೆ ಹತ್ತೀದಿ? ಏನಿದ್ದದ್ದು ಸರಳ ಹೇಳಬಾರದು!"

" ಅದನ್ನ ಹೇಳ್ತೀನಿ ಕೇಳಿಲ್ಲೆ! ಪ್ರಭಾಕರನ ಗೆಳೆಯರ Circle ಇಷ್ಟೊಂದು ದೊಡ್ಡದು ಅದ–ಅದರಿಂದ ಹೊರ ಬಿದ್ದು ಒಂದುಘಳಿಗಿ ನನ್ನ ಜತೆಗೆ ಮಾತಾಡಲಿಕ್ಕೆ ಸುದಾ ಅವಗ ವ್ಯಾಳ್ಯಾ ಸಿಗೂದಿಲ್ಲ. ಆದರ ನನ್ನ ಹುಚ್ಚ ಖೋಡಿ ಮನಸು ಮಾತ್ರ 'ಈಗ ಬಂದಾನು ಇನ್ನೊಂದು ಸ್ವಲ್ಪತಡದು ಬಂದಾನು' ಅಂತ ಹಾದೀನ ನೋಡತಿಂತದ."



" ಸರಿಹೋತುಬಿಡು! ನಾ ಏನೋ ಅಂತ ಘಾಬರ್ಯಾಗಿಹೋಗಿದ್ದೆ. ಅಲ್ಲನಹುಡಿಗೀ, ಗೊತ್ತಿಲ್ಲೇನು ನಿನಗ? ಮನಿ ಮನಿಗೂ ಮಣ್ಣಿನ ಒಲಿಗಳೇ! ಎಲ್ಲಾರ ಮನೀ ದ್ವಾಸಿಗೂ ತೂತನ ನೋಡ ನಲೂ! ನಂದನರೆ ಸ್ಥಿತಿ ಏನಂತ ತಿಳದೀದಿ! ನಿಂದ ಬೇಕು ನಂದಬ್ಯಾಡ ಹೀಂಗಾಗೇದ. ಈಗ ಇದಕ್ಕ ಏನಾರೆ ಉಪಾಯಾ ಹುಡಿಕಿ ತಗೀ

" Hallo, darling ನಲಿನೀ, ಏನ ನಡದನದ?.. ಲಗೂನ ಚಹಾ ಕೊಡತೀನಿನು? ನೋಡು; ನಾನು.. ಇಗಿಂದೀಗ ಹೋಗಬೇಕು ಎಂಗೇಜಮೆಂಟೊಂದದ."

ಬೇಕೋ? ಏನು ವೆುಳಪಿ ಮುಳಪಿ ಅತಗೋತs ಮೂಲೀ ಒಳಗ ಕೂಡ ಬೇಕೋ?"

"ಸರಿ, ನಿನ್ನಂತೇ ಆಗಲಿ ಸುಧಾ! ಉಪಾಯ ಏನಾರೇ ಇದ್ದರೆ ಹೇಳತೀ ಯೇನಿದಕ?"

೩

ರಮಾಬಾಯಿ ತಮ್ಮ ನಡುಮನೆಯಲ್ಲಿ ಅಕ್ಕಿಯನ್ನಾರಿಸುತ್ತ ಕುಳಿತಿದ್ದಾರೆ. ಅಲ್ಲಿಯೆ ಒಂದೆಡೆಯಲ್ಲಿ ಅರ್ಧಮರ್ಧ ಹೊಲಿದ ಕುಪ್ಪಸವೂ ಹೊಲಿಗೆಯ ಬೇರೆ ಸಾಧನಗಳೂ ಬಿದ್ದಿವೆ. ರಮಾಬಾಯಿ ಕೂಗಿ ಹೇಳಿದರು!

"ಎಲs ಏ ಗುಂಡೀ! ಬಾಳ್ಯಾನ್ನ ಸ್ವಲ್ಪ ಹೊರಗ ಕರಕೊಂಡು ಹೋಗ ನಂತಾಯಿ..ಕೈಕಾಲರೆ ಬೀಳಲ್ಯಾ! ನಾ ಅಕ್ಕೀ ಆರಸ ಬೇಕಾಗೇದ. ಸಂಜೀ ಕೂಳಿಗೆ ಅಕ್ಕಿ ಬ್ಯಾಡs! ಹೋಗು ಧೋಡೆ ಸಂಜೀತನಕಾ ಬಕ್ಕಬಾರಲುಬಿದ್ದು!"

"ನಾ ಹೋಗೂದಿಲ್ಲಹೋಗು ಬಾಳ್ಯಾನ ಕರಕೊಂಡು! ಬಾಳ್ಯಾ ಬೋಳ್ಯಾ! ನಾ ಚಿವ್ವಾ ಮನಿಗೆ ಹೋಗ ಬೇಕಾಗೇದ ಆಡಲಿಕ್ಕೆ!"

ಒಮ್ಮೆಲೆ ಮಾಧವರಾಯರು ಒಳಕ್ಕೆ ಬಂದು, ತಮ್ಮ ಅಧಿಕಾರವಾಣಿಯಲ್ಲಿ ಹೆಂಡತಿಗೆ ಆರ್ಡರ್‌ಮಾಡಿದರು.

"ಹುಂ! ಬಿಡದನ್ನ. ಏಳು ಮದಲ.. ಒಂದು ಐದಾರು ಕಪ್ಪು ಕಾಫೀ, ಏನಾರೆ ಫರಾಳಾ ಮಾಡು! ಹುಂ ಎದ್ದs ಬಿಡು ಒಮ್ಮಿಗಿಲೆ"

ಬೇಸತ್ತ ದನಿಯಲ್ಲಿ ರಮಾಬಾಯಿ ನುಡಿದರು.

"ಸಾಕುಸಾಕಾಗಿ ಹೋತು ನನ್ನಾಯಿ! ಇಕೋ ಈಗ ಚಹಾ ಮಾಡಿಕೊಟ್ಟು, ಇಲ್ಲೆ ಅಕ್ಕೀ ಆರಸಲಿಕ್ಕೆ ಕೂತುಕೊಂಡೀನಿ. ಈಗ ಮತ್ಯಾರು ಬಂದು ನಿಂತರು ಥುತ್ ಅಂತ?"

"ಸಾಕು ಸಾಕು! ಈಗ ಮಾತೇನೂ ಬೇಕಾಗಿಲ್ಲ; ಬೇಕಾದದ್ದು ಕಾಫೀ ಫರಾಳಾ ತಿಳೀತಿಲ್ಲೋ?"

ರಮಾಬಾಯಿ ಸಿಡಿಗುಟ್ಟುತ್ತ ಕಾಫಿಯ ಸಿದ್ಧತೆಯ ಕೆಲಸಕ್ಕೆದ್ದರು. ಆಗಲೆ ಸೀತಾಬಾಯಿ ಒಳಕ್ಕೆ ಬಂದು ಮಾತಿಗೆ ಮೊದಲು ಮಾಡಿದರು.

"ಯಾಕ್ರೀ ರಮಾಬಾಯರs! ಯಾಕೋ ಸಿಟ್ಟಿನೊಳಗ ಇದ್ದಾಂಗ ಕಾಣಸ್ತsದ.. ಗುಡೀಗೇನು ಬರವರಿದ್ದೀರೋ ಇಲ್ಲೋ? ನನಗೇನೋ ಮನೀಗೆ ಲಗೂನೇ ಹೋಗ ಬೇಕಾಗೇದ. ಇಂದ ರಾತ್ರೀ ಯಾರೋ ನಾಕೈದು ಮಂದಿ ಊಟಕ್ಕ ಬರವರಿದ್ದಾರಂತ."

"ಗುಡೀಗೆ ಬರೂವಂಥಾ ದೈವ ನಂದೆಲ್ಲೆ ಅದs ಹೇಳ್ರಿ ಸೀತಾಬಾಯಿ! ಬರಬೇಕಂತ ಮನಸಿನಾಗೇನೋ ಮಾಡಿಕೊಂಡಿದ್ದೆ. ಆದರ ನಡವ ಇವೊಂದು ಬರತಾವಲ್ಲಾ ಚಹಾನೋ ಕಾಫೀನೋ ಅಂತ! ಸುಡ್ಲಿ ನನ್ನ ತಾಯಿ; ಈ ಸುಡಗಾಡ ಕೆಲಸದಾಗ ದೇವರಿಗೆ ಹೋಗಲಿಕ್ಕೆ ಸುದ್ದಾ ಹೊತ್ತು ಸಿಗೂದಿಲ್ಲ?"

"ಹಾಂಗಾದರ ನಾ ಹೋಗತೀನ್ರೆವ್ವಾ! ಈಗ ನಿಂತು ಮತ್ತೊಂದು ಮಾತಾಡೀ ಸಂದೂ ಪುರಸೊತಿಗಿ ಇಲ್ಲ".

ಮಾತಿನ ಕೊನೆಯೊಡನೆಯೆ ಸೀತಾಬಾಯಿ ಹೊರಟುಹೋಗುವರು.

೪

ಮನೆಯ ಕಟ್ಟೆಯ ಮೇಲೆ ಶಾಸ್ತ್ರಿಗಳು ಚಂಚಿಯನ್ನು ಬಿಚ್ಚಿಕೊಂಡು ಕುಳಿತಿದ್ದಾರೆ. ಶಾಸ್ತ್ರಿಗಳ ಹೆಂಡತಿ ಪಡಸಾಲೆಯಲ್ಲಿ ಕಾಯಿಪಲ್ಯ ಹೆಚ್ಚುವುದರಲ್ಲಿ ತೊಡಗಿದ್ದಾರೆ. ಇದ್ದಕ್ಕಿದ್ದ ಹಾಗೆಯೇ ಶಾಸ್ತ್ರಿಗಳು ಕೂಗಿ ಹೇಳಿದರು:

"ಏನು! ಕೇಳಿಸಿತೇನ ನಿನಗ? ಇಂದ ರಾತ್ರಿ ಇಸ್ಪೇಟಾಡಲಿಕ್ಕಂತ ಜನಾ ಬರವರು. ನೀ ಮತ್ತ ಲಗೂನ ಕಸಾ ಉಡಿಗಿ ಹಾಸಿ ಇಟ್ಟಿರು. ಇನ್ನೊಂದು ಮಾತು: ನಾ ಹೇಳಿದಾಗ ಕಾಫೀ ತಯಾರಿರಬೇಕೂ- ಹೀಂಗ ವ್ಯವಸ್ಥಾ ಇಟ್ಟಿರು!.. ತಿಳೀತೇನು?"

ಶಾಸ್ತ್ರಿಗಳ ಹೆಂಡತಿ ಬೇಜಾರುಗೊಂಡವರಾಗಿ ಹೇಳಿದರು.

"ತಿಳೀತು, ತಿಳೀತು; ಎಲ್ಲಾ ತಿಳೀತು! ನೋಡ್ರಿ- ಇಲ್ಲೀ ತನಕಾ ಏನೇನು ತ್ರಾಸಾತು ಆಗಿಹೋತು. ಇನ್ನಮ್ಯಾಲ- ಇಂದಂತೂ- ಆ ಚಂಡಾಳಚೌಕಡೀ ಚಾಕರೀ ಮಾಡೂದು ನನ್ನ ಕಡಿಂದs ಆಗದ ಮಾತು. ಮನೀ ಕೆಲಸೇನು ಕಡಿಮೇ? ಮನಿಸ್ಯಾ ದುಡದುದುಡದು ಹೆಣಾಬಿದ್ದು ಹೋಗತsದ; ಆದರದೇನsರೆ ನಿಮಗ ಎಚ್ಚರ?

"ಅಬ್ಬಾ! ಯಾಕ? ಮಾತ್ಯಾಕೋ ಬಹಳ ಖಾರಖಾರ ಹೊಂಡಲಿಕ್ಕೆ ಹತ್ಯಾವ? ನಾಲಿಗಿ ಇದ್ದಷ್ಟs ಅದನೋ ಏನ ಉದ್ದಾಗೇದೋ? ಅಂತs! ದುಡದು ಹೆಣಾಬಿದ್ದು ಹೋಗತsದಂತ! ದೊಡ್ಡ ಉಪಕಾರಾನ ಮಾಡತಿದ್ದೀ ನನ್ನ ಮ್ಯಾಲ! ಹೇಳಿದ್ಹಾಂಗ ಎಲ್ಲಾ ಆಗದಿದ್ರ ಮುಂದಿನ ಪರಿಣಾಮಾ ನೋಡಿಕೊಂಡಿರೂ ಆತು!"

* * *

೨ನೆಯ ಸುರಳಿ

೧

ದತ್ತಾತ್ರೇಯ ದೇವಸ್ಥಾನದಲ್ಲಿ ಇಂದು ದರ್ಶನಕ್ಕೆಂದು ಬಂದ ಹೆಂಗುಸರ ಗಲಾಟೆ ವಿಪರೀತವಾಗಿದೆ. ಭಕ್ತಿಭಾವದಿಂದ ಕೆಲವರು ಅಕ್ಕಿ-ದುಡ್ಡುಗಳ ತೆರಿಗೆಯನ್ನು ಸಲ್ಲಿಸುತ್ತಿದ್ದಾರೆ. ಇನ್ನು ಕೆಲವರು ತೀರ್ಥ ತೆಗೆದುಕೊಂಡು ಪರಿಶುದ್ಧರಾಗುತ್ತಿದ್ದಾರೆ. ಬೇರೆ ಕೆಲವರು ಅವಸರವಸರದಿಂದ ಪ್ರದಕ್ಷಿಣೆ ಸುತ್ತುತ್ತಿದ್ದಾರೆ. ಆಗ ಪಾರ್ವತೀಬಾಯಿಯವರು ಬಂದು ದೇವಾಲಯದ ಗಂಟೆಯನ್ನು ಬಾರಿಸಿ, ಅಲ್ಲಿಯೆ ನಿಂತಿದ್ದ ಉಮಾಬಾಯಿಯವರೊಂದಿಗೆ ಮಾತನಾಡಲಾರಂಭಿಸಿದರು.

"ಇದೇನ್ರೀ ಉಮಾಬಾಯಿ! ಹೀಂಗ್ಯಾಕಾಗೀದೀರಿ ಈ ಸರತೇ? ಅಗದೀ ಒಣಗಿ ಹೋದ್ಹಾಂಗ ಕಾಣಸ್ತೀರಲಾ! ಜಡ್ಡಪಡ್ಡ ಆಗೇದೋ ಏನು?"

"ಎಲ್ಲೀ ಮಣ್ಣಾಗಿಂದರವ್ವಾ ಜಡ್ಡು ಪಡ್ಡು..? ಮತ್ತ ಬ್ಯಾರೇ ಜಡ್ಡು ಬರಬೇಕ್ಯಾಕ..! ಇದ್ದದ್ದೇನ ಕಡಿಮಿ ಆಗೇದ? ಹಗಲೂ ಹನ್ನೆರಡು ತಾಸು ಮಂದೀ-

ಮಕ್ಕಳು ಮನಿಗೆ ಬರ್ರವರು, ಆವರಿಗೆಲ್ಲಾ ಸುದ್ದಿ ಆಗಬೇಕಲಾ ಚಹಾನೋ-ಕಾಫೀನೋ-ಸುಟ್ಟ್ಯೋ- ಸುಡಗಾಡೋ ಅಂತ. ಇದರಾಗs ಹೆಂಗಸರ ಜೀವ ಸಣ್ಣ ಮಣ್ಣಾಗಿ ಹೋಗೂದಲ್ಲಾ ಪಾರ್ವತಿಬಾಯಿಾ!"

"ಹೌದು ನೋಡ್ರೆವ್ವಾ! ನಿಮ್ಮ ಮಾತು ಖರೇ ಅದs. ಈಗ ಎಲ್ಲಿ ನೋಡಿದಲ್ಲೆಲ್ಲಾ ಇದೇ ಹಣೆಬಾರಾಸs! ಓಹೋ! ಶಾಸ್ತ್ರೀಯವರ ಹೇಣತಿ ಬಂದರು ನೋಡ್ರಿ! ಬರ್ರಿ ರಂಗಮ್ಮಾ! ಇಲ್ಲಿ ಕೇಳಿದಿರೇನು ಉಮಾಬಾಯಿ ಏನೋ ಅಂತಾರ!"

"ಎಲ್ಲಾ ಕೇಳಿದ್ಹಾಂಗದs ಐಡ ನನ್ನ ತಾಯಿಾ. ಮೊನ್ನೆ ನಮ್ಮ ಮನಿಗೆ ಬಂದಾಗ ಎಲ್ಲಾನೂ ಕತೀ ಮಾಡಿ ಹೇಳಿದರು. ಹೆಣ್ಣಾಗಿ ಹುಟ್ಟೇದೀವಿ; ಮಾಡೂದೇನು? ಬಂದದ್ದು ಅನಭೋಗಿಸ ಬೇಕೂ ಆತು. ನಂದಾರೇ ಏನ ಹೇಳಲಿ? ಈಗ ಇಲ್ಲಿ ನಿಂತು ಮತ್ತೊಂದು ಮಾತಾಡೀನಂದ್ರ ಪುರಸತ್ತಿಲ್ಲಾಗೇದ"

ಶಾಸ್ತ್ರಿಗಳ ಹೆಂಡತಿ ಇನ್ನು ಹೊರಡುವವರು; ಅಷ್ಟರಲ್ಲಿಯೆ ಇಂದಿರಾಬಾಯಿ ತಮ್ಮ ಚುರುಕುನೋಟಗಳನ್ನು ಹೊರಳಿಸುತ್ತ ಅಲ್ಲಿಗೆ ಪ್ರವೇಶಿಸುವರು. ಒಳಗೆ ಕಾಲಿಕ್ಕುತ್ತಿರುವಾಗಲೇ ಅವರು ಮಾತನ್ನಾರಂಭಿಸುವರು.

"ಇದೇನ್ರೇ ಎಲ್ಲಾರೂ ಇಲ್ಲೇ ಈ ಘಂಟೀಹತ್ರ ನಿಂತುಕೊಂಡಿದ್ದೀರಿ? ಏನೋ ಮಸಲತ್ತು ನಡದ್ಹಾಂಗ ಕಾಣಸ್ತದ? ನಿಮಗೊಂದು ಹೊಸಾಸುದ್ದೀ ಹೇಳಬೇಕಾಗೇದ. ನಮ್ಮ ಸುಧಾ ಇಲ್ಲs? ಆಕೀ ಗೆಳತಿ ಒಬ್ಬಾಕಿ ಇದ್ದಾಳ 'ನಲಿನಿ' ಅಂತ. ನಿಮಗ ಆಕೀದು ಗೊತ್ತಿರಲಿಕ್ಕಿಲ್ಲ. ಮನ್ನೆ ಮನ್ನೆ ಮದಿವಿಆಗಿ ಇಲ್ಲಿಗೆ ಬಂದಾಳ. ಆಕೀ ನಮ್ಮ ಸುಧಾ ಇಬ್ಬರೂ ಕೂಡಿ ಮುನಸೀಪಾಲಿಟೀ ಹಾಲಿನಾಗ ಒಂದು ಹೆಂಗಸರ ಸಭಾ ಕೂಡಸವರಿದ್ದಾರ. ನೀವೆಲ್ಲಾ ಸಭಾಕ್ಕ ಬರಬೇಕು ತಿಳೀತೇನು?"

ಉಮಾಬಾಯಿ ಅಚ್ಚರಿಗೊಂಡು ಕೇಳುವರು

"ಹೀಂಗೇನು? ಎಂಥಾ ಸಭಾ! ಯಾತಕ್ಕ ಕೂಡಸವರಿದ್ದಾರ? ಏನೇನು? ಹೇಳ್ರಿಲಾ ನಮ್ಮಗಷ್ಟು!"

ನಿರಾಶೆಯ ಸ್ವರದಲ್ಲಿ ಪಾರ್ವತೀಬಾಯಿ ನುಡಿದರು.

"ಸಾಕ ಬಿಡ್ರೇ ಎಲ್ಲಾ ಗೊತ್ತದs! ಸಭಾಗಿಭಾ ಮಾಡಿದರ ಏನಾಗಬೇಕದರಿಂದ? ಈ ಕಲತ ಹುಡಿಗೇರಿಗಂತೂ ಬ್ಯಾರೇ ಕೆಲಸs ಇಲ್ಲ. ಮನೀಕೆಲಸಾ ಕೇಳಿದರ ದೊಡ್ಡದೊಂದು ಕುಂಬಳಕಾಯಿ. ಅಂತ ಇವರು ಸಭಾ ಮಾಡತಾರಂತ..! ಲಕ್ಚರ್ ಕುಡತಾರಂತ..!

ಶಾಸ್ತ್ರಿಗಳ ಹೆಂಡತಿ ಹೇಳಿದರು:

"ನನಗಂತೂ ಅವತ್ತ ಸಭಾಕ ಬರಲಿಕ್ಕಾಗೂಹಾಂಗಿಲ್ಲ. ನಮ್ಮ ಅಣ್ಣನ ಸೊಸೀಗೆ ಅಂದ ಬಯಕೀ ಊಟಾ ಮಾಡೂದದs— ತೂಗಮಂಚದಮ್ಯಾಲ ಕೂಡಿಸಿ..! ಮತ್ತ ಪಾರ್ವತಿಬಾಯಿಾ ನಿಮಗ ಇಲ್ಲೇ ಹೇಳಿಬಿಡತೀನಿ.. ಅರಷಣಾ ಕೂಕಮುಕ್ಕ ಬರಬೇಕsಂತ ಪ್ರೊತ್ತ ನಮ್ಮ ಮನಿಗೆ! ಸುಮ್ಮಸುಮ್ಮನs ಎಣತಾಕೂದsರೆ ಯಾಕ? ಹೌದಲ್ಲೋ? ಸ್ವಲ್ಪ ಲಗೂನs ಬಂದಬಿಡ್ರಿ ಆತು, ಯಾರಾದರೂ ಬೇಕಲಾ.... ಸ್ವಲ್ಪ ಕೈನೆರವಿಗೆ!"

ಇಂದಿರಾಬಾಯಿ ಮರುಕದ ದನಿಯಲ್ಲಿ ಹೇಳಿದರು:

"ಅಯ್ಯ..! ಎಲ್ಲಾರೂ ಹೀಂಗ್ಯಾಕ ಮಾಡತೀರೇ? ಸುಮ್ಮನs ಬಂದು ನೋಡಿ ಹೋಗೂದಕ ಏನ ಬಂದsದ? ಬಂದು ನೋಡ್ರಿ! ಸಂಸಾರಕ್ಕ ಉಪಯೋಗ ಆಗುವಂಥಾ ಮಾತು ನಿಮಗ ಎಷ್ಟ್ಯೋ ಕೇಳಲಿಕ್ಕೆ ಸಿಗತಾವ"

ಇದಿಷ್ಟು ಮಾತುಕತೆ ನಡೆದಿರುವಾಗಲೆ ಅಲ್ಲಿ ಇನ್ನೂ ಎಷ್ಟೋಜನ ಹೆಂಗಸರು ನೆರೆಯುವರು. ಅವರಲ್ಲಿಯ ಅನೇಕ ಜನರು ಸಭೆಗೆ ಬರುವುದಕ್ಕೆ ಒಪ್ಪಿಕೊಳ್ಳುವರು. ಕೆಲವರು "ನೋಡೂಣ! ಸಾಧ್ಯಾದರ ಬರತೀವಿ" ಎನ್ನುವರು.

* * *

ಮೂರನೆಯ ಸುರುಳಿ

೧

ರಮಾಬಾಯಿ ತಮ್ಮ ಯಜಮಾನರಿಗೆ ಹೇಳಿದರು:

"ಇಂದ ಆಫೀಸಿನಿಂದ ಲಗೂನ ಬಂದೆಬಿಡ್ರಿ. ನಿಮಗ ಊಟಕ್ಕ ಹಾಕಿ ಕೂಡಲೆ ನಾನು ಸಭಾಕ ಹೋಗತೀನಿ. ಇಂದ ಹೆಂಗಸರ ಸಭಾ ಕೂಡೂದದ."

ಸ್ವಾಭಾವಿಕ ಅಧಿಕಾರಸ್ವರದಲ್ಲಿ ಮಾಧವರಾಯರೆಂದರು.

"ಏನ ಸಭಾ ಬ್ಯಾಡಾ-ಗಿಭಾ ಬ್ಯಾಡಾ! ಎಲ್ಲಿಯೂ ಹೋಗೂ ಕಾರಣಿಲ್ಲ! ಹುಡಗ್ಗ ಮೊದಲs ಹುಗಳು ನೆಗಡಿ ಬಂದsದ. ತಿಳ್ಯೊದಿಲ್ಲೇನು? ಈಗ ಸಭಾ ಅಂತ ಸಭಾ! ವ್ಯಾಳ್ಯಾ ಗೊತ್ತಿಲ್ಲಾ ಹೊತ್ತ ಗೊತ್ತಿಲ್ಲಾ! ಏನರೆ ಮಾಡತೀರಿ ಆತು!"

ಯಜಮಾನರ ಮಾತಿನಿಂದ ರಮಾಬಾಯಿಗೆ ಸಿಟ್ಟು ಬಂದಿತು. ಸಭೆಗೆ ಹೋಗುವ ಹಟ ಅವರಲ್ಲಿ ಇನ್ನಷ್ಟು ಹೆಚ್ಚಿತು. ಹುಡುಗನನ್ನು ಒಕ್ಕಲಗಿತ್ತಿಯ ಕಡೆಗೆ ಕೊಟ್ಟು ಹೋದರಾಯಿತೆಂದು ಗುಣಗುಣಿಸುತ್ತ ಮನೆಗೆಲಸಕ್ಕೆ ಹೊರಟು ಹೋದರು.

೨

ಸುಧೆಯು ತನ್ನ ಗಂಡನಿಗೆ ಹೇಳಿದಳು:

"ಇಂದ ಸಂಜೀ ಕಡೆ ನಾ ಸಭಾಕ ಹೋಗತೀನಿ..! ಡಾ. ಸುಮತೀಬಾಯಿಯವರು ಸಭಾಕ ಅಧ್ಯಕ್ಷರಾಗಲಿಕ್ಕೆ ಒಪಿಗೊಂಡಾರ. ನಾ ಸೆಕ್ರೆಟರಿ ಇದ್ದೀನಿ; ಅದಕ್ಕಂತs ಲಗೂನs ಹೋಗಬೇಕಾಗತದ. ನೀವು ಹುಡುಗಿನ್ನಷ್ಟು ನೋಡಿಕೊಂಡಿರ್ರಿ ಆತು. ಮತ್ತ ಇನ್ನೊಂದು: ಇದ್ದಾಲೀ ಒಲೀಮ್ಯಾಲ ಕುಕರ್ ಇಟ್ಟು ಹೋಗ್ತೀನಿ. ಬರಾಬರಿ ಏಳೂವರಿ ಘಂಟೇಕ ಅದನ್ನ ಇಳಿಸಿಡ್ರಿ..ತಿಳೀತೇನು?"

ಓದುತ್ತಿದ್ದ ವರ್ತಮಾನಪತ್ರದಿಂದ ಮುಖವನ್ನು ಮೇಲಕ್ಕೆತ್ತಿ ವಿನಾಯಕರಾಯರು ಹೇಳಿದರು:

"ಏನು? ಸಭಾಕ ಹೋಗ್ತೀ? ಆದರ.. ನಾವು ನಿರ್ಣಯ ಮಾಡೀವಿ.... ಮಿತ್ರಸಮಾಜದಾಗ ಇಂದ 'ಬ್ರಿಜ್' ಆಡೂದು ಅಂತ. ಈವೊತ್ತಂತೂ ನನಗೇನೂ ಮನ್ಯಾಗಿರಲಿಕ್ಕೆ ಆಗೂದಿಲ್ಲ!"

"ಅಂದರ? ಒಂದೇಒಂದು ದಿವಸ ಸುದ್ಧಾ ನೀವು ಮನೀವೊಳಗ ಇರಬಾರದೇನು? ಇದೇನೂ ಕೇಳೂ ಹಾಂಗಿಲ್ಲ. ಮನೀ ಏನ ಸಂದೊಬ್ಬಾಕೀದs ಅಲ್ಲಲಾ!"

"ಹೋಗು ಹೋಗು, ನಿಂದsರೆ ಆಗಲಿ! ಮನ್ಯಾಗಿರತೀನಿ.. ಹುಡುಗಿನ್ನ ಆಡಸ ತೀಸಿ.. ಅತಿಲ್ಲೋ! ಇನ್ನೇನಾದರೂ ಅದ ಏನು?"

ಹಿಗ್ಗು-ಹೆಮ್ಮೆಗಳ ದನಿಯಲ್ಲಿ ಸುಧೆ ಮಾತನಾಡಿದಳು.

"ಇಷ್ಟೇನೂ ನನ್ನ ಮ್ಯಾಲ ದೊಡ್ಡ ಉಪಕಾರ ಮಾಡಿದ್ಹಾಂಗ ಮಾತಾಡೂದು ಬೇಕಾಗಿಲ್ಲ!"

೩

ಮ್ಯುನಸಿಪಲ್ ಹಾಲಿನಲ್ಲಿ ಹೆಂಗುಸುರು ಒಟ್ಟುಗೂಡಿದ್ದಾರೆ. ಕೈಗೆ ಗಡಿಯಾರ ಕಟ್ಟಿದವರೂ ಚಿನ್ನದ ಬಳೆಯಿಟ್ಟುಕೊಂಡವರೂ ಮೋಟಾರಿನಲ್ಲಿ ಕುಳಿತುಬಂದವರೂ ಮುಂದಣ ಕುರ್ಚಿಗಳಲ್ಲಿ ಕುಳಿತಿರುವರು. ಬಿಕ್ಕಪರು ಬಾಕುಗಳ ಮೇಲೂ ಹಾಸಿದ ಜಮಖಾನೆಯ ಮೇಲೂ ಕುಳಿತಿರುವರು. ಚಿಕ್ಕ ಚಿಕ್ಕ ಹುಡುಗ-ಹುಡುಗಿಯರು ಗದ್ದಲ ಮಾಡುತ್ತ ಗುಂಪುಗೂಡಿರುವರು. ಸಭೆಯಲ್ಲಿ ಮಾತನಾಡಬೇಕಿದ್ದ ಸ್ತ್ರೀಧುರೀಣರು ವ್ಯಾಸಪೀಠದ ಮೇಲಿನ ಕುರ್ಚಿಗಳಲ್ಲಿ ವಿರಾಜಮಾನರಾಗಿರುವರು. ಸಭೆಯ ಕೆಲಸಕ್ಕೆ ಆರಂಭವಾಯಿತು. ಸೆಕ್ರೆಟರಿ ಸುಧಾಬಾಯಿಯವರು ಮಾತನಾಡಲು ತೊಡಗಿದರು.

"ಪ್ರಿಯ ಸೋದರಿಯರೇ! ಇಂದು ನಾವೆಲ್ಲ ಇಲ್ಲಿ ಏಕೆ ಒಟ್ಟುಗೂಡಿದ್ದೇವೆಯೆಂಬುದನ್ನು ನೀವೆಲ್ಲ ಬಲ್ಲಿರಿ. ಹೆಂಗಸರಿಗೆ ಸಂಬಂಧಿಸಿರುವ ಹಲವು ಮಹತ್ತ್ವದ ಪ್ರಶ್ನೆಗಳ ವಿಷಯಕ್ಕೆ ಇಂದು ಚರ್ಚೆಯಾಗಬೇಕಾಗಿದೆ. ಇಲ್ಲಿ ಕುಳಿತಿದ್ದ ನನ್ನ ಕೆಲವು ಜನ ಅಕ್ಕತಂಗಿಯರು ತಮ್ಮತಮ್ಮ ಹೇಳಿಕೆಗಳನ್ನು ಈ ಸಭೆಯಲ್ಲಿ ಮಂಡಿಸುವವರಿದ್ದಾರೆ. ಈಗ ನಾನು ನಿಮ್ಮ ವೇಳೆಯನ್ನು ಹೆಚ್ಚಿಗೆ ತೆಗೆದುಕೊಳ್ಳದೆ- ಇಂದಿನ ಸಭೆಗೆ-ಸಂಪೂರ್ಣ ಯೋಗ್ಯರಾದ-ಡಾ. ಸುಮತೀಬಾಯಿಯವರು ಅಧ್ಯಕ್ಷರಾಗಿ ಕಾರ್ಯ ನಡಿಸಬೇಕೆಂದು ಎಲ್ಲರ ಪರವಾಗಿಯೂ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ."

ಸಭಿಕರ ಚಪ್ಪಾಳೆಗಳ ಗಲಾಟೆಯಲ್ಲಿಯೆ ಅಧ್ಯಕ್ಷರು ಸ್ಥಾನಾಪನ್ನರಾಗಿ ತಮ್ಮ ಮಾತನ್ನು ಆರಂಭಿಸಿದರು.

"ಈಗ ಸೌಭಾಗ್ಯವತೀ ನಲಿನೀ ಸರದೇಸಾಯಿಯವರು ತಮ್ಮ ಭಾಷಣವನ್ನಾರಂಭಿಸಬೇಕೆಂದು ನಾನು ಬಿನ್ನವಿಸುತ್ತೇನೆ."

ತನ್ನ ಸ್ಥಳದಿಂದೆದ್ದು ಒಂದು, ಅಧ್ಯಕ್ಷರ ಟೇಬಲ್ಲಿನ ಹತ್ತಿರ ನಿಂತು ನಲಿನಿಯು ಉಪನ್ಯಾಸವನ್ನಾರಂಭಿಸಿದಳು.

"ಅಧ್ಯಕ್ಷರೆ, ನನ್ನ ಪ್ರಿಯ ಸೋದರಿಯರೆ, ಇಂದು ನೀವೆಲ್ಲ ಇಲ್ಲಿ ಒಟ್ಟುಗೂಡಿದುದನ್ನು ನೋಡಿ ನನಗೆ ಬಹಳೇ ಆನಂದವಾಗುತ್ತಿದೆ. ಸದ್ಯ ನಾನು ನನ್ನವೆಂದು ನಾಲ್ಕು ಮಾತುಗಳನ್ನು ತಮ್ಮೆದುರು ಇಡಬೇಕೆಂದು ಇಚ್ಛಿಸುತ್ತೇನೆ. ಗಂಡಸರ ಲಕ್ಷ್ಯವು ಮನೆಗಿಂತ ಹೊರಕ್ಕೇ ಹೆಚ್ಚಾಗಿ ಹೋಗಹತ್ತಿತೆಂದರೆ, ಆಗ ಅವರನ್ನು ಮನೆಯ ಕಡೆಗೆ ಎಳೆದು, ಹೇಗೆ ತಡೆಹಿಡಿಯಲಿಕ್ಕೆ ಬಂದೀತೆಂಬ ಮಾತಿನ ಚರ್ಚೆಯು ಇಂದಿನ ಸಭೆಯಲ್ಲಿ ಆಗಬೇಕಾಗಿದೆ. ನಾವು ಈ ವಿಷಯದಲ್ಲಿ ಸಾಕಷ್ಟು ವಿಚಾರವನ್ನು ಮಾಡಿ ಒಂದು ಸಾರ್ವಜನಿಕ ಸಭೆಯನ್ನೇ ಕೂಡಿಸಬೇಕೆಂದು ನಿರ್ಣಯಿಸಿದೆವು. ಆ ನಿರ್ಣಯದ ಪ್ರತ್ಯಕ್ಷಫಲವೇ ಈ ಸಭೆ. ಈ ಸಭೆಯನ್ನು ಯಶಸ್ವಿಯನ್ನಾಗಿ ಮಾಡಲಿಕ್ಕೆ, ಇಲ್ಲಿ ಕೂಡಿದ ನನ್ನ ಅಕ್ಕತಂಗಿಯರ ಸಹಕಾರ್ಯವು ಅವಶ್ಯವಾಗಿ ಬೇಕು. ಮದುವೆ ಮಾಡಿಕೊಳ್ಳುವುದಕ್ಕಿಂತ ಮೊದಲು ನಾನು ಹೆಚ್ಚು ಸುಖಿಯಾಗಿದ್ದೆನೆಂಬುದು ನನ್ನ ಅನುಭವದ ಮಾತಾಗಿದೆ. ಏಕೆಂದರೆ ಆಗ ಬಿಚ್ಚುಮನದಿಂದ ನನ್ನ ಗೆಳತಿಯರೊಂದಿಗೆ ನಕ್ಕು ಕೆಲೆದು ಆಡುತ್ತಲಿದ್ದೆ. ಆದರೆ ಈ ತಾತ್ಪೂರ್ತಿಕ ಗೆಳತಿಯರಿಂದ ಪ್ರಯೋಜನವೇನೆಂಬ ವಿಚಾರದಿಂದ, ಜೀವನದುದ್ದಕ್ಕೂ ಒಡನಾಡಿಯಾಗಿರಬಹುದಾದ ಗೆಳೆಯನೊಬ್ಬನನ್ನು ಆರಿಸಿ ಸ್ವೀಕರಿಸಿದೆ. ಸ್ವೀಕರಿಸಿದುದೇನೋ ಸರಿಯಾಯಿತು. ಮಾಡಿದ ವಿಚಾರವು ತಲೆಕೆಳಗಾಗಿ ಹೋಯಿತು. ಏಕೆಂದರೆ ಮದುವೆಯಾದ ಬಳಿಕ ಬಂದ ಅನುಭವವೇ ಬೇರೆ ರೀತಿಯದು! ನನ್ನ ಗಂಡನಿಗೆ, ನನಗಿಂತಲೂ ತಮ್ಮ ಗೆಳೆಯರ ಬಳಗವೇ ಹೆಚ್ಚು ಮಹತ್ತ್ವದ್ದಾಗಿ ಕಾಣುತ್ತಲಿದೆಯೆಂಬುದನ್ನು, ಅವರ ಆಚರಣೆಯಿಂದಲೆ ನಾನು ಕಂಡುಕೊಂಡಿದ್ದೇನೆ. ಗೆಳೆಯರೊಡನೆ ಹರಟೆ ಹೊಡೆಯುವುದರಲ್ಲಿಯೂ, ಅವರೊಡನೆ ತಿರುಗಾಡುವುದರಲ್ಲಿಯೂ, ಆಟವಾಡುವುದರಲ್ಲಿಯೂ ನನ್ನ ಪತಿರಾಜರ ವೇಳೆಯೆಲ್ಲ ಹೊರಟುಹೋಗುತ್ತದೆ. ಹಾಯಾಗಿ ಕುಳಿತು ನನ್ನೊಡನೆ ನಾಲ್ಕು ಮಾತುಗಳನ್ನಾಡಲಿಕ್ಕೂ ಅವರಿಗ ವೇಳೆ ಸಿಕ್ಕುವುದಿಲ್ಲ. ಮನೆಯು ಅವರ ಪಾಲಿಗೆ ಬರೀ ಊಟಕ್ಕೆ, ಚಹಾ ಉಪಹಾರಕ್ಕೆ ಇದ್ದಂತಿದೆ. ಇಂದು ಒಬ್ಬ ಗೆಳೆಯನ ಮನೆಗೆ ಹೋದರೆ, ನಾಳೆ ಮತ್ತೊಬ್ಬನನ್ನು ಮನೆಗೆ ಕರೆದುಕೊಂಡು ಬರುವುದು; ಈ ಗೊಂದಲವಲ್ಲಿ ತಮಗಾಗಿ ತಮ್ಮ ಸಾಹಚರ್ಯಕ್ಕಾಗಿ ಯಾರಾದರೂ ತಳಮಳಿಸುತ್ತಿದ್ದಾರೆಯೋ.. ಎಂಬುದರ ಪರಿವೆಯೆ ಅವರಿಗೆ ಇರುವುದಿಲ್ಲ. ಜೀವನದಲ್ಲಿ ಗೆಳೆಯರಿಗೊಂದು ಸ್ಥಾನವಿದೆ.. ಈ ಮಾತು ನಿಜ! ಆದರೆ ಇಲ್ಲದ ಮಹತ್ತ್ವ ಆ ಸ್ಥಾನಕ್ಕೇ ದೊರೆಯಹತ್ತಿದರೆ ಅದರ ಪರಿಣಾಮವು ಜೀವನದಲ್ಲಿ ಅಸಮಾಧಾನ ಅಸಂತುಷ್ಟಿಗಳನ್ನು ತಂದೊಡ್ಡದೆ ಬಿಡದು. ಗೆಳೆಯರಿರಬೇಕು! ಅವರ ಮಹತ್ತ್ವ ಎಲ್ಲಿಯವರೆಗೆ? ಮದುವೆಯಾಗುವವರೆಗೆ ಮಾತ್ರ. ಮದುವೆಯಾಯಿತೆಂದರೆ ಗೆಳೆಯರಿಗಿದ್ದ ಮಹತ್ತ್ವವು ಕಡಿಮೆಯಾಗಲಿಕ್ಕೇ ಬೇಕು. ಏಕೆಂದರೆ ಜೀವನದ ಜೊತೆಗಾತಿಯೆಂದು ಕೈ ಹಿಡಿದ ವ್ಯಕ್ತಿಯ ಬೇಕು-ಬೇಡಗಳ ಕಡೆಗೂ ಭಾವನೆಗಳ ಕಡೆಗೂ ಸರಿಯಾಗಿ ಲಕ್ಷ್ಯವನ್ನು ಗಂಡಸರು ಕೊಡಬೇಕಲ್ಲವೇ? ತಮ್ಮ ಹೆಂಡಂದಿರು ಸಂತುಷ್ಟರಾಗಿರುವಂತೆ ಗಂಡಂದಿರು ಆಚರಿಸಬೇಕಲ್ಲವೇ? ಯಾವ ಗಂಡುಸರಿಗೆ ಗೆಳೆಯರೇ ಹೆಚ್ಚಿನವರಾಗಿ ತೋರುವರೋ ಅವರು ಮದುವೆ ಮಾಡಿಕೊಳ್ಳದೆ ಇರುವುದೇ ಉತ್ತಮ

ಕಲ್ಲವೇ ? ಮದುವೆ ಮಾಡಿಕೊಂಡು, ನ್ನವಳೆಂದು ಕೈಹಿಡಿದವಳನ್ನು, ಅಸಮಾಧಾನ-ಅತೃಪ್ತಿಗಳಿಂದ ನಿಟ್ಟುಸಿರು ಹಾಕಕ್ಕೆ ಹಚ್ಚುವುದು ಎಲ್ಲಿಯ ನ್ಯಾಯ ? ನೀವೆಲ್ಲರೂ ನನ್ನ ಅನುಭವದ ಈ ಮಾತನ್ನು ಕುರಿತು ಯೋಗ್ಯ ವಿಚಾರ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ."

ಮಾತನ್ನು ಮುಗಿಸಿ ನಲಿನಿಯು ಕುಳಿತುಕೊಳ್ಳುವಳು. ಸುಧೆಯು ಎದ್ದು ಮಾತನಾಡಲಾರಂಭಿಸುವಳು.

"ಅತೀ ಸರ್ವತ್ರ ವರ್ಜಯೇತ್" ಎಂದು ಸಂಸ್ಕೃತದಲ್ಲಿ ನೀತಿಯ ಮಾತೊಂದಿದೆ. ಗೆಳೆಯರಿಗೆ ವಿಪರೀತ ಮಹತ್ವ ಕೊಡುವುದೇನೂ ಒಳ್ಳೆಯದಲ್ಲವೆಂದು ಇದೀಗ ಮಾತಾಡಿದವರ ಅಭಿಪ್ರಾಯ ದಂತೆಯೆ ನನ್ನ ಅಭಿಪ್ರಾಯವೂ ಇದೆ. ಏಕೆಂದರೆ ಇದರಿಂದ ಹೆಂಗುಸರ ಎಷ್ಟೋ ಭಾವನೆಗಳು ಮಣ್ಣುಗೂಡಿ ಹೋಗುತ್ತವಲ್ಲದೆ, ಸಂಸಾರದಲ್ಲಿ ಇನ್ನೂ ಎಷ್ಟೆಷ್ಟೊ ತಂಟೆತಕರಾರುಗಳು... ಜಗಳಗಳು ಉಂಟಾಗುತ್ತವೆ. ನಮ್ಮ ಮನೆಯಲ್ಲಿಯೂ ಇದೇ ಹಣೆಯಬರೆಹವೇ ! ಗಂಡಸರ ಲಕ್ಷ್ಯ ಮನೆಯ ಕಡೆಗೆ ಏನೂ ಇಲ್ಲದುದರಿಂದ, ಎಲ್ಲ ಜವಾಬುದಾರಿಯೂ ಹೆಣ್ಣೊಬ್ಬಳ ಮೇಲೆ ಬೀಳುವುದು. ಕೋರ್ಟಿನಲ್ಲಿಯ ತಮ್ಮ ಕೆಲಸ ತೀರಿತೋ, ಕೂಡಲೆ ಬ್ರಿಜ್ ಆಡಲಿಕ್ಕೆಂದು ಕ್ಲಬ್ಬಿಗೆ ಹೋಗುವರು. ಅಲ್ಲಿ ಹೋದರೆಂದರಾಯಿತು; ತಮಗೊಂದು ಮನೆ, ಸಂಸಾರ ಇದೆಯೆಂಬ ಮಾತೇ ಅವರ ನೆನಪಿನಲ್ಲಿರುವುದಿಲ್ಲ. ಕೆಲಸಕ್ಕಾಗಿಯೇ ಬಂದು ಹೋದವರನ್ನು ಉಪಚರಿಸುವುದು, ಮನೆಗೆ ಬೇಕಾದ ಸಾಮಾನು ತರಿಸುವುದು, ಆಳು-ಹೋಳುಗಳ ಮೇಲೆ ಕಣ್ಣಿಡುವುದು, ಬೇನೆ-ಬೇಸರಿಕೆ, ಔಷಧ-ಪಥ್ಯ, ಬ್ಯಾಂಕಿನ ಕೊಡಕೊಳ್ಳುವ ವ್ಯವಹಾರ -ಇದೆಲ್ಲವನ್ನೂ ನಾನು ಒಬ್ಬಳೆ ನೋಡಿಕೊಳ್ಳಬೇಕಾಗುವುದು. ಸಂಸಾರದಲ್ಲಿ ಗಂಡಹೆಂಡಿರಿಬ್ಬರೂ ಒಬ್ಬರ ಕಾರ್ಯದಲ್ಲೊಬ್ಬರು ನೆರವಾಗಿ, ಒಬ್ಬರೊಬ್ಬರ ಜಗಳಗಳು ದೂರವಾಗುವಂತೆ ಆದಷ್ಟು ಪ್ರಯತ್ನಿಸುತ್ತಿರಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಿದೆ.''

ಸುಧೆಯ ಮಾತನ್ನು ಕೇಳಿ ರಮಾಬಾಯಿ ಸಮಾಧಾನದ ಸ್ವರದಲ್ಲಿ ಹೇಳಿದರು.

"ಇನ್ನೇನs ನಮ್ಮವ್ವಾ ! ಹಿಂಗಾದರ ಕೇಳೂದೇನದ ! ಮುಗಲು ಮೂರsಬಟ್ಟು ಉಳದ್ಹಾಂಗಾಗತsದ ! ಹೆಂಗಸರ ತೊಂದರಿ ಕಡಿಮಿ ಆಗಿ, ಅವರಿಗೆ ಎಷ್ಟೊಂದು ವ್ಯಾಳ್ಯಾ ಶ್ರಮಾ ಉಳೀತsವಂತೀರಿ ! ಆದರ ಹಿಂಗೆಲ್ಲೆ ಆಗಲಿಕ್ಕೆ ಕೂತsದ ಈಗ ? ಇಲ್ಲೆ ನೋಡ್ರಿ, ನಿಮ್ಮ ಗಂಡಂದಿರು ಹೂರಗ ಹೋಗತಾರ; ನಿಮ್ಮ ಕೆಲಸಾ ನಿಮಗ ಮಾಡಲಿಕ್ಕೆ ಅವಕಾಶಾ ಅರೆ ಮಾಡಿಕೊಡತಾರ ! ಆದರ ನಮ್ಮಲ್ಲೇನs ತಾಯಿ ! ಎಲ್ಲಾ ವಿಚಿತ್ರs! ಮನ್ಯಾಗ ಸಿಕ್ಕ ಮಂದಿನ್ನೆಲ್ಲಾ ಕೂಡಿಸಿಕೊಳ್ಳೂದು: ಹರಟೀ ಹೊಡಿಯೂದು, ಹಲ್ಲ ತಗಿಯೂದು, ಬೀಡಿ ಸಿಗರೇಟು ಸೇದೂದು, ಆ ವ್ಯಾಲ ಚಹಾ ಫರಾಳಾ ಹಣಿಯೂದು. ನನ್ನ ಆಯುಷ್ಯ ಎಲ್ಲಾ ಇದರಾಗ ಸಂದದು ಹೋಗತsದ ನೋಡ್ರಿ.. ರಂದೀ ಹರವೂದು ಅದನ್ನ ನಿಸ್ತರಸೂದು ! ಜಲಮ s ಸಾಕಸಾಕಾಗಿ ಹೋಗೇದ ನನಗ. ಇಂಥಾದರಾಗ ನನಗ ಮನೀ ಬಿಟ್ಟು ಹೊರ ಬೀಳ್ಳಿಕ್ಕೆ ವ್ಯಾಳ್ಯಾ ಹ್ಯಾಂಗ ಸಿಗಬೇಕು ನೀವs ನೋಡ್ರಿ ! ಇಷ್ಟs ಅಲ್ಲ ! ಪ್ರೀತಿಂದs ಹೆಣೀಬೇಕಂತ ಹಿಡದದ್ದು ಎಷ್ಟೋ ಹೆಣಿಕಿ ಅರ್ಧಾಮರ್ಧಾ ಆಗಿ ಬಿದ್ದಾವ; ಅವನ್ನ ತಗದು ನೋಡಲಿಕ್ಕೆ ಸುದ್ಧಾ ನವಡಿಲ್ಲಾ ? "

ಇಂದಿರಾಬಾಯಿ ಮಾತನಾಡ ತೊಡಗಿದರು:

"ಮತ್ತ ಈ ಗೆಳ್ಯಾರು ಅನ್ನೋರಿಗೆಲ್ಲಾ ಹೊತ್ತು-ವ್ಯಾಳ್ಯಾದ ಖಬರು ಹ್ಯಾಂಗ ಉಳ್ಯೊದಿಲ್ಲೋ ಯಾರಿಗ್ಗೊತ್ತು ! ಒಮ್ಮೆ ಹರಟೀಹೊಡೀಲಿಕ್ಕೆ ಸುರೂ ಆದರ ಆತು, ಕೆಲಸ ಬಗೀಹರದ್ಹಾಂಗಾತು. ಎರಡನೇ ದವರು ಸತ್ತಾರೋ ಬದಕ್ಯಾರೋ ಅಂಬೂದನ್ನ ನೋಡಬೇಕಂಬೂ ಎಚ್ಚರನs ಇರೂದಿಲ್ಲ ಅವರಿಗೆ. ಹೊತ್ತಲ್ಲದ ಹೊತ್ತಿನೊಳಗ ಒಬ್ಬರ ಮನೀಗೆ ಹೋಗೂದು ; ಅವರನೂ ವ್ಯಾಳ್ಯಾ ದಂಡ.. ತಮ್ಮದೂ ವ್ಯಾಳ್ಯಾ ದಂಡ. ಊಟದ ಹೊತ್ತಿನಾಗ ಇನ್ನೊಬ್ಬರ ಮನಿಗೆ ಹೋಗೂದು ; ತಮ್ಮ ಮನೀ ಅನ್ನಾನೂ ಆರಸೂದೂ; ಇನ್ನೊಬ್ಬರಿಗೂ ತಂಗಳ ತಿನಲಿಕ್ಕೆ ಹಚ್ಚೂದು. ಯಾವ ನಾಡಿನ ರೀತಿ ಇದೆಲ್ಲಾ ! ಇದಕ್ಕೆಲ್ಲಾ ನಾವು ಏನಾದರೂ ಉಪಾಯ ಹುಡಕಲಿಕ್ಕೇ ಬೇಕು. "

ಪಾರ್ವತಿಬಾಯಿಯವರಿಗೆ ಮಾತನಾಡುವ ಸ್ಫೂರ್ತಿಯಾಯಿತು:

"ಅಧ್ಯಕ್ಷರೆ, ಮತ್ತು ಅಕ್ಕತಂಗಿಯರೆ! ಈಗ ನನಗೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಆದರ ಒಂದು ಮಾತು ಮಾತ್ರ ಹೇಳತೀನಿ ..ಏನಾದರೂ ಮಾಡಿ ಗಂಡಸರ ಸೊಕ್ಕು ಧಲೋತಿನಾಗ ಮುರೀಬೇಕಾಗೇದ.. ಹೆಂಗಸರಿಗೆ ಎಷ್ಟು ತ್ರಾಸಾಗತದಂಬೂ ಕಲ್ಪನಾನs ಇರೂದಿಲ್ಲ..ಅವರಿಗೆ. ಹೊತ್ತಲ್ಲದ ಹೊತ್ತಿನಾಗ ಬರತಾರ..! ಚಹಾ ಮಾಡೂ ಅಂತಾರ..! ಅದನ್ನ ಮಾಡೂ ಅಂತಾರ..! ಇದನ್ನ ಮಾಡೂ ಅಂತಾರ..! ಒಬ್ಬರು ಇಬ್ಬರು ಆದರ ಯಾರಾದರೂ ಮಾಡಿಕೊಟ್ಟಾರು ಅನ್ನಿ..! ಊರಾಗಿನ ಮಂದಿನ್ನೆಲ್ಲಾ ಕಟಿಗೊಂಡ' ಬಂದರ ಹೆಂಗಸರೇನು ಬಡಕೋಬೇಕು ? ಗಂಡಸರು ಹಿಂಗೆಲ್ಲಾ ಮಾಡತಿರೂದು ಬಂದಾಗಲಿಕ್ಕೇ ಬೇಕು !'

ಬರಲಿಕ್ಕಾಗುವುದಿಲ್ಲವೆಂದು ಹೇಳಿದ ಶಾಸ್ತ್ರಿಗಳ ಹೆಂಡತಿಯವರೂ ಬಂದಿದ್ದರು. ಅವರಿಗೂ ಮಾತನಾಡುವ ಆವೇಶ ಬಂದಿತು.

"ಇಲ್ಲಿ ನೋಡ್ರಿ ! ನಾವೊಂದೆರಡು ಮಾತು ಆಡಬೇಕಂತೀನಿ. ನಾ ಏನು ಓದಿದಾಕಿ ಅಲ್ಲಾ, ಬರೆದಾಕಿ ಅಲ್ಲಾ ! ನೀವೆಲ್ಲಾ ಮಾತಾಡಿದ್ಹಾಂಗ ಜೋರು ಜೋರಿನಿಂದ ಮಾತಾಡಲಿಕ್ಕೆ ನನಗೇನೂ ಬರೂದಿಲ್ಲ. ಆದರ ನನಗೂ ಇಷ್ಟ ಮಾತ್ರ ಮ್ಯಾಲs ಮ್ಯಾಲ ಅನಸ್ತsದ. ಗಂಡಸರು ಹೆಂಗಸರನ ಹಿಂಗ ಕೂಲೀ ಜನರ್ಹಾಂಗ ದುಡಿಸಿಕೊ ಬಾರದು ! ಹೆಂಗಸರಿಗೇನ ಜೀವಿಲ್ಲs? ಕಷ್ಟ ಸುಖ ಅವರಿಗೆ ಗೊತ್ತಾಗೂದಿಲ್ಲs? ಈಗ ನೀವೆಲ್ಲಾ ಏನ ಮಾತಾಡಿದಿರಿ..ಅದೆಲ್ಲಾ ಹೆಂಗಸಾಗಿ ಹುಟ್ಟಿದ ಪ್ರತಿಯೊಬ್ಬಾಕಿಗೂ ಖರೇ ಅನಸೂ ಹಾಂಗದs! ಅಧ್ಯಕ್ಷರು ಶಾಣ್ಯಾರಿದ್ದಾರ. ಇದಕ್ಕ ಏನಾದರೂ ಉಪಾಯ ಅವರು ಹೇಳಿಕೊಡಬೇಕೂ. ಅಂತ ನಾ ಬೇಡಿಕೋತೀನಿ..! ".

ಅಧ್ಯಕ್ಷರು ಎದ್ದು ನಿಂತು ಮಾತಿಗೆ ಆರಂಭಿಸಿದರು.

"ಪ್ರಿಯ ಸೋದರಿಯರೆ, ನೀವೆಲ್ಲ ಸೇರಿ ಅಧ್ಯಕ್ಷಪದದ ಮಾನವನ್ನು ನನಗೆ ಕೊಟ್ಟದ್ದಕ್ಕಾಗಿ ನಾನು ಅತ್ಯಂತ ಕೃತಜ್ಞಳಾಗಿದ್ದೇನೆ. ಇದುವರೆಗೆ ಇಲ್ಲಿ ಮಾತನಾಡಿದವರ ಮಾತುಗಳನ್ನೆಲ್ಲ ತಾವು ಶಾಂತರೀತಿಯಿಂದ ಕುಳಿತು ಕೇಳಿಕೊಂಡದ್ದಕ್ಕಾಗಿ ನನಗೆ ಬಹಳೇ ಸಂತೋಷವಾಗಿರುತ್ತದೆ. ಇಂದಿನ ಸಭೆಯು ತುಂಬಾ ಮಹತ್ತ್ವದ ಸಭೆಯು! ಇಂತಹ ಆಕರ್ಷಕವಾದ ಚರ್ಚೆಯನ್ನು ಇದುವರೆಗೆ ನಾನು ಎಲ್ಲಿಯೂ ಕಂಡಿರಲಿಲ್ಲ .. ಕೇಳಿರಲಿಲ್ಲ ..! ನಾನು ಡಾಕ್ಟರಳಾಗಿದ್ದರೂ, ಅನೇಕ ಪ್ರಕಾರದ ಅನುಭವಗಳನ್ನು ಪಡೆದಿದ್ದರೂ, ನಿಮ್ಮಂತೆಯೆ ನಾನೂ ಒಂದು ಮನೆಯ ಗೊಂಬೆಯಾಗಿದ್ದೇನೆ. ಇಂದು ಇಲ್ಲಿ ನನ್ನ ಅನೇಕ ಅಕ್ಕತಂಗಿಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಅವೆಲ್ಲವುಗಳನ್ನೂ ಕುರಿತು ವಿಚಾರಮಾಡಿ ನೋಡಿದಲ್ಲಿ, ಎಲ್ಲ ಹೆಂಗಸರೂ ಇನ್ನು ಮುಂದೆ ಮೊದಲಿನಂತೆ ಮೂಕದನವಾಗಿ ವರ್ತಿಸುವುದರಲ್ಲಿ ಅರ್ಥವಿಲ್ಲವೆಂದು ತೋರುತ್ತದೆ. ಹೆಂಗಸರಿಗೂ ಒಂದು ವ್ಯಕ್ತಿತ್ವವಿದೆಯೆಂಬುದನ್ನು ಗಂಡಸರಿಗೆ ತೋರಿಸಿ ಕೊಡಲಿಕ್ಕೆ ಇಂದಿನಿಂದ ನಾವು ದೃಢಪ್ರತಿಜ್ಞರಾಗಿ ಮುಂದುವರಿಯಬೇಕು. ನಾನೇನು ಗಂಡಸರ ಮೇಲೆ ಬಂಡೆಬ್ಬಿಸಬೇಕೆಂದು ಹೇಳುವುದಿಲ್ಲ, ನಾವು ಅವರಿಗೆ ಸಂಪೂರ್ಣ ಅನುಕೂಲೆಯರಾಗಿಯೆ ಮುಂದೂ ನಡೆಯೋಣ! ಆದರೆ ನಮ್ಮನ್ನು ಸಂಪೂರ್ಣ ದುರ್ಲಕ್ಷಿಸಿ, ಗಂಡಸರು ಅಡ್ಡತಿಡ್ಡ ದಾರಿಯಿಂದ ನಡೆಯತೊಡಗಿದರೆ ಮಾತ್ರ, ಆಗ ಹೆಂಗಸರು ಸತ್ಯಾಗ್ರಹವನ್ನು ಆರಂಭಿಸುವುದರ ಹೊರತು ಬೇರೆ ಹಾದಿಯಿಲ್ಲ.. ವೇಳೆಯಲ್ಲದ ವೇಳೆಯಲ್ಲಿ ಯಾರಾದರೂ ಮನೆಗೆ ಬಂದರೆ, ಶಿಷ್ಟಾಚಾರದ ಹೆಸರಿನಿಂದ ಅವರ ಆದರಾತಿಥ್ಯವನ್ನು ಮಾಡಬೇಕಾದ ಕಾರಣವೇನೂ ಇಲ್ಲ. ಮತ್ತೊಂದು ಮಾತೆಂದರೆ ಹೆಂಗಸರು ತಮ್ಮ ಅಂಜುಗುಳಿತನವನ್ನೂ, ಮಿತಿಮೀರಿದ ಸಹನಶೀಲತೆಯನ್ನೂ ಸ್ವಲ್ಪ ಬದಿಗೆ ಸರಿಸಿಡಲಿಕ್ಕೆ ಕಲಿಯಬೇಕು. ಏಕೆಂದರೆ ಹೀಗೆ ಮಾಡಿದ ಹೊರತು ಗಂಡಸರಿಗೆ ಹೆಂಗಸರ ಕಷ್ಟ-ನಷ್ಟಗಳ ಕಲ್ಪನೆಯೆ ಉಂಟಾಗುವುದಿಲ್ಲ. ಹೆಂಗಸರು ಮನೆವಾರ್ತೆ ನೋಡಿಕೊಳ್ಳಬೇಕು. ಮನೆಯ ಜನರ ಬೇಕು-ಬೇಡಗಳನ್ನು ನೋಡಿಕೊಂಡು ಅವರೆಲ್ಲರ ಹಿತಕ್ಕಾಗಿ ಹಗಲಿರುಳೂ ಹೆಣಗಬೇಕು. ಅನೇಕ ತೊಂದರೆಗಳನ್ನು ಸಹನ ಮಾಡಬೇಕು. ಗಂಡಸರ ದೃಷ್ಟಿಯಲ್ಲಿ ಇದಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗದಂತೆ ನಾವಿನ್ನು ಅವಶ್ಯವಾಗಿ ಎಚ್ಚರಪಟ್ಟುಕೊಂಡಿರಬೇಕು. ಗಂಡಸರಿಗೆ ಬರೀ ಎಂಟೇ ಎಂಟು ದಿನ ಮನೆಯನ್ನು ಒಪ್ಪಿಸಿಕೊಟ್ಟು ನೋಡಿರಿ! ಆಗ ಅವರಿಗೆ ಹೆಂಗಸರ ಕೆಲಸ ತಾವು ತಿಳಿದುಕೊಂಡಷ್ಟು ಸುಲಭವಲ್ಲವೆಂಬ ಮಾತು ಗೊತ್ತಾಗುವುದು. ನಾನು ಖಂಡಿತವಾಗಿ ಹೇಳುತ್ತೇನೆ. ಎಂಟುದಿನ ಬೇಡ; ಎರಡೇ ದಿನಗಳಲ್ಲಿ ಅವರು ಸೋತು ಸುಣ್ಣವಾಗಿ ಹೋಗುವರು. ನಿತ್ಯವೂ ಎದ್ದು ಮಾಡಿದ್ದನ್ನೇ ಮಾಡುತ್ತ ಕೂಡುವುದೆಂದರೆ ಅದೇನು ಸಾಧಾರಣ ಕೆಲಸವಲ್ಲ, ಈಗ ಮೊದಲನೆಯವರಾಡಿದ ಮಾತುಗಳ ಬಗ್ಗೆ ವಿಚಾರಮಾಡೋಣ! ಗಂಡಸರಿಗೆ ಅವರ ಹೆಂಡಂದಿರ ಭಾವನೆಗಳ ಕಡೆಗೆ ಸಂಪೂರ್ಣ ದುರ್ಲಕ್ಷ್ಯವಿದ್ದರೆ- ತಮ್ಮ ಹಿತಾಹಿತಗಳ ವಿಚಾರದಲ್ಲಿಯೆ ಅವರು ಮುಳುಗಿ ಹೋಗಿದ್ದರೆ- ಹೆಂಡಂದಿರು ಹೇಳಿದಂತೆ ಕೇಳಿಕೊಂಡು ಹಾಕಿದಷ್ಟು ತಿಂದು ಸುಮ್ಮನೆ ಬಿದ್ದಿರಬೇಕೆಂಬ ದುರಾಗ್ರಹವು ಅವರಿಗಿದ್ದರೆ, ಹೆಂಡಂದಿರು ಎಲ್ಲಿಯವರೆಗೆ ತಾಳಿಕೊಂಡಿರಬೇಕು? ಇದಕ್ಕಾಗಿ ಪ್ರತಿಕಾರವನ್ನವರು ಮಾಡಲಿಕ್ಕೇ ಬೇಕು. ಇಂತಹ ಸಂದರ್ಭದಲ್ಲಿ, ಗಂಡನ ಬಗ್ಗೆ ಹೆಂಡತಿಯ ಮನಸ್ಸಿನಲ್ಲಿ-ತಿಳಿಯದಂತೆಯೆ-ಅಶ್ರದ್ಧೆ ತಲೆದೋರಿದರೆ ಆಶ್ಚರ್ಯಪಡಬೇಕಾದದ್ದೇನೂ ಇಲ್ಲ. ಆದುದರಿಂದ ನನ್ನ ಅಕ್ಕತಂಗಿಯರಲ್ಲಿ ನನ್ನ ಬಿನ್ನಹವಿಷ್ಟಿದೆ-ಅನ್ಯಾಯಕ್ಕೆ ತಡೆಯೊಡ್ಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಬರೀ ಮೆತ್ತಗಾಗಿ ಹೇಡಿತನದಿಂದ ನಡೆಯುವುದರಲ್ಲಿ ಸ್ವಾರಸ್ಯವೇನೂ ಇಲ್ಲ. ಇಲ್ಲಿ ನೆರೆದವರಲ್ಲಿ ಕೆಲವು ಜನರಾದರೂ ತಮ್ಮ ವ್ಯಕ್ತಿತ್ವವನ್ನು ಸಂರಕ್ಷಿಸಿಕೊಳ್ಳುವಂತೆ ಆಚರಿಸತೊಡಗಿದಲ್ಲಿ.. ಅದರಿಂದ ಗಂಡಸರಲ್ಲಿ ಸ್ವಲ್ಪಾದರೂ ಸದ್ಬುದ್ಧಿ ತಲೆದೋರಿದಲ್ಲಿ..ಇಂದಿನ ಈ ಸಭೆಯಿಂದ ಏನಾದರೂ ಕೆಲಸವಾದಂತಾಯಿತೆಂದು ಹೇಳಬಹುದು. ಅಂತಹ ಒಳ್ಳೆಯ ದಿನವನ್ನು ಕಾಣುವ ಯೋಗವು ಬೇಗನೆ ಒದಗಿಬರಲೆಂದು ಆಶಿಸಿ, ಮತ್ತೊಂದು ಸಲ ತಮ್ಮೆಲ್ಲರಿಗೆ ಕೃತಜ್ಞತೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ."

ಅಧ್ಯಕ್ಷರಿಗೆ ಹೂಮಾಲೆ ಹಾಕಿ ಅಭಿನಂದನೆಗಳನ್ನರ್ಪಿಸಿದಮೇಲೆ ಸಭೆಯು ಕೊನೆಗೊಳ್ಳುವುದು.

— o —

ಕಂಡುಂಡ ಮಾತು

ಉಣಿಸುವ ಕೈಗೆ ಕಚ್ಚಿಸಿಕೊಂಬ ಹೆದರಿಕೆಯಿದೆ.

*

ಅವಿವೇಕಿಗಳ ಸ್ವರ್ಗವೆ ವಿವೇಕಿಗಳಿಗೆ ನರಕ.

ಒಲೆಯಲ್ಲಿ ಬಿದ್ದ ಸರಿಯು ಹಳಿಯುವುದು ಒಲೆಯನ್ನು; ತನ್ನನ್ನಲ್ಲ!

*

ತಾನು ದುಃಖಪಟ್ಟು ಅರಿಯದಿದ್ದವನಿಗೆ ಹೆರವರ ದುಃಖದ ಅರಿವು ಬಾರದು.

ಬಡಿಗೆಯ ಭೀತಿ ಒಡನಾಡಿಗಳನ್ನಾಗಿಸದು.

*

ಏಳಿಗೆಯಲ್ಲಿ ಗೆಳೆಯರಿಗೆ ನಮ್ಮ ನೆನಪು ಹೆಚ್ಚು; ಇಳಿಗೆಯಲ್ಲಿ ನಮಗೆ ಅವರ ನೆನಪು ಹೆಚ್ಚು.

ದಿವಂಗತ 'ವಿಜಯ' ಬೆಟಗೇರಿ, ಬಿ.ಎ.,

ಗುಂಡನ ತೊಡಕು

(ಸಣ್ಣ ಕತೆ)

'ಜಗತ್ತು ತೆರೆಮರೆಯ ಹೆಣ್ಣು!'

ತೊಡಕು ಗುಂಡನ ಕೊರಳಿಗೆ ಉರುಲಾಯಿತು! ಗುಂಡನ ಮರಣದಿಂದ ಶಶಿಯು ಶೀನಪ್ಪನಿಗೆ ಹೆಂಡತಿಯಾಗಿಯೆ ಉಳಿಯುವಂತಾಯಿತು!

ಶ್ರೀನಣ್ಣ, ಶೀನಣ್ಣ, ಶೀನಣ್ಣಾ....!

ಸುಮಾರು ಮೂವತ್ತು ವರ್ಷದ ತುಂಬುದೇಹದ ತರುಣನೊಬ್ಬ ಶೀನಪ್ಪನ ಮನೆಯ ಬಾಗಿಲನ್ನು ತಟ್ಟುತ್ತಿದ್ದ. ಶೀನಪ್ಪನದು ಆ ಊರಲ್ಲಿ ದೊಡ್ಡ ಕಪ್ಪಡದಂಗಡಿ. ಅವನ ಮನೆಯ ಬಾಗಿಲು ಯಾವಾಗಲೂ ಮುಂದೆಮಾಡಿರುತ್ತಿದ್ದಿತು. 'ಶೀನಪ್ಪ ಯಾವಾಗಲೂ ಒಳಗೆ' ಎಂದು ಜನರೇನೋ ಆಡಿಕೊಳ್ಳುತ್ತಿದ್ದರೂ, ಅವನನ್ನು ಯಾವಾಗಲೂ ಅಂಗಡಿಯಲ್ಲಿ ಕಾಣಬಹುದಾಗಿದ್ದಿತು. ಹಿರಿಯರಿಂದ ನಡೆದುಬಂದ ಅಂಗಡಿ; ಶೀನಪ್ಪನಿಗೆ ಹೆಂಡತಿಯ ಹೊರತು ಇನ್ನಾರೂ ಇಲ್ಲ. ಎಲ್ಲ ಜವಾಬ್ದಾರಿಯೂ ಅವನ ಮೇಲೆಯೆ.

ಸಾಯಂಕಾಲದ ನಾಲ್ಕುಗಂಟೆಗೆ ಸಮೀಪಿಸಿದ್ದರೂ ಬೇಸಗೆಯ ಬಿಸಿಲು ಉರಿಯುತ್ತಿದ್ದಿತು. ಮನೆಯಿದ್ದ ಬೀದಿಯೇನೋ ಚಿಕ್ಕದಾದರೂ ಮನೆಯು ಭವ್ಯವಾಗಿದ್ದಿತು; ಅಂದವಾಗಿದ್ದಿತು; ಬಾಗಿಲಿಗೆ ಒಳಚಿಲಕ ಹಾಕಿದ್ದರಿಂದ ಬಂದಿದ್ದವನು ಮತ್ತೊಮ್ಮೆ ಕದತಟ್ಟಿ 'ಶೀನಣ್ಣಾ' ಎಂದು ಕೂಗಿ ಕರೆದ.

'ಅವರು ಅಂಗಡಿಗೆ ಹೋಗಿದ್ದಾರೆ; ಯಾಕೆ?..ಯಾರದು?' ಒಳಗಿನಿಂದ ಹೆಣ್ಣುದನಿಯೊಂದು ಕೇಳಿಸಿತು. ಮರುಕ್ಷಣದಲ್ಲಿಯೇ ಬಾಗಿಲು ತೆರೆದು, ತುಂಬುಜವ್ವನೆಯೊಬ್ಬಳು ನಗುತ್ತ ನಿಂತಿದ್ದಳು.

'ಅವರು ಮನೆಯಲ್ಲಿಲ್ಲ; ತಾವು ಅಂಗಡಿಗೇ ಹೋಗಬಹುದು ಬೇಕಾಗಿದ್ದರೆ!' ಎಂದಳು. ಮಾತಿನೊಡನೆ ನಗೆಯು ಹೊಮ್ಮುತ್ತಿದ್ದಿತು. ಅವಳ ನಗೆಯ ನಾದದೊಂದಿಗೆ ಬಾಗಿಲು ಕಿರ್ರೆಂದು ಓರೆಯಾಯಿತು. ಮುಖವು ಮಾತ್ರ ಮರೆಯಾಗಿರಲಿಲ್ಲ.

"ಏನು ಚೇಷ್ಟೆ ಶಶೀ (ಶೀನಪ್ಪನ ಹೆಂಡತಿ)! ಎಷ್ಟು ಕೂಗಬೇಕು ಹಾಗೆಯೆ? ಅಂಗಡಿಗೆ ಏತಕ್ಕೆ ಹೋಗಬೇಕು? ಸರಿ!" ಎಂದು ಬಂದಿದ್ದವನು ಮೃದುವಾಗಿ-ಹಂಚಿಕೆಯಿಂದ ಬಾಗಿಲು ದೂಡಿ ಒಳಗೆ ಸೇರಿದನು. ಬಾಗಿಲು ಮುಚ್ಚಿ ಶಶಿಯನ್ನು ಹಿಂಬಾಲಿಸಿದನು.

ನಡುಮನೆಯಲ್ಲಿ ತೂಗುಮಂಚವೊಂದು. ಶಶಿಯು ತರುಣನನ್ನು ಕೈಹಿಡಿದು ಕುಳ್ಳಿರಿಸಿದಳು. ಸಲುಗೆಯಿಂದ ತಾನೂ ಅವನ ಬಳಿಯಲ್ಲಿಯೆ ಕುಳಿತಳು.

"ಅಲ್ಲ-ಅವರ ಹೆಸರಿನಿಂದೇಕೆ ಕೂಗಿದ್ದು? ಅವರು ಈ ವೇಳೆಯಲ್ಲಿ ಮನೆಯಲ್ಲಿ ಇರುವುದಿಲ್ಲವೆಂಬುದು ಗೊತ್ತಿಲ್ಲ ಪಾಪ!" ಕೊರಳನ್ನು ಕೊಂಕಿಸಿ ಶಶಿ ಅಣಕದಿಂದ ಅವನೆಡೆಗೆ ನೋಡುತ್ತ ಹೇಳಿದಳು. ತುಟಿಯಲ್ಲಿ ನಗೆಯರಳಿದ್ದಿತು, ಕಣ್ಣುಗಳಲ್ಲಿ ಸ್ನೇಹಸಂತೋಷಗಳು ಮಿಂಚುತ್ತಿದ್ದವು, ತರುಣನ ಕೈ ಅವಳ ಕೈಗಳಲ್ಲಿ ಆಟವಾಡುತ್ತಿದ್ದಿತು.

"ಇಲ್ಲ ಹಾಗಾದರೆ ಬೀದಿಯಲ್ಲಿ ನಿಂತುಕೊಂಡು ನಿನ್ನನ್ನು ಕೂಗಲಾ?"

"ಏನಾಯ್ತು! ನೀವೇನು ಮನೆಗೆ ಅಪರಿಚಿತರಲ್ಲವಲ್ಲ! ಅದಕ್ಕೇಕೆ ಅಷ್ಟೊಂದು?"

"ಒಂದುವೇಳೆ ಮನೆಯಲ್ಲಿ ನಿಮ್ಮ ರಾಯರು (ಶೀನಣ್ಣ) ಇದ್ದರೆ ನಿನ್ನನ್ನೇ ಕೂಗುವುದೇ? ಪ್ರಮಾದವಾಗದೇ? ಹುಚ್ಚು!"

"ಅಪ್ತರನ್ನುಳಿದು ಮನೆಗಿನ್ನಾರು ಬರುತ್ತಾರೆ? ನೀವು ನನಗೆ ಹತ್ತಿರದ ಸಂಬಂಧಿಗಳೆಂದು ಯಾರಿಗೆ ಗೊತ್ತಿಲ್ಲವೇನು! ನಿಮಗೆ ಹೆದರಿಕೆಯೇನು? ಅವರು ತಮ್ಮ ವಿಚಾರ ಯಾವಾಗಲೂ ಒಳ್ಳೆಯ ಅಭಿಪ್ರಾಯಪಡುತ್ತಾರೆ 'ನಿಜವಾಗಿಯೂ ಹಸುಗೂಸಿನ ಹೃದಯ ರಂ....'— ತಮ್ಮದು ಹಸುಗೂಸಿನ ಹೃದಯವಂತೆ."

"ರಂ..' ಎಂದು ಅಷ್ಟಕ್ಕೆ ಬಿಟ್ಟೆಯಲ್ಲ; ಏನದು?" ನಗುತ್ತ ಮಾತನಾಡಿದ ಆ ತರುಣ.

"ನಾನು ಮೊದಲು ತಮ್ಮನ್ನು ಕರೆಯುತ್ತಿದ್ದಿಲ್ಲವೇ? ಹಾಗೆ!"

"ಹೂಂ- ರಂಗಣ್ಣ ಎಂದು ಹೇಳಲು- ಅವರಾಡಿದ ಮಾತು ಹೇಳಲು ಏನು ಪ್ರಮಾದವೋ!" ರಂಗಣ್ಣನ ಮುಖವನ್ನು ಅದೇಕೋ ಔದಾಸೀನ್ಯವು ಆವರಿಸತೊಡಗಿದ್ದಿತು 'ಹುಚ್ಚಿ' ಎಂದು ಶಶಿಯ ಕೈಗೆ ತನ್ನ ಬೆರಳಿನ ಹಿಂಬದಿಯಿಂದ ಮೃದುವಾದ ಏಟು ಕೊಟ್ಟ.

"ಅಂತೂ ನಿಮ್ಮ ಅವರ ಗೆಳೆತನ- ಪ್ರೀತಿ ಭದ್ರವಾಗಿವೆ." ಚೇಷ್ಟೆ-ತಿರಸ್ಕಾರಗಳು ಬೆರೆತ ದನಿಯಲ್ಲಿ ಶಶಿ ಹೇಳಿದಳು. ಶ್ರೀನಪ್ಪನ ಅಭಿಪ್ರಾಯದ ವಿಚಾರದಲ್ಲಿ, ಶಶಿಯಾಡಿದ ಮಾತನ್ನು ಕೇಳಿ ಮೂಡುತ್ತಿದ್ದ ಔದಾಸೀನ್ಯವು ರಂಗಣ್ಣನ ಮುಖದಲ್ಲಿ ಹರಡಿಕೊಂಡಿತು.

'ಅದೇನು ಹಾಗೆ? ಮಾತನಾಡುವುದಿಲ್ಲವೇ? ಅವರಿಗೆ **ತಮ್ಮನ್ನು ನೋಡಿದರೆ ಕಳೆದುಕೊಂಡ ತಮ್ಮನ ನೆನಪಾಗುವುದಂತೆ!**

ತಮ್ಮ ಜತೆಗೆ ಮಾತನಾಡುತ್ತಿದ್ದರೆ ಮನಸ್ಸಿಗೆ ಶಾಂತಿಯಂತೆ! ಏನೇನೋ ಹೇಳುತ್ತಿರುವರು, ಅಂತೂ ನಿಮ್ಮಲ್ಲಿ ಜನರ ಮನವನ್ನು ಸೆಳೆಯುವ ಕಲೆ ವಿಶೇಷ; ಅಲ್ಲವೇ?' ನಗುತ್ತ ನುಡಿದಳು ಶಶಿ. ರಂಗಣ್ಣನ ಕಣ್ಣುಗಳು ಆರ್ದ್ರವಾದುವು; ನಿಧಾನವಾಗಿ ಕೇಳಿದನು: 'ನೀನೇನು ಹೇಳುವೆ ಆಗ?'

"ನಾನೇನು ಹೇಳುವುದು? ಮನಸಿನಲ್ಲೇ ನಕ್ಕು ಸುಮ್ಮನಿರುತ್ತಿದ್ದೆ, ಅಷ್ಟೇ! ಅವರ ಮಾತುಗಳಿಗೆ ಉತ್ತರಕೊಡಲು ನನಗೆ ಬೇಸರ. ಇರಲಿ, ನೀವು ಇಷ್ಟೊಂದು ಅನುಕೂಲ ಪರಿಸ್ಥಿತಿಯಲ್ಲಿ ಹೆದರಿಕೊಂಡಿರುವುದೇಕೆ?"

ರಂಗಣ್ಣನಿಂದ ಮಾತಿಲ್ಲ; ಸುಮ್ಮನೆ ಕುಳಿತಿದ್ದನು. ಮತ್ತೆ ಅವಳೇ ಮಾತನಾಡಿದಳು.

"ಇದೀಗ ಹೋದರು ಅಂಗಡಿಗೆ; ಬರೀ ಅಂಗಡಿಯ ಹುಚ್ಚು ಅವರಿಗೆ! ಈ ಹುಚ್ಚು ಹೆಚ್ಚಾಗಬೇಕೋ? ಕಡಮೆಯಾಗಬೇಕೋ?" ನಗೆ, ಸಲುಗೆ, ಆಸೆಗಳಿಂದ ಮುಖವು ಮಧ್ಯದಲ್ಲಿ ಮುದುಡಿದ್ದಿತು. ಹತ್ತಿರವಿದ್ದರೂ ಇನ್ನಿಷ್ಟು ಹತ್ತಿರ ಸರಿದಳು. ರಂಗಣ್ಣ ವಿಚಾರಮಗ್ನ!

"ಅದೇನು? ಹೀಗೆ ಕುಳಿತುಬಿಟ್ಟೀರಿ ಈ ದಿನ? ಏನು ಸುಮ್ಮಗಿರುವುದೇಕೆ?"

"ಏನೋ ವಿಚಾರ.. ಹಂ.. ಸ್ವಲ್ಪ ಮನೆಗೆ ಹೋಗಿಬರಲೇ.. ಎಂದು ವಿಚಾರಿಸಿಕೊಂಡೆ".

"ಹೂಂ.. ನಾನು ಬಿಡುವುದಿಲ್ಲ ನಿಮ್ಮನ್ನು; ಚಹದ ವೇಳೆಯಾಗಿದೆ!" ಮಾತಿನೊಡನೆ ಶಶಿಯ ಶರೀರ ರಂಗಣ್ಣನ ಮೇಲೆ ಒರಗಿತು. ಅಟ್ಟದ ಪಾವಟಿಗೆಯ ಸದ್ದು! ದೂರ ಸರಿದುಕೊಂಡರು. ಅಟ್ಟದ ಮೇಲಿಂದ ಗುಂಡ ಇಳಿದು ಬಂದ.

ಗುಂಡ ತಾಯಿ ಇಲ್ಲದ ತಬ್ಬಲಿ. ಹದಿಮೂರು ಹದಿನಾಲ್ಕು ವಯಸ್ಸು. ಇವನು ಶೀನಪ್ಪನ ಚಿಕ್ಕಮ್ಮನ ಮಗಳ ಮಗ; ಸೋದರಳಿಯನೆಂದು ಹೇಳಬಹುದು. ತಮ್ಮ ಕಳೆದುಹೋದಂದಿನಿಂದ ಶೀನಪ್ಪನಿಗೆ ಬಹಳ ಔದಾಸೀನ್ಯ ಬಂದುಬಿಟ್ಟಿತು. ಗುಂಡನನ್ನು ಕರೆದುಕೊಂಡು ಬಂದಿದ್ದ.. 'ಇಂಗ್ಲಿಷ್ ಶಾಲೆ'ಗೆಂದು. ಗುಂಡನ ಪ್ರೇಮಲಸ್ವಭಾವ ಶೀನಪ್ಪನ ಬಗೆಯನ್ನು ಸೆಳೆದುಕೊಂಡು ಬಿಟ್ಟಿತ್ತು.

"ಯಾರು? ಗುಂಡಾ, ಸ್ಟೋವ್ವು ಹೊತ್ತಿಸು ಸ್ವಲ್ಪ" ಶಶಿ ಹೇಳಿದಳು. ಗುಂಡನ ಮುಖ ಹುಚ್ಚು ಹೆಚ್ಚಾಯಿತು. ಏನೂ ಮಾತನಾಡದೆ ಅಡುಗೆಯಮನೆಗೆ ಹೋಗಿ ಸ್ಟೋವ್ವು ಹೊತ್ತಿಸುವುದರಲ್ಲಿ ತೊಡಗಿದ.

ಮುಂಚಿನಿಂದಲೂ ಶಶಿಯ ನಡೆವಳಿಕೆಯ ಬಗ್ಗೆ ಗುಂಡನಿಗೆ ಬೇಸರು. ಶಶಿ-ರಂಗಣ್ಣರ ನೋಟ ಈಗ ಅವನ ಕರುಳುಕೊರೆಯಿತು. ಈ ಮೊದಲು ಅವನಿಗೆ ಎಲ್ಲ ಮಾತು ಗೊತ್ತಿದ್ದರೂ ಮಾವನಿಗಾಗಿ ಮರುಕಪಡುವುದೊಂದೇ ಕೆಲಸವಾಗಿದ್ದಿತು. ಶಶಿಯ ವಿರುದ್ಧವಾಗಿ ದೂರು ಹೇಳುವುದು ಸಾಧ್ಯವೇ? ಅವಳ ಬೇಡವಾಗಿ ಅವನು ಮನೆಯಲ್ಲಿರುವುದೇ? ಶಶಿಗೂ ಈ ವಿಚಾರ ಗೊತ್ತಾಗಿ ಹೋಗಿದ್ದಿತೇನೋ! ಅಂತೆಯೇ ಅವಳು ಗುಂಡನನ್ನು ಗಣನೆಗೆ ತಾರದೇ ರಂಗಣ್ಣನ ಜತೆಗೆ ಸ್ವೈರವಾಗಿ ವ್ಯವಹರಿಸುವಳು. ಗುಂಡನ ಸಹನೆ ಮೀರುವುದರಲ್ಲಿದ್ದಿತು. ಶೀನಪ್ಪ ಮನೆಗೆ ಬಂದ ಮೇಲೆ ಆಗುವ ಬದಲಾವಣೆ ನೋಡಿ ಗುಂಡ ಹುಚ್ಚನಾಗಿ ಹೋಗುವನು. ಆವರ ಮೋಸದ ರೀತಿ ಗುಂಡನನ್ನು ರೇಗಿಸಿ ರೇಗಿಸಿ ಹಣ್ಣು ಮಾಡಿದ್ದಿತು. ಶೀನಪ್ಪನೊಡನೆ ಆತ್ಮೀಯನಾಗಿ ಮಾತನಾಡುತ್ತಿದ್ದ ರಂಗಣ್ಣನೂ, ವಿನಯಶೀಲೆಯಾಗಿ ವರ್ತಿಸುತ್ತಿದ್ದ ಹೆಂಡತಿ ಶಶಿಯೂ ಗುಂಡನ ಕೋಪವನ್ನು – ಅಲ್ಲಲ್ಲ – ಕೋಪದ ನಿರುಪಯುಕ್ತತೆಯಿಂದಾಗುತ್ತಿದ್ದ ಕೊರಗನ್ನು ಹೆಚ್ಚಿಸುವರು. 'ನಿರಪರಾಧಿಯಾದ, ಸಂಪಿಗೆಯ ಪ್ರಾಣಿ ಮಾವನಿಗೆ ಅದೆಷ್ಟು ಮೋಸ' ಎಂದು ಅವನ ಚಡಪಡಿಕೆ. ಇವರಿಬ್ಬರಗೆಯ ವರ್ತನದ ಘೋರತೆಯು ಅವನ ಕಣ್ಮುಂದೆ ತಾಂಡವವಾಡುವುದು.

ಮಾತಿನೊಡನೆ ಶಶಿಯ ಶರೀರ ರಂಗಣ್ಣನ ಮೇಲೆ ಒರಗಿತು. ಅಟ್ಟದ ಪಾವಟಿಗೆಯ ಸದ್ದು! ದೂರ ಸರಿದುಕೊಂಡರು.

‘ಜಯಂತಿ’ಯ ಲೇಖಕರಿಗೆ:

(೧) ಜಯಂತಿಗೆಂದು ಬರಲಿರುವ ಪ್ರತಿಯೊಂದು ಲೇಖನವೂ ಪಂಡಿತ-ಪಾಮರರಿಬ್ಬರ ಮನಸ್ಸನ್ನೂ ಸೆಳೆದುಕೊಳ್ಳುವಂತಹ ವಿಷಯಗೌರವದಿಂದ ಕೂಡಿದ್ದು, ಜನಸಾಮಾನ್ಯರಿಗೆ ತಿಳಿಯುವಂತೆ ಭಾಷೆ, ಶೈಲಿಗಳು ಸರಲವೂ ಸುಲಭವೂ ಇರಬೇಕು.

(೨) ಯಾವುದೇ ಲೇಖನವು ಜಯಂತಿಯ ಮೂರು-ನಾಲ್ಕು ಪುಟಗಳನ್ನು ಮಿಕ್ಕಿ ಇರಲಾಗದು. ಜಯಂತಿಯ ಒಂದು ಪುಟದಲ್ಲಿ ಸುಮಾರು ನಾನೂರರಷ್ಟು ಶಬ್ದಗಳು ಕೂಡುವವು. ಈ ಪ್ರಮಾಣವನ್ನರಿತು ಲೇಖಕರು ತಮ್ಮ ಲೇಖನಗಳನ್ನು ಅನುಗೊಳಿಸಬೇಕು. ಉದ್ದುದ್ದ ಕವನಗಳಿಗಿಂತ ಸಣ್ಣ ಸಣ್ಣ ಭಾವಗೀತಗಳಿದ್ದರೆ ಹೆಚ್ಚು ಒಳ್ಳೆಯದು.

(೩) ತಮ್ಮ ಲೇಖನವು ಅಚ್ಚಾಗಬೇಕಾದುದೆಂಬುದನ್ನು ಪ್ರತಿಯೊಬ್ಬ ಲೇಖಕರೂ ಲಕ್ಷ್ಯದಲ್ಲಿಟ್ಟುಕೊಂಡಿರಬೇಕಾದುದು ಅತ್ಯಗತ್ಯ. ಅದಕ್ಕಾಗಿ ಅಚ್ಚಿಗೆ ತೊಂದರೆಯಾಗದಂತೆ, ಬರೆಯುವ ಹಾಳೆಗಳಿಗೆ ಸಾಕಷ್ಟು ಬದಿಯಿಂಬು (Margin) ಬಿಟ್ಟು, ಸ್ಫುಟವಾದ ಅಕ್ಷರಗಳಿಂದ ಒಂದೇ ಮಗ್ಗುಲು ಬರೆಯಬೇಕು.

(೪) ಯಾವುದೇ ಪರಭಾಷೆಯ ಲೇಖನದ ಅನುವಾದ ಇಲ್ಲವೆ ಭಾಷಾಂತರವಿದ್ದಲ್ಲಿ ಆ ಮಾತನ್ನು ಸ್ಪಷ್ಟೀಕರಿಸುವುದಕ್ಕೆ ಮರೆಯಲಾಗದು.

(೫) ಜಯಂತಿಗೆಂದು ಬರುವ ಲೇಖನಗಳು ಆ ಮೊದಲು ಇನ್ನೆಲ್ಲಿಯೂ ಅಚ್ಚಾಗಿರಬಾರದು. ಮುಂದೆ ಅಚ್ಚಾಗಬೇಕಾದರೆ ನಮ್ಮ ಸಮ್ಮತಿ ಕೇಳಿಕೊಳ್ಳಬೇಕು.

(೬) ತಮ್ಮ ಲೇಖನಗಳಲ್ಲಿ ಚಿತ್ರಗಳನ್ನು ಬಯಸುವವರು, ಸಾಧ್ಯವಿದ್ದಲ್ಲಿ ಯುಕ್ತವಾದ ಚಿತ್ರಗಳನ್ನು ಯಾರಿಂದಾದರೂ ಬರೆಯಿಸಿ ಲೇಖನದ ಜೊತೆಗೆ ಕಳುಹಿಸಬಹುದು. ಒಪ್ಪಿಗೆಯೆನಿಸಿದರೆ ಅವುಗಳ ಪಡಿಯಚ್ಚನ್ನು ನಾವೇ ಮಾಡಿಸುವೆವು.

(೭) ತಮ್ಮ ಲೇಖನವು ಸ್ವೀಕೃತ-ಅಸ್ವೀಕೃತ ಎಂಬುದನ್ನು ಕೂಡಲೆ ತಿಳಿದುಕೊಳ್ಳಲಪೇಕ್ಷಿಸುವವರು ಲೇಖನದ ಜೊತೆಗೆ ಮುಕ್ಕಾಲಾಣೆಯ ಅಂಚೆಯ ಟಿಕೀಟುಗಳನ್ನಿಟ್ಟಿರಬೇಕು.

(೮) ಅಸ್ವೀಕೃತ ಲೇಖನಗಳನ್ನು ಮರಳಿ ಬಯಸುವವರು ಅದಕ್ಕೆ ತಗಲುವ ಅಂಚೆಯ ಟಿಕೀಟುಗಳನ್ನು ಕಳುಹಬೇಕು. ಅಚ್ಚಾದ ಲೇಖನಗಳ ಮೂಲಪ್ರತಿಗಳನ್ನು ಮರಳಿ ಅಪೇಕ್ಷಿಸುವವರು ಮೊದಲೆ ನಮಗೆ ಬರೆದು ತಿಳಿಸಿರಬೇಕು.

ಸಂಪಾದಕ: ‘ಜಯಂತಿ’ ಧಾರವಾಡ.

ಗುಂಡನ ತಲೆಯಲ್ಲಿ ವಿಚಾರ:—‘ಅಪ್ಪನಂತೆ’ ಎಂತಹ ಅಪ್ಪ! ಮಾವ ನಿಲ್ಲದ ವೇಳೆಯಲ್ಲಿ.... ಅಯ್ಯೋ ಮೂರ್ಖ! ಮಾವನಿಗೆ ಇದೆಲ್ಲ ತಿಳಿದರೆ ಗೊತ್ತಾಗುತ್ತದೆ! ಮಾವನಿಗೆ ತಿಳಿದರೆ ಏನಾಗಬಹುದು? ಹೆಂಡತಿಯನ್ನು ಹೊಡೆದು ಹಾಕಿಬಿಡಬಹುದು. ಆ ಸೂ... ರಂಗನಿಗೇನು? ಮಾವನ ಸಂಬಳಗೆಯ ಹುಚ್ಚು ಅಕ್ಕನನ್ನು ಮರುಕಗೊಳಿಸುವುದಿಲ್ಲವೇ? (ಶಶಿಗೆ ಗುಂಡ ‘ಅಕ್ಕಾ’ ಎಂದು ಕರೆಯುತ್ತಿದ್ದನು ಅಷ್ಟೆ. ಅವನು ಅವಳ ತಮ್ಮನಲ್ಲ.) ಅವಳು ಕಲ್ಲೆದೆಯವಳು. ಗಂಡನೊಡನೆ ಮಾತನಾಡಲು ಅವಳಿಗೆ ಬೇಸರವಂತೆ! ಈ ಮಂಗನ ಕೂಡ..! ಅಪ್ಪರೊಳಗಿ ವನನಾದುದರಿಂದ ರಂಗನ ಜತೆಗೆ ಮದುವೆಯಾಗಲು ಬರಲಿಲ್ಲವಂತೆ. ಮಾವನೊಡನೆ ಅವಳ ದೇಹದ ಮದುವೆಯಾಯಿತಂತೆ! ಅಕ್ಕಾ, ನೀನು ರಾಕ್ಷಸಿ! ಮದುವೆಯೇತಕ್ಕೆ? ಇದು ಅಸಾಧ್ಯ ಎಂದು ಕೊರಗುವುದಾದರೂ ಏತಕ್ಕೆ? ಸುಖವಾಗಿರುವೆನಲ್ಲ?’— ಆ ಮಂಗನ ಮಾತು. ಅದಕ್ಕೆ ಈ ರಕ್ಕಸಿಯ ನಗೆ, ನನ್ನ ಕಿವಿಯನ್ನು ಚುಚ್ಚಿ ಚುಚ್ಚಿ ತೆಗೆಯಿತು.”

“ನಾನು ಸಣ್ಣ ಕೂಸೆಂದು ಅವರ ಅನಿಸಿಕೆಯೋ? ನೋಡಬಾರದ ನೋಟವನ್ನು ನೋಡಿಯಾಯಿತು; ಕೇಳಲಾಗದವುಗಳನ್ನು ಮೊದಲಿನಿಂದಲೂ ಕೇಳಿ ಕಿವಿಯೊಡೆಯುವಂತಾಯಿತು. ನನಗೆ ಸಹನೆಯಾಗದು. ಮೊದಲಿನಿಂದಲೂ ನನ್ನನ್ನು ಪ್ರೀತಿಸುತ್ತಿದ್ದಳು ಅಕ್ಕ. ಅವಳ ಪ್ರೀತಿ ಈಗ ನನಗೆ ಬೇಸರವಾಗಿದೆ. ಅವಳು ನನ್ನೊಡನೆ ಮಿದುವಾಗಿ ಮಾತನಾಡುವಳು; ನನಗೆ ಹೇಸಿಕೆಯನಿಸುವುದು. ಅವಳ ಕೈಯುಣಿಸುಗಳು ರುಚಿಯಾಗಿದ್ದರೂ ಈ ಮೋಸಗಾರಿಕೆಯಿಂದ ನನ್ನ ನಾಲಗೆಯೇ ಕಹಿಯಾಗಿರುವುದೇನೋ;— ಊಟದಲ್ಲಿ ಸೊಗಸಿಲ್ಲ; ಶಾಲೆಗೆ ಹೋದಾಗಮಾತ್ರ ನನು ಸಮಾಧಾನ!”

“ಮನೆಯಲ್ಲಿ ಮಾವ ನಗುತ್ತಲಿರುವನು. ಮನೆಯಲ್ಲಿ ಏನು ಮಾಡಿದರೂ ಆ ಮಂಗನಿಗೆ ಔತಣ. ಅವನನ್ನು ದಿನದಲ್ಲಿ ಒಮ್ಮೆಯಾದರೂ ಕಾಣುವುದು ಮಾವನ ಚಟ. ಅಯ್ಯೋ ಮಾವ, ಹುಸಿ ಸ್ನೇಹದಲ್ಲಿ ಹುಗಿದುಕೊಂಡಿರುವ ಈ ಕೊಳೆ – ಮೋಸ ಇವುಗಳ ಕಲ್ಪನೆಯು ನಿನಗೆ ಸ್ವಲ್ಪವೂ ಬಾರದೇ? ನನಗೆ ಮನೆಯಲ್ಲಿ ಧೂಳ ತುಂಬಿದಂತೆ ಎನಿಸುವುದು. ಏನಾದರೂ ನೆವಮಾಡಿ ಹೊರಗೆ ಹೋದೆನೆಂದರೆ ಒಂದು ಬಗೆಯ ನೆಮ್ಮದಿ. ಮಾವನಿಗೆ ಬರೀ ಎರಡು ಹೊತ್ತು ಊಟ. ಈ ರಾಕ್ಷಸನಿಗೆ ತಿಂಡಿಯ ಸಂಭ್ರಮ. ಮಾವ ಅಂಗಡಿಯಲ್ಲಿ; ಈ ಮಂಗ ಮನೆಯಲ್ಲಿ! ದುಡಿದು ತರುವವನು ಮಾವ; ಆನಂದದಲ್ಲಿ ಬೊಬ್ಬೆ ಹೊಡೆಯುವವರು ಈ ಘಾಜೀಲರು. ಅಯ್ಯೋ—ಮಾವನ ದೈವವೇ!....”

“ಏ ಗುಂಡಾ ಸ್ವಲ್ಪ ಕಡ್ಡೀಪೆಟಿಗೀ ತಾ ಇಲ್ಲಿ”. ನಡುಮನೆಯಿಂದ ರಂಗಣ್ಣ ಕೂಗಿ ಹೇಳಿದ. ಗುಂಡನಿಗೆ ರೇಗಿಹೋಯಿತು. ಪಾಪ ಅಸಹಾಯನಾದ ಅವನ ಕೋಪ ಆಗಾಗ ದುಃಖವಾಗಿ ಕಣ್ಣುಗಳಲ್ಲಿ ಹರಿಯುತ್ತಿತ್ತು. ಹಲ್ಲು ಕಡಿದ. ‘ಈ ಸೂ..ನ ಸೇವೆ ಮತ್ತೆ! ಕೊಡಬಾರದು’ ಎಂದುಕೊಂಡ. ಸುಮ್ಮಗೆ ಕುಳಿತ. ಧೈರ್ಯ ಸಾಲಲಿಲ್ಲ. ಮುಂಗಾಣದವನಾಗಿ– ‘ಅಕ್ಕಾ

ಜಯಂತಿಯಲ್ಲಿ ಜಾಹೀರಾತು ಕೊಟ್ಟರೆ ಜನರಿಗೆ ವಿಶ್ವಾಸದ ಸರಕು ಎನಿಸುವದು.

ಸ್ಟೋವ್ನ್ನು ಹೊತ್ತಿಸಿದ್ದೇನೆ' ಎನ್ನುತ್ತ ನಡುಮನೆಗೆ ಬಂದ. ಕೈಯಲ್ಲಿಯ ಕಡ್ಡಿಯಪೆಟ್ಟಿಗೆ ರಂಗಣ್ಣನ ಮುಂದೆ ಬಿದ್ದಿತು. ಶಶಿಯು ಅಡುಗೆಯ ಮನೆಯೊಳಕ್ಕೆ ಹೋದಳು. ಸಿಗರೇಟನ್ನು ಎಳೆಯುತ್ತ ರಂಗಣ್ಣ ಹೇಳಿದ.

"ಗುಂಡಾ, ಸ್ಕೂಲಿಗೆ ನಡೆದುಕೊಂಡೇ ಹೋಗುತ್ತೀಯೇನೋ! ಪಾಪ. . ನಿನಗೊಂದು 'ಬೆಸ್ಟ್ ಬೈಸಿಕಲ್' ತರಿಸಿಕೊಡತೇನೆ. ಅಂ!" ಗುಂಡನಿಗೆ ಅಲ್ಲಿ ನಿಲ್ಲುವುದಾಗಲಿಲ್ಲ. ಒಮ್ಮೆಲೆ ಅಟ್ಟವನ್ನೇರಿ ಹೋದ. ಅವನಿಗೆ ಸಮಾಧಾನವಿಲ್ಲ. ಎಷ್ಟು ಸಮಾಧಾನ ಮಾಡಿಕೊಂಡರೂ ಹೊಟ್ಟೆಯುರಿ ಹೆಚ್ಚಾಯಿತು. ಈಝೀಚೇರೊಂದರ ಮೇಲೆ ಬಿದ್ದುಕೊಂಡ. ಅವನ ಮುಂದೆ ದೊಡ್ಡದೊಂದು ತೊಡಕು.

* * * *

"ನಿಮ್ಮ ಹೊಗೀ ಕುಡಿಯೋದು ಬಿಟ್ಟು ಸ್ವಲ್ಪ ಚಹ ಕುಡೀಲಿಕ್ಕೆ ಬರ್‍ರೀರಾ? ಸುಡುಗಾಡು ಸಿಗರೇಟುಗಳು ಎಂದು ಸುಟ್ಟು ಹೋಗುವವೋ!" ಸಲುಗೆಯ ರೋಷದ ದನಿಯಲ್ಲಿ ಶಶಿ ಎಂದಳು.

"ಹೌದು ಶಶೀ, ಅವನ್ನು ಬೇಗನೆ ಸುಟ್ಟುಹಾಕಬೇಕೆಂಬೇ ಪ್ರಯತ್ನ!" ನಗೆಯಾಡುತ್ತ ರಂಗಣ್ಣ ಅಡುಗೆಯ ಮನೆ ಸೇರಿದ.

ಗುಂಡನಿಗೆ ಸಮಾಧಾನವಿಲ್ಲ. ಕುರ್ಚಿಯಿಂದೆದ್ದ. ಹೊರಗೆ ಹೋಗುವ ಡ್ರೆಸ್ಸು ಮಾಡಿಕೊಂಡ. ಅವನಿಗೆ ಹೊರಗೆ ಹೋಗುವದು ಬೇಡವಾಯಿತು. ತೊಡಿಗೆಗಳನ್ನು ಕಳೆದೊಗೆದ. ಶಶಿಯ ನಗೆಯು ಅವನ ಕಿವಿಗೆ ತಗುಲಿತು. ಎದ್ದು ಅದೇನು ಎಂದು ಕೇಳತೊಡಗಿದ.

"ಇನ್ನೂ ಹಾಗೆಯೇ ಕುಳಿತಿದ್ದೀರಲ್ಲ? ಏನು ಚಿಂತೆ?"

"ಏನೂ ಇಲ್ಲ ಬಿಡು ಶಶೀ; ಇದ್ದರೂ ಅದು ನಿನಗೆ ಸಮ್ಮಂಧಿಸಿದುದಲ್ಲ!"

"ಅದೇನು? ಹೇಳಲೂ ಬಾರದೇ?" ದನಿಯಲ್ಲಿ ತುಂಬ ದೈನ್ಯ.

"ಶಶೀ, ಸೊಟ್ಟಮಾತಿಗಾಗಿ ನಿನಗೇನು ಹೇಳುವುದು! ನೀನು ಅಸಹಾಯಳು ಈ ವಿಷಯದಲ್ಲಿ!"

"ಯಾವ ವಿಷಯ ಹೇಳಬಾರದೇ, ಅದೆಷ್ಟು ಛಲಿಸುವುದು!" ದನಿಯಲ್ಲಿ ಅಳುವು ಬೆರೆತಿತ್ತು.

"ಚೇಷ್ಟೆ ಮಾಡಿದೆ, ನನಗೇನೂ ಆಗಿಲ್ಲ!"

"ಇಲ್ಲ; ನೀವು ದಿನದಂತೆ ಇಲ್ಲ. ನನ್ನ ಕೊರಳಾಣೆ, ಹೇಳಿಯೇ ತೀರಬೇಕು."

"ಕಷ್ಟಕ್ಕಿಟ್ಟಿತಲ್ಲ! ಶಶೀ ಇಲ್ಲಿ ಕೇಳು; ಮತ್ತೇನಿಲ್ಲ, ನಿರುದ್ಯೋಗದ ಚಿಂತೆ! ಅದರಲ್ಲಿಯೂ ಈ ಹೊತ್ತು ಐವತ್ತು ರೂಪಾಯಿಗಳನ್ನು ಒಬ್ಬರಿಗೆ ಕೊಡಲೇ ಬೇಕಾಗಿದೆ. ಮಾನಹಾನಿಯ ಪ್ರಸಂಗ– ಹೇಗಾದರೂ ಮಾಡಬಹುದು ಶಶೀ, ನಿನಗೇಕೆ ಆ ಚಿಂತೆ?"

"ಅಯ್ಯೊ ಇಷ್ಟೇಯೊ? ನನ್ನ ಹತ್ತರ ಇದೆ? ನಾನು ತಮಗೆ ಕೊಟ್ಟುಬಿಡುವೆನು." ಮಾತಿನೊಡನೆಯೆ ನಡುಮನೆಯಲ್ಲಿಯ ಟ್ರಂಕಿನೊಳಗಿಂದ ಐದು ನೋಟುಗಳನ್ನು ತಂದು ಶಶಿ ಅವನ ಕೈಯಲ್ಲಿಟ್ಟಳು.

"ಆಯಿತೆ? ನಾನು ಆ ಮುಖ ನೋಡಲಾರದವಳಾಗಿದ್ದೆ!"

"ನಿನ್ನ ಗಂಡನಿಗೆ ತಿಳಿಯುವುದಿಲ್ಲವೇ?" ರಂಗಣ್ಣನ ಪ್ರಶ್ನೆ.

"ಅಯ್ಯೊ! ಇದು ನನ್ನ ಹತ್ತರವಿದ್ದುದು, ಅವರಿಗೆ ಗೊತ್ತಿಲ್ಲ. ಅದಕ್ಕೇಕಿಷ್ಟು ಹೆದರಿಕೆ?"

ರಂಗಣ್ಣನ ಮುಖದಲ್ಲಿ ನಗೆಯ ಮಿಂಚು ಮೂಡಿತು. ಔದಾ- ಸೀನ್ಯಕ್ಕೆ ಇನ್ನೇನು ಎಡೆ? ಶಶಿಯನ್ನು ನೆಳೆದಪ್ಪಿದ. ಶಶಿಯ ಸಂತೋಷವೂ ಮುಖದಲ್ಲಿ ಮಿಂಚಿ, ಎದೆಯಲ್ಲಿ ಗುಡುಗಿ, ಕಣ್ಣುಗಳಿಂದ ಹನಿಯತೊಡಗಿತು.

"ನನ್ನ ಸಲುವಾಗಿ ನಿನಗೆಷ್ಟು ಶಶೀ? ನೀನು ನನ್ನವಳೇ ಆಗಿದ್ದರೆ–ಇದ್ದೇ ಇರುತ್ತೀಯೆ!" ಅರೆತೆರೆದ [illegible]ಗಳು ರಂಗಣ್ಣನ ಮುಖದಲ್ಲಿ ನೆಲೆಸಿದ್ದವು ಮಾತ್ರ. ಮಾತು ಬರಲಿಲ್ಲ. ರಂಗಣ್ಣ ಶಶಿಯ ಮುಖವನ್ನು ಮೇಲೆತ್ತಿದ.

"ಐವತ್ತು ಸಾಕೇ ಸೈಕಲ್ಲಿಗೆ?" ಗುಂಡ ಒಮ್ಮೆಲೆ ಬಂದ. ಅವನ ಮುಖ ರೊಚ್ಚಿನಿಂದ ರಕ್ತದ ಬಣ್ಣಕ್ಕೆಳೆದಿದ್ದಿತು. ಪೆಚ್ಚು ಮೊಗದವರಾಗಿ ಇಬ್ಬರೂ ದೂರ ಸರಿದುಕೊಂಡರು. "ಅಕ್ಕ, ನನಗೆ ಸಹನೆಮೀರಿತು, ಮಾವನಿಗೆ ಹೇಳಿಬಿಡುತ್ತೇನೆ. ನಿಮಗೆ ಹುಚ್ಚು ಹಿಡಿದಿದೆ. ಅದು ಮಾವನನ್ನು ಹಾಳುಮಾಡಿ ಕೊಲ್ಲುವುದು.. ಹಗಲುಗಳ್ಳ!" ಗುಂಡನಿಗೆ ಆವೇಶಬಂದಂತಾಯಿತು. ಅವನಿಗೆ ರಂಗಣ್ಣನು ನೊರಜಿನಷ್ಟು ಕೀಳಾಗಿ ಕಾಣಿಸಿಕೊಂಡನು. "ಈ ಬಡಾಯಿಬಂಟ ನನಗೆ ಸೈಕಲ್ಲಿನ ಆಸೆ ಹಚ್ಚಿ··ಬಿಕ್ಕೆಬೇಡು!" ರಂಗಣ್ಣನನ್ನು ಹರಿದುತಿನ್ನುವಂತೆ ಬಿರುಗಣ್ಣಿನಿಂದ ನೋಡಿದ.

ಛಟ್ಟೆಂದು ಗುಂಡನ ಕೆನ್ನೆಗೊಂದು ಏಟು. "ನಾಯಿ, ನಿನಗೆ ಎಷ್ಟ್ಟೋ ಮಾತು? ಸಲುಗೆ ಬಹಳವಾಯಿತು!" ಶಶಿಯು ಕಿಡಿಕಿಡಿಯಾಗಿ ಮತ್ತೆ ಎರಡೇಟು ಹೊಡೆದಳು. ಗುಂಡನಿಗೆ ಅಳುವು ಬಂದುಬಿಟ್ಟಿತು. ರಂಗಣ್ಣನಾದರೋ ಪೆಚ್ಚುಮುಖದವನಾಗಿ ಸುಮ್ಮನೆ ಕುಳಿತಿದ್ದನು. ಗುಂಡ ಒಮ್ಮೆಲೇ ಹೊರಟು ನಡೆದ. ಮನೆಯಲ್ಲಿ ನಿಲ್ಲುವುದಾಗ್ಗದೆ ಕೋಟುಹಾಕಿಕೊಂಡು ಹೊರಗೆ ಹೋಗಿಬಿಟ್ಟ.

ಅಡುಗೆಯ ಮನೆಯಲ್ಲಿ ಪಿಸುಮಾತು ಬಹಳಹೊತ್ತು ನಡೆಯಿತು ರಂಗಣ್ಣ ಹೊರಡುವಾಗ ೬॥ ಗಂಟೆಯಾಗಿರಬೇಕು.

* * * *

ರಾತ್ರಿ ೯ ಗಂಟೆಗೆ ಬಂದಿದೆ. ಗುಂಡ ಅಟ್ಟದ ಮೇಲೆ ಸುಮ್ಮನೆ ಬಿದ್ದುಕೊಂಡಿದ್ದಾನೆ. ಅಂಗಡಿಯಿಂದ ಬಂದ ಶೀನಪ್ಪ ಕೆಲ ಸಾಯಂವಿಧಿಗಳನ್ನು ತೀರಿಸಿ ಊಟಕ್ಕೆ ಅಣಿಯಾಗುವುದರಲ್ಲಿದ್ದಾನೆ

ಗುಂಡನಿಗೆ ಬಿದಾಸೀನ್ಯ ಅಶಕ್ತತೆಗಳು ಆವರಿಸಿಬಿಟ್ಟವೆ. ತಲೆಯಲ್ಲಿ ವಿಚಾರಗಳ ತಾಕಲಾಟ. ಮೇಲಿಂದಮೇಲೆ ಶೀನಪ್ಪ-ಶಿ ಇವರ ಚಿತ್ರಗಳು ಕಣ್ಮುಂದೆ ಬಂದು ಸರಿದು ಹೋಗುವವು. ಈ ರೀತಿಯಿಂದ ಇಬ್ಬರೂ ಜತೆಯಾಗಿರುವುದು ಸಾಧ್ಯವೆ? ನಿಜವಾಗಿಯೂ ಅಕ್ಕ ಸತ್ತುಹೋಗಬೇಕು; ಇಲ್ಲ.. ಆ ತುಡುಗ ರಂಗನಾಳಿಯೇ ಸತ್ತುಹೋಗಬೇಕು. ಅದು ಹೇಗೆ?" ಶೀನಪ್ಪ ಊಟಕ್ಕೆ ಕರೆದ. ಗುಂಡ ಕೆಳಗಿಳಿದು ಬಂದ.

"ನನಗೆ ಹಸಿವಿಲ್ಲಂತ ಹೇಳೀನು ಮಾವಾ" ಗುಂಡ ಹೇಳಿದ. ಶೀನಪ್ಪ ಮುಂದೆ ಬಂದು ಗುಂಡನ ಮೈಮುಟ್ಟಿ, "ಇಲ್ಲ ಕಾಯ್ದಿಲ್ಲ; ಮುಖವೇಕೆ ಇಷ್ಟು ಬಾಡಿದೆ? ಅತ್ತಿರುವೆಯೇನು? ಕಣ್ಣುಗಳು ಊದಿಕೊಂಡಿವೆಯಲ್ಲ?" ಎಂದು ಕೇಳುತ್ತಿರುವಾಗಲೆ ಗುಂಡನ ಕಣ್ಣುಗಳಲ್ಲಿ ನೀರುಚಿಮ್ಮಿತು.

"ಯಾಕೋ ಅಳತೀಯಾಕೆ? ಏನಾಯ್ತು? ಶಶೀ ನೀನೇನಾದರೂ ಸಿಟ್ಟುಮಾಡಿದೆಯೇನು?" ಇಬ್ಬರಿಂದಲೂ ಉತ್ತರವಿಲ್ಲ. ಗುಂಡ ಸುಮ್ಮನಾದ. ಶೀನಪ್ಪ ಅವನನ್ನು ಊಟಕ್ಕೆ ಬಳಿಯಲ್ಲಿಯೆ ಕುಳ್ಳಿರಿಸಿಕೊಂಡ.

"ಯಾಕೇ? ಇವನಳುವುದೇಕೆ?" ಶೀನಪ್ಪ ಶಶಿಯನ್ನು ಮತ್ತೊಮ್ಮೆ ಪ್ರಶ್ನಿಸಿದ. ಅವಳು ಗುಂಡನ ಕಡೆಗೊಮ್ಮೆ ನೋಡಿದಂತೆ ಮಾಡಿ, ಶೀನಪ್ಪನ ಮುಖವನ್ನು ನಿಟ್ಟಿಸಿದಳು ಮಾತ್ರ; ಮಾತನೇನೂ ಆಡಲಿಲ್ಲ.

"ಗುಂಡಾ, ನಿನಗೆ ಬೂಟ್ಸು ತಂದಿದ್ದೇನೆ ತಿಳಿಯಿತೇನು? ನಾಳೆ ಅಂಗಡಿಗೆ ಬಾ. ನಿನಗೆ ಸೊಗಸಾದ ಕೋಟು ಪ್ಯಾಂಟು- ಏನು?" ಗುಂಡ ಸುಮ್ಮಗಿದ್ದ. ಅವನಿಗೆ ಶಶಿಯ ಮುಖವನ್ನು ನೋಡುವುದಾಗಲಿಲ್ಲ. ಅವಳು ನೋಡುವುದು ಅವನಿಗೆ ಅಸಹ್ಯವೆನಿಸಿತು. ಊಟವೆಂದರೆ ಬೇಡವಾಯಿತು. ಮಾವನ ಆಗ್ರಹಕ್ಕಾಗಿ ತುತ್ತು ಉಣ್ಣುವಾಗಲೇ ಓಕರಿಕೆ ಬಂದುಬಿಟ್ಟಿತು.

"ತಾಯಿಯ ನೆನಪು ಆಗಿರಬಹುದು ಅಲ್ಲವೇನೋ! ಪಾಪ ಮೊನ್ನೆ ತಾನೇ ಅಲ್ಲವೇ!" ಶೀನಪ್ಪ ಶಶಿಯನ್ನು ಉತ್ತರದ ಅಪೇಕ್ಷೆಯಿಲ್ಲದೆ ವಿಚಾರಿಸಿದನು. ಅವಳ ಕಣ್ಣುಗಳೂ ನೀರಿನಿಂದ ತುಂಬಿದ್ದುವು. ಗುಂಡ ಕೈತೊಳೆದುಕೊಂಡು ಮೇಲೆ ಹೋದ. ಊಟವಾಗಿ ಶೀನಪ್ಪ ಕೈತೊಳೆಯುವುದರಲ್ಲಿಯೇ ರಂಗಣ್ಣ ಬಂದ. ಇಬ್ಬರೂ ಮೊಗಸಾಲೆಯಲ್ಲಿ ಮಾತನಾಡುತ್ತ ಕುಳಿತರು. ಒಳಗೆ ಹೋಗಿಬಂದು ರಂಗಣ್ಣನೇ ಶೀನಪ್ಪನಿಗೆ ವೀಳ್ಯತಂದುಕೊಟ್ಟ.

*　　*　　*　　*

ಗುಂಡ ಕಣ್ಮುಚ್ಚಿ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಾನೆ. ಅವನ ಹಣೆಯ ಮೇಲೆ ತಂಪಾದ ಪದಾರ್ಥ. ಕಣ್ದೆರೆದ; ಶಶಿ; ಗುಂಡನ ತಲೆಯಮೇಲವಳ ಕೈ!

"ಎಷ್ಟು ಕಾಯ್ದಿದೆ ಗುಂಡಾ!" ಹಣೆಯ ಮೇಲೆ ಕೈಯಾಡಿಸಿ ನುಡಿದಳು ಶಶಿ. ಗುಂಡನಿಗೆ ಬೇಸರವೆನಿಸಿತು. ಮೊದಲು ಶಶಿಯ ಮಮತೆಯ ಆನಂದವನ್ನು ಅವನು ಅನುಭವಿಸಿದುದುಂಟು. ಆದರೆ ಈಗ ಅವನ ತಲೆಯೊಡೆಯುವಂತಾಯಿತು. ಕೆಳಗೆ ರಂಗಣ್ಣನ ದನಿಯನ್ನು ಕೇಳಿಯಂತೂ ಅವನಿಗೆ ಮೈಯುರಿದುಹೋಯಿತು ಬಾಯಿಂದ ಏನೇನೋ ಬಡಬಡಿಸಿಬಿಡಬೇಕೆಂದ; ನಾಚಿಕೆಯೆನಿಸಿತು

ಜಾಹೀರಾತಿನ ಸಾಮಾನುಗಳೆ
ಜನರಿಗೆ ಬೇಕಾಗುವ
ಸಾಮಾನುಗಳು.

'ಗುಂಡಾ, ಹೀಗೇಕೆ?' ಶಶಿ ಮಿದುವಾಗಿ ಕೇಳಿದಳು.

'ದಯಮಾಡಿ ನನ್ನನ್ನು ಮಾತನಾಡಿಸಬೇಡ!'

'ನಿನಗಾಗಿ ಕಾಫೀಗೆ ಇಟ್ಟಿರುವೆನು. ಪಾಪ ನೀನು ಊಟವನ್ನು ಕೂಡ ಮಾಡಲಿಲ್ಲ!' ಗುಂಡ ಬೇಡವೆಂದು ಹೇಳಿದರು ಒಳಗೆ ನಡೆದುಬಿಟ್ಟಳು.

ತನ್ನ ಮೇಲೆ ಶಶಿಯ ವಾತ್ಸಲ್ಯವೆಷ್ಟು..ಎಂದು ಗುಂಡನಿಗೆ ಗೊತ್ತು. ಈಗ ಅವನಿಗದು ಬೇಡವಾಗಿತ್ತು. ಗುಂಡ ಹಿಂದಿನ ದಿನಗಳನ್ನು ಕಲ್ಪಿಸಿಕೊಂಡ: "ಆ ರಾಕ್ಷಸ ಬಂದಂದಿನಿಂದ ಅಕ್ಕನ ರೀತಿ ಕೆಟ್ಟುಹೋಗಿದೆ. ಇಲ್ಲವಾದರೆ ಇವಳು ಒಳ್ಳೆಯವಳು ರಂಗನಿಗಾದರೂ ಏಕೆ ಎನ್ನಬೇಕು? ಅವನ ಹುಚ್ಚು ಇವಳಿಗೆ ಹಿಡಿದಿದೆ. ತಪ್ಪು ಇವಳದೇ!"

ಶಶಿಯು ಬಟ್ಟಲಲ್ಲಿ ಕಾಫೀ ಕಾಯಿಸಿ ತಂದಳು. ಗುಂಡನಿಗೆ ಬಹಳ ಬಲವಂತಪಡಿಸಿದಳು. ಎಂದೂ ಇಲ್ಲದಷ್ಟು ಆಗ್ರಹ ಶಶಿಯ ದನಿಯಲ್ಲಿ ನಡುಕ; ಮೈಯಲ್ಲಿ ನಡುಕ. ಹಿಡಿದ ಬಟ್ಟಲ ನಡುಗಿ ಬೀಳುವುದರಲ್ಲಿದ್ದಿತು. ಗುಂಡ ಎದ್ದು ಗಟಗಟನೆ ಕುಡಿದು ಹಾಸಿಗೆಯಲ್ಲಿ ಹೊರಳಿದ.

"ರುಚಿಯಾಗಿಲ್ಲವೇನು? ಮುಖವನ್ನೇಕೆ ಹಾಗೆ ಮಾಡಿದೆ? ಅಯ್ಯೋ ಸಕ್ಕರೆ ಮರೆತೆನೋ ಏನು! ಇನ್ನೊಂದು ಬಟ್ಟಲ ಮಾಡಿಕೊಂಡು ಬರಲೇ" ಶಶಿಯು ಕಳವಳದಿಂದ ಕೇಳಿದಳು ಗುಂಡ ಮಾತನಾಡದೆ ಮುಸುಕುಹಾಕಿಕೊಂಡ. ಅಲ್ಲಿಂದ ಶಶಿ ಒಮ್ಮೆಲೆ ಏಳುವುದಾಗಲಿಲ್ಲ. 'ಗುಂಡಾ' ನಡುಗುತ್ತ ಮತ್ತೊಮ್ಮೆ ಕರೆದಳು. ಗುಂಡ ಮಾತನಾಡಲು ಮನಸ್ಸಿಲ್ಲದೆ ಆ ಕಡೆ ಹೊರಳಿದ ಅವಳ ಮೈಯಲ್ಲಿ ತುಂಬಾ ನಡುಕ. ಪ್ರಯತ್ನಪೂರ್ವಕವಾಗಿ ಎದ್ದು ನಡೆದಳು. ಆದೇಕೋ! ಅಂದು ರಾತ್ರಿ ಶೀನಪ್ಪನ ಮುಂದೆ ಶಶಿ ಮಾತುಮಾತಿಗೆ ಗುಂಡನ ವಿಚಾರ ಮರುಕಪಟ್ಟಳು. 'ಪರದೇಶಿ ಹುಡುಗ' ಎಂದು ಕಣ್ಣೀರುಮಿಡಿದಳು. ಶೀನಪ್ಪ ಅವಳ ಸಾಂತ್ವನ ಮಾಡಬೇಕಾದರೆ ಸಾಕುಬೇಕಾಗಿಹೋಯಿತು.

*　　*　　*　　*

ಬೆಳಗಿನಲ್ಲಿ ಶೀನಪ್ಪ ಗುಂಡನೆಡೆಗೆ ಹೋದಾಗ ಗುಂಡನ ಶವಮಾತ್ರ ನೋಡಿದನಂತೆ. ಪಾಪ! ತೊಡಕು ಗುಂಡನನ್ನು ಬಿಗಿದು ಕೊಂದಿತೇನೊ!

ಅಖಿಲಭಾರತದ ಕನ್ನಡ ಸೇನಾಪತಿ

'ಅಜ್ಞಾತ'

ಅವರಿಂದ

ಡಾ. ಹರಡೀಕರ ನಾರಾಯಣರಾಯರು

**ಮನುಷ್ಯನನ್ನು ಮುಂದಕ್ಕೆ ತರುವುದು
ದೈವವಲ್ಲ, ದುಡ್ಡೂ ಅಲ್ಲ.
ನಿಶ್ಚಲವಾದ ಆದರ್ಶ, ಆ ಆದರ್ಶದ
ಸಾಧನೆಗಾಗಿ ದಣಿವರಿಯದ ದುಡಿತ!
ಇವುಗಳಿಂದಲೆ**

ನರನು ನರಸಿಂಹನಾಗುವನು,
ಆಳು ಆಳುವವನಾಗುವನು.

**ಡಾ. ಹರಡೀಕರರು ಈ ವಿಧಾನಕ್ಕೆ
ಪ್ರತ್ಯಕ್ಷ ಪ್ರಮಾಣರಾಗಿರುವರು.**

ಡಾ. ಹರಡೀಕರರ ಹೆಸರು ಇಂದು ಭರತಖಂಡದ ನಿಟ್ಟುನಿಟ್ಟಿನಲ್ಲಿಯೂ ಮೊಳಗುತ್ತಲಿದೆ. ನಾನು ಎಲ್ಲಕ್ಕೂ ಮೊದಲು ಇವರ ಹೆಸರನ್ನು ಕೇಳಿದಂದು, ನಮ್ಮ ನಾಡಿನವರೊಬ್ಬರು ಅಮೇರಿಕೆಯ ಮೆಡಿಕಲ್ ಕಾಲೇಜೊಂದರ ಪರೀಕ್ಷೆಯಲ್ಲಿ ಒಳ್ಳೆಯರೀತಿಯಿಂದ ಉತ್ತೀರ್ಣರಾದರೆಂಬುದು ತಿಳಿದು, ಆನಂದಾಭಿಮಾನಗಳಿಂದ ಹೊಂಪುಳಿಯೊಂದಿದ್ದೆ. ನನಗೆ ಡಾ. ಹರಡೀಕರರ ಹೆಸರಿನ ಪರಿಚಯ ಮಾಡಿಕೊಟ್ಟುದೆಂದರೆ ಹುಬ್ಬಳ್ಳಿಯ 'ಸಚಿತ್ರಭಾರತ' ಮಾಸ ಪತ್ರಿಕೆಯ ೧೯೧೩ನೆಯ ಇಸ್ವಿಯ ಸಂಚಿಕೆಯೊಂದು. ಡಾಕ್ಟರರು ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಗ್ಗೆ ಸಚಿತ್ರ ಅಭಿನಂದನೆಯನ್ನು ಆ ಸಂಚಿಕೆ ಒಳಗೊಂಡಿದ್ದಿತು. ಹರಡೀಕರರವರ ಅಸ್ತಿತ್ವದ ಕಲ್ಪನೆಯಾದುದು ನನಗೆ ಆ ಸಂಚಿಕೆಯಿಂದಲೆ!

'ಅಬ್ಬಾ! ಕರ್ಣಾಟಕವೆಲ್ಲಿ, ಅಮೇರಿಕೆಯೆಲ್ಲಿ? ಅಲ್ಲಿಗೆ ಕಲಿಯಲಿಕ್ಕೆ ಹೋಗುವವರು ತುಂಬ ಹಣವಂತರಿರಲೇ ಬೇಕು! ಡಾ. ಹರಡೀಕರರೂ ಅಂತಹ ಸಿರಿದೇವಿಯ ಮಕ್ಕಳಲ್ಲಿಯೆ ಒಬ್ಬರಿರಬೇಕು! ಏನೇ ಇರಲಿ, ಕನ್ನಡ ಮಾತನಾಡುವವರೊಬ್ಬರು ದೊಡ್ಡ ಡಾಕ್ಟರಾಗಿ ಬರುತ್ತಾರಲ್ಲ!'

ಅಂದಿನ ನನ್ನ ಎಳೆಯತನದ ಭಾವನೆಯಿದು! ಅಂದಿನವರೆಗೆ ಕನ್ನಡ ಮಾತನಾಡುವ ಡಾಕ್ಟರರನ್ನು ನಾನು ನೋಡಿರಲೇ ಇಲ್ಲ. ಡಾ. ಹರಡೀಕರರು ಸಿರಿವಂತರೆಂದು ಕಲ್ಪಿಸಹುಟ್ಟಿದ ಭಾವನೆಯು, ಅಂದೆಯೇ ನನ್ನ ಮನಸ್ಸಿನ ಮೇಲೆ ಅವರದೊಂದು ಸ್ವರೂಪವನ್ನೂ ಭವಿಷ್ಯತ್ತಿನ ಜೀವನವನ್ನೂ ಒಂದುಬಗೆಯಾಗಿ ಚಿತ್ರಿಸಿಬಿಟ್ಟಿತು.

* * *

೧೯೨೧ ನೆಯ ಇಸ್ವಿಯ ನವ್ಹಂಬರ ಮೂರನೆಯ ವಾರದಲ್ಲಿಯೆ ಇರಬಹುದು. 'ಅಮೇರಿಕೆಯಿಂದ ಮರಳಿಬಂದ ಡಾಕ್ಟರ್ ಹರಡೀಕರರು ಇಲ್ಲಿಗೆ ಬರುವರು' ಎಂದು ಬೆಳಗಾಂವಿಯಲ್ಲಿ ನನಗೆ ಸುದ್ದಿ ಗೊತ್ತಾಯಿತು. ರಾತ್ರಿ ೯ ಗಂಟೆಗೆ "ದರ್ಗಾ" ಬಳಿಯ ಬಯಲಲ್ಲಿ ಅವರ ಉಪನ್ಯಾಸವೆಂಬ ಸಂಗತಿಯೂ ತಿಳಿಯಿತು. ನಾನು ಸಭೆಗೆ ಹೋಗುವುದರಲ್ಲಿಯೆ ವಿಶಾಲವಾದ ಬಯಲೆಲ್ಲ ತುಂಬಿ ಗಜಬಜಿ ನಡೆದಿತ್ತು. ಬೆಳ್ಳನೆಯ ಖಾದಿಯ—ಸ್ವಯಂಸೇವಕರ ರೀತಿಯ ಉಡುಪುತೊಡಪಿನಲ್ಲಿದ್ದ ತೆಳ್ಳನೆಯ ಮನುಷ್ಯನೊಬ್ಬನು ಉಪನ್ಯಾಸಕೊಡುತ್ತಿದ್ದ. ಗ್ಯಾಸಿನ ಬೆಳಕಿನಲ್ಲಿ ಕಣ್ಣುಗಳು ಮಿಂಚುತ್ತಿದ್ದುವು. ಆಡುವ ಮಾತು ವಿದೇಶೀಯವಾದ ಒಂದು ಬಗೆಯ ಎಳೆತದಿಂದ ಕೂಡಿದುದಾಗಿದ್ದರೂ ಅಂತಃಕರಣವನ್ನು ಸೆಳೆದುಕೊಳ್ಳುವಂತಹುದಾಗಿತ್ತು. 'ಯಾರೋ ಇವರು?' ಎಂದೆ. 'ಇವರೇ ಡಾಕ್ಟರ ಹರಡೀಕರರು!' ಎಂದು ಬಳಿಯಲ್ಲಿ ಕುಳಿತಿದ್ದವರು ನುಡಿದರು. ನನಗೆ ತುಂಬ ಆಶ್ಚರ್ಯ. 'ಇವರು ಅಮೇರಿಕೆಯಲ್ಲಿದ್ದು ಬಂದವರೇ?' ಎಂದು ನುಡಿದೆ. ಮೊದಲು ಮಾತನಾಡಿದವರೇ ಹೇಳಿದರು.

"ಮುಂಬಯಿ ಬಂದರ ತಲ್ಪುವವರೆಗೆ ಇವರು ವಿದೇಶೀಯ ಉಡುಪಿನಲ್ಲಿಯೆ ಇದ್ದರಂತೆ. ಅಲ್ಲಿಗೆ ಬಂದೊಡನೆಯೆ ಖಾದೀಧಾರಿಗಳಾದರಂತೆ!"

ನನ್ನ ಮನಸ್ಸಿನಮೇಲೆ ಹಿಂದೊಮ್ಮೆ ಮೂಡಿದ್ದ ಹರಡೀಕರರ ಸ್ವರೂಪದ ಚಿತ್ರವೂ ಭವಿಷ್ಯಜ್ಜೀವನ ಚಿತ್ರವೂ ಅಂದಿನ ಆ ಪ್ರಸಂಗದಿಂದ ಮಾಸಿ ಹೋಗಿಬಿಟ್ಟುವು. ಅಮೇರಿಕೆಯಲ್ಲಿದ್ದು ವಿದ್ಯಾಭ್ಯಾಸ ಮಾಡುವಾಗಿನ ತಮ್ಮ ಅನುಭವವನ್ನು ಡಾಕ್ಟರರು ಅಂದಿನ ಉಪನ್ಯಾಸದಲ್ಲಿ ಹೇಳುತ್ತಿರುವಾಗ, ಅವರು ಸಿರಿವಂತರಲ್ಲವೆಂಬುದು ಗೊತ್ತಾಯಿತು.

ಉಪನ್ಯಾಸ ಮುಗಿದು ಮರಳಿ ಮನೆಗೆ ಬರುವಾಗ, ನನ್ನ ಗೆಳೆಯನ ಪರಿಚಿತರೊಬ್ಬರು ನಮ್ಮ ಜೊತೆಗೆ ಬಂದರು. ಹರಡೀಕರರ ವಿಷಯದಲ್ಲಿ ಹಲವು ಸಂಗತಿಗಳನ್ನು ಅವರು ಬಲ್ಲರೆಂಬ ವಿಷಯ ತಿಳಿಯಿತು. ಅವರಿಗೆ ನನ್ನ ಮೊದಲನೆಯ ಪ್ರಶ್ನೆಯಿದು.

" ಹರಡೀಕರರು ಸಿರಿವಂತರಲ್ಲವೇ ? "

" ಎಲ್ಲಿಯ ಸಿರಿವಂತಿಕೆ ತಂದಿರೀ ! ಪಾಪ! ತಂದೆ ಬರೀ ಐವತ್ತುರೂಪಾಯಿ ಸಂಬಳದ ಕೋರ್ಟಿನ ಕಾರಕೂನರು. ಸಂಸಾರ ದೊಡ್ಡದು ; ಅಲ್ಲದೆ ಡಾಕ್ಟರರು ೭ ವರ್ಷದವರಾಗುವುದರಲ್ಲಿಯೇ ತಂದೆ ತೀರಿಹೋದರು. ತಂದೆ ಕೂಡಿಸಿಟ್ಟ ದುಡ್ಡನ್ನು ಯಾರೋ ಅಪಹರಿಸಿದರು. ಎರಡು ಹೊತ್ತಿನ ಊಟಕ್ಕೂ ಕಷ್ಟವಿದ್ದಿತು. ಶೇವಡೆಯವರ ಮನೆ ಹುಬ್ಬಳ್ಳಿಯಲ್ಲಿ ಇರದಿದ್ದರೆ ಇವರಿಗೆ ಅಲ್ಲಿ ನಿಲ್ಲಲಿಕ್ಕೆ ಸ್ಥಳವು ಕೂಡ ಇರಲಿಲ್ಲ ! "

" ಇಂಥವರು ಅಮೇರಿಕೆಗೆ ಹೇಗೆ ಹೋದರು ? "

" ಹೇಗೆ ಹೋದರೇ .. ? ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇರುವುದಲ್ಲವೆ ? "

" ಅದೆಲ್ಲಾ ಬರೀ ಶಾಸ್ತ್ರದ ಮಾತು ಸರ್ ! ನನಗೂ ಏನೇನೋ ಮಾಡಬೇಕೆಂದು ಮನಸ್ಸಿದೆ ; ಆದರೆ ಮಾರ್ಗವೊಂದೂ ತೋರಲೊಲ್ಲದು ! "

" ಹೀಗೆ ಮಾತನಾಡುವುದೆಂದರೆ ಉತ್ಸಾಹತೆಯಿಲ್ಲದುದರ ಲಕ್ಷಣ. ಅಮೇರಿಕೆಗೆ ಹೋಗಲಿಕ್ಕೆ ಡಾಕ್ಟರರಿಗೆ ಯಾವ ಅನುಕೂಲತೆಯಿದ್ದಿತೆಂದು ಹೇಳಬೇಕು? ಕೈಯಲ್ಲಿ ಕಾಸಿರಲಿಲ್ಲ. ಕಾಸು ಕೊಡುವೆವೆಂದು ವಚನ ಕೊಟ್ಟ ಬೇರೆ ಬೇರೆ ಸಂಸ್ಥಾನಿಕರ ಮನಸ್ಸನ್ನು ಸರಕಾರದವರು ತಿರುಗಿಸಿ ಬಿಟ್ಟರು. ಭಿಕ್ಷೆಗೆಂದು ಹೋದಲ್ಲೆಲ್ಲ 'ನಿನ್ನದು ಅವಿವೇಕದ ಅಪೇಕ್ಷೆ' ಎಂದು ಹೆದರಿಸುವವರೇ ! ಏನೋ ! ಧಾರವಾಡದ ನಾಲ್ಕಾರು ಜನರು ಇವರ ಭವಿಷ್ಯದ ಬಗ್ಗೆ ಆಶಾವಾದಿಗಳಾಗಿ ಸಹಾಯಮಾಡಲು ಸಿದ್ಧರಾದರು. ಅವರ ಧೈರ್ಯದಿಂದಲೆ ಇವರು ಹಡಗನ್ನೇರಿದರು. ಆದರೆ ಹಡಗನ್ನು ಹತ್ತಿದ ಮೊದಲನೆಯ ನಿಮಿಷದಲ್ಲಿಯೆ ರಾ. ಬ. ಕರಂದೀಕರರ ಮರಣದ ವಾರ್ತೆ ತಿಳಿದು, ಇದ್ದ ಅಲ್ಪಸ್ವಲ್ಪ ಆಧಾರವೂ ಇಲ್ಲದಂತಾಗಿ ಹೋಯಿತು. ಆದರೂ ದೃಢನಿಶ್ಚಯಿಗಳಾಗಿ ಇವರು ಅಮೇರಿಕೆಯನ್ನು ತಲ್ಪಿದರು. ಚರ್ಚಿನ ಕಸ ಗುಡಿಸುವ ಕೆಲಸದಿಂದ ವಸತಿಯ ಅನುಕೂಲತೆ ದೊರಕಿಸಿದರು. ಹೋಟಲಿನಲ್ಲಿ ಮುಸುರೆ ತೊಳೆಯುವ ಕೆಲಸದಿಂದ ದಿನದ ಒಂದು ಹೊತ್ತಿನ ಊಟದ ವಿಚಾರವನ್ನು ಮಾಡಿಕೊಂಡರು....."

' ಸ್ವತಂತ್ರಭಾರತದ ಮೊದಲನೆಯ ಧ್ವಜವನ್ನು ನಾನು ಹಾರಿಸುವುದೇ ನನ್ನ ಜೀವನದ ಗುರಿ ' ಎನ್ನುವ ಡಾ. ಹರಡೀಕರರು

ಮುಂದೆ ಏನು ಹೇಳಿದರೋ ಅದರ ಕಡೆಗೆ ನನ್ನ ಲಕ್ಷ್ಯವಿರಲಿಲ್ಲ. ನನ್ನ ಮನಸ್ಸಿನಾಗ ನಮ್ಮ ಮನೆಯಾಳು ಕೆಂಚನನ್ನೂ ಮುಸುರೆಯಾಕೆ ಮರೆವ್ವನನ್ನೂ ನನ್ನ ಕಣ್ಣೆದುರು ಕರೆದುಕೊಂಡು ಬಂದಿದ್ದಿತು. 'ಕಸಗೂಡಿಸುವವರೂ, ಮುಸುರೆ ತೊಳೆಯುವವರೂ ಅಮೇರಿಕೆಯಲ್ಲಿ ಡಾಕ್ಟರರೂ ಆಗುವರು !' ಎಂಬ ಆಶ್ಚರ್ಯ ನನ್ನ ಹೃದಯವನ್ನು ಆವರಿಸಿಬಿಟ್ಟಿದ್ದಿತು. ಅಂದು ಗೆಳೆಯನ ಮನೆಯಲ್ಲಿಯೆ ಮಲಗಿಕೊಂಡೆ. ಮಲಗಿಕೊಂಡರೂ ಆ ಗೆಳೆಯನ ಪರಿಚಿತರನ್ನು ನಿದ್ದೆ ಮಾಡಗೊಡಲಿಲ್ಲ.

" ಹರಡೀಕರರು ಅಲ್ಲಿಯ ಯಾವ ಪರೀಕ್ಷೆ ಪಾಸಾಗಿದ್ದಾರೆ ಸರ್ ? "

" ಅದೇನೋ ' ಮಾಸ್ಟರ್ ಆಫ್ ಸೈನ್ಸ್ ' ಅಂತಾರಲ್ಲಾ ! ಆ ಪರೀಕ್ಷೆ ಪಾಸಾಗಿ, ಮುಂದೆ 'ಪಿ. ಎಚ್. ಡಿ.' ಗಾಗಿ ಓದುತ್ತಿದ್ದರಂತೆ. ಅಷ್ಟರಲ್ಲಿಯೆ ದೇಶಭಕ್ತ ಲಾಲಾ ಲಜಪತರಾಯರು ಇವರನ್ನು ತಮ್ಮ ನೆರವಿಗೆ ಕರೆದುದರಿಂದ, ಅಮೇರಿಕೆಯಲ್ಲಿ ಹಿಂದುಸ್ಥಾನದ ಸ್ವಾತಂತ್ರ್ಯದ ವಿಚಾರದಲ್ಲಿ ಅನುಕೂಲ ವಾತಾವರಣವನ್ನುಂಟುಮಾಡುವ ಕಾರ್ಯವನ್ನು ಕೈಕೊಂಡರಂತೆ. ಅಮೇರಿಕೆಗೆ ಹೋಗಿ ಬಂದು ದೊಡ್ಡ ಡಾಕ್ಟರಾಗಿ ಸರ್ವಜನೋಪಯುಕ್ತವಾದ ಆಸ್ಪತ್ರೆಯೊಂದನ್ನು ತಮ್ಮ ನಾಡಿನಲ್ಲಿ ಸ್ಥಾಪಿಸಬೇಕೆಂದು ಇವರೂ ಇವರ ಮಿತ್ರರೂ ಸಂಕಲ್ಪಿಸಿದ್ದರು; ಆದರೆ ಹರಡೀಕರರ ಸ್ವದೇಶಪ್ರೀತಿ ಬೇರೊಂದನ್ನು ಸಂಕಲ್ಪಿಸಿ, ಇನ್ನೊಂದು ಕಾರ್ಯಕ್ಕೇ ಅವರನ್ನು ತೊಡಗಿಸಿತು. "

ಇನ್ನೂ ಏನೇನನೋ ಪ್ರಶ್ನೆಗಳ ಮಳೆಗರೆದು ಅವರಿಗೆ ಗೊತ್ತಿದ್ದ ಹಲವು ಮಾತುಗಳನ್ನು ಕೇಳಿಕೊಂಡೆ. ಅಂದಿನಿಂದಲೂ ಹರಡೀಕರರ ವಿಚಾರದಲ್ಲಿ ತುಂಬ ಆದರ ; ಅವರ ಕಾರ್ಯದಲ್ಲಿ ತುಂಬ ವಿಶ್ವಾಸ.

* * *

ಡಾ. ಹರಡೀಕರರು ಕರ್ನಾಟಕವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ರಾಷ್ಟ್ರೀಯ ಸಭೆಯ ಕೆಲಸಕ್ಕಾಗಿ ಆಗಾಗ ನಾನಿದ್ದ ಊರಿಗೆ ಬರುತ್ತಿದ್ದರು. ಹೀಗೆಯೆ ಒಂದು ಸಲ

ಬಂದಾಗ, ವಿಶೇಷ ಪ್ರಯಾಸವಿಲ್ಲದೆ ಡಾಕ್ಟರರ ಪರಿಚಯವನ್ನೂ ಮಾಡಿಕೊಂಡೆ. ಅವರ ಹೆಮ್ಮೆಯಿಲ್ಲದ ಆತ್ಮೀಯಭಾವದ ಮಾತುಗಳೂ ಸ್ನಿಗ್ಧ ಮೃದುಹಾಸ್ಯವೂ ಎದುರಿನಲ್ಲಿದ್ದವರ ಮನಸ್ಸು-ಹೃದಯಗಳನ್ನು ಚೆನ್ನಾಗಿ ಆಕರ್ಷಿಸಬಲ್ಲವು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಷ್ಟೋ ಸಭೆಗಳು ಬೆಳಗಾಂವಿಯಲ್ಲಿ ಸೇರುತ್ತಿದ್ದುವು. ನೋಡುವುದಕ್ಕೆ ನಾನೂ ಹೋಗಿರುತ್ತಿದ್ದೆ. ಆಗ ಡಾಕ್ಟರರು ಮಾತನಾಡಲಿಕ್ಕೆ ಎದ್ದುನಿಂತರೆ ಸಭಿಕರ ಮನಸ್ಸನ್ನೆಲ್ಲ ತಮ್ಮ ಕಡೆಗೆ ಸೆಳೆದುಕೊಂಡು ಬಿಡುತ್ತಿದ್ದರು. ಅವರು ಆಡುವ ಒಂದೊಂದು ಮಾತೂ ಕಾರ್ಯೋತ್ಸಾಹದಿಂದ ತುಂಬಿತುಳುಕುತ್ತಿದ್ದುವು. ಹೆಸರಿಗಾಗಿ ದೇಶಭಕ್ತರಾಗಿ ಬಂದಿದ್ದ ಎಷ್ಟೋ ಕಾಂಗ್ರೆಸ್ ಕೆಲಸಗಾರರು ಡಾಕ್ಟರರ ಈ ಕಾರ್ಯೋತ್ಸಾಹವನ್ನು ಅಣಕಿಸಿ ಮಾತನಾಡುತ್ತಿರುವುದನ್ನು ಕೇಳುವ ಪ್ರಸಂಗವೂ ನನಗೆ ಆಗಾಗ ಒದಗುತ್ತಿದ್ದಿತು. **'ಸ್ವತಂತ್ರ ಭಾರತದ ಮೊದಲಿನ ಧ್ವಜವನ್ನು ನಾನು ಹಾರಿಸುವುದೇ ನನ್ನ ಜೀವನದ ಗುರಿ'** ಎಂದು ಹೊರಟು, ತನ್ನ ಜೀವನವನ್ನೇ ರಾಷ್ಟ್ರಕ್ಕೆ ಮುಡಿಪನ್ನಾಗಿ ಸಲ್ಲಿಸಿದ ಡಾ. ಹರಡೀಕರರೆಲ್ಲಿ ; ಯಾವುಯಾವುವೋ ಆಶೆ-ಪ್ರತ್ಯಾಶೆಗಳಿಂದ ದೇಶಭಕ್ತಿಯ ಸೋಗನ್ನು ಹಾಕಿರುವ ಆ ಅಣಕವಾಡುವ ಜನರೆಲ್ಲಿ! ಆನೆ, ನಾಯಿಗಳ ಸಂಬಂಧವನ್ನೇನೋ ಹೇಳುವರಲ್ಲ!

* * * *

೧೯೨೪ರಲ್ಲಿ ಬೆಳಗಾಂವಿಯಲ್ಲಿ ಸೇರಿದ ಕಾಂಗ್ರೆಸ್ಸಿನಲ್ಲಿಯಂತೂ ನಾನು ಡಾ. ಹರಡೀಕರರ ಮಿಂಚಿನ ಮೂರ್ತಿಯನ್ನೇ ನೋಡಿದೆ. ಒಂದು ಕ್ಷಣದಲ್ಲಿ ಕುದುರೆಯ ಮೇಲೆ ಕುಳಿತು ಸುತ್ತುತ್ತಿರುವವರನ್ನು ನೋಡಿದರೆ, ಇನ್ನೊಂದು ಕ್ಷಣದಲ್ಲಿ ಗಾಳಿಯ ವೇಗದಿಂದ ನಡೆದಾಡುತ್ತಿರುವವರನ್ನು ನೋಡುತ್ತಿದ್ದೆ. ವಿಶ್ರಾಂತಿಗಾಗಿ ಸುಮ್ಮನೆ ಕುಳಿತ ಹರಡೀಕರರನ್ನು ಒಂದು ಸಲವೂ ನೋಡಲಿಲ್ಲ. ನಾನು ಆಗ ಹಲವು ಸಲ ಎಂದುಕೊಂಡೆ :

"ಇಂತಹ ಬಡಕಲು ದೇಹದಲ್ಲಿ ಇಷ್ಟೊಂದು ಉತ್ಸಾಹದ ಅಮೃತವು ಎಲ್ಲಿ ಹುದುಗಿ ಕುಳಿತಿರಬಹುದು!"

ಮನಸ್ಸು ತಡೆಯದೆ ನನ್ನ ಗೆಳೆಯರೊಬ್ಬರ ಮುಂದೆ ಮೇಲಿನಂತೆಯೇ ಉದ್ಗಾರ ತೆಗೆದೆ.

"ಅವರೇನಪ್ಪಾ! ಅಮೇರಿಕೆಗೆ ಹೋಗಿ ಬಂದ ದೇಶಭಕ್ತರು! ಅವರ ಉತ್ಸಾಹದ ಅಮೃತ ಅವರ ಒಳಮನೆಯ ಬಾಟ್ಲಿಯಲ್ಲಿಯೆ ಇರುತ್ತದೆ." ಎಂದು ನನ್ನ ಗೆಳೆಯ ತಟ್ಟನೆ ನುಡಿದುಬಿಟ್ಟ. ನನಗೆ ಸಿಟ್ಟು ಬಂದಿತು.

'ಮೂರ್ಖನಿದ್ದೀಯೆ ನೀನು!' ಎಂದೆ.

'ಅದೇಕಪ್ಪಾ ಇಷ್ಟೊಂದು ಕೋಪ?' ಗೆಳೆಯನೆಂದ.

'ಅಲ್ಲವೋ! ಯಾವ ಚಹವನ್ನು ಕೂಡ ಮುಟ್ಟುವದಿಲ್ಲವೋ ಅವರಿಗೆ ಬಾಟ್ಲಿಯ ಸಂಬಂಧ ಹಚ್ಚುತ್ತಿದ್ದೀಯಲ್ಲಾ! ಅಮೇರಿಕೆಯಲ್ಲಿ ಒಂದು ಸಲ ಕುಡಿಯಲೇ ಬೇಕಾಗಿ ಬಂದ ಸಾಂಪ್ರದಾಯಿಕ ಸಿಬಂಧವನ್ನೂ ಇವರು ಮೀರಿ ನಡೆದಿದ್ದಾರೆಂಬುದನ್ನು ನಾನು ಬಲ್ಲೆ!' ಎಂದು ಹೇಳಿದೆ.

ನನ್ನ ಗೆಳೆಯ ಅಷ್ಟಕ್ಕೆ ಸುಮ್ಮನಾಗಲಿಲ್ಲ.

"ಸಿಗರೇಟು ಸೇದುವವರು ಸೆರೆಯನ್ನೇಕೆ ಕುಡಿಯಬಾರದು?' ಎಂದ.

"ತಂಬಾಕು ತಿನ್ನುವವರು ಮಾಂಸವನ್ನೂ ಏಕೆ ತಿನ್ನಬಾರದು?" ಎಂದೆ.

ಹುಚ್ಚು ವಾದವನ್ನು ಹುಚ್ಚು ಮಾತುಗಳಿಂದಲೆ ಮುಗಿಸಿದೆ

* * * *

ಹನ್ನೆರಡು ಜನ ಮಕ್ಕಳನ್ನು ಹೆತ್ತ ಡಾಕ್ಟರರ ತಂದೆ-ತಾಯಿಗಳಿಗೆ, ತಾವೊಬ್ಬ ಸತ್‌ಪುತ್ರನನ್ನು ಹಡೆದಿದ್ದೇವೆಯೆಂಬ ಮಾತು ಮೊದಲೆ ಗೊತ್ತಾಗಿದ್ದರೆ ಅವರು ಸುಖಮರಣವನ್ನು ಪಡೆಯಬಹುದಾಗಿದ್ದಿತು. ಡಾಕ್ಟರರ ತಂದೆ-ತಾಯಿಗಳಿಗೂ ಡಾಕ್ಟರಿಗೂ ಒಂದು ಮಾತಿನಲ್ಲಿ ಸಾಮ್ಯವಿದೆಯೆಂದು ಹೇಳಬಹುದು. ಅವರು ಅನೇಕ ಮಕ್ಕಳನ್ನು ಹೆತ್ತು ಮೃತ್ಯುವಿನ ಬಾಯಿಗೆ ಕೊಟ್ಟರು. ಇವರು ಅನೇಕ ಸಂಸ್ಥೆಗಳನ್ನು ಹೊರಡಿಸಿ ಸರಕಾರದ ಬಾಯಿಗೆ ಕೊಟ್ಟಿದ್ದಾರೆ. ಡಾಕ್ಟರರಿಗೆ ೨೪ ತಾಸೂ ಏನಾದರೂ ಕೆಲಸಬೇಕು. ಅದಕ್ಕಾಗಿ ಹೊಸ ಹೊಸ ಸಂಸ್ಥೆಗಳು ಬೇಕು. ಒಂದು ಸಂಸ್ಥೆಯ ಕೆಲಸವನ್ನು ಮಾಡಿ ಬೇಸರ ಬಂದಾಗ, ಆ ಬೇಸರವನ್ನು ಕಳೆದುಕೊಳ್ಳುವುದಕ್ಕೆ ಇನ್ನೊಂದು ಸಂಸ್ಥೆಯ ಕೆಲಸವನ್ನು ಕೈಕೊಳ್ಳುವುದು ಇವರ ರೀತಿ. ಎಂತಲೆ ಹಿಂದುಸ್ಥಾನೀ ಸೇವಾದಲದಂತಹ ಅಖಿಲಭಾರತೀಯ ಸಂಸ್ಥೆಯೊಂದರ ಕಾರ್ಯವನ್ನು ಮಾಡುತ್ತ, ಭಗಿನಿಮಂಡಲ, 'ವಾಲಂಟಿಯರ್' ಮಾಸಪತ್ರಿಕೆ, 'ತಿಲಕಗ್ರಂಥಸಂಗ್ರಹ' 'ವಾರ್ತಾಪ್ರಸಾರಕ ಸಂಘ' 'ಪ್ರಬುದ್ಧವರ್ಗ' 'ಗಣೇಶಮಂಡಲ' 'ವ್ಯಾಯಾಮ ವಿದ್ಯಾಪೀಠ' ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿ ನಡೆಯಿಸುತ್ತಿದ್ದರು. ಎಳೆಯತನದಲ್ಲಿ ಇನ್ನೊಬ್ಬರ ಮನೆಯಲ್ಲಿದ್ದುಕೊಂಡು, ಹುಬ್ಬಳ್ಳಿಯಲ್ಲಿ 'ಆರ್ಯಬಾಲಕ ಸಂಘ'ವನ್ನೂ ಒಂದು ವಾಚನಾಲಯವನ್ನೂ, ಮೂರು ವ್ಯಾಯಾಮಶಾಲೆಗಳನ್ನೂ ನಡೆಯಿಸಿದ ಹರಡೀಕರ ನಾರಾಯಣನು ಪ್ರಬುದ್ಧನಾಗಿ ನಾಡಿನ ನಾಯಕನಾಗಿರುವಾಗ ಎಷ್ಟೊಂದು ಸಂಸ್ಥೆಗಳನ್ನು ಸ್ಥಾಪಿಸಿ ನಡೆಯಿಸಬೇಡ! ಅಮೇರಿಕೆಗೆ ಹೋಗಿದ್ದಾಗಲೂ ಒಂದರ ಹಿಂದೊಂದು ಸಂಸ್ಥೆಯನ್ನು ಸ್ಥಾಪಿಸಿ, ಅವುಗಳ ಮೂಲಕ ಅಲ್ಲಿ ಅಖಂಡವಾಗಿ ಕಾರ್ಯ ಮಾಡಿದ್ದ ಕಥೆ ತುಂಬ ದೊಡ್ಡದು.

* * * *

ನಾನು ನಮ್ಮ ಹಳ್ಳಿಯಲ್ಲಿದ್ದೆ ; ಬೆಳಗಾಂವಿಯ ಕಾಂಗ್ರೆಸ್ಸಾಗಿ ಮರುವರ್ಷವಿರಬಹುದು. ಸೇವಾದಲದ ಸೈನಿಕರೊಬ್ಬರು ಹಳ್ಳಿಗೆ ಬಂದರು. 'ಕರ್ನಾಟಕ ಏಕೀಕರಣದ ಬಗ್ಗೆ ಒಂದು ಲಕ್ಷ ಜನರ ಅಂಕಿತಗಳನ್ನು ಕೂಡಿಸುವ ಕಾರ್ಯವನ್ನು ಡಾ. ಹರಡೀಕರರ ಸೇವಾದಲವು ಕೈಕೊಂಡಿದೆ' ಎಂದು ಹೇಳಿದರು. ಕರ್ನಾಟಕ ಬಹುಜನ ಕಾಂಗ್ರೆಸ್ ಭಕ್ತರಂತೆ ಡಾ. ಹರಡೀಕರರೂ ಕರ್ನಾಟಕ

ತ್ರಾಂತ್ಯದ ಪುನರ್ಘಟನೆಯ ವಿಚಾರವನ್ನು ಕಡೆಗಣಿಸುತ್ತಿದ್ದಾ ನೆಯೋ !..ಎಂದು ನನ್ನ ಕೆಲವು ಜನ ಗೆಳೆಯರ ಮತ. ಬಂದಿದ್ದ ೈನಿಕರೆದುರು ಈ ಭಾವನೆಯನ್ನು ನನ್ನೊಬ್ಬ ಗೆಳೆಯ ವ್ಯಕ್ತ ಾಡಿಯೂ ಬಿಟ್ಟ, ಕೂಡಲೆ ಸೈನಿಕನೆಂದ:

"ತಮ್ಮ ಭಾವನೆ ಸರಿಯಾದುದಲ್ಲ ಸರ್ ! ಹರಡಿಕರರ ಂದುಸ್ಥಾನ್ ಸೇವಾದಲವು ದಿನದಿನಕ್ಕೆ ಕರ್ನಾಟಕದ ಜನರನ್ನು ಒಂದುಗೂಡಿಸುತ್ತಲಿದೆ. ಸೇವಾದಲದಲ್ಲಿ ಕೊಡಗು, ೈಸೂರು, ಧಾರವಾಡ, ಮಂಗಳೂರು ಎಂಬ ಒಳಭೇದವನ್ನು ರೆಯಿಸಿ, ಎಲ್ಲರಲ್ಲಿಯೂ 'ತಾವೆಲ್ಲ ಕನ್ನಡಿಗರು' ಎಂಬ ಭಾವನೆ ಯನ್ನು ಬಲಿಸುತ್ತಲಿದೆ. ಈ ಸೇವಾದಲದ ಮೂಲಕವೆ ಕರ್ನಾಟಕದ ಸರು ಭರತಖಂಡಕ್ಕೆಲ್ಲ ಗೊತ್ತಾಗಿದೆ. ಕರ್ನಾಟಕ ಏಕೀಕರಣದ ಚಾರ ಹರಡೀಕರರ ತಲೆಯಲ್ಲಿ ಹಗಲಿರುಳೂ ಓಡಾಡುತ್ತಿರು ದೆ. ಈ ಒಂದು ಲಕ್ಷ ಅಂಕಿತಗಳನ್ನು ದೊರಕಿಸುವ ಟುವಟಿಕೆ ಆ ವಿಚಾರದ ಪರಿಣಾಮವೇ !"

ನನ್ನ ಗೆಳೆಯ ಅಸಮಾಧಾನದ ಮೌನ ತಳೆದು ಕುಳಿತ. ಅವನ ನಸ್ಸೆಂದರೆ ಡಾ. ಹರಡೀಕರರು ಕರ್ನಾಟಕ ಕನ್ನಡಿಗರ ಚಟು ಟಿಕೆಯನ್ನೆ ಹದಿನಾರಾಣೆ ಮಾಡಬೇಕೆಂದು. ಆನುಷಂಗಿಕವಾಗಿ ಮಾಡುವ ಚಟುವಟಿಕೆಯಲ್ಲಿ ಅನುಷ್ಠಾನಕ್ಕೆ ಬರಬೇಕಾಯಿತು ಎಂಬುದಲ್ಲ ವೆಂದು ಅವನ ಅಭಿಮತ. ಮಧ್ಯಮಾರ್ಗಿಯಾದ ನನಗೆ ಕರ್ನಾಟಕಕ್ಕೆ ಯಾರು– ಯಾವರೀತಿಯಲ್ಲಿ– ಎಷ್ಟೇ ಕೆಲಸ ಮಾಡಿದರೂ ಒಂದುಬಗೆಯ ಸಮಾಧಾನ. ಅದರಲ್ಲಿಯೂ ಡಾ. ಹರಡೀಕರರು 'ಶೂನ್ಯವಾಗಿ ಹೋಗಿದ್ದ ಕರ್ನಾಟಕದ ಹೆಸರನ್ನಾದರೂ ದಿಶಿದಿಶೆಗಳಲ್ಲಿ ಮೆರೆಯಿಸುತ್ತಿದ್ದಾರಲ್ಲಾ'— ಎಂದು ಅವರ ವಿಷಯದಲ್ಲಿ ಒಂದು ಬಗೆಯ ಆತ್ಮೀಯತೆ.

* * * *

ಡಾ. ಹರಡೀಕರರೀಗೀಗ ೪೯ ವರ್ಷಗಳ ವಯಸ್ಸು. ಅವರ ಕಾರ್ಯೋತ್ಸಾಹವಿನ್ನೂ ಕಡಿಮೆಯಾಗಿಲ್ಲವೆಂಬುದು ದಿನದಿನ ನಮಗೆ ಗೊತ್ತಾಗುತ್ತಿದ್ದರೂ, ಈಗ ಅವರ ವಿಚಾರಗಳು ಒಂದು ಮಟ್ಟಕ್ಕೆ ಮುಟ್ಟಿ ನೆಲೆನಿಂತಿರಬಹುದೆಂದು ನನ್ನ ನಂಬುಗೆ. ಈ ನಂಬುಗೆಯಿಂದಲೆ ಅವರ ವಿಚಾರಗಳನ್ನು ತಿಳಿದುಕೊಳ್ಳಬೇಕೆಂದು ಮೊನ್ನೆ ಮೊನ್ನೆಯೆ ನಾನು ನನ್ನೊಬ್ಬ ಸ್ನೇಹಿತರನ್ನೊಡಗೊಂಡು ಡಾ. ಹರಡೀಕರರ ಸಂದರ್ಶನಕ್ಕೆ ಹೋಗಿದ್ದೆ. ಈ ಸಂದರ್ಶನದ ಕಾಲಕ್ಕೆ ಪರಸ್ಪರರಲ್ಲಿ ನಡೆದ ಮಾತುಕತೆಗಳನ್ನು ಜಯಂತಿಯ ವಾಚಕರಿಗಾಗಿ ಮುಂದಿನ ಸಂಚಿಕೆಯಲ್ಲಿ ಕೊಡಬೇಕೆಂದು ಮನಸ್ಸಿದೆ. ಸಂಪಾದಕರು ಸಮ್ಮತಿಸಿ ಪ್ರಕಟಿಸಬೇಕಷ್ಟೆ !

"ಪ್ರೀತಿ-ತಿರಸ್ಕಾರ"

ಹೆಂಗಸೊಬ್ಬಾಕೆ ಗಂಡಸೊಬ್ಬನಿಗೆಂದಳು :
"ನಿನ್ನ ವಿಷಯದಲ್ಲಿ ನನಗೆ ತುಂಬ ಪ್ರೀತಿ !"
ವಿಕೃತಧ್ವನಿಯಲ್ಲಿ ಗಂಡಸು ಹೇಳಿದ ;
"ಸರಿ ! ನಿನ್ನ ಪ್ರೀತಿಗೆ ತಕ್ಕ ಯೋಗ್ಯತೆ ನನ್ನ ಹೃದಯದಲ್ಲಿ ಇದೆ."

ಹೆಂಗಸು ಅಚ್ಚರಿಗೊಂಡು ಕೇಳಿದಳು :
"ನನ್ನ ವಿಷಯಕ್ಕೆ ನಿನಗೆ ಪ್ರೀತಿಯಿಲ್ಲವೇ ?"
ಗಂಡಸು ಒಂದೇ ನಿಡುನೋಟದಿಂದ ಅವಳನ್ನು ನೋಡಿದ ; ಒಂದೂ ಮಾತನಾಡಲಿಲ್ಲ. ಆಗ ಹೆಂಗಸು ಬಿರುನುಡಿಗಳಲ್ಲಿ ಹೇಳಿದಳು.

"ನಿನ್ನ ವಿಷಯದಲ್ಲಿ ನನಗೆ ತುಂಬ ತಿರಸ್ಕಾರವೆನಿಸುತ್ತಿದೆ."
ಮೊದಲಿನ ಶಾಂತಸ್ವರದಲ್ಲಿಯೆ ಗಂಡಸು ಹೇಳಿದನು :
"ಅಹುದು ! ನಿನ್ನ ತಿರಸ್ಕಾರಕ್ಕೆ ಗುರಿಯಾಗಬಹುದಾದ ಯೋಗ್ಯತೆಯೂ ನನ್ನ ಹೃದಯದಲ್ಲಿದೆ."

ಖಲೀಲ್ ಗಿಬ್ರಾನ್

ಮೀಲನ

ಅನುವಾದಕ:
ಶ್ರೀ. ಹನುಮಂತರಾವ್ ಮಾಂಜರೇಕರ, ಬಿ. ಎ.

ಅಡವಿಯಲ್ಲಿ ಮೊದಲು ನೋಡಿದ ಕಾಲುದಾರಿಯು ಇಂದು ಹಸಿರು ಹುಲ್ಲಿನಿಂದ ಮುಚ್ಚಿ ಹೋಗಿತ್ತು.

ಈ ನಿರ್ಜನವಾದ ಕಾನನದಲ್ಲಿ ಒಮ್ಮಿಂದೊಮ್ಮೆ ಒಬ್ಬನು ಹಿಂದಿನಿಂದ "ನನ್ನನ್ನು ಗುರುತಿಸಿದಿರಾ?" ಎಂದು ಕೇಳಿದನು.

ನಾನು ಹಿಂದಿರುಗಿ ನೋಡಿ ನುಡಿದೆ. "ಎಲ್ಲಿಯೋ ನೋಡಿದ ಹಾಗೆ ಕಾಣುತ್ತದೆ; ಆದರೆ ಹೆಸರು ಮಾತ್ರ ನೆನಪಾಗಲೊಲ್ಲದು."

ಅವನೆಂದನು: "ನಾನು ನಿಮ್ಮ ಹಳೆಯ ಗೆಳೆಯನು, ಇಪ್ಪತ್ತೈದು ವರ್ಷ ಹಿಂದಿನ ಮಿತ್ರನು, ನನ್ನ ಹೆಸರು ಶೋಕ!"

ನೀರಲ್ಲಿ ಬಿದ್ದ ಚಂದ್ರನ ಪ್ರತಿಬಿಂಬದ ಪ್ರತಿಮೆಯು ಅದಕ್ಕೆ ವಿಲಕ್ಷಣವಾದ ಶೋಭೆಯನ್ನೀಯುವಂತೆ ಅವನ ಕಣ್ಣೀರಿನ ಅಪೂರ್ವವಾದ ಸೊಗಸು ಸೌಂದರ್ಯವನ್ನು ಹೊರಸೂಸುತ್ತಿತ್ತು.

ನನ್ನ ಬುದ್ಧಿಯು ಸ್ತಂಭಿತವಾಯಿತು. ನಾನು ಹುಚ್ಚನಂತೆ ಅವನ ಮೋರೆಯ ಕಡೆಗೆ ನೋಡುತ್ತ ನಿಂತೆ. "ಆ ದಿನ ನಿಮ್ಮ ಮುಖಕಾಂತಿಯು ಶ್ರಾವಣ ಮಾಸದೊಳಗಿನ ಕಾರ್ಮೋಡಗಳಂತೆ ಕಪ್ಪೇರಿತ್ತು; ಆದರೆ ಇಂದು ನೋಡಲದು ಶರಚ್ಚಂದ್ರಿಕೆಯಂತೆ ಉಜ್ವಲವಾಗಿ ಕಾಣುತ್ತಿದೆ; ಇದು ಹೇಗೆ? ಅಂದಿನ ಅಶ್ರುಬಿಂದುಗಳೆಲ್ಲಿ ಹೋದುವು?" ಎಂದು ನಾನು ಕೇಳಿದೆ.

ನನ್ನ ಈ ಪ್ರಶ್ನೆಯನ್ನು ಕೇಳಿ ಅವನು ನಕ್ಕುಬಿಟ್ಟನು. ಅವನ ಹಾಸ್ಯದ ಮೇಲಿಂದ ಶರತ್ಕುಸುಮಗಳು ನಗುವ ರೀತಿಯನ್ನು ಮಳೆ ಮೋಡಗಳು ಎತ್ತಿಕೊಂಡಿವೆಯೆಂದು ನನಗೆನಿಸಿತು.

"ನನ್ನ ಇಪ್ಪತ್ತೈದು ವರ್ಷದ ತಾರುಣ್ಯವು ನಿಮ್ಮ ಕಡೆಗಿದೆಯೋ?" ಎಂದು ನಾನು ಕೇಳಿದೆ.

ಅವನೆಂದನು "ಈ ಕೊರಳೊಳಗಿನ ಮಾಲೆಯನ್ನು ನೋಡಿರಿ!" ಅದೆಂತಹ ಸೋಜಿಗವು? ಆ ಮಾಲೆಯೊಳಗಿನ ಹೂವಿನ ಒಂದು ಎಸಳು ಕೂಡ ಉದುರಿ ಬಿದ್ದಿರಲಿಲ್ಲ! ನಾನು ಆಶ್ಚರ್ಯಚಕಿತನಾದೆನು.

ನಾನೆಂದೆ— "ನನ್ನ ದೇಹವೆಲ್ಲವೂ ಜೀರ್ಣವಾಗಿದೆ! ಆದರೆ ನಿಮ್ಮ ಕಡೆಗಿದ್ದ ನನ್ನ ಇಪ್ಪತ್ತೈದು ವರ್ಷಗಳ ಹಿಂದಿನ ಯೌವನವು ಇನ್ನೂ ಹಾಗೆಯೆ ಇದೆ!!"

ಅವನು ಮೆಲ್ಲನೆ ಆ ಮಾಲೆಯನ್ನು ತೆಗೆದು ನನ್ನ ಕೊರಳಲ್ಲಿ ಹಾಕಿದನು. ಅವನೆಂದನು. "ಏನು? ನಿನಗೆ ಶಾಂತಿಯು ಬೇಡ, ಶೋಕವೇ ಬೇಕೆಂದು ನೀನ ಅಂದಿದ್ದೆಯಲ್ಲವೆ?"

ನಾನು ಲಜ್ಜಿತನಾಗಿ ನುಡಿದೆ– "ಹಾ ಅಂದಿದ್ದೇನೋ ನಿಜ; ಆದರೆ ಬಹಳ ಹಿಂದಿ ಸಂಗತಿಯೆಂದು ಮರೆತುಬಿಟ್ಟಿದ್ದೆ. ಈ ಅರಿವಾಯಿತು."

"ಮಾನವನು ತನ್ನ ಅಂತರ್ಯಾಮಿಯಾದ ಇಚ್ಛೆಯನ್ನು ಎಂದಾದರೂ ಮ ತಿರುವನೋ! ನಾನು ಆ ದಿವಸದಿಂದ ನಿನ್ನ ಚಿಂತನೆ ಮಾಡುತ್ತ ಈ ನೆರಳಿನಲ್ಲಿಯೆ ಕುಳಿತಿರುವೆನು. ಈಗ ನನ್ನನ್ನು ನಿನ ಸಂಗಡ ಕರೆದುಕೊಂಡು ಹೋಗು" ಎಂದ ಅವನು ಹೇಳಿದನು.

ನಾನು ನನ್ನ ಕೈಯನ್ನು ಅವನ ಕೈಯಲ್ಲಿಟ್ಟು ನಡೆದೆನು. "ನಿನ್ನ ರೂಪದ ಅದೆಷ್ಟು ಹೆಚ್ಚು ಕಡಿಮೆಯಾಗಿದೆ!" ಎಂದ ನಾನು ಉಸುರಿದೆ.

ಅವನೆಂದನು. "ಶೋಕದ ಅವತಾರವ ಮುಗಿಯಿತು. ಅದರ ಸ್ಥಾನದಲ್ಲೀ ಶಾಂತಿಯು ನೆಲಸಿದೆ."

ಮುಂದಿನ ಸಂಚಿಕೆಯಲ್ಲಿ:

ಜಾಣತನದ ಪ್ರದರ್ಶನ (ವಿನೋದ ಲೇಖನ)
ಶ್ರೀ. 'ಶ್ರೀರಂಗ'

ಅನಾಥಾಶ್ರಮ (ಸಣ್ಣಕತೆ)
ಶ್ರೀ. ವಿ. ಎಂ. ನಾಮದಾರ ಬಿ. ಎ. (ಆನರ್ಸ್)

ಕರ್ನಾಟಕದಲ್ಲಿ ಹಿಟ್ಲರ್
ಶ್ರೀ. ಕೋಟ ಶಿವರಾಮ ಕಾರಂತರು

ಜೀವನ ಜ್ಯೋತಿ
ಶ್ರೀಮತಿ ಸೌ. ಕಮಲಾದೇವಿ ತಲಚೇರಿಕರ

ಕಾಂತಾಸಮ್ಮಿತವೂ ಲಲಿತ ಸಾಹಿತ್ಯವೂ
ಶ್ರೀ. ಎನ್. ಕೆ. ಕುಲಕರ್ಣಿ, ಬಿ. ಎ.

ನ್ಯಾಯ (ಪದ್ಯಕಾಹಿನಿ)
ಶ್ರೀ. 'ಶ್ರೀಧರ'



[ಈ ವಿಭಾಗದಲ್ಲಿ ಸೇರಿಸುವುದಕ್ಕಾಗಿ ಯಾರಾದರೂ ನಗೆ ಮಾತಿನ ತುಣುಕುಗಳನ್ನು ಕಳುಹಿಸಿದರೆ ಸ್ವೀಕರಿಸಲಾಗುವುದು. ಪ್ರತಿ ತಿಂಗಳಲ್ಲಿ ಎಲ್ಲಕ್ಕೂ ಒಳ್ಳೆಯದಾಗಿ ಬಂದ ನಗೆ ಮಾತಿಗಾಗಿ ನಾಲ್ಕು ತಿಂಗಳವರೆಗೆ ' ಜಯಂತಿ ' ಯನ್ನು ಉಚಿತವಾಗಿ ಕಳುಹಲಾಗುವುದು. ಸ. ಜ.]

ಕಾಲಮಾನದ ಬದಲಾವಣೆ

ಒಬ್ಬ:— (ರೇಲ್ವೆ ಟ್ರೇನಿನಲ್ಲಿ ಪ್ರಯಾಣಿಕ ನಿಗೆ) ಈ ನಿಮ್ಮ ಹುಡುಗಿಗೆ ಎಷ್ಟು ವರ್ಷ ?

ಪ್ರಯಾಣಿಕ:— (ಅವನ ಸಾಹೇಬ ವೇಷವನ್ನು ನೋಡಿ) ನೀವು ಯಾರ ನ್ನೋ ದು ತ್ತಾಗದೆ ಹೇಳೋದು ಹ್ಯಾಗೆ ?

ಒಬ್ಬ:— (ಬೆರಗಾಗಿ) ಯ್ಯಾಕೆ ?

ಪ್ರಯಾಣಿಕ:— ನೀವು ಟಿಕೆಟ್ ತಪಾಸಣೆ ಮಾಡತಿದ್ದರೆ ಈ ನನ್ನ ಹುಡುಗಿಗೆ ೧ ವರ್ಷ ; ಸಮಾಜಸುಧಾರಕರಿದ್ದಿರಂದರೆ ... ಕೆಗೆ ೧೫ ವರ್ಷ.

* * *

ಚುರುಕು ವಿದ್ಯಾರ್ಥಿ

ಶಿಕ್ಷಕ:— ಮಹಾರಾಷ್ಟ್ರ ರಾಜ್ಯವು ...ಯನಗರ ಸಾಮ್ರಾಜ್ಯದ ಹಾದಿಯನ್ನೆ ...ಂಬಾಲಿಸಿತೆಂದು ಹೇಗೆ ಸಿದ್ಧವಾಗುವುದು ?

ವಿದ್ಯಾರ್ಥಿ:— (ಚುರುಕಾಗಿ) ಅದೇನು— ...ಹಳೇ ಸುಲಭ ಸರ್. ಪುಣೆಯಿಂದ ಹೊರಟ ...ವರ್ನ್ ಮಹಾರಾಷ್ಟ್ರ ರೈಲುದಾರಿ ಹೊಸ ...ಟೆಗೆ ಮುಟ್ಟದೆ—ಅದಕಾಗಿ—

* * *

ಅವಸರದ ಆಭಾಸ

ಆವೇಶದಿಂದ ಭಾಷಣವನ್ನು ಮಾಡುವ ...ಶಭಕ್ತನೊಬ್ಬನು ಹೀಗೆ ಹೇಳಿದನಂತೆ:—

' ಭಾರತೀಯರಿಗೆ ಜನ್ಮವು ಸ್ವತಂತ್ರಸಿದ್ಧ ಕ್ಕು ' !

* * *

ಕರ್ನಾಟಕ ಏಕೀಕರಣ

' ಕರ್ನಾಟಕ ಏಕೀಕರಣ ಎಂದರೇನು ? '

ಶಿಕ್ಷಕನ ಗದ್ದರಿಕೆಯು ಪ್ರತಿಧ್ವನಿಯೆ ಕೇಳಿಸಿತಲ್ಲದೆ ಒಬ್ಬ ವಿದ್ಯಾರ್ಥಿಯೂ ಉತ್ತರವನ್ನು ಕೊಡಲಿಲ್ಲ.

ಶಿಕ್ಷಕನು ಮತ್ತೊಮ್ಮೆ ಗದ್ದರಿಸಿದನು. ' ಕೊನೆಗೆ ನಿಮಗೆ ಆ ಎರಡು ಶಬ್ದಗಳ ಅರ್ಥವಾದರೂ ಗೊತ್ತಿದೆಯೆ ಇಲ್ಲವೆ ? ' ಎಂದು ಹಂಗಿಸಿದನು.

ಈಗ ಒಬ್ಬ ವಿದ್ಯಾರ್ಥಿಯು ಎದ್ದುನಿಂತು ' ನನಗೆ ಗೊತ್ತಿವೆ, ಸರ್, ಆ ಶಬ್ದಗಳು. ಕರ್ನಾಟಕ+ಏಕೆ+ಈ+ಕರಣ ; ಎಂದರೆ ' ಕರ್ನಾಟಕವು ಹೀಗೇಕೆ ಮಾಡುತ್ತಿದೆ ' ಎಂದರ್ಥ ಎಂದನು !

* * *

ಸಾಣೆನಿಗೆ ಪ್ರತಿಸ್ಪರ್ಧಿ !

ಶಿಕ್ಷಕ:— ' ಆಕೆ ಅವನ ಹೆಂಡತಿ. ' ಈ ವಾಕ್ಯದಲ್ಲಿ ಕ್ರಿಯಾಪದ ಯಾವುದು ?

ಒಬ್ಬ ವಿದ್ಯಾರ್ಥಿ:— ' ಹೆಂಡತಿ.'

ಶಿಕ್ಷಕ:— (ಚಕಿತನಾಗಿ) ಆಂ—!

ಒಬ್ಬ ವಿದ್ಯಾರ್ಥಿ:— ವಾಕ್ಯದ ಕೊನೆಗೆ ಬರೋದು ಕ್ರಿಯಾಪದ—

ಶಿಕ್ಷಕ:— (ಗದ್ದರಿಸಿ) ಮೂರ್ಖಾ, ಕೂತುಕೊ ! (ಇನ್ನೊಬ್ಬ ವಿದ್ಯಾರ್ಥಿಗೆ) ' ಹೆಂಡತಿ' ಇದು ವ್ಯಾಕರಣದಲ್ಲಿ ಕ್ರಿಯಾಪದ ಏನೊ ?

ಇ. ವಿದ್ಯಾರ್ಥಿ:— ಅಲ್ಲ, ಸರ್; ಕಾಲವಾಚಕ ಅವ್ಯಯ ಅದು.

* * *

ಮುಂದಗಮನದ ಮೋಜು

ಬಹಳೇ ಸಾವಕಾಶವಾಗಿ ನಡೆಯುವ ಒಂದು ರೇಲ್ವೆ ಟ್ರೇನಿನಲ್ಲಿ ಒಬ್ಬನು ತನ್ನ ಮಗುವನ್ನು ಕರೆದುಕೊಂಡು ನಡೆದಿದ್ದನು. ಒಂದು ದೊಡ್ಡ ಸ್ಟೇಶನ್ನಿನಲ್ಲಿ ಟಿಕೆಟ್ಟನ್ನು ನೋಡುವ ಅಧಿಕಾರಿ ಬಂದು, ಆ ಮಗುವಿಗೆ ಅರ್ಧ ಟಿಕೆಟ್ಟು ಇದ್ದುದನ್ನು ಕಂಡು, ಚಕಿತನಾದನು. ಆಗ ತಂದೆಗೂ ಅಧಿಕಾರಿಗೂ ಹೀಗೆ ಸಂವಾದವಾಯಿತು.

ಅಧಿಕಾರಿ:— ನಿಮ್ಮ ಮಗುವಿಗೆ ಎಷ್ಟು ವರ್ಷ ?

ತಂದೆ:— ೧೫ ವರ್ಷ.

ಅಧಿಕಾರಿ:— (ದರ್ಪದಿಂದ) ಹಾಗಾದರೆ ಅರ್ಧ ಟಿಕೆಟ್ಟನ್ನೇಕೆ ಕೊಂಡಿರಿ ?

ತಂದೆ:— ನಾವು ಈ ಟ್ರೇನನ್ನು ಹತ್ತುವಾಗ ನನ್ನ ಹುಡುಗನಿಗೆ ೧೧ ವರ್ಷಗಳಾಗಿದ್ದವು; ಅದಕ್ಕೆ.

* * *

ಇಬ್ಬರು ಬುದ್ಧಿವಂತರು

" ಚಳಿಗಾಲ ಹೋಗಿ ಈಗ ಮೂರು ತಿಂಗಳಾಯಿತು ವಕೀಲರೇ ! "

" ಅಹುದು ಅದು ನನಗೆ ಗೊತ್ತು ; ಹತ್ತೊಂಬತ್ತನೆಯ ಶತಮಾನ ಹೋಗಿ ಈಗ ಮೂವತ್ತೆಂಟು ವರ್ಷಗಳಾದುವಲ್ಲ ರಾಯರೇ ! "

ಪ್ರೇಮಾಂಧವಾದ ತರ್ಕ

ಗಂಡ:— (ಸಿಟ್ಟಿನಿಂದ) ನಿಮ್ಮ ತಂದೆ ವರದಕ್ಷಿಣೆ ಕೊಟ್ಟಿದ್ದರೆ ಅಡಿಗೆಯವನನ್ನು ಇಡತಿದ್ದೆ, ನೀ ಮೆರೆಯಬಹುದಾಗಿತ್ತು!

ಹೆಂಡತಿ:— (ಇನ್ನೂ ಸಿಟ್ಟಿನಿಂದ) ನಿಮ್ಮ ತಂದೆ ನಿಮಗೆ ನೋಕರಿ ಕೊಡಿಸಿದ್ದರೆ ನಾನೂ ಮುಸುರೆತಿಕ್ಕುವವಳನ್ನ ಇಡತಿದ್ದೆ, ನೀವು ಬೇಕಾದಷ್ಟು ಸಾರೆ ಊಟಾ ಮಾಡಬಹುದಾಗಿತ್ತು.

* * *

ಯೋಗ್ಯ ಅನುಮಾನ

“ಇಷ್ಟೊಂದು ಸ್ಮಶಾನ ಯಾತ್ರೆಯ ಸನ್ಮಾನ ಸಿಕ್ಕಬೇಕಾದರೆ ಈ ಮನುಷ್ಯ ಮೊದಲು ಏನಾಗಿರಬೇಕು?”

“ಸತ್ತಿರಬೇಕು!”

ಸಮರ್ಪಕ ಉತ್ತರ

ಶಿಕ್ಷಕ:— ಸಂಯುಕ್ತ ಘಟನೆ ಎಂದರೇನು—ಗೊತ್ತಿದೆಯೆ?

ವಿದ್ಯಾರ್ಥಿ:— ಇದೆ, ಸರ್.

ಶಿಕ್ಷಕ:— ಅದಕ್ಕೆ ‘ಸಂಯುಕ್ತ’ ಯಾಕೆ ಅಂತಾರೆ ಹೇಳು ನೋಡೋಣ.

ವಿದ್ಯಾರ್ಥಿ:— ಸರಕಾರದವರೂ ಕಾಂಗ್ರೆಸಿನವರೂ ಕೂಡಿ ಅದನ್ನ ನಡಿಸ್ತಾರೆ ಅಂತ ‘ಸಂ—ಯುಕ್ತ’ ಸರ್.

* * *

ಅಂಚೆಯ ಲೆಕ್ಕಾಚಾರ

“ಪತ್ರ ತುಂಬಾ ಭಾರ; ಇನ್ನೊಂದು ಬಿಲ್ಲಿಯ ಟಿಕೀಟು ಹಚ್ಚಬೇಕು”

“ಇನ್ನೊಂದು ಪತ್ರ ಹಚ್ಚಿದರೆ ಇನ್ನೂ ಭಾರವಾಗುತ್ತದಲ್ಲಾ ರಾಯರೇ!

ಪ್ರಾಮಾಣಿಕ ಗೃಹಸ್ಥ

“ನಿಮ್ಮೂರೊಳಗ ಯಾರಾದರೂ ದೊಡ್ಡ ಮನುಷ್ಯರು ಹುಟ್ಯಾರೇನ್ರೀ”
“ಇಲ್ರೆಪಾ! ಯಾವಾಗಲೂ ನಮ್ಮೂರೊಳಗ ಸಣ್ಣ ಕೂಸುಗಳೇ ಹುಟ್ಟತಿರತಾವ!”

ಕೈಗೆಡದ ಕೃಷ್ಣಪ್ಪ

ಕೃಷ್ಣಪ್ಪನಿಗೆ ನೆರೆಮನೆಯಿಂದ ಕಡಕರುವ ಅಭ್ಯಾಸ ಬಹಳ. ಒಮ್ಮೆ ಮೈಯಲ್ಲಿ ಗುಣ ವಿರಲಿಲ್ಲ. ನೆರೆಮನೆಯವನು ವೈದ್ಯನನ್ನು ಕರೆತಂದನು. ವೈದ್ಯನು ನೋಡಿ ಔಷಧಿಯನ್ನು ಕೊಟ್ಟು ‘ಕಫವನ್ನು ಹಣ್ಣು ಮಾಡಲು ಈ ಔಷಧಿ. ನಿಮಗೆ ಕೆಮ್ಮು ಹೆಚ್ಚಾಗಿ ಬಂದರೆ ಹೆದರಬೇಡಿ’ ಎಂದು ಹೇಳಿ ಹೊರಟನು.

ಹೊರಗೆ ಬಂದಕೂಡಲೆ ನೆರೆಮನೆಯವನು ‘ವೈದ್ಯರೆ, ಬೇರೆ ಯಾವುದಾದರೊಂದು ಔಷಧಿಯನ್ನು ಕೊಡಬಾರದೆ?’ ಎಂದು ದೀನಮುದ್ರೆಯಿಂದ ಬೇಡಿದನು. ವೈದ್ಯನು ‘ಅದೇಕೆ?’ ಎಂದು ಚಕಿತನಾಗಿ ಕೇಳಲು, ‘ಕೆಮ್ಮು ಬರುವುದೆಂದು ಹೇಳಿದಿರಿ. ಒಂದು ವೇಳೆ ಬರಲಿಲ್ಲವೆಂದರೆ ಅವನು ನನ್ನ ಕೆಮ್ಮನ್ನು ಕಡಬೇಡುವನು. ನನಗಾದರು ಕೆಮ್ಮಿನ ಔಷಧಿ ಕೊಡಬಾರದೆ?’ ಎಂದು ಗೋಳಿಟ್ಟನು.

* * *

ಪಾಪ! ಏನು ಮಾಡೀತು!

ಒಂದು ಟ್ರೇನಿನಲ್ಲಿ ಬಹಳೇ ಸ್ಥೂಲ ಮತ್ತು ಧೃಷ್ಟಪುಷ್ಟನಾದ ಒಬ್ಬ ಪ್ರಯಾಣಿಕನಿದ್ದನು. ಅವನ ಎದುರು ಚಿಕ್ಕ ಬಾಲಕನೊಬ್ಬನು ಕುಳಿತಿದ್ದನು. ಬಾಲಕನು ತನ್ನನ್ನೆ ಒಂದೇ ಸವನೆ ನೋಡುತ್ತಿರುವನೆಂದು ಆ ಪ್ರಯಾಣಿಕನಿಗೆ ಮೊದಲು ಸಂಶಯ, ಆ ಮೇಲೆ ಸಿಟ್ಟು ಬಂದಿತು. ಕೊನೆಗೆ ತಡೆಯದಂತಾಗಿ

ಪ್ರಯಾಣಿಕ:— (ಗದ್ದರಿಸುತ್ತ) ಯಾವಾಗಿನಿಂದ ಹೀಗೇಕೆ ನನ್ನನ್ನೇ ನೋಡುತ್ತಿದ್ದೀಯೊ?

ಬಾಲಕ:— (ಹೆದರದೆ) ಮತ್ತೊಂದು ನೋಡಬೇಕೆಂದರೆ ಜಾಗೆಯೇ ಇಲ್ಲ, ಏನು ಮಾಡಲಿ?

* * *

ವಿಮರ್ಶೆಯ ಪರೀಕ್ಷೆ

“ಈ ಚಿತ್ರಶಾಲೆಗೆ ಬೆಂಕಿ ಬಿದ್ದರೆ ಯಾವ ಐದು ಚಿತ್ರಗಳನ್ನು ನೀವು ಉಳಿಸುವಿರಿ?”

“ಬಾಗಿಲ ಬಳಿಯೆ ಇರುವ ಐದು ಚಿತ್ರಗಳನ್ನು!”

ಸಾಹಿತ್ಯ ಸಮೀಕ್ಷಣ

೧. ಪ್ರಪಂಚದ ಕೆಲಸಗಾರರು

ಲೇ– ಶ್ರೀಮಾನ್ ದಿನಕರ ದೇಸಾಯಿ
ಎಂ. ಎ. ಎಲ್‌ಎಲ್. ಬಿ. ಮುಂಬಯಿ

ಈ ಪುಸ್ತಕದ ವಿಷಯವು ಅಂತರ ರಾಷ್ಟ್ರೀಯ ಕೆಲಸಗಾರರ ಸಂಘದ ಕಾರ್ಯವನ್ನು ವರ್ಣಿಸುವದು ಮಾತ್ರವೇ ಆಗಿದೆಯೆಂದು ಇಟ್ಟುಕೊಂಡರೂ ಅದರ ಬೇರೆ ಬೇರೆ ಅಂಗಗಳಿಗೆ ಕೊಡಲ್ಪಟ್ಟ ಮಹತ್ತ್ವವು ಸರಿಯಾಗಿ ಹಂಚಲ್ಪಟ್ಟಿಲ್ಲ. ಮೊದಲನೆಯ ಪ್ರಕರಣಕ್ಕೊಂದು ಉದ್ದೇಶವನ್ನು ಹುಡುಕುವುದಾದರೆ ಅದು ಈಗಿದ್ದ ಅಂತರ ರಾಷ್ಟ್ರೀಯ ಕೆಲಸಗಾರರ ಸಂಘವು ಒಂದು ನಿಜವಾದ ಕೊರತೆಯನ್ನು ಪೂರೈಸುತ್ತದೆ—ಎಂಬ ವಿಷಯವನ್ನು ಪ್ರತಿಪಾದಿಸುವದಿರುವಂತೆ ತೋರುತ್ತದೆ. ತತ್ಪೂರ್ವದಲ್ಲಿ ಜಗತ್ತಿನಲ್ಲಿ ಮೂಲಭೂತವಾದ ಐಕ್ಯವನ್ನು ಪ್ರತಿಪಾದಿಸುವದಾದರೂ ತಕ್ಕುದೆ. ಆದರೆ ಈ ಐಕ್ಯವಿರಲಿಕ್ಕೆ ಕಾರಣಗಳೇನು? ಐಕ್ಯವಿದೆಯೆಂಬುದನ್ನು ತೋರಿಸುವ ಚಿಹ್ನಗಳಾವುವು? ಇವೆಲ್ಲವುಗಳನ್ನು ಹೇಳುವುದರ ಬದಲು, ಐಕ್ಯವಿದೆ ಎಂಬ ವಾಕ್ಯವನ್ನೇ ನಾಲ್ಕಾರು ರೂಪಕಗಳಿಂದ ಪುನಃ ಪುನಃ ಹೇಳಲಾಗಿದೆ. ಇಷ್ಟು ಚಿಕ್ಕ ಹೊತ್ತಿಗೆಯಲ್ಲಿ ಇದಕ್ಕೊಂದು ವಾಕ್ಯವು ಸಾಕಿತ್ತು.

ಮುಂದಿನ ಪ್ರಕರಣಗಳಲ್ಲಿಯಾದರೂ, ಆ ವಿಷಯವನ್ನು ಮೊದಲೇ ತಕ್ಕಮಟ್ಟಿಗೆ ಬಲ್ಲವರಿಗೆಯೇ ಏನಾದರೂ ರುಚಿ ಕಂಡು ಬಂದೀತಲ್ಲದೆ, ಆ ವಿಷಯವನ್ನು ಇಲ್ಲಿಯೇ ಪ್ರವೇಶಿಸಬೇಕೆನ್ನುವವರಿಗೆ ಅಷ್ಟೇ ಸೂರಂಜನೆಯಾಗಲಿಕ್ಕಿಲ್ಲ. ಕನ್ನಡದಲ್ಲಿ ಈ ವಿಷಯದ ಮೇಲೆ ಮೊದಲನೆಯದೆಂದು ಹೇಳಬಹುದಾದ ಪುಸ್ತಕದಲ್ಲಿ ಒಂದು ವಿಶಿಷ್ಟ ಸಂಸ್ಥೆಯ ಕಾರ್ಯಗಳ ಮುಖ್ಯಾಂಶಗಳನ್ನು ನೀರಸವಾಗಿ ಎಣಿಸುತ್ತ ಹೋಗುವುದರ ಬದಲು, ಮೂಲತತ್ತ್ವಗಳ ಪ್ರತಿಪಾದನೆಗೆ ಹೆಚ್ಚಿನ ಅವಕಾಶವನ್ನು ಕೊಡಬೇಕಾಗಿತ್ತು. ಪ್ರಸ್ತುತ ಪುಸ್ತಕದ ಗುಣಾವಗುಣಗಳೇನಿದ್ದರೂ ಶ್ರೀ. ದಿನಕರ ದೇಸಾಯಿಯವರು ಅಂತರ ರಾಷ್ಟ್ರೀಯ ಕೆಲಸಗಾರರ ಸಂಘದಂತಹ ಮಹಾಸಂಸ್ಥೆಯ ನಿದರ್ಶನಕ್ಕೆ ಕರ್ನಾಟಕವೆಂಬುದೊಂದು ದೇಶವಿದೆಯೆಂಬುದನ್ನೂ, ಕನ್ನಡ ಮಾತಾಡುವ ಜನರಿಗಾದರೂ ಈ ವಿಷಯದ ಜ್ಞಾನವು ಅವಶ್ಯವಿದೆಯೆಂಬುದನ್ನೂ, ಅದನ್ನವರಿಗೆ ಒದಗಿಸುವುದರಿಂದ ಜಗತ್ತಿಗೆ ಉಪಯೋಗವಾದೀತೆಂಬುದನ್ನೂ ತಂದುಕೊಟ್ಟಿರುವುದಕ್ಕಾಗಿ ನಾವು ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾಗಿದೆ. ಶ್ರೀಯುತ ದೇಸಾಯಿಯವರು ಮುಂದಾದರೂ ಈ ಸಂಸ್ಥೆಯ ಬೆಂಬಲದಿಂದ ಕನ್ನಡಿಗರಿಗೆ ಈ ವಿಷಯದ ಮೇಲೆ ಪ್ರಚೋದಕವಾದ ಸಾಹಿತ್ಯವನ್ನು ಒದಗಿಸುವರೆಂಬ ಆಶೆಯಿದೆ.

V. M.

೨. ಶ್ರೀಕೃಷ್ಣಚರಿತ್ರೆ

(ಸ್ವರ್ಗೀಯ ಬಂಕಿಮ ಚಂದ್ರರ ಬಂಗಾಳಿ ಕೃತಿಯೊಂದರ ಅನುವಾದ. ಅನುವಾದಕರು:
ಶ್ರೀ. ಆರ್. ವ್ಯಾಸರಾವ ಅವರು.

ಕೃಷ್ಣನ ಚರಿತ್ರೆಯೊಂದು ಸಾನಂದಾಶ್ಚರ್ಯದಿಂದ ನೋಡಬೇಕಾದ ಅದ್ಭುತವಾಗಿರದೆ, ಅದು ಪ್ರತಿಯೊಬ್ಬನಿಗೂ ಮಾರ್ಗದರ್ಶಕವಾದ ಆದರ್ಶ ಮನುಷ್ಯ ಚರಿತ್ರೆಯೆಂಬ ಸಿದ್ಧಾಂತವನ್ನು ಮಂಡಿಸುವ ಉದ್ದೇಶದಿಂದ— ಈ ಪುಸ್ತಕದಲ್ಲಿ ಆ ಚರಿತ್ರೆಯ ಮುಖ್ಯ ಸಂಗತಿಗಳನ್ನೆತ್ತಿ ಅವು ಎಷ್ಟರ ಮಟ್ಟಿಗೆ ಕಟ್ಟುಕಥೆಗಳೆಂಬುದನ್ನು ನಿರ್ಣಯಿಸಲು ಯತ್ನಮಾಡಲಾಗಿದೆ. ಅಲ್ಲದೆ ಕೃಷ್ಣನ ಚರಿತ್ರೆಯೆಂದು ಕರೆಯಿಸಿಕೊಳ್ಳುವ ಪರಸ್ಪರ ವಿರೋಧಕವಾದ ಈಗಿನ ಕಥೆಗಳ ಸಮುದಾಯದಲ್ಲಿ, ಸ್ವಲ್ಪ ಪರಿಶ್ರಮದಿಂದ ಹುಡುಕಿದರೆ ಬುದ್ಧಿಗಮ್ಯವಾದ—ಸ್ವತಃ ಸಂಪೂರ್ಣವಾದ—ಒಂದು ಕೃಷ್ಣಚರಿತ್ರೆ ಸಿಕ್ಕುವುದೆಂದೂ, ಅದಕ್ಕೆ ಸರಿಹೋಗದ ಇತರ ಅಂಶಗಳೆಲ್ಲ ಕಟ್ಟುಕಥೆಗಳೆಂದೂ ಈ ಪುಸ್ತಕದಲ್ಲಿ ತೋರಿಸಲಾಗಿದೆ.

ಈ ಯತ್ನದಲ್ಲಿ ಕೆಲವು ಕಡೆಗಳಲ್ಲಿ ಕೃತ್ರಿಮತೆಯು ಏನೂ ಕಂಡು ಬರುವುದೇ ಇಲ್ಲ. ಉದಾಹರಣಾರ್ಥವಾಗಿ ಸುಭದ್ರಾಹರಣವನ್ನು ಕಲ್ಪಿಸಿ ಕೊಡುವುದರಲ್ಲಿ ಕೃಷ್ಣನ ನೀತಿಪ್ರಕರಣದ ಪ್ರಾರಂಭದಲ್ಲಿ, ದೇಶಕಾಲಗಳಿಂದ ಬದ್ಧವಾದ—ಮನುಷ್ಯನೀತಿಯನ್ನು ವಿಚಾರಿದ ಈಶ್ವರನೀತಿಯನ್ನಾಶ್ರಯಿಸಿ ಸುಭದ್ರಾಹರಣವನ್ನು ಸಮರ್ಥಿಸಬೇಕೆಂದು ಹೇಳಲಾಗಿದೆ. ಅದೇ ಪ್ರಕರಣದಲ್ಲಿ ಮುಂದೆ ರಾಕ್ಷಸವಿವಾಹವೇ ಕ್ಷತ್ರಿಯರಿಗೆ ಸ್ತುತ್ಯವಾದ ವಿವಾಹವೆಂಬ ಕಾಲಬದ್ಧವಾದ ನೀತಿಪಥವನ್ನಾಶ್ರಯಿಸಲಾಗಿದೆ. ಇಂಥ ಕೆಲವು ಆಪತ್ತಿಗಳು ಈ ಗ್ರಂಥದಲ್ಲಿ ಕೈಕೊಂಡ ಕಾರ್ಯಕ್ಷೇತ್ರಗಳಲ್ಲಿ ಅನಿವಾರ್ಯವೆಂದೇ ಹೇಳಬೇಕು. ಹಾಗಿದ್ದ ಪಕ್ಷದಲ್ಲಿ ಮಹಾಭಾರತ ಹಾಗೂ ಪುರಾಣಗಳಲ್ಲಿಯ ಮುಖ್ಯವಾದ—ಮೂಲವೆಂದು ನಂಬಬಹುದಾದ—ಕೆಲವಂಶಗಳನ್ನೇ ಆಯ್ದು, ಒಂದು ಸ್ವತಃ ಪೂರ್ಣವಾದ ಕೃಷ್ಣಚರಿತ್ರೆಯನ್ನು ರಚಿಸುವದು ಸಾಧ್ಯವಿತ್ತು. ಅದೊಂದು ಬಹು ಆಕರ್ಷಕ ಕಲ್ಪನೆಯಾದರೂ ಅಷ್ಟೇ ದುಸ್ಸಾಧ್ಯವೆಂದೂ ತೋರುವದು. ಆದರೂ ಯೋಗ್ಯತೆಯಿದ್ದವರು ಪ್ರಯತ್ನಿಸಿ ನೋಡಬೇಕಾದ ವಿಷಯವದು.

ಪುಸ್ತಕದ ಸರಣಿಯ ವಿಷಯದಲ್ಲೊಂದು ದೋಷವನ್ನು ಎತ್ತಿ ತೋರಿಸುವಂತಿದೆ. ಅದೆಂದರೆ ಪಾಶ್ಚಿಮಾತ್ಯ ಪಂಡಿತರ ವಿಷಯಕ್ಕೂ ಅವರ ಪೌರ್ವಾತ್ಯ ಅನುಯಾಯಿಗಳ ವಿಷಯಕ್ಕೂ ತಮಗಿದ್ದ ತಿರಸ್ಕಾರವನ್ನು ಗ್ರಂಥಕರ್ತರು ತೀರ ಬಿಚ್ಚುಮಾತಿನಿಂದ ವ್ಯಕ್ತಪಡಿಸಿದುದು. 'ವೇಬರ' ಸಾಹೇಬರು ಮಹಾಮಹೋಪಾಧ್ಯಾಯ ಪಂಡಿತರು; ವೇದಗಳನ್ನು ಅಚ್ಚುಹಾಕಿಸಿದವರು; ಅಲ್ಲದೆ ನಾನೊಬ್ಬ ಹಿಂದೂ– ಆದರಲ್ಲೂ ಮೂರ್ಖನು. ಅವರನ್ನು ಹಾಸ್ಯಮಾಡು–

ಜಯಂತಿಯ ತರುಣ ಬರೆಹಗಾರರೊಬ್ಬರು

ಶ್ರೀಮಾನ್ ಎನ್. ಕೆ. ಕುಲಕರ್ಣಿ,
ಬಿ. ಎ., (ಆನರ್ಸ್)

ಇವರು ಹುಟ್ಟಿದೂರು ಗದುಗು. ೧೯೧೩ನೆಯ ಇಸ್ವಿಯಲ್ಲಿ ಹುಟ್ಟಿದ್ದಾರೆಂದ ಮೇಲೆ ಈಗ ಇವರಿಗೆ ೨೫ ವರುಷದ ವಯಸ್ಸು. ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಪದವಿಯನ್ನು ಸನ್ಮಾನ ಪೂರ್ವಕವಾಗಿ ಪಡೆದಿದ್ದಾರೆ. ಕನ್ನಡ (ಆನರ್ಸ್) ವಿಷಯದಲ್ಲಿ ಮೇಲಿನ ನಂಬರನ್ನು ಪಡೆದುದರಿಂದ ಧಾರವಾಡ ಕರ್ನಾಟಕ ಕಾಲೇಜಿನ ವಿದ್ಯಾರಣ್ಯ ಬಹುಮಾನವನ್ನು ದೊರಕಿಸಿದ್ದಾರೆ. ಕರ್ನಾಟಕ ಕಾಲೇಜಿನಲ್ಲಿ ಆನರರಿ ಫೆಲೊಗಳಾಗಿಯೂ ಇದ್ದರು. ಈ ಸಲ ಕನ್ನಡ ವಿಷಯವನ್ನು ತೆಗೆದುಕೊಂಡು ಎಂ. ಎ. ಪರೀಕ್ಷೆಗೆ ಕುಳಿತಿದ್ದಾರೆ.

ವಿದ್ಯಾರ್ಥಿದಶೆಯಿಂದಲೂ ಇವರು ಸಣ್ಣ ಸಣ್ಣ ಲೇಖನ- ಕತೆ- ನಾಟಕಗಳನ್ನು ಬರೆಯುತ್ತಲಿದ್ದರು. ಕಾಲೇಜಿನಲ್ಲಿ ಓದುತ್ತಿರುವಾಗ ಇವರ ಲೇಖನಕಲೆಯು ಒಂದುಬಗೆಯ ಒಪ್ಪುಗೊಂಡು ಹೊರಕ್ಕೆ ಬಂದಿತು. ಇವರ ಮೊದಲನೆಯ ಗ್ರಂಥವಾಗಿ ಹೊರಕ್ಕೆ ಬಂದ 'ಇಲೆಕ್ಶನ್' ಎಂಬ ಏಕಾಂಕನಾಟಕವು, ವಿದ್ಯಾರ್ಥಿಗಳ ಮನಸ್ಸನ್ನು ತುಂಬ ಆಕರ್ಷಿಸಿತು ಪ್ರೇಮ ಗ್ರಂಥಮಾಲೆಯಲ್ಲಿ 'ನಡುಮನೆಯಲ್ಲಿ' ಎಂಬ ಏಕಾಂಕನಾಟಕಗಳ ಸಂಗ್ರಹವೊಂದು ಪ್ರಕಟವಾಗಿದೆ. ಕನ್ನಡದ ಹಳೆಯ-ಹೊಸ ಸಾಹಿತ್ಯಗಳನ್ನು ಕುರಿತು ಬರೆದ ಇವರ ವಿಮರ್ಶೆಗಳೆಷ್ಟೋ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಶ್ರೀಮಾನ್ ಎನ್. ಕೆ. ಯವರ ಸಾಹಿತ್ಯವು ಸಮಾಜದ- ಅದರಲ್ಲಿಯೂ ವೈಷ್ಣವ ಬ್ರಾಹ್ಮಣ ಸಮಾಜದ-ವಾಸ್ತವ ಚಿತ್ರವನ್ನು ಕ್ರಮಶಃ(?) ಮೂಡಿಸಿ ತೋರಿಸಬಲ್ಲದು. ಇವರ ಬರಲಿರುವ ಕಾಲದ ಸಾಹಿತ್ಯಜೀವನಕ್ಕಾಗಿ ಕನ್ನಡಿಗರು ಆಶೆಪಟ್ಟುಕೊಂಡಿರುವಂತಿದ್ದಾರೆ ಶ್ರೀಮಾನ್ ಎನ್. ಕೆ. ಯವರು.

ವದು ಬಲು ಕೆಟ್ಟ ಕೆಲಸವು" ಈ ಸರಣಿಯು ಇಂಥ ಚರ್ಚಾತ್ಮಕ ಗ್ರಂಥದಲ್ಲಿ ಇಷ್ಟವೆನಿಸುವದಿಲ್ಲ. ವೇಬರ್ ಸಾಹೇಬರನ್ನು ಹಾಸ್ಯಮಾಡುವದು ಅವರನ್ನು ಬಯ್ಯುವಷ್ಟೇನೂ ಕೆಟ್ಟ ಕೆಲಸವಲ್ಲ. ಇನ್ನೊಬ್ಬರ ದೋಷಗಳನ್ನೆತ್ತಿ ತೋರಿಸುವಲ್ಲಿ ಸ್ವಲ್ಪ ಸೌಜನ್ಯಯುಕ್ತವಾದ ಹಾಸ್ಯವು ಬೈಗುಳಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾದದ್ದು. ಇದು ಬಂಕಿಮಚಂದ್ರರ ದೇಶ-ಕಾಲ- ಪರಿಸ್ಥಿತಿಗಳ ಪರಿಣಾಮ.

ಪ್ರಸ್ತುತದ ಅನುವಾದದ ಭಾಷೆಯ ವಿಷಯದಲ್ಲಿ ಅನುವಾದಕರು ಇನ್ನೊಂದಾವೃತ್ತಿಗಾದರೂ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಸೂಚಿಸಬಯಸುತ್ತೇವೆ. ಉದಾಹರಣಾರ್ಥವಾಗಿ "ಮಾಯಾಚಾರಿಯ **ಥಂಗನ್ನು** ನಾವು ಮನುಷ್ಯ ಗುಣಗಳ **ಮಧ್ಯದಲ್ಲಿ** ಆದರಣವೆಂದು ಎಣಿಸಿಲ್ಲವು" — "ವೇಬರ ಸಾಹೇಬರ **ನಂಬುಗೆಯು** ತಾವು ಸಂಸ್ಕೃತವನ್ನು ಸಾಯಣಾಚಾರ್ಯರಿಗಿಂತಲೂ ಚನ್ನಾಗಿ ಬಲ್ಲವರೆಂದು **ನಂಬಿ** ಈ ವ್ಯಾಖ್ಯೆಯನ್ನು ಒತ್ತಲಿಸಿ ಬಿಟ್ಟಿರುವರು." ಈ ಬಗೆಯ ಹಲವು ವಾಕ್ಯಗಳು ಇಲ್ಲದಂತೆ ನೋಡಿಕೊಂಡಿದ್ದರೆ ಚೆನ್ನಾಗಿತ್ತು.

ಪ್ರಸ್ತುತ ಕೃತಿಯು ಮನುಷ್ಯಕೃತಿಯೇ ಆದುದರಿಂದ ಇದರಲ್ಲಿ ಗುಣ-ದೋಷಗಳೆರಡೂ ಇರುವದು ಸಹಜವಾಗಿದೆ. ಆದರೂ ಇದರಲ್ಲಿಯ ಗುಣಾಂಶಗಳು ವಾಚಕರಿಗೆ ಗಮನಾರ್ಹವಾಗಿವೆ. ಇದು ಪರಿಶೋಧನೆಯನ್ನು ಪಡೆದು ಇನ್ನೂ ಹಲವು ಆವೃತ್ತಿಗಳನ್ನು ಹೊಂದಲೆಂದೂ ಕನ್ನಡದಲ್ಲಿ ಈ ವಿಷಯದ ಮೇಲೆ ಸ್ವತಂತ್ರಗ್ರಂಥಗಳನ್ನು ಪ್ರಚೋದಿಸಲೆಂದೂ ಆಶಿಸೋಣ.

V. M.

೩. ಸಮುದ್ರದಾಚೆಯಿಂದ

(೨ನೆಯ ಭಾಗ) **ಲೇಖಕರು:**— ಪ್ರೊ. ವಿ. ಕೃ. ಗೋಕಾಕ ಎಂ. ಎ.

ಹೆಚ್ಚಿನ ಅಭ್ಯಾಸದ ನಿಮಿತ್ತವಾಗಿ ಆಕ್ಸ್‌ಫರ್ಡಿನಲ್ಲಿರುವ ಶ್ರೀ. ಗೋಕಾಕರವರು, ಕಾಲಕಾಲಕ್ಕೆ ಬರೆದ ಪತ್ರಗಳ ಮತ್ತು ದಿನಚರಿಗಳ ಎರಡನೆಯ ಸಂಗ್ರಹವಿದು. ತಮ್ಮ ನಿತ್ಯದ ವಿಚಾರಗಳನ್ನೂ ಅನುಭವಗಳನ್ನೂ ಸರಳವಾದ ಶೈಲಿಯಲ್ಲಿ ವಿವರಿಸಿದ್ದಾರೆ. ಶ್ರೀ. ಗೋಕಾಕರವರು ಸುತ್ತಲಿನ ಜಗತ್ತನ್ನು ಸೂಕ್ಷ್ಮವಾದ ವಿಮರ್ಶಕನ ದೃಷ್ಟಿಯಿಂದ ನೋಡತಕ್ಕವರು. ತಮ್ಮ ನಿತ್ಯದ ಜೀವನದಲ್ಲಿಯ, ಸರಸವಾದ ಹರಟೆಗಳ ಸನ್ನಿವೇಶಗಳನ್ನು ಮೊದಲು ಮಾಡಿಕೊಂಡು, ಕಾವ್ಯ, ಕಾದಂಬರಿ, ರಾಜಕಾರಣ ಮುಂತಾದ ವಿಷಯಗಳಲ್ಲಿಯ ಚರ್ಚೆಗಳನ್ನು ಕೂಡ ಈ ಅನುಭವಮಾಲಿಕೆಯಲ್ಲಿ ಸೇರಿಸಿಬಿಟ್ಟಿರುವರು. ತಾವು ಇರುವ ಸ್ಥಳ, ಚಳಿಗಾಲದಲ್ಲಿ ಸುತ್ತಲೂ ಸತತವಾಗಿ ಬೀಳುತ್ತಿರುವ ಹಿಮ, ತಮ್ಮ ಆಂಗ್ಲ ಮಿತ್ರರ ವಿನೋದಮಯ ಹರಟೆ, ಅದರಂತೆಯೇ ಇನ್ನೆಷ್ಟೋ ಆಂಗ್ಲರಲ್ಲಿ ವರ್ಣಭೇದದ ಮೂಲಕ ತುಂಬಿತುಳುಕುವ ಅನ್ಯರ ತಿರಸ್ಕಾರ, ನೋಡಿದ ನಾಟಕ, ಕೇಳಿದ ಕಾವ್ಯ, ತಾವು ಕಣ್ಮುಟ್ಟ ಕಂಡ ಸ್ಥಳಗಳ ವರ್ಣನೆ; ಅಲ್ಲದೆ ಇನ್ನೆಷ್ಟೋ ವಿಷಯಗಳನ್ನೊಳಗೊಂಡ ಈ ಪುಸ್ತಕವಾದರೂ ಮೊದಲನೆಯ ಭಾಗದಂತೆ, ವಾಚಕರ ಚಿತ್ತವನ್ನು ಆಕರ್ಷಿಸದೆ ಇರಲಾರದು.

ಪ್ರವಾಸಸಾಹಿತ್ಯದ ಇತರ ಪುಸ್ತಕಗಳಲ್ಲಿಯಂತೆ ಇದರಲ್ಲಿ ಸುದೀರ್ಘವಾದ ವರ್ಣನೆಗಳಿಲ್ಲದ ಮೂಲಕವಾಗಿಯೂ, ಹೇಳಬೇಕಾದುದನ್ನೆಲ್ಲವನ್ನೂ ಸುಲಭವಾದ ಮಾತುಗಾರಿಕೆಯ ವ್ಯಂಗ್ಯ ವಿನೋದಪೂರ್ಣವಾದ ಶೈಲಿಯಲ್ಲಿ ಹೇಳಿರುವದರಿಂದಲೂ ಓದುಗರಿಗೆ ಬೇಸರವಾಗುವದಿಲ್ಲ. ತಮ್ಮ ಪತ್ರ-ದಿನಚರಿಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ ಸಮುದ್ರದಾಚೆಯ ಜೀವನದ ಚಿತ್ರವನ್ನು ಕನ್ನಡಿಗರ ಕಣ್ಣೆದುರಿಗೆ ನಿಲ್ಲಿಸಿದ ಶ್ರೇಯಸ್ಸು ಶ್ರೀ. ಗೋಕಾಕರವರಿಗೇ ಮೊದಲಿಗೆ ಸಲ್ಲತಕ್ಕದ್ದಾಗಿದೆ.

V. M.

---

* ಗ್ರಂಥಗಳ ಹಿಂದಿರುವ ಅಂಕೆಗಳು ನಮ್ಮಲ್ಲಿಯ 'ಸ್ವೀಕಾರ'ದ ಕ್ರಮಾಂಕಗಳು, ಆ ಕ್ರಮಾಂಕಗಳ 'ಸ್ವೀಕಾರ'ವನ್ನು ನೋಡಿದಲ್ಲಿ, ಗ್ರಂಥದ ಬಹಿರಂಗ ವರ್ಣನೆಯೆಲ್ಲ ಗೊತ್ತಾಗುವದು. ಸಂ. ಜ.



ಸುರೆಯುದಂತಹ ಮೇ ತಿಂಗಳು

ಈ ಸಲದ ಮೇ ತಿಂಗಳು ಬರೀ ಗಲಾಟೆ–ಗೊಂದಲಗಳನ್ನೇ ಹೊತ್ತುಕೊಂಡು ಬಂದಂತೆ ತೋರುವುದು. ಪಶ್ಚಿಮದಲ್ಲಿ ಫ್ರ್ಯಾಂಕೋನ ಗದ್ದರಿಕೆ ನಡೆದೆ ಇದೆ. ಹಿಟ್ಲರ್–ಮುಸಲೋನಿ ಹೆಬ್ಬುಲಿಗಳ ಗೆಳೆತನ, ಪಶ್ಚಿಮದ ಬಲಿಷ್ಠ ರಾಜ್ಯ–ಸಾಮ್ರಾಜ್ಯಗಳ ಎದೆಯ ಆಲುಗಾಟವನ್ನು ಹೆಚ್ಚಿಸತೊಡಗಿದೆ. ಇಂಗ್ಲಂಡ್ ಐರ್ಲಂಡ್‌ಗಳಲ್ಲಿ ಒಪ್ಪಂದ ನಡೆದುಹೋಯಿತು. ರಾಷ್ಟ್ರಸಂಘದ ಕೌನ್ಸಿಲಿನ ಬುದ್ಬುದಗಳು ಎದ್ದು ಒಡೆದುಹೋಗಿ, ರಾಷ್ಟ್ರಸಂಘವು ಪ್ರಪಂಚದಲ್ಲಿ ನಗೆಗೀಡಾಗಿದೆ. ಪೂರ್ವಖಂಡದಲ್ಲಿ ಚೀನ ಜಪಾನುಗಳ ಕಾಳಗ ನಿಕರಕ್ಕೆ ತಲ್ಪಿರುವಾಗ, ರಶಿಯಾ ದೇಶವು ಯಾವ ಭಾವನೆಯಿಂದಲೇನೋ ಗಡಿಯಲ್ಲಿ ಪಡೆಯನ್ನು ಸಜ್ಜುಗೊಳಿಸುವುದರಲ್ಲಿದೆ. ಹಿಂದುಸ್ಥಾನದಲ್ಲಿಯೆ ನೋಡಿದರೆ ಅಲ್ಲಿಯಲ್ಲಿ ಮಂತ್ರಿಮಂಡಲಗಳಲ್ಲಿ ಮತಭೇದಗಳ ಒಳವುರಿಯೆದ್ದು, ರಾಜೀನಾಮೆಯ ವರೆಗೂ ಪ್ರಸಂಗಬಂದು ನಿಲುಕಿದ್ದಿತು. ಹಂಗೇರಿಯನ್ ಸರಕಾರವು ರಾಜೀನಾಮೆಯನ್ನೆ ಕೊಟ್ಟುಬಿಟ್ಟಿತು. ಬ್ರಿಟಿಷ್‌ಮಂತ್ರಿಮಂಡಲವೆಲ್ಲ ಮಾರ್ಪಟ್ಟು ಹೋಯಿತು.

* * *

ಕರ್ನಾಟಕದಲ್ಲಿಯಂತೂ ಈ ಮೇ ತಿಂಗಳು ತನ್ನ ಮೊದಲಡಿಯೊಂದಿಗೇ ಅಶಾಂತಿಯನ್ನು ತೆಗೆದುಕೊಂಡು ಬಂದಿತು. ವಿದುರಾಶ್ವತ್ಥದ ನರಮೇಧದ ಕಾವು ಭರತಖಂಡದ ಮೂಲೆ ಮೂಲೆಗೂ ಹೋಗಿ ತಗಲಿತು. ಕನ್ನಡಿಗರ ಹೃದಯಗಳನ್ನಂತೂ ಅದು ಹುರುಪಳಿಸಿ ತೆಗೆಯಿತು. ರಾಮದುರ್ಗದ ಪ್ರಜಾಜನರು ಬಲುಮೆಯ ರಾಜನೀತಿಯೊಂದಿಗೆ ಜಗಳಹೂಡುವುದಕ್ಕೆಂದು ಹೆಂಗುಸರು – ಹುಡುಗರು – ಮುದುಕರು ಎನ್ನದೆ ಎಲ್ಲರೂ ಹುರಿಗೊಡುತ್ತಲಿದ್ದಾರೆ. ಜಮಖಂಡಿಯ ಪ್ರಜೆಗಳಲ್ಲಿಯೂ ಜೀವಕಳೆ ತುಂಬುತ್ತಿದ್ದಂತೆ ಲಕ್ಷಣಗಳು ತೋರತೊಡಗಿವೆ.

* * *

ಈ ತಿಂಗಳಲ್ಲಿ ಪರಿಷತ್ತು ಸಮ್ಮೇಲನಗಳದಂತೂ ಸುಗ್ಗಿಯೆ ಸುಗ್ಗಿಯಾಗಿದೆ. ವಿದೇಶದಲ್ಲಿ ರಾಷ್ಟ್ರಸಂಘದ ಕೌನ್ಸಿಲಿನ ಅಧಿವೇಶನ ಸೇರಿದ್ದಿತು. ಮುಂಬಯಿಯಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳ ಸಭೆಯೂ ಅಖಿಲಭಾರತ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲಿಯ ಸಮ್ಮೇಳನವೂ ನಡೆದವು. ಸಾಂವಸಿಯಲ್ಲಿ ಜಮಖಂಡೀ ಸಂಸ್ಥಾನ ಪ್ರಜಾಪರಿಷತ್ತು, ಸಾಂಗಲಿಯಲ್ಲಿ ದಕ್ಷಿಣ ಭಾರತ ಸಂಸ್ಥಾನಗಳ ಪ್ರಜಾಪರಿಷತ್ತು, ಧಾರವಾಡದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು– ಕರ್ನಾಟಕ ಇತಿಹಾಸ ಸಮ್ಮೇಲನಗಳು; ಕಟಪಾಡಿಯಲ್ಲಿ ಉಡುಪಿ ತಾಲ್ಲೂಕು ಪರಿಷತ್ತು.

* * *

ಮಾಯಾವಾದದ ವೇದಾಂತಿಗಳೇ ಮುಂದೆ ಬನ್ನಿರೀಗ! ಎಚ್ಚತ್ತಿರುವ ಜನತೆಯನ್ನು ಹೇಗಾದರೂ ಮಾಡಿ ಮತ್ತೆ ಮೊದಲಿನಂತೆ ಬಿದ್ದುಕೊಳ್ಳುವಂತೆ ಮಾಡಿ! ಮೇ ತಿಂಗಳು ಕೆಲಸವಿಲ್ಲದ ತಿಂಗಳೆಂದರೆ ಈಗ ಅದು ಇಲ್ಲದ ಕೆಲಸವನ್ನು ಜನರಿಗೆ ಹಂಚುತ್ತ ಬರುತ್ತಲಿದೆ. ಕ್ರಾಂತಿ– ಅಶಾಂತಿಗಳನ್ನು ಪಸರಿಸುತ್ತ ಬರುತ್ತಲಿದೆ. ಆಮೆಯ ಅವಯವಗಳಂತೆ ತನ್ನ ಇಂದ್ರಿಯಾದಿಗಳನ್ನೆಲ್ಲ ಒಳಕ್ಕೆಳೆದಿಟ್ಟುಕೊಳ್ಳುವವನೇ ಆದರ್ಶಪುರುಷನೆಂದು ಹೇಳುವ ನಮ್ಮ ತತ್ವಜ್ಞಾನವನ್ನು ಈ ಸಲದ ಮೇ ತಿಂಗಳು ತಲೆಯೆತ್ತದಂತೆ ಮಾಡಿದೆ. ಕನ್ನಡಿಗರೀಗ ಯಾವುದರ ಬೆನ್ನನ್ನು ಹತ್ತುವರು? ಕರ್ಮಜಾಲವನ್ನು ತಂದು ಮುಂದೊಡ್ಡಿದ ಕಾಲದ ಬೆನ್ನನ್ನೋ? ಸನಾತನವಾಗಿ ಬೆನ್ನು ಬಿಡದೆ ಬಂದಿದ್ದ ತತ್ವಜ್ಞಾನದ ಬೆನ್ನನ್ನೋ?

ರಾಷ್ಟ್ರಸಂಘವು ರುಗ್ಣಶಯ್ಯೆಯ ಮೇಲೆ

ಅನಾಥರಕ್ಷಣೆಗೆಂದು ಅವತಾರತಾಳಿದ ರಾಷ್ಟ್ರಸಂಘವು ಇಂದು ಬಲಿಷ್ಠರ ಬಗಲುಗೂಸಾಗತೊಡಗಿದೆ. ಜಗತ್ತಿನಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವೆನೆಂದು ಬಿರುದು ಮೆರೆಯಿಸುತ್ತ ಹೊರಟಿದ್ದ ರಾಷ್ಟ್ರಸಂಘವಿಂದು ಅಶಾಂತಿಪ್ರಸಾರಕರ ಅಡಿಯಾಳಾಗಿದೆ. ಕಳೆದ ತಿಂಗಳಲ್ಲಿ ಜಿನೀವಾದಲ್ಲಿ ಸೇರಿದ್ದ ರಾಷ್ಟ್ರಸಂಘದ ಕೌನ್ಸಿಲ್ಲು ಯಾವಗುರಿಯನ್ನು ಸಾಧಿಸಿತು!

ಅಬಿಸೀನಿಯಾ–ಇಟಲಿಗಳಲ್ಲಿ ಯುದ್ಧನಡೆದಿರುವಾಗ, ರಾಷ್ಟ್ರಸಂಘವು ಇಟಲಿಯ ಅಭಿಯೋಗಗಳನ್ನು ಕುರಿತು ತನ್ನ ವಿರುದ್ಧಾಭಿಪ್ರಾಯಗಳನ್ನು ಪ್ರಕಟಿಸುತ್ತಿತ್ತಲ್ಲದೆ ಅಬಿಸೀನಿಯಾ ರಾಷ್ಟ್ರಕ್ಕೆ ಇಲ್ಲದ ಸಹಾನುಭೂತಿಯನ್ನು ತೋರಿಸಿ, ಅಲ್ಲಿಯ ಅರಸನಲ್ಲಿ ನೆರವಿನಾಶೆಯನ್ನು ಹುಟ್ಟಿಸಿ, ಅವನನ್ನು ಹುಚ್ಚನನ್ನಾಗಿಸಿತು. ಈಗ ಗೆದ್ದೆತ್ತಿನ ಬಾಲ ಹಿಡಿಯುವುದೇ ಸ್ವಭಾವವಾಗಿದ್ದ ಬ್ರಿಟಿಷ ಪ್ರತಿನಿಧಿ ಹ್ಯಾಲಿಫಾಕ್ಸರು, ಮುಸಲೋನಿಯೊಂದಿಗೆ ಸ್ನೇಹಬಳಸುವ ಆಶೆಯಿಂದ ಇಟಲಿಯ ವಿಜಯವನ್ನು ಪುರಸ್ಕರಿಸಿ ಮಾತನಾಡಲು, ರಾಷ್ಟ್ರಸಂಘವು ಅವರ ಮಾತಿಗೆ ತಲೆಹಾಕಿತು. ಅಬಿಸೀನಿಯಾದ

ಎಲ್ಲಿ ಜಾಹೀರಾತು ಕೊಟ್ಟರೇನು—
ಎನಬೇಡಿರಿ
ಎಲ್ಲರೂ ನೋಡಬೇಕಲ್ಲವೆ?
ಅದಕಾಗಿ
ಜಯಂತಿಯಲ್ಲಿಯೆ ಕೊಡಿರಿ

ಚಕ್ರವರ್ತಿ ಹೈಲಿ ಸೆಲಾಸಿಯವರ ಬಿದ್ದ ತಲೆಯನ್ನು ಮೇಲಕ್ಕೇಳದಂತೆ ಜಜ್ಜಿಬಿಟ್ಟಿತು. ಇನ್ನೂ ಪೂರ್ಣನಿರ್ಣಯಕ್ಕಾಗಿ ಮುಂದಿನ ಅಸೆಂಬ್ಲಿಯ ಅಧಿವೇಶನದ ದಿನಗಳನ್ನು ಕಾಯುತ್ತಿರಬೇಕೆಂದು, ಪಾಪ- ಹೈಲಿ ಸೆಲಾಸಿಯವರ ಮೂಗಿಗೆ ತುಪ್ಪ ಹಚ್ಚಿದೆ ಬೇರೆ.

* * *

ನೆರೆಯ ಮನೆ ಉರಿದುಹೋಗುತ್ತಿದ್ದರೂ ತಾನು ನಿಂತು ತಮಾಷೆನೋಡುತ್ತಿರುವವರಂತಾಗಿವೆ ರಾಷ್ಟ್ರಸಂಘದ ರಾಜನೀತಿ. ಸ್ಪೇನಿನಲ್ಲಿ ಅಂತಃಕಲಹ ಪ್ರಾರಂಭವಾಗಿ—ಇನ್ನೊಂದು ತಿಂಗಳಾದರೆ—ಎರಡುವರ್ಷಗಳು ಮುಗಿಯುವುವು. ಲಕ್ಷಾವಧಿ ಜನರ ಪ್ರಾಣಹಾನಿ ಅಲ್ಲಿ! ಹೊಟ್ಟೆಗಿಲ್ಲದೆ ಬಾಯಿಬಿಡುತ್ತಿರುವ ಜನರು ಸ್ಪೇನಿನಲ್ಲಿ ಎಷ್ಟು ಜನರೋ ಏನೋ; ಆದರೆ ಈ ಅಂತಃಕಲಹ ೬೩೦ ಕೋಟಿ ರೂಪಾಯಿಗಳನ್ನು ಈಗಾಗಲೆ ತಿಂದುತೇಗಿದೆ. ಇನ್ನೂ ತಿನ್ನಲು ಬಾಯ್ದೆರೆಯುತ್ತಿದೆ. ಸರಕಾರವು ಬಲಹೀನ; ವಿರೋಧಿಯಾದ ಫ್ರಾಂಕೋ ಎಲ್ಲರೀತಿಯಿಂದಲೂ ಬಲಿಷ್ಠ. ಇವರಿಬ್ಬರ ನಡುವೆ ಜನತೆ ಸಿಕ್ಕಿ ಹಣ್ಣುಗಾಯಿ ನೀರುಗಾಯಿ ಆಗುತ್ತಿದೆ. ಇದರ ಒಗೆಗೆ ರಾಷ್ಟ್ರಸಂಘದ ಕರ್ತವ್ಯವೇನೂ ಇಲ್ಲವ್ರೋ! ಇದ್ದುದನ್ನು ಕಾಯ್ದುಕೊಳ್ಳುವುದು ಹೇಗೆಂಬ ಹೆದರಿಕೆಯಲ್ಲಿದ್ದ ಬ್ರಿಟಿಷರಿಗೆ ಇನ್ನೊಬ್ಬರ ಉಸಾಬರಿ ಬೇಡವಾಗಿದೆ; ಎಂತಲೆ ಲಾರ್ಡ್ ಹ್ಯಾಲಿಫಾಕ್ಸ್ ಅವರು, ಸ್ಪೇನಿನ ಸಂದರ್ಭದಲ್ಲಿ ಮಿಕ್ಕ ರಾಷ್ಟ್ರಗಳೆಲ್ಲ ತಟಸ್ಥವಾಗಿ ಉಳಿಯಬೇಕೆಂದು ವಾದಿಸಿದರು. ಇವರ ವಾದಕ್ಕೆ ರಾಷ್ಟ್ರಸಂಘದಲ್ಲಿ ಬಹುಮತದ ಬೆಂಬಲ.

* * *

ಇಬ್ಬರು ಈರ್ಷೆಯಿಂದ ಕುಸ್ತಿ ಹಿಡಿದಿದ್ದಾರೆ. ಕುಸ್ತಿಯಾಳೊಬ್ಬ ಎದುರಾಳಿಯಮೇಲೆ ಅನ್ಯಾಯದ ಪೇಚುಗಳನ್ನು ಹಾಕುತ್ತಿದ್ದಾನೆ. ಆಗ ನೋಡುವ ಹಿರಿಯರು, ತಾವು ನಿಂತಲ್ಲಿ ನಿಂತು 'ಅವನು ಹೀಗೆ ಮಾಡುವದು ಅನ್ಯಾಯ!' ಎಂದು ಗೊಣಗುಟ್ಟತೊಡಗಿದರೆ ಯಾರು ಕೇಳಬೇಕು ಅವರ ಗೊಣಗಾಟವನ್ನು? ಚೀನ್-ಜಪಾನ್ ಯುದ್ಧದಲ್ಲಿ ಜಪಾನಿಗಳು ವಿಷವಾಯುಗಳನ್ನು ಪಯೋಗಿಸುವುದು ತುಂಬ ಅನ್ಯಾಯ- ಎಂದು ರಾಷ್ಟ್ರಸಂಘವು ಬರಿಮಾತುಗಳಿಂದ ನಿಷೇಧಿಸಿಬಿಟ್ಟಿರುವುದು. ಯುದ್ಧೋನ್ಮತ್ತವಾದ ಜಪಾನು ರಾಷ್ಟ್ರಸಂಘದ ಈ ಬೆರಳುಮುರಿತದ ಶಾಪಕ್ಕಿಂದಾದರೂ ಬೆದರುವುದೇ? ಈ ಗೊತ್ತುವಳಿಯ ಶಬ್ದಗಳು ಚೀನಾ ದೇಶೀಯರಿಗೆ ತಾರಕಮಂತ್ರವಾಗಬಹುದೆಂದು ರಾಷ್ಟ್ರಸಂಘದ ವಿಶ್ವಾಸವ್ರೋ ಏನೋ! ನಮ್ಮಲ್ಲಿ ಹಾಸಕೂಟವು ಉಚ್ಚಧ್ಯೇಯವನ್ನಿಟ್ಟುಕೊಂಡು ಹೊರಟು, ಕೊನೆಗದು ತಿರುಪೆಬೇಡುವ ಕಿಸುಬಾಯಿದಾಸರ ಕೈಸೇರಿದಂತೆ—ಜಗತ್ತಿನ ಯೋಗಕ್ಷೇಮಕ್ಕಾಗಿ ಹೊರಟಿದ್ದ ರಾಷ್ಟ್ರಸಂಘವಿಂದು ಸ್ವಾರ್ಥಸಾಧಕರ ಕೈಯಲ್ಲಿ ಸಿಕ್ಕಿಕೊಂಡು ನಿಂತಲ್ಲಿಯೆ ಜೋಲಿಹೊಡೆಯುತ್ತಲಿದೆ.

ಅಶಾಂತಿಪ್ರಸಾರಕರಿಗೆ ಅಮೇರಿಕೆಯ ಎಚ್ಚರಿಕೆ!

ಬ್ರಿಟಿಷ್ ರಾಷ್ಟ್ರವು ತಾನು ಬಲಾಢ್ಯವೆಂಬುದನ್ನು ಮರೆತು ಇಂದು ಬಾಲಗುಂಡಾಡಿಸತೊಡಗಿದಂತೆ ತೋರುತ್ತಲಿದೆ. ಈಗ ಪೂರ್ವ-ಪಶ್ಚಿಮಖಂಡಗಳ ಮನಸ್ಸನ್ನು ಕಂಪಿಸಲು ಹಚ್ಚಿದ ಜರ್ಮನಿ, ಇಟಲಿ, ಜಪಾನುಗಳ ಜೊತೆಗೆ ಅದು ಸಖ್ಯವನ್ನು ಬಯಸುತ್ತಿದೆ. ಮುಂದಿನ ತೊಡಕನ್ನು ತಿಳಿದುಕೊಂಡೋ ಏನೋ ಐರ್ಲಂಡಿನ ಕೂಡ ಒಳ್ಳೆಯರೀತಿಯಿಂದ ಒಪ್ಪಂದಮಾಡಿಕೊಂಡು ಮೈಗೆ ನೆಡಿಸಿಕೊಂಡಿದ್ದ ಮೊಳೆಯನ್ನದು ಕಿತ್ತೊಗೆಯಿತು. ತನ್ನ ಗಡಿಯ ಸಂರಕ್ಷಣೆಗಾಗಿ ನೆರೆಯ ನಾಡಾದ ಫ್ರಾನ್ಸಿನೊಡನೆ ಹೊಸ ಒಪ್ಪಂದವನ್ನು ಮಾಡಿಕೊಂಡಿತು. ಬ್ರಿಟಿಷರ ಈಬಗೆಯ ಸಡಿಲುತನವನ್ನು ನೋಡಿದ ಜರ್ಮನಿ, ಇಟಲಿ, ಜಪಾನುಗಳು ತಮ್ಮ ಪಾಶವನೃತ್ಯವನ್ನು ಹೆಚ್ಚಿಸುತ್ತಲಿವೆ. ಅದಕ್ಕಾಗಿಯೆ ಅಮೇರಿಕದ ಸಂಯುಕ್ತಸಂಸ್ಥಾನಗಳ ಯುದ್ಧಮಂತ್ರಿಯಾದ ಮಿ. ಊಡ್ರಿಂಗ್ ಅವರು ಈ ಮೂರೂ ರಾಷ್ಟ್ರಗಳನ್ನು ಕುರಿತು ಹೀಗೆಂದು ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ:

"ನೀವು ಪ್ರಜಾಸತ್ತಾತ್ಮಕ ರಾಷ್ಟ್ರಗಳ ಮೇಲೆ ಹೀಗೆಯೆ ದಾಳಿಮಾಡುತ್ತ ಹೊರಟರೆ, ಮತ್ತೆ ಜಾಗತಿಕ ಮಹಾಯುದ್ಧವು ಖಂಡಿತವಾಗಿ ನಡೆಯುವುದೆಂಬುದನ್ನು ಮರೆಯಬೇಡಿ! ಪ್ರಜಾಸತ್ತಾತ್ಮಕ ರಾಜ್ಯಗಳು ಸದ್ಯ ಶಾಂತವಾಗಿವೆ. ಅವುಗಳ ಮೇಲೆ ಹೆಚ್ಚುಹೆಚ್ಚಿನ ಭಾರವನ್ನು ಹಾಕಿದ್ದಾದರೆ, ಆ ರಾಷ್ಟ್ರಗಳೆಲ್ಲವೂ ರೊಚ್ಚುಗೊಂಡು ಬೆಂಕೆಯನ್ನುಗುಳಲಾರಂಭಿಸುವುವು. ಆಗ ಅಂತರರಾಷ್ಟ್ರೀಯ ಶಾಂತತೆಯನ್ನುಳಿಸಿಕೊಳ್ಳುವುದು ಅಸಾಧ್ಯವಾದೀತು. ನಿಮ್ಮ ದಾಳಿಗಳನ್ನು ಈಗಲೆ ಬಿಗಿಹಿಡಿಯಬೇಕು! ಇಲ್ಲವಾದರೆ ಅದು ಹಿಡಿತತಪ್ಪಿ ಮಹಾ ಅನರ್ಥಗಳನ್ನು ತಂದೊಡ್ಡಲಿಕ್ಕೆ ಕಾರಣವಾದೀತು."

ಈ ರೀತಿ ಎಚ್ಚರಿಕೆ ಕೊಟ್ಟ ಮಿ. ಊಡ್ರಿಂಗ್ ಅವರು ಮುಂದೆ ತಮ್ಮ ಜನರನ್ನು ಕುರಿತು ಹೀಗೆ ಹೇಳಿದ್ದಾರೆ:—

"ಮಹಾಯುದ್ಧದ ಸಂಭವವು ಈಗಿಲ್ಲವಾದರೂ ನಾವು ನಮ್ಮ ಶಕ್ತಿಗಳನ್ನು ಬೆಳಿಸಿಕೊಳ್ಳುವುದು ತುಂಬ ಅಗತ್ಯವಾಗಿದೆ. ಒಂದುವೇಳೆ ಪರರಾಷ್ಟ್ರಗಳಲ್ಲಿ ಯುದ್ಧಗಳು ಸಂಭವಿಸಿದುವೆಂದರೆ ಅದರ ಪರಿಣಾಮ ನಮ್ಮಲ್ಲಿಯ ಶಾಂತತೆಯನ್ನೂ ಕಲಕದೆ ಇರಲಾರದು."

ಮಿ. ಊಡ್ರಿಂಗರ ಮಾತುಗಳು ಸದ್ಯದ ಪರಿಸ್ಥಿತಿಯಲ್ಲಿ ಹಿಟ್ಲರ್-ಮುಸಲೋನಿಯವರ ಕಿವಿಗಳನ್ನೇನೂ ಕಚ್ಚಲಾರವು. ಅವರಿಬ್ಬರ ಸಂಗಮದ ಗಂಡಭೇರುಂಡ ಇಂದು 'ಸೊಲವನ್ನೆಲ್ಲಾ ತುತ್ತುವ' ಹವಣಿಕೆಯಿಂದ ಗಗನದಲ್ಲಿ ಹಾರಾಡುತ್ತಿರಬಹುದು.

ಜೋಲಾಡುತ್ತಿರುವ ಜೆಕೊಸ್ಲೊವಾಕಿಯಾ

ಜೆಕೊಸ್ಲೊವಾಕಿಯಾದ ವರ್ತಮಾನ ರಾಜಕೀಯ ಪರಿಸ್ಥಿತಿಯು ಹುಲ್ಲುಕಡ್ಡಿಯನ್ನು ಹಿಡಿದು ನೇತಾಡುತ್ತ ನಿಂತಿದೆ. ಆಸ್ಟ್ರಿಯಾ ರಾಷ್ಟ್ರವನ್ನು ನುಂಗಿ ನೀರುಕುಡಿದ ನಾಝಿಗಳಿಗೆ ಜೆಕೊಸ್ಲೊವಾಕಿಯಾ ಎಂದರೆ ಬೆಣ್ಣೆಯ ಗುಳಿಗೆಯಿದ್ದಂತೆ. ಜೆಕೊಸ್ಲೊವಾಕಿಯಾದ ನಿವಾಸಿಗಳಾಗಿರುವ ಸುಡೆಟನ್ ಜರ್ಮನರು ಸಮ್ಮತಿಸಿದರೆ ಈ ಗುಳಿಗೆಯೂ ಸಹಜವಾಗಿ ಹಿಟ್ಲರನ ಗಂಟಲಿನಲ್ಲಿ ಇಳಿಯಬಹುದು. ಆದರೆ ಅಲ್ಲಿಯ ಸುಡೆಟನ್ನ್ ಪಕ್ಷದ ಮುಂದಾಳು ಹರ್ ಹೆನ್ಲಿಯನನು ಇದುವರೆಗಂತೂ ಮಾತನಾಡುತ್ತಿದ್ದಾನೆ : 'ನಮ್ಮ ಗುರಿಯು ಜರ್ಮನ್‌ಯೊಂದಿಗೆ ಬೆರೆತುಕೊಳ್ಳುವುದಾಗಿಲ್ಲ' ಎಂದು. ಆದರೂ ಜರ್ಮನ್ ಪಡೆಗಳು ಗಡಿನಾಡಿನಲ್ಲಿ ನಡೆಯಿಸಿರುವ ಸುಳಿದಾಟವನ್ನು ನೋಡಿದರೆ ಈಗಿದ್ದ ಜೆಕೊಸ್ಲೊವಾಕಿಯಾ ಸರಕಾರವು ಇನ್ನು ಮೇಲೆ ಉಳಿಯುವುದೋ ಇಲ್ಲವೋ ಎಂದು ಕುತೂಹಲವುಂಟಾಗುವಂತಿದೆ. ಆಡಳಿತ, ಚುನಾವಣೆ ಮೊದಲಾದ ರಾಜಕಾರ್ಯಗಳಲ್ಲಿ ಅಲ್ಲಿಯ ಸುಡೆಟನ್ ಜರ್ಮನ್ ಜನರಿಗೆ ಹಾನಿಯೇನಾದರೂ ಸಂಭವಿಸಿದರೆ ಮಾತ್ರ ಜೆಕೊಸ್ಲೊವಾಕಿಯಾದ ಪರಿಸ್ಥಿತಿಯು ಒಮ್ಮೆಲೆ ವಿಕೋಪಕ್ಕೆ ಹೋಗಬಹುದಾಗಿ ತೋರುವುದು. ಜರ್ಮನ್ ನಾಝಿಗಳಿಗೆ ಬೇಕಾಗಿದೆ ಏನಾದರೂ ನೆಪ ! ಆ ನೆಪವು 'ನೀನು ಬೈಯದಿದ್ದರೆ ನಿಮ್ಮಪ್ಪ ಬೈದಿರಬಹುದು !' ಎಂಬ ಕುರಿ–ತೋಳಗಳ ಕತೆಯ ನೆಪವಾದರೂ ಸಾಕು ! ಆಗ ಜೆಕೊಸ್ಲೊವಾಕಿಯಾದ ಈಗಿನ ಅಧ್ಯಕ್ಷರು ಡಾ. ಶುಸ್ನಿಗ್ ಅವರ ಅಡಿಯಲ್ಲಿ ಅಡಿಯಿಟ್ಟು ಹೊರಡಬೇಕಾಗಿ ಬರುವುದು.

ಚೀನ್–ಜಪಾನುಗಳ ಕಡೆಗೆ ಕಣ್ಣಿಕ್ಕಿದರೆ !

ನಮಗೆ ಬರುವ ಸುದ್ದಿಗಳು ಒಮ್ಮೆ ಜಪಾನಿಗಳ ಜಯವನ್ನೂ ಇನ್ನೊಮ್ಮೆ ಚೀನಿಗಳ ವಿಜಯವನ್ನೂ ಸಾರುತ್ತ ಬರುತ್ತಲಿವೆ. ಯುದ್ಧದ ಕಾಲದ ವಾರ್ತೆಗಳು ಎಂತೆಂತಹ ಬಣ್ಣ ಬರೆದುಕೊಂಡು ಹೊರಕ್ಕೆ ಬರುತ್ತವೆಯೇನೋ ! ಕಳೆದ ಮಹಾಯುದ್ಧ, ಮೊನ್ನೆ ಮೊನ್ನೆ ನಡೆದ ಇಟಲಿ–ಅಬಿಸೀನಿಯಾದ ಯುದ್ಧ ಇವುಗಳ ವಾರ್ತೆಗಳ ಅನುಭವದಿಂದ ಹೇಳಬೇಕಾಗಿದ್ದಲ್ಲಿ, ಯುದ್ಧಕ್ಷೇತ್ರದಲ್ಲಿ ನಡೆದ ವಾಸ್ತವಾಂಶವೇ ಬೇರೆ ; ಅದರ ವಿಷಯಕವಾಗಿ ಹೊರಟ ಸುದ್ದಿಗಳ ಹೇಳಿಕೆಯೇ ಬೇರೆ. ಚೀನಿಗಳು ಜಪಾನಿಗಳನ್ನು ಅವರು ನಿರೀಕ್ಷಿಸಿದುದಕ್ಕೆ ನೂರರಷ್ಟು ಬಲದಿಂದ ಎದುರಿಸುತ್ತಿರಬಹುದು. ಆದರೆ ದಿನದಿನಕ್ಕೂ ಜಪಾನಿಗಳ ಹೆಜ್ಜೆ ಚೀನದೊಳಕ್ಕೆ ನುಗ್ಗುತ್ತಿವೆಯೆಂಬ ಸುದ್ದಿಗಳು ಚೀನಾದೇಶದ ದೌರ್ಭಾಗ್ಯವನ್ನೇ ಸೂಚಿಸುತ್ತಿವೆ. ಜಪಾನಿಗಳು ಮೊನ್ನೆಮೊನ್ನೆಯೆ ಚೀನಿಗಳ 'ಸೂಚಾ' ನಗರಕ್ಕೆ ದಾಳಿಯಿಟ್ಟು ಹಾಳುಮಾಡಿದರು. ಹೆಣಗಳ ರಾಶಿಯಿಂದ ಸೂಚೌ ಪಟ್ಟಣವು ಯಮಪಟ್ಟಣವಾಗಿ ಪರಿಣಮಿಸಿತು. ಜಪಾನಿಗಳ ಈ ವಿಜಯವು ಉತ್ತರ ಮತ್ತು ಮಧ್ಯ ಚೀನದಲ್ಲಿಯ ಸೇನಾವ್ಯೂಹಗಳನ್ನು ಭೇದಿಸಲು ಅನುಕೂಲವಾಯಿತು. 'ಹುಸ್‌ಚೌ'ನಗರದಲ್ಲಿ ಲಕ್ಷಾವಧಿ ಚೀನಾ ದಂಡಾಳುಗಳು ಜಪಾನಿಗಳ ಮುತ್ತಿಗೆಯಲ್ಲಿ ಸಿಕ್ಕಿ ಕಂಗೆಟ್ಟಿದ್ದಾರೆಂದು ಜಪಾನಿಗಳು ಹರಡಿದ ಸುದ್ದಿ. ಅಂತೂ ನಡೆಯುತ್ತಿರುವುದನ್ನು ನಿರೀಕ್ಷಿಸಿದರೆ ಚೀನ್–ಜಪಾನ್ ಯುದ್ಧವು ಬೇಗನೆ ಮುಗಿಯಲಾರದೆಂದೆನಿಸುವುದು. ಜಪಾನಿಗಳಲ್ಲಿ ಆಧುನಿಕ ಶಸ್ತ್ರಾಸ್ತ್ರಗಳ ಬಲವಿದ್ದರೆ ಚೀನಾದೇಶೀಯರಿಗೆ ದೇಶಾಭಿಮಾನ ಪೂರಿತವಾದ ಸೈನ್ಯಬಲವಿದೆ. ಸ್ವಸಾಮರ್ಥ್ಯೋನ್ಮತ್ತವಾದ ಜಪಾನು ನೆರೆಯರಾಷ್ಟ್ರಗಳ ಸಹಾಯ–ಸಹಾನುಭೂತಿಗಳನ್ನು ಕಳೆದುಕೊಳ್ಳುತ್ತ ನಡೆದಿದೆ; ತನ್ನ ಸಂರಕ್ಷಣೆಗಾಗಿ ನ್ಯಾಯ ಮಾರ್ಗದಿಂದ ಕಾದಾಡುವ ಚೀನಾದೇಶವು ದಿನದಿನಕ್ಕೆ ಪ್ರಪಂಚದ ಸಹಾನುಭೂತಿಗೆ ಕಾರಣವಾಗುತ್ತ ನಡೆದಿದೆ. ಆದರೆ ಗೆದ್ದವರ ಬಾಲಹಿಡಿದು ನಡೆಯುವ ಪ್ರಪಂಚದ ಈ ತಾತ್ಕಾಲಿಕ ಸಹಾನುಭೂತಿಯು ಕ್ರಿಯಾಸಹಿತವಾಗುವವರೆಗೂ ಹುರುಳಿಲ್ಲದುದೇ ಆಗಿರುವುದೆಂಬುದು ಇದುವರೆಗಿನ ಅನುಭವ !

ನಗೆಗೀಡಾಗುವಂತಹ ನವೀನ ವರ್ತಮಾನ.

ಫ್ರೇಂಚ್ ಪತ್ರಿಕೆಗಳಲ್ಲಿ ಹೊಸಸುದ್ದಿಯೊಂದು : ಜಪಾನು ಅಫಗಾಣಿಸ್ತಾನದ ಮುಖಾಂತರ ಹಿಂದುಸ್ತಾನಕ್ಕೆ ದಾಳಿಯಿಡಲು ಹವಣಿಸುತ್ತಿದೆಯಂತೆ. ಅಫಗಾಣಿಸ್ತಾನದಲ್ಲಿ ಸೈನ್ಯಶಿಕ್ಷಕರಾಗಿರುವವರೆಲ್ಲರೂ ಹೆಚ್ಚಾಗಿ ಜಪಾನಿಗಳೇ. ಆದುದರಿಂದ ಅವರ ಕೈಚಳಕ ಅಲ್ಲಿ ಚೆನ್ನಾಗಿ ನಡೆಯುತ್ತದೆಯಂತೆ. ಈಗಾಗಲೆ ಅಲ್ಲಿ ಗುಪ್ತ ಕಾರಸ್ಥಾನ ನಡೆದಿದೆಯಂತೆ. ಈ ಕಾರಸ್ಥಾನಕ್ಕೆ ಹದ್ದುಪಾರಿನ ಶಿಕ್ಷೆಗೊಳಗಾಗಿದ್ದ ಹಿಂದುಸ್ತಾನದ ರಾಜಾ ಮಹೇಂದ್ರಪ್ರತಾಪ ಅವರು ಪುಢೋದಕರಾಗಿರುವಂತೆ.

ರಾಜಾ ಮಹೇಂದ್ರಪ್ರತಾಪರ ದೇಶಾಭಿಮಾನವನ್ನು ಭಾರತೀಯರೆಲ್ಲರೂ ಚೆನ್ನಾಗಿ ಬಲ್ಲರು. ಪಾರತಂತ್ರ್ಯಪಂಕದಿಂದ ಭಾರತದೇಶವನ್ನು ಮೇಲಕ್ಕೆತ್ತಬೇಕೆಂಬ ಗುರಿಯಿಂದ ಹೊರಟು ಜೀವನದಲ್ಲಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದವರಿವರು. ಇವರು ಪ್ರಪಂಚವನ್ನೆಲ್ಲ ಸುತ್ತಿಸುತ್ತಿ ಕೊನೆಗೆ ರಷ್ಯಾದಲ್ಲಿಯೂ ಜಪಾನಿನಲ್ಲಿಯೂ ಅಲ್ಲಲ್ಲಿಯ ಸರಕಾರದ ಅತಿಥಿಗಳಾಗಿ ಇದ್ದರು.

ಫ್ರಾನ್ಸಿನ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ–ಮೇಲೆ ಹೇಳಿದ ವರ್ತಮಾನಕ್ಕೆ ಏನಾದರೂ ತಳಬುಡವಿರಬಹುದೆ? ಇದೆಯೆಂದರೆ ಚೀನದೊಂದಿಗೆ ಸಮುಕುಸ್ತಿಯಾಡುತ್ತಿರುವ ಜಪಾನಿಗೆ ಹಿಂದುಸ್ತಾನದ ಕಡೆಗೆ ಕಣ್ಣಿಕ್ಕಲಿಕ್ಕಾದರೂ ಈಗ ಅವಕಾಶವಿದೆಯೆ ಒಂದು ವೇಳೆ ಜಪಾನು ವಿಜಯಶಾಲಿಯಾದರೂ ಚೀನಿಯರಿಂದ ತಿಂದಿದ್ದ ಏಟುಗಳನ್ನು ಮಾಯಿಸಿಕೊಂಡೂ ಬಂದಿದ್ದ ಗ್ಲಾನಿಯಿಂದ

ವಿಶ್ವವನ್ನೆಲ್ಲ ತೋರಿಸಿ ಕೊಡಲು

ದ್ವಾಪರದಲ್ಲಿ ವಿಶ್ವರೂಪ !

ಕಲಿಯುಗದಲ್ಲಿ

ಜಯಂತಿ

ಜೇತರಿಸಿಕೊಂಡೂ ಮೇಲಕ್ಕೇಳಬೇಕಾದರೆ ಹಲವುಕಾಲ ಕಳೆಯಬೇಕು! ಹಿಂದುಸ್ಥಾನದಂತಹ ಸುಂಗಲಾರದ ತುತ್ತಿಗೆ ಸದ್ಯ ಕೈಹಾಕಬಾರದೆಂಬ ಜಾಣತನವು ಜಪಾನಿನ ರಾಜಕಾರ್ಯವಿದರಲ್ಲಿ ಇರದಿರಲಾರದು. ಇನ್ನೊಂದು ಮಾತು! ಏನಾದರೂ ಕುತೂಹಲಾಸ್ಪದ ಸುದ್ದಿಯನ್ನು ಪ್ರಕಟಿಸಬೇಕೆಂದು ಯಾವಾಗಲೂ ಹೊಸದನ್ನು ಹುಡುಕುವ ವೃತ್ತಪತ್ರಿಕೆಗಳ ಕೈವಾಡವೇ ಆಗಿದ್ದರೂ ಆಗಿರಬಹುದು—ಈ ವರ್ತಮಾನ!

ಸಹಕಾರಬಲದ ಸಣ್ಣದೊಂದು ಪಾಠ.

ಸರಿ! ಇನ್ನುಮೇಲೆ ನಮ್ಮ ಸಂಬಾರದ ಮಸಾಲೆಗೆ ಹೆದರಿಕೆಯಿಲ್ಲದೆ ಲವಂಗವನ್ನು ಸೇರಿಸೋಣ! ಪಸಾಹತು ಮಂತ್ರಿಗಳಾದ ಮಾಲಕಮ್ ಮ್ಯಾಕ್ಡೊನಾಲ್ಡ್ ಅವರೂ ಒಪ್ಪಂಗಕ್ಕೆ ಒಪ್ಪಿಗೆ ಕೊಟ್ಟರು. ಜಾಂಜಿಬಾರ್ ಸರಕಾರವು ಮೊದಲೆ ಈ ಜಾಣತನವನ್ನು ತೋರಿಸಿದ್ದರೆ ಎಷ್ಟು ಒಳ್ಳೆಯದಾಗುತ್ತಿದ್ದಿತು. ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬೇಕೆಂಬ ಸ್ವಾಭಿಮಾನಬುದ್ಧಿ ಭಾರತೀಯರಲ್ಲಿ ದಿನದಿನಕ್ಕೆ ಜಾಗೃತವಾಗುತ್ತ ನಡೆದಿದೆಯೆಂಬುದನ್ನು ಈಗಲಾದರೂ ಜಾಂಜಿಬಾರ್ ಸರಕಾರವು ಚನ್ನಾಗಿ ಗೊತ್ತುಮಾಡಿಕೊಂಡು, ಅಲ್ಲಿರುವ ಭಾರತೀಯರ ಆಶೆ-ಆಕಾಂಕ್ಷೆಗಳನ್ನು ಹತ್ತಿಕ್ಕದಿರಲಿ! ಈ ಒಪ್ಪಂದದ ಪರಿಣಾಮವಾಗಿ ಹಿಂದುಸ್ಥಾನದಲ್ಲಿ ಹಲವುದಿನಗಳಿಂದ ನಡೆದಿದ್ದ ಲವಂಗಬಹಿಷ್ಕಾರದ ಚಳವಳಿಯನ್ನು ತಡೆಹಿಡಿಯುವುದಾಗಿ, ಅ. ಭಾ. ರಾಷ್ಟ್ರಸಭೆಯ ವರ್ಕಿಂಗ್ ಕಮಿಟಿಯೂ ನಿರ್ಣಯಿಸಿತ್ತಿದೆ. ನೆರೆಮನೆಗೆ ಬೆಂಕಿ ಬಿದ್ದರೆ ನೋಡುತ್ತ ನಿಂತುಬಿಡುವಂತಹ ಸಹಕಾರಧರ್ಮ ಭಾರತೀಯರ ಇತಿಹಾಸದಲ್ಲಿ ಹೆಸರಾದುದು! ಆದರೆ ಎಲ್ಲಿಯೋ ಗೊತ್ತಿಲ್ಲದಲ್ಲಿ ವಾಸಿಸುತ್ತಿದ್ದ—ಎಂದೂ ನೋಡಿ ಗೊತ್ತಿಲ್ಲದ—ನಮ್ಮವರಿಗಾಗಿ ಲವಂಗವನ್ನು ಬಹಿಷ್ಕರಿಸುವಂತಹ ಪ್ರತ್ಯಕ್ಷ ಸಹಕಾರವನ್ನು ಭರತಖಂಡದಲ್ಲಿರುವ ಭಾರತೀಯರು ನಾವು ಈಗ ನೀಡಿ, ಅನೇಕರ ಅಭಿನಂದನೆಗಳಿಗೆ ಪಾತ್ರರಾಗಿದ್ದೇವೆ. ಸಹಕಾರಬಲದ ಈ ಸಣ್ಣ ಪಾಠವನ್ನೋದಿ ಆಯಿತು; ಅದರ ಪರಿಣಾಮವೂ ಪ್ರತ್ಯಕ್ಷವಾಗಿ ಕಂಡುಬಂದಿತು. ನಾವು ಕಲಿಯಬೇಕಾದ ಸಹಕಾರದ ಸಣ್ಣದೊಡ್ಡ ಪಾಠಗಳೆಷ್ಟೋ ಇವೆ. ಅವೆಲ್ಲವನ್ನೂ ಓದಿ ಅನುಷ್ಠಾನಕ್ಕೆ ತರದೆ ಹೋದಲ್ಲಿ ನಾವು ನಮ್ಮ ಗುರಿಯನ್ನು ಎಂದೂ ತಪ್ಪಲಾರೆವು.

ನಿಮ್ಮ ಸಾಮಾನುಗಳ ಸುದ್ದಿ

ಜಗತ್ತಿಗೆಲ್ಲ

ಗೊತ್ತಾಗಬೇಕಾದರೆ

ಜಯಂತಿಯಿಂದಲೆ ಸಾಧ್ಯ

ಬಿದ್ದವರನ್ನು ಎತ್ತಿ ಹಿಡಿದಿರಿ; ಬೀಳುತ್ತಿರುವವರನ್ನು!

ಇಂದು ಹಿಂದುಸ್ಥಾನದ ಯಾವ ಧುರೀಣನ ಬಾಯಲ್ಲಿಯೂ ಹಳ್ಳಿಗಳ ಸುಧಾರಣೆ, ರೈತರ ಹಿತ, ಕೂಲಿಕಾರರ ಹಿತ ಇವುಗಳನ್ನೆ ಕುರಿತು ಮಾತುಗಳಿವೆಯಲ್ಲದೆ ಸುಶಿಕ್ಷಿತರಾದ ಮಧ್ಯಮವರ್ಗದವರ ಕಷ್ಟದ ಬಾಳನ್ನು ಕುರಿತು ಯಾರೂ ಮಾತನ್ನೆತ್ತಲೊಲ್ಲರು.

ಕಳೆದ ತಿಂಗಳ ೩ನೆಯ ವಾರದಲ್ಲಿ ಕಾಂಗ್ರೆಸ್ ಪ್ರಾಂತಗಳ ಮುಖ್ಯಪ್ರಧಾನರ ಪರಿಷತ್ತು ಮುಂಬಯಿಯಲ್ಲಿ ಸೇರಿದ್ದಿತು. ಅಲ್ಲಿ ಅವರು ತಮ್ಮ ಆಡಳಿತದ ಧೋರಣವನ್ನು ಕುರಿತು ಚರ್ಚೆಯನ್ನು ನಡೆಯಿಸಿದರು. ಆಗ ಶಿಕ್ಷಣಪ್ರಸಾರದ ಯೋಜನೆಯನ್ನೆ ಕುರಿತು ಮಾತನಾಡಿದರಲ್ಲದೆ, ಸುಶಿಕ್ಷಿತ ನಿರುದ್ಯೋಗಿಗಳ ಹೆಸರನ್ನೆ ಎತ್ತಲಿಲ್ಲ. ರೈತರ ಋಣಪರಿಹಾರದ ವಿಚಾರವನ್ನು ಚರ್ಚಿಸಿದರೇ ಹೊರತು, ಹಿಂದುಸ್ಥಾನದ ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ತುಂಬ ತುಟ್ಟಿ ಬೆಲೆಯ ವಿದ್ಯಾಭ್ಯಾಸಕ್ಕಾಗಿ ಮನೆಮಾರುಗಳನೆಲ್ಲ ಒತ್ತೆಯಿಟ್ಟು ಬರಿಹೊಟ್ಟೆಯಿಂದ ತಿರುಗುವವರ ವಿಷಯಕ್ಕೆ ಯಾವ ಚರ್ಚೆಯೂ ನಡೆಯಲಿಲ್ಲ. ಕೂಲಿಕಾರರ ಅನುಕೂಲತೆಗಾಗಿ ಅಲ್ಲಿ ನೂರರಷ್ಟು ಮಾತಾಗಿದ್ದರೆ ಒಂದು ಮಾತು ಕೂಡ ಮಧ್ಯಮವರ್ಗದವರನ್ನು ಮೇಲಕ್ಕೆತ್ತುವುದರ ಬಗೆಗೆ ಯಾರೂ ಆಡಲಿಲ್ಲ. ಅಪರಾಧ ಮಾಡಿದವರನ್ನು ಶಿಕ್ಷಿಸುವುದಕ್ಕಾಗಿ ನಿರ್ಮಾಣವಾದ ಸೆರೆಮನೆಗಳ ಸುಧಾರಣೆಯನ್ನು ಕುರಿತು ಖಂಡುಗಗಟ್ಟಲೆ ಆರೆದಾಟ ನಡೆಯಿತು; ಆದರೆ ಶಿಕ್ಷಣದ ಬೇಡಿಯನ್ನು ಹಾಕಿಕೊಂಡು ಬಯಲನ್ನೆ ಸೆರೆಮನೆಯನ್ನಾಗಿ ಮಾಡಿಕೊಂಡಿದ್ದವರನ್ನು ಕುರಿತು ಒಂದು ಬಳ್ಳದಷ್ಟು ಮಾತನ್ನೂ ಯಾರೂ ಬಳಸಲಿಲ್ಲ. ನಾಗರಿಕರ ಹಕ್ಕುಗಳ ಸಂರಕ್ಷಣೆಯ ವಿಷಯಕ್ಕೆ ಮೊದಲನೆಯ ದಿನದ ಸಭೆಯ ಸಮಯವೆಲ್ಲವೂ ವೆಚ್ಚವಾಯಿತು; ಆದರೆ ನಾಗರಿಕರು ನಿರುದ್ಯೋಗ ಸಮಸ್ಯೆಯಿಂದ ಬದುಕಿ ಉಳಿದಾಗ ಅಲ್ಲವೇ ತಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಕಾದಾಡಬೇಕು? ಈಗ ಕಾಂಗ್ರೆಸ್ ಸರಕಾರದ ಸೆರೆಮನೆಗಳಲ್ಲಿ ರಾಜಕೀಯ ಸೆರೆಯಾಳುಗಳಿಗೆ ಹೆಚ್ಚಿನ ಅನುಕೂಲತೆ ದೊರೆಯುವುದು; ಆದುದರಿಂದ ಸುಶಿಕ್ಷಿತ ನಿರುದ್ಯೋಗಿಗಳೆಲ್ಲರೂ ಯಾವುದಾದರೂ ಒಂದುಬಗೆಯಿಂದ ರಾಜಕೀಯ ಅಪರಾಧಿಗಳಾಗಿ ಸೆರೆಮನೆಯನ್ನು ಸೇರಿದರೆ ಸದ್ಯದ ಮಟ್ಟಿಗಾದರೂ ಜೀವನದ ಚಿಂತೆ ತಪ್ಪೀತು!

ಸುಶಿಕ್ಷಿತ ಮಧ್ಯಮವರ್ಗದವರಂತೆಯೇ ನಮ್ಮಲ್ಲಿಯ ಕೈಗಾರಿಕೆಯೇ ಪರಂಪರಾಗತ ಉದ್ಯಮವಾಗಿರುವ ಜನರೂ ಹಸಿದ ಹೊಟ್ಟೆಯಿಂದ ತೊಳಲುತ್ತಿದ್ದಾರೆ. ರೈತರು, ಕೂಲಿಕಾರರು, ಹರಿಜನರು ಇವರೆಲ್ಲರ ಹಿಂದಿನಲ್ಲಿ ನುಗ್ಗಿ ಹೋಗಿ, ಸರಕಾರದ ಕಿವಿಗೆ ತಮ್ಮ ಕೂಗನ್ನು ತಲ್ಪಿಸಲಿಕ್ಕಾಗಲೊಲ್ಲದವರಿಗೆ. ಅಲ್ಲಲ್ಲಿಯ ಸರಕಾರಗಳು ತೆರೆದಿದ್ದ ವಿವಿಧ ಕೈಗಾರಿಕೆಯ ಶಾಲೆಗಳು, ಇಲ್ಲದ ಕೈಗಾರಿಕೆಗಳನ್ನು ಕಲಿಸುತ್ತಿವೆಯೇ ಹೊರತು ಇದ್ದ ಕೈಗಾರಿಕೆಗಳ ಸಂರಕ್ಷಣೆಮಾಡಿ ಅವುಗಳನ್ನವಲಂಬಿಸಿಕೊಂಡಿದ್ದ ಜನರ ಬದುಕಿಗೆ ನೆರವನ್ನು ನೀಡಲಾರವು.

ಹಿಂದೂ ಮುಸಲ್ಮಾನರ ಸಂಧಾನಸಂಭ್ರಮ

"ಗೋವಿಂದನಿಗೆ ಕೂಡಿ ಆಡುವ ಆಶೆ. ಸ್ವಭಾವ ಉದಾರ! ಶಂಕರನಿಗೆ ಕೂಡಿ ಆಡುವ ಆಶೆಯಿದೆಯೋ ಇಲ್ಲವೋ ತಿಳಿಯದು: ಸುಡುಕಿನ ಸ್ವಭಾವ! ಗೋವಿಂದನಿಗೆ ಶಂಕರನನ್ನು ಬಿಟ್ಟುಬಿಟ್ಟರೂ ಸುಖವಾಗಿ ಬದುಕುವಷ್ಟು ಸೌಕರ್ಯವಿದೆ. ಆದರೆ ಮನಸ್ಸಿನ ದೊಂದು ಆಶಕ್ತತೆ: ಶಂಕರನೂ ಜೊತೆಗಿರಬೇಕೆಂದು. ಗೋವಿಂದನ ಆಶಕ್ತತೆಯನ್ನು ಉಪಯೋಗಮಾಡಿಕೊಂಡು, ತನ್ನ ಸಂಪೂರ್ಣ ಸ್ವಾರ್ಥಸಾಧಿಸಿಕೊಳ್ಳಬೇಕೆಂದು ಶಂಕರನ ಹಂಬಲಿಕೆ. ಈ ಮಾತು ತಿಳಿದರೂ ಅವನನ್ನು ಅಗಲಿ ಇರಬಾರದೆಂದು ಗೋವಿಂದನ ಔದಾರ್ಯದ ಕಳವಳ. ಈ ಭಾವನೆ-ಬುದ್ಧಿಗಳ ಒಡಿದಾಟದಲ್ಲಿ ಯಾರು ಗೆಲ್ಲಬಹುದು? ನಮ್ಮ ಇತಿಹಾಸಲೋಕದಲ್ಲಿಯಂತೂ ಭಾವನೆ ಗೆದ್ದ ಉದಾಹರಣೆ ಎಲ್ಲಿಯೂ ಕಾಣುವುದಿಲ್ಲ. ಮೊದಲ ಜಯವು ಬುದ್ಧಿಗೇ ಕಟ್ಟಿಟ್ಟದ್ದು. ಭಾವನೆಯು ಆ ಮೇಲೆ ಪೇಚಾಡತೊಡಗುವುದು. 'ವಿನಾಶ ಕಾಲೇ ವಿಪರೀತ ಬುದ್ಧಿಃ' ಎಂಬ ಅನುಭವೋಕ್ತಿ ಈ ಮಾತನ್ನೆ ಪುರಸ್ಕರಿಸಲು ಹೊರಟುದು. ಪಾಪ!–ಗೋವಿಂದ ಶಂಕರನಿಗೆ ಕೇಳಿದುದನ್ನೆಲ್ಲ ಕೊಟ್ಟ: ಶಂಕರನು ಎಲ್ಲವನ್ನೂ ತೆಗೆದುಕೊಂಡು ಸುಖದಿಂದ ಇರತೊಡಗಿದ; ಆದರೂ ಗೋವಿಂದನಿಗೆ ಆತನ ಒಡನಾಟ ದೊರೆಯಲಿಲ್ಲ. ಪಶ್ಚಾತ್ತಾಪದಿಂದ ಬಾಯ್ಬಿಡತೊಡಗಿದ. ಬುದ್ಧಿವಂತ ಶಂಕರನು ಅವನನ್ನು ನೋಡಿ ಅಣಕದ ನಗೆ ನಗಲು ತೊಡಗಿದ."

ಹಿಂದೂ ಮುಸಲ್ಮಾನರ ಐಕ್ಯ-ಒಡನಾಟಕ್ಕಾಗಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳಲ್ಲಿ ನಡೆದ ಸಂಧಾನದ ವಿಚಾರವನ್ನೆಲ್ಲ ಕೇಳಿದಾಗ, ಮೇಲಿನ ಗೋವಿಂದ–ಶಂಕರರ ಕತೆಯು ನಮ್ಮ ಕಣ್ಣೆದುರು ಬಂದು ನಿಲ್ಲುತ್ತದೆ. ರಾಷ್ಟ್ರೀಯ ಸಭೆಯು ನಿಮ್ಮ ಬೇಡಿಕೆಯಾದರೂ ಏನಿದೆಯೆಂದು ಒಪ್ಪಂದದ ಕೈಯನ್ನು ಮುಂದೆ ಮಾಡುತ್ತ ಹೋದಂತೆಲ್ಲ, ಮಿ. ಜಿನ್ನಾಸಾಹೇಬರೂ ಅವರ ಅನುಯಾಯಿಗಳೂ ತಮ್ಮ ಬೇಡಿಕೆಗಳನ್ನು ಹೆಚ್ಚುಹೆಚ್ಚಾಗಿಸುತ್ತ ಹಿಂದೆ ಹಿಂದೆ ಸರಿಯುತ್ತಲಿದ್ದಾರೆ. ಇಷ್ಟೇ ಅಲ್ಲ; ಸಖ್ಯಕ್ಕಾಗಿ ಹಂಬಲಿಸುವ ಕಾಂಗ್ರೆಸ್ಸನ್ನು ಕುರಿತು ಸಂದರ್ಭಸಿಕ್ಕಾಗಲೆಲ್ಲ ಬಾಯಿಗೆ ಬಂದಂತೆ ಬೀಳುಗಳೆದು ನುಡಿಯುತ್ತಾರೆ. 'ನಾವು ಸಿಂಹಗಳಿದ್ದೇವೆ; ಹುಲಿಗಳಿದ್ದೇವೆ;' ಎಂದು ತಮ್ಮ ಹಲ್ಲು ಉಗುರುಗಳ ಭೀತಿಯನ್ನೂ ಹಿಂದುಗಳಿಗೆ ತೋರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಡಾ. ಸಾವರಕರರು ರಾಷ್ಟ್ರಪತಿ ಸುಭಾಸರೆದುರು ಹೇಳಿದ ಮಾತುಗಳು ಹೆಚ್ಚು ವಿಚಾರಣೀಯವಾಗಿವೆಯೆಂದು ನಮಗೆ ಎನಿಸುತ್ತಿದೆ. ಡಾ. ಸಾವರಕರರ ಮಾತಿನ ಅಭಿಪ್ರಾಯ ಹೀಗಿದೆ:—

"ಹಿಂದುಗಳಿಗೂ ಮುಸಲ್ಮಾನರಿಗೂ ಗೌರವಾಸ್ಪದವಾದ ರೀತಿಯಲ್ಲಿ ಒಪ್ಪಂದವಾದರೆ ಅದನ್ನು ನಾನೂ ಅವಶ್ಯವಾಗಿ ಪುರಸ್ಕರಿಸುವೆನು. ಈ ಒಪ್ಪಂದವಾದಮೇಲೂ—ಕನಿಷ್ಠ ಎರಡು ಶತಮಾನಗಳವರೆಗಾದರೂ-ನಮ್ಮ ದೇಶದಲ್ಲಿ ಹಿಂದೂ ಮಹಾಸಭೆ, ಮುಸ್ಲಿಮ್‌ಲೀಗ್, ರಾಷ್ಟ್ರೀಯ ಸಭೆ ಈ ಮೂರು ಪಕ್ಷಗಳೂ

ಟೆಲಿಫೋನಿನಿಂದ ಬೇಕಾದಷ್ಟು ದೂರ ಮುಟ್ಟಿಸಬಹುದು.
ರೇಡಿಯೊದಿಂದ ಬೇಕಾದಷ್ಟು ಜನರಿಗೆ ಮುಟ್ಟಿಸಬಹುದು
ಒಂದಕ್ಕೆ ವೆಚ್ಚ! ಇನ್ನೊಂದಕ್ಕೆ ನಿಯತವೇಳೆ!!
ಆದರೆ?
ಬೇಕಾದಾಗ ಬೇಕಾದಷ್ಟು ಜನರಿಗೆ ತಿಳುಹಿಸುವ ಸಾಧನವೆಂದರೆ
ಜಯಂತಿಯೊಂದೇ!

ಇದ್ದೇ ತೀರುವುವು. ಮುಸಲ್ಮಾನರಲ್ಲಿ ತಾವು ಬೇರೆಯಾಗಿಯೆ ಇರಬೇಕೆಂಬ ಭಾವನೆಯಿರುವ ವರೆಗೂ ಹಿಂದುಗಳು ತಮ್ಮಲ್ಲಿ ಸಂಘಟನೆಯನ್ನು ಮಾಡಿಕೊಳ್ಳಲಿಕ್ಕೆ ಸಂಪೂರ್ಣವಾಗಿ ಜಾಗ್ರತರಿರಲೇಬೇಕಾಗುವುದು. ಹಿಂದೀಯರೆಲ್ಲರೂ ಒಂದೇ ರಾಷ್ಟ್ರದವರೆಂಬ ಉದಾತ್ತಧ್ಯೇಯವನ್ನಿಟ್ಟುಕೊಂಡು, ಹಿಂದುಗಳು ಮುಸಲ್ಮಾನರು ಇಬ್ಬರೂ ಅವಶ್ಯಕವಿದ್ದಷ್ಟು ತ್ಯಾಗಬುದ್ಧಿಯನ್ನು ತೋರಿಸಿ, ಒಬ್ಬರೊಬ್ಬರಲ್ಲಿ ಒಪ್ಪಂದವನ್ನು ಮಾಡಿಕೊಳ್ಳಬೇಕು. ರಾಷ್ಟ್ರೀಯತ್ವದ ಉದಾರಕಲ್ಪನೆಯಿಂದ ಕೇವಲ ಹಿಂದುಗಳೇ ಒಪ್ಪಂದಕ್ಕಾಗಿ ಮುಸಲ್ಮಾನರಲ್ಲಿ ಕೈಚಾಚುತ್ತಿರುವುದನ್ನು ಬಿಟ್ಟಹೊರತು ಮುಸಲ್ಮಾನರು ಎಂದೂ ಒಪ್ಪಂದಕ್ಕೆ ಸಿದ್ಧರಾಗಲಾರರು."

ದಿನಗಳನ್ನು ತಿನ್ನುತ್ತ ಸಾಗಿರುವ ಜಿನ್ನಾ–ಸುಭಾಸರ ಮಾತು-ಕತೆಗಳನ್ನು ನೋಡಿದರೆ, ಯಾರೂ ಶ್ರೀ. ಸಾವರಕರರ ಮಾತನ್ನು ಒಪ್ಪಿಕೊಳ್ಳುವಂತಿದೆ.

ರಾಮರಾಜ್ಯಕ್ಕೆ ರಕ್ತದ ಕಲಂಕ

ಮೈಸೂರಿನ ಜನರ ಧ್ವಜಸತ್ಯಾಗ್ರಹದ ದುರಂತವೂ ಮೈಸೂರು ಸರಕಾರದ ಅತ್ಯಾಯದ ಅಪಕೀರ್ತಿಯೂ ಕೊನೆಗೆ, ವಿದುರಾಶ್ವತ್ಥದಂತಹ ಪುರಾತನ ಪವಿತ್ರ ಕ್ಷೇತ್ರದಲ್ಲಿ ೩೨ ಜನರ ಆಹುತಿಯನ್ನು ತೆಗೆದುಕೊಂಡು ಶಾಂತವಾದುವು. ಮೈಸೂರಿನ ಕದಡಿದ ವಾತಾವರಣವಿಂದು ತಿಳಿಯಾಗುತ್ತ ನಡೆದಿದೆ. ಪ್ರಜರ ಬೇಡಿಕೆಯನ್ನು ಸರಕಾರವು ಒಪ್ಪಿತು; ಸರಕಾರದ ತಪ್ಪುತಿಳಿವಳಿಕೆ(!)ಯಿಂದುಂಟಾದ ಹೆದರಿಕೆಯನ್ನು ಪ್ರಜಾವರ್ಗವು ಹಂಚಿಕೊಂಡಿತು. ಆದರೆ ಇದರಿಂದೂ ವಿದುರಾಶ್ವತ್ಥದ ಪ್ರಕರಣಕ್ಕೆ ಮೊದಲೇ ಆಗಿ ಬಿಟ್ಟಿದ್ದರೆ!

ಮೈಸೂರಿನ ಪ್ರಜಾಜನರ ಹೃದಯ ಮೈಸೂರಿನ ಅಧಿಕಾರಿ ವರ್ಗಕ್ಕೆ ಇದುವರೆಗೆ ತಿಳಿಯದಿರುವುದೆಂದರೆ ಅದು ಅಸ್ವಾಭಾವಿಕ. ತಮ್ಮ ದೊರೆಯನ್ನು ದೇವರೆಂದು ತಿಳಿಯುವ ವೃತ್ತಿ ಅಲ್ಲಿಯವರಲ್ಲಿ ಹುಟ್ಟಿನೊಂದಿಗೇ ಬಳೆದು ಬಂದಿರುವುದು. ಇಂತಹ ಜನರನ್ನು ರಾಜವಿದ್ರೋಹಿಗಳೆಂದು ತಿಳಿಯುವುದೆಂದರೆ ಖಂಡಿತವಾಗಿ ಇದು ಅಧಿಕಾರಿಗಳ ನಿಜವಾದ ತಪ್ಪುತಿಳಿವಳಿಕೆಯಾಗಿರದೆ, ಮಾಡಿದ ತಪ್ಪನ್ನು ಮುಚ್ಚಿಕೊಳ್ಳಬೇಕೆಂದು ಮುಂದೆ ಮಾಡಿದ ಸೋಗಿನ ತಪ್ಪುತಿಳಿವಳಿಕೆಯೆಂದು ಯಾರೂ ಭಾವಿಸುವಂತಿದೆ.

ಚೇತರಿಸಿಕೊಂಡೂ ಮೇಲಕ್ಕೇಳಬೇಕಾದರೆ ಹಲವುಕಾಲ ಕಳೆಯ ಬೇಕು! ಹಿಂದುಸ್ಥಾನದಂತಹ ನುಂಗಲಾರದ ತುತ್ತಿಗೆ ಸದ್ಯ ಕೈಹಾಕಬಾರದೆಂಬ ಜಾಣತನವು ಜಪಾನಿನ ರಾಜಕಾರ್ಯವಿದರಲ್ಲಿ ಇರದಿರಲಾರದು. ಇನ್ನೊಂದು ಮಾತು! ಏನಾದರೂ ಕುತೂಹಲಾಸ್ಪದ ಸುದ್ದಿಯನ್ನು ಪ್ರಕಟಿಸಬೇಕೆಂದು ಯಾವಾಗಲೂ ಹೊಸದನ್ನು ಹುಡುಕುವ ವೃತ್ತಪತ್ರಿಕೆಗಳ ಕೈವಾಡವೇ ಆಗಿದ್ದರೂ ಆಗಿರಬಹುದು—ಈ ವರ್ತಮಾನ!

ಸಹಕಾರಬಲದ ಸಣ್ಣದೊಂದು ಪಾಠ.

ಸರಿ! ಇನ್ನುಮೇಲೆ ನಮ್ಮ ಸಂಭಾರದ ಮಸಾಲೆಗೆ ಹೆದರಿಕೆಯಿಲ್ಲದೆ ಲವಂಗವನ್ನು ಸೇರಿಸೋಣ! ವಸಾಹತು ಮಂತ್ರಿಗಳಾದ ಮಾಲಕಮ್ ಮ್ಯಾಕ್ಡೊನಾಲ್ಡ್ ಅವರೂ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟರು. ಜಾಂಜಿಬಾರ್ ಸರಕಾರವು ಮೊದಲೆ ಈ ಜಾಣತನವನ್ನು ತೋರಿಸಿದ್ದರೆ ಎಷ್ಟು ಒಳ್ಳೆಯದಾಗುತ್ತಿದ್ದಿತು. ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬೇಕೆಂಬ ಸ್ವಾಭಿಮಾನಬುದ್ಧಿ ಭಾರತೀಯರಲ್ಲಿ ದಿನದಿನಕ್ಕೆ ಜಾಗೃತವಾಗುತ್ತ ನಡೆದಿದೆಯೆಂಬುದನ್ನು ಈಗಲಾದರೂ ಜಾಂಜಿಬಾರ್ ಸರಕಾರವು ಚೆನ್ನಾಗಿ ಗೊತ್ತು ಮಾಡಿಕೊಂಡು, ಅಲ್ಲಿರುವ ಭಾರತೀಯರ ಆಶೆ-ಆಕಾಂಕ್ಷೆಗಳನ್ನು ಹತ್ತಿಕ್ಕದಿರಲಿ! ಈ ಒಪ್ಪಂದದ ಪರಿಣಾಮವಾಗಿ ಹಿಂದುಸ್ಥಾನದಲ್ಲಿ ಬಲುದಿನಗಳಿಂದ ನಡೆದಿದ್ದ ಲವಂಗಬಹಿಷ್ಕಾರದ ಚಳವಳಿಯನ್ನು ತಡೆಹಿಡಿಯುವುದಾಗಿ, ಅ. ಭಾ. ರಾಷ್ಟ್ರಸಭೆಯ ವರ್ಕಿಂಗ್ ಕಮಿಟಿಯೂ ನಿರ್ಣಯಿಸಿತ್ತಿದೆ. ಸೆರೆಮನೆಗೆ ಬೆಂಕಿ ಬಿದ್ದರೆ ನೋಡುತ್ತ ನಿಂತುಬಿಡುವಂತಹ ಸಹಕಾರಧರ್ಮ ಭಾರತೀಯರ ಇತಿಹಾಸದಲ್ಲಿ ಹೆಸರಾದುದು! ಆದರೆ ಎಲ್ಲಿಯೋ ಗೊತ್ತಿಲ್ಲದಲ್ಲಿ ವಾಸಿಸುತ್ತಿದ್ದ—ಎಂದೂ ನೋಡಿ ಗೊತ್ತಿಲ್ಲದ—ನಮ್ಮವರಿಗಾಗಿ ಲವಂಗವನ್ನು ಬಹಿಷ್ಕರಿಸುವಂತಹ ಪ್ರತ್ಯಕ್ಷ ಸಹಕಾರವನ್ನು ಭರತಖಂಡದಲ್ಲಿರುವ ಭಾರತೀಯರು ನಾವು ಈಗ ನೀಡಿ, ಅನೇಕರ ಅಭಿನಂದನೆಗಳಿಗೆ ಪಾತ್ರರಾಗಿದ್ದೇವೆ. ಸಹಕಾರಬಲದ ಈ ಸಣ್ಣ ಪಾಠವನ್ನೋದಿ ಆಯಿತು; ಅದರ ಪರಿಣಾಮವೂ ಪ್ರತ್ಯಕ್ಷವಾಗಿ ಕಂಡುಬಂದಿತು. ನಾವು ಕಲಿಯಬೇಕಾದ ಸಹಕಾರದ ಸಣ್ಣ ದೊಡ್ಡ ಪಾಠಗಳೆಷ್ಟೋ ಇವೆ. ಅವೆಲ್ಲವನ್ನೂ ಓದಿ ಅನುಷ್ಠಾನಕ್ಕೆ ತರದೆ ಹೋದಲ್ಲಿ ನಾವು ನಮ್ಮ ಗುರಿಯನ್ನು ಎಂದೂ ತಲ್ಪಲಾರೆವು.

ನಿಮ್ಮ ಸಾಮಾನುಗಳ ಸುದ್ದಿ
ಜಗತ್ತಿಗೆಲ್ಲ
ಗೊತ್ತಾಗಬೇಕಾದರೆ
ಜಯಂತಿಯಿಂದಲೆ ಸಾಧ್ಯ

ಬಿದ್ದವರನ್ನು ಎತ್ತಿ ಹಿಡಿದಿರಿ; ಬೀಳುತ್ತಿರುವವರನ್ನು!

ಇಂದು ಹಿಂದುಸ್ಥಾನದ ಯಾವ ಧುರೀಣನ ಬಾಯಲ್ಲಿಯೂ ಹಳ್ಳಿಗಳ ಸುಧಾರಣೆ, ರೈತರ ಹಿತ, ಕೂಲಿಕಾರರ ಹಿತ ಇವುಗಳನ್ನೆ ಕುರಿತು ಮಾತುಗಳಿವೆಯಲ್ಲದೆ ಸುಶಿಕ್ಷಿತರಾದ ಮಧ್ಯಮವರ್ಗದವರ ಕಷ್ಟದ ಬಾಳನ್ನು ಕುರಿತು ಯಾರೂ ಮಾತನ್ನೆತ್ತಲೊಲ್ಲರು.

ಕಳೆದ ತಿಂಗಳ ೩ನೆಯ ವಾರದಲ್ಲಿ ಕಾಂಗ್ರೆಸ್ ಪ್ರಾಂತಗಳ ಮುಖ್ಯಪ್ರಧಾನರ ಪರಿಷತ್ತು ಮುಂಬಯಿಯಲ್ಲಿ ಸೇರಿದ್ದಿತು. ಅಲ್ಲಿ ಅವರು ತಮ್ಮ ಆಡಳಿತದ ಧೋರಣವನ್ನು ಕುರಿತು ಚರ್ಚೆಯನ್ನು ನಡೆಯಿಸಿದರು. ಆಗ ಶಿಕ್ಷಣಪ್ರಸಾರದ ಯೋಜನೆಯನ್ನೆ ಕುರಿತು ಮಾತನಾಡಿದರಲ್ಲದೆ, ಸುಶಿಕ್ಷಿತ ನಿರುದ್ಯೋಗಿಗಳ ಹೆಸರನ್ನೆ ಎತ್ತಲಿಲ್ಲ. ರೈತರ ಋಣಪರಿಹಾರದ ವಿಚಾರವನ್ನು ಚರ್ಚಿಸಿದರೇ ಹೊರತು, ಹಿಂದುಸ್ಥಾನದ ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ತುಂಬ ತುಟ್ಟಿ ಬೆಲೆಯ ವಿದ್ಯಾಭ್ಯಾಸಕ್ಕಾಗಿ ಮನೆಮಾರುಗಳನೆಲ್ಲ ಒತ್ತೆಯಿಟ್ಟು ಬರಿಹೊಟ್ಟೆಯಿಂದ ತಿರುಗುವವರ ವಿಷಯಕ್ಕೆ ಯಾವ ಚರ್ಚೆಯೂ ನಡೆಯಲಿಲ್ಲ. ಕೂಲಿಕಾರರ ಅನುಕೂಲತೆಗಾಗಿ ಅಲ್ಲಿ ನೂರರಷ್ಟು ಮಾತಾಗಿದ್ದರೆ ಒಂದು ಮಾತು ಕೂಡ ಮಧ್ಯಮವರ್ಗದವರನ್ನು ಮೇಲಕ್ಕೆತ್ತುವುದರ ಬಗೆಗೆ ಯಾರೂ ಆಡಲಿಲ್ಲ. ಅಪರಾಧ ಮಾಡಿದವರನ್ನು ಶಿಕ್ಷಿಸುವುದಕ್ಕಾಗಿ ನಿರ್ಮಾಣವಾದ ಸೆರೆಮನೆಗಳ ಸುಧಾರಣೆಯನ್ನು ಕುರಿತು ಘಂಟೆಗಟ್ಟಲೆ ಅರೆದಾಟ ನಡೆಯಿತು; ಆದರೆ ಶಿಕ್ಷಣದ ಬೇಡಿಯನ್ನು ಹಾಕಿಕೊಂಡು ಬಯಲನ್ನೆ ಸೆರೆಮನೆಯನ್ನಾಗಿ ಮಾಡಿಕೊಂಡಿದ್ದವರನ್ನು ಕುರಿತು ಒಂದು ಬಳ್ಳದಷ್ಟು ಮಾತನ್ನೂ ಯಾರೂ ಬಳಸಲಿಲ್ಲ. ನಾಗರಿಕರ ಹಕ್ಕುಗಳ ಸಂರಕ್ಷಣೆಯ ವಿಷಯಕ್ಕೆ ಮೊದಲನೆಯ ದಿನದ ಸಭೆಯ ಸಮಯವೆಲ್ಲವೂ ವೆಚ್ಚವಾಯಿತು; ಆದರೆ ನಾಗರಿಕರು ನಿರುದ್ಯೋಗ ಸಮಸ್ಯೆಯಿಂದ ಬದುಕಿ ಉಳಿದಾಗ ಅಲ್ಲವೇ ತಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಕಾದಾಡಬೇಕು? ಈಗ ಕಾಂಗ್ರೆಸ್ ಸರಕಾರದ ಸೆರೆಮನೆಗಳಲ್ಲಿ ರಾಜಕೀಯ ಸೆರೆಯಾಳುಗಳಿಗೆ ಹೆಚ್ಚಿನ ಅನುಕೂಲತೆ ದೊರೆಯುವುದು; ಆದುದರಿಂದ ಸುಶಿಕ್ಷಿತ ನಿರುದ್ಯೋಗಿಗಳೆಲ್ಲರೂ ಯಾವುದಾದರೂ ಒಂದುಬಗೆಯಿಂದ ರಾಜಕೀಯ ಅಪರಾಧಿಗಳಾಗಿ ಸೆರೆಮನೆಯನ್ನು ಸೇರಿದರೆ ಸದ್ಯದ ಮಟ್ಟಿಗಾದರೂ ಜೀವನದ ಚಿಂತೆ ತಪ್ಪೀತು!

ಸುಶಿಕ್ಷಿತ ಮಧ್ಯಮವರ್ಗದವರಂತೆಯೇ ನಮ್ಮಲ್ಲಿಯ ಕೈಗಾರಿಕೆಯೇ ಪರಂಪರಾಗತ ಉದ್ಯಮವಾಗಿರುವ ಜನರೂ ಹಸಿದ ಹೊಟ್ಟೆಯಿಂದ ತೊಳಲುತ್ತಿದ್ದಾರೆ. ರೈತರು, ಕೂಲಿಕಾರರು, ಹರಿಜನರು ಇವರೆಲ್ಲರ ಹಿಂದಿನಲ್ಲಿ ನುಗ್ಗಿ ಹೋಗಿ, ಸರಕಾರದ ಕಿವಿಗೆ ತಮ್ಮ ಕೂಗನ್ನು ತಲ್ಪಿಸಲಿಕ್ಕಾಗಲೊಲ್ಲದಿವರಿಗೆ. ಅಲ್ಲಲ್ಲಿಯ ಸರಕಾರಗಳು ತೆರೆದಿದ್ದ ವಿವಿಧ ಕೈಗಾರಿಕೆಯ ಶಾಲೆಗಳು, ಇಲ್ಲದ ಕೈಗಾರಿಕೆಗಳನ್ನು ಕಲಿಸುತ್ತಿವೆಯೇ ಹೊರತು ಇದ್ದ ಕೈಗಾರಿಕೆಗಳ ಸಂರಕ್ಷಣೆಮಾಡಿ ಅವುಗಳನ್ನವಲಂಬಿಸಿಕೊಂಡಿದ್ದ ಜನರ ಬದುಕಿಗೆ ನೆರವನ್ನು ನೀಡಲಾರವು.

ಹಿಂದೂ ಮುಸಲ್ಮಾನರ ಸಂಧಾನಸಂಭ್ರಮ

"ಗೋವಿಂದನಿಗೆ ಕೂಡಿ ಆಡುವ ಆಶೆ; ಸ್ವಭಾವ ಉದಾರ! ಶಂಕರನಿಗೆ ಕೂಡಿ ಆಡುವ ಆಶೆಯಿದೆಯೋ ಇಲ್ಲವೋ ತಿಳಿಯದು; ದುಡುಕಿನ ಸ್ವಭಾವ! ಗೋವಿಂದನಿಗೆ ಶಂಕರನನ್ನು ಬಿಟ್ಟುಬಿಟ್ಟರೂ ಸುಖವಾಗಿ ಬದುಕುವಷ್ಟು ಸೌಕರ್ಯವಿದೆ. ಆದರೆ ಮನಸ್ಸಿನ ದೊಂದು ಅಶಕ್ತತೆ: ಶಂಕರನೂ ಜೊತೆಗಿರಬೇಕೆಂದು. ಗೋವಿಂದನ ಅಶಕ್ತತೆಯನ್ನು ಉಪಯೋಗಮಾಡಿಕೊಂಡು, ತನ್ನ ಸಂಪೂರ್ಣ ಸ್ವಾರ್ಥಸಾಧಿಸಿಕೊಳ್ಳಬೇಕೆಂದು ಶಂಕರನ ಒಳಬಯಕೆ. ಈ ಮಾತು ತಿಳಿದರೂ ಅವನನ್ನು ಅಗಲಿ ಇರಬಾರದೆಂದು ಗೋವಿಂದನ ಔದಾರ್ಯದ ಕಳವಳ. ಈ ಭಾವನೆ-ಬುದ್ಧಿಗಳ ಬಡಿದಾಟದಲ್ಲಿ ಯಾರು ಗೆಲ್ಲಬಹುದು? ನಮ್ಮ ಇತಿಹಾಸಲೋಕದಲ್ಲಿಯಂತೂ ಭಾವನೆ ಗೆದ್ದ ಉದಾಹರಣೆ ಎಲ್ಲಿಯೂ ಕಾಣುವುದಿಲ್ಲ. ಮೊದಲ ಜಯವು ಬುದ್ಧಿಗೇ ಕಟ್ಟಿಟ್ಟದ್ದು. ಭಾವನೆಯು ಆ ಮೇಲೆ ಪೇಚಾಡತೊಡಗುವುದು. 'ವಿನಾಶಃ ಪಶ್ಚಿಮ ಬುದ್ಧಯಃ' ಎಂಬ ಅನುಭವೋಕ್ತಿ ಈ ಮಾತನ್ನೆ ಪುರಸ್ಕರಿಸಲು ಹೊರಟುದು. ಪಾಪ!–ಗೋವಿಂದ ಶಂಕರನಿಗೆ ಕೇಳಿದುದನ್ನೆಲ್ಲ ಕೊಟ್ಟ; ಶಂಕರನು ಎಲ್ಲವನ್ನೂ ತೆಗೆದುಕೊಂಡು ಸುಖದಿಂದ ಇರತೊಡಗಿದ; ಆದರೂ ಗೋವಿಂದನಿಗೆ ಆತನ ಒಡನಾಟ ದೊರೆಯಲಿಲ್ಲ; ಪಶ್ಚಾತ್ತಾಪದಿಂದ ಬಾಯ್ಬಿಡತೊಡಗಿದ. ಬುದ್ಧಿವಂತ ಶಂಕರನು ಅವನನ್ನು ನೋಡಿ ಅಣಕದ ನಗೆ ನಗಲು ತೊಡಗಿದ."

ಹಿಂದೂ ಮುಸಲ್ಮಾನರ ಐಕ್ಯ-ಒಡನಾಟಕ್ಕಾಗಿ ಕಾಂಗ್ರೆಸ್ ಮತ್ತು ಮುಸ್ಲೀಮ್ ಲೀಗುಗಳಲ್ಲಿ ನಡೆದ ಸಂಧಾನದ ವಿಚಾರವನ್ನೆಲ್ಲ ಕೇಳಿದಾಗ, ಮೇಲಿನ ಗೋವಿಂದ–ಶಂಕರರ ಕತೆಯು ನಮ್ಮ ಕಣ್ಣೆದುರು ಬಂದು ನಿಲ್ಲುತ್ತದೆ. ರಾಷ್ಟ್ರೀಯ ಸಭೆಯು ನಿಮ್ಮ ಬೇಡಿಕೆಯಾದರೂ ಏನಿದೆಯೆಂದು ಒಪ್ಪಂದದ ಕೈಯನ್ನು ಮುಂದೆ ಮಾಡುತ್ತ ಹೋದಂತೆಲ್ಲ, ಮಿ. ಜಿನ್ನಾಸಾಹೇಬರೂ ಅವರ ಅನುಯಾಯಿಗಳೂ ತಮ್ಮ ಬೇಡಿಕೆಗಳನ್ನು ಹೆಚ್ಚು ಹೆಚ್ಚಾಗಿಸುತ್ತ ಹಿಂದೆ ಹಿಂದೆ ಸರಿಯುತ್ತಲಿದ್ದಾರೆ. ಇಷ್ಟೇ ಅಲ್ಲ; ಸಖ್ಯಕ್ಕಾಗಿ ಹಂಬಲಿಸುವ ಕಾಂಗ್ರೆಸ್ಸನ್ನು ಕುರಿತು ಸಂದರ್ಭಸಿಕ್ಕಾಗಲೆಲ್ಲ ಬಾಯಿಗೆ ಬಂದಂತೆ ಬೀಳುಗಳೆದು ನುಡಿಯುತ್ತಾರೆ. 'ನಾವು ಸಿಂಹಗಳಿದ್ದೇವೆ; ಹುಲಿಗಳಿದ್ದೇವೆ;' ಎಂದು ತಮ್ಮ ಹಲ್ಲು ಉಗುರುಗಳ ಭೀತಿಯನ್ನೂ ಹಿಂದುಗಳಿಗೆ ತೋರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾ. ಸಾವರಕರರು ರಾಷ್ಟ್ರಪತಿ ಸುಭಾಸರೆದುರು ಹೇಳಿದ ಮಾತುಗಳು ಹೆಚ್ಚು ವಿಚಾರಣೀಯವಾಗಿವೆಯೆಂದು ನಮಗೆ ಎನಿಸುತ್ತಿದೆ. ಬ್ಯಾ. ಸಾವರಕರರ ಮಾತಿನ ಅಭಿಪ್ರಾಯ ಹೀಗಿದೆ:—

"ಹಿಂದುಗಳಿಗೂ ಮುಸಲ್ಮಾನರಿಗೂ ಗೌರವಾಸ್ಪದವಾದ ರೀತಿಯಲ್ಲಿ ಒಪ್ಪಂದವಾದರೆ ಅದನ್ನು ನಾನೂ ಅವಶ್ಯವಾಗಿ ಪುರಸ್ಕರಿಸುವೆನು. ಈ ಒಪ್ಪಂದವಾದಮೇಲೂ—ಕನಿಷ್ಠ ಎರಡು ಶತಮಾನಗಳವರೆಗಾದರೂ–ನಮ್ಮ ದೇಶದಲ್ಲಿ ಹಿಂದೂ ಮಹಾಸಭೆ, ಮುಸ್ಲೀಮ್‌ಲೀಗ್, ರಾಷ್ಟ್ರೀಯ ಸಭೆ ಈ ಮೂರು ಪಕ್ಷಗಳೂ

ಟೆಲಿಫೋನಿನಿಂದ ಬೇಕಾದಷ್ಟು ದೂರ ಮುಟ್ಟಿಸಬಹುದು,
ರೇಡಿಯೋದಿಂದ ಬೇಕಾದಷ್ಟು ಜನರಿಗೆ ಮುಟ್ಟಿಸಬಹುದು
ಒಂದಕ್ಕೆ ವೆಚ್ಚ! ಇನ್ನೊಂದಕ್ಕೆ ನಿಯತವೇಳೆ!!
ಆದರೆ?
ಬೇಕಾದಾಗ ಬೇಕಾದಷ್ಟು ಜನರಿಗೆ ತಿಳುಹಿಸುವ ಸಾಧನವೆಂದರೆ
ಜಯಂತಿಯೊಂದೇ!

ಇದ್ದೇ ತೀರುವುವು. ಮುಸಲ್ಮಾನರಲ್ಲಿ ತಾವು ಬೇರೆಯಾಗಿಯೆ ಇರಬೇಕೆಂಬ ಭಾವನೆಯಿರುವ ವರೆಗೂ ಹಿಂದುಗಳು ತಮ್ಮಲ್ಲಿ ಸಂಘಟನೆಯನ್ನು ಮಾಡಿಕೊಳ್ಳಲಿಕ್ಕೆ ಸಂಪೂರ್ಣವಾಗಿ ಜಾಗೃತರಿರಲೇಬೇಕಾಗುವುದು. ಹಿಂದೀಯರೆಲ್ಲರೂ ಒಂದೇ ರಾಷ್ಟ್ರದವರೆಂಬ ಉದಾತ್ತಧ್ಯೇಯವನ್ನಿಟ್ಟುಕೊಂಡು, ಹಿಂದುಗಳು ಮುಸಲ್ಮಾನರು ಇಬ್ಬರೂ ಅವಶ್ಯಕವಿದ್ದಷ್ಟು ತ್ಯಾಗಬುದ್ಧಿಯನ್ನು ತೋರಿಸಿ, ಒಬ್ಬರೊಬ್ಬರಲ್ಲಿ ಒಪ್ಪಂದವನ್ನು ಮಾಡಿಕೊಳ್ಳಬೇಕು. ರಾಷ್ಟ್ರೀಯತ್ವದ ಉದಾರಕಲ್ಪನೆಯಿಂದ ಕೇವಲ ಹಿಂದುಗಳೇ ಒಪ್ಪಂದಕ್ಕಾಗಿ ಮುಸಲ್ಮಾನರಲ್ಲಿ ಕೈಚಾಚುತ್ತಿರುವುದನ್ನು ಬಿಟ್ಟಹೊರತು ಮುಸಲ್ಮಾನರು ಎಂದೂ ಒಪ್ಪಂದಕ್ಕೆ ಸಿದ್ಧರಾಗಲಾರರು."

ದಿನಗಳನ್ನು ತಿನ್ನುತ್ತ ಸಾಗಿರುವ ಜಿನ್ನಾ–ಸುಭಾಸರ ಮಾತು-ಕತೆಗಳನ್ನು ನೋಡಿದರೆ, ಯಾರೂ ಶ್ರೀ. ಸಾವರಕರರ ಮಾತನ್ನು ಒಪ್ಪಿಕೊಳ್ಳುವಂತಿದೆ.

ರಾಮರಾಜ್ಯಕ್ಕೆ ರಕ್ತದ ಕಲಂಕ

ಮೈಸೂರಿನ ಜನರ ಧ್ವಜಸತ್ಯಾಗ್ರಹದ ಹುರುಪೂ ಮೈಸೂರು ಸರಕಾರದ ಒತ್ತಾಯದ ಆಸಕ್ತಿಯೂ ಕೊನೆಗೆ, ವಿದುರಾಶ್ವತ್ಥದಂತಹ ಪುರಾತನ ಪವಿತ್ರ ಕ್ಷೇತ್ರದಲ್ಲಿ ೩೨ ಜನರ ಆಹುತಿಯನ್ನು ತೆಗೆದುಕೊಂಡು ಶಾಂತವಾದುವು. ಮೈಸೂರಿನ ಕದಡಿದ ವಾತಾವರಣವಿಂದು ತಿಳಿಯಾಗುತ್ತ ನಡೆದಿದೆ. ಪ್ರಜರ ಬೇಡಿಕೆಯನ್ನು ಸರಕಾರವು ಒಪ್ಪಿತು; ಸರಕಾರದ ತಪ್ಪುತಿಳಿವಳಿಕೆ(!)ಯಿಂದುಂಟಾದ ಹೆದರಿಕೆಯನ್ನು ಪ್ರಜಾವರ್ಗವು ಹಿಂಜರಿಸಿತು. ಆದರೆ ಇದೆರಡೂ ವಿದುರಾಶ್ವತ್ಥದ ಪ್ರಕರಣಕ್ಕೆ ಮೊದಲೇ ಆಗಿಬಿಟ್ಟಿದ್ದರೆ!

ಮೈಸೂರಿನ ಪ್ರಜಾಜನರ ಹೃದಯ ಮೈಸೂರಿನ ಅಧಿಕಾರಿವರ್ಗಕ್ಕೆ ಇದುವರೆಗೆ ತಿಳಿಯದಿರುವುದೆಂದರೆ ಅದು ಅಸ್ವಾಭಾವಿಕ. ತಮ್ಮ ದೊರೆಯನ್ನು ದೇವರೆಂದು ತಿಳಿಯುವ ವೃತ್ತಿ ಅಲ್ಲಿಯವರಲ್ಲಿ ಹುಟ್ಟಿನೊಂದಿಗೇ ಬೆಳೆದು ಬಂದಿರುವುದು. ಇಂತಹ ಜನರನ್ನು ರಾಜವಿದ್ರೋಹಿಗಳೆಂದು ತಿಳಿಯುವುದೆಂದರೆ ಖಂಡಿತವಾಗಿ ಇದು ಅಧಿಕಾರಿಗಳ ನಿಜವಾದ ತಪ್ಪುತಿಳಿವಳಿಕೆಯಾಗಿರದೆ, ಮಾಡಿದ ತಪ್ಪನ್ನು ಮುಚ್ಚಿಕೊಳ್ಳಬೇಕೆಂದು ಮುಂದೆ ಮಾಡಿದ ಸೋಗಿನ ತಪ್ಪುತಿಳಿವಳಿಕೆಯೆಂದು ಯಾರೂ ಭಾವಿಸುವಂತಿದೆ.

ರಾಜ-ಪ್ರಜೆಗಳ ಸಂಬಂಧ ತಂದೆ-ಮಕ್ಕಳಂತೆ ಇರಬಹುದಾದರೂ ಅಧಿಕಾರಿವರ್ಗ- ಪ್ರಜೆಗಳ ಸಂಬಂಧವು ದಾಯಾದ ಸಂಬಂಧವಾಗಿರುತ್ತದೆ. ತಮ್ಮ ಸ್ಥಾನ-ಮಾನಕ್ಕೆ ಎಲ್ಲಿಯಾದರೂ ಚ್ಯುತಿ ಬಂದೀತೆಂದು ಯಾವಾಗಲೂ ಅಧಿಕಾರಿವರ್ಗಕ್ಕೆ ಒಂದು ಬಗೆಯ ಸ್ವಾರ್ಥಮೂಲಕವಾದ ಅಂಜಿಕೆ. ಈ ಅಂಜಿಕೆಯನ್ನು ದುಡುಕುವವರ ಮೇಲೆ ಅವರು ಯಾವಾಗಲೂ ಎಗರೆಗರಿ ಬೀಳುವರು. ಸಂಪೂರ್ಣಾಧಿಕಾರ ತನ್ನ ಕಡೆಗೇ ಇರಬೇಕೆಂಬ ಆಶೆಯಿಟ್ಟುಕೊಂಡಿದ್ದ ಅಣ್ಣನನ್ನು, ಮನೆಯಾಡಳಿತದ ಬಗ್ಗೆ ತಮಗೂ ಸಮಾನಾಧಿಕಾರಬೇಕೆಂದು ತಮ್ಮಂದಿರು ಕೇಳಿದರೆ ಸ್ವಾರ್ಥಸಾಧಕನಾದ ಅಣ್ಣ ಉರಿದು ಬೀಳುವುದು ಸಹಜ. ಇಲ್ಲಿಯ ಅಣ್ಣ ಒರ್ವ ಒಂದು ವ್ಯಕ್ತಿಯೆಂದು ಯಾರೂ ಸಂದೇಹಗೊಳ್ಳುವ ಕಾರಣವಿಲ್ಲ. ಸರಕಾರವೂ ಯಾವಾಗಲೂ ಒಂದು ವ್ಯಕ್ತಿನಿಷ್ಠಸಂಸ್ಥೆಯಾಗಿರುವುದು. ಆ ವ್ಯಕ್ತಿ ನಿಸ್ವಾರ್ಥಿಯಾಗಿದ್ದರೆ ಅದು ರಾಮರಾಜ್ಯ ; ಸ್ವಾರ್ಥಿಯಾಗಿದ್ದರದು ರಾವಣರಾಜ್ಯ ! ಮಹಾತ್ಮಾಗಾಂಧಿಯವರ ಕಡೆಯಿಂದಲೂ ಮೈಸೂರಿನ ಮಾದರಿಯ ರಾಜ್ಯ 'ರಾಮರಾಜ್ಯ' ಎಂದು ಇದುವರೆಗೆ ಹೊಗಳಿಸಿಕೊಂಡಿತ್ತು. ಈಗ ವಿದುರಾಶ್ವತ್ಥದ ಕೊಲೆಯು ನೆತ್ತರು ಅದರ ಮೇಲೆ ಕಲಂಕವನ್ನು ಒಳೆದಿದೆ. ಮೈಸೂರ ಸರಕಾರಕ್ಕಾದ ಪಶ್ಚಾತ್ತಾಪವು ಸಾಮುಚಿತ ರಾಜಕಾರ್ಯಕ್ಕೆ ಸಂಬಂಧಿಸಿದುದಾಗಿರದೆ ನಿಜವಾದುದೇ ಆಗಿದ್ದರೆ, ಈ ತಪದಿಂದ ಆ ಕಲಂಕವು ಖಂಡಿತವಾಗಿ ಅಳಿಸಿಹೋಗಬಹುದು !

ರಾಮದುರ್ಗದ ರೈತರ ಚಟುವಟಿಕೆ

ನಮ್ಮಲ್ಲಿಯ ಸಂಸ್ಥಾನಿಕರು ಒಬ್ಬೊಬ್ಬರು ಒಂದೊಂದರ ಮೋಹಕ್ಕೆ ಸಿಕ್ಕಿಕೊಂಡು ಕರ್ತವ್ಯವನ್ನು ಮರೆತು ನಡೆಯುತ್ತಿರುವರು. ಒಬ್ಬನಿಗೆ ಹೆಣ್ಣಿನ ಹುಚ್ಚಾದರೆ ಇನ್ನೊಬ್ಬನಿಗೆ ಕೊನ್ನಿನ ಹುಚ್ಚು. ಒಬ್ಬನಿಗೆ ಪದವಿಯ ಹಂಬಲಿಕೆಯಿದ್ದರೆ ಇನ್ನೊಬ್ಬ ಅಧಿಕಾರಕ್ಕಾಗಿ ಆಶೆಪಡುತ್ತಿರುವನು. ಕೆಲವರಿಗೆ ಪರದೇಶ ಪ್ರವಾಸದ ಅಪೇಕ್ಷೆ; ಇನ್ನು ಕೆಲವರಿಗೆ ಭೋಗವಿಲಾಸಗಳ ಮೂಲಕ ಆಡಳಿತದಲ್ಲಿಯೆ ಉಪೇಕ್ಷೆ.

ಉತ್ತರ ಕರ್ನಾಟಕದ ಸಂಸ್ಥಾನಿಕರಲ್ಲಿ ಒಬ್ಬರಾದ ರಾಮದುರ್ಗದ ಸಂಸ್ಥಾನಿಕರಿಗೆ ಹಣದ ಹುಚ್ಚು ಯಾವಾಗಲೂ. ಎಂತಲೇ ಅವರು ತಮ್ಮ ಅಧೀನ ಕ್ಷೇತ್ರದಲ್ಲಿಯ ಜನರಿಗೆ ಹಾಕಿದ ಬಗೆಬಗೆಯ ಕಂದಾಯ-ಕರಗಳನ್ನು ನೋಡಿದರೆ ಮಹಮ್ಮದೀಯರು ಹಿಂದುಗಳಿಂದ ಸೆಳೆದುಕೊಳ್ಳುತ್ತಿದ್ದ 'ಜಿಝಿಯಾ' ಕರವು ಹತ್ತುಪಾಲು ಬೇಕೆಂದು ಎನ್ನುವಂತಿದೆ.

ರಾಮ-ಸೀತೆಯರು ವನವಾಸಕ್ಕೆಂದು ಬಂದಾಗ ರಾಮದುರ್ಗದ ಸೀಮಾಪ್ರದೇಶದಲ್ಲಿ ಅಡ್ಡಾಡುತ್ತಿದ್ದರಂತೆ. ಆಗ ಶ್ರಾವಣಮಾಸವಾದರೂ ಬಿಸಿಲಬೇಗೆ ಮೈಯನ್ನು ಬೇಯಿಸುತ್ತಿತ್ತಂತೆ. ಬಾಯಾರಿಕೆಯಾಗಿ ನೀರನ್ನು ಹುಡುಕಿದರೆ ಆ ಕರಿಯ ಮಣ್ಣಿನ ನೆಲದ ನಡುವೆ ಜಲಪ್ರದೇಶ ಎಲ್ಲಿಯೂ ದೊರೆಯಲಿಲ್ಲವಂತೆ. ಸೀತೆ ಬಳಲಿ ಮೂರ್ಛೆಹೋದಳಂತೆ. ಆಗ ಲಕ್ಷ್ಮಣ ಭೂದೇವತೆಗೆ ಬೇಡಿಕೊಳ್ಳಲು ಮಲಾಪಹಾರಿ ನದಿ ಅಲ್ಲಿ ಹರಿಯತೊಡಗಿತಂತೆ.

ಇದೊಂದು ದಂತಕಥೆ. ರಾಮದುರ್ಗ ಸಂಸ್ಥಾನದ ಮಳೆಯ ದುರ್ಭಿಕ್ಷವನ್ನೂ ಕುಡಿಯುವ ನೀರಿನ ತೊಂದರೆಯನ್ನೂ ಕಂಡವನಾವನೋ ಈ ಕತೆಯನ್ನು ಕಟ್ಟಿರಬೇಕು. ಭೂಮಿ ಬಿಸಿಲು ತಿಂದು ಬೇಕಾದಷ್ಟು ಕಸುವಿನದಾಗಿದೆಯಾದರೂ ಅಲ್ಲಿಯ ರೈತರು ವರುವರುಷವೂ ಮಳೆಯಿಲ್ಲದೆ ಕಣ್ಣೀರ ಮಳೆಯಿಂದ ನೆಲವನ್ನು ನೆನೆಯಿಸುವರು. ಹನ್ನೆರಡು ವರ್ಷಗಳಲ್ಲಿ ಒಂದು ವರ್ಷವಾದರೂ ಅಲ್ಲಿಯ ರೈತರಿಗೆ ಹೊಟ್ಟೆತುಂಬುವಷ್ಟು ಧಾನ್ಯ ಸಿಕ್ಕುವುದೋ ಇಲ್ಲವೋ ಸಂಶಯ. ಆದರೂ ಅಲ್ಲಿಯ ಭೂಮಿಯ ಕಂದಾಯ ಬ್ರಿಟಿಷರ ಅಧೀನದಲ್ಲಿದ್ದ ಭೂಮಿಗಿಂತ ೨-೩ ಮಡಿಯಷ್ಟು. ಸಂಸ್ಥಾನದಲ್ಲಿ ನೇಕಾರಿಕೆ ಹೆಚ್ಚಿದ್ದಿತು ; ಆದರೆ ಮಗ್ಗಕ್ಕೆ ಹಾಕಿದ ಕರದ ಮೂಲಕ ಆ ಉದ್ಯೋಗವೆಲ್ಲ ಮಣ್ಣುಗೂಡಿ ಹೋಗಿದೆ. ಗಿರಣಿಗಳ ಸ್ಪರ್ಧೆಯಿಂದ ಮೊದಲೇ ಕೈನೇಗೆಯ ವ್ಯವಸಾಯಕ್ಕೆ ಚಕ್ರಬಂದಿದೆ. ಅದರಲ್ಲಿ ಸಿಕ್ಕುವ ಒಂದೆರಡಾಣೆಗಳನ್ನೂ ಸರಕಾರದವರು ಕಸಿದುಕೊಳ್ಳಲು ತೊಡಗಿದರೆ ನೇಕಾರರು ಏನು ತಿಂದು ಬದುಕಬೇಕು ? ರಾಮದುರ್ಗ ಸಂಸ್ಥಾನಿಕರ ದುಡ್ಡಿನ ಹುಚ್ಚು ಅಪರಾಧಿಗಳಿಗೆ ಶಿಕ್ಷೆ ಕೊಟ್ಟು ಜೈಲಿನ ವೆಚ್ಚವನ್ನು ಬಳೆಯಿಸುವುದೇಕೆಂದು, ಅವರಿಂದ ಒರ್ವ ದಂಡವನ್ನು ವಸೂಲುಮಾಡಿ ಬೊಕ್ಕಸವನ್ನು ಬಲಿಸುತ್ತಿದೆಯೆಂಬ ಸುದ್ದಿಯನ್ನೂ ನಾವು ಕೇಳಿದ್ದೇವೆ. ವಸೂಲಾದ ಕಂದಾಯದ ಉಪಯೋಗ ಪ್ರಜಾಹಿತಕ್ಕೆ ಆಗುವಂತಿಲ್ಲ, ಪ್ರಜೆಗಳ ಕಷ್ಟ-ನಷ್ಟಗಳ ವಿಚಾರವನ್ನೇ ಮಾಡುವಂತಿಲ್ಲ. ಎಂದಮೇಲೆ ಆಡಳಿತದಲ್ಲಿ ಶಾಂತತೆಯುಳಿಯುವುದು ಹೇಗೆ ?

ಈಗ ಮೂರು ನಾಲ್ಕು ವರ್ಷಗಳಿಂದಲೂ ಅಲ್ಲಿ ಬರಗಾಲ. ರೈತರಿಗೆ ಹೊಟ್ಟೆಗಿಲ್ಲ. ಕಂದಾಯ ಕೊಡಲಾರೆವೆಂದು ದೊರೆಗೆ ಹೇಳಲಿಕ್ಕೆ ಹೋದರೆ ದೊರೆತ ಫಲ ಕುದುರೆಯ ತುಳಿತ ! ಲಾಠಿಯ ಏಟು ! ಸರಿ; ತಿನ್ನಲು ಕೂಳಿಲ್ಲದಿದ್ದರೂ ಮನುಷ್ಯತ್ವದ ಅರಿವೂ ಇಲ್ಲವೇ ರಾಮದುರ್ಗದ ಪ್ರಜೆಗಳಿಗೆ ! ಈಗ ಕರನಿರಾಕರಣೆಯ ಚಳವಳಿ ಹೂಡಿ ದೊರೆಗೆ ಕರ್ತವ್ಯವನ್ನು ಕಲಿಸಲು ಹೊರಟಿದ್ದಾರೆ. ಅಧಿಕಾರ ಬಲವು ಕೈಯಲ್ಲಿದ್ದ ಸಂಸ್ಥಾನ ಸರಕಾರವು ಅವರ ಚಳವಳಿ ಮುರಿಯಲು ದಬ್ಬಾಳಿಕೆ ನಡೆಯಿಸಿದ್ದಾರೆ. ಹರಿಯುವ ತನಕ ಜಗ್ಗಿಸಿಕೊಂಡು ಹಾದಿಗೆ ಬರುವುದಕ್ಕಿಂತ ರಾಮದುರ್ಗ ಸಂಸ್ಥಾನಿಕರು ಈಗಲೆ ಪ್ರಜೆಗಳ ಗೋಳನ್ನು ಸಹಾನುಭೂತಿಯಿಂದ ವಿಚಾರ ಮಾಡಿದರೆ ಅವರಿಗೂ ನೆಮ್ಮದಿ ; ತಮಗೂ ನೆಮ್ಮದಿ !

— ೦ —

೭ನೆಯ ಕರ್ನಾಟಕ-ಏಕೀಕರಣ ಸಮ್ಮೇಳನ

" ವಿಹಂಗಮ "

ಮೇ ತಿಂಗಳ ೨೪–೨೫ನೆಯ ತಾರೀಖುಗಳಲ್ಲಿ ಧಾರವಾಡದಲ್ಲಿ ಸಂಯುಕ್ತಕರ್ಣಾಟಕದ ಸಣ್ಣದೊಂದು ಮಾದರಿಯನ್ನೇ ಕಾಣಬಹುದಾಗಿದ್ದಿತು. ಕರ್ನಾಟಕ ಏಕೀಕರಣದ ವಿಷಯದಲ್ಲಿ ನಾಡಿನ ಪ್ರತಿಯೊಂದು ಭಾಗದ ಕನ್ನಡಿಗರಲ್ಲಿಯೂ ಎಷ್ಟೊಂದು ಉತ್ಕಟತೆಯಿದೆಯೆಂಬುದನ್ನು ನೋಡಬೇಕಾದವರು ಮೊನ್ನೆ ಕೂಡಿದ ಏಕೀಕರಣ ಪರಿಷತ್ತಿಗೆ ಬಂದು ನೋಡಬಹುದಾಗಿದ್ದಿತು.

ಸರಕಾರದಿಂದಲೂ ನೆರೆಯ ನಾಡುಗಳಿಂದಲೂ ಕಾಲಕಾಲಕ್ಕೆ ಏಟುಗಳನ್ನು ತಿಂದ-ತಿನ್ನುತ್ತಲಿದ್ದ ಕನ್ನಡಿಗರಿಗೆ, ಸ್ವತಂತ್ರಪ್ರಾಂತದ ಆವಶ್ಯಕತೆಯಿಂದು ತುಂಬ ಎನಿಸುತ್ತದೆ. ತರುಣವರ್ಗಕ್ಕಂತೂ 'ಕರ್ನಾಟಕ ಏಕೀಕರಣವಿಲ್ಲದಿದ್ದರೆ ತಮಗೆ ಜೀವನವೇ ಇಲ್ಲ!' ಎಂಬ ಮಾತು ಮುಸದಟ್ಟಾಗಿದೆ. ಎಂತಲೇ ಈ ಸಲದ ಪರಿಷತ್ತಿನ ಪ್ರಚೋದಕರೆಲ್ಲ ತರುಣರೇ ಆಗಿದ್ದರು. ಮೊದಮೊದಲು ಹಿರಿಯರಾರೂ ತರುಣರಿಗೆ ಉತ್ಸಾಹ ಕೊಡಲಿಲ್ಲವಾದರೂ ಪರಿಷತ್ತಿನ ಸಮಯಕ್ಕೆ ಅನೇಕ ಜನ ಹಿರಿಯರು ಬಂದು ಸಭೆಯನ್ನು ಅಲಂಕರಿಸಿದರು. ತರುಣರ ಉತ್ಸಾಹವನ್ನು ಹೆಚ್ಚಿಸುವ ಉಪಕಾರವನ್ನು ಮಾಡಿದರು.

ಪರಿಷತ್ತಿನಲ್ಲಿ ಸ್ವಾಗತ ಗೀತೆಯನ್ನು ಹೇಳಿದ ಬಾಲಿಕೆಯರು.

ನಾಡಿನ ಮೂಲೆಮೂಲೆಯಿಂದಲೂ ಪ್ರತಿನಿಧಿಗಳೂ ಹಿತ-ಚಿಂತಕರೂ ಬಂದರು. ಕೇವಲ ಏಕೀಕರಣಪರಿಷತ್ತಿಗೆ ಇಷ್ಟೊಂದು ಜನ ಸೇರಿದುದೆಂದರೆ ಇದೇ ಮೊದಲನೆಯ ಸಲ! ಬೇರೆ ಬೇರೆ ಭಾಗದ ಪ್ರತಿನಿಧಿಗಳಷ್ಟೇ ಅಲ್ಲ; ಕನ್ನಡ ನಾಡಿನ ಎಲ್ಲ ಜಾತಿ-ಪಂಗಡಗಳ ಪ್ರತಿನಿಧಿಗಳೂ ಬಂದು, ಕ. ಏಕೀಕರಣದ ವಿಷಯದಲ್ಲಿರುವ ತಮ್ಮ ಆತುರ-ಕಾತರಗಳನ್ನು ವ್ಯಕ್ತಗೊಳಿಸಿದರು. ಮುಂಬಯಿ-ಮದರಾಸ್ ಅಸೆಂಬ್ಲಿಗಳಲ್ಲಿಯ ಹಲವು ಜನ ಕರ್ನಾಟಕ ಸದಸ್ಯರೂ ಮುಂಬಯಿ ಉಪಮಂತ್ರಿಗಳಾದ ಶ್ರೀ. ಎಂ. ಪಿ. ಪಾಟೀಲ, ಶ್ರೀ. ನೇಸ್ರಿಯವರೂ ಮುಂಬಯಿ ಅಸೆಂಬ್ಲಿಯ ಉಪಾಧ್ಯಕ್ಷರಾದ ಶ್ರೀ. ಜೋಶಿ ನಾರಾಯಣರಾಯರೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾರ್ಯಕರ್ತರೂ ಅಧ್ಯಕ್ಷರಾದ ದೇ. ಭ. ಗಂಗಾಧರರಾಯರೂ ಕರ್ನಾಟಕ ಏಕೀಕರಣ ವಿಚಾರದ ಜನಕರಾದ ಶ್ರೀ. ಬೆನಗಲ್ಲ ರಾಮರಾಯರೂ ಕರ್ನಾಟಕ ಏಕೀಕರಣದ ಬಗೆಗೆ ಹಗಲಿರುಳೂ ಹಾರಯಿಸುತ್ತಿರುವ ಪ್ರೊ. ಎ. ಕೆ. ಆರ್. ವಿ. ರಾವ್ ಅವರೂ ಮೈಸೂರಿನ ಮಾನ್ಯ ಅತಿಥಿಗಳಾದ ಡಾ. ಎಮ್. ಎಚ್. ಕೃಷ್ಣರೂ ರಾಜಚರಿತಾವಿಶಾರದ ಸಿ. ಹಯವದನರಾಯರೂ ಬಂದುದರಿಂದ ಪರಿಷತ್ತಿನ ಗೌರವವು ಹೆಚ್ಚಾಗಿದ್ದಿತು.

ಇದೆಲ್ಲವನ್ನೂ ನಿವಾರಿಸುವಂತಹ ಶಕ್ತಿಯೊಂದು ಪರಿಷತ್ತಿಗೆ ತನ್ನ ಹರಕೆಯಿಂದ ಹುರುಪನ್ನು ಬೀರಿತು. ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳೇ ಆ ಶಕ್ತಿಯ ಪ್ರತೀಕ. ಇವರು ತಮ್ಮ ಆಶೀರ್ವಚನದ ಮಂಗಲಾಚರಣೆಯಿಂದ ಪರಿಷತ್ತನ್ನು ಪ್ರಾರಂಭಿಸಿದರು. ಸ್ವಾಗತಾಧ್ಯಕ್ಷರಾದ ಶ್ರೀ. ದೊಡ್ಡಮೇಟಿ ಅಂದಾನೆಪ್ಪನವರು ಕರ್ನಾಟಕದ ಅಭಿಮಾನದ ಪ್ರತಿಮೆಯೆ ಎಂಬುದನ್ನು ಅವರು ತಮ್ಮ ಪ್ರತಿಯೊಂದು ಕೃತಿಯಿಂದ ಈಗಾಗಲೆ ಕನ್ನಡಿಗರ ಅನುಭವಕ್ಕೆ ತಂದುಕೊಟ್ಟಿದ್ದಾರೆ. ಅವರ ಪ್ರಾರಂಭದ ಭಾಷಣವು ಕರ್ನಾಟಕದ ಉಜ್ವಲವಾದ ಅಭಿಮಾನದಿಂದಲೂ ವಿಧಾಯಕ ಕಾರ್ಯಕ್ರಮಗಳ ಸೂಚನೆಗಳಿಂದಲೂ ತುಂಬಿತುಳುಕುತ್ತಲಿದೆ.

ಪ್ರಾರಂಭೋತ್ಸವವನ್ನು ಜರುಗಿಸಿದ
ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರರು

ದೇ. ಥ. ಅಂದಾನೆಪ್ಪನವರ ಸೂಚನೆಯೊಂದು ಹೀಗಿದೆ:—

". . . ಸದ್ಯಕ್ಕೆ ಏಕೀಕರಣದ ಆಂದೋಲನವು ಮಧ್ಯಮ ವರ್ಗದವರಲ್ಲಿಯೆ ಮುಖ್ಯವಾಗಿ ಪ್ರಚಾರವಾಗಿದೆ. ಆದರೆ ಏಕೀಕರಣದ ಸಂದೇಶವು ಹಳ್ಳಿಹಳ್ಳಿಗೂ ಮುಟ್ಟುವುದು ಅವಶ್ಯವಿದೆ. ಅದರಂತೆಯು ಗಡಿನಾಡಿನ ಕನ್ನಡ ಪ್ರದೇಶಗಳಲ್ಲಿಯೂ ಇನ್ನೂ ಹೆಚ್ಚು ಸಂಘಟಿತವಾಗಿ ಪ್ರಚಾರಕಾರ್ಯವಾಗುವುದು ಅವಶ್ಯವಿದೆ. . . . . ನಮ್ಮ ಸದ್ಯದ ಗುರಿಯು ಬ್ರಿಟಿಶ್ ಆಡಳಿತೆಗೆ ಸೇರಿದ ಭಾಗಗಳನ್ನು ಏಕೀಕರಣ ಮಾಡುವುದಿದ್ದರೂ ಸಂಸ್ಥಾನದ ಯಾವತ್ತೂ ಕನ್ನಡ ಸೀಮೆಗಳನ್ನೊಳಗೊಂಡ ಕನ್ನಡ ರಾಷ್ಟ್ರನಿರ್ಮಾಣವೇ ನಮ್ಮ ಕೊನೆಯ ಗುರಿಯಾಗಿರುವುದರಿಂದ ಈ ಕಾರ್ಯಕ್ಕೆ ಮೈಸೂರು ಮೊದಲಾದ ಸಂಸ್ಥಾನಗಳ ಕನ್ನಡ ಬಂಧುಗಳಲ್ಲಿಯೂ ಜಾಗ್ರತಿಯನ್ನುಂಟುಮಾಡಿ ಈ ಕಾಲಕ್ಕೆ ಅವರ ಬೆಂಬಲವನ್ನೂ ದೊರಕಿಸುವುದು ಅತ್ಯವಶ್ಯವಿದೆ. . . "

ಅಧ್ಯಕ್ಷರಾದ ಶ್ರೀಮಾನ್ ಕೆ. ಆರ್. ಕಾರಂತ ಅವರ ಇದುವರೆಗಿನ ರಾಜಕಾರ್ಯದ ಅನುಭವವು, ಕರ್ನಾಟಕ ಏಕೀಕರಣದ ಅತ್ಯಗತ್ಯತೆಯ ಕಡೆಗೆ ಅವರನ್ನು ತಿರುಗಿಸಿದುದು ಕನ್ನಡಿಗರ ಸೌಭಾಗ್ಯವೆಂತಲೇ ಹೇಳಬಹುದು. ಈಗ ೮-೯ ತಿಂಗಳಿಗೆ ಮೊದಲು ಏಕೀಕರಣದ ವಿಚಾರದಲ್ಲಿ ತಾವು ಅಷ್ಟೊಂದು ಕುತೂಹಲವುಳ್ಳವರಾಗಿರಲಿಲ್ಲವೆಂದೂ, ಉಪಮಂತ್ರಿಗಳಾದ ಮೇಲಿನ ಬೇರೆ ಬೇರೆ ಪ್ರತ್ಯಕ್ಷಾನುಭವಗಳಿಂದ, ಕರ್ನಾಟಕ ಏಕೀಕರಣವಿಲ್ಲದೆ ಕನ್ನಡಿಗರಿಗೆ ಉಳಿಗಾಲವಿಲ್ಲವೆಂಬ ಮಾತು ಖಂಡಿತವಾಗಿ ಮನವರಿಕೆಯಾಯಿತೆಂದೂ ಶ್ರೀಮಾನ್ ಕಾರಂತರು ಸಭೆಯಲ್ಲಿ ಸಾರಿ ಹೇಳಿದರು. ಅಧ್ಯಕ್ಷರ ಪ್ರಾರಂಭ ಭಾಷಣದಲ್ಲಿ ಕೇವಲ ಭಾವನೆಗೆ ಕೊಂಚವೂ ಸ್ಥಾನವಿಲ್ಲ. ಅವರು ವಕೀಲರೂ ರಾಜಕಾರ್ಯಧುರೀಣರೂ ಆದುದರಿಂದ ವ್ಯವಹಾರದ ಒರೆಗಲ್ಲಿನಿಂದಲೆ ಅಳೆದಳೆದು ಏಕೀಕರಣದ ಅಗತ್ಯವನ್ನು ಸಿದ್ಧಗೊಳಿಸಿರುವರು. ಕರ್ನಾಟಕ ಏಕೀಕರಣ ದಾರಿಯಲ್ಲಿ ಬರುವವರನ್ನು—ಅವರು ಎಂತಹ ದೊಡ್ಡ ಸ್ಥಾನದಲ್ಲಿಯೆ ಇರಲಿ—ನಿರ್ದಾಕ್ಷಿಣ್ಯವಾಗಿ ವ್ಯವಹಾರ್ಯ ಪ್ರಮಾಣಗಳಿಂದ ಖಂಡಿಸಿರುವರು. ಮುಂಬೈ ಆರ್ಥಿಕ ಮಂತ್ರಿಗಳಾದ ಶ್ರೀಮಾನ್ ಲಠ್ಠೆಯವರ ಸಮಾಚಾರವನ್ನವರು ಚೆನ್ನಾಗಿ ತೆಗೆದುಕೊಂಡಿದ್ದಾರೆ —

" ಕಳೆದ ಎಪ್ರಿಲ್ ತಿಂಗಳಿನಲ್ಲಿ ಕರ್ನಾಟಕ ಪ್ರಾಂತನಿರ್ಮಾಣಕ್ಕೆ ಸಂಬಂಧಿಸಿದ ನಿರ್ಣಯವನ್ನು ಅಂಗೀಕರಿಸುವಾಗ, ನಮ್ಮ ಕರ್ನಾಟಕದ ಮಂತ್ರಿಗಳಾದ ಶ್ರೀ. ಲಠ್ಠೆಯವರು ಹೇಳಿದುದರ ಬಗ್ಗೆ ಪತ್ರಿಕೆಗಳೊಳಗಿನ ಅವತರಣಿಕೆಯನ್ನೋದಿ ನನಗೆ ವಿಷಾದವಾಯಿತು. 'ಕರ್ನಾಟಕಕ್ಕಾಗಿ ಬೇಧರಿನ ಮತ್ತು ರೇಲ್ವೆಯೋಜನೆಯ ಅಗತ್ಯವನ್ನು ಕುರಿತು ಮಾತನಾಡುತ್ತಾ, ಈ ವಿಷಯಗಳು ಸ್ವತಂತ್ರ ಪ್ರಾಂತನಿರ್ಮಾಣವಾದ ಮೇಲೂ ಕರ್ನಾಟಕದ ಕೈಯಲ್ಲಿ ಬರಲಾರವು; ಏಕೆಂದರೆ ಅವು ಹಿಂದುಸ್ಥಾನ ಸರಕಾರದ ಆಡಳಿತಕ್ಕೆ ಒಳಪಟ್ಟವೆ—

ಪರಿಷತ್ತಿನ ಅಧ್ಯಕ್ಷರಾದ
ಶ್ರೀಮಾನ್ ಕೆ ಆರ್ ಕಾರಂತ ಎಂ ಎಲ್. ಎ ಮಂಗಳೂರು

ಎಂದು ಮಾನ್ಯ ಮಂತ್ರಿಗಳು ಹೇಳಿದರು. ಚಿಕ್ಕ ಸ್ವತಂತ್ರ ಪ್ರಾಂತ ವಾಗಿರದೆ, ಮುಂಬೈ ಪ್ರಾಂತದ ಭಾಗವಾಗಿರುವುದರಿಂದಲೆ, ಈ ಸೌಲಭ್ಯಗಳನ್ನು ಹೆಚ್ಚು ಸುಲಭವಾಗಿ ಸಂಪಾದಿಸಬಹುದೆಂತಲೂ ಅವರು ಹೇಳಿದರು. ” ಈ ಅವತರಣಿಕೆಯು ಸತ್ಯಾಂಶವನ್ನೇ ಹೇಳುತ್ತಿದ್ದರೆ, ಶ್ರೀ. ಲಕ್ಷ್ಮಯವರಿಗಾಗಿ ನಾನು ನಿಜವಾಗಿಯೂ ವಿಷಾದಪಡುತ್ತೇನೆ. ಮದ್ರಾಸ, ಮುಂಬೈಗಳಂತಹ ‘ ಸಮರ್ಥ ’ ಪ್ರಾಂತಗಳ ಭಾಗಗಳಾಗಿ ಇಷ್ಟು ವರ್ಷಗಳವರೆಗಿದ್ದುದಕ್ಕೆ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು ಎಷ್ಟು ರೇಲ್ವೆಗಳನ್ನು, ಎಷ್ಟು ಬಂದರುಗಳನ್ನು ಸಂಪಾದಿಸಿದವು ? ಕರ್ನಾಟಕದ ಭಾಗವಾದ ನನ್ನ ಜಿಲ್ಲೆಯಲ್ಲಿ, ರೇಲ್ವೆಯ ಉದ್ದಳತೆಯು ಸುಮಾರು ೩೦ ಮೈಲಿ ಮಾತ್ರ ಇದೆ. ಉತ್ತರ ಕನ್ನಡದಲ್ಲಿಯಂತೂ ಇಲ್ಲವೇ ಇಲ್ಲ. ಕೆಲವು ವರ್ಷಗಳ ಹಿಂದೆ ನಾನು ಆ ಜಿಲ್ಲೆಯಲ್ಲಿ ಸಂಚರಿಸಿದೆನು. ಇದುವರೆಗೆ ಮುಂಬೈ ಪ್ರಾಂತದ ಸರಕಾರದವರು ಆ ದುರ್ಭಾಗ್ಯ ಜಿಲ್ಲೆಯ ಜನರಿಗಾಗಿ ಎಷ್ಟೊಂದು ಹಿತದ ಕಾರ್ಯಗಳನ್ನು ಮಾಡಿದ್ದಾರೆಂಬುದು ನನಗೆ ಗೊತ್ತಿದೆ. ಈ ಮಂತ್ರಿಗಳು ಮಾತನಾಡಿದ ರೀತಿಯಲ್ಲಿ ಯಾವುದೇ ಕಾಂಗ್ರೆಸ್ ಮಂತ್ರಿಯು ಮಾತನಾಡಬೇಕಾಗಿ ಬಂದುದು ಶೋಚನೀಯವೇ ಸರಿ. ನಿನ್ನೆ ಗಳಿಸಿದ ರಾಜಕೀಯ ಬಲವು ನಾಳೆ ಹೋಗಬಹುದು; ಆದರಿಂದ ನಮ್ಮ ತಲೆ ತಿರುಗದಿರಲಿ, ಮತ್ತು ನಮ್ಮ ಹಳೆಯ ವಾಗ್ದಾನಗಳನ್ನು ಮರೆಯುವಂತೆ—ನಾವೇ ಅವನ್ನು ಜರಿದು ಬಿಡುವಂತೆ ಮಾಡದಿರಲಿ. ನಮಗೆ ಸ್ವತಂತ್ರ ಪ್ರಾಂತವು ದೊರೆಯದಿದ್ದರೆ, ಕಾಂಗ್ರೆಸು ಬೇಡುವ ಮಧ್ಯವರ್ತಿ ಸರಕಾರದಂತಹ ಸಂಯುಕ್ತ ರಾಜ್ಯಘಟನೆಯಾಗಲಿ ಅಥವಾ ಇನ್ನಾವ ಘಟನೆಯಾಗಲಿ ನಮಗೆ ನಿರುಪಯುಕ್ತವೆ ಸರಿ. ಅದುದರಿಂದ ನಮ್ಮ ಬೇಡಿಕೆಗಳನ್ನು ನಾವು ಗಟ್ಟಿಯಾಗಿ ಹೇಳಬೇಕು; ಕಾಂಗ್ರೆಸಿನವರು ನಮ್ಮ ಕೂಗನ್ನು ಇದುವರೆಗೆ ಸಾಕಷ್ಟು ಕೇಳುತ್ತಿರಲಿಲ್ಲ; ಅದು ಆಗದ ಹಾಗೆ ಉಚ್ಚಸ್ವನಿಯಲ್ಲಿ ಒತ್ತಿ ಹೇಳಬೇಕು. ಈ ಪ್ರಶ್ನೆಯು ಬಿಡುವಳಿಗಾಗಿ ಇನ್ನು ದಾರಿಕಾಯುವುದು ನಿಷ್ಪ್ರಯೋಜಕವೆಂದೂ, ಅದೇಕೆ ಭಯಾವಹವೆಂದೂ ನನಗೆನಿಸುತ್ತದೆ. ಭಯಾವಹವೇಕೆಂದರೆ, ಈ ವರೆಗಾದ ಬೇರೆ ಭಾಷೆಯ ಪ್ರಾಂತಗಳ ಅವ್ಯಾಹತವಾದ ಆಕ್ರಮಣದಿಂದ ನಮ್ಮ ನಾಡು ಈಗಾಗಲೆ ಎಷ್ಟೋ ತೊಂದರೆಗೊಳಪಟ್ಟದೆ; ಮತ್ತು ಭವಿಷ್ಯತ್ತದರೊ ಇನ್ನೂ ಭೀಕರವಾಗಿ ತೋರುವುದು. ’’

ರಾಷ್ಟ್ರೀಯ ಸಭೆಯನ್ನು ಅಧ್ಯಕ್ಷರು ಎಚ್ಚರಿಸಿದುದು ಹೀಗೆ :

“ ಆಗ, ಈಗ ಏಕೀಕರಣದ ನಿರ್ಣಯಗಳನ್ನು ಅಂಗೀಕರಿಸುವುದರ ಹೊರತಾಗಿ ಕಾಂಗ್ರೆಸ್ಸಿನವರು ಈ ವಿಷಯಕ್ಕೆ ತಕ್ಕ ಗಮನವನ್ನು ಕೊಟ್ಟಿಲ್ಲವೆಂದು ನನಗೆ ಎನಿಸುತ್ತಿದೆ. ಹೆಚ್ಚಿನ ಮಹತ್ವದ ಸಂಗತಿಗಳು ಅವರ ಮನಸ್ಸನ್ನು ಸೆಳೆದಿವೆಯೆಂಬುದು ಸತ್ಯವಿದೆ. ಆದರೆ ಈ ವಿಷಯದಲ್ಲಿ ಆಂಧ್ರರ ಮತ್ತು ಕರ್ನಾಟಕರ ತಾಳ್ಮೆಯ ಮೇರೆಯು ಮೀರುತ್ತ ಬಂದಿದೆ. ಇನ್ನು ನಾವು ತಡೆಯುವುದಿಲ್ಲ; ತಡೆವುದು ಸಾಧ್ಯವೂ ಇಲ್ಲ. ಎ. ಐ. ಸಿ. ಸಿ. ಯವರು ಇದನ್ನು ಅಗತ್ಯದ ವಿಷಯವೆಂದು ಕೂಡಲೆ ಕೈಕೊಳ್ಳುವಂತೆ ಈ ಎರಡೂ ಪ್ರಾಂತಗಳೊಳಗಿನ ಕಾಂಗ್ರೆಸ್ಸಿನವರು ಸುಸಂಘಟಿತ ರೀತಿಯಲ್ಲಿ ಏಕಮುಖವಾಗಿ ಒತ್ತಾಯಪಡಿಸುವ ಸಮಯವು ಬಂದಿದೆಯೆಂದು ನಾನು ಭಾವಿಸಿದ್ದೇನೆ. ಇಷ್ಟೇ ಅಲ್ಲ, ಬರಲಿರುವ ಸಂಯುಕ್ತ ರಾಜ್ಯಘಟನೆಯ ಪ್ರಶ್ನೆಯ ವಿಚಾರದಲ್ಲಿಯೇ ಏಕೀಕರಣದ ಪ್ರಶ್ನೆಯೂ ಸೇರ್ಪಡೆಯಾಗಬೇಕು; ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬ್ರಿಟಿಶ ಸರಕಾರಗಳ ನಡುವೆ ಸಾಮೋಪಾಯದ ಚರ್ಚೆ ನಡೆದಾಗ ಆಗಲಿ, ಅದು ವ್ಯರ್ಥವಾಗುವ ಹೊತ್ತು ಬಂದಲ್ಲಿ ದಂಡೋಪಾಯಗಳನ್ನು ಯೋಜಿಸುವ ಸಂದರ್ಭ ಬಂದಾಗ ಆಗಲಿ ಏಕೀಕರಣವು ಆ ಹಿರಿ ಸಮಸ್ಯೆಯ ಅನಿವಾರ್ಯವಾದ ಭಾಗವಾಗಲೇ ಬೇಕು. ಹಾಗೆ ಮಾಡದಿದ್ದರೆ, ಸಂಯುಕ್ತ ರಾಜ್ಯಘಟನೆಯು ಅಸ್ತಿತ್ವದಲ್ಲಿ ಬಂದು ಕಾಂಗ್ರೆಸ್ಸಿನವರು ಸ್ವಲ್ಪ ಬದಲಾವಣೆಗಳೊಂದಿಗೆ ಅದನ್ನು ನಡೆಯಿಸಿಕೊಂಡು ಹೋಗುವ ಸಮಯ ಬಂದರೆ, ಹಲವು ವರುಷಗಳ ವರೆಗೆ ಈ ಪ್ರಶ್ನೆಯು ಇತ್ಯರ್ಥವಾಗದೆ ಉಳಿಯುವುದು, ಮತ್ತು ನಮ್ಮ ಮಿತ್ರರಲ್ಲಿಯೆ ಕೆಲವರಲ್ಲಿ ಅದನ್ನು ಮುಂದಕ್ಕೆ ತಳ್ಳುವ ಮನೋವೃತ್ತಿಯು ಬೆಳೆಯುವ ಸಂಭವವೂ ಇದೆ. ’’

ಕನ್ನಡಿಗರೆಲ್ಲರೂ ಅಕ್ಷರಕ್ಷರವನ್ನೂ ಹೃದಯದಲ್ಲಿ ಕೊರೆದಿಟ್ಟುಕೊಳ್ಳುವಂತಹದು ಅಧ್ಯಕ್ಷರ ಭಾಷಣ. ನಡುನಡುವೆ ಆಡುತ್ತಿದ್ದ ಅವರ ಅನೇಕ ಮಾತುಗಳು ಏಕೀಕರಣದ ಬಗೆಗೆ ಉದಾಸೀನರೂ ವಿರೋಧಿಗಳೂ ಆಗಿದ್ದ ಕನ್ನಡಿಗರ ಮನಸ್ಸನ್ನು ಚುಚ್ಚಿ ತೆಗೆಯುವಂತಹವಾಗಿದ್ದುವು. ಕನ್ನಡಿಗನಿಗೆ ಏಕೀಕರಣದ ಧ್ಯೇಯ ಸಾಧನೆಯೆದುರು ರಾಷ್ಟ್ರೀಯ ಮಹಾಸಭೆಯ ನಿಯಮ- ನೀತಿಗಳೂ ಗೌಣವೆಂಬುದನ್ನವರು ಸಾರಿ ಸಾರಿ ಹೇಳಿದರು.

ಪರಿಷತ್ತಿನಲ್ಲಿ ಪಾಸಾದ ಅನೇಕ ಗೊತ್ತುವಳಿಗಳು ಏಕೀಕರಣದ ದೃಷ್ಟಿಯಿಂದ ತುಂಬ ಮಹತ್ತ್ವವುಳ್ಳವುಗಳಾಗಿವೆ. ಕೆ. ಪಿ. ಸಿ. ಸಿ. ಯವರು ಗಡಿಯ ಕನ್ನಡ ಭಾಗಗಳನ್ನು ವಶಪಡಿಸಿಕೊಳ್ಳಲು ಉತ್ಸಾಹಪೂರ್ವಕವಾಗಿ ಚಳವಳಿಯನ್ನು ಹೂಡಬೇಕೆಂದು ಗೊತ್ತಾಗಿದೆ. ಮರಾಟಿಗರೂ, ಆಂಧ್ರರೂ, ಮಲೆಯಾಳಿಗಳೂ ಜಾಗ್ರತ ಬುದ್ಧಿಯಿಂದ ತಮ್ಮ ತಮ್ಮ ಸೀಮಾ ಕ್ಷೇತ್ರಗಳನ್ನು ವಶಪಡಿಸಿಕೊಳ್ಳಲು ಹವಣಿಸುವರೆಂಬುದನ್ನು ನೋಡಿದರೆ ಕರ್ನಾಟಕ ಕಾಂಗ್ರೆಸ್ಸು ಈ ವಿಷಯದಲ್ಲಿ ನಿದ್ರೆಹೋಗಿದೆಯೆಂದು ಯಾರೂ ಹೇಳಬಹುದು.

ಭಾಷಾನುರೋಧ ಪ್ರಾಂತರಚನೆಯು ಅಶಕ್ಯವೆಂದಾಡಿದ ಲಾರ್ಡ್ ಝೆಟಲಂಡರನ್ನು ನಿಷೇಧಿಸುವ ಗೊತ್ತುವಳಿಯೊಂದು ಪಾಸಾಯಿತು. ಏಕೀಕರಣದ ಬೇಡಿಕೆಯನ್ನು ಬೇಗನೆ ನೆರವೇರಿಸಿಕೊಡಲು ಬ್ರಿಟಿಷ್ ಸರಕಾರಕ್ಕೂ ಪಾರ್ಲಮೆಂಟಿಗೂ ಒತ್ತಾಯಪಡಿಸುವ ಗೊತ್ತುವಳಿಯೊಂದು ಪುರಸ್ಕೃತವಾಯಿತಲ್ಲದೆ, ಕನ್ನಡಿಗರ ಈ ಕೋರಿಕೆಯನ್ನು ನಿರಾಕರಿಸಿದಲ್ಲಿ ಕೊನೆಯ ಉಪಾಯವೆಂದು ಸತ್ಯಾಗ್ರಹ ಹೂಡಬೇಕಾಗುವುದೆಂಬ ನಿಕರದ ನಿರ್ಣಯವೂ ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು. ಕರ್ನಾಟಕದ ಚಳುವಳಿಯ ಪ್ರಸಾರಕ್ಕಾಗಿ ಇಂಗ್ಲಿಷ್ ಪತ್ರಿಕೆಯೊಂದನ್ನು ಬೇಗನೆ ತೆಗೆಯಬೇಕೆಂದು ಗೊತ್ತಾಯಿತು. ಅಖಿಲ ಕರ್ನಾಟಕದ ಪ್ರಾತಿನಿಧ್ಯವುಳ್ಳ ಕಾರ್ಯಕಾರಿ ಮಂಡಲವೊಂದು ನಿರ್ಮಿತವಾಯಿತಲ್ಲದೆ ಅವ್ಯಾಹತವಾಗಿ ಕಾರ್ಯ ನಡೆಯಿಸುವುದಕ್ಕಾಗಿ

ಏಕೀಕರಣದ ನಿಧಿಯನ್ನು ಕೂಡಿಸುವ ಗೊತ್ತುವಳಿಯೂ ಸರ್ವಾನುಮತದಿಂದ ಪಾಸಾಯಿತು. ಸಭೆಯಲ್ಲಿಯೆ ೨೧೭೭ ರೂಪಾಯಿಗಳ ಅಭಿವಚನ ದೊರೆತು, ನಿಧಿಯ ಗೊತ್ತುವಳಿಯು ಕೂಡಲೆ ಜಾರಿಯಲ್ಲಿಯೂ ಒಂದುಬಿಟ್ಟಿತು. ಇವಲ್ಲದೆ ಅಲ್ಪಸಂಖ್ಯಾಕರಿಗೆ ಆಶ್ವಾಸನ, ಕರ್ನಾಟಕ ಏಕೀಕರಣದ ಗೊತ್ತುವಳಿ ಪಾಸಾಗುವುದಕ್ಕಾಗಿ ಪ್ರಯತ್ನಪಟ್ಟ ಮುಂಬಯಿ ಮದರಾಸ ಅಸೆಂಬ್ಲಿಗಳ ಸದಸ್ಯರ ಅಭಿನಂದನೆ, ಮೈಸೂರು ಕನ್ನಡಿಗರ ಶುಭಾಶಯ, ಕರ್ನಾಟಕಕ್ಕೆ ಆವಶ್ಯಕವಾದ ಇನ್ನೂ ಎಷ್ಟೋ ಬೇಡಿಕೆಗಳು ಇವುಗಳನ್ನೆಲ್ಲ ಎತ್ತಿಹಿಡಿಯುವ ಗೊತ್ತುವಳಿಗಳೂ ಪುರಸ್ಕೃತವಾದುವು.

ಅಭಿಮಾನಶಾಲಿಗಳಾದ ತರುಣರು ಮುಂದೆ ತಂದಿದ್ದ ನಾ. ಲಠ್ಠೆಯವರ ನಿಷೇಧ, ಮಹಾರಾಷ್ಟ್ರ ಸಾಹಿತ್ಯಪರಿಷತ್ತಿನ ಒಂದು ಗೊತ್ತುವಳಿಯ ನಿಷೇಧ, ಮುಂಬಯಿ–ಮದರಾಸ್ ಸರಕಾರಕ್ಕೂ ಶಾಸನಮಂಡಲಕ್ಕೂ ಅಭಿನಂದನೆಗಳನ್ನರ್ಪಿಸುವುದರ ನಿಷೇಧ ಇವುಗಳನ್ನೊಳಗೊಂಡ ಗೊತ್ತುವಳಿಗಳು ಸಾಕಷ್ಟು ದೊಡ್ಡ ಬಹುಮತಗಳಿಂದ ಪಾಸಾಗುವ ಅಭಿಮಾನೋತ್ಸಾಹಗಳು ಸಭೆಯಲ್ಲಿ ಹರಿದಾಡುತ್ತಿದ್ದುವಾದರೂ ಹಿರಿಯರ ಮಾತಿಗೆ ಮನ್ನಣೆಯಿತ್ತು ತರುಣರು ಆ ಗೊತ್ತುವಳಿಗಳನ್ನು ಹಿಂದಕ್ಕೆ ತೆಗೆದುಕೊಂಡರು. ಒಟ್ಟಿನಲ್ಲಿ ೬ನೆಯ ಏಕೀಕರಣ ಪರಿಷತ್ತು ನಿರೀಕ್ಷಿಸಿದುದಕ್ಕಿಂತ ಉತ್ಸಾಹದಿಂದ ನೆರವೇರಿತು. ಅದು ಹಾಕಿಕೊಟ್ಟ ಕಾರ್ಯಕ್ರಮವನ್ನು ಸಿದ್ಧಿಗೊಯ್ಯುವ ಭಾರ ಅಖಿಲ ಕರ್ನಾಟಕಸ್ಥರ ತಲೆಯಮೇಲಿದೆ. ಕರ್ನಾಟಕ ಭಾಗ್ಯವಿಧಾತೃವು ಕರ್ತವ್ಯಕ್ಕಾಗಿ ಹೆಣಗುವ ಸದ್ಬುದ್ಧಿಯನ್ನು ಕನ್ನಡಿಗರೆಲ್ಲರಿಗೂ ದಯಪಾಲಿಸಲಿ!*

ಜಯ ಕರ್ನಾಟಕ!

---o---

ಸ್ವೀಕಾರ

೬. **ರಂಗವಲ್ಲಿ**: ಕನ್ನಡ ನಾಡಿನ ಬೇರೆ ಬೇರೆ ಕತೆಗಾರತಿಯರು ಬರೆದ ೧೪ ಕತೆಗಳ ಸಂಗ್ರಹವಿದು. ಧಾರವಾಡದ ಮನೋಹರ ಗ್ರಂಥಭಾಂಡಾರದ ಪ್ರಕಟನೆ. ಕ್ರೌನ್ ೧/೮ ದ ೧೬ + ೧೭೩ ಪುಟಗಳು. ಬೆಲೆ ಸಾಮಾನ್ಯ ಪ್ರತಿಗೆ ೧-೦-೦; ಕ್ಯಾಲಿಕೊ ಪ್ರತಿಗೆ ೧-೮-೦.

೭. **ತರುಣ ತುರ್ಕಸ್ತಾನ್ ಅರ್ಥಾತ್ ಕಮಾಲಪಾಶಾ** (ಜೀವನಚರಿತ್ರೆ): ಶ್ರೀಮಾನ್ 'ವಿಲಾಸಿ' ಅವರು ಬರೆದುದು. ಧಾರವಾಡದ 'ಮಿಂಚಿನ ಬಳ್ಳಿ'ಯ ಎರಡನೆಯ ಕುಡಿ. ಸಂಪಾದಕರು ಶ್ರೀ ಬಿಂದುಮಾಧವ ಬುರ್ಲಿ; ಕ್ರೌನ್ ೧/೮ ದ ೧೫೮ ಪುಟಗಳು. ಬೆಲೆ ೧-೦-೮.

೮. **ನವಶಕ್ತಿ** (ಮಾಸಪತ್ರಿಕೆ) ಉಡುಪಿಯಲ್ಲಿ ಹೊಸತಾಗಿಯೆ ಹೊರಟ ಮಾಸಪತ್ರಿಕೆಯ ಮೊದಲನೆಯ (ಮೇ ತಿಂಗಳ) ಸಂಚಿಕೆ. ಸಂಪಾದಕರು ಶ್ರೀ. ಪಿ. ಎಸ್ ಬನ್ನಂಜೆ ರಾಮಾಚಾರ್ಯರು. ಸಂಪಾದಕರೇ ಪ್ರಕಾಶಕರು. ಕ್ರೌನ್ ೧/೮ ದ ೬೨ ಪುಟಗಳು. ವಾ. ವ. ೩-೦-೦. ಬಿಡಿಸಂಚಿಕೆಗೆ ೦-೪-೮.

೯. **ನಮ್ಮ ಪುಸ್ತಕ** (ಮಕ್ಕಳಿಗಾಗಿ ಮಾಸಪತ್ರಿಕೆ) ೨ನೆಯ ವರ್ಷದ ೮ನೆಯ ಸಂಚಿಕೆಯು ವಿಶೇಷ ಪ್ರತಿಯಿದು. ವಿದ್ಯಾರ್ಥಿಗಳ ಭಾಗ, ಹಿರಿಯರ ಭಾಗ, ಮಕ್ಕಳ ಭಾಗ ಎಂಬ ಮೂರು ಭಾಗಗಳು ಇದರಲ್ಲಿ ಅಡಕವಾಗಿದ್ದು, ಪ್ರತಿಯೊಂದು ಭಾಗವೂ ೧೬ ಪುಟಗಳಿಂದ ಕೂಡಿದೆ. ಮಕ್ಕಳ ಭಾಗದ ಪ್ರತಿಯೊಂದು ಪುಟವೂ ಸಚಿತ್ರವಿದೆ. ಸಂಪಾದಕರು ಕನ್ನಡ ನಾಡಿಗೆ ಸಾಕಷ್ಟು ಪರಿಚಿತರಾದ ಶ್ರೀ ಮಾಸ್ ದೇವುಡು ನರಸಿಂಹಶಾಸ್ತ್ರಿ ಎಂ. ಎ. ಬೆಂಗಳೂರು ಅವರು. ಪ್ರತಿ ಸಂಚಿಕೆಯ ವಿಶೇಷ ಪ್ರತಿಯ ಬೆಲೆ ೦-೨-೦. ಸಾಮಾನ್ಯ ಪ್ರತಿಯ ಬೆಲೆ ೦-೧-೦.

೧೦. **ಕನ್ನಡ ಜ್ಯೋತಿ** (ಮಾಸಪತ್ರಿಕೆ) ೧ನೆಯ ಸಂಪುಟದ ೧೦ನೆಯ ಸಂಚಿಕೆ. ಸಂಪಾದಕರು ಶ್ರೀ. ಬಿ. ಸತ್ಯನಾರಾಯಣ ಶರ್ಮ ಮಲ್ಲೇಶ್ವರ, ಬೆಂಗಳೂರು. ಕ್ರೌ. ೧/೮ದ ೨೮ ಪುಟಗಳು. ಬಿಡಿ ಸಂಚಿಕೆಯ ಬೆಲೆ ೦-೧-೦.

೧೧. **ಸುದರ್ಶನ ಮಾಸಪತ್ರಿಕೆ** ಸಂಪಾದಕರು ಶ್ರೀ. ಆರ್. ಎ. ಜಹಾಗೀರದಾರ ಎಲ್ ಎಲ್. ಬಿ. ಧಾರವಾಡ. ಸಂಚಾಲಕರು ಶ್ರೀ. ಎ. ಎಸ್. ಕಾಮತ ಎಲ್ ಎಲ್. ಬಿ. ಧಾರವಾಡ. ಕ್ರೌ. ೧/೮ದ ೨೪ ಪುಟಗಳು. ವಾ. ಚಂದಾ ೧-೦-೦ ಬಿಡಿ ಸಂಚಿಕೆಯ ಬೆಲೆ ೦-೧-೦.

---

* ಈ ಲೇಖನದಲ್ಲಿ ಬಂದ ಪಡಿಯಚ್ಚುಗಳಿಗಾಗಿ ಛಾಯಾಚಿತ್ರಗಳನ್ನು ಒದಗಿಸಿಕೊಟ್ಟುದಕ್ಕಾಗಿ ಶ್ರೀಮಾನ್ ಕೋನ್ನೂರ ಬಿ. ಎಸ್‌ಸಿ ಅವರಿಗೆ ತುಂಬ ಕೃತಜ್ಞರಾಗಿದ್ದೇವೆ.

ಸಂ. ಜಯಂತಿ

೬ನೆಯ ಕರ್ಣಾಟಕ-
ಇತಿಹಾಸ ಸಮ್ಮೇಲನ

●

ಕರ್ಣಾಟಕ ಏಕೀಕರಣ ಸಮ್ಮೇಲನ ಕಾಲದಲ್ಲಿಯೆ ಮೇ ೨೫ನೆಯ ತಾರೀಖಿನ ದಿನ ಬೆಳಗಿನ ಎಂಟುಗಂಟೆಯಿಂದ ೧೧ ಗಂಟೆಯ ವರೆಗೆ ಈ ಸಮ್ಮೇಲನದ ಕಾರ್ಯಕ್ರಮವು ನಡೆಯಿತು. ಶ್ರೀಮಾನ್ ಜೋಗ ವಿಶ್ವನಾಥರಾಯರು ಸ್ವಾಗತಾಧ್ಯಕ್ಷರಾಗಿದ್ದರು. ಸುಪ್ರಸಿದ್ಧ ಇತಿಹಾಸ ಸಂಶೋಧಕರೂ ಅರ್ಥಶಾಸ್ತ್ರ ವಿಶಾರದರೂ ಆದ, ಬೆಂಗಳೂರಿನ, ರಾಜಚರಿತವಿಶಾರದ ರಾವ್-ಸಾಹೇಬ ಸಿ. ಹಯವದನರಾಯರು ಅಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷಸ್ಥಾನದಿಂದ ಮಾಡಿದ ತಮ್ಮ ಪ್ರಾರಂಭಭಾಷಣದಲ್ಲಿ ಅತ್ಯಂತ ಅಗತ್ಯವಾದ ಮತ್ತು ಮನನೀಯವಾದ ಎಷ್ಟೋ ಅಂಶಗಳಿವೆ. ಏಕೀಕರಣ ಚಳವಳದ ಈ ಕಾಲದಲ್ಲಿ 'ನಾವು ಹಿಂದೊಮ್ಮೆ ನಮ್ಮ ರಾಜ್ಯವನ್ನು ಹೇಗೆ ನಡೆಯಿಸಿದೆವು ; ಅದರ ಏರಿಳಿತಗಳ ಕಾರಣವಾವುವು ; ನಮ್ಮ ಸಂಸ್ಕೃತಿಯ, ಪರಂಪರೆಯ ಪ್ರವಾಹ ಎತ್ತ ನಡೆದಿದೆ- ಎಂಬುದನ್ನು ತಿಳಿಯುವುದಗತ್ಯ: ಅದಕಾಗಿ ಇತಿಹಾಸದ ಜ್ಞಾನ ಬೇಕು' ಎಂದು ಅಧ್ಯಕ್ಷರು ಯೋಗ್ಯವಾಗಿಯೆ ಎಚ್ಚರಕೊಟ್ಟಿದ್ದಾರೆ. 'ಇಂದು ಭಾರತವು ಒಂದಾಗಿದೆ ಎಂಬುದನ್ನು ಲಕ್ಷ್ಯದಲ್ಲಿಟ್ಟು ಅಖಿಲಭಾರತ ಐತಿಹಾಸಿಕ ಪರಿಷತ್ತೊಂದು ನಿರ್ಮಾಣವಾಗಬೇಕು, ಅವ್ಯಾಹತವಾಗಿ ನಮ್ಮ

ಸ್ವಾಗತಾಧ್ಯಕ್ಷರಾದ
ಶ್ರೀಮಾನ್ ಜೋಗ ವಿಶ್ವನಾಥರಾಯರು ಎಂ ಎಲ್ ಎ

ಅಧ್ಯಕ್ಷರಾದ
ರಾ. ಸಾ. ಸಿ. ಹಯವದನರಾಯರು

ಜ್ಞಾನವನ್ನು ಒಂದುಗೂಡಿಸಬೇಕು, ಏಕಧ್ಯೇಯವನ್ನಾ ಮಾಡಬೇಕು' ಎಂದು ಅವರು ಹೇಳಿದ ಮಾತಿಗೆ ಯಾವ ಸಯುಕ್ತಿ ಮನುಷ್ಯನೂ ತಲೆದೂಗದಿರನು. ಇದಲ್ಲದೆ 'ಇಂದು ಅಂತ ರಾಷ್ಟ್ರೀಯತೆ ಮತ್ತು ಪ್ರಗತಿಪರತೆ ಎಂಬ ಎರಡು ಸಂಗತಿಗ ಜಗತ್ತಿನ ಹಿತಕ್ಕಾಗಿ ಮುಂದೆ ಬಂದು ನಿಂತಿವೆ ಎಂಬುದನ ಇತಿಹಾಸಕಾರನು ಲಕ್ಷ್ಯದಲ್ಲಿಡಬೇಕಾಗಿದೆ-' ಎಂಬ ಅಧ್ಯಕ್ ಅಭಿಪ್ರಾಯವು ಶಾಲೆ-ಶಾಲೆಗಳ ಹೆಬ್ಬಾಗಿಲಿಗೆ ಕೊರೆದಿಡುವಂ ನಿತ್ಯವಾಗಿದೆ. ರಾ. ಸಾ. ಸಿ. ಹಯವದನರಾಯರು ಇತಿಹಾ ವನ್ನು ಸಮಗ್ರದೃಷ್ಟಿಯಿಂದ ನೋಡಬೇಕೆಂಬ ಉದಾತ್ತ ಧ್ಯೇ ವನ್ನು ನಮ್ಮ ಮುಂದಿಟ್ಟಿದ್ದಾರೆ. ಇತಿಹಾಸವು ಒಂದು ದೇಶ ಮಾತ್ರ ಸಂಬಂಧಿಸಿಲ್ಲ, ಅದರಂತೆಯೆ ಒಂದು ವ್ಯಕ್ತಿಗೂ ಸಂಬ ಸಿಲ್ಲ. ಮಾನವಶಾಸ್ತ್ರ (anthiopology) ದ ಸಹಾಯವಿ ಇತಿಹಾಸಕ್ಕೆ ಬೆಲೆ ಇಲ್ಲ, ಸ್ಥಿರತೆ ಇಲ್ಲ. ಬದಲಾಗು ಮುಂದೆ ನಡೆದ ಜಗತ್ತಿನಲ್ಲಿ ದೇಶ- ಕಾಲ- ಪರಿ ಮೊದಲಾದುವುಗಳು ಇತಿಹಾಸದ ಘಟಕಗಳಾಗಿವೆ. ದೃಷ್ಟಿಯಿಂದ ಇತಿಹಾಸವನ್ನು ನೋಡುವುದಾದರೆ ಇಂ

ಇತಿಹಾಸಕಾರರಿಗೆ ಕ್ರಮಶಿಕ್ಷಣ (Diciplined Training) ಬೇಕು, ಇತಿಹಾಸವನ್ನು ಕಲಿಸುವ ಪದ್ಧತಿ ಬದಲಾಯಿಸಬೇಕು. ಎಂದು ಹೇಳುವುದು ಸಹಜವೆ ಆಗಿದೆ. ನಮ್ಮ ದೇಶದಲ್ಲಂತೂ ತಳಹದಿಯಿಂದಲೆ ಪ್ರಾರಂಭಿಸಬೇಕಾಗಿದೆ. ಪರಿಶೋಧಕ್ಕೆ ಸಾಮುಗ್ರಿಗಳನ್ನು ಕೂಡಿಸಲು ಅವಕಾಶಬೇಕು, ಆ ಸಾಮುಗ್ರಿಗಳನ್ನು ಯೋಗ್ಯರೀತಿಯಿಂದ ಉಪಯೋಗಿಸಿಕೊಳ್ಳುವವರು ತರಬೇತಾಗ ಬೇಕು. ಅದಕಾಗಿ ಧನಸಹಾಯಬೇಕು. ಪ್ರಜಾಪ್ರಭುತ್ವದ ಈಗಿನ ದಿವಸಗಳಲ್ಲಿ ಧನಸಹಾಯವೆಂದರೆ ಜನಸಹಾಯ ಎಂದೇ ಅರ್ಥವಾಗುವುದು. ಇತಿಹಾಸಜ್ಞಾನದ ಆವಶ್ಯಕತೆಯನ್ನರಿತು ಜನತೆಯು ಒತ್ತಾಯಪಡಿಸಿದರೆ ಸರಕಾರದವರು ಈಗಿನಂತೆ ಸುವರ್ಣಪುಷ್ಪದಕ್ಷಿಣಾ–ಉಪಚಾರದಂತೆ ಕೊಡದೆ ನಿಜವಾಗಿಯೂ ಆವಶ್ಯವಿದ್ದ ಧನಸಹಾಯವನ್ನು ಕೊಡಬಹುದು. ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಅಂತಹ ಪರಿಸ್ಥಿತಿಯನ್ನು ಹುಟ್ಟಿಸಲು ಯತ್ನಿಸಿದರೆ ವಿದ್ವನ್ಮಣಿಗಳಾದ ಅಧ್ಯಕ್ಷರ ಪರಿಶ್ರಮವೂ ಮಂಡಲದ ಪರಿಶ್ರಮವೂ ಸಾರ್ಥವೆನಿಸುವುದರಲ್ಲಿ ಸಂದೇಹವಿಲ್ಲ.

ಸಮ್ಮೇಲನದಲ್ಲಿ ಕೆಲವು ಗೊತ್ತುವಳಿಗಳೂ ಪಾಸಾದುವು. ಅವುಗಳಲ್ಲಿ ರಕ್ಕಸತಂಗಡಿಗಿಯ ಯುದ್ಧಭೂಮಿಯನ್ನು ಕಾದಿಡುವುದರ ಬಗೆಗೆ ಸರಕಾರವನ್ನು ಕೇಳಿಕೊಳ್ಳುವುದೂ, ಮುಂದಿನ ವರ್ಷ ಕರ್ನಾಟಕ ಇತಿಹಾಸ ಸಂಶೋಧನ ಸಂಘದ ರಜತ ಮಹೋತ್ಸವವನ್ನು ನೆರವೇರಿಸಬೇಕೆಂಬುದೂ ಮುಖ್ಯವಾಗಿವೆ. ಸಮ್ಮೇಲನದ ಕಾಲಕ್ಕೆ ಓದುವುದಕ್ಕಾಗಿ ೧೦–೧೧ ಪ್ರಬಂಧಗಳು ಬಂದಿದ್ದುವಾದರೂ ಸಮಯಾಭಾವದಿಂದ ಓದುವವರಿಗೆ ಅವಸರ ದೊರೆಯಲಿಲ್ಲ.

—o—

ಈ ಸಲದ ವಸಂತ ಸಾಹಿತ್ಯೋತ್ಸವ

ಕರ್ನಾಟಕ ಸಾಹಿತ್ಯ ಪರಿಷತ್ತು ಈಗ ೩-೪ ವರ್ಷಗಳಿಂದ ವಸಂತ ಸಾಹಿತ್ಯೋತ್ಸವವನ್ನು ನಡೆಯಿಸುತ್ತಿರುವುದು ಸರಿಯಷ್ಟೆ! ಮೊದಲು ಬೆಂಗಳೂರು ನಗರದಲ್ಲಿಯೆ ನಡೆಯುತ್ತಿದ್ದ ಈ ಉತ್ಸವವನ್ನು ಕರ್ನಾಟಕದ ಮಿಕ್ಕ ಭಾಗದ ಬೇರೆ ಬೇರೆ ಸ್ಥಳಗಳಲ್ಲಿಯೂ ನಡೆಯಿಸುವ ಹೊಸ ಉಪಕ್ರಮವು ಈ ವರ್ಷದಿಂದ ಆರಂಭವಾಗಿದೆ. ಕಳೆದ ಎಪ್ರಿಲ್ ೩೦ ರಿಂದ ಮೇ ೩ನೆಯ ತಾರೀಖಿನವರೆಗೆ ನಾಲ್ಕು ದಿನ ಬೆಂಗಳೂರಿನಲ್ಲಿ ಈ ಸಾಹಿತ್ಯೋತ್ಸವದ ಮೊದಲಿನ ನಾಲ್ಕು ದಿನಗಳ ಕಾರ್ಯಕ್ರಮವು ಜರುಗಿತು. ಆ ಮುಂದಿನ ಆರು ದಿನಗಳ ಕಾರ್ಯಕ್ರಮವು ಆನೆವಟ್ಟಿಯಲ್ಲಿಯೂ ಗದುಗಿನಲ್ಲಿಯೂ ಆಗಲೆ ನೆರವೇರಬೇಕಾದುದು ಕಾರಣಾಂತರಗಳಿಂದ ಮುಂದೆ ಬಿದ್ದು, ಕಳೆದ ಮೇ ತಿಂಗಳ ಕೊನೆಯ ವಾರದಲ್ಲಿ ಅದು ಯಶಸ್ವಿಯಾಗಿ ಕೊನೆಗಂಡಿತು.

ವಸಂತ ಸಾಹಿತ್ಯೋತ್ಸವದ ಕಾರ್ಯಕ್ರಮಗಳೆಂದರೆ ಮಾನವನ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಿ ಪರಿಪೋಷಿಸುವಂತಹ ವಿವಿಧ ಮುಖದ ಜ್ಞಾನಸಝುರಿಯ ಅರವಟ್ಟಿಗೆಯಿದ್ದಂತೆ. ಹಿರಿಯರು, ಕಿರಿಯರು, ಹಳ್ಳಿಗರು, ನಾಗರಿಕರು, ಸ್ತ್ರೀಯರು, ಪುರುಷರು ಇವರೆಲ್ಲರಿಗೂ ಉಪಯುಕ್ತವಾಗುವಂತಹ ಉಪನ್ಯಾಸ, ಗಮಕ, ಪ್ರವಚನ, ಸಂಗೀತ, ಮಕ್ಕಳ ಕೂಟ, ಮಹಿಳೆಯರ ಸಭೆ, ಸಾಹಿತ್ಯಗೋಷ್ಠಿ, ನಾಟಕ, ಹಳ್ಳಿಗರ ಹಾಡು ಇವೆಲ್ಲವುಗಳು ಸಾಹಿತ್ಯೋತ್ಸವಗಳಲ್ಲಿ ಅಡಕವಾಗಿದ್ದುವು. ಆದರೆ ಕಾರ್ಯಕ್ರಮದ ಗೊಂದಲ, ಕಾಲದ ಸಂಕುಚಿತತೆಗಳಿಂದ ಅನೇಕರು ಅನೇಕ ವಿಷಯಗಳ ಬಗೆಗೆ ಅತೃಪ್ತರಾಗಿಯೆ ಉಳಿಯಬೇಕಾಯಿತು.

ಬೆಂಗಳೂರಿನ ಸಾಹಿತ್ಯೋತ್ಸವದ ಪ್ರಾರಂಭದಿನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ. ಬಿ. ಎಂ. ಶ್ರೀಯವರು ಪರಿಷತ್ತಿನ ಪಂಚವಾರ್ಷಿಕ ಯೋಜನೆಯನ್ನು ಸಾರಿ ಹೇಳಿದರು. ಮೊದಲನೆಯ ಕಾರ್ಯವೆ **‘ಕನ್ನಡ ಬಾವುಟ’** ಎಂಬ ಕವನಸಂಗ್ರಹದ ಪ್ರಕಟನೆಯೆಂಬುದನ್ನು ಸೂಚಿಸಿದರು. ಅಖಿಲ ಕರ್ನಾಟಕದ ಇತಿಹಾಸವೊಂದನ್ನು ಬರೆಯಿಸುವುದೂ, ಪರಿಷತ್ತಿನದೇ ಮುದ್ರಣಾಲಯವೊಂದನ್ನಿರಿಸಿ ಕನ್ನಡದ ಚಟುವಟಿಕೆಗೆಂದು ವಾರಪತ್ರಿಕೆಯನ್ನು ಹೊರಡಿಸುವುದೂ, ಇಂಗ್ಲಿಷಿನಲ್ಲಿಯ ‘ಗೋಲ್ಡನ್ ಟ್ರೇಝರಿ’ಯಂತಹ ಹಳೆಯ ಹೊಸ ಕವನಗಳ ಸಂಗ್ರಹಗಳನ್ನು ಪ್ರಕಟಿಸುವುದೂ, ಕನ್ನಡ ಭಾಷೆಯಲ್ಲಿ ಬೇರೆ ಬೇರೆ ಪರೀಕ್ಷೆಗಳನ್ನು ಏರ್ಪಡಿಸಿ ಪದವಿ–ಪ್ರಶಸ್ತಿಗಳನ್ನು ಕೊಡುವುದೂ ಇವೇ ಮೊದಲಾದ ಕಾರ್ಯಗಳನ್ನು ಪರಿಷತ್ತು ಕೈಕೊಂಡಿದೆಯೆಂಬುದನ್ನು ಉದ್ಘೋಷಿಸಿದರು. ಸರಿ! ಏನಾದರೊಂದು ಕಾರ್ಯಕ್ರಮವನ್ನು ಕಣ್ಣೆದುರಿಗಿರಿಸಿಕೊಂಡು ಹೊರಟ ಸಂಸ್ಥೆಯು ಒಳ್ಳೆಯ ಕೆಲಸ ಮಾಡಬಲ್ಲುದು! ಪರಿಷತ್ತೂ ಅಖಿಲ ಕನ್ನಡಿಗರ ಮನಸ್ಸು ಮೆಚ್ಚುವಂತೆ ಕಾರ್ಯೋನ್ಮುಖವಾಗಲಿ!

ಜಯಂತಿಯ ಜೂಲೈ ಸಂಚಿಕೆಯ ವೈಭವ ಇನ್ನೂ ಸೊಗಸು!

ವಾರ್ಷಿಕ ವರ್ಗಣಿ ರೂ. ೩—೦—೦ .... ಬಿಡಿಸಂಚಿಕೆ ೪ ಆಣೆ.

ಸವಲತ್ತು : ೧೯೩೮ ಜೂನ್ ೩೦ನೆಯ ತಾರೀಖಿನೊಳಗಾಗಿ ಚಂದಾದಾರರಾಗುವವರಿಗೆ ಮಾತ್ರ ರೂ. ೨—೧೨—೦

ಸಲಹೆಗಾರ ಮಂಡಲ

ಪ್ರೊ. ಡಿ. ಪಿ. ಪತ್ರಾವಳಿ ಎಂ. ಎ., ಬಾರ-ಎಟ್-ಲಾ. ಮುಂಬಯಿ
ಪ್ರೊ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ., ಮೈಸೂರು
ಪ್ರೊ. ಎಸ್. ಎಸ್. ಮಾಳವಾಡ ಎಂ. ಎ., ಧಾರವಾಡ
ಶ್ರೀ. ವ್ಹಿ. ಎಂ. ಇನಾಮದಾರ ಬಿ. ಎ., ವಿಜಾಪುರ
ಶ್ರೀ. ಅ. ನ. ಕೃಷ್ಣರಾಯರು ಬೆಂಗಳೂರು
ಶ್ರೀ. ತಲಚೇರಿ ರಂಗರಾಯರು ಎಲ್‌ಎಲ್. ಬಿ. ಮಂಗಳೂರು
ಶ್ರೀ. ಎಸ್. ವ್ಹಿ. ಅಥಣಿಗಿ ಎಲ್‌ಎಲ್. ಬಿ., ಬೆಳಗಾಂವಿ
ಶ್ರೀ. ಎಂ. ಪಿ. ಪಾಲಿ ಎಂ. ಎ., ಚೀಫ್ ಆಫೀಸರ್ ಡಿ. ಎಲ್. ಬಿ. ಬೆಳಗಾಂವಿ
ಶ್ರೀ. ಕೋಟ ಶಿವರಾಮ ಕಾರಂತ ಮಂಗಳೂರು
ಶ್ರೀ. ಆರ್. ಎಚ್. ದೇಸಾಯಿ ಬಿ. ಎ., ಧಾರವಾಡ.

ಪ್ರಕಾಶಕರು:

ಎಂ. ಜಿ. ಪಾಟೀಲ, 'ಜಯಂತಿ' ಕಾರ್ಯಾಲಯ ಕ. ಪ್ರಿಂ. ವರ್ಕ್ಸ್, ಧಾರವಾಡ

ಮುಖ್ಯಪ್ರಸಾರಕರು :

ದಿ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

BOMBAY OFFICE:

Dr Parekh's Building, Room No. 8
Bhatwadi 2nd Lane Girgaon, BOMBAY

ಹಳೇ—ಹೊಸ—ವಿವಿಧ ರೋಗನಿವಾರಣೆಗಾಗಿ

ಪ್ರೇಮ ಚಿಕಿತ್ಸಾ ಸೇವೆ.

ತುಂಗಭದ್ರೆಯ ಪ್ರೇಮಚಿಕಿತ್ಸಾ ಸಂಸ್ಥೆಯ ಅಧ್ಯಕ್ಷರಾದ

ಪಂಡಿತ ತಾರಾನಾಥ

ಇವರ ರೋಗನಿದಾನ ಚಿಕಿತ್ಸೆಗಳ ಅಲಭ್ಯಲಾಭವನ್ನು
ಇಂಡಿಯದಲ್ಲಷ್ಟೇ ಅಲ್ಲ, ಯುರೋಪ ಅಮೇರಿಕ ಖಂಡಗಳಲ್ಲಿಯೂ ಬಲ್ಲರು !

* * ಮಾದರಿಗಾಗಿ ಕೆಲವು ದಾಖಲೆಗಳು ಮಾತ್ರ. * *

"..ಕ್ಷಯ, ಬಹುಮೂತ್ರ, ಉಬ್ಬಸ,..ಕುಷ್ಠ ಮುಂತಾದ ರೋಗಗಳಲ್ಲಿ ಇವರಿಗುಂಟಾದ ಅದ್ಭುತ ಜಯವೆ ಅನೇಕ ಪ್ರದೇಶಗಳಲ್ಲಿ ಇವರಿಗೆ ಬಂದ ಕೀರ್ತಿಯ ಆಧಾರ.."

ನ್ಯೂಯಾರ್ಕ (ಯು. ಎಸ್. ಅಮೇರಿಕ) ಜನೆವರಿ ೧೯೩೫ — ದಿ ವಿಷ್ಣ — ಜಗತ್ತಿನಲ್ಲಿ ಪ್ರಥಮಸ್ಥಾನವನ್ನು ಹೊಂದಿದ ನೂರು ಪತ್ರಿಕೆಗಳಲ್ಲೊಂದು.

"ತಾವು ಕೊಟ್ಟ ಮಾತ್ರೆಗಳಿಂದ ನನಗೆ ಈಗಷ್ಟೋ ವಾಸಿ......."

ಪೋಲೆಂಡ (ಯುರೋಪ) ೨೬—೫—೩೪ — ಅಲೆಕ್ಸಾಂಡರ್ ವಿಗಾರ್ಡ, ದೈರೆಕ್ಟರ—ಎಯರ್‌ವೇಸ್.

ಉತ್ತರಕ್ಕಾಗಿ ಒಂದಾಣೆಯ ಸ್ಟ್ಯಾಂಪ್ ಇಟ್ಟು **ಪ್ರೇಮ ಮೆಡಿಕಲ್ ಸರ್ವಿಸ್ ತುಂಗಭದ್ರಾ (ಬಳ್ಳಾರಿ ಜಿಲ್ಲಾ)** ಎಂಬ ವಿಳಾಸಕ್ಕೆ ಬರೆಯಿರಿ !

ಆದರ್ಶ ಶಿಕ್ಷಣಸಂಸ್ಥೆ ! ನಿಮಗೆ ಮಕ್ಕಳ ಶಿಕ್ಷಣದ ಚಿಂತೆಯೆ ?

ಪಂಚಗಣಿ ಹಿಂದೂ ಹೈಸ್ಕೂಲು

ನಮ್ಮ ಕ್ರಿಕೆಟ್ ಟೀಮು

ಮಕ್ಕಳ ಆರೋಗ್ಯವನ್ನು ಕುರಿತೂ ಯೋಚಿಸಬೇಕಾಗಿಲ್ಲ. ೪೩೦೦ ಫೂಟು ಎತ್ತರವಾದ ನಿಸರ್ಗರಮಣೀಯ ಪ್ರದೇಶದಲ್ಲಿ ಈ ವಿದ್ಯಾಲಯವು ಸ್ಥಾಪಿತವಾಗಿದೆ. ಕಳೆದ ಹದಿನೈದು ವರುಷಗಳಿಂದ ದಿನದಿನಕ್ಕೂ ಇದು ಜನಾದರಕ್ಕೆ ಪಾತ್ರವಾಗುತ್ತ ನಡೆದಿದೆ. ಹಿಂದೂ ಹುಡುಗರ ಸಲುವಾಗಿ ತೆರೆದ ಈ ಬಗೆಯ ಆದರ್ಶಸಂಸ್ಥೆ ಇನ್ನೊಂದಿಲ್ಲ.

ಭಾರತದ ಒಳಗಿರುವ ಹೊರನಾಡಿನೊಳಗಿರುವ ಅನೇಕ ಜನ ಸಿರಿವಂತರೂ, ಅಧಿಕಾರಿಗಳೂ, ಜಮೀನದಾರರೂ ತಮ್ಮ ತಮ್ಮ ಮಕ್ಕಳನ್ನು ಒಳ್ಳೆಯ ಸಂಸ್ಕಾರವಂತರನ್ನಾಗಿಸಬೇಕೆಂಬ ಅಪೇಕ್ಷೆಯಿಂದ ನಮ್ಮ ಈ ವಿದ್ಯಾಮಂದಿರಕ್ಕೆ ಕಳುಹುತ್ತಾರೆ.

ಹಳ್ಳಿಯ ಸರಳಜೀವನವೂ ನಗರದ ಸುಂದರ ಸಂಸ್ಕೃತಿಯೂ ಸಮನ್ವಯಗೊಳ್ಳಬೇಕಾದರೆ ವಿದ್ಯಾರ್ಥಿಗಳು ಪಂಚಗಣಿಯ ಹಿಂದೂ ಹೈಸ್ಕೂಲಿಗೇ ಬರಬೇಕು. ವೆಚ್ಚವೂ ಹೆಚ್ಚಾಗಿ ಬಾರದು. ಬರುವ ಮೇ ತಿಂಗಳ ೧೫ ರಿಂದ ಹೊಸ ವರುಷದ ಅಭ್ಯಾಸಕ್ಕೆ ಆರಂಭವಾಗುವುದಲ್ಲದೆ ಬೇಕಾದಾಗ ಕಳುಹಿದರೂ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಮ್ಯಾಟ್ರಿಕ್ಯುಲೇಶನ್‌ವರೆಗೆ ಕಲಿಸುವ ಏರ್ಪಾಡಿವೆ. ಪಿ. ಪಿ. ಸಿಲಿಯು, ಸರಕಾರಗಳ ಮನ್ನಣೆಯೂ ಇದೆ. ಕನ್ನಡ, ಹಿಂದೀಭಾಷೆಗಳನ್ನು ಕಲಿಸುವುದರ ಏರ್ಪಾಡೂ ನಡೆದಿದೆ.

The Superintendent,

Panchgani Hindu High School, Panchgani, (*Dist.* Satara)

Printed by K. R. Bhise at the Karnatak Printing Works Dharwar, and Edited & Published by M. G. Patil at the Jayanti Office Dharwar.

ಜಯಂತಿ

4 ANNAS

ಶ್ರೀ. ಕೋ. ಶಿ. ಕಾರಂತರು, ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.,
[illegible]

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

ಸಂಪಾದಕೀಯ ಮಂಡಲ :

ಪ್ರೊ. ಆರ್. ವಿ. ಜಾಗಿರದಾರ ಎಂ. ಎ. (ಲಂಡನ್) ಶ್ರೀ. ಜೋಶಿ ಶಂಕರರಾಯರು

ಪ್ರೊ. ವಿ. ಜಿ. ಕುಲಕರ್ಣಿ ಎಂ. ಎ., ಎಲ್ಎಲ್. ಬಿ. ಶ್ರೀಮತಿ ಸೌ. ವಿಮಲಾಬಾಯಿ ದೇಶಪಾಂಡೆ

೧ನೆಯ ವರ್ಷ	ಜುಲೈ ೧೯೩೮	೩ನೆಯ ಸ

ಮುಖ್ಯ ವಿಷಯಗಳ ಪರಿವಿಡಿ

'ನೋಡು, ಬರುವ ಸುಗ್ಗಿಯಾಟ' (ಸಚಿತ್ರ ಕವಿತೆ) .. .. ಶ್ರೀ. 'ಆನಂದಕಂದ' ೧೩೧

ಸಂಪಾದಕೀಯ .. .. ಸಂಪಾದಕರು ೧೩೨

ಮಂಗಸ ಮಲ್ಲಿನಾಥತನ .. .. ಶ್ರೀ. 'ಮಲ್ಲಿನಾಥ' ೧೩೩

ಶಾಂಗ್-ಕಿ-ಶೇಕ್ (ವೀರಜೀವನ) .. .. 'ಚಾಡಿಯ ಚಾಣಕ್ಯ' ೧೩೫

ಚೆಲುವೆಯ ಚಿತ್ರ (ಕವಿತೆ) .. .. ಶ್ರೀ. ಜಿ. ವರದರಾಜರಾವ್ ೧೩೮

ಒಲವಿನ ಕನಸು (ಕವಿತೆ) .. .. 'ಅನುಭವಿಕ' ೧೩೮

ಅನಾಥಾಶ್ರಮ (ಸಣ್ಣಕತೆ) .. .. ಶ್ರೀ. ವ್ಹಿ. ಎಂ. ಇನಾಮದಾರ್ ಬಿ. ಎ., ೧೩೯

ಕರ್ನಾಟಕದಲ್ಲಿ ಹಿಟ್ಲರ್ (ವಿನೋದ ಲೇಖನ) .. .. .. ಶ್ರೀ. ಕೋ. ಶಿವರಾಮ ಕಾರಂತ ೧೪೫

ಪತಿಯ ಸಾನ್ನಿಧ್ಯ (ಕಿರುಗತೆ) .. .. ಶ್ರೀ. ಹನುಮಂತರಾವ್ ಮಾಂಜರೇಕರ್ ಬಿ. ಎ. ೧೪೯

ಉತ್ತರಕನ್ನಡ ಜಿಲ್ಲೆಯಲ್ಲಿ ಕತ್ತದ ವ್ಯವಸಾಯ .. .. .. ಶ್ರೀ. ಎಸ್. ಕೆ. ಕಲ್ಲಾಪೂರ ಬಿ. ಎ., ಎಲ್ ಎಲ್. ಬಿ. ೧೫೦

ಜಾಣತನದ ಪ್ರದರ್ಶನ (ವಿನೋದ ಪ್ರಬಂಧ) .. .. ಶ್ರೀ. 'ಶ್ರೀರಂಗ' ೧೫೫

ದಿವಂಗತ (ಏಕಾಂಕ ದೃಶ್ಯ) .. .. ಪ್ರೊ. ಎನ್. ಎಮ್. ಕುಲಕರ್ಣಿ ಎಂ. ಎ. ೧೫೯

ಅಡುಗೆಯಮನೆ ಕೆಡುಹಿದರೆ.... .. .. ಶ್ರೀ. ಶಂ. ಬಾ. ಜೋಶಿ ೧೬೮

ಡಾ. ಎಂ. ಸಿ. ತುಮ್ಮನಕಟ್ಟಿಯವರು (ಸಂದರ್ಶನ) .. .. .. ಶ್ರೀ. ಎನ್. ಕೆ. ಕುಲಕರ್ಣಿ ಎಮ್. ಎ., ೧೭೨

ಆತಿಥ್ಯ (ನಾಟ್ಯಚಿತ್ರ) .. .. ಶ್ರೀ. ಹನುಮಂತರಾವ್ ಕೌಜಲಗಿ ಎಲ್ಎಲ್. ಬಿ. ೧೭೯

ಜೀವನಜ್ಯೋತಿ (ಅನುಭವಕಥನ) .. . . ಶ್ರೀ. ಸೌ. ಕಮಲಾಬಾಯಿ ತಲಚೇರಕರ್ ೧೮೦

ನಗೀಗೆ ನೇವಿದ್ಯ .. .. ಸಕಲಿಯ ನಾರಾಯಣಾಚಾರ್ಯರು ೧೮೬

ಸಾಹಿತ್ಯಸಮೀಕ್ಷಣ .. .. ಬೆಟಗೇರಿ ಕೃಷ್ಣಶರ್ಮ, 'V. M.,' ಸಾ. ಸಾ. ರಾವ ೧೮೮

ನಾಲ್ಕುನಿಟ್ಟಿನ ನೋಟ .. .. 'ನಿರೀಕ್ಷಕರು' ೧೯೦

ಸ್ವೀಕಾರ ೧೯೪

ಜಯಂತಿ

ಜುಲೈ ೧೯೩೮
ವರ್ಷ ೧
ಸಂಚಿಕೆ ೩

ನೋಡು, ಬರುವ ಸುಗ್ಗಿಯಾಟ !

— ಆನಂದಕಂದ —

ಬಾಳಿದು ಕನಸಲ್ಲ, ಗೋಳಿನ ತಿನಿಸಲ್ಲ;
ನನ್ನಿ–ಹಿಗ್ಗಿನ ಹೊಸ ತೋಟ!
ನಾನೊಂದು ಮಾಮರ, ನೀ ಮಲ್ಲಿಗೆಯ ಬಳ್ಳಿ;
ಚೆನ್ನೇ, ಚೆನ್ನನಿತು ಈ ಕೂಟ..? ೧

ಮಾಗಿಯು ಕೊರೆತಕೆ ಮೈ ಬರಲಾಗಿಕೆ–
ಮರ-ಬಳ್ಳಿ ಮರುಗಿ ಸಾಯುವುವೆ?
ಸಾಗಿಬಹುದು ಸುಗ್ಗಿಯೆಂಬ ನಲವಿನಲಿ
ಕಾಲವ ಕಳೆದು ಬಾಳುವುವೆ! ೨

ಹದ್ದು-ಹಾಲಕ್ಕಿಯು ಹಾರಾಡುತಿಹವೇನೆ?
ಕೂಗುತಿಹವೆ ಕಾಗೆ ಗೂಗೆ..?
ಹೆದರಿಕೆ ಬಿಡು ಬಿಡು, ಅವುಗಳಾಟವನೋಡು;
ಹುದುಗಿಹುದಲ್ಲಿಯು ಸೊಬಗೇ! ೩

ಬಾಳಿನ ತೋಟಕೆ ಬರಲಿದೆ ಹೊಸಸುಗ್ಗಿ
ನಳನಳಿಸುವುದೆಂದು ತಳಿತು;
ಹಣ್ಣ ಬಿಡುವೆ ನಾನು, ಹೂವ ಹೊರುವೆ ನೀನು;
ದಿಟ, ದಿಟ! ನಂಬು ಈ ಮಾತು! ೪

ಹಣ್ಣಗೊನೆಯ ಹೊತ್ತು ಜೀವಜಂಗುಳಿಗಿತ್ತು,
ಹಸಿವಿನುರಿಯ ನಾ ಹಿಂಗಿಸುವೆ;
ಹೂವಿನ ಹುರುಳಿಂದೆ ಹೃದಯವನರಳಿಸಿ
ರಸಿಕಕುಲವ ನೀ ರಂಜಿಸುವೆ! ೫

ಕಳೆವಣ್ಣುಗಳನುಂಡು ಕೋಗಿಲೆ-ಗಿಳಿವಿಂಡು
ಕಲಕಲ ನುಡಿಯನಾಡುವುವೆ!
ಹೂವಿನೈಸಿರಿ ಕಂಡು ಮರಿದುಂಬಿಗಳ ದಂಡು
ಇನಿದನಿ ಬೆರೆಸಿ ಹಾಡುವುವೆ! ೬

ಬಾಳಿದು ಕನಸಲ್ಲ, ಗೋಳಿನ ತಿನಿಸಲ್ಲ;
ನನ್ನಿ-ಹಿಗ್ಗಿನ ಹೊಸತೋಟ;
ನಾನೊಂದು ಮಾಮರ, ನೀ ಮಲ್ಲಿಗೆಯ ಬಳ್ಳಿ;
ನೋಡು, ಬರುವ ಸುಗ್ಗಿಯಾಟ! ೭

ತರುಣ ಲೇಖಕರಿಗೆ

ಕಳೆದ ಸಂಚಿಕೆಯಲ್ಲಿ ತಡೆದು ನಿಂತಿದ್ದ ಮಾತನ್ನು ಇಲ್ಲಿ ಮತ್ತೆ ಮುಂದುವರಿಸೋಣ: ನಮ್ಮ ತರುಣಲೇಖಕರಿಗೆ ಹೃದಯವಿರುವುದಿಲ್ಲವೆಂತಲ್ಲ; ರಸಜ್ಞತೆಯಿರುವುದಿಲ್ಲವೆಂತಲ್ಲ. ಜೀವನದಲ್ಲಿಯ ವಿವಿಧ ಅನುಭವಗಳನ್ನವರು ಹೃದಯದ ಮೇಲೆ ಮೂಡಿಸಿಕೊಳ್ಳಬಲ್ಲರು; ಅದರಲ್ಲಿಯ ರಸವನ್ನನುಭವಿಸಿ ಆನಂದಿಸಬಲ್ಲರು ಆದರೂ ಅನುಭವಿಸಿದ ರಸವನ್ನು ವ್ಯಕ್ತಪಡಿಸಿ ತೋರಿಸುವ ಸಾಮರ್ಥ್ಯ ಅವರಲ್ಲಿ ಇರಲಾರದು. ಅದಕ್ಕೆ, ಸರಿಯಾದ ವ್ಯವಸಾಯ-ಅಭ್ಯಾಸಗಳು ಬೇಕು. ಉಚಿತವಾದ ಭಾಷೆಯ ಪರಿಚಯ ಬೇಕು.

ಹೊಸ ಲೇಖಕರು ಜೀವನದ ಸತ್ಯಾನುಭವಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ; ತಾವೆ ಬರೆದುದನ್ನು ತಾವೆ ಓದಿ 'ತಮ್ಮ ಅನುಭೂತಿಯನ್ನು ಅದರಲ್ಲಿ ಸರಿಯಾಗಿ ಇರಿಸಿದ್ದೇವೆ' ಎಂದು ನಂಬಿ ಹೆಮ್ಮೆಪಟ್ಟುಕೊಳ್ಳುತ್ತಾರೆ. ಹೀಗೆ ನಂಬುವುದಕ್ಕೂ ಕಾರಣವಿಲ್ಲದೆ ಇಲ್ಲ. ಭಾಷೆ-ಬರೆಹಗಳು ಹೃದಯಾನುಭವದ ಕೇವಲ ಸಂಕೇತಗಳು. ತಮ್ಮ ಅನುಭವಕ್ಕೆ ತಾವು ಕಲ್ಪಿಸಿದ ಸಂಕೇತದಿಂದ, ತಮಗೆ ಅದರ ಪೂರ್ಣಾರ್ಥಬೋಧೆಯಾಗುವುದು ಸಹಜ; ಇನ್ನೊಬ್ಬರಿಗೆ ಅದರ ಅರ್ಥಬೋಧೆ ಹೇಗಾಗಬೇಕು. 'ಕಟ್ಟಕಡಕಡ' ಭಾಷೆ ತಂತಿಯ ಮಾಸ್ತರನಿಗೆ ತಿಳಿಯುವುದು; 'ಅಯ್ಯೊ, ತನಗೆ ಚೆನ್ನಾಗಿ ತಿಳಿಯುವುದು; ಮಂದಿಗೆ ಮಾತ್ರ ಏಕೆ ತಿಳಿಯಬಾರದು?' ಎಂದು ಅವನು ಮಂದಿಗೆ ದೋಷಕೊಟ್ಟರೆ ಸರಿಯೆನಿಸೀತೇ? ಲೇಖನದ ವಿಚಾರವೂ ಹಾಗೆಯೆ. ಗೊತ್ತಿದ್ದ ವಿಚಾರವನ್ನಾಗಲಿ, ಅನುಭವಿಸಿದ ಸಂಗತಿಯನ್ನಾಗಲಿ, ಸರ್ವಮಾನ್ಯ ಸಂಕೇತಗಳಲ್ಲಿ ಮೂಡಿಸಿ ತೋರಿಸದಿರುವಾಗ-ಮಿಕ್ಕವರು ಅವುಗಳನ್ನೋದಿ ಪ್ರಯೋಜನ ಪಡೆಯಲಾರರು. ಈ ಭಾವನೆಯಿಂದ, ಸಂಪಾದಕರು ಲೇಖನಗಳನ್ನು ಹಿಂದಿರುಗಿಸಿದರೆ ತರುಣ ಲೇಖಕರು ಸಿಟ್ಟಿಗೇತಕ್ಕೆ ಏಳಬೇಕು! ಅವರೇನಾದರೂ ಮಾಡಬೇಕಾಗಿದ್ದಲ್ಲಿ, ತಮ್ಮ ಸಂಕೇತಗಳು ಸರ್ವವೇದ್ಯ-ಸರ್ವಮಾನ್ಯವಾಗುವಂತೆ ಮನಃಪೂರ್ವಕವಾಗಿ ಯತ್ನಿಸಬೇಕಷ್ಟೆ! ಆ ಸಂಕೇತಗಳಾವುವೆಂದರೆ ಭಾಷೆ, ಲೇಖನಶೈಲಿ.

ಮಹಿಳೆಯರ ಬರೆಹಗಳು

ಕನ್ನಡನಾಡಿನಲ್ಲಿಯ ಮಹಿಳೆಯರಿಗೆ ಲೇಖನವ್ಯವಸಾಯ ಇನ್ನೂ ಹೊಸತಾಗಿದೆ. ಕಲಿಯುವವರ ಸಂಖ್ಯೆಯೆ ಕಡಿಮೆಯಿರುವಲ್ಲಿ ಬರೆಯುವವರೆಲ್ಲಿಂದ ಬರಬೇಕು? ಕಲಿತ ಕೆಲವು ಜನ ಮಹಿಳೆಯರಲ್ಲಾದರೂ ಬರೆಯುವ ಉತ್ಸಾಹವನ್ನು ಹುಟ್ಟಿಸಬೇಕೆಂದು ನಮ್ಮ ಆಶೆ. ಅದಕ್ಕಾಗಿಯೆ ಜಯಂತಿಯ ಕೆಲವು ಪುಟಗಳನ್ನು ಮಹಿಳೆಯರ ಬರೆಹಗಳಿಗಾಗಿ ಕಾದಿರಿಸಲಾಗಿದೆ. ನೂರಕ್ಕೆ ೧೦-೨೫ ಗುಣಗಳು ಬೀಳಬಹುದಾದ ಲೇಖನಗಳೂ-ಅವರ ಆ ಕಾದಿರಿಸಿದ ಪುಟಗಳಲ್ಲಿ ಒಂದೊಂದು ಸಲ-ಬರಬಹುದು; ಸಂಪಾದಕರನ್ನೂ ಲೇಖಕರನ್ನೂ ಆಕ್ಷೇಪಿಸಬೇಕೆಂದು ಸಂಧಿಯನ್ನೇ ಕಾಯುತ್ತ ಕುಳಿತವರಿಗೆ ಈ ಮಾತು ಗೊತ್ತಿರಬೇಕಾದುದು ಆವಶ್ಯಕ. ಈ ಆಕ್ಷೇಪಿಸುವವರಿಗೆ-ನಮ್ಮಲ್ಲಿಯ ಮಹಿಳೆಯರೂ ಬರೆಹಗಾತಿಯರಾಗಿ ಮುಂದೆ ಬರಬೇಕೆಂಬ ಅಪೇಕ್ಷೆಯಿದ್ದರೆ, ಅವರೂ ನಮ್ಮ ಈ ಕಾರ್ಯವನ್ನು ಆಕ್ಷೇಪಿಸಲಾರರೆಂದು ನಮ್ಮ ನಂಬುಗೆ.

ಧಾರಾವಾಹೀ ಕಾದಂಬರಿ

ಜಯಂತಿಯಲ್ಲಿ ಕ್ರಮಶಃ ಕಾದಂಬರಿಯೊಂದನ್ನು ಪ್ರಕಟಿಸಬೇಕೆಂಬ ವಿಚಾರವಿದ್ದಿತಷ್ಟೆ! ಆದರೆ ಬಹು ಜನ ನಮ್ಮ ಹಿತಚಿಂತಕರು 'ಹಾಗೆ ಕಾದಂಬರಿಯನ್ನು ಕ್ರಮಶಃ ಕೊಡುವುದು ಉಚಿತವಾಗದು' ಎಂದು ಸೂಚಿಸಿದರು. ಒಬ್ಬೊಬ್ಬರ ಸೂಚನೆ ಒಂದೊಂದು ಕಾರಣವನ್ನು ಒಳಗೊಂಡುದು. ಮಿಕ್ಕ ಎಲ್ಲ ಕಾರಣಗಳಿಗಿಂತಲೂ ಒಂದು ಕಾರಣ ನಮಗೂ ಸರಿಯೆನಿಸಿತು. 'ಜಯಂತಿಯ ಬಿಡಿಸಂಚಿಕೆಗಳನ್ನು ಬಹುಜನರು ಕೊಳ್ಳುವರು. ಒಂದೇ ಎರಡೇ ಸಂಚಿಕೆಗಳನ್ನು ಕೊಂಡವರಿಗೆ, ಹಿಂದುಮುಂದಿನ ಸಂದರ್ಭ ಗೊತ್ತಿರದುದರಿಂದ, ಕಾದಂಬರಿ ಅಚ್ಚಾದ ಪುಟಗಳು ವ್ಯರ್ಥವೆನಿಸುವುವು' ಎಂಬುದೆ ಆ ಕಾರಣ. ಆದುದರಿಂದಲೆ ಧಾರಾವಾಹೀ ಕಾದಂಬರಿಯನ್ನು ಕೊಡುವ ವಿಚಾರವನ್ನು ಈ ಮೊದಲನೆಯ ವರುಷದ ಮಟ್ಟಿಗೆ ನಿಲ್ಲಿಸಲಾಗಿದೆ.

ಅಭಿನಂದನೆ

ಬೆಳಗಾಂವಿಯ ಡಿ. ಎಲ್. ಬಿ. ಯ ಚೀಫ್ ಆಫೀಸರರೂ ನಮ್ಮ ಜಯಂತಿಯ ಸಲಹೆಗಾರರಲ್ಲಿ ಒಬ್ಬರೂ ಆಗಿರುವ ಶ್ರೀಮಾನ್ ಎಂ. ಪಿ. ವಾಲಿ ಎಂ.ಎ. ಅವರಿಗೆ, ಮೊನ್ನೆ ನಡೆದ ಚಕ್ರವರ್ತಿಗಳ ಜನ್ಮದಿನದ ಸಮಾರಂಭದ ಸಮಯದಲ್ಲಿ 'ಕೈಸರ್ ಈ ಹಿಂದ್' ಎಂಬ ಬಹುಮಾನದ ಬಿರುದು ದೊರೆತುದು ನಮಗೆ ತುಂಬ ಅಭಿಮಾನದ ಸಂಗತಿ. ಶ್ರೀ. ವಾಲಿಯವರನ್ನು ಸರಿಯಾಗಿ ಅರಿತವರಿಗೆ ಅವರು ಬಿರುದು-ಬಾವಲಿಗಳಿಗಾಗಿ ಹಾರಯಿಸಿ ಬಾಯಿಬಿಟ್ಟು ಕುಳಿತುಕೊಂಡವರಲ್ಲವೆಂಬ ಸಂಗತಿ ಚೆನ್ನಾಗಿ ಗೊತ್ತು. ಲೋಕಲ್‌ಬೋರ್ಡುಗಳ ಇಂದಿನ ನಿರಂಕುಶ ಆಡಳಿತದಲ್ಲಿ, ಎಂತೆಂತಹ ದೊಡ್ಡಮನುಷ್ಯರೆನಿಸಿಕೊಂಡವರೂ ಯಾವುದಾದರೊಂದು ಅಪವಾದವನ್ನು ಹೊತ್ತುನಿಂತಿರುವರು; ಆದರೆ ಚೀಫ್ ಆಫೀಸರನಂತಹ ಹೊಣೆಗಾರಿಕೆಯ ಸ್ಥಳದಲ್ಲಿದ್ದು—ಬೇಕಾದುದನ್ನು ಸಾಧಿಸಿಕೊಳ್ಳಬಲ್ಲಂತಹ ಸರ್ವಾನುಕೂಲಸಂದರ್ಭವಿದ್ದು-ಶ್ರೀ. ವಾಲಿಯವರು ಈ ಸಂದರ್ಭದ ದುರುಪಯೋಗವನ್ನು ಎಂದೂ ಮಾಡಿಕೊಂಡಿಲ್ಲ. ಇದುವರೆಗೂ ಇವರಿಗೆ ಅಂಟಿಕೊಳದಿರುವ ಅಪವಾದಲೇಪವೆ ಇದಕ್ಕೆ ಸರಿಯಾದ ಸಾಕ್ಷಿಯಾಗಿದೆ. ರಾಜ-ಪ್ರಜೆಗಳಿಗಿಬ್ಬರಿಗೂ ಬೇಕಾದವರು ಸಿಕ್ಕುವುದು ಅಪರೂಪ. ಶ್ರೀ. ವಾಲಿಯವರು ಅಂತಹ ಮನ್ನಣೆಗೆ ಪಾತ್ರರಾದುದಕ್ಕಾಗಿ 'ಜಯಂತಿ' ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

—ಸಂಪಾದಕರು

ಲೋಪಾಗಮ ಸಂಧಿವಿಚಾರ

ನಮ್ಮ ಮಂಗರಾಯನಿಗೂ ವ್ಯಾಕರಣದಲ್ಲಿ ನಂಬುಗೆಯಿಲ್ಲವಾದರೂ, ವ್ಯಾಕರಣ ನಿಯಮಗಳನ್ನು ಹರಿದೊಗೆಯುವವರಿಂದ ಅವನು ಆವಶ್ಯಕತೆ ಔಚಿತ್ಯಗಳನ್ನು ಅಪೇಕ್ಷಿಸುತ್ತಾನೆ. ಈಗ ಕನ್ನಡನಾಡಿನ ರಾಜಕೀಯ ವಾಙ್ಮಯದಲ್ಲಿ ಮುಂದಾಳುವನ್ನು' 'ಹಿರಿಯಾಳುವನ್ನು' ಎಂದು ಏನದಿನವೂ ಬರೆಯುತ್ತಿದ್ದಾರಲ್ಲಾ! ಇಲ್ಲಿಯ ಆಗಮಸಂಧಿಯ ಆವಶ್ಯಕತೆಯೇನಿದೆ? ಮುಂದಾಳು' 'ಹಿರಿಯಾಳು'ಗಳ ಮರ್ಯಾದೆ ದೊಡ್ಡದಿದ್ದರೂ ಅವರ ಹೆಸರಿನ ಕೊನೆ 'ಆಳು' ಎನವನ್ನೇ ಸಾರುತ್ತದೆ. 'ಮುಂದಾಳು, 'ಹಿರಿಯಾಳು'ಗಳನ್ನು ಸಾಮಾನ್ಯ 'ಆಳು' ಗಳಂತೆ ನಡೆಸಿ, ಅವರ ಬೆಲೆಯನ್ನೇಕೆ ತಗ್ಗಿಸಬೇಕೆಂದು ವಿಚಾರವೇನೋ ನಮ್ಮ ರಾಜಕೀಯ ಲೇಖಕರಿಗೆ! ಏನು ಮಾಡಿದರೂ 'ಮುಂದಾಳು' 'ಹಿರಿಯಾಳು' ಗಳಲ್ಲಿಯ 'ಲೋಪ'ವನ್ನು ತಪ್ಪಿಸಲಾರರವರು. ತಪ್ಪಿಸಿಯೆ ತೀರುವೆವೆಂದು ಹಟತೊಟ್ಟಲ್ಲಿ ಮುಂದಾಳು' 'ಹಿರಿಯಾಳು'ಗಳಿಗೆ ದೋಷವನ್ನು, ತರೆದು ಅಂಟಿಸಿದಂತಾಗುವುದು.

'ನಾ ವಿಷ್ಣುಃ ಪೃಥಿವೀಪತಿಃ'

ವಿಷ್ಣುವಲ್ಲದವನು ಪೃಥಿವೀಪತಿಯಾಗಲಾರನಂತೆ. ಅದು ಸತ್ಯವೆನ್ನುವುದಕ್ಕೆ– ಈ ಕಲಿಕಾಲದಲ್ಲಿಯೂ–ಸಾಕಷ್ಟು ಪ್ರತ್ಯಕ್ಷ ಪ್ರಮಾಣಗಳು ದೊರೆಯುತ್ತಲಿವೆ. ಅಂದು ಕೃತಯುಗದಲ್ಲಿ ಒಬ್ಬನೆ ಒಬ್ಬ ಉಪೇಂದ್ರನ (ವಾಮನ) ವೇಷ ತೊಟ್ಟಿದ್ದ ವಿಷ್ಣು, ಇಂದಿನ ಕ್ರಿಸ್ತಯುಗದಲ್ಲಿ ನೂರಾರು ಜನ ನರೇಂದ್ರರ (ಸಂಸ್ಥಾನಿಕರ)



ಅವತಾರವನ್ನುತಾಳಿ, ಭೂಭಾರವನ್ನು ಇಳುಹುತ್ತಿದ್ದಾನೆ. ಅಂದಿನ ಉಪೇಂದ್ರ ಬೇಡಿದುದನ್ನು ನೀಡಿದ ಬಲಿರಾಯನನ್ನು ಪಾತಾಳಕ್ಕೆ ಮೆಟ್ಟಿದ; ಇಂದಿನ ಈ ನರೇಂದ್ರರ ಹಿಂಡು, ಬೇಡಿದುದನ್ನೂ ಬೇಡದುದನ್ನೂ ಬಹುಮುಖ-ಬಹುಹಸ್ತಗಳಿಂದ ನೀಡುವ ಪ್ರಜಾಸಮೂಹವನ್ನು ತುಳಿದು ರಸಾತಳಕ್ಕೆ ಅಟ್ಟುತ್ತಿದೆ. ಹಿಂದಿನ ಉಪೇಂದ್ರನಿಂದ ದೇವೇಂದ್ರನ ದೇವರಾಜ್ಯಪದವಿ ಭದ್ರವಾಯಿತು; ಇಂದಿನ ನರೇಂದ್ರರಿಂದ ಬ್ರಿಟಿಷರ ಸಾಮ್ರಾಜ್ಯ ಗಟ್ಟಿಗೊಳ್ಳುತ್ತಲಿದೆ. ಆದುದರಿಂದ 'ವಂದೇ ವಿಷ್ಣುಂ ಬಹುಜನಹರಂ ಆಂಗ್ಲಸಾಮ್ರಾಜ್ಯ ನಿಷ್ಠಂ'!

ಉಪವಾಸವಲ್ಲ ಅಡ್ಡವಾಸ!

ಮಾತುಮಾತಿಗೊಮ್ಮೆ ಉಪವಾಸವ್ರತವನ್ನು ಕೈಕೊಳ್ಳುವುದು ನಮ್ಮಲ್ಲಿ ಇತ್ತತ್ತಲಾಗಿ ರೂಢವಾಗಿದೆಯಷ್ಟೆ! 'ಭಾರತೀಯರು ಬಡವರು, ಅವರಿಗೆ ಊಟದ ರೂಢಿಯಿಲ್ಲ, ಆದುದರಿಂದ ಉಪವಾಸವು ಅವರಿಗೆ ಸುಲಭವಾಗಿದೆ' ಎಂದೂ ಎಷ್ಟೋ ಕಿಡಿಗೇಡಿಗಳು ಹೇಳುತ್ತಲಿದ್ದಾರೆ.

ಆದರೆ ಇದು ದುಷ್ಟಬುದ್ಧಿಯ ತರ್ಕ ಎಂದು ಮೊನ್ನೆ ಒಂದು ವೃತ್ತಪತ್ರದಲ್ಲಿ ಪ್ರಕಟವಾದ ಸುದ್ದಿಯ ದೃಷ್ಟಾಂತದಿಂದ ಹೇಳಬಹುದು. ಒಬ್ಬ ಅತ್ಯಂತ ಧನಿಕಯುವಕನು ಉಪವಾಸವ್ರತವನ್ನು ಕೈಕೊಂಡನು; ತನ್ನ ಹೆಂಡತಿಯು ಅಡುಗೆ ಮಾಡುವಳೆಂಬುದೆ ಅವನ ವ್ರತಕ್ಕೆ ಕಾರಣ. ಈ ಸುದ್ದಿಯಿಂದ ಎಷ್ಟೋ ಸಮಾಜಸುಧಾರಕರ ಹೊಟ್ಟೆತುಂಬಿದಂತಾಯಿತು. ಹೆಂಗುಸರು ಅಡುಗೆಯನ್ನೇ ಮಾಡತಕ್ಕದ್ದೆಂಬ ಹಳೆಯ ಸಂಪ್ರದಾಯದ ವಿರುದ್ಧ ಯುದ್ಧಹೂಡಿದ ಈ ಧನಿಕನನ್ನು ಅಭಿನಂದಿಸಲು ಅವರು ಹೋದರು. 'ನನ್ನ ಹೆಂಡತಿಯು ಮಾಡುವ ಅಡುಗೆಯನ್ನು ಉಣ್ಣುವುದಕ್ಕಿಂತ ಉಪವಾಸವೇ ಲೇಸು' ಎಂದನಂತೆ ಅತ! ಇಂದಿನ ಉಪವಾಸಗಳ ಹಿಡುಗಿಗೆ ಈ ಮಾತಿನ ಸತ್ಯವೇ ಕಾರಣವಿರಬಹುದೆ?

ಮಹಾತ್ಮರಿಗೆ ಮೊರೆಹೋಗಿರಿ

ನಮ್ಮ ವಾಚಕರೊಬ್ಬರು ಒಂದು ವಿಷಯದಲ್ಲಿ ನಮ್ಮ ಸಲಹೆಯನ್ನು ಕೇಳಿದ್ದಾರೆ. ಅವರು



ಬರೆದದ್ದು ಹೀಗೆ:—'ಮದಿವೆಯಾದಾಗ ನನ್ನ ಹೆಂಡತಿಗೆ ಆದೇ ೧೪ ವಯಸ್ಸು; ನನಗೆ ಇಪ್ಪತ್ತೈದು. ವಯಸ್ಸು ಚಿಕ್ಕದಿದ್ದುದರಿಂದಲೂ, ತಂದೆಯ ಮನೆಯಲ್ಲಿ ಉಚ್ಚಧಾರ್ಮಿಕ ಶಿಕ್ಷಣವನ್ನು ಪಡೆದುದರಿಂದಲೂ ಅವಳು ಗಂಡನಿಗೆ (ಅರ್ಥಾತ್ ನನಗೆ) ಅತ್ಯಂತ ವಿಧೇಯಳಾಗಿದ್ದಳು. ಈಗ ಎರಡು ವರುಷಗಳಿಂದ ಪರಿಸ್ಥಿತಿಯು ವಿಪರ್ಯಸ್ತವಾಗಿದೆ. ಯಾವುದೊ ಒಂದು ಯುಕ್ತಿಯಿಂದ ಅವಳೇ ನನ್ನ ಮೇಲೆ ಅಧಿಕಾರ ನಡೆಸಿದ್ದಾಳೆ! ಈಗ ನನ್ನ ಕರ್ತವ್ಯವೇನು?' ಸತ್ಯಾಗ್ರಹವನ್ನು ಹೂಡಬಹುದೆ–ಎಂದು ಶಂಕೆ ಎತ್ತಿದ್ದಾರೆ. ಆದರೆ ಸತ್ಯಾಗ್ರಹವನ್ನು ಹೂಡುವುದು ಈ ಸಂದರ್ಭದಲ್ಲಿ ತಪ್ಪು ಎಂದು ನಮ್ಮ ಅಭಿಪ್ರಾಯ. ಮೊದಲಿನಿಂದಲೂ ನಮಗೆ ವರಿಷ್ಠರೆನಿಸುವವರೆದುರು ಸತ್ಯಾಗ್ರಹವು ಶಸ್ತ್ರ. ಆದರೆ ಹೆಂಡತಿ ಕಾಯಿದೆಯಿಂದ ಕನಿಷ್ಠ, ಶಾಸ್ತ್ರದಿಂದ ಸ್ವಾತಂತ್ರ್ಯಹೀನೆ, ಧರ್ಮದಿಂದ ದಾಸಿ. ಹೀಗೆ ನಮ್ಮ ಕೆಳಗಿನವರು ನಮ್ಮ ಮೇಲೆ ಬಂದರೆ ರಾಜೀನಾಮೆಯನ್ನೆ ಕೊಡತಕ್ಕದ್ದು–ಎಂದು ಮೊನ್ನೆ ಮೊನ್ನೆ ಓರಿಸಾ ಪ್ರಾಂತದ ಕಾಂಗ್ರೆಸ್ ಮಂತ್ರಿಮಂಡಳಕ್ಕೆ ಮಹಾತ್ಮಾಗಾಂಧಿಯವರು ಸಲಹೆಯನ್ನು ಕೊಟ್ಟಿದ್ದಾರೆ. ಆದುದರಿಂದ ಈ ನಮ್ಮ ವಾಚಕಮಹಾಶಯರೂ ತಮ್ಮ ಅಧಿಕಾರಪದಕ್ಕೆ (ಅರ್ಥಾತ್ 'ಗಂಡತನ'ಕ್ಕೆ) ರಾಜೀನಾಮೆಯನ್ನೆ ಕೊಡುವುದು ವಿಹಿತವಾಗಿದೆ. ಅದು ಹೇಗೆ?–ಎಂದು ಕೇಳಿದರೆ 'ಮಹಾತ್ಮರನ್ನೆ ಮೊರೆಹೊಕ್ಕು ಕೇಳಿರಿ' ಎಂದು ನಮ್ಮ ಉತ್ತರ. ಆದರೆ ಮಹಾತ್ಮರಾದರೂ ಎಷ್ಟು ಜನರಿಗೆ ಉತ್ತರ ಕೊಡಬೇಕು?

ಮಂಗನ ಮಾಹಾತ್ಮ್ಯ

'ಬೆಳಗಾಂವಿಯಲ್ಲಿ ಕನ್ನಡ ಮತ್ತು ಮರಾಠಿ ಇವೆರಡೂ ಭಾಷೆಗಳು ನಡೆಯುತ್ತವೆ... ಎಂದು ಅಧಿಕೃತ ಪ್ರಕಟನೆ ಹೊರಟಿವೆ' ಎಂಬ ಸುದ್ದಿ ಮಂಗಶಾಯಿನಿಗೆ ತಿಳಿದಿವೆ; ಮತ್ತು ಅದಕಾಗಿ ಬಹಳ ಆನಂದ ಮತ್ತು ಅಭಿಮಾನ ಎನಿಸಿವೆ. ಅಲ್ಲವೆ ಮತ್ತೆ? ಅನುಕರಣಬುದ್ಧಿಯು ಮಂಗಶಾಯಿನ ತತ್ತ್ವಜ್ಞಾನ. ಅವಕ್ಕೆ ಇಂದು ಮಾನವರಾಜ್ಯದಲ್ಲಿ ಪ್ರಶಸ್ತಿ ದೊರೆತಂತಾಯಿತು. ಲೋಕಮಾನ್ಯ ತಿಲಕರನ್ನು ಎಲ್ಲಪರಿಯಿಂದಲೂ ಅನುಕರಿಸಿದವರು ಇಂದು ಅನುಕರಣಬುದ್ಧಿಯಿಂದ ಲೋಕಮಾನ್ಯರ ಭಾಷೆಯೆ ತಮ್ಮ ಭಾಷೆ ಎಂದು ಒಪ್ಪುತ್ತಿದ್ದಾರೆ. ಕಾಲಕ್ಕನುಸರಿಸಿ 'ಬಾಗಹೊಡೆಯುವ' ಮಂಗಶಾಯಿನ ತತ್ತ್ವವು ಕನ್ನಡಮಾತೆಗೆ ತಿಲಕಪ್ರಾಯವಾಯಿತಲ್ಲವೆ?

ಶಾಸನಸಭೆಯಲ್ಲಿ ಸಭಿಕರ ಶಾಸನ

ಆಂಧ್ರಪ್ರಾಂತನಿರ್ಮಾಣವನ್ನು ಅಲಕ್ಷಿಸಿದ್ದಾದರೆ ಮದರಾಸ ಶಾಸನಸಭೆಯ ಆಂಧ್ರ ಸದಸ್ಯರೆಲ್ಲ ತೆಲುಗಿನಲ್ಲಿಯೆ ಮಾತನಾಡಿ 'ಜರಾಸಂಧ' (crisis) ಪ್ರಸಂಗವನ್ನು ಹುಟ್ಟಿಸಬೇಕೆಂದು ಶ್ರೀ. ಪಟ್ಟಾಭಿಯವರು ಹೇಳಿದ್ದಾರೆ. ಮುಂಬಯಿ ಶಾಸನಸಭೆಯ ಕರ್ನಾಟಕ ಸದಸ್ಯರು ಕೂಡ ಹೀಗೇ ಯಾಕೆ ಮಾಡಬಾರದು? ಎಂದು ನಮ್ಮನ್ನು ಕೆಲರು ಕೇಳಿದ್ದಾರೆ. ಎರಡು ಕಾರಣಗಳಿಗಾಗಿ ಹೀಗೆ ಮಾಡಬಾರದು ಎಂದು ನಮ್ಮ ಅಭಿಪ್ರಾಯ. (೧) ಕರ್ನಾಟಕದ ಭಾಷೆ ಕನ್ನಡ ಎಂಬುದಕ್ಕೆ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧಿಕೃತ ಪ್ರಕಟನೆ ಇಲ್ಲ. (೨) ಕನ್ನಡದಲ್ಲಿ ಮಾತನಾಡಿದರೆ ಕನ್ನಡೇತರರಿಗೆ ತಿಳಿಯುವುದಿಲ್ಲ; ಇಷ್ಟೇ ಅಲ್ಲ, ಎಲ್ಲ ಕರ್ನಾಟಕ ಸದಸ್ಯರಿಗೂ ತಿಳಿಯಲಿಕ್ಕಿಲ್ಲ ಎಂದು ನಮ್ಮ ಹೆದರಿಕೆ. ಬಾಯಿಬಿಟ್ಟು ಅವಲಕ್ಷಣ ಯಾಕೆ?

ಹಿಟ್ಲರನೂ ಹಿಂದೀ ಪ್ರಚಾರಕ ಸಂಘವೂ

'ಹಿಟ್ಲರನು ಬಹಿರಂಗವಾಗಿಯೆ ಹಿಂಸಾಮಾರ್ಗವನ್ನು ಕೈಕೊಂಡಿದ್ದಾನೆ' ಎಂದು ಗಾಂಧೀಜಿಯವರು ವರ್ಧಾ ವಿದ್ಯಾಮಂದಿರದ ಅನಾವರಣಸಮಾರಂಭದ ಕಾಲಕ್ಕೆ ಹೇಳಿದ್ದಾರೆ. ಪಾಪ! ಇದು ಹಿಟ್ಲರನಿಗೆ ಅನ್ಯಾಯ ಎಂದು ನಮ್ಮ ಅಭಿಪ್ರಾಯ. ಆಸ್ಟ್ರಿಯಾ ದೇಶವನ್ನು, ರಕ್ತದ ಒಂದು ಹನಿಯನ್ನೂ, ವ್ಯಕ್ತಿಯ ಒಂದು ಶವವನ್ನೂ ಕೆಡುಹದೆ ಗೆದ್ದದ್ದು ನಿರರ್ಥಕವಾಯಿತೆ? ಹಾಗೆ ನೋಡಿದರೆ ನಮ್ಮಲ್ಲಿಯ ಕಾಂಗ್ರೆಸ್‌ನಿಷ್ಠರು ಹಿಟ್ಲರನಿಗಾಗಿ ಅಭಿಮಾನ ತಾಳಬಹುದಾಗಿದೆ. ಹಿಟ್ಲರನು ತಮ್ಮ ಧೋರಣೆಯನ್ನೆ ಸ್ವೀಕರಿಸಿದನೆಂದು ಹೆಮ್ಮೆ ಪಡಬಹುದಾಗಿದೆ. ಆಸ್ಟ್ರಿಯಾದ ಜನರು ಜರ್ಮನ್ ಭಾಷೆಯಲ್ಲಿ ಮಾತನಾಡುವರು; ಆದುದರಿಂದ ಅವರೂ ನಾವೂ ಒಂದೇ ಎಂದು ಹಿಟ್ಲರನು ಹೇಳಿದನು. ಮೊದಲು ಆಸ್ಟ್ರಿಯಾದ ಜನರಿಗೆಲ್ಲ ಜರ್ಮನ್ ಭಾಷೆಯನ್ನು ಕಲಿಸಿ, ಆ ಮೇಲೆ ಹಿಟ್ಲರನು ಹೀಗೆ ಮಾಡಿದ್ದರೂ ಅದು ಯುಕ್ತವಾಗುತ್ತಿದ್ದಿತು. ನಮಗೆಲ್ಲರಿಗೆ ಹಿಂದೀಭಾಷೆಯನ್ನು ಕಲಿಸಿ, ಆ ಮೇಲೆ 'ನಾವೆಲ್ಲರೂ ಒಂದೇ ಭಾಷೆಯವರಾದುದರಿಂದ ಒಂದೇ ದೇಶದವರು' ಎಂಬ ಕಾಂಗ್ರೆಸಿನ ತತ್ತ್ವವನ್ನು ಹಿಟ್ಲರನು ಅನುಸರಿಸಿಲ್ಲವೆ? ಝೆಕೊಸ್ಲೊವಾಕಿಯಾದಲ್ಲೂ ಜರ್ಮನ್ ಭಾಷೆಯನ್ನಾಡುವ ಅನೇಕ ಜನರಿದ್ದಾರೆ— ಬೆಳಗಾಂವಿಯಲ್ಲಿ ಮರಾಠಿ, ಬಳ್ಳಾರಿಯಲ್ಲಿ ತೆಲುಗು ಮಾತನ್ನಾಡುವವರಂತೆ. ಬೆಳಗಾಂವಿಯು ಮಹಾರಾಷ್ಟ್ರಕ್ಕೆ, ಬಳ್ಳಾರಿ ಆಂಧ್ರಕ್ಕೆ ಸೇರಬೇಕೆನ್ನುವುದರಲ್ಲೂ ಝೆಕೋಸ್ಲೊವಾಕಿಯಾ ಜರ್ಮನಿಗೆ ಸೇರಬೇಕೆನ್ನುವುದರಲ್ಲೂ ವ್ಯತ್ಯಾಸವೇನು?

ಗಣಿತವಿಲ್ಲದ ಗಲಾಟೆ

ಎಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ತುಂಗಭದ್ರೆಯಲ್ಲಿ ಸೇರಿದ ಆಂಧ್ರಪ್ರಾಂತ ರಾಜಕೀಯ ಪರಿಷತ್ತಿನ ವಿಷಯವಾಗಿ ಕರ್ನಾಟಕ ಲೇಖಕರ (journalist) ರೊಬ್ಬರು ಹೀಗೆ ಬರೆಯುತ್ತಾರೆ:— ಈ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಕಲ್ಲೂರು ಸುಬ್ಬರಾಯರು ಕನ್ನಡಿಗರು (ಅವರಾಗಿಯೆ ತಮ್ಮ ಉಪಸಂಹಾರ ಭಾಷಣದಲ್ಲಿ ಒಪ್ಪಿದ್ದಾರೆ); ಸ್ವಾಗತಾಧ್ಯಕ್ಷರಾದ ಪಂಡಿತ ತಾರಾನಾಥರು ಕನ್ನಡಿಗರು; ವ್ಯವಸ್ಥೆಯಲ್ಲಿ ಶ್ರಮ ವಹಿಸಿದ ಸ್ವಯಂಸೇವಕರು ಕನ್ನಡಿಗರು; ಸುತ್ತುಮುತ್ತಿನಿಂದ ಪ್ರೇಕ್ಷಕರಾಗಿ ಬಂದವರಲ್ಲೂ ಕನ್ನಡಿಗರೆ ಹೆಚ್ಚು; ಹೀಗಿರುವಾಗ ಇದು "ಆಂಧ್ರ" ಎಂದು ಯಾಕೆ ಹೇಳಬೇಕು!' ಇದನ್ನು ಬರೆಯುವಾಗ ಲೇಖಕ ಮಹಾಶಯರು ಸಿಟ್ಟಿನ ಭರದಲ್ಲಿದ್ದಿರಬಹುದು; ಇಲ್ಲವಾದರೆ, ತುಂಗಭದ್ರೆಯಲ್ಲಿ ಆಂಧ್ರರೇ ಕಿಲ್ಲ—ಎಂಬ ಪ್ರಶ್ನೆಯನ್ನು ಅವರು ಕೇಳುತ್ತಿರಲಿಲ್ಲ. ಇದಲ್ಲದೆ, ಪರಸ್ಥಳಗಳಿಂದ ಬಂದ ಪ್ರತಿನಿಧಿಗಳೆಲ್ಲರೂ ಆಂಧ್ರರಾಗಿದ್ದರೆಂಬುದು ಈ ಲೇಖಕರ ಲೆಕ್ಕದಿಂದ ಜಾರಿಹೋಗಿದೆ.

ಪ್ರೊಫೇಸರ್ 'ನರಗುಂದೇ' ಅವರು

" ಪ್ರೊಫೆಸರರ ಮನಸ್ಸಿನ ಎಳೆತ ಮಹಾರಾಷ್ಟ್ರದ ಕಡೆಗೆ; 'ನೀವು ನಮ್ಮವರು' ಎಂದು ಕನ್ನಡಿಗರು ಸೆಳೆದರೆ ಕರ್ನಾಟಕಕ್ಕೆ ಬರುವರೇ? ಹೋಗಲಿ ಬಿಡಿ; ಇಂಥವರಿಂದ ಕನ್ನಡಿಗರ ಪ್ರಗತಿಗೆ ಅಡ್ಡಗಾಲೇ! "

ಶಾಂಗ-ಕೀ-ಶೇಕ

● ಚೀನಾದ ಚೈತನ್ಯಶಕ್ತಿ ●

ಹೆಂಡತಿ ದೊಡ್ಡ ಮನೆತನದವಳು; ಈ ಅನುಕೂಲತೆ ಶಾಂಗ-ಕೀ-ಶೇಕನ ಕರ್ತೃತ್ವಶಕ್ತಿಗೆ ತುಂಬ ಸಹಾಯವಾಯಿತು.

ಬುದ್ಧಿಶಾಲಿಗಳ ಗುಂಪಿನಲ್ಲಿ ನುಗ್ಗಿ ಹೆಸರು ಪಡೆದ; ಅಧಿಕಾರ ಸಂಪಾದಿಸಿದ. ಸಂಪಾದಿಸಿದ ಅಧಿಕಾರವನ್ನಿವನು ಸ್ವಂತದ ಭೋಗವಿಲಾಸದಲ್ಲಿ ಪೋಲು ಮಾಡುತ್ತಿಲ್ಲ; ರಾಷ್ಟ್ರೋದ್ಧಾರದ ಕಾರ್ಯಕ್ಕೆ ತನ್ನ ತನು-ಮನ-ಧನಗಳನ್ನು ಸೂರೆಗೊಳಿಸುತ್ತಿದ್ದಾನೆ

'ಚಾಡಿಯ ಚಾಣಕ್ಯ'

೧೯೩೬ರ ನಾತಾಳದ ಸಮಯ. ಜಗತ್ತಿನ ಕುಂಭಕರ್ಣನಂತೆ ಬಿದ್ದುಕೊಂಡ ಚೀ ನಾ ದೇ ಶ ದ ಲ್ಲಿ ಒಂದು ರಾತ್ರಿಯ ದೃಶ್ಯ. ಚೀನೀಯರು ರಾತ್ರಿಲೋಲುಪರಲ್ಲ; ಆದುದರಿಂದ ಉಳಿದ ನಗರಗಳಂತೆ ನಾಂಕಿಂಗ ನಗರವಾದರೂ ಗಾಢನಿದ್ರೆಯಲ್ಲಿ ಮೈಮರೆತು ನಿಶ್ಚೇಷ್ಟ ಬಿದ್ದುಕೊಂಡಿದೆ.

ಕ್ರಮೇಣ ಮಧ್ಯರಾತ್ರಿಯ ಸಮಯ ಬಂದಿತು.

ಭಯಾನಕವಾದ ಕನಸಿನಿಂದ ಎಚ್ಚೆದ್ದಿತೊ, ಭೂಕಂಪದಿಂದ ಸಿಡಿದೆದ್ದಿತೊ. ಎನುವಂತೆ ಇಡಿಯ ನಗರವೆ ಒಮ್ಮೆಲೆ ಕೋಲಾಹಲದಿಂದ ಕುಣಿಯತೊಡಗಿತು. ಇಡಿಯ ನಗರದ ಗಂಟೆಗಳು ಗಂಘಣಿಸಿದುವು; ಕಂಠಗಳು ಕೂಗಿದುವು; ಪಟಾಕ್ಷಿ-ಮದ್ದು ಚಟಛಟಿಸಿದುವು; ನೋಡಿದಲ್ಲೆಲ್ಲ ಉನ್ಮಾದ, ಆನಂದ, ಅಭಿನಂದನೆ!

ಸಾವಿರಾರು ವರುಷ ಅರಸರಿಗೂ ಅಫೀಮಿಗೂ ಗುಲಾಮರಾಗಿ, ಮಾನವಿಲ್ಲದೆ ಮೈಸೊಕ್ಕಿಲ್ಲದೆ ಮೃತ ಪ್ರಾ ಯ ರಂ ತಾ ಗಿ ದ್ದ ಚೀನೀಯರು ಇಷ್ಟೊಂದು ಉನ್ಮತ್ತರಾಗಿ, ಉ ಲ್ಲ ಸಿ ತ ರಾ ಗಿ, ಉತ್ತೇಜಿತರಾಗಿ ಕುಣಿಯುವುದೆಂದರೆ ಎಂತಹ ಅದ್ಭುತ! ಈ ದುಡಾಳ ಉತ್ಸವಕ್ಕೆ ಕಾರಣವಾದರೂ ಏನು?

ಎಲ್ಲರೂ ಬಾಯಿಯಿಂದ ಆ ಕಾರಣವನ್ನು ಒಬ್ಬರೊಬ್ಬರಿಗೆ ಒಂದೇಸನನೆ ಕೂಗಿ ಹೇಳುತ್ತಿದ್ದಾರೆ. ಆದರೆ ಯಾರೂ ಅದನ್ನು ಕೇಳಿಕೊಳ್ಳಲು ತಡೆಯುವುದಿಲ್ಲ; ಏಕೆಂದರೆ, ಎಲ್ಲರ ಕಂಠವೂ ಕೂಗಿ ಗೊಗ್ಗರಾಗಿ ಯಾರ ಮಾತೂ ತಿಳಿಯುವಂತಿಲ್ಲ; ಇದಲ್ಲದೆ, ಈ ಮೊದಲೇ ಎಲ್ಲರಿಗೂ ಆ ಕಾರಣ ಗೊತ್ತೇ ಇದೆ.

ಅದೆಂದರೆ, ಚೀನಾದ ಚಂದ್ರನು ಗ್ರಹಣದಿಂದ ಮುಕ್ತನಾಗಿದ್ದಾನೆ. ಚೀನಾದೇಶಕ್ಕೆ ಶಾಂತಿಯನ್ನೂ ಸೌಂದರ್ಯವನ್ನೂ ಒದಗಿಸಲು ಹೆಣಗಾಡುವ ಲೋಕನಾಯಕನು ಬಂಧನದಿಂದ ಬಿಡುಗಡೆ ಹೊಂದಿದ್ದಾನೆ.

ಉತ್ತರದಲ್ಲಿ ಸರದಾರ (War Lord) ನೊಬ್ಬನು, ಜಪಾನೀಯರ ಕಕುನಿತಂತ್ರಕ್ಕೊಳಗಾಗಿ, ಚೀನಾದ ಸಂಯುಕ್ತಸೇನಾಪತಿ (Generalissimo) ಯಾದ ಶಾಂಗ-ಕೀ-ಶೇಕನನ್ನು ಬಂಧನದಲ್ಲಿರಿಸಿದನು. ಇಂದು ಶಾಂಗನು ಬಿಡುಗಡೆ ಹೊಂದಿದ್ದಾನೆ.

ರಕ್ತದ ಒಂದು ಹನಿಯೂ ಉದುರದೆ ಶಾಂಗನು ಬಿಡುಗಡೆಹೊಂದಿದ್ದಾನೆ!

ಇದು ದೈವೀಘಟನೆ ಎಂದೇ ಚೀನೀಯರು ಹಟದಿಂದ ತಿಳಿದುಕೊಂಡರು. ಸಾಮಾನ್ಯ ಮನುಷ್ಯನು ಶತ್ರುಗಳ ಕೈಯೊಳಗಿಂದ ಇಷ್ಟೊಂದು ಶಾಂತರೀತಿಯಿಂದ ಪಾರಾಗಿ, ನಗುತ್ತ, ಕೈಬೀಸುತ್ತ ಬರಬಹುದೆ?

ಆದುದರಿಂದ ಶಾಂಗನು ದೈವೀಪುರುಷ; ಸಾ ಮಾ ನ್ಯ ಮನುಷ್ಯನಲ್ಲ.

ಒಂದು ದೃಷ್ಟಿಯಿಂದ ಚೀನೀಯರ ಈ ಭಾವಿಕತನದ ನಂಬುಗೆಗೆ ಆಧಾರವಿದೆ ಎಂದು ಹೇಳಬಹುದು. ಸಾಮಾನ್ಯ ಮನುಷ್ಯನಲ್ಲೂ ಸಾಮಾನ್ಯ ವ್ಯವಹಾರದಲ್ಲೂ ಕಂಡುಬರುವ ಒಂದೂ ಅನುಭವವು ಶಾಂಗ-ಕೀ-ಶೇಕನಿಗೆ ಅನ್ವಯಿಸುವುದಿಲ್ಲ.

'ಭಾರ್ಯಯಾ ಖ್ಯಾತಃ ಅಧಮಾಧಮಃ — ಹೆಂಡತಿಯಿಂದ ಹೆಸರು ಪಡೆದವನು ಅಧಮಾಧಮನು' ಎಂಬ ಗಾದೆಯ ಮಾತಿದೆ. ಶಾಂಗನು ಒಂದು ದೃಷ್ಟಿಯಿಂದ ಹೆಂಡತಿಯಿಂದಲೆ ಹೆಸರು ಪಡೆದವನು ಎಂದು ಹೇಳಬಹುದು. 'ಸುಂಗ' ಎಂಬ ಹೆಸರಿನ ಅತ್ಯಂತ ಬುದ್ಧಿಮತ್ತೆಯ ಮತ್ತು ಧನಾಢ್ಯಮನೆತನದ 'ಮೇ-ಲಿಂಗ' ಎಂಬಾಕೆ ಶಾಂಗನ ಹೆಂಡತಿ. ಚೀನಾದ 'ಕುಸೀದ (Banking)' ವ್ಯವಸಾಯದ ಬಹುಭಾಗವು 'ಸುಂಗ' ಮನೆತನದ ಕೈಸೂತ್ರವಾಗಿದೆ. ಚೀನಾದಲ್ಲಿ ರಾಷ್ಟ್ರೀಯತೆಯ ಮತ್ತು ಸ್ವಾತಂತ್ರ್ಯದ ಬಂಡನ್ನು ಯಶಸ್ವಿಯಾಗಿ ನಡೆಸಿದ ಸನ್-ಯಾತ್-ಸೇನ್‌ನ ಹೆಂಡತಿ ಮೇ-ಲಿಂಗಳ ಅಕ್ಕ. ೧೯೩೬ರಲ್ಲಿ ಶಾಂಗನನ್ನು ಬಂಧನದಿಂದ ಬಿಡಿಸಿದ ಬುದ್ಧಿಮತ್ತೆ ಮತ್ತು ದೊಡ್ಡಿಸ್ತನ ಆತನ ಹೆಂಡತಿಯದೆ. ಹೀಗೆ ಹೆಂಡತಿಯು ಮೊದಲಿನಿಂದಲೂ ಹೆಸರಾಗಿ, ಆಕೆಯ ನಿಮಿತ್ತದಿಂದ

ಬುದ್ಧಿಶಾಲಿಗಳ ಗುಂಪಿನಲ್ಲಿ ಅಧಿಕಾರವನ್ನೂ ಪ್ರವೇಶವನ್ನೂ ಪಡೆದರೂ ಈ ಸಣ್ಣ ಮೂರ್ತಿಯ ಶಾಂಗನು ಅಧಮಾಧಮನೆನಿಸಲಿಲ್ಲ; ಇಂದು ಚೀನಾದಲ್ಲಿ ಉತ್ತಮೋತ್ತಮನಾಗಿದ್ದಾನೆ, ಇಡಿಯ ರಾಷ್ಟ್ರದ ಉದ್ಧಾರಕನೆನಿಸಿದ್ದಾನೆ, ಆಬಾಲವೃದ್ಧರ ಆರಾಧ್ಯ ದೇವತೆಯಾಗಿದ್ದಾನೆ.

ಬಾಲ್ಯದಿಂದ ಶಾಂಗನ ಚರಿತ್ರೆಯನ್ನು ನೋಡಿದರೆ ಅವನು ಈ ಪದವಿಗೇರಿದ್ದು ಕೇವಲ ತನ್ನಲ್ಲಿದ್ದ ಯೋಗ್ಯತೆಯಿಂದಲೆ ಎಂದು ಕಂಡುಬರುವುದು. ಕಳೆದ ಹದಿನೈದು ವರುಷಗಳಿಂದ ಒಂದೇಸಮನೆ ಯುದ್ಧದಲ್ಲಿ ತೊಡಗಿದ ವೀರ ಶಾಂಗನು, ಮೊದಲು ಕಸುವಿಲ್ಲದ ಮೈಯ ಮೆತ್ತನ್ನ ಹುಡುಗನಾಗಿದ್ದನು. 'ನಾನು ದೇಹದಿಂದ ಗಟ್ಟಿಗನಾಗಬೇಕೆಂಬ ಉದ್ದಿಶ್ಯದಿಂದ ನನ್ನ ತಾಯಿಯು ನನ್ನನ್ನು ಮೈದುಡಿತದ ಕೆಲಸದಲ್ಲಿ ತೊಡಗಿಸುತ್ತಿದ್ದಳು' ಎಂದು ತಾನೇ ಹೇಳಿದ್ದಾನೆ. ಇಂದಿನ ಎಲ್ಲ ಸರ್ವಾಧಿಕಾರಿಗಳಂತೆ ಶಾಂಗನಿಗಾದರೂ ತಾಯಿಗಾಗಿ ಬಹಳ ಭಕ್ತಿ. 'ಹಿಂದಿನ ರಾಜ್ಯಪದ್ಧತಿಯು ಆಸುರೀವೃತ್ತಿಯದಾಗಿತ್ತು. ಅಧಿಕಾರಿಗಳ ಉದ್ದಾಮತನಕ್ಕಾಗಿ ನನ್ನ ಮನೆಯವರು ಎಂತೆಂತಹ ಕಷ್ಟನಷ್ಟಗಳನ್ನು, ಅಸಹ್ಯ ಅವಮಾನಗಳನ್ನು ಸಹಿಸಬೇಕಾಯಿತು! ನನ್ನ ತಾಯಿಯ ದೊಡ್ಡ ಮನಸಿನ ದಿಟ್ಟತನದಿಂದಲೆ ನಮ್ಮ ಮನೆತನ ಉಳಿಯಿತು, ಮರ್ಯಾದೆಯೂ ಉಳಿಯಿತು.' ಎಂಬುದವನ ಒಡನುಡಿ.

ಬಾಲ್ಯದಲ್ಲಿ ಮನಸಿನಮೇಲೆ ಇಂತಹ ಆಘಾತಗಳಾಗಿ ಶಾಂಗನು ತನ್ನ ದೇಶದ ಅರಸೊತ್ತಿಗೆಯ ಆಳಿಕೆಯನ್ನು ದ್ವೇಷಿಸಿದಲ್ಲಿ ಆಶ್ಚರ್ಯವಿಲ್ಲ. ಚೀನಾದೇಶವು ಪುರಾತನಕಾಲದಿಂದಲೂ ಸಂಸ್ಕೃತಿಯಲ್ಲಿ ಮೇಲ್ಮೆಯನ್ನು ಪಡೆದ ದೇಶ; ಆದರೂ ಕಳೆದ ಶತಮಾನದಿಂದ ಚೀನಾದೇಶವು ವಸಂತಸೇನೆಯಂತಾಗಿದೆ. ಮನೆಯಲ್ಲಿ ಸಂಸ್ಕಾರವಿದ್ದರೂ ಹೊರಗೆ ಎಲ್ಲರೂ ಅದನ್ನು ತಮ್ಮ ಸೊತ್ತು ಎಂದು ತಿಳಿಯುವರು. ಕಳೆದ ಶತಮಾನದ ಕೊನೆಯರ್ಧಭಾಗದಲ್ಲಿ ಯುರೋಪಿಯ ರಾಷ್ಟ್ರಗಳು ಅನ್ಯಾಯದಿಂದ, ಒತ್ತಾಯದಿಂದ ಚೀನಾದಲ್ಲಿ ಅಲ್ಲದ ಅಧಿಕಾರಗಳನ್ನೂ ಸಲ್ಲದ ಸವಲತ್ತುಗಳನ್ನೂ ಪಡೆದುಕೊಂಡುವು. ತನ್ನ ದೇಶದಲ್ಲಿ ಪರಕೀಯರ ಪ್ರಾಬಲ್ಯ, ತನ್ನವರ ದಾಸ್ಯ ಇದನ್ನು ನೋಡಿ ತಳಮಳಗೊಂಡ ತರುಣರಲ್ಲಿ ಶಾಂಗ-ಕೀ-ಶೇಕನು ಒಬ್ಬ. ೧೯೧೧ರಲ್ಲಿ ಕೊನೆಗೆ ಚೀನಾದೇಶದ ಅರಸುಮನೆತನವು ಪದಭ್ರಷ್ಟವಾಯಿತು, ದೇಶವು ಪ್ರಜೆಗಳ ಸೊತ್ತು ಎಂಬ ತತ್ತ್ವವು ಜಯಶೀಲವಾಯಿತು. ಈ ಕ್ರಾಂತಿಯನ್ನೂ ಆದಕಾಗಿ ಜಾಗೃತಿಯನ್ನೂ ಹುಟ್ಟಿಸಿದ ಮೊದಲ ಉದ್ಧಾರಕನೆಂದರೆ ಸನ್-ಯಾತ್-ಸೆನ್. ಇಪ್ಪತ್ತಾರು ವರ್ಷದ ತರುಣನಾದ ಶಾಂಗನಿಗೆ ಈ ಜಯಶಾಲಿಯಾದ ಕ್ರಾಂತಿಪುರುಷನು ನಾಯಕನೆನಿಸಿದಲ್ಲಿ ಆಶ್ಚರ್ಯವಿಲ್ಲ.

ಚೀನಾದ ಸ್ವಾತಂತ್ರ್ಯವೀರ 'ಶಾಂಗ-ಕೀ-ಶೇಕ'

ಶಾಂಗನ ಜೀವನವೆಲ್ಲ ಕೈವಿವಾರಿದ ವಿರೋಧಗಳಿಂದ ತುಂಬಿದೆ. ಅತ್ಯಂತ ಬಡತನದ ಮನೆಯಲ್ಲಿ ಹುಟ್ಟಿದವನು; ಅತ್ಯಂತ ಸಿರಿವಂತಿಕೆಯ ಹೆಂಡತಿಯನ್ನು ಮದುವೆಯಾಗಿದ್ದಾನೆ; ಅತ್ಯಂತ ಶಾಂತಿಪ್ರಿಯನಾದವನು; ಅಂದಿನಿಂದ ಇಂದಿನವರೆಗೆ ಯುದ್ಧದಲ್ಲಿಯೆ ತೊಡಗಿದ್ದಾನೆ; ಇಂದು ಜಪಾನ ಸೈನ್ಯಕ್ಕೆ ಪ್ರತಿಭಟಿಸಿ ನಿಲ್ಲುವ ನಾಯಕನು ತನ್ನ ಸೈನಿಕ ಶಿಕ್ಷಣವನ್ನು ಜಪಾನದೇಶದ ಸಂಸ್ಥೆಗಳಲ್ಲಿಯೆ ಕಲಿತುಕೊಂಡಿದ್ದಾನೆ!

ಶಾಂಗನ ಧೈರ್ಯವನ್ನೂ ಬುದ್ಧಿಮತ್ತೆಯನ್ನೂ ಕಂಡು ಸನ್‌ಯಾತ್‌ಸೆನ್‌ನು ಇವನನ್ನು ಯಾವಾಗಲೂ ಪ್ರೋತ್ಸಾಹಿಸಿ, ತನ್ನ ತರುವಾಯ ನಾಯಕನಾಗುವಂತೆ ತರಬೇತು ಮಾಡಿದನು. ೧೯೧೧ರ ತರುವಾಯ ಚೀನಾದೇಶವು ಭಿನ್ನ ಭಿನ್ನವಾಯಿತು. ಅಲ್ಲಲ್ಲಿ ಸೈನಿಕ ಸರದಾರ (War Lord) ರು ತಮ್ಮದೊಂದು ಬೇರೆ ಸೈನ್ಯವನ್ನು ಸಜ್ಜುಪಡಿಸಿಕೊಂಡು ಒಂದು ಪ್ರಾಂತವನ್ನು ಆಳುತ್ತಿದ್ದರು. ಇಡಿಯ ದೇಶಕ್ಕೆ ಒಂದು ಸರಕಾರವಿಲ್ಲ. ಒಬ್ಬನ ಅಧಿಕಾರವಿಲ್ಲ. ಇಂತಹ ಸ್ಥಿತಿಯಲ್ಲಿ ಶಾಂಗನೂ ಮೊದಲು ತನ್ನದೊಂದು ಸೈನ್ಯವನ್ನು ಸಿದ್ಧಪಡಿಸಿಕೊಂಡನು. ಇಡಿಯ ದೇಶವನ್ನು ಒಂದುಗೂಡಿಸಬೇಕೆಂಬ ಸನ್‌ಯಾತ್‌ಸೆನ್‌ನ ಆಕಾಂಕ್ಷೆಯೆ ಇವನ ಧ್ಯೇಯವಾಯಿತು. ಕೆಲವು ದಿವಸ ರಶಿಯಾದಲ್ಲಿದ್ದು ಅಲ್ಲಿ ಅನುಭವ ಪಡೆದನು. ಆ ಮೇಲೆ ರಶಿಯನ್ ಅಧಿಕಾರಿಗಳನ್ನು ತಂದು, ಅವರ ಅನುಭವದಿಂದ 'ಕು-ಮಿನ್-ತಾಂಗ' ಎಂಬ ತನ್ನ ಪಕ್ಷವನ್ನು ಪ್ರಬಲಗೊಳಿಸಿದನು. ಚೀನಾದೇಶವು ಬೊಲ್‌ಶೆವಿಕ್ ಪದ್ಧತಿಯನ್ನು

ಸ್ವೀಕರಿಸಬಹುದೆಂದು ಎಲ್ಲರೂ ತಿಳಿದಿದ್ದರು. ಆದರೆ ರಶಿಯನ್ನರ ಅನುಭವದ ಲಾಭವನ್ನು ಪಡೆದುಕೊಂಡ ಮೇಲೆ ಶಾಂಗನು ಅವರನ್ನು ಹೊರಗಟ್ಟಿದನು. 'ನಮ್ಮ ದೇಶಕ್ಕೆ ನಮ್ಮ ಜನರು, ನಮ್ಮ ಸಂಸ್ಕೃತಿ, ಎಲ್ಲವೂ ನಮ್ಮದೇ ಇರತಕ್ಕದು' ಎಂಬ ರಾಷ್ಟ್ರೀಯ ಧೋರಣೆಯಿಂದ ಜನರಲ್ಲಿ ಸ್ವಾಭಿಮಾನವನ್ನು ಹುಟ್ಟಿಸಿದನು. ಇತ್ತ ಸೈನ್ಯದ ಸಹಾಯದಿಂದ ಬೇರೆ ಬೇರೆ ಸೈನಿಕಸರದಾರರನ್ನು ಬಗ್ಗುಬಡಿದು, ದೇಶದ ಏಕೀಕರಣ ಕಾರ್ಯವನ್ನು ಮುಂದೆ ಸಾಗಿಸಿದನು.

೧೯೩೬ರಲ್ಲಿ ಶಾಂಗನ ಐವತ್ತನೆಯ ಜನ್ಮದಿನವು ದೇಶದ ತುಂಬೆಲ್ಲ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. 'ಕ್ರಾಂತಿಗಾಗಿ ನನ್ನ ಜೀವನವನ್ನು ಮೀಸಲಿಟ್ಟಿದ್ದೇನೆ; ಆಗಬೇಕಾದ ಕೆಲಸದ ಒಂದು ನೂರರಷ್ಟು ಕೂಡ ಇನ್ನೂ ಆಗಿಲ್ಲ; ಇಷ್ಟರಲ್ಲಿಯೆ ನನಗೆ ಐವತ್ತು ವಯಸ್ಸಾಯಿತು' ಎಂದು ಶಾಂಗ ಆ ಸಮಯದಲ್ಲಿ ಬರೆದುಕೊಂಡಿದ್ದಾನೆ.

ಆದರೆ ಶಾಂಗನಲ್ಲಿ ಗಟ್ಟಿಗತನವಿದೆ; ಯುದ್ಧದ ಅನೇಕ ಗಂಡಾಂತರಗಳ ಪರಿಸ್ಥಿತಿಯಲ್ಲಿ ಮುಂದಾಗಿ ನುಗ್ಗುತ್ತಾನೆ. ಸ್ವಾರ್ಥ-ತ್ಯಾಗದ ಹಟವಿದೆ; ಸಕಲೈಶ್ವರ್ಯದ ಪ್ರಾಪ್ತಿ ಸಾಧ್ಯವಿದ್ದರೂ ತೀರ ಸಾದಾ ರೀತಿಯಲ್ಲಿ ಜೀವಿಸುತ್ತಾನೆ. ಕುಶಾಗ್ರಬುದ್ಧಿ ಇದೆ; ಜಪಾನವು ಎಷ್ಟೊಂದು ಕೆಣಕಿದರೂ ಅವನು ಅನೇಕಸಲ ಅವರೊಡನೆ ಯುದ್ಧವನ್ನು ತಪ್ಪಿಸಿದ್ದಾನೆ. ದೇಶಾಭಿಮಾನವು ತುಂಬಿ ತುಳುಕುತ್ತಿದೆ; ಅನೇಕ ಸೈನಿಕಸರದಾರರು ಇವನಿಂದ ಸ್ಫೂರ್ತಿಗೊಂಡು, ಒಳಜಗಳಗಳನ್ನು ಬಿಟ್ಟುಕೊಟ್ಟು, ಇವನ ಅಧಿಕಾರಕ್ಕೆ ಒಳಗಾಗಿದ್ದಾರೆ.

ಸಾವಿರಾರು ವರ್ಷಗಳಿಂದ ಪೌರುಷವನ್ನು ಕಳೆದುಕೊಂಡ ಜನತೆಯುಳ್ಳದು ಚೀನಾದೇಶ; ಇಂದಿಗೂ ನಲವತ್ತು ಕೋಟಿ ಜನಸಂಖ್ಯೆಯುಳ್ಳದು ಚೀನಾದೇಶ. ಒಂದು ಕಡೆ ಅತ್ಯಾಶೆಯಿಂದ ಮದೋನ್ಮತ್ತವಾದ ಜಪಾನವು ಒಳಜಗಳಗಳನ್ನು ಹುಟ್ಟಿಸಿ, ಇಲ್ಲವೆ ಕಲಹವನ್ನು ಕೆದರಿ, ನುಂಗಬೇಕೆಂದು ಬಾಯ್ದೆರೆದು ನಿಂತಿದೆ; ಇನ್ನೊಂದು ಕಡೆ ಅಸಂಖ್ಯ ಅಜ್ಞಾನಿ-ಅಶಕ್ತರನ್ನು ಅಲ್ಪಾವಧಿಯಲ್ಲಿ ಸ್ವತಂತ್ರರನ್ನಾಗಿ, ಸುಶಿಕ್ಷಿತರನ್ನಾಗಿ ಮೆರೆಯಿಸಿ ತನ್ನನ್ನು ಹಂಗಿಸುವಂತೆ ನಿಂತಿದೆ ರಶಿಯಾದೇಶ. ಇಂತಹ ಪರಿಸ್ಥಿತಿಯಲ್ಲಿ ಇಂದು ಜಪಾನವನ್ನು ಧೈರ್ಯದಿಂದ ಎದುರಿಸುವಂತೆ ತನ್ನವರನ್ನು ಹುರಿದುಂಬಿಸಿದ ಶಾಂಗ-ಕೀ-ಶೇಕನು ಸಾಮಾನ್ಯನೆಂದು ಹೇಳಬಹುದೆ?

ವಯಸ್ಸೇನೊ ಐವತ್ತು; ಆದರೆ ಅವಿಶ್ರಾಂತವಾಗಿ ಪರಿಶ್ರಮ ಪಡುವ ಅವನ ಉತ್ಸಾಹವು ಇನ್ನೂ ಅಪರಿಮಿತವಾಗಿದೆ. 'ಶಾಂತಿಯ ಕಾಲದಲ್ಲಿ ಎಷ್ಟು ಹೆಚ್ಚಾಗಿ ಬೆವರಿಳಿವಂತೆ ದುಡಿಯುವೆವೊ, ಯುದ್ಧದ ಕಾಲದಲ್ಲಿ ಅಷ್ಟು ಕಡಮೆ ರಕ್ತ ಸುರಿಸುವೆವು' ಎಂದು ಇವನು ಹೇಳುವ ಮಾತು ಚೀನೀಯರಷ್ಟೆ ಅಲ್ಲ, ಜಗತ್ತಿನ ಎಲ್ಲ ಜನಾಂಗದವರೂ ತಮ್ಮ ಹಿತಕ್ಕಾಗಿ ಒಪ್ಪಲೇ ಬೇಕಾದಂತಹದು. ನೆತ್ತರದ ನಾತಿಗೆ ಮೂಗುಮುಚ್ಚುವ ಸರ್ವಾಧಿಕಾರಿಯೆಂದರೆ ಇಂದು ಜಗತ್ತಿನಲ್ಲಿ ಇವನೊಬ್ಬನು. ಕ್ರಿಶ್ಚನ್ ಮತವನ್ನು ಇವನು ಸ್ವೀಕರಿಸಿದ್ದೇ ಇವನ ಈ ವೃತ್ತಿಗೆ ಕಾರಣ- ಎಂದು ಹೇಳುತ್ತಾರೆ. ಆದರೆ ಅದನ್ನು ನಂಬಲಾಗದು; ಹಿಟ್ಲರನೂ ಕ್ರಿಶ್ಚನ್‌ನೆ ಇದ್ದಾನೆ, ಮುಸೋಲಿನಿಯೂ ಕ್ರಿಶ್ಚನ್‌ನೆ. ನಿಜವಿದ್ದ ಮಾತೆಂದರೆ ಶಾಂಗ-ಕೀ-ಶೇಕನು ಹೆಚ್ಚಿನ ತರಗತಿಯ ಹೃದಯ ಸಂಸ್ಕಾರದ ನಾಯಕನು.

ಜಯಂತಿಯಲ್ಲಿ ಜಾಹೀರಾತನ್ನು ಕೊಟ್ಟರೆ ಕೈತುಂಬ ಲಾಭವುಂಟು!

ಅದು ಹೇಗೆ ಎನ್ನುವಿರಾ?

ಪ್ರತಿಯೊಬ್ಬ ಕಲಿತ ಕನ್ನಡಿಗನ ಕಣ್ಣಿಗೂ ನಿಮ್ಮ ಜಾಹೀರಾತು ಬೀಳುವುದು ಕರ್ನಾಟಕದಲ್ಲಿಯಷ್ಟೇ ಅಲ್ಲ; ಪರಪ್ರಾಂತ-ಪರದೇಶಗಳಿಗೂ ಜಯಂತಿ ಹೋಗುವುದು. ಕನ್ನಡನಾಡಿನ ಪ್ರತಿಯೊಂದು ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಜಯಂತಿಯ ಪ್ರಚಾರಕರುಂಟು.

ಎಂತಲೇ ಜಾಹೀರಾತನ್ನು ಕೊಡುವವರು ತ್ವರೆ ಮಾಡಿರಿ!

ಚೆಲುವೆಯ ಚಿತ್ರ

ಶ್ರೀ. ಜಿ. ವರದರಾಜರಾವ್ ಬೆಂಗಳೂರು

೧

ಮೆರೆವ ವಸಂತನ ಮಡಿಲಲಿ ಬೆಳೆದು,
ಕಣ್ಮನ ಸೆಳೆಯುವ ಶಕ್ತಿಯ ಪಡೆದು,
ನಿತ್ಯ- ನಿರಂತರ ಸುಖವನೆ ಸವಿದು,
ಆನಂದದ ಮಕರಂದವ ಕುಡಿದು,
ಬೆಳೆದಂತಿರುವಳು ಆ ಚೆಲುವೆ ;
ಇಂತಿರುವುದು ಬಾಳಿನ ಜಸವೆ !

೨

ಚೆಂದುಟಿ ತಡಿಯಲಿ ಸುಳಿಯುವ ನುಡಿಯು
ದಂತಪಜ್ಕ್ತಿಯಲಿ ಮಿಂಚುವ ನಗೆಯು
ಕಡೆಗಣ್ಣಿನ ನೋಟದ ಕದಿರೆಳೆಯು
ಬಲು ವೈಯಾರದ ಹೆಜ್ಜೆಯ ಪರಿಯು
ನಾ ಮೆಚ್ಚಿಹ ಚೆಲುವೆಯ ಚೆಲುವು,
ಎಲ್ಲವು ಎನಗೆ ಒಲವಿನ ದಯವು!

೩

ಭುಜವನು ಸೋಂಕುವ ಹೆಣೆದಿಹ ಹೆರಳು
ತೂಗಲು, ಸುಖವನು ಬೆರಸುವುದರಳು.
ಗಾನಕೆ ತವರೆನೆ ಮಂಜುಲ ಕೊರಳು,
ಪ್ರತಿ ಮಾತಲಿ ಪ್ರೇಮವ ಬೆರಸುವಳು.
ತುಂಬುಮೆಯ್ಯ ಚೆಲುವೆಯ ಸಿರಿಯು
ಮನ್ಮಥನೊಲಿದಿತ್ತಿಹ ನಿಧಿಯು.

೪

ನನ್ನೀ ಚೆಲುವೆಯ ನೋಡಲು ಎಂದು
ರವಿ, ಶಶಿ, ತಾರಾವರ್ಗಗಳಿಂದು
ಹಗಲಿರುಳಲಿ ಆಕಾಶಕೆ ಬಂದು
ಕಾಣದೆ, ತೆರಳುವರೈ ಮನ ನೊಂದು ;
ಯಾರಿಗು ಕಾಣದ ಎಡೆಯಲ್ಲಿ
ಬೆಳೆಯುತಲಿರುವಳು ಸುಖದಲ್ಲಿ !

೫

ಯೌವನ ಮೋಹಿನಿ, ಸಿರಿ, ಶೃಂಗಾರಿ !
ಕಾಣದೆ ನನ್ನೆದೆಯಲಿ ಮೈದೋರಿ,
ಪ್ರೇಮ ಕಲಾಪ್ರೌಢಿಮೆಯನು ಬೀರಿ,
ನನ್ನೀ ಚೆಲುವೆಯ ಚಿತ್ರವ ತೋರಿ,
ಆಕಾಂಕ್ಷೆಗೆ ಸಿಕ್ಕಿಸಿ ನಗುತ,
ಕುಣಿ-ಕುಣಿಸುತಲಿರುವಳು ಕಿರುತ.

* * * *

ಎದೆಯಲ್ಲಿರೆ ಪ್ರೇಮದ ವೈಚಿತ್ರ್ಯ.
ಬ್ರಹ್ಮ ಬರೆದರೂ ಬಾರದ ಚಿತ್ರ
ಮೂಡಿದೆ ; ಇದೆ ಕಲ್ಪನೆಯ ವಿಚಿತ್ರ !

ಒಲವಿನ ಕನಸು

' ಅನುಭವಿಕ '

ಒಲವಿನ ಕನಸು– ಕವಿದಿರೆ ಮನಸು,
ಒಡೆದಂತೆ ಗರ– ಬುಡುಬುಡಿಕೆ ತೆರ
ಬಡಬಡಿಸುವುದು ;– ಕಂಗಳ ತೆರೆದು
ನಿರುಕಿಸಿದರದು– ಬರಿದೋ ಬರಿದು !

ಮಲಗಿನ ಕನಸದು– ಒಬ್ಬಗೆ ತಿಳಿವುದು ;
ಒಲವಿನ ಕನಸನು– ಲೋಕವೆ ಅರಿವುದು.
ಬಯಲಿಗೆ ಬಾಯ್‌ಬಾಯ್– ಬಿಟ್ಟದುದಕ್ಕೆ
ಗುರಿಯಾಗುವನವ– ನಗೆಯಾಟಕ್ಕೆ !

ಅನಾಥಾಶ್ರಮ

ವ್ಹಿ. ಎಂ. ಇನಾಮದಾರ್, ಬಿ.ಎ. (ಆನರ್ಸ್)

(ಸಣ್ಣಕತೆ)

ಭಲೆ, ಡಾಕ್ಟರ್ ಆನಂದರಾಯ !
ಕರುಣೆಯ ಪರದೆಯ ಹಿಂದೆ ಸ್ವಾರ್ಥಸಾಧನೆಯ ನಗ್ನನೃತ್ಯ !
ಅನಾಥರಿಗೆಂದು ಹೆಸರು ; ಹೊಟ್ಟೆತುಂಬಿದವರಿಗೇ ಅಲ್ಲಿ ಅವಕಾಶ !
ಪೂರ್ಣಚಂದ್ರನಲ್ಲಿಯ ಕಲಂಕದ ಅರ್ಥವಾಯಿತು !
ಮೋಟಾರಿನ ಸುಗಂಧಮಿಶ್ರಿತ ಧೂಳಿಯ ರಹಸ್ಯ ಹೊಳೆಯಿತು !
ಅಯ್ಯೊ, ಬಲವಿಲ್ಲದ ಬಡತನದ ಬಾಳೇ !

ನಾನು ಹೋದಾಗ ಡಾಕ್ಟರ್ ಆನಂದರಾಯರು ತಮ್ಮ ದವಾಖಾನೆಗೆ ಹೊರಡಲು ಸಿದ್ಧರಾಗಿ ನಿಂತಿದ್ದರು. ಕೈಯೊಳಗಿನ ವಾಚ್ ಕಡೆಗೆ ನೋಡಿ "ಏನು ನಿಮಗೆ ೮-೩೦ ಕ್ಕೆ ಬರಲಿಕ್ಕೆ ಹೇಳಿತ್ತು ; ಈಗಾಗಲೇ ೯ ಹೊಡೆದು ಹೋಗಿದೆ !" ಎಂದರು.

" ನಾನು ೮-೩೦ ಕ್ಕೆ ಬರುವವನೇ; ಆದರೆ ದಾರಿಯಲ್ಲಿ ಕಾಲಿಗೆ ಇದು ನೋಡ್ರಿ . . ಕೆಸರಿನಲ್ಲಿ ಸಿಕ್ಕ ಮುಳ್ಳು ಮುರಿದದ್ದರಿಂದ, ಕುಂಟುತ್ತ ಬರಬೇಕಾದರೆ ಅರ್ಧಾ ತಾಸು ತಡ."

" ಅದೆಲ್ಲಾ ಸರಿ! ಈಗ ನೀವು ದವಾಖಾನೆಗೆ ಬರಬೇಕಾಯಿತು; ದವಾಖಾನೆಯಲ್ಲಿ ಪೇಶಂಟ್ಸ್ ಕಾದಿದ್ದಾರೆ."

" ನನ್ನ ಕಾಲು ಬಹಳೇ ನೋಯುತ್ತಿದೆ. ಡಾಕ್ಟರಸಾಹೇಬ, ಸ್ವಲ್ಪ ಇಲ್ಲೇ ನೋಡಬಾರದೇ !"

" ನಡೆಯಿರಿ ದವಾಖಾನೆಗೆ; ಅಲ್ಲಿ ನೋಡಬಹುದು !"

ಎಂದು ಹೇಳುತ್ತಾ ಡಾಕ್ಟರರು ಟಾಂಗೆಯನ್ನೇರಿ ನಡೆದರು. ನಾನೂ ಕುಂಟುತ್ತ ಅವರ ದವಾಖಾನೆಗೆ ಹೋದೆ. ರೋಗಿಗಳು ಔಷಧದ ಬಾಟ್ಲಿಗಳನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲಲ್ಲಿ ಬಾಕಿನಮೇಲೆ ಕುಳಿತಿದ್ದರು; ನಾನೂ ಕುಳಿತೆ. ರೋಗಿಗಳನ್ನು ಇವರವರು ಒಂದ ನಂಬರಿನ ಪ್ರಕಾರ ನೋಡುವ ಪರಿಪಾಠ ಡಾಕ್ಟರದು. ನನಗೆ ಅವರ ಈ ಪದ್ಧತಿಯು ಮನಸ್ಸಿಗೆ ಬಂದಿತು. ಆದರೆ ನನಗೆ ಒಂದು ತಾಸು ದಾರೀಕಾಯಬೇಕಾಗುವದಲ್ಲ. . ಎಂದು ಅತ್ತಿತ್ತ ನೋಡತೊಡಗಿದೆ.

ಡಾಕ್ಟರರು ಮುಗುಳುನಗೆ ನಕ್ಕು 'ಯಾಕೆ ಪಂಡಿತಜೀ, ಕಾಲು ಬಹಳೇ ನೋಯುವದೇನು ?' ಎಂದರು. 'ಹೌದರೀ' ಎಂದೆ.

ಏನೋ ಕೃಪಾದೃಷ್ಟಿ ತಿರುಗಿತು ; ಎಲ್ಲರನ್ನೂ ಬಿಟ್ಟು ನನ್ನನ್ನೇ ಮೊದಲು ಉಪಚರಿಸಲಿಕ್ಕೆ ಸುರುಮಾಡಿದರು.

" ಛೇ! ನೀವು ಅವಿವೇಕಟ್ಟೆಲ್ಲಾ; ವಿಪರೀತ ಕಸರು ಸೇರಿದೆ. ಮುಳ್ಳು ಅಲ್ಲಿಯೇ ಉಳಿಯುತ್ತಿತ್ತು. ಬೇಗನೆ ಬಂದಿರಿ ನೆಟ್ಟಗಾಯಿತು."

'ಇನ್ನೇನು ಭಯವಿಲ್ಲವಷ್ಟೆ!' ಎಂದೆ; ಅವರು ಡ್ರೆಸಿಂಗ್ ನಡಿಸಿದರು.

'ಡಾಕ್ಟರಸಾಹೇಬ್, ಒಂದು ತುಸು ಕಸುರು ಸೇರಿದರೆ ದೇಹಕ್ಕೆ ಇಷ್ಟೇಕೆ ವಿಪರೀತ ವೇದನೆಯಾಗಬೇಕು ?'

'ಅದು Foreign body; ರಕ್ತದಲ್ಲಿಯ corpuscles ಗಳೊಡನೆ ಏಕರೂಪಹೊಂದಲಾರದು. ಅವು ಅದನ್ನು ಹೊರಗೆಹಾಕಲು ಯುದ್ಧ ಮಾಡಹತ್ತುತ್ತವೆ; ಅದರಿಂದ ನೋವು !'

'ಯುದ್ಧ' 'ಹೊರಗೆಹಾಕುವದು' ಎಂದೊಡನೆ ೩ನೆಯ ವರ್ಗದ ರೇಲ್ವೆಡಬ್ಬಿಯ ಪ್ರವಾಸದ ನೆನಪು ಬಂದಿತು. ಈ ಪ್ರವಾಸದಲ್ಲಿಯೇ ನನ್ನ ಕಾಲಿಗೆ ಪೆಟ್ಟುತಗಲಿದ್ದು. ಕರಿಯ ಟೊಣಪನೊಬ್ಬನು ಗಾಡಿಯ ಬಾಗಿಲಲ್ಲಿ ನಿಂತಿದ್ದ; ಗಾಡಿ ಸೀಟಿ ಕೊಟ್ಟಿತು. ಗಾಬರಿಯಾದೆ; ಹತ್ತಬೇಕೆಂದೆ. ಟೊಣಪ ಹಿಂದಕ್ಕೆ ನೂಗಿಸುವವ. ಅಂತೂ ಜೋರಿನಿಂದ ಒಳಗೆ ಸೇರಿದೆ. ಬಾಗಿಲನ್ನು ಗಾರ್ಡ್ ಧಡಕ್ಕನೇ ಬತ್ತಿದ. ಕಾಲಿಗೆ ಪೆಟ್ಟುತಗಲಿ ರಕ್ತ. . ಇದೆಲ್ಲಾ ಚಿತ್ರ ಕಣ್ಣಮುಂದೆ ಬಂದಿತು. ಎಲ್ಲರಿಗೂ ಪ್ರವಾಸಮಾಡಲು ಅಧಿಕಾರ. ಅವನು ಅದೇಕೆ ಅಷ್ಟು ಉದ್ದಾಮತನದಿಂದ ವರ್ತಿಸಬೇಕು ? ತನಗೆ ಹೆಚ್ಚು ಜಾಗೆ ಇದ್ದರೆ ಹಾಯಾಗಿ ಮಲಗಲಿಕ್ಕೆ ಅನುಕೂಲವಾಗುವದೆಂದಲ್ಲವೆ ಅವನು ನನಗೆ ಬರಗೊಡದೆ ಇದ್ದದ್ದು ? ನನ್ನನ್ನು ಡಾಕ್ಟರನು ನೋಡಲಿಕ್ಕೆ ಕರೆದಾಗ, ನನಗಿಂತ ಮೇಲಿನ ನಂಬರಿನ ರೋಗಿಗಳು ದುರದುರನೆ ನನ್ನನ್ನು ನೋಡಿದ್ದು ಇದಕ್ಕೇ! ನನಗೆ 'ದವಾಖಾನೆಗೆ ಬರ್ರಿ; ಅಲ್ಲಿಯೇ ನೋಡುತ್ತೇನೆ'

ಎಂದು ಡಾಕ್ಟರನು ಹೇಳಿದಾಗ, ಅವನನ್ನು ಮನಸಲ್ಲಿಯೇ ನಾನು ಶಪಿಸಿದ್ದು ಇನಕ್ಕಾಗಿಯೇ! ಅಂತೂ ಎಲ್ಲರಲ್ಲಿ ತನಗೆ ಸುಖವಾಗಬೇಕೆಂಬ ಭಾವನೆ ಇರುವದು. ದೇಹದಲ್ಲಿಯ ರಕ್ತದ ಕಣಗಳಲ್ಲಿ ಕೂಡ ಈ ತರದ ಸ್ವಾರ್ಥವೇ !

ಭಿಕ್ಷುಕಿಯೊಬ್ಬಳು ದೀನವದನಳಾಗಿ ಬಾಗಿಲಲ್ಲಿ ನಿಂತಿದ್ದಳು. ನನ್ನ ಡ್ರೆಸಿಂಗ್ ಆಗಲೇ ಮುಗಿದಿತ್ತು. ಡಾಕ್ಟರನು ಅವಳ ಕಡೆಗೆ ನೋಡಿ ಹೇಳಿದ.

'ಏ ತಿರುಕೀ, ಸರಿ ಬೆಳಕು ಬಿಡು! ಸರಿ ಅಲ್ಲಿಂದ! ನಿನ್ನೆ ಬಂದಿದ್ದಿಲ್ಲಿ ನೀನು?'

'ಹೌಂದ್ರ ನನ್ನ ದ್ಯಾವ್ರೂ!'

'ಹಾಗಾದರೆ ಇಂದು ಹೋಗು ಸರಕಾರೀ ದವಾಖಾನೆಗೆ! ದಿನಾಲು ಬೇಡಿ-ಭಿಕಾರಿಗಳಿಗೆ ಔಷಧಕೊಡಲಿಕ್ಕೇ ಇಲ್ಲಿ ನಾವು ಕೂತಿಲ್ಲಾ. ಹೂಂ, ನಡಿ! ಯಾಕೆ? ಹೋಗುವಿಯೋ ಇಲ್ಲೋ?' ನನ್ನ ಕಡೆಗೆ ತಿರುಗಿ ಡಾಕ್ಟರರೆಂದರು 'ನೋಡ್ರಿ ಈ ತಿರುಕರ ಸಲುವಾಗಿ ಈಗೀಗ ದವಾಖಾನೆಯ ಮೇಳವೂ ನಡೆದಿದೆ. ರಂಡೇ ಮಕ್ಕಳು ಔಷಧ ತಗೊಂಡು ಬದುಕಿ, ಯಾವ ಶತಕೀರ್ತಿಗಳಿಸುವವರಿದ್ದಾರೋ! ಇದ್ದರೆ ಸೌಖ್ಯವೂ ಅಷ್ಟೇ! ಸುಮ್ಮನೆ ಸತ್ತರೇನು ಕೆಡಬೇಕಾಗಿದೆ?'

ನಾನು ಆ ತಿರುಕಿಯ ಕಡೆಗೆ ನೋಡಿದೆ. ಅವಳ ಹರಕು ಬಟ್ಟೆ; ಎಣ್ಣೆಯ ಸುದ್ದಿಯರಿಯದ ಅವಳ ತಲೆಯ ಮೇಲಿನ ಜಡೆ; ಕೈಯಲ್ಲಿ ಬಾಡಿದ ಕಂದಿದ ಅಸ್ಥಿಪಂಜರದಂಥ ಕೂಸು! ಅವಳ ಕಣ್ಣಿಂದ ನೀರು ಹರಿಯುತ್ತಿತ್ತು. ನನಗೆ ಕನಿಕರ ಬಂದಿತು.

'ಡಾಕ್ಟರ್‌ಸಾಹೇಬ, ಏನೋ ಬಡವಿ; ಕೂಸು ಬಹಳೇ ಆಜಾರಿ ಇದ್ದಂತೆ ತೋರುತ್ತದೆ. ಸ್ವಲ್ಪ ನೋಡಿಬಿಡಿರಿ!'

'ಬರೀ ನೋಡಿದರೇನಾಗುವದು. ಔಷಧ ಬೇಡವೇ ಇವಳಿಗೆ? ಔಷಧ ಕೊಳ್ಳುವ ಯೋಗ್ಯತೆಯಾದರೂ ಇದೆಯೇ? ಹೋಗಲಿ.. ಬೇಕಾದರೆ ಸರಕಾರೀ ದವಾಖಾನೆಗೆ!'

'ಯಪ್ಪಾ, ನನ್ನ ದ್ಯಾವ್ರೂ, ನನ್ನ ಧರ್ಮರಾಜಾ, ನನ್ನ ಬಂಗಾರದಂಥಾ......'

'ಹೂಂ, ಸಾಕು ಮಾಡು ನಿನ್ನ ಈ ರಾಗಾ! ಇಲ್ಲೇನು ತಿರುಪೆಗೆ ಬಂದಿರುವೆಯಾ? ನಡೆ! ನಡೆ ಆಚೆಗೆ!!'

ನಿರುಪಾಯದಿಂದ ತಿರುಕಿಯು ಹೊರಬಿದ್ದು ಸಮೀಪದ ಒಂದು ಗಿಡದ ಬುಡದಲ್ಲಿ ಕುಳಿತಳು.. ದುರ್ದೈವವು ಅಲ್ಲಿಯೂ ಅವಳನ್ನು ಸುಮ್ಮನೆ ಕೂಡಗೊಡಲಿಲ್ಲ. ಆ ಕೂಸು ಕೆಮ್ಮಹತ್ತಿತು. ಕೆರಳಿದ ಕಣ್ಣಿನಿಂದ ಡಾಕ್ಟರರು ಆ ಕಡೆಗೆ ನೋಡಿದರು. 'ಎಲೀ ತಿ ರು ಕೀ! ಹೂಂ, ಕಂಪಾವುಂಡಿನಾಚೆಗೆ ಹೋಗು..ನಡೆ ಅಲ್ಲಿಂದ..!'

ಸೂರ್ಯನು ಪ್ರಖರನಾಗಿ ಉರಿಯುತ್ತಿದ್ದ. ವಾಯುವಿನ ಸುಳಿವಿಲ್ಲ. ಮೇಲಾಗಿ ಅದು ಮೇ ತಿಂಗಳು. ಗಿಡದ ಬುಡಬಿಟ್ಟು ಕದಲಿದರೆ, ನನ್ನ ಮೇಲೆ ಹೆಜ್ಜೆ ಇಡಬೇಡವೆಂದು ಭೂಮಿಯು ಅವಳನ್ನು ಬೆದರಿಸುವದು. ಔಷಧ ಕೊಡಿಸದಿದ್ದರೆ ನಾನು ನನ್ನವ ನಲ್ಲವೆಂದು ಅಸ್ಥಿಪಂಜರದಲ್ಲಿಯ ಕೂಸಿನ ಆತ್ಮವು ಕೂಗುವದು. ನನ್ನ ದೃಷ್ಟಿಗೆ ಬೀಳಬೇಡ ಎಂದು ಸೂರ್ಯನು ಬೆಂಕಿ ಕಾರುವನು. ಅವಳು ಏನು ಮಾಡಬೇಕು?

'ಅಲ್ಲಿಯೇ ಗಿಡದಬುಡದಲ್ಲಿ ಕೂಡಲೊಲ್ಲಳೇಕೆ!' ನಾನೆಂದೆ.

'ಛೇ, ಕ್ಷಯರೋಗಿ ಅದು. ಇಲ್ಲಿ ಕೂತರೆ T. B. germs ಎಲ್ಲ ಕಡೆಗೆ ವ್ಯಾಪಿಸಿ, ನನ್ನ ಉಳಿದ ರೋಗಿಗಳಿಗೆ ಅಂಟಿಕೊಂಡರೆ-ನನ್ನ ಪ್ರ್ಯಾಕ್ಟೀಸಿನ ಗತಿ ಏನು?' ಅಂತೂ ಡಾಕ್ಟರರು ಅವಳನ್ನು ಬೆದರಿಸಿ ದವಾಖಾನೆಯ ಆವಾರದ ಹೊರಗೆ ಹಾಕಿಸಿಬಿಟ್ಟರು.

* * * *

ಅದಾಗಿ ಒಂದೂವರೆ ವರ್ಷವಾಗಿರಬಹುದು. ಡಾಕ್ಟರರು ಮೊನ್ನೆ ಭೆಟ್ಟಿಯಾಗಿದ್ದರು. "ಎಲೆ, ಎಲೆ, ಅಕಸ್ಮಾತ್ ಭೆಟ್ಟಿಯಾದಂತಾಯಿತಲ್ಲ! ಈಗೇನು ನೀವು ನಮ್ಮ ದವಾಖಾನೆಯ ಕಡೆಗೆ ಬರುವದನ್ನೇ ಬಿಟ್ಟಿದ್ದೀರಲ್ಲಾ!" ಎಂದರು.

'ಏನೂ ಬೇನೆ ಇಲ್ಲದೆ ಯಾಕೆ ಬರಬೇಕು?' ನಾನೆಂದೆ.

'ರೋಗ ಬಂದ ಬಳಿಕ ಬರುವದು ಅಶಿಕ್ಷಿತರ ಕೆಲಸ. Prevention is better than cure....! ನೀವು ಮೇ ಲಿಂ ದ ಮೇ ಲೆ ಬರುತ್ತಿದ್ದರೆ.... ನಿಮ್ಮಲ್ಲಿ ಯಾವ ಬಗೆಯ ರೋಗವೂ ಹುಟ್ಟುವ ಭಯವೇ ಇಲ್ಲ. ನೀವು ನಮ್ಮ Free health Resort ದ opening ceremonyಗೆ ಬಂದಿದ್ದಿಲ್ಲವೇ?'

'ಅದು ಸ್ಥಾಪನೆಯಾದ ಸುದ್ದಿಯನ್ನೇ ನಾನು ಕೇಳಿಲ್ಲ!'

'ನೀವು ಇತ್ತಿತ್ತಲಾಗಿ ಈ ಜಗತ್ತಿನಲ್ಲಿಯೇ ಇಲ್ಲವೆಂಬಂತೆ ತೋರುತ್ತದೆ' ಎಂದು ಅಲ್ಲಿಯೇ ಬಿದ್ದ ಸಚಿತ್ರ ವಾರಪತ್ರಿಕೆಯೊಂದನ್ನು ತೆಗೆದು ಡಾಕ್ಟರರು ಓದಿತೋರಿಸಿದರು.

"ಮ್ಯುನಿಸಿಪಲ್ ಅಧ್ಯಕ್ಷರ ಅಭಿನಂದನೆ! ನಗರ ವಾಸಿಗಳ ಆರೋಗ್ಯಕ್ಕೆ ಲಕ್ಷ ರೂಪಾಯಿ ಮಂಜೂರು! ಡಾ. ಆನಂದ ರಾಯರ ಮನನೀಯ ಯೋಜನೆ!! ನಗರದ ಆರೋಗ್ಯದ ಬಗ್ಗೆ ಕಳಕಳಿಯ ಪ್ರಯತ್ನ!!!" ಇತ್ಯಾದಿ ತಲೆಬರೆಹಗಳ ಕೆಳಗೆ ಡಾ. ಆನಂದ ರಾಯರ ಲೇಖನವಿತ್ತು; ಓದತೊಡಗಿದೆ:—

"ನಗರದ ಆರೋಗ್ಯರಕ್ಷಣೆಯು ಮ್ಯುನಿಸಿಪಲ್ ಸಭಾಸದರಾದ ನಮ್ಮೆಲ್ಲರ ಆದ್ಯಕರ್ತವ್ಯ. ಈಗಿದ್ದ ಒಂದು ದವಾಖಾನೆಯಿಂದ ಸಾಕಷ್ಟು ಜನಸೇವೆಯು ಆಗಲು ಶಕ್ಯವಿಲ್ಲ. ಬಡವರಿಗೆ.. ದರಿದ್ರರಿಗೆ.. ಕಂಗಾಲರಾದ ದೀನರಿಗೆ ಔಷಧ ಕೊಳ್ಳುವ ಶಕ್ತಿ ಇಲ್ಲದೆ, ಅನೇಕ ಬಗೆಯ ರೋಗಗಳಿಂದವರು ಬಳಲುತ್ತಾರೆ. ನನ್ನ ಅನುಭವದಿಂದ ಕ್ಷಯ, ಕಾಲರಾ, ಪ್ಲೇಗು... ಇಂಥ ಹಲವು ಬೇನೆಗಳು ಬಡವರಲ್ಲಿಯೆ ಮೊದಲು ಹುಟ್ಟಿ, ಕ್ರಮೇಣ ವಿಸ್ತಾರ ಹೊಂದಿ, ಎಲ್ಲಾ ವರ್ಗದ ಜ ನ ರಿ ಗೂ ಅಂಟಿಕೊಳ್ಳುತ್ತವೆ. ಬಡವರಿಗೆ ರೋಗಗಳು ಬಂದನಂತರ ಉಪಾಯ ಮಾಡಿದರೆ ನಡೆಯದು. ಅವರಿಗೆ ಕೊಟ್ಟ ಔಷಧವು ಅವರ ಅನಾರೋಗ್ಯಕರವಾದ ಮನೆಯಲ್ಲಿಯ ವಾಸದಿಂದ ವ್ಯರ್ಥವಾಗುತ್ತದೆ. ಅವರಲ್ಲಿ ರೋಗವು

ಬೆಳೆಯದಂತೆ ಮಾಡಬೇಕಾದರೆ ಇಲ್ಲಿ ನಮ್ಮ ನಗರದಲ್ಲಿ ಒಂದು 'ಅನಾಥಾಶ್ರಮ'ವನ್ನು ಸ್ಥಾಪಿಸಬೇಕು. ಅಲ್ಲಿ ಉತ್ತಮ ಹವೆ, ನೀರು, ಬೆಳಕುಗಳಿಂದ ಸುಸಜ್ಜಿತವಾದ ೧೦೦ ಕೋಣೆಗಳಿರಬೇಕು. ಕೇವಲ ಬಡವರು— ಅನಾಥರು ಅಲ್ಲಿ ಪುಕ್ಕಟೆಯಾಗಿ ಔಷಧ ಪಡೆದು, ಸಂಪೂರ್ಣ ಗುಣವಾಗುವವರೆಗೆ ವಾಸ ಮಾಡಬೇಕು. ಎಂದರೆ ಬಡವರಲ್ಲಿ ರೋಗದ ಬೆಳೆವಣಿಗೆಯಾಗದು. ಐಶ್ವರ್ಯವಂತರು ಅಲ್ಲಿ ಇರಬೇಕಾದರೆ ಮಾತ್ರ ದಿನಕ್ಕೆ ೫ ರೂ. ಫೀ ಕೊಡಬೇಕು................"

"ನಗರದಲ್ಲಿಯ ಜನರು ನಿತ್ಯ ಸ್ವಚ್ಛ ಹವೆಯನ್ನು ಉಸುರಾಡಿಸಲಿಕ್ಕೆ ಯೋಗ್ಯವಾದ ಒಂದು ಪಾರ್ಕನ್ನಾದರೂ ಏರ್ಪಾಟು ಸುತ್ತುತ್ತಿದೆ. ಪ್ರಸೂತಿಗೃಹದ ಅಭಾವದ ಮೂಲಕ ಎಷ್ಟೋ ಬಡಬಗ್ಗರಿಗೆ ಬಹಳೇ ಅನಾನುಕೂಲತೆಯಾಗುತ್ತಿದೆ. ಅವರಿಗಾಗಿ ಒಂದು ಪ್ರಸೂತಿಗೃಹವನ್ನಾದರೂ ಏರ್ಪಡಿಸಬೇಕೆಂದು ಒಂದು ಠರಾವನ್ನು ನಾಳೆಯ ದಿನ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ತರಲಿರುವೆನು.'

'ಬಹಳೇ ಸ್ತುತ್ಯವಾದ ಕೆಲಸ!'

ಡಾಕ್ಟರರು ಎದ್ದರು. ಆರೋಗ್ಯಭುವನದ ಮೇಲ್ವಿಚಾರಣೆಯ ಕೆಲಸವು ಅವರ ಕಡೆಗೇ ಇತ್ತು. "ನಡೆಯಿರಿ ಪಂಡಿತಜೀ! ಅನಾಥಾಶ್ರಮದ ಅಚ್ಚುಕಟ್ಟುತನ, ಅಲ್ಲಿಯ ರೋಗಿಗಳ

"ಹೂಂ, ಸಾಕುಮಾಡು ನಿನ್ನ ರಾಗಾ! ಇಲ್ಲೇನು ತಿರುಪೆಗೆ ಬಂದಿರುವೆಯಾ?
ನಡಿ! ನಡೆ ಆಚೆಗೆ!!" (ಪುಟ ೧೪೦)

ಮಾಡಬೇಕು. ಅದು ಮುಂಜಾವಿನಿಂದ ಸಂಜೆಯವರೆಗೆ-ಗಿರಣಿಯ ಕೆಟ್ಟ ಹವೆಯಲ್ಲಿ-ದುಡಿಯುವ ಕೂಲಿಕಾರರಿಗೂ, ಅನಾರೋಗ್ಯಕರವಾದ ಮನೆಯಲ್ಲಿರುವಂಥವರಿಗೂ, ಹೊಲಸು ಹವೆಯಲ್ಲಿದ್ದು ಕೆಲಸ ಮಾಡುವವರಿಗೂ ಯೋಗ್ಯ ಆರೋಗ್ಯವರ್ಧಕ ಸಾಧನವಾಗಿ ಪರಿಣಮಿಸುವದು." ಡಾಕ್ಟರು ಹೇಳಿದರು.

'ಅಂತೂ ಬಡವರಿಗಾಗಿ ನೀವು ಇದೊಂದು ಸ್ತುತ್ಯ ಕೆಲಸ ಮಾಡಿದಿರಿ!' ನಾನೆಂದೆ.

'ಬಡವರಿಗಾಗಿ ಕೆಲಸ ಮಾಡದಿದ್ದರೆ ಸಮಾಜದಲ್ಲಿ ಮುಂದೆ ಹ್ಯಾಗೆ ಬರಬೇಕು? ಇನ್ನೂ ಒಂದು ಯೋಜನೆ ನನ್ನ ತಲೆಯಲ್ಲಿ

ಉಪಚಾರದ ವ್ಯವಸ್ಥೆ ನೋಡಿಕೊಂಡು ಬರೋಣ!" ಎಂದು ನನ್ನನ್ನೂ ಸಂಗಡ ಕರೆದುಕೊಂಡು ನಡೆದರು.

ವಿಶಾಲವಾದ ಬಯಲಿನಲ್ಲಿ "ಅನಾಥಾಶ್ರಮ"ವು ನಮ್ಮನ್ನು ಸ್ವಾಗತಿಸಲು ನಿಂತಿತ್ತು; ಒಳಗೆ ಸೇರಿದೆವು. ಆ ವಿದ್ಯುದ್ದೀಪದ ಝುಗಝುಗಿಸುವ ಪ್ರಕಾಶದಲ್ಲಿ, ನಾನು ಯಾವನಾದರೊಬ್ಬ ರಾಜಕುಮಾರನ ಅರಮನೆಯಲ್ಲಿ ಸಂಚರಿಸುತ್ತಿರಬಹುದೇನೋ.. ಎಂಬ ಭ್ರಾಂತಿಯಾಯಿತು. ಆನಂದರಾಯರಿಗೆ ಆರೋಗ್ಯಭುವನದ ಸಿಪಾಯಿಯೊಬ್ಬನು ಸಲಾಂ ಮಾಡಿ ಸರಿದು ನಿಂತ. ನಾವಿಬ್ಬರೂ ಆಫೀಸಿನಲ್ಲಿ ಸೇರಿದೆವು. ಏನದು! ಎತ್ತ ನೋಡಿದತ್ತ ಅಚ್ಚುಕಟ್ಟು

ಎಲ್ಲಿ ಜಾಹೀರಾತು ಕೊಟ್ಟರೇನು–
ಎನಬೇಡಿರಿ; ಎಲ್ಲರೂ ನೋಡಬೇಕಲ್ಲವೆ?
ಅದಕಾಗಿ ಜಯಂತಿಯಲ್ಲಿಯೆ
ಕೊಡಿರಿ!

ತ್ತ; ಇಬ್ಬರು ಕಾರಕೂನರು ಏನನ್ನೋ ಬರೆಯುತ್ತಿದ್ದರು. ಅಲ್ಲಿಯ ಮುಖ್ಯ ಡಾಕ್ಟರನೊಬ್ಬನು ಆನಂದರಾಯರಿಗೆ 'shakehand' ಮಾಡಿದನು. ಆನಂದರಾಯರು ನನ್ನನ್ನು ಅವನಿಗೆ Introduce ಮಾಡುತ್ತ 'ಇವರು ನಮ್ಮ ಬಹಳ ದಿವಸದ ಪರಿಚಿತರು. ನಾನು ಕನ್ನಡ ಶಾಲೆಗೆ ಹೋಗುವಾಗ ಇವರಲ್ಲಿ ಪೂಜೆಮಾಡಿಕೊಂಡು ಇದ್ದೆ; ಬಹಳ ದಯಾಳುಗಳು.. ಇವರ ತಂದೆಯವರು. ವಾರದ ಹುಡುಗರಂತೂ ಇವರ ಮನೆಯಲ್ಲಿ ದಿನಾಲು ಒಬ್ಬಿಬ್ಬರು ಇದ್ದೇ ಇರುತ್ತಿದ್ದರು. ಬಡವರೆಂದರೆ ಇವರ ತಂದೆಯವರಿಗೆ ತುಂಬಾ ಕನಿಕರ. ನನ್ನನ್ನು ಹೊಟ್ಟೆಯಮಗನಿಗಿಂತ ಹೆಚ್ಚಾಗಿ ಸಲಹಿದರು.' ಆಮೇಲೆ ಡಾಕ್ಟರು ನನಗೆ ಹೇಳಿದರು.

"ಪಂಡಿತಜೀ, ಇವರು ನನ್ನ ಅಳಿಯ ಡಾಕ್ಟರ್ ರಮಾಕಾಂತ. ನಿಮ್ಮ ಅನುಗ್ರಹದಿಂದ ಇವರನ್ನು ಈ ಆರೋಗ್ಯಭುವನದ ಮುಖ್ಯ ಡಾಕ್ಟರನ್ನಾಗಿ ನಿಯಮಿಸಿದ್ದೇವೆ. ಸ್ವತಃ ಪ್ರ್ಯಾಕ್ಟಿಸ್ ಮಾಡಿದರೆ ಈಗಿನ ದಿವಸದಲ್ಲಿ ಎಲ್ಲಿ ನಡೆಯುತ್ತದೆ? ಮೇಲಾಗಿ equipment ಒಂದು ಬೇಕೇ ಬೇಕಲ್ಲ. ಅನಾಯಾಸವಾಗಿ ಬಡವರಿಗೆಂದು ಈ 'ಅನಾಥಾಶ್ರಮ'ದ ಯೋಜನೆಯು ಸ್ವೀಕೃತವಾಯಿತು. ಇಲ್ಲಿಯೇ ಇವರಿಗೆ ಕೆಲಸ ಕೊಡಿಸಿಬಿಟ್ಟೆ. ಇವರಿಗೂ ಬಡವರ ವಿಷಯಕ್ಕೆ ಬಹಳ ಕಳಕಳಿ. ಇಲ್ಲಿಯ ರೋಗಿಗಳಲ್ಲಿ ನೂರರಲ್ಲಿ ಇಂದಿನವರೆಗೆ ಒಂದು ಕೂಡ ಗುಣವಾಗದೆ ಹೋಗಿಲ್ಲ."

ರಮಾಕಾಂತನು ಮುಖ್ಯ ಡಾಕ್ಟರನಾದದ್ದನ್ನು ಕೇಳಿ ನನಗೂ ಸಂತೋಷವಾಯಿತು. 'ಅವನು ಬಡವರ ಕೈವಾರಿ ಇದ್ದಾನೆಂದ ಬಳಿಕ ಉಳಿದ ಡಾಕ್ಟರರು ಹ್ಯಾಗಿದ್ದರೇನು?' ಎಂದು ಸಮಾಧಾನ ತಾಳಿದೆ. ಕಾರಕೂನರಿಗೆ ನಮ್ಮ ಕಡೆಗೆ ಲಕ್ಷ್ಯವೇ ಇದ್ದಿಲ್ಲ; ತಮ್ಮ ಕೆಲಸದಲ್ಲಿಯೇ ತೊಡಗಿದ್ದರು.

"ಏನು ಬರೆಯುತ್ತಿದ್ದಾರೆ ಅವರು?" ಎಂದೆ.

"ನಾಳೆ ಮುಂಜಾನೆ ಈ 'ಅನಾಥಾಶ್ರಮ'ದಲ್ಲಿ ಮಾನಪತ್ರ ಸಮಾರಂಭವಾಗತಕ್ಕದ್ದದೆ. ಇದು ಸ್ಥಾಪನೆಯಾಗಿ ಒಂದು ವರ್ಷವಾಯಿತು. ಶ್ರೀಮಂತರಿಂದ 'ಫೀ' ಎಂದು ವಸೂಲಾದ ಹಣವೆಷ್ಟು? ಇತ್ಯಾದಿಗಳ ಲೆಕ್ಕ ನಡಿಸಿದ್ದಾರೆ!"

"ಬಡವರಿಗಾಗಿ ಧರ್ಮಾರ್ಥವಾಗಿಲ್ಲವೇ ಇದು?"

"ಅಹುದು, ತೀರ ಬಡವರಿದ್ದರೆ ಧರ್ಮಾರ್ಥ! ಬಡವರಿಗಾಗಿ ಏರ್ಪಡಿಸಿದ ಸೌಕರ್ಯಗಳ ಲಾಭವನ್ನು ಶ್ರೀಮಂತರಿಗೆ ಧರ್ಮಾರ್ಥ ಕೊಡುವನೆಂದರೆ ಅನ್ಯಾಯವಲ್ಲವೇ?"

'ಅನಾಥಾಶ್ರಮ'ದ ಚಾಲಕರ ಈ ತತ್ತ್ವನಿಷ್ಠೆಯನ್ನು ನೋಡಿ ನನಗೆ ಹಿಡಿಸಲಾರದ ಆನಂದವಾಯಿತು. ಮುಂದೆ ರೋಗಿಗಳ ಸಮಾಚಾರ ನೋಡಲು ಹೊರಟೆವು. ಎಲ್ಲಿ ನೋಡಿದಲ್ಲಿಯೂ ತತ್ಪರತೆ; ಸ್ವಚ್ಛತೆ; ಅಚ್ಚುಕಟ್ಟುತನ. ರೋಗಿಗಳ ಮುಖದ ಮೇಲೆ ಸಮಾಧಾನದ ನಗೆಯು ಸೂಸುತ್ತಿತ್ತು. ಅಲ್ಲಿಯವರ ಅರಿವೆ-ಅಂಚಡಿಗಳನ್ನು ನೋಡಿದರೆ ಅವರೆಲ್ಲರಿಗೂ ಒಂದೆ ಬಗೆಯ ವ್ಯವಸ್ಥೆ ಇಡಲಾಗಿದೆಯೆಂದು ಯಾರೂ ಕೂಡಲೆ ಹೇಳಬಹುದಾಗಿತ್ತು.

ದರಿದ್ರರಿಗೆ ಈ ರೀತಿ ಸೌಕರ್ಯ ದೊರೆತದ್ದು ಮಹದಾನಂದ. ಡಾ. ಆನಂದರಾಯನನ್ನು ಮನಸೋಕ್ತವಾಗಿ ಹೊಗಳಿದೆ. ಮುಂದೆ ಸಾಗಿದೆವು; ಸುತ್ತಲಿನ 'ಆನಂದಪಾರ್ಕ'! ಅಲ್ಲಿಯೂ ಎಲ್ಲ ಕಡೆಯಲ್ಲಿ ನಾನಾಬಗೆಯ ಜನರು ಆನಂದದಿಂದ ಹರಟುತ್ತ ವಿಶ್ರಾಂತಿಗಾಗಿ ಕುಳಿತಿದ್ದರು. ಸುತ್ತಲೂ ತರತರದ ಹೂಗಳು. ಅನೇಕ ಬಗೆಯ ಗಿಡಗಳು. ಮುಂದೆ ಅಲ್ಲಿ ಹಾರುತ್ತಿರುವ ಕಾರಂಜಿ. ಸುವಾಸನೆಯ ಕಂಪು. 'ನಾನು ನಂದನವನದಲ್ಲಿರಬಹುದೇ' ಎಂದು ನನಗೆನಿಸಿತು. ಆಕಾಶದ ಕಡೆಗೆ ನೋಡಿದೆ. ಪೂರ್ಣಚಂದ್ರನು ಆನಂದದಿಂದ ನಗುತ್ತಿದ್ದನು. ಸಣ್ಣಸಣ್ಣ ತಾರೆಗಳು 'ಈ ಭೂ-ಲೋಕದ ಸ್ವರ್ಗವನ್ನು ನೋಡಲಾಸಲ್ಲ' ಎಂದು ಕಣ್ಣುಮುಚ್ಚುತ್ತಲೂ, 'ಸ್ವರ್ಗಕ್ಕಿಂತ ಇಲ್ಲಿ ಅದೇನು ಮೇಲ್ಮೆ ಇದೆ' ಎಂದು ಕುತೂಹಲದಿಂದ ಮತ್ತೆ ಕಣ್ದೆರೆದು ನೋಡುತ್ತಲೂ ಇದ್ದುವು. ಹಕ್ಕಿಗಳು ಮಾನವನ ಸಹೃದಯತೆಯ ಗುಣಗಾನಮಾಡುತ್ತ ಹಾಡುತ್ತಿರುವಂತೆ ನನಗೆ ಭಾಸವಾಯಿತು. ಆದರೆ......!

ಪಾರ್ಕಿನಲ್ಲಿ ಅಡ್ಡಾಡುತ್ತಿರುವಾಗ ಅದೇ ಬಿಕ್ಷುಕಿ— ಈಗ ೧೪ ವರ್ಷದ ಹಿಂದೆ ಆನಂದರಾಯನಲ್ಲಿ ದೂಡಲ್ಪಟ್ಟ ತಿರುಕಿ– ಒಂದು ಮೂಲೆಯಲ್ಲಿ ಅಳುತ್ತ ನಿಂತಿದ್ದಳು. ನಾನು ಕೇಳಿದೆ:

'ಯಾರವರು ಅಳುವವರು?'

'ದ್ಯಾವ್ರೂ ನಾನೊಬ್ಬ ತಿರಕೀ ತಿರಗಾಕೀರೀ– ಯಪ್ಪಾ..!'

'ಇಲ್ಲಿಗೇಕೆ ಬಂದಿದ್ದೆ?'

'ನನ್ನ ಕೂಸು!'

'ಏನಾಯ್ತು ಕೂಸಿಗೆ?'

'ಸಾಯಲಾಗಿದೆ ನನ್ನ ಧನ್ಯಾ! ಅದಕ್ಕಷ್ಟ ಔಷದ್ಯಾನ ಕೊಡಿಸರಿ!'

'ಇದು ನಿಮ್ಮಂಥ ಬಡವರಿಗಾಗಿಯೆ ಮಾಡಿದ ದವಾಖಾನೆ– ಇಷ್ಟೇಕೆ ಅಳುವೆ? ಕೂಸಿಗೆ ಔಷಧ ಕೊಟ್ಟೇ ಕೊಡುವರಲ್ಲ!'

'ಇಲ್ಲ ಯಪ್ಪಾ, ಕೂಸಿನ್ನ ಈ ಜಾಗಾದ ಸನ್ಯಾಕ ತರಗೊಡವಲ್ಲರೀ!'

ನನಗೆ ಆಶ್ಚರ್ಯವಾಯಿತು. ಆನಂದರಾಯರ ಕಡೆಗೆ ನೋಡಿದೆ.

'ಹೌದು ಇವಳದು T. B. case; ಲಾಸ್ಟ್ ಸ್ಟೇಜಿಗೆ ಹೋಗಿದೆ. ಇಲ್ಲಿ ಅದು ಗುಣವಾಗಲು ಶಕ್ಯವಿಲ್ಲ. ಇನ್ನು ಸತ್ತಿತೆಂದರೆ ವಿನಾಕಾರಣವಾಗಿ ಅಪಕೀರ್ತಿ! ಅದರ ಜರ್ಮ್ಸ್ ಎಲ್ಲಾ ಕಡೆಗೆ

ವ್ಯಾಪಿಸಿ, ಉಳಿದ ರೋಗಿಗಳಿಗೆ ತ್ರಾಸು ! ನಾನೇ admit ಮಾಡಬೇಡಿರಿ ಎಂದು ಹೇಳಿದ್ದೇನೆ.'

'ಇದು ಅನ್ಯಾಯವಲ್ಲವೇ?'

'ಒಂದು ರೋಗಿಯನ್ನು ನೆಟ್ಟಗೆ ಮಾಡಲು ಪ್ರಯತ್ನಮಾಡಿ ಸಾವಿರ ರೋಗಿಗಳನ್ನು ಕೊಲ್ಲುವದು ನ್ಯಾಯವೇ? ಇವಳ ಕೂಸಿಗೆ Pure blood ಬೇಕು. ಯಾರು ಕೊಡುವವರು? ಮೇಲಾಗಿ ಇಂಥ ತೀರ ಭಿಕಾರಿಗಳನ್ನೆಲ್ಲಾ ತೆಗೆದುಕೊಂಡರೆ 'ಆಶ್ರಮದ ವ್ಯವಸ್ಥೆಯೇ ಕೆಡುವದು.!'

ಇದು ನನಗೆ ತಿಳಿಯದಂತಾಯಿತು; ನಾನು ಕೇಳಿದೆ: 'ತೀರ ಭಿಕಾರಿಗಳನ್ನೆಲ್ಲಾ ತೆಗೆದುಕೊಂಡರೆ ವ್ಯವಸ್ಥೆ ಏನು ಕೆಡುವದು?'

'ಇನ್ನೇನು ಹೇಳಲಿ! ಈ ಭಿಕಾರಿಗಳೆಂದರೆ ಶುದ್ಧ ಪಶುಗಳು. ಒಮ್ಮೆ ಇವರ ಕೇಸ್ admit ಮಾಡಿತೆಂದರೆ ಪೂರಾ ಗುಣವಾಗುವ ವರೆಗೆ ಬಿಡಲಿಕ್ಕೆ ಬರುವದಿಲ್ಲ. ಇವರಿಗೆ ಸ್ವಚ್ಛತೆಯ ಸುದ್ದಿಯೇ ಗೊತ್ತಿಲ್ಲ. ಸ್ವಚ್ಛತೆಯ ಅಭಾವದ ಮೂಲಕ ನಾನಾತರದ ಕ್ರಿಮಿಗಳು ಉತ್ಪನ್ನವಾಗಿ ಪಸರಿಸುತ್ತವೆ. ಒಂದು ರೋಗಿಯನ್ನು ತಕ್ಕೊಂಡರೆ ಇಂಥವರು ಸಾವಿರಾರು ಜನ ಬಂದು ಧುಮುಕುವರು. ಹೋಗುವದು ಬರುವದು ಸುರುವು ಆಯಿತೇ! ಇಂಥ ರೋಗಿಗಳು ಇಲ್ಲಿ ತಿರುಗಾಡಹತ್ತಿದರೆ ನೀವೇ ಹೇಳಿರಿ.. ಇಲ್ಲಿಯ ಹವೆಯು ಆರೋಗ್ಯಕರವಾಗಿ ಉಳಿದೀತೇ? 'ಆಶ್ರಮ'ವು ಆರೋಗ್ಯ ಭುವನ ಹೋಗಿ, ಇಂಥ ತಿರುಕರ ವಾಸದಿಂದ ಕೇವಲ ಅನಾರೋಗ್ಯ ಭುವನವೇ ಆದೀತು. ಅದಕ್ಕಾಗಿ ನಾವು ಈಗೊಂದು ಠರಾವು ಪಾಸು ಮಾಡಿದ್ದೇವೆ.'

'ಏನೆಂದು?'

'ಯಾವನಾದರೂ ರೋಗಿಯನ್ನು ಆಸ್ಪತ್ರೆಯಲ್ಲಿ ತಕ್ಕೊಳ್ಳುವುದರಿಂದ ಆಸ್ಪತ್ರೆಯ ಸಿಸ್ತಿಗೆ ಭಂಗಬರುತ್ತದೆಂದು ಆಸ್ಪತ್ರೆಯ ಮೇಲಧಿಕಾರಿಗಳಿಗೆ ಕಂಡುಬಂದಲ್ಲಿ, ಅಂಥಾ ರೋಗಿಗಳನ್ನು ತೆಗೆದುಕೊಳ್ಳಬಾರದು ! ಒಂದು ವೇಳೆ ತೆಗೆದುಕೊಂಡಿದ್ದರೆ ಕೂಡಲೇ ಹೊರಗೆಹಾಕಬೇಕು !'

'ಹೀಗೆ ಠರಾವು ಮಾಡುವದಕ್ಕೆ ಪ್ರವರ್ತಕರಾದ ಪುಣ್ಯಾತ್ಮರಾರು?'

'ಅದೊಂದು ದೊಡ್ಡ ಇತಿಹಾಸವೇ ಆಗಿದೆ. ಬಡವರಿಗಾಗಿ ಧರ್ಮಾರ್ಥ ಆರೋಗ್ಯಭುವನವೆಂದರೆ ಕೇಳುವಿರಾ, ಸಹಸ್ರಾವಧಿ ಜನರು ಬರಹತ್ತಿದರು. ಇಲ್ಲಿ ೫೦ ಜನರಿಗಾಗಿ ವ್ಯವಸ್ಥೆ ಮಾಡಿದೆ. ಉಳಿದ ಜನರನ್ನೆಲ್ಲ ತಿರುಗಿ ಕಳಿಸಲೇಬೇಕು. ಯಾರನ್ನು ಕಳಿಸಬೇಕು? ಮೊದಲು ಬಡವರಿಗೆ admit ಮಾಡಬೇಕೆಂದರೆ ಶ್ರೀಮಂತರನ್ನು ಹೊರಗೆಹಾಕಬೇಕು; ಅದು ಹೇಗೆ ಶಕ್ಯವಿದೆ ಹೇಳಿರಿ. ಶ್ರೀಮಂತರು ಹೊರಗೆ ದೂಡಲ್ಪಟ್ಟರೆ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಅವರಿಗೆ ಬಹುಮತವಿದೆ. ಅವರು ಇಲ್ಲಿಯ ವ್ಯವಸ್ಥಾಪಕರನ್ನು ಕಡಿಮೆಮಾಡಿಸಿ ತಮಗೆ ಅನುಕೂಲ ಡಾಕ್ಟರನ್ನು ತರಬಹುದು.'

'ಆದರೆ ಇದು ಬಡವರಿಗಾಗಿ, ಅನಾಥರಿಗಾಗಿ ಕಟ್ಟಿಲ್ಲವೆ?'

'ಅಹುದು ! ಕೇವಲ ಬಡವರೇ ಇಲ್ಲಿ ಬಂದರೆ ಅದೆಲ್ಲಾ ಸರಿ. ಶ್ರೀಮಂತರೂ ಬರುತ್ತಾರೆಂದಬಳಿಕ ಅವರನ್ನು ಹೇಗೆ ಹೊರಗೆ ಹಾಕಲಿಕ್ಕೆ ಬಂದೀತು?'

'ಯಾಕೆ ಹಾಕಬಾರದು? ಅವರಿಗೆ ಎಲ್ಲಿ ಬೇಕಾದಲ್ಲಿ ಉಪಚಾರ ಹೊಂದಲಿಕ್ಕೆ ಅನುಕೂಲವಿರುತ್ತದೆ.'

'ಅದೆಲ್ಲಾ ನಿಜ! ಬಡವರ ದವಾಖಾನೆಯೆಂದರೆ ಅದೊಂದು ಸರಕವೇ ಆದೀತು. ಸಣ್ಣಪುಟ್ಟ ಬೇನೆ-ಬೇಸರಿಕೆಗಳ ಪರಿವೆ ಅವರಿಗೆ ಇರುವದೇ ಇಲ್ಲ. ದೊಡ್ಡ ಬೇನೆಬಂದಾಗ ಇಲ್ಲಿ ಬಂದರೆಂದರೆ ತಿಂಗಳುಗಟ್ಲೆ ಇರಬೇಕಾಗುವದು. ಇದ್ದು ಉಪಚಾರ ಹೊಂದುವದೂ ಶಕ್ಯವಿಲ್ಲ. ಪಥ್ಯಪದಾರ್ಥ ತಿನ್ನಲೂ ಶಕ್ಯವಿಲ್ಲ. ಇಲ್ಲಿ ಸುಮ್ಮನೆ ಬಿದ್ದುಕೊಂಡು ಶಾಂತತೆ ಕಾಯುವದೂ ಗೊತ್ತಿಲ್ಲ. ಏನಾದರೂ ಆಯಿತೆಂದರೆ ತೀರಿತು; ಕಾಗೆಯ ಬಳಗದಂತೆ ಸಾವಿರಾರು ಜನರು ಬರುವದು, ..ಗೋಳೋ ಎಂದು ಅಳುವದು. ಇದರಿಂದ ನೆರೆಹೊರೆಯ ರೋಗಿಗಳ ಆರೋಗ್ಯವು ನಿದ್ರಾಭಂಗದಿಂದಲೊ ಬೇರೆ ಕಾರಣದಿಂದಲೊ ಕೆಡುವದು. ಇವರೆಲ್ಲಾ ಕೆಟ್ಟಕೆಟ್ಟ ಹವೆಯಲ್ಲಿದ್ದು ನಾನಾತರದ ರೋಗಪೀಡಿತ ಜನರ ಸಂಸರ್ಗದಲ್ಲಿರುವದಾದ್ದರಿಂದ, ಮೇಲಿಂದಮೇಲೆ ಬಂದುಹೋಗುವದರಿಂದ ಇಲ್ಲಿ ಸೊಂಕುರೋಗಗಳ ಕ್ರಿಮಿಗಳನ್ನೇ ಸ್ವಾಗತಿಸಿದಂತೆ; ಹೀಗಾಗಿ ಇತ್ತಿತ್ತಲಾಗಿ ಇಂಥ ಭಿಕಾರಿಗಳನ್ನು ತಕ್ಕೊಳ್ಳದೆ ಇರುವದು ಆಸ್ಪತ್ರೆಯ ಆರೋಗ್ಯದ ದೃಷ್ಟಿಯಿಂದ ಅವಶ್ಯವೆನಿಸಿತು.'

'ಆದರೆ ಇಂಥವರು ಊರಲ್ಲಿ ನಿತ್ಯ ತಿರುಗಾಡುವರಲ್ಲ! ಅಲ್ಲಿ ಇವರು ಕ್ರಿಮಿಗಳನ್ನು ಹಬ್ಬಿಸುವದಿಲ್ಲವೇ? ಇವರ ಆರೋಗ್ಯ ಕೆಡುವದರಿಂದ ನಗರದ ಆರೋಗ್ಯ ಕೆಡುವದಿಲ್ಲವೇ?'

'ಅದೆಲ್ಲಾ ಸರಿ! ಆರೋಗ್ಯಭುವನದ ಮಟ್ಟಿಗೆ ಆರೋಗ್ಯ ಕಾಯುವದು ನಮ್ಮ ಕೆಲಸ. ಊರ ಆರೋಗ್ಯವೂ ಇಂಥವರಿಂದ ಕೆಡುತ್ತದೆ; ಮಾಡುವದೇನು?'

'ಅದೆಲ್ಲ ಸುಳ್ಳು; ಕೇವಲ ಶ್ರೀಮಂತರ ಸ್ವಾರ್ಥ!' ಎಂದು ಎನ್ನಬೇಕೆಂದಿದ್ದೆ; ಆದರೆ ಶಬ್ದಗಳು ಹೊರಬೀಳಲಿಲ್ಲ. ಅನಾಥರಿಗೆಂದು ಕಟ್ಟಿಸಿದ ಆಶ್ರಮವು ನಿಜವಾಗಿ ಸಾಧಿಸುತ್ತಿರುವ ಉದ್ದೇಶವೇನು?

ಭಿಕ್ಷುಕಿಯು ಅಲ್ಲಿಯೇ ಅಳುತ್ತ ನಿಂತಿದ್ದಳು. ನನಗೆ ಬಹಳ ಕನಿಕರವೆನಿಸಿತು. 'ಇಗೋ, ಈ ರೂಪಾಯಿಯನ್ನು! ಬೇಕಾದಲ್ಲಿ

ವಿಶ್ವವನ್ನೆಲ್ಲ ತೋರಿಸಿ ಕೊಡಲು
ದ್ವಾಪರದಲ್ಲಿ ವಿಶ್ವರೂಪ ;
ಕಲಿಯುಗದಲ್ಲಿ
ಜಯಂತಿ!

ಹೋಗಿ ನಿನ್ನ ಕೂಸಿಗೆ ಔಷಧ ಕೊಡಿಸು! ಇಲ್ಲಿ ಮಾತ್ರ ಬರಬೇಡ....' ಎಂದು ಹೇಳಿ ಅವಳನ್ನು ಕಳಿಸಿಬಿಟ್ಟೆ.

ಇಷ್ಟರಲ್ಲಿ ರಾತ್ರಿ ೮ ಹೊಡೆಯಿತು. ಭಿಕ್ಷುಕಿಯು ತಿರುಗಿ ಹೊರಟನಂತರ ಒಂದು ಕ್ಷಣವಾದರೂ ಅಲ್ಲಿರಲು ನನ್ನ ಮನಸ್ಸು ಒಪ್ಪಲೊಲ್ಲದು. ನಾನೂ ಮನೆಗೆ ಹೊರಟೆ. ಪಾರ್ಕಿನಿಂದ ಕಾಲೇಜ್ ವಿದ್ಯಾರ್ಥಿಗಳು ನಾನಾವಿಷಯದ ಮೇಲೆ ಹರಟುತ್ತ, ಒಬ್ಬೊಬ್ಬರೇ ಬೆಂಚುಗಳಿಂದ ಏಳತುತ್ತಿದ್ದರು. ಸುಂದರ ಕುಸುಮ ಗಳಿಂದ ಅಲಂಕೃತರಾದ—ನಾನಾಬಗೆಯ ಪತ್ತಲದ ಕುಮಾರಿಯರೂ ಹೂವಿನ್ನಮಂಟಪಗಳಿಂದ ಒಬ್ಬೊಬ್ಬರೆ ಹೊರಬಿದ್ದರು. ಒಬ್ಬಿಬ್ಬರು ಪೆನ್ಶನ್‌ದಾರರು ಆಧುನಿಕ ಯುವಕರ ಮೇಲೆ ಪ್ರವಚನ ನಡೆಯಿಸಿದ್ದರು. ಎಷ್ಟೋ ದೇಶಭಕ್ತರು 'ಹಿಂದುಸ್ಥಾನಕ್ಕೆ ಬೇಕಾದದ್ದು ಸಂಪೂರ್ಣಸ್ವರಾಜ್ಯ. ಫೇಡರೇಶನ್ನಿನಿಂದ ಏನೂ ಪ್ರಯೋಜನವಿಲ್ಲ' ಎಂದು ಮಾತನಾಡುತ್ತಿದ್ದರು. 'ಅಸ್ಪೃಶ್ಯತಾ ನಿವಾರಣೆಗಾಗಿ ಪ್ರಾಂತಿಕ ಸರಕಾರವು ಏನೂ ಪ್ರಯತ್ನ ಪಡಲೊಲ್ಲದು' ಎಂದು ಒಬ್ಬ; 'ಅಸ್ಪೃಶ್ಯತಾ ನಿವಾರಣೆಮಾಡುವ ಪ್ರಯೋಜನವೇ ಇಲ್ಲ; ಎಲ್ಲಿ ಉಳಿದಿದೆ ಅಸ್ಪೃಶ್ಯತೆ?' ಎಂದು ಮತ್ತೊಬ್ಬ; 'ಅಸ್ಪೃಶ್ಯರಿಗೆ ರಿಝರ್ವ್ ಸೀಟ್ ಇಟ್ಟದ್ದು ಬಹಳೇ ಅನ್ಯಾಯ'-ಇಟ್ಟರೇನಾಯಿತು! ಆರಿಸಿ ಬರುವವರೆಲ್ಲಾ ಅಸ್ಪೃಶ್ಯರಲ್ಲಿಯ ಶ್ರೀಮಂತರೇ-ಮುಂದೆ ಬಂದವರೇ-- ಸುಧಾರಿಸಿ ದವರೇ- ಅಲ್ಲವೇ? ಅಂದಮೇಲೆ ಭಯವೇನಿದೆ?' ಎಂದೊಬ್ಬ. ನಾನಾ ವಿಷಯಗಳ ಮೇಲೆ ಹರಟುತ್ತ ಜನರು ಹೊರಬಿದ್ದರು. ನಾನೂ ಮನೆಗೆ ಹೊರಟೆ. ವಿದ್ಯುದ್ದೀಪವು ದಾರಿಯಮೇಲೆ ಒಂದು ಬಗೆಯ ಮಿಂಚನ್ನು ಹೊಚ್ಚಿತ್ತು; ಆದರೆ ದಾರಿ ಮಾತ್ರ ಎಂದಿನಂತೆ ತಗ್ಗುದಿನ್ನೆ ಇದ್ದಿತ್ತೇ? ಮೇಲೆ ಚಂದ್ರ ಹಾಲಿನಂಥ ಬೆಳದಿಂಗಳನ್ನು ಸೀರುತ್ತಿದ್ದ..ನೋಡಿದೆ. ದೊಡ್ಡ ಕಲಂಕವಾದರೂ ಅವನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಚಂದ್ರನಿಗೆ ಕಲಂಕವೇಕೆ? ಮುಂದೆ ಸಾಗುತ್ತಲೇ ಮೋಟಾರೊಂದು ಸರ್ರನೆ ಹಾಯ್ದು ಹೋಯಿತು. ಗಾಳಿ ಬೀಸಿತು. ಮೋಟಾರಿನಲ್ಲಿ ಕುಳಿತ ವ್ಯಕ್ತಿಯ ಸುಗಂಧವು ಗಾಳಿಯೊಡನೆ ನನಗೆ ಮುಟ್ಟಿತು; ಆದರೆ ಮೋಟಾರಿನಿಂದ ಎದ್ದ ಧೂಳು ನನ್ನ ಮೂಗನ್ನು ಮುಚ್ಚಹಚ್ಚಿತು. ಆಕಾಶದಲ್ಲಿಯ ಅಸಂಖ್ಯ ತಾರಾಗಣಗಳಲ್ಲಿ ಕೆಲವು ನಗುತ್ತ "ನಾವು ಚಿರಸ್ಥಾಯಿ" ಎಂದು ಸಾಗಿದ್ದುವು. ಸರ್ರನೆ ತಾರೆಯೊಂದು ಕಡಿದು ಬಿದ್ದಿತು. ಆದರೆ ನನ್ನ ಮನಸ್ಸು ಅತ್ತಕಡೆಗೆ ಇರಲೇ ಇಲ್ಲ.

ಆ ಭಿಕ್ಷುಕಿ, ದರಿದ್ರರಿಗಾಗಿ ಏರ್ಪಡಿಸಿದ ಈ ಅನಾಥಾ ಶ್ರಮ; ಕೆಟ್ಟ ಹವೆಯಲ್ಲಿ ದುಡಿಯುವವರಿಗಾಗಿ ರಚಿಸಿದ ಈ ಪಾರ್ಕ್, ಇದರಲ್ಲಿಯ, ನೆರೆದ ಈ ಜನಸಮುದಾಯ; ನಮ್ಮ ತಂದೆ ಆಶ್ರಯ ಕೊಟ್ಟು ಕಲಿಸಿದ ಆನಂದರಾಯ- ಅವನ ಈಗಿನ ವಿಚಾರ, ರಮಾಕಾಂತನ ವ್ಯವಸ್ಥಾಪನೆ, ಭಲೆ! ನಗರ ಪಿತಾಮಹರ ತೆರಾವು! ಒಂದಕ್ಕೊಂದು ಸಂಬಂಧ? ಚಂದ್ರ ನಲ್ಲಿಯ ಕಲಂಕದ ಅರ್ಥವಾಯಿತು. ಮೋಟಾರಿನ ಸುಗಂಧ ಮಿಶ್ರಿತ ಧೂಳಿನ ತಿರುಳು ತಿಳಿಯಿತು. ನಗುತ್ತ ಸಾಗಿದ ತಾರೆಗಳ ಮಿಂಚಿನ ಬಣ್ಣ ಹೊಳೆಯಿತು. ಕಳಚಿ ಬಿದ್ದ ತಾರೆಯ ಗೋಳು ಮನಸ್ಸಿನಲ್ಲಿ ಮೂಡಿತು.

"ಎಷ್ಟು ರಿಝರ್ವ್ ಇಟ್ಟರೇನು? ಏನು ಮಾಡಿದರೇನು? ಆರಿಸಿ ಬರುವವರು ಸುಧಾರಿಸಿದವರೇ!" ಎಷ್ಟು ಅರ್ಥವಿದೆ ಇದರಲ್ಲಿ! ಸುಧಾರಣೆ- ಸುಧಾರಣೆ-ನಗರದ ಆರೋಗ್ಯ ಸುಧಾರಣೆ! ಇದೇ ಅಲ್ಲವೆ ಸುಧಾರಣೆ ಎಂದರೆ!.... ಮುಂದೆ ಸಾಗಿದೆ.

"ಚಲೋ ಚಲೋ.... ಚಲೋ" ಎಂದು ಅರ್ಭಟಿಸುತ್ತ ಟಾಂಗೆಯವನು ಸಾಗಿದ್ದ. ಕುದುರೆಯ ಬಾಯಿಂದ ಬುರುಗು ಸುರಿಯುತ್ತಿತ್ತು. 'ಹೌದು- ಇದು ಸುಧಾರಣೆ' ಎಂದು ಮುಂದೆ ನೋಡಿದೆ. ತಿರುಕಿಯು ಬೀದಿಯ ಬಳಿಯ ಗಿಡದಬುಡದಲ್ಲಿ, ಮಗ್ಗುಲಲ್ಲಿ ಕೂಸನ್ನಿರಿಸಿಕೊಂಡು ಸ್ವಸ್ಥವಾಗಿ ಮಲಗಿದ್ದಳು.

——o——

ದಿವಂಗತ ವಿಜಯ ಬೆಟಗೇರಿ ಬಿ. ಎ. ಅವರ ಕತೆಗಳ ಸಂಗ್ರಹ

'ಮುಗಿಲ ಮಲ್ಲಿಗೆ'

ತಾರುಣ್ಯದ ರಮ್ಯಜೀವನದ ಕನಸಿನ ರಂಜಕ ಚಿತ್ರಗಳೇ ಇದರಲ್ಲಿವೆ.

ಅಚ್ಚಾಗುತ್ತಲಿದೆ. ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ!

ಕರ್ಣಾಟಕದಲ್ಲಿ ಹಿಟ್ಲರ್

(ಅಸಂಬದ್ಧ ಅಪನ್ಯಾಸಗಳು)

●

(ಈ ಲೇಖನದ ಪುನರ್ಮುದ್ರಣದ ಅಧಿಕಾರವು ಲೇಖಕನದು.)

ಲೇಖಕರು ೧೯೪೫ ನೆಯ ಇಸವಿಯ ಕರುನಾಯದ ವಾರ್ತೆಯನ್ನಿಲ್ಲಿ ಬರೆದಿದ್ದಾರೆ; 'ದಿಕ್ಕಾಲಾದ್ಯನವಚ್ಛಿನ್ನ' ರವರು!

ಕರ್ಣಾಟಕಕ್ಕೆ ಇಂತಹ ಹಿಟ್ಲರ್ ಬೇಕಾಗಿದ್ದಾನೆಯೆ? ಜರ್ಮನಿಯೇನು ಬೇಕೆಂದು ತಪಸ್ಸು ಮಾಡಿದ್ದಿತೇ? ಆಳಿಸಿಕೊಳ್ಳಲು ಜಗತ್ತು ಸಿದ್ಧವಿದ್ದುದನ್ನು ಮನಗಂಡ ಹಿಟ್ಲರ್ ಆಳುವುದಕ್ಕೆ ಸಿದ್ಧನಾಗಿನಿಂತ ಜರ್ಮನಿಯಲ್ಲಿ! ಕರ್ಣಾಟಕ ಹಿಟ್ಲರನೂ ಹಾಗೆಯೆ!

●

ಶ್ರೀ. ಶಿವರಾಮ ಕಾರಂತ

ಅವರಿಂದ

ಹಿಟ್ಲರನ ಜನ್ಮವೃತ್ತಾಂತ, ಮುಂದ್ಗಾಳುತನ, ಆಸೆ, ಗೊತ್ತುಗುರಿ (ಈಗಾಗಲೇ ತಿಳಿದ ಮತ್ತು ತಿಳಿಯದ)– ಇವೆಲ್ಲವುಗಳನ್ನು ತಿಳಿಯುವುದು ಕರ್ಣಾಟಕಿಗಳ ಆದ್ಯ, ಅವಶ್ಯ, ಏಕಮಾತ್ರಕರ್ತವ್ಯ. ಮೊದಲು ಚರ್ಚಾಸ್ಪದವೆನಿಸಬಹುದಾದ 'ಕರ್ಣಾಟಕಿ' ಪದದ ವಿಚಾರ. ಅಹುದು– ಕರ್ಣಾಟಕಿಗಳು ನಾವು, ಕನ್ನಡಿಗರಲ್ಲ. ಕಾರಣ– ನಮ್ಮದು ಮುಖ ನೋಡಿದ ಮಾತ್ರಕ್ಕೆ ಮಂಗಾಟಕ್ಕೆ ತೊಡಗಿಸುವ "ಕನ್ನಡಿ" ಸಂಸ್ಕೃತಿಯಲ್ಲ; ಬದಲು ಕರ್ಣವನ್ನು ರಟ್ಟಿಸುವ ಕರ್ಣಾಟಕ. ಈಗ ಮೊದಲು ಹೇಳಿದ ಆದ್ಯಕರ್ತವ್ಯವನ್ನು ಕುರಿತು : ನಾವು ಹಿಟ್ಲರನ ವಿಚಾರ ತಿಳಿಯಬೇಕೆಂದೂ, ನಮ್ಮ ನಾಡಿಗೆ ಅವನೇ ಏಕಮಾತ್ರ ವಿಶ್ವಾಸಾರ್ಹನಾದ ಮುಖಂಡನೆಂದೂ ಅವನೇ ಹೇಳುವುದರಿಂದ ನಾವು ನಂಬಬೇಕಾಗಿದೆ. ಈ ಮಾತನ್ನು ವಿರೋಧಿಸುವುದು ಕರ್ಣಾಟಕಿಗಳ ಧರ್ಮಕ್ಕೆ ವಿರುದ್ಧವೆಂದು ಹೇಳಬೇಕಿಲ್ಲವಷ್ಟೆ.

ಹಿಟ್ಲರನ ಜನ್ಮ ದಕ್ಷಿಣಕನ್ನಡಜಿಲ್ಲೆ "ಹಿರಿಯಡ್ಕ"ದಲ್ಲಾಯಿತು. ಹುಟ್ಟಿದುದು ತುಳುನಾಡೆಂದು ಹರ್ ಪಣಿಕರ್‌ರವರು ಹೇಳುವರಾದರೂ ಇದು ಕೇವಲ ತಪ್ಪು. ತೀರ ಮೊದಲಿಗೆ ಹಿರಿಯಡ್ಕದವರು ಮಾತ್ರವೇಕೆ, ಎಲ್ಲ ತುಳುವರೂ ಕರ್ಣಾಟಕ ಭಾಷೆಯನ್ನು ಆಡುತ್ತಿದ್ದರೆಂದೂ, ಆ ನಾಡು ಕೆಲವು ಸೊಕ್ಕಿನ ತೌಳುವ ಅರಸರ ಕರಕ್ಕೆ ಸಿಕ್ಕಿದಬಳಿಕ, ತುಳುಭಾಷೆಯು ಅಲ್ಲಿ ಬಳಕೆಗೆ ಬಂದಿತೆಂದೂ ಬಲ್ಲಿದರು ಅನ್ನುತ್ತಾರೆ. "ತುಳು" ಎಂಬ ಮಾತೇ ತುಳಿದವರು ಎಂಬುದರಿಂದ ಬಂದಿತು. ತುಳಿದವರ ಭಾಷೆಯು ಅಲ್ಲಿಯ ತುಳಿಸಿಕೊಂಡವರಿಗೂ ಬಂದಿತು. ಹಿಟ್ಲರನು ತುಳುನಾಡಿನ ಶಿವಳ್ಳಿಯವರಂತೆ ಬಿಳಿಯನು; ಆರ್ಯರಕ್ತ ಧರಿಸಿದವನು. ಅಂತೆಯೇ ಅವನು ಚಿಕ್ಕವನಾಗಿದ್ದಾಗ, ಗೋಪಾಲಕನಾಗಿ ದನಕರುಗಳನ್ನು ಮೇಯಿಸುತ್ತ, ಒಯಲುಗಾವಲ್ಲಿ ಮಲಗಿಕೊಂಡು. ಗಗನದಲ್ಲಿ ಸಂಚರಿಸುವ ಮುಗಿಲನ್ನು ಕಾಣುತ್ತ ಕಾಣುತ್ತ– ತನ್ನೀ ನಾಡು ತಿರುಗಿ ಕರ್ಣಾಟಕವಾಗುವುದೆಂದು!.. ಎಂದು ಹಂಬಲಿಸುತ್ತಿದ್ದನು. ಹಿಟ್ಲರನ ಕೆಲವು ಆಪ್ತರು, 'ಈಗಲೂ ಹಿಟ್ಲರನ ತಾಯಿ ಹಿರಿಯಡ್ಕದಲ್ಲಿ ಜೀವಂತವಾಗಿರುವಳು' ಎನ್ನುತ್ತಾರೆ. ಸ್ವತಃ ಹಿಟ್ಲರನು ಈ ವಿಷಯದಲ್ಲಿ ಮೌನನು. ತಾನು ಆರ್ಯನು; ಕರ್ಣಾಟಕ ತನ್ನದು; ವಿಶಾಲಕರ್ಣಾಟಕವೊಂದು ಸ್ಥಾಪನೆಯಾಗುವತನಕ ತನ್ನ ಪ್ರಾಣವು ಕೊನೆಗಾಣದು..ಎನ್ನುತ್ತಾನೆ.

ಹರ್ ಹಿಟ್ಲರನು ಬೆಳಕಿಗೆ ಬಂದ ವಿಚಾರ: ಅವನ ಪ್ರಥಮ ಪರಿಚಯವು ಜಗತ್ತಿಗೆ ಉಂಟಾದುದು ಗಡುಗಿನಲ್ಲಿ. ಅಲ್ಲಿಯ ಹತ್ತಿಗಿರಣಿಯೊಂದರಲ್ಲಿ ಸಾಮಾನ್ಯ ಕೂಲಿಯಂತೆ ದುಡಿಯುತ್ತಿದ್ದ ಅವನು, ಒಂದು ದಿನ ತನ್ನ ಮಾಲಕನು ತನ್ನನ್ನು ತುಚ್ಛವಾಗಿ ಕಂಡನೆಂದು ಹೌಹಾರಿ, ಅವನನ್ನು ದಬಾಯಿಸಿದನಂತೆ. ಆ ಗಳಿಗೆಯಿಂದ ಅವನು ಉಳಿದ ಕೂಲಿಗಳಿಗೆ ಮುಖಂಡನಾದನು. ಅವನ ಹೆಸರು ಪತ್ರಿಕೆಗಳಿಗೆ ಜಪಮಂತ್ರವಾಯಿತು.

ಅಂತಹದೇ ಇನ್ನೊಂದು ತಪ್ಪಿಗಾಗಿ, ಆಗ ಅಧಿಕಾರದಲ್ಲಿ ಕರ್ಣಾಟಕ ಪ್ರಾಂತದ ಕಾಂಗ್ರೆಸ್ ಸರಕಾರವು ಅವನನ್ನು ಕೈದಿಸಲ್ಲಿಸಿತು. ಇಷ್ಟೆಲ್ಲ ಹಿಂದಿನ ಮಾತುಗಳು, ಎಲ್ಲರಿಗೂ ತಿಳಿದ ಸಂಗತಿಗಳು. ಈಗ ಕಾಂಗ್ರೆಸ್ಸು ಸರಕಾರವನ್ನು ಸದೆಬಡಿದ ಹಿಟ್ಲರನು ಅಖಿಲಕರ್ಣಾಟಕದ ಫ್ಯೂರರನಾಗಿದ್ದಾನೆ. ಅವನ ಯಶಸ್ಸು ಸುಲಭವಾಗಿ ದೊರೆಯಲಿಲ್ಲ. ಡ್ಯೂಕ್ ಗ್ರಿಗ್‌ಡರ್, ಹರ್ ಕಿಜಲಿಸ್, ಕೆರ್‌ಹಾರ್ಡ್ ರಹೊಯಿ, ಡಚೆಸ್ ಲಕಮ್‌ವಿಡಿ ಇಂಥವರನ್ನು ಸೆರೆಯಲ್ಲಿರಿಸಿದ ಬಳಿಕ ಸಾಧ್ಯವಾಯಿತು. ಅವರನ್ನು ಸೆರೆಹಿಡಿಯುವ ತನಕ ಪಾಪದ ಈ ಕಾಂಗ್ರೆಸ್ಸಿನ ಜನಗಳಿಗೆ ಅದರ ಸುಳಿವೇ ಹತ್ತಲಿಲ್ಲ. 'ಅಂಥ ಪ್ರಸಂಗವಿದ್ದಿದ್ದರೆ ಗಾಂಧಿಯವರು ನಮಗೆ ತಿಳಿಸದಿರುತ್ತಿದ್ದರೇ!' ಎಂದು ಹೇಳುತ್ತಿದ್ದರು. ಹಿಟ್ಲರನು ಫ್ಯೂರರನಾದುದೇ ತಡ; ಗಾಂಧಿಯು ಹಿಮಾಲಯವನ್ನು ಸೇರಬೇಕಾಯಿತು.

ಕಾರಾಗ್ರಹದಲ್ಲಿಯೂ ಜೈಲುಶಿಬ್ಬಂದಿಯಲ್ಲಿ ಸೊಕಿಯುಲಿಸಮನ್ನು ತನ್ನ ವರ್ಚಸ್ಸಿ

ನಿಂದ ಹೆಚ್ಚಿಸಲುಯತ್ನಿಸಿದ ಡಚೆಸ್ ಲಕ್ಸೆಮ ಬರ್ಗಿಯನ್ನು ಫ್ಯೂರರನು ಟ್ರೇಸನ್ನಿಗಾಗಿ ಕೊಲಿಸಬೇಕಾಯಿತು. ಆದರೆ ಬರಿಯ ೧೦,೦೦೦ ಜನರ ಸೆರೆ ಇಲ್ಲವೆ ಮರಣದಿಂದ ಆವನು ಗಳಿಸಿದ ವಿಜಯವು ಪ್ರಪಂಚದ ಅತ್ಯಂತ ಹಿರಿದಾದ ಅಹಿಂಸಾತ್ಮಕ ಕ್ರಾಂತಿ ಯೆಂದು, ಗಾಂಧಿಯವರೊಬ್ಬರನ್ನು ಬಿಟ್ಟು ಉಳಿದೆಲ್ಲರೂ ಸಾರುತ್ತಾರೆ. ಈಗ ನಾವು ಫ್ಯೂರರನು ಮಾಡಿದ ಸಾಹಸಗಳ ವಿಮರ್ಶೆ ಯನ್ನು ಮಾಡುವ: ಬೆಳ್ಗಾವಿ, ವಿಜಾಪುರ, ಕಾರವಾರ, ಕುಂದಾಪುರ, ಕೊಡಗು ಬಳ್ಳಾರಿಗಳನ್ನೆಲ್ಲ ಕೂಡಿಸಿ, ಅವನು ವಿಶಾಲ ಕರ್ಣಾಟಕದ ತಳಹದಿಯನ್ನು ಹಾಕಿದ್ದಾನೆ. ಹಿಂದಿನ ಕಾಂಗ್ರೆಸ್ ಸರಕಾರವು ಕೆಲ ವೊಂದು ಕನ್ನಡದ ಊರುಗಳನ್ನು ತೆಲುಗರ ವೆಂದೂ ಇನ್ನೂ ಕೆಲವು ತಮಿಳರವೆಂದೂ ಕೊಟ್ಟಿದ್ದರೂ, ಫ್ಯೂರರನು ಆದನ್ನು ಆಕ್ರಮಿಸಿ ನಿಂತನು. ನೃಪತುಂಗನ ಕರ್ಣಾ ಟಕವನ್ನು ನಾಚಿಸುವ ವಿಶಾಲ ಕರ್ಣಾ ಟಕದ ಹೆಮ್ಮೆ ನಮ್ಮ ಫ್ಯೂರರನದು.

'ಕರ್ಣಾಟಕವು ಕೇವಲ ಕರ್ಣಾಟಕಿ ಆರ್ಯರ ಸೊತ್ತು' ಎಂದು ಕರ್ಣಾಟಕಿ ಆರ್ಯರಿಗೆ ನಾವು ಹೇಳಬೇಕಿಲ್ಲವಷ್ಟೆ. ಆದುದರಿಂದಲೇ ಫ್ಯೂರರನು 'ಅಂತರ್ಹಿಂದೀ ಸಾರಸ್ವತ' ಜನರನ್ನು ಪ್ರಜಾತ್ವದಿಂದ ರದ್ದಿಸಿದ್ದಾನೆ. ಸಾರಸ್ವತರು ಇನ್ನು ಮುಂದೆ ಕರ್ಣಾಟಕದಲ್ಲಿ ದ್ರವ್ಯಾರ್ಜನೆ ಮಾಡಕೂಡದು. ಅವರು ಭೂಪಾಲಕ ರಾಗಲಿ, ನೌಕರರಾಗಲಿ, ಇತರ ಉದ್ಯೋಗ ಮಾಡುವುದಾಗಲಿ ಕರ್ಣಾಟಕಿಗಳಿಗೆ ವಿರೋಧವು. ಅವರಿಗೆ ಮತದಾನದ ಅಧಿಕಾರವೂ ಇಲ್ಲ. ಇದರಿಂದಲೇ ಹಲವು ಶ್ರೀಮಂತ ಸಾರಸ್ವತರು ಈಗಾಗಲೇ ಬರಿಗೈಯಿಂದ ಕರ್ಣಾಟಕವನ್ನು ಬಿಟ್ಟು ಉತ್ತರಕ್ಕೆ ಹೋಗಿದ್ದಾರೆ. ತಮ್ಮ ಪೂರ್ವದ ವಸತಿಸ್ಥಾನವಾದ ನೀರಿಲ್ಲದ ಸರಸ್ವತೀ ನದೀತೀರವನ್ನು ಅವರು ಶೋಧಿ ಸುವ ಗಲಭೆಯಲ್ಲಿದ್ದಾರೆ.

ಕರ್ಣಾಟಕದಲ್ಲಿ ಪ್ರಜಾಧಿಕಾರವು ಕೇವಲ ಆರ್ಯರಿಗೆ ಮಾತ್ರ. 'ಯಾರು ಆರ್ಯರು, ಯಾರು ಅನಾರ್ಯರು' ಎಂಬು ದನ್ನು ಗೊತ್ತುಹಚ್ಚಬೇಕಾಗಿದೆ. ಆದಕ್ಕಾಗಿ ಒಂದು ಟೆಸ್ಟಿಂಗ್ ಲೆಬೋರೆಟರಿಯನ್ನು ನಿರ್ಮಿಸಿದ್ದಾರೆ. ಅಲ್ಲಿ ಪ್ರತಿಯೊಬ್ಬನ ರಕ್ತ ದಲ್ಲಿಯ ಶ್ವೇತಾಣುಗಳ ಸಂಖ್ಯೆಯನ್ನು ಲೆಕ್ಕಿ ಸುವರು. ಇದಲ್ಲದೆ ಲಗ್ನದ ಬಗ್ಗೆ 'ಪ್ರೋಟೋಮಿಟರ್' ಟೆಸ್ಟನ್ನು ಏರ್ಪಡಿಸ ಲಾಗಿದೆ. ಈ ಪರೀಕ್ಷೆಗಳಲ್ಲಿ ತೇರ್ಗಡೆ ಯಾದಬಳಿಕೇನೆ ಪ್ರಜಾತ್ವ-ಪ್ರಾಪ್ತಿ.

ಹರ್ ಹಿಟ್ಲರನು ಬಲು ಪ್ರಾಚೀನ ಆರ್ಯವಂಶದವನಂತೆ. ಬನವಸೆಗೆ ಬಂದ ಮಯೂರವರ್ಮನ ಕುಲದವನಂತೆ. ಅಲ್ಲದೆ ಅವನದು ಶುದ್ಧ ಕಾಣ್ವಶಾಖೆಯೆಂದು ಪ್ರೊ. ಹಾಜಪೇರ್‌ರವರು ಸ್ಥಾಪಿಸಿದ್ದಾರೆ.

ಕರ್ಣಾಟಕ ಹಿಟ್ಲರ್

ಫಾರೀನ್ ಸೆಕ್ರೆಟರಿ ಹರ್‌ಮುಚಲಿಸ್‌ರವರು ಸಹ ಶುದ್ಧ ಆರ್ಯರಂತೆ, ಫ್ಯೂರರನು ಕೆಲವೊಂದು ಶಾಸನಗಳನ್ನು ಈ ಆರ್ಯ ಅನಾರ್ಯ ಪ್ರಶ್ನೆಯ ತೀರ್ಮಾನಕ್ಕಾಗಿ ಹೊರಡಿಸಿದ್ದಾನೆ:

"ಎಲ್ಲಾ ಹರಿಜನರು ಗಾಂಧಿಯಂತೆ ಅನಾರ್ಯರು. ಅವರು ಪ್ರಜಾತ್ವವಿಲ್ಲದೆ ಸೇವಾವೃತ್ತಿಯಿಂದಿರುವರಾದರೆ ಕರ್ಣಾ ಟಕದಲ್ಲಿರಬಹುದು. ಆದರೆ ಪ್ರತಿ ಮೂರು ತಿಂಗಳಿಗೊಮ್ಮೆ ತಮ್ಮ ಪಾಸ್‌ಪೋರ್ಟಿಗೆ ಮಂಜೂರಾತಿ ಪಡೆಯಬೇಕು."

"ಕರ್ಣಾಟದಲ್ಲಿ ಅನಾರ್ಯರು, ಸಂತತಿ ಯನ್ನು ಪಡೆಯಲು ಅನರ್ಹರಾದುದರಿಂದ, ಯೋಗ್ಯರೀತಿಯಿಂದ 'ಸ್ಟರಲೈಸ್' ಮಾಡಿಕೊಂಡರೆ, ತಾತ್ಕಾಲಿಕವಾಗಿ ಕರ್ಣಾಟಕದಲ್ಲಿರಬಹುದು."

"ಯಾವತ್ತು ಕುರುಬರು ಅನಾರ್ಯರು. ಕನಕದಾಸನು ಕುರುಬನಲ್ಲವೆಂದೂ, ಅವನ ತಾತನು ಕಾಣ್ವಶಾಖೆಯವನಾದುದರಿಂದ ಶುದ್ಧ ಆರ್ಯನೆಂದೂ ತಿಳಿಯಬೇಕು."

"ಕರ್ಣಾಟಕಿಗಳ ರಾಷ್ಟ್ರಭಕ್ತಿಯನ್ನು ಫ್ಯೂರರನು ನಂಬುತ್ತಾನೆ. ಆದಕಾರಣ ೧೫ ವರ್ಷಕ್ಕೆ ಮೀರಿದ ಪ್ರತಿಯೊಬ್ಬ ತರುಣ-ತರುಣಿಯೂ ಕಡ್ಡಾಯ ಸೈನಿಕ ಶಿಕ್ಷಣಕ್ಕೆ ಸೇರುವರಾಗಿ ನಂಬುಗೆಯಿದೆ. ಈಗಾಗಲೇ ಕರ್ಣಾಟಕದ ಕಂದು ಅಂಗಿಯ 'ನಾಸ್ತಿ' ಪಂಗಡದಲ್ಲಿ ೧೩,೦೦,೦೦೦ ತರುಣ ತರುಣಿಯರಿದ್ದಾರೆ. ಜಗತ್ತಿನಲ್ಲಿ ಶಾಂತಿ ರಕ್ಷಣೆಯನ್ನು ಮಾಡಲು ಫ್ಯೂರರನು ಕೆಲವೊಂದು ರಾಷ್ಟ್ರಗಳನ್ನು ಕರ್ಣಾಟಕಕ್ಕೆ ಸೇರಿಸಬೇಕಾಗಿದೆ. ಆ ಕಾಲಕ್ಕೆ ಕನಿಷ್ಠ ೧೮,೦೦೦,೦೦೦ ಜನರಾದರೂ ಫಿರಂಗಿ ಗ್ರಾಸಕ್ಕೆ ಬೇಕಾಗುವುದು. ಅವರ ಅಸ್ಥಿ-ಮಾಂಸಗಳ ಮೇಲೆಯೇ ವಿಶಾಲಕರ್ಣಾಟ ಕದ ಶಂಕುಸ್ಥಾಪನೆಯಾಗಬೇಕು."

ಹಿಟ್ಲರನು ೧೭-೮-೧೯೪೪ರಲ್ಲಿ ಜರುಗಿದ 'ಕರ್ಣಾಟಕರಿಶ್'ನಲ್ಲಿ ಹೇಳಿದ ಮಾತುಗಳಿವು:

"ಆರ್ಯಾವರ್ತವು ಆರ್ಯರದು. ಆರ್ಯಾವರ್ತವೆಂದರೆ ಅಖಿಲ ಹಿಂದುಸ್ಥಾನ. ಅಲ್ಲಿ ಶಾಂತಿಯು ನೆಲೆಗೊಳ್ಳಲು ವಿಶಾಲ ಕರ್ಣಾಟಕವು ಪ್ರಬಲವೆನಿಸುವುದು ಅವಶ್ಯ. ಆದುದರಿಂದ ಕರ್ಣಾಟಕದ ಯಾವತ್ತು ಜನರು ಆರ್ಯಾವರ್ತದಲ್ಲಿ ಎಲ್ಲೆಲ್ಲೂ ಚೆದರಿ ಸೇರಿಕೊಂಡು, ಬೇರೂರಿ, 'ನಾಸ್ತಿ' ತತ್ತ್ವವನ್ನು ಪ್ರಚಾರಿಸುವುದಲ್ಲದೆ, ಸಕಲ ಆರ್ಯಾವರ್ತಕ್ಕೆ ಕರ್ಣಾಟಕವೇ ಮುಖ್ಯ ಭಾಷೆಯಾಗುವಂತೆಯೂ ಎಲ್ಲೆಲ್ಲೂ ಕರ್ಣಾಟಕ 'ಕುಲ್ಟುರ್' ಹಿರಿದೆನಿಸು ವಂತೆಯೂ ಪ್ರಯತ್ನಿಸಬೇಕು."

"ಇನ್ನು ತೀವ್ರವೇ ಕರ್ಣಾಟಕಕ್ಕೆ, ಸೋಶಲಿಸ್ಟ್ ಪೀಡೆಗೆ ಬಲಿಯಾದ ಎರಡು ದೇಶಗಳೊಡನೆ ಕಾಳಗವಾಡುವ ಪ್ರಸಂಗ ಇದೆ. ಆ ಸಮಯದಲ್ಲಿ ಕರ್ಣಾಟಕವು ಹೆದರುವ ಕಾರಣವಿಲ್ಲ."

ತಾ॥ ೭-೧೦-೧೯೪೪ರಲ್ಲಿ ಹೇಳಿದ ಮಾತುಗಳಿವು:

ನಾಸ್ತಿಸಂಗಡದ 'ಪ್ರೋಜ್‌ಲಾರೆಟ್' ಆದ ಹರ್ ಜಡೀರ್ ಅವರು

"ಮರಾಟಿಗರು ಕೊಲ್ಲಾಪುರ, ಸಾಂಗ್ಲಿ, ...ರಜುಗಳನ್ನು ಕಳೆದ ಯುದ್ಧದ ಕಷ್ಟ...ಂದು ಪಾಲು ಮಾಡಿಕೊಂಡಿದ್ದರಷ್ಟೆ. ...ವನ್ನು ತಂದೆನಾಡಿನೊಡನೆ ಒಂದುಗೂಡಿ...ುವ ತನಕ ಕರ್ಣಾಟಕಿಗಳ ರಕ್ತದ ...ದ್ವೇಗ ತಣಿಯದು."

"ತಾ॥ ೭–೧೨–೧೯೪೪ರಲ್ಲಿ ಒಮ್ಮೆಗೆ ...ಂದು 'ನಾಸ್ತಿ'ಗಳು ಈ ಮೂರು ...ಾಷ್ಟ್ರಗಳಲ್ಲಿ ರಾತ್ರಿ ಬೆಳಗಿನೊಳಗೆಂಬಂತೆ ...ಾಸ್ತಿಧ್ವಜಗಳನ್ನು ಹಾರಿಸಿದುದನ್ನು ...ೀವು ಬಲ್ಲಿರಿ. ಫ್ಯೂರರನ ಉದ್ದೇಶವು ...ವಿತ್ರವಾದುದು ಎಂಬುದಕ್ಕೆ ಬೇರೆ ...ಪ್ರಮಾಣಗಳು ಏಕೆ?"

ವೃತ್ತಪತ್ರಿಕೆಗಳ ಕಡೆಗೂ, ಮತಗಳ ...ಡೆಗೂ ಫ್ಯೂರರನ ಧೋರಣೆ ಹೇಗಿದೆ ...ೆಂದು ವಿಚಾರಿಸಿರಿ:

"ಕರ್ಣಾಟಕದ ಮೇಲ್ಮೆ, ಪ್ರತಿಷ್ಠೆ, ...ಸಂತ ಬೆಳವಣಿಗೆಗಳಿಗೆ ಯಾವುದೇ ...ಧಾನಗಳಿಂದ ತೊಡಕನ್ನು ಉಂಟು ...ಮಾಡಿದರೂ ಸರಿಯೆ; ಅಂತಹ ಪತ್ರಿಕೆಗಳ ...ಪ್ರಚಾರವು ನಿಲ್ಲಿಸಲ್ಪಡುವುದು. ತಂದೆ-...ಾಡನ್ನು ಪರದೇಶೀಯರ ಕಣ್ಣಿನಲ್ಲಿ ...ತುಚ್ಛವಾಗಿ ತೋರಿಸುವ, ಇಲ್ಲವೆ ಫ್ಯೂರರನ ...ಉದ್ದೇಶಗಳಿಗೆ ವಿಘ್ನವನ್ನು ತರುವ ಪತ್ರಕರ್ತರು ಮರಣದಂಡನೆಗೆ ಗುರಿಯಾಗ...ಹುದು."

"ಕರ್ಣಾಟಕದಲ್ಲಿ ಸೋಶಲಿಸಮ್, ಕುರುಬಿಸಮ್, ಅಬ್ರಾಹ್ಮಿನಿಸಮ್, ಮೊದಲಾದ ಯಾವ ಇಸಮನ್ನು ಸಾರಿದರೂ ಅಪರಾಧವೆನಿಸುವುದು. ನಮ್ಮೆಲ್ಲರ ಗುರಿಯು 'ನಾಸ್ತಿ'ಸಮ್. ಪತ್ರಕರ್ತರು ಯಾವುದೇ ರಾಜಕೀಯ, ಇಲ್ಲವೆ, ಆರ್ಥಿಕ ವಾರ್ತೆಯನ್ನು ಪ್ರಕಟಿಸುವುದಿದ್ದರೂ ಅದನ್ನು 'ವಾರ್ತಾ' ಕಮಿಶನರ ಮುಂದಿರಿಸಿ ಅನುಮತಿಪಡೆದೇ ಪ್ರಕಟಿಸಬೇಕು. ಯಾವತ್ತು ಪತ್ರಿಕೆಗಳು ತಮ್ಮ ಪತ್ರಿಕೆಯಲ್ಲಿ ೩೦% ಸ್ಥಾನವನ್ನು ಸರಕಾರದ ಧೋರಣೆಯನ್ನು ಸಮರ್ಥಿಸಲು ಕಾದಿರಿಸಬೇಕು. ಅವಿಲ್ಲದಲ್ಲಿ ಆ ಸ್ಥಳವನ್ನು ಫ್ಯೂರರನ ಲೇಟೆಸ್ಟ್ ಚಿತ್ರಗಳಿಂದ ತುಂಬಿಸತಕ್ಕದ್ದು."

"ಕರ್ಣಾಟಕದಲ್ಲಿ 'ವಂದೇಮಾತರಂ' ಹಾಡುವುದು ತಪ್ಪು. ಅದರ ಬದಲು 'ನಮಸ್ತೇ ನಾಸ್ತಿ ಕರ್ಣಾಟಕಂ' ಎಂಬ ರಾಷ್ಟ್ರಗೀತೆಯನ್ನು ಹಾಡಬೇಕು.

ಕರ್ಣಾಟಕ ಭಾಷೆಯ ಆರ್ಯತ್ವವನ್ನು ಕಾಯ್ದಿರಿಸುವ ಸಲುವಾಗಿ ಅದರಿಂದ ಯಾವತ್ತು ತುಳು, ಮರಾಠಿ, ಅರವು, ತೆಲುಗು ನುಡಿಗಳನ್ನು ಕಿತ್ತುಎಸೆಯಬೇಕು.

ಕರ್ಣಾಟಕದ ಹೊಸ ಇತಿಹಾಸವನ್ನು ಫ್ಯೂರರೇ ಬರೆಯುತ್ತಾರೆ. ಅಲ್ಲಿಯತನಕ ಈ ವರೆಗಿನ ಇತಿಹಾಸಗಳನ್ನು ಸುಳ್ಳೆಂದು ನಂಬತಕ್ಕುದು. ಕರ್ಣಾಟಕವು ದ್ರಾವಿಡ ದೇಶವೆಂದು ಬರೆದಿರುವ ಯಾವತ್ತು ಇತಿಹಾಸಗಳನ್ನು ನಾಗರಿಕರು ಹೋಳಿ ಮಾಡತಕ್ಕದ್ದು."

"ಈ ಕೆಳಗಿನವರು ಮಾತ್ರ ಶುದ್ಧ ಕರ್ಣಾಟಕ ಸಾಹಿತಿಗಳೆಂದು ತಿಳಿಯಬೇಕು: ಹರ್ ಜಡಿರ್, ಹರ್ ಬಂಜರ್, ಹರ್ ರಾಂಟ್. ದೇಶೀಯ ಸಂಸ್ಥಾನದಲ್ಲಿರುವವರು ಕರ್ಣಾಟಕ ಸಾಹಿತ್ಯಕ್ಕೆ ವೈರಿಗಳು.

ಯಾವತ್ತು ಸಾಹಿತ್ಯವನ್ನು ಪರಿಶೀಲಿಸಿ ನಾಸ್ತಿರಾಜ್ಯದಲ್ಲಿ ಪ್ರಚಾರಕ್ಕೆಯೋಗ್ಯವೋ ಅಯೋಗ್ಯವೋ ಎಂದು ವಿಮರ್ಶೆಮಾಡಲು ಸೆಕ್ರೆಟರಿ ಆಫ್ ಕರ್ನಾಟಕ ಕಲ್ಚರ್ ಪದವಿಗೆ ಹರ್ ರಾಂಟ್‌ರವರು ನೇಮಕರಾಗಿದ್ದರು. ಅವರು ದ್ರಾವಿಡಕನ್ಯೆಯೊಬ್ಬಳನ್ನು ವರಿಸಿದ ಅಪರಾಧಕ್ಕಾಗಿ ಅವರ ಪ್ರಜಾತ್ವವನ್ನು ಸಹ ರದ್ದಿಸಲಾಯಿತು. ಈಗ ಹರ್ ಜಡಿರ್‌ರವರು ನಾಸ್ತಿ ಕಲ್ಚರ್ ಸೆಕ್ರೆಟರಿಯವರು."

ಫ್ಯೂರರನ ನೆರಳಿನ ನೆಂಟೆಂದು ತಿಳಿಯಲಾದ ಹರ್ ಹಿಕಮರವರು ತಾ॥ ೭–೩–೪೩ರಲ್ಲಿ ಹೇಳಿದ ಮಾತುಗಳಿವು:

"ಕರ್ಣಾಟಕವು ಒಮ್ಮತವಾದುದು. ಆ ಮತವೇ ನಮ್ಮ 'ನಾಸ್ತಿಸಮ್'! ಕರ್ಣಾಟಕಿಗಳು ಇನ್ನುಮುಂದೆ ಉಡ್ಪಿಯ ಬಿಶಪರಿಗೂ, ಶೃಂಗೇರಿಯ ಪೋಪರಿಗೂ, ಚಿತ್ರದುರ್ಗದ ಕಾರ್ಡಿನಲರಿಗೂ ಅಧೀನರಲ್ಲ. 'ನಾಸ್ತಿಸಮ್' ವಿರುದ್ಧವಾದ ಇತರ ಎಲ್ಲ ಸಂಸ್ಥೆಗಳನ್ನೂ ತೀರ ಸಂಶಯದಿಂದ ನೋಡಲಾಗುವುದು."

ತಾ॥ ೮–೧–೧೯೪೫ರ ದಿನ- ಪ್ರಪಂಚದಲ್ಲಿಯೇ ಇದುವರೆಗೆ ಕಾಣದಂತಹ ಅತ್ಯಂತ ಶಾಂತಿಮಯ ಕ್ರಾಂತಿಯೊಂದು ಕರ್ಣಾಟಕದಲ್ಲಾಯಿತು. ಆ ದಿನ ಬೆಳಕು ಹರಿಯುವುದರಲ್ಲಿ ಮೊದಲಿನ ದಿನ ಧಾರವಾಡದಲ್ಲಿ ಸಾರ್ವಜನಿಕ ಭಾಷಣವನ್ನು ಮಾಡಿದ ಹಿಟ್ಲರನು, ಉಡುಪಿಯಲ್ಲಿ ತನ್ನ ಅಪಾರ ನಾಸ್ತಿಸೇನೆಯೊಂದಿಗೆ ಬಂದು ಕಾಣಿಸಿಕೊಂಡನು. ಆಗ ತಮ್ಮನ್ನು ಬಿಡುಗಡೆಮಾಡಿದುದಕ್ಕಾಗಿ ಉಡುಪಿಯ



ಹಿಟ್ಲರನ ವಿಜಯವಾರ್ತೆಯನ್ನು ಕೇಳಿ ಹೃದಯಸ್ತಂಭನದಿಂದ ಮಡಿದ ಗ್ರ್ಯಾಂಡ್ ಡ್ಯೂಕ್ ಗ್ರಿಗ್‌ಡರರವರು

ನಾಗರಿಕರು ಅವರನ್ನು ಸ್ವಾಗತಮಾಡಿದರು. ಕರ್ನಾಟಕದ ನಷ್ಟವಾದ ಆ ಪ್ರಾಂತವು ತಿರುಗಿ ತಾಯಿನಾಡಿನೊಂದಿಗೆ ಬೆರೆಯಿತು.

೮-೧-೧೯೪೫ ಪ್ರಾತಃಕಾಲ ೮ ಘಂಟೆಗೆ ನಾಸ್ತಿ ಸೇನೆಯವರು ತುಳುನಾಡ ಗವರ್ನರ್ ಡಾ. ಪಣಾಡಿಸರವರನ್ನು ದಸ್ತಗಿರಿ ಮಾಡಿದರು. ಹಿಂದೆ ಕರ್ನಾಟಕ ಕಾಂಗ್ರೆಸ್ ಪ್ರಕರಣಗಳಲ್ಲಿ ಭಾಗವಹಿಸಿದ ಬಗ್ಗೆ ಅವರ ಮೇಲಿನ ಕೆಲವು ಆರೋಪಗಳಿಗಾಗಿ ಅವರನ್ನು ನ್ಯಾಯವಿಮರ್ಶೆಗೆ ಗುರಿ ಮಾಡುವರೆಂದು ಕೇಳುತ್ತೇವೆ. ಅದೇ ದಿನ ಮಧ್ಯಾಹ್ನ ರಾಯಿಟರ್ ಸುದ್ದಿಗಾರನು ಉಡುಪಿಯಿಂದ, ಡಾ॥ ಪಣಾಡಿಸರವರು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಸಿದ್ದಾನೆ.

ಫಾಸ್ ಕಿಲಿಯವರು ತುಳುನಾಡು ನಷ್ಟವಾದ ವಾರ್ತೆಯಿಂದ ನೊಂದು ಆತ್ಮಹತ್ಯೆಮಾಡಿಕೊಂಡರಂತೆ.

೧೦-೧-೧೯೪೫ರಲ್ಲಿ 'ಧಾರವಾಡ ವೈಲ್ಡ್' ಪತ್ರಿಕೆಯಲ್ಲಿ ಹೀಗಿತ್ತು. "ಉಡುಪಿಯು ವಿಶಾಲಕರ್ನಾಟಕಕ್ಕೆ ಸೇರಿದಂದಿನಿಂದ ಇಲ್ಲಿಯತನಕ ಆತ್ಮಹತ್ಯೆಯಿಂದ ಮಡಿದವರ ಸಂಖ್ಯೆ ೩೦೭. ಕೈದು ಮಾಡಲ್ಪಟ್ಟವರ ಸಂಖ್ಯೆ ೩,೫೬೪.

೧೧-೧-೧೯೪೫. "ಹರ್ ಲಟ್‌ವಿಟಸಿಯವರು ನಿನ್ನೆಯದಿನ ಉಡುಪಿಯಲ್ಲಿ, ಹರ್ ಹಿಟ್ಲರರೊಡನೆ ಕೆಲವು ನಿಮಿಷಗಳ ಸಂಭಾಷಣೆ ನಡೆಯಿಸಿದರೆಂದೂ, ಮುಂದಿನ ತುಳುನಾಡ್ ಗವರ್ನರಿಕೆಯು ಅವರಿಗೆ ದೊರೆಯಬಹುದೆಂದೂ ವಾರ್ತೆಯಿದೆ. ಶ್ರೀಯುತರು ಹಿಂದೆ ಅನೇಕ ರಾಜಕೀಯ ಪಂಗಡಗಳ ಮುಂದಾಳಾಗಿದ್ದು, ಈಗ ತಾನೇ ನಾಸ್ತಿಕ್ಷೇತ್ರದಲ್ಲಿ ಕಾಲಿರಿಸಿದವರಾದುದರಿಂದ ಅವರಿಗೇನೆ ಈ ಪದವಿ ದೊರಕಬಹುದಂತೆ. ಹಿಟ್ಲರನು ತನ್ನ ಫಾರಿನ್ ಸೆಕ್ರೆಟರಿಯನ್ನು ಈ ಉದ್ಯೋಗಕ್ಕೆ ನಿಯಮಿಸಬಹುದೆಂದೂ ಸುದ್ದಿಯಿದೆ."

೧೩-೧-೧೯೪೫. "ಉಡುಪಿ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ೧೬೦೭ಕ್ಕೆ ಮುಟ್ಟಿದೆ."

"ಡಾ॥ ಕೋರರವರು 'ಕುತ್ತಿಗುಳ್ಳ' ನುಂಗಿ ಮಡಿದರೆಂದೂ ಇನ್ನಿರ್ವ ತರುಣರು ಮಧ್ವಸರೋವರ ಜಲಪ್ರಾಶನದಿಂದ ಮಡಿದರೆಂದೂ ಸುದ್ದಿಯಿದೆ."

೧೩-೧-೧೯೪೫ರ ಅಪರಾಹ್ನ ಹರ್ ಹಿಟ್ಲರನು ಅಲ್ಲಿಯ ಹಿಟ್ಲರ್ ಚೌಕದಲ್ಲಿ (ಪೂರ್ವದ ಮಠದ ಚೌಕ, ಅನಂತರದ ಗಾಂಧೀ ಚೌಕದಲ್ಲಿ) ನಿಂತು, ನೆರೆದ ಸಾಸಿರಾರು ಜನರ ಮುಂದೆ ಮಾಡಿದ ಭಾಷಣದ ಮಾತುಗಳು ಕೆಲವು:–"ಈ ನಿಮ್ಮ ಅಷ್ಟಮಠಗಳು 'ನಾಸ್ತಿ' ತತ್ತ್ವಗ್ರಹಣ ಮಾಡಬೇಕೆಂದು ನನ್ನ ಆಗ್ರಹ. ಈ ವಿಚಾರದಲ್ಲಿ ಅವರು ತಮ್ಮ ಕಲ್ಯಾಣವನ್ನು ನಿರೀಕ್ಷಿಸಬೇಕು. ಅವರಿಗೆ ತೀರ್ಮಾನಕ್ಕಾಗಿ ಇನ್ನು ಒಂದು ದಿನದ ಅವಕಾಶವಿತ್ತಿದ್ದೇನೆ"

ಮಂಗಳೂರಿನ ಸ್ವತಂತ್ರ ಕರ್ನಾಟಕದ ಸುದ್ದಿಗಾರರಿಗೂ ಹರ್ ಹಿಟ್ಲರರಿಗೂ ನಡೆದ ಸಂಭಾಷಣೆಯಲ್ಲಿ ಈ ರೀತಿ ಹಿಟ್ಲರರು ಹೇಳಿದರಂತೆ. "ನಿಮ್ಮ ಮತದ ಬಿಶಾಪರುಗಳು ಮುಖ್ಯ ತಂತಮ್ಮ ಕಲ್ಯಾಣಗಳನ್ನು ಯೋಚಿಸಬೇಕು. ಅವರು ಸಮ್ಮತಿಸುವರಾದರೆ ಅದಕ್ಕೆ ತಗಲುವ ವೆಚ್ಚವನ್ನು ನಮ್ಮ ರಿಶ್‌ನ ಕಡೆಯಿಂದಲೇ ವಹಿಸಬಹುದು." ಈ ವಿಚಾರದಲ್ಲಿ ಫ್ಯೂರರಿಗೂ ಬಿಶಾಪರಿಗೂ ಮಧ್ಯವರ್ತಿಯಾಗಿ ಆ ಪತ್ರಿಕೆಯ ಸಂಪಾದಕರು ವ್ಯವಹರಿಸಬಹುದೆಂದು ಊಹಿಸಲಾಗಿದೆ.

ಫ್ಯೂರರು ತಾ॥ ೨೨ರಲ್ಲಿ ನಡೆಯಿಸಿದ ಪ್ಲೆಬಿಸೈಟಿನಲ್ಲಿ ಕೊಡಗು, ನೀಲಗಿರಿ, ಬೆಂಗಳೂರು ಮೊದಲಾದಲ್ಲಿನ ಯಾವತ್ತು ಉಡುಪಿಯವರು ಭಾಗವಹಿಸಿದರು. ಉಡುಪಿಯ ಪೋಲಿಂಗಿನಲ್ಲಿ, ತುಳುನಾಡು ಕರ್ನಾಟಕಕ್ಕೆ ಸೇರುವ ವಿಚಾರದಲ್ಲಿ ಕೇವಲ ಆರು ಪ್ರತಿಕೂಲ ಮತಗಳೂ, ೧೩,೫೬೦ ಅನುಕೂಲ ಮತಗಳೂ ದೊರೆತವು. ಈ ವಿರುದ್ಧ ಮತಗಳಾದರೂ ಬುದ್ಧಿಸ್ವಾಸ್ಥ್ಯವಿಲ್ಲದವರು ಕೊಟ್ಟುದರಿಂದ ಉಂಟಾಯಿತೆನ್ನುತ್ತಾರೆ. ಈ ಪ್ರಸಂಗದಲ್ಲಿ ಬೆಂಗಳೂರಿನ ಯಾವತ್ತು ಉಡುಪಿಯವರು ಕೆಂಟೋನ್‌ಮೆಂಟ್ ಮೈದಾನದಲ್ಲಿ ಮತವಿತ್ತರಂತೆ.

ಫ್ಯೂರರನ ಈ ರಾಜಕೀಯ ಧೋರಣೆಗಳನ್ನು ಮೈಸೂರು, ತೆಲಂಗಣ, ಮಹಾರಾಷ್ಟ್ರಗಳು ಖಂಡಿಸಿದರೂ ಅಫಘಾನಿಸ್ಥಾನದವರೂ, ಚೌಟನಾಡಿನವರೂ ಅಜ್ಮೀರ್ ಮಾರವಾಡದವರೂ, ವಾಣಿಯಂಬಾಡಿಯವರೂ ಪ್ರಶಂಸಿಸಿದ್ದಾರೆ. ಮಾತವಾಸದಲ್ಲಿರುವ ಕರ್ನಾಟಕ ಕನ್ನಡಿಗರಿಗೆ ದಾಣಾಗೋಕುಲದಾಸರು, ತುಳುನಾಡ ವಿಜಯಕ್ಕಾಗಿ ಅಭಿನಂದನೆ ಮಾಡಿದ್ದಾರೆ.

ಈ ವಿಷಯದಲ್ಲಿ ಗುಜರಾತಿನ ಫಾರಿನ್ ಸೆಕ್ರೆಟರಿಗಳಾದ ಮುನಿಸಿರಾಮರವರು, ಅಹಮ್ಮದಾಬಾದಿನಲ್ಲಿ ಜರುಗಿದ ತಮ್ಮ ಪಾರ್ಲಿಮೆಂಟಿನ ವಿರೋಧಪಕ್ಷದವರಿಗೆ ಹೀಗೆಂದರಂತೆ: "ಫ್ಯೂರರು ತುಳುನಾಡನ್ನು ಪ್ರವೇಶಿಸಿದುದು ವಿಸ್ಮಯಕರವಾದರೂ ಅಯೋಚಿತವಲ್ಲ. ಇಂಥ ಕೆಲಸಗಳಿಗೆ ಮೊದಲು ನಮ್ಮಂಥ ನೆರೆಕರೆಯ ನಾಡಿನವರ ಸಹಾನುಭೂತಿಯನ್ನು ಕೇಳುವುದು ಒಳಿತಿತ್ತು. ಆದರೂ ಎಂಚಿದ ಕಾರ್ಯಕ್ಕಾಗಿ ಚಿಂತಿಸಿ ಫಲವಿಲ್ಲ."

೪-೧-೧೯೪೫ರ ವಿಜಾಪುರದ 'ಬಾದಶಾಹಿ ಫಿರಂಗಿ' ಪತ್ರಿಕೆಯು ಹೀಗೆ ಹೇಳುತ್ತಿದೆ:

"ಹಿಂದೆ ಮಹಾರಾಷ್ಟ್ರದ ಕಡೆಯಿಂದ 'ಎಪಿಸೋನೇಜ' ಅಪಾದನೆಗೆ ಗುರಿಯಾಗಿ ಕಾರಾಗೃಹವಾಸಿಯಾದ ಗ್ರ್ಯಾಂಡ್ ಡ್ಯೂಕ್ ಗ್ರಿಗಡರರವರು, ಹಿಟ್ಲರನ ವಿಜಯವಾರ್ತೆಯನ್ನು ಕೇಳಿ ಹೃದಯಸ್ತಂಭನದಿಂದ ಮಡಿದರು."

ಈಗಾಗಲೇ ಗಡಿನಾಡಾದ ಮೈಸೂರಿನಲ್ಲಿ ಫ್ಯೂರರನ ತುಳುನಾಡ ವಿಜಯದಿಂದ ಉತ್ತೇಜಿತರಾದ ಯಾವತ್ತು ಕರ್ನಾಟಕಿಗಳು, ತಮಗೆ ಹೆಚ್ಚಿನ ಪ್ರಾತಿನಿಧ್ಯಬೇಕೆಂದೂ ಮೈಸೂರು ದೇಶವು ತೆಲುಗು ತಮಿಳರದ್ದಲ್ಲವೆಂದೂ ಸಾರುತ್ತಿದ್ದಾರೆ. ಹಿಟ್ಲರನು ಮೈಸೂರನ್ನು ಆತಿಕ್ರಮಿಸಿ ಬರುವನಾದರೆ, ಕೂಡಲೆ ತಾವು ಬೆಂಬಲಕ್ಕೆ ಸಿದ್ಧರಿದ್ದೇವೆಂದು ತಮಿಳುನಾಡ ಅಧ್ಯಕ್ಷರಾದ ಸಿನರ್ ಸಿರಾನ್‌ರವರು ಮೈಸೂರಿನ ದಿವಾನರಿಗೆ ತಿಳಿಸಿರುವರೆಂಬ ಸುದ್ದಿಯಿದೆ.

ಬಳ್ಳಾರಿಯನ್ನು ತಮಗೆ ಕೊಡಿಸುವುದಾದರೆ ತಾವು ಸಹ ಮೈಸೂರಿನ ಬೆಂಬಲಕ್ಕೆ ಬರುವೆವೆಂದು ಆಂಧ್ರದ ಕಮ್ಯುನಿಸ್ಟ್ ಸಂಗಡದವರು ತಿಳಿಸಿದ್ದಾರೆ. "ನೀವೇನು ಮಾಡುವಿರಿ?" ಎಂದು ಮಹಾರಾಷ್ಟ್ರದ ಕಾಮನ್ಸರು ಪ್ರೀಮಿಯರ್ ಖೇರ್ ಅವರನ್ನು ಕೇಳಿದಾಗ "ನಾವ ಧ್ಯಾನದಿಂದ ಯೋಚಿಸುವ ಸಂಗತಿಯಿದು ! ಭರತಖಂಡದ ಶಾಂತಿರಕ್ಷಣೆಯ ದೃಷ್ಟಿಯಿಂದ ಮಹಾರಾಷ್ಟ್ರವು ಏನು ಮಾಡಲು ಶಕ್ಯವಿದೆಯೋ ಅದನ್ನೆಲ್ಲ ಮಾಡುವ ವಿಚಾರದಲ್ಲಿ ನಾವು ಈ ಮೊದಲು ಹೊತ್ತ ಹೊಣೆಗಾರಿಕೆಯು ಇನ್ನೂ ಉಳಿದಿದೆಯೆಂದು ಯೋಚಿಸುತ್ತೇವೆ" ಎಂದರಂತೆ.

ಸಮಗ್ರಭಾರತದ ಶಾಂತಿಯು ಪ್ಯೂರರನ ವರ್ತನೆಯನ್ನು ಅವಲಂಬಿಸಿದೆಯೆಂದು ಎಲ್ಲ ರಾಷ್ಟ್ರಗಳೂ ಅನ್ನುತ್ತಿವೆ. ಫ್ಯೂರರನಾದರೊ ಸಮಗ್ರ ಭಾರತವನ್ನು ಕಾಯುವ ಶಕ್ತಿಯು, ವಿಶಾಲ ಕರ್ನಾಟಕವೊಂದಕ್ಕೇನೆ ಇರುವುದೆಂದು ಸಾರುತ್ತಾನೆ.

ಇದನ್ನು ತಿಳಿದು, ಹಿಟ್ಲರನ ಆಶಯಗಳನ್ನು ಪೂರಯಿಸುವುದು ಕರ್ನಾಟಕಿಗಳ ಕರ್ತವ್ಯ.

ಪತಿಯ ಸಾನ್ನಿಧ್ಯ!'

ಅನುವಾದಕರು :— ಶ್ರೀ. ಹನುಮಂತರಾವ್ ಮಾಂಜರೇಕರ, ಬಿ. ಎ.

(ರವೀಂದ್ರನಾಥರ ಕಿರುಗತೆ)

ಗಂಗಾತಟದ ಮೇಲೆ ಶಾಂತವಾದುದೊಂದು ಮಸಣದಲ್ಲಿ ಕವಿಯಾದ ತುಳಸೀದಾಸನು ವಿಚಾರಮಗ್ನನಾಗಿ ಅಲೆಯುತ್ತಿದ್ದನು. ಅಲ್ಲಿ ಮಂಗಲಕಾಲದ ಬೆಲೆಬಾಳುವ ಬಟ್ಟೆಗಳನ್ನು ತೊಟ್ಟು, ತನ್ನ ಮೃತಪತಿಯ ಸಾನ್ನಿಧ್ಯದಲ್ಲಿ ಕುಳಿತಿರುವ ಏರ್ವ ಸ್ತ್ರೀಯನ್ನು ಅವನು ನೋಡಿದನು. ತುಳಸೀದಾಸನನ್ನು ನೋಡಿದೊಡನೆ ಅವಳು ಎದ್ದುನಿಂತು ಕೈಮುಗಿದು ನುಡಿದಳು:

"ಮಹಾರಾಯರೇ, ನಿಮ್ಮ ಆಶೀರ್ವಾದದಿಂದ ನಾನು ಪತಿಯೊಡನೆ ವಾಸಿಸಲು ಸ್ವರ್ಗಕ್ಕೆ ಹೋಗುತ್ತೇನೆ. ತಮ್ಮ ಅಪ್ಪಣೆಯಿರಲಿ!"

ಕೂಡಲೆ ತುಳಸೀದಾಸನೆಂದನು—"ಬಾಲೆ, ಇಷ್ಟು ಕಟ್ಟವಸರವೇಕೆ? ಸ್ವರ್ಗವನ್ನು ನಿರ್ಮಿಸಿದವನೇ ಪೃಥ್ವಿಯನ್ನೂ ನಿರ್ಮಿಸಿರಲಿಲ್ಲವೆ?"

"ಸ್ವಾಮಿಾ, ನನಗೆ ಸ್ವರ್ಗವು ಬೇಕಾಗಿಲ್ಲ;— ನಾನು ಬಯಸುವುದು ನನ್ನ ಪ್ರಾಣಪತಿಯ ಸಾನ್ನಿಧ್ಯವೊಂದನ್ನೇ!" ಎಂದು ಆ ಹೆಂಗುಸು ನುಡಿದಳು.

ತುಳಸೀದಾಸನು ಮುಗುಳ್ನಗೆಯಿಂದ ನುಡಿದನು :

"ಹುಡುಗೀ ನೀನು ಇನ್ನು ಮನೆಗೆ ಹೋಗು. ಒಂದು ತಿಂಗಳೊಳಗಾಗಿ ನಿನ್ನ ಗಂಡನು ಹಿಂದಿರುಗಿ ಬರುವನು."

ಕಡೆಗೆ ಆ ಹೆಂಗುಸು ಮನೆಗೆ ಹೋದಳು. ತುಳಸೀದಾಸನು ದಿನಾಲು ಅವಳ ಮನೆಗೆ ಹೋಗಿ ಅವಳಿಗೆ ಧೈರ್ಯವನ್ನು ಕೊಡುತ್ತಿದ್ದನು. ಕೆಲವು ದಿನಗಳಲ್ಲಿಯೇ ಅವನು ಅವಳಿಗೆ ಅನೇಕ ಸುವಿಚಾರದ ಮಾತುಗಳನ್ನು ಹೇಳಿ, ಅವಳ ಮನಸ್ಸನ್ನು ಪರಮೇಶ್ವರನ ಭಕ್ತಿಯ ಕಡೆಗೆ ಒಲಿಸಿದನು.

ಒಂದು ತಿಂಗಳು ಮುಗಿದಿರಲಿಕ್ಕಿಲ್ಲ. ಅವಳ ನೆರೆಹೊರೆಯವರು ಅವಳೆಡೆಗೆ ಬಂದು "ನಿನ್ನ ಗಂಡನು ಎಲ್ಲಿದ್ದಾನೆ?" ಎಂದು ಕೇಳಹತ್ತಿದರು. "ಇದ್ದಾನೆ" ಎಂದು ಅವಳು ನಕ್ಕು ನುಡಿದಳು. "ಎಲ್ಲಿದ್ದಾನೆ? ಎಲ್ಲಿದ್ದಾನೆ?" ಎಂದು ಇನ್ನೊಮ್ಮೆ ಎಲ್ಲರೂ ಕೇಳಲು ಅವಳು ಮಾರ್ನುಡಿದಳು:— "ಆ ನನ್ನ ಪ್ರಾಣಪತಿಯು ನನ್ನೊಡನೆ ಒಂದುಗೂಡಿ ನನ್ನ ಹೃದಯದಲ್ಲಿ ವಾಸಿಸುತ್ತಿರುವನು!"

"ಸತ್ಯದೊಂದಿಗೆ ಸಹಕರಿಸಿರಿ! ನೀವು ಒಬ್ಬರೆ ಒಂಟಿಗರಾಗಿ ಬದುಕಬೇಕಾಗಿಬಂದರೂ ಸತ್ಯದೊಂದಿಗೆ ಎದ್ದುನಿಲ್ಲಿರಿ! ಅದರಲ್ಲಿಯೆ ಬದುಕಿರಿ; ಅದರಲ್ಲಿಯೆ ಸಾಯಿರಿ! ಸತ್ಯದ ಶಿಖರದ ಮೇಲೆ ನಿಮ್ಮನ್ನು ಒಂಟಿಗರನ್ನಾಗಿ ಬಿಟ್ಟುಬಿಟ್ಟರೂ, ಸತ್ಯಪ್ರೀತಿಯ ಉಜ್ವಲಸೂರ್ಯ ಅಲ್ಲಿ ನಿಮಗೆ ತಕ್ಕ ಒಡನಾಡಿಯಾಗಿರುವನು. ಅಲ್ಲಿ ನಿಂತು ನೀವು ಮಾಡಿದ ಸಜೀವ ಸೂಚನೆಗಳನ್ನು ಗ್ರಹಿಸಿ ಸಾವಿರಾರು ಜನ ಒಡನಾಡಿಗಳು ಬಳಿಸಾರಿ ಬರುವರು. ಈ ರೀತಿಯಿಂದಾಗುವ ಸಂಘಟನೆಯೆ ನಿಜವಾದ ನೈಸರ್ಗಿಕ ಸಂಘಟನೆ; ಎಂತಲೇ ನೀವು ಸಂಘಟನೆಯ ಬೆನ್ನನ್ನು ಹತ್ತಬೇಡಿರಿ! ಅದು ತಾನಾಗಿಯೆ ನಿಮ್ಮನ್ನು ಬೆಂಬಳಿಸುವಂತೆ ಮಾಡಿಕೊಳ್ಳಿರಿ!!"

—ಸ್ವಾಮಿಾ ರಾಮತೀರ್ಥ

ಉತ್ತರ ಕನ್ನಡ ಜಿಲ್ಲೆಯಲ್ಲಿ

ಶ್ರೀ. ಎಸ್. ಕೆ. ಕಲ್ಲಾಪುರ, ಬಿ.ಎ., ಎಲ್‌ಎಲ್.ಬಿ., ಹೊನ್ನಾವರ

ಪೂರ್ವಖಂಡ

ಮುನ್ನುಡಿ

ಕತ್ತದ* ಸರಕುಗಳನ್ನು ತಯಾರಿಸುವುದಕ್ಕೆ ಕಲಿಸುವುದರ ಸಲುವಾಗಿ ಒಂದು ಔದ್ಯೋಗಿಕ ಶಾಲೆಯನ್ನು—ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ—ಸ್ಥಾಪಿಸಬೇಕೆಂದು ಮಾಡಲಾದ ಬಿನ್ನಹವು, ಅಖಿಲಭಾರತ ಗ್ರಾಮೋದ್ಯೋಗ ಸಂಘದವರಿಗೆ ಮಾನ್ಯವಾಗಿದೆ; ಆ ಸಂಘದ ಕಾರ್ಯಕಾರಿ ಮಂಡಲದ ಮೆಂಬರರಾದ **ಶ್ರೀ. ವೈಕುಂಠರಾಯ ಮೆಹತಾ** ಅವರು ಮುಂಬಯಿ ಸರಕಾರದ ವ್ಯವಸಾಯಖಾತೆಯ ಡಾಯರೆಕ್ಟರರಿಗೆ, ಅದರ ಬಗ್ಗೆ ೩೫೫೫ ರೂಪಾಯಿಗಳನ್ನು ಮಂಜೂರು ಮಾಡಲು ಕೇಳಿಕೊಂಡ ವರ್ತಮಾನವೂ ಬಂದಿರುತ್ತದೆ. ಸರಕಾರಕ್ಕೆ ಕಳೆದ ಅಗಸ್ಟ ತಿಂಗಳಲ್ಲಿಯೇ ಅರಿಕೆಮಾಡಿಕೊಳ್ಳಲಾಗಿತ್ತು. ವ್ಯವಸಾಯ ಖಾತೆಯವರು ಗ್ರಾಮೋದ್ಯೋಗಗಳಿಗೆ ನೆರವಾಗುವ ವಿಷಯದಲ್ಲಿ ಸಂಘದವರ ಸಲಹೆಯಿಂದಲೇ ವರ್ತಿಸತಕ್ಕದ್ದೆಂದು ಸರಕಾರದವರು ಸಪಟಂಬರ ತಿಂಗಳಲ್ಲಿ ನಿರ್ಧರಿಸಲು ಸಂಘದವರು ಶ್ರೀ. ವೈಕುಂಠರಾಯ ಮೆಹತಾ ಅವರನ್ನು ಆ ಕೆಲಸಕ್ಕಾಗಿ ನಿಯಮಿಸಿದರು. ಶ್ರೀ. ಮೆಹತಾ ಅವರ ಹೇಳಿಕೆಯಂತೆ, ಸ್ಥಾನಿಕ ವಿಚಾರಣೆಯಬಗ್ಗೆ ಎ. ಐ. ಎಸ್. ಎ. ದ ಮೆಂಬರರಾದ ಶ್ರೀ. ಹಣಮಂತರಾವ ಕೌಜಲಗಿಯವರು ನವಂಬರ್ ತಿಂಗಳಲ್ಲಿ ಹೊನ್ನಾವರಕ್ಕೆ ಬಂದು, ಕತ್ತದ ವ್ಯವಸಾಯದಿಂದ ಜೀವಿಸುತ್ತಿರುವ ಈ ತಾಲ್ಲೂಕಿನ ಹಳ್ಳಿಗಳನ್ನು ಸಂದರ್ಶಿಸಿ, ಬೆಲೆಯುಳ್ಳ ಮಾಹಿತಿಯನ್ನು ದೊರಕಿಸಿ ಕೊಟ್ಟು ಹೋದರು. ಈ ವ್ಯವಸಾಯವನ್ನು ಕಲಿಸುವ ಶಾಲೆಯು ಈ ತಾಲ್ಲೂಕಿನವರಿಗೆ ಅತ್ಯವಶ್ಯವಾಗಿರುವದೆಂದು ಅವರು ಇಲ್ಲಿಂದ ಹುಬ್ಬಳ್ಳಿಗೆ ಹೋದೊಡನೆಯೆ ಶ್ರೀ. ಮೆಹತಾ ಅವರಿಗೆ ಬರಕೊಂಡರಲ್ಲದೆ, ಕತ್ತದ ವ್ಯವಸಾಯವನ್ನು ಕುರಿತು **ಸಂಯುಕ್ತ ಕರ್ಣಾಟಕ**ದ ಸಂಚಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿ, ಬಹುಮಟ್ಟಿಗೆ ಜನತೆಗೆ ಬೋಧವನ್ನು ಮಾಡಿಕೊಟ್ಟರು. ಡಾಯರೆಕ್ಟರ್ ದೊರೆಗಳು ಶ್ರೀ. ಮೆಹತಾರವರ ಸಲಹೆಯನ್ನು ಸ್ವೀಕರಿಸಿ, ಹೊನ್ನಾವರದಲ್ಲಿ ಔದ್ಯೋಗಿಕ ಶಾಲೆಯನ್ನು ತೆರೆಯಿಸಿದಲ್ಲಿ, ಅದರ ಶ್ರೇಯವೆಲ್ಲವೂ ಶ್ರೀ. ಮೆಹತಾರವರಿಗೂ ಶ್ರೀ. ಹಣಮಂತರಾವ ಕೌಜಲಗಿಯವರಿಗೂ ಸಲ್ಲತಕ್ಕದ್ದು. ಇದಲ್ಲದೆ ಕತ್ತದ ವ್ಯವಸಾಯಗಾರರೆಲ್ಲರೂ ಅವರಿಬ್ಬರಿಗೂ ಚಿರಋಣಿಗಳಾಗಿರಬೇಕಾಗುವದು.

ಕತ್ತದ ವ್ಯವಸಾಯದ ವಿಷಯದಲ್ಲಿ ಲಕ್ಷ್ಯಪೂರಯಿಸುವಂತೆ ಮುಂಬಯಿ ಸರಕಾರವನ್ನು ೧೯೩೭ನೆಯ ಇಸವಿಯ ಜನವರಿ ತಿಂಗಳಿಂದಲೂ — ಒಂದೇಸವನೆ— ಕೇಳಿಕೊಳ್ಳಲಾಯಿತು. ಈ ವಿಷಯದಲ್ಲಿ ಸರಕಾರದವರಿಗೆ ಬರಕೊಂಡ ಪತ್ರಗಳ ಹಾಗೂ ಅರಿಕೆಗಳ ಸಾರಾಂಶವನ್ನು ತಿಳಿದುಕೊಳ್ಳುವ ಕುತೂಹಲವು,ಈ ತಾಲ್ಲೂಕಿನವರಿಗೆ ವಿಶೇಷತಃ ಕತ್ತದ ವ್ಯವಸಾಯಗಾರರಿಗೆ–ಔದ್ಯೋಗಿಕ ಶಾಲೆಯನ್ನು ತೆರೆಯುವ ಪ್ರಸಂಗ ಬರಲು ಉಂಟಾಗಬಹುದೆಂದು ನಂಬಿ ಅವುಗಳೆಲ್ಲವನ್ನೂ ಒಳಗೊಂಡ ಈ ಲೇಖನವನ್ನು ಪ್ರಕಟಿಸಲು ಮುಂದಾಗಿರುವೆನು.

ಒಂದೇ ಒಂದು ಎಕರೆ ತೆಂಗಿನ ತೋಟ ವಿದ್ದರೆ ಸಾಕು; ಒಂದು ಉದ್ಯೋಗಿಯಾದ ಕುಟುಂಬವು ಸೌಖ್ಯದಿಂದ ಜೀವನ ಮಾಡಬಲ್ಲದು.

ತೆಂಗಿನ ಉಪಯೋಗ:—

ಅಕ್ಕಿ ಮತ್ತು ಅಡಿಕೆ ಇವುಗಳಾದ ಮೇಲೆ ನಮ್ಮ ಜಿಲ್ಲೆಯ ಮುಖ್ಯ ಬೆಳೆಯೆಂಬುದು ತೆಂಗಿನಕಾಯಿ. ಈ ಜಿಲ್ಲೆಯ ಎಂಟ

* 'ಕತ್ತ' ಎಂದರೆ ತೆಂಗಿನ ಕಾತಿ–ನಾರು,

ತಾಲ್ಲೂಕು ಮತ್ತು ಮೂರು ಪೇಟೆಗಳಿಂದ ಕೂಡಿ ೧೨೦೦೦ ಎಕರೆ ಗಳಿಂದಲೂ ಮೇಲ್ಪಟ್ಟು ತೆಂಗಿನ ತೋಟಗಳಿರುತ್ತವೆ. ಇವುಗಳ ಮೂರನೆಯ ಒಂದು ಅಂಶದ ವಿಸ್ತೀರ್ಣವುಳ್ಳ ತೋಟಗಳು ಹೊನ್ನಾವರ ತಾಲ್ಲೂಕಿನಲ್ಲಿಯೂ ಇದಕ್ಕೆ ಸಂಬಂಧಪಟ್ಟ ಭಟಕಳ ಪೇಟೆಯಲ್ಲಿಯೂ ಇರುತ್ತವೆ. ಒಂದು ಎಕರೆ ತೆಂಗಿನ ತೋಟವಿದ್ದರೆ ಸಾಕು; ಒಂದು ಉದ್ಯೋಗಿಯಾದ ಕುಟುಂಬವು ಸೌಖ್ಯದಿಂದ ಜೀವನಮಾಡಬಲ್ಲದು. ಈ ಗಿಡಗಳ ಕಾಯಿಗಳು ಎಳೆಯವಿರುವಾಗ ಅವುಗಳಲ್ಲಿ ಅತ್ಯಂತ ಮಧುರವಾದ ನೀರು ದೊರಕುತ್ತದೆ. ಜನರು ಅದನ್ನು ಬಹು ಪ್ರೀತಿಯಿಂದ ಕುಡಿಯುತ್ತಾರೆ. ಎಳೆಯ ಕಾಯಿಗಳೊಳಗಿನ **ಬಳಕು** (Kernel) ಬಲು ಸವಿ. ಅದನ್ನು ಜನರು ಪ್ರೀತಿಯಿಂದ ತಿನ್ನುತ್ತಾರೆ. ಕಾಯಿಗಳು ಬಲಿತರೆ ಅವುಗಳಲ್ಲಿ ಕೊಬ್ಬರಿಯಾಗುವದು. ಅದನ್ನು ದಿನಂಪ್ರತಿಯ ಅಡಿಗೆಗಳಲ್ಲಿಯೂ ಪಕ್ವಾನ್ನಗಳಲ್ಲಿಯೂ ಮಿಠಾಯಿಗಳಿಗಾಗಿಯೂ ಬಡವರೂ ಶ್ರೀಮಂತರೂ ಉಪಯೋಗಿಸುತ್ತಾರೆ. ಕೊಬ್ಬರಿಯನ್ನು ಗಾಣಕ್ಕೆ ಕೊಟ್ಟರೆ ಸ್ವಾದಿಷ್ಟವಾದ ಎಣ್ಣೆಯು ಬರುತ್ತದೆ. ಇದನ್ನು ಜಗತ್ತಿನ ಪ್ರತಿಯೊಂದು ಭಾಗದಲ್ಲಿಯೂ ಅಡಿಗೆಗಾಗಿ ಉಪಯೋಗಿಸುತ್ತಾರೆ. ಈ ಎಣ್ಣೆಯನ್ನು ಮೈಗೂ ತಲೆಗೂ ಹೂಸಿಕೊಳ್ಳುತ್ತಾರೆ. ಇದರಿಂದ ತರತರದ ಸುವಾಸನೆಯುಳ್ಳ ತೈಲ (hair oil) ಗಳನ್ನು ಮಾಡುತ್ತಾರೆ. ಸಾಬಾಣಗಳನ್ನೂ ಮೇಣಬತ್ತಿಗಳನ್ನೂ ಮಾಡುವ ವ್ಯವಸಾಯಗಳಲ್ಲಿ ವಿಶೇಷವಾಗಿ ಈ ಎಣ್ಣೆಯನ್ನೇ ಉಪಯೋಗಿಸುತ್ತಾರೆ. ಈ ಪ್ರಾಂತದಲ್ಲಿ ದೀಪಗಳಿಗಾಗಿಯೂ ಈ ಎಣ್ಣೆಯನ್ನೆ ಉಪಯೋಗಿಸುತ್ತಾರೆ. ಕೊಬ್ಬರಿಯಿಂದ ಎಣ್ಣೆಯನ್ನು ಹೀರಿಕೊಂಡನಂತರ ಉಳಿಯುವ ಚರಟಕ್ಕೆ ಹಿಂಡಿಯೆನ್ನುತ್ತಾರೆ. ಈ ಪ್ರಾಂತದಲ್ಲಿ ದನಕರುಗಳಿಗೆ ಇದು ಮುಖ್ಯವಾದ ಆಹಾರ; ಇದನ್ನು ಗೊಬ್ಬರದಂತೆ ಬೆಳೆಗಳಿಗೂ ಹಾಕುತ್ತಾರೆ. ಪರದೇಶಗಳಲ್ಲಿ ಈ ಹಿಂಡಿಯಿಂದ ಅನೇಕ ತರದ ಬಿಸ್ಕೀಟುಗಳನ್ನು ಮಾಡುತ್ತಾರೆ.

ಉತ್ತರಕನ್ನಡ ಜಿಲ್ಲೆಯಲ್ಲಿ ೧೨೦೦೦ ಎಕರೆ ಗಳಿಗಿಂತ ಹೆಚ್ಚಾಗಿ ತೆಂಗಿನ ತೋಟಗಳುಳ್ಳ ನೆಲವುಂಟು.

ಕೊಬ್ಬರಿಯ ಸುತ್ತುಮುತ್ತಲಿರುವ ಕರಟ (shell) ಗಳಿಂದ ಬಡಬಗ್ಗರು ಪೇಲೆ--ಥಾಲಿಗಳನ್ನು ಮಾಡಿಕೊಳ್ಳುತ್ತಾರೆ ; ಚಮಚೆ ಸವುಟುಗಳನ್ನು ಮಾಡಿಕೊಳ್ಳುತ್ತಾರೆ. ಶ್ರೀಮಂತರ ಹುಕ್ಕಾಗಳು ಇವುಗಳಿಂದಲೇ ತಯಾರಿಸಲ್ಪಡುತ್ತವೆ. ಶರ್ಟುಗಳ ಮತ್ತು ಕೋಟುಗಳ **ಗುಬ್ಬಿ** (button) ಗಳನ್ನು ಇವುಗಳಿಂದ ಮಾಡುತ್ತಾರೆ. ಕರಟಗಳ ಉರಿಯು ತೀಕ್ಷ್ಣವಾದದ್ದು. ಅದಕ್ಕಾಗಿ ಅವು ಪರದೇಶಗಳಿಗೆ ಹೇರಳವಾಗಿ ರಫ್ತ ಮಾಡಲ್ಪಡುತ್ತವೆ.

ಕರಟಗಳ ಸುತ್ತುಮುತ್ತಲಿರುವ ಸಿಪ್ಪೆಗಳಿಂದ ಕತ್ತವನ್ನು ಮಾಡುತ್ತಾರೆ. ಕತ್ತದಿಂದ ನಾರು, ಹುರಿ, ಹಗ್ಗಗಳನ್ನು ಮಾಡುತ್ತಾರೆ. ಗಾದಿ-ಲೋಡು-ತಿವಾಸಿಗೆಗಳಿಗೆ ಅದನ್ನು ಉಪಯೋಗಿಸುತ್ತಾರೆ. ಹುರಿಗಳಿಂದ ತರತರದ ಚಾಪೆ, ಬಾಗಿಲಚಾಪೆ, ಬ್ರಶ್-ಚಾಪೆ, ಜಮಖಾನೆಗಳನ್ನೂ ಬಲೆಗಳನ್ನೂ ಮಾಡುತ್ತಾರೆ.

ತೆಂಗಿನ ಹೂವುಗಳು ಅರಳುವ ಮುಂಚೆ ಅವುಗಳ ಕೊನೆಯನ್ನು ಕಟ್ಟಿದರೆ, ಅದರಿಂದ ಒಂದು ರಸವು ಹೊರಬರುವದು. ಅದನ್ನು ಹುಳಿಯಾಗಗೊಟ್ಟರೆ ಅದು ಶೇಂದಿಯಾಗುವದು. ಈ ಶೇಂದಿಯಿಂದ **ಅರಕ** ಎಂಬ ಬಹು ಸೊಗಸಾದ ಸರಾಯಿಯನ್ನು ತಯಾರಿಸಬರುತ್ತದೆ. ಯಾವತ್ತು ತರದ ಸರಾಯಿಗಳಲ್ಲಿ ಈ ಸರಾಯಿಯೇ ಬಹು ಮಧುರವು. ತೆಂಗಿನ ರಸವನ್ನು ಹುಳಿಯಾಗಗೊಡದೆ ಅದನ್ನು ಬತ್ತಿಸಿ ಬೆಲ್ಲವನ್ನೂ ಸಕ್ಕರೆಯನ್ನೂ ಮಾಡಬರುತ್ತದೆ. ಈ ಬೆಲ್ಲವು ಶರೀರಕ್ಕೆ ಸುಖಕರವಾದುದು. ಈ ರಸವನ್ನು ಹುಳಿಯಾಗಗೊಡದೆ, ಸೂರ್ಯಪ್ರಕಾಶವು ಅದರಮೇಲೆ ಬೀಳುವ ಪೂರ್ವದಲ್ಲಿ ಕುಡಿದರೆ ಆರೋಗ್ಯಕರವು.

ತೆಂಗಿನ ಗಿಡಗಳ ಎಲೆಗಳಿಗೆ ಹೆಡೆಗಳೆನ್ನುತ್ತಾರೆ. ಇವುಗಳನ್ನು ಹೆಣೆದು ಮಡಲುಗಳನ್ನು ಮಾಡುತ್ತಾರೆ. ಮಡಲುಗಳಿಂದ ಬಡವರು ತಮ್ಮ ಮನೆಗಳ ಹೊದಿಕೆಗಳನ್ನು ಮಾಡಿಕೊಳ್ಳುತ್ತಾರೆ. ಗೋಡೆಗಳಿಗೂ ಅವುಗಳನ್ನೇ ಉಪಯೋಗಿಸುತ್ತಾರೆ. ಶ್ರೀಮಂತರು ಮನೆಗಳ ಮುಂದಿನ ಚಪ್ಪರಗಳಿಗೂ ಮಳೆಗಾಲದ ರಿಪೇರಿಗಳಿಗೂ ಇವುಗಳನ್ನೇ ಉಪಯೋಗಿಸುತ್ತಾರೆ. ಮಡಲುಗಳಬಗ್ಗೆ ಉಪಯೋಗಿಸಬಾರದ ಹೆಡೆಗಳ ಮುಂಭಾಗವನ್ನು ಹೆಣೆದು ಬೀಸಣಿಕೆಗಳನ್ನು ಮಾಡುತ್ತಾರೆ; ಬುಟ್ಟಿಗಳನ್ನು ಮಾಡುತ್ತಾರೆ. ಹೆಡೆಗಳ ಬುಡದ ದಂಟಿನಿಂದ ಬೇಲಿಗಳನ್ನು ಮಾಡುತ್ತಾರೆ. ಹೆಡೆಗಳ ತುದಿಯಿಂದ ಬುಡದ ವರೆಗಿನ ದಂಟಿನಲ್ಲಿ ಒಂದುತರದ ನಾರು ಇರುತ್ತದೆ. ಇದರಿಂದ ಬಹು ಬಲಿಷ್ಠವಾದ ಹಗ್ಗಗಳನ್ನು ಮಾಡುತ್ತಾರೆ. ಹೆಡೆಗಳ ಮಗ್ಗಲುಗಳೊಳಗಿನ ಎಲೆಗಳ ನಡುವಿನ ಕಡ್ಡಿಗಳಿಂದ ಕಸಬರಿಗೆಗಳನ್ನು ಮಾಡುತ್ತಾರೆ. ಒಣ ಎಲೆಗಳಿಂದ ಹಿಲಾಲುಗಳನ್ನು ಮಾಡುತ್ತಾರೆ. ನಮ್ಮ ಪ್ರಾಂತದ ಹಳ್ಳಿಯವರಿಗೆ ಇವೇ ಕಂದೀಲುಗಳು—ಇವೇ ಟಾರ್ಚ್ ಲಾಯಿಟುಗಳು.

ತೆಂಗಿನ ಗಿಡಗಳ ಬೊಡ್ಡೆಗಳನ್ನು ಗುಡಿಸಲುಗಳಿಗಾಗಿ ಉಪಯೋಗಿಸುತ್ತಾರೆ. ಹಳ್ಳಿಗಳಲ್ಲಿ ಬಾಗಿಲು ಕಿಡಿಕಿಗಳ ಚೌಕಟ್ಟುಗಳನ್ನು ಇವುಗಳಿಂದಲೇ ಮಾಡುತ್ತಾರೆ. ಕಿಡಿಕಿಗಳ ಸರಳುಗಳನ್ನೂ ಇವುಗಳಿಂದ ತಯಾರಿಸುತ್ತಾರೆ. ಬಲದಲ್ಲಿಯೂ ಬಾಳಿಕೆಯಲ್ಲಿಯೂ ಸಾಗವಾನಿ ಕಟ್ಟಿಗೆಗಳಿಗೂ ಇವು ಹಿಂದಾಗುವದಿಲ್ಲ. ವಿದೇಶೀ ಮಾರ್ಕೆಟುಗಳಲ್ಲಿ Porcupine wood ಎಂಬ ಹೆಸರಿನಿಂದ ಖ್ಯಾತಿಗೊಂಡಿರುವದು ಇದೇ. ಚಾಕು-ಚೂರಿಗಳ ಹಿಡಿಕೆಗಳಿಗಾಗಿ ಇದನ್ನು ಉಪಯೋಗಿಸುತ್ತಾರೆ. ಉರುವಲಕ್ಕಂತೂ ಕೇಳುವದೇ ಬೇಡ.

ತ್ರಾವಣಕೋರಿನಲ್ಲಿಯ ಕತ್ತದ ವ್ಯವಸಾಯ

ಈ ಕಲ್ಪವೃಕ್ಷವು ಮಾನವಸೇವೆಯನ್ನು ಈ ವಿಧದಿಂದ ಅಂಗಾಂಗಗಳಿಂದಲೂ ಮಾಡಲು ಕೈಕೊಂಡಿದ್ದರೂ, ನಮ್ಮ ಪ್ರಾಂತದವರು ವಿಶೇಷತಃ ಕೊಬ್ಬರಿಗಾಗಿಯೂ ಎಣ್ಣೆಗಾಗಿಯೂ ಮಾತ್ರ ಇದನ್ನು ಬೆಳೆಯಿಸುತ್ತಿದ್ದಾರೆ. ಆದರೆ ತ್ರಾವಣಕೋರ್ ಮತ್ತು

ಕೋಚೀನಗಳೆಂಬ ಮದ್ರಾಸ ಇಲಾಖೆಯ ಸಂಸ್ಥಾನಗಳಲ್ಲಿ, ಕಾಯಿಗಳ ಮೇಲಿನ ಸಿಪ್ಪೆಗಳಿಗಾಗಿ— ಮುಖ್ಯತಃ— ತೆಂಗಿನ ವ್ಯವಸಾಯವನ್ನು ಮಾಡುತ್ತಾರೆ. ಅಲ್ಲಿ ಕೊಬ್ಬರಿ ಮತ್ತು ಎಣ್ಣೆಗಳು ಎರಡನೆಯ ಸ್ಥಾನವನ್ನು ಪಡೆಯುತ್ತವೆ.

ತ್ರಾವಣಕೋರ್ ಸಂಸ್ಥಾನದಲ್ಲಿ ೧೯೩೯ ನೆಯ ಇಸವಿಯಲ್ಲಿ ತೆಂಗಿನ ವ್ಯವಸಾಯದಿಂದ ಬಂದ ಉತ್ಪನ್ನವು ೩೭೯ ಲಕ್ಷ ರೂಪಾಯಿಗಳದಿತ್ತು. ಅದರಲ್ಲಿ ಸಿಪ್ಪೆಗಳಿಂದ ಬರುವ ನಾರು-ಹುರಿ-ಕತ್ತ ಮೊದಲಾದುವುಗಳಿಂದ ತಯಾರಿಸಲ್ಪಡುವ ಸರಕುಗಳಿಂದ ಹುಟ್ಟಿದ ಉತ್ಪನ್ನವು ೨೦೩ ಲಕ್ಷ ರೂಪಾಯಿಗಳದಿತ್ತು. ಅಲ್ಲಿಯ ಸರಕಾರದ ಉತ್ಪನ್ನದಲ್ಲಿ ನೂರಕ್ಕೆ ೫೮ ರಷ್ಟು, ಕತ್ತ ಮತ್ತು ಅದರಿಂದ ತಯಾರಿಸಲಾದ ಸರಕುಗಳ ಮೇಲೆ ಹೇರಿದ ಕರದಿಂದ ಬಂದಿತ್ತು.

೧೯೩೧ರಲ್ಲಾದ ಜನಗಣನೆಯಂತೆ ಅಲ್ಲಿಯ ಜನಸಂಖ್ಯೆಯಾಗಿರುವ ೫೦ ಲಕ್ಷದಲ್ಲಿ ೩॥ ಲಕ್ಷ ಜನರು ಒಕ್ಕಲುತನವಲ್ಲದ ವ್ಯವಸಾಯಗಳಲ್ಲಿ ತೊಡಗಿದ್ದರು. ಇವರಲ್ಲಿ ೧। ಲಕ್ಷ ಜನರು ಅರ್ಥಾತ್ ನೂರರಲ್ಲಿ ೩೬ ರಷ್ಟು ಜನರು ಕತ್ತ ಮತ್ತು ಕತ್ತದ ಸರಕುಗಳ ವ್ಯವಸಾಯದಲ್ಲಿ ತೊಡಗಿದುದು ಕಂಡುಬರುತ್ತದೆ.

೧೯೩೩ರಲ್ಲಿ ಆ ಸಂಸ್ಥಾನದಿಂದ ೧೧॥ ಕೋಟಿ ಬೆಲೆಯ ಸರಕುಗಳು ರಫ್ತ ಆಗಿದ್ದುವು. ಅವುಗಳಲ್ಲಿ ಕತ್ತದ ಸರಕುಗಳ ಕ್ರಯವೇ ೨ ಕೋಟಿ ರೂಪಾಯಿಗಳದಿತ್ತು.

ಈ ವ್ಯವಸಾಯದ ವೃದ್ಧಿಯು ಆ ಸಂಸ್ಥಾನದಲ್ಲಿ ಯಾವರೀತಿಯಿಂದ ಆಗುತ್ತ ಸಾಗಿರುತ್ತದೆಂಬುದು ಕೆಳಗಿನ ಕೋಷ್ಟಕದಿಂದ ತಿಳಿಯುವಂತೆ ಆದೆ.

ಕೋಚೀನದ ಕತ್ತವು ಲೋಕೈಕಪ್ರಸಿದ್ಧವಾಗಿದೆ ಯಾವರೂ ಶರಾವತೀ ತೀರದ ಕನ್ನಡ ನಾಡಿನ ಕತ್ತವು ಯಾವ ಗುಣದಲ್ಲಿಯೂ ಅದಕ್ಕೆ ಹಿಂದೆ ಬೀಳಲಾರದು!

ಕತ್ತದ ವ್ಯವಸಾಯಗಾರರ ಸಂಖ್ಯೆ.

೧೯೨೧..೧೦೨೬೩೪

೧೯೩೧..೧೨೬೦೦೦

ಕತ್ತದ ಸರಕುಗಳ ಕಾರಖಾನೆಗಳ ಸಂಖ್ಯೆ.

೧೯೧೧ .. ೧೯೮೩

೧೯೨೧ .. ೫೧೦೧

೧೯೩೧ .. ೬೧೩೨

ಈ ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಗಂಡಸರು ೦—೧೨—೦ ಯಂತೆಯೂ, ಹೆಂಗಸರು ೦-೭-೮ ಯಂತೆಯೂ, ಹುಡುಗರು ೦-೬-೦ ಯಂತೆಯೂ; ಹುಡುಗಿಯರು ೦-೫-೬ ಯಂತೆಯೂ ದಿನವೊಂದರ ದುಡಿತವನ್ನು ಮಾಡುತ್ತಾರೆ.

ಈ ವ್ಯವಸಾಯದಲ್ಲಿ ಶಿಖರವನ್ನೇ ಮುಟ್ಟಿರುತ್ತಿದ್ದು, ಇಂಗ್ಲಂಡ್ ಅಮೇರಿಕ ಆಸ್ಟ್ರೇಲಿಯ ಮೊದಲಾದ ಪರದೇಶಗಳಿಗೆ ರಫ್ತ ಮಾಡುವ ಬಗ್ಗೆ ಏರ್ಪಡಿಸಿದ ಏತದ್ದೇಶೀಯ- ವಿದೇಶೀಯ ಜನರ ೬೧೩೨ ಕಾರಖಾನೆಗಳುಳ್ಳ ಈ ಸಂಸ್ಥಾನದಲ್ಲಿ ಕೂಡ, ವ್ಯವಸಾಯಗಾರರಲ್ಲಿ ನೂರಕ್ಕೆ ೬ ರಷ್ಟು ಜನರು ಮಾತ್ರ ಕಾರಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಉಳಿದ ೯೪ ರಷ್ಟು ವ್ಯವಸಾಯಗಾರರು ತಮ್ಮ ವ್ಯವಸಾಯದ ಅಂಗ- ಉಪಾಂಗಗಳನ್ನು ತಮ್ಮ ಗುಡಿಸಿಲುಗಳಲ್ಲಿಯೇ ನೋಡಿಕೊಳ್ಳುತ್ತಿದ್ದಾರೆ. ಅವರಲ್ಲಿ ೩೦ ದಷ್ಟು ಜನರು ಹೆಂಗುಸರೇ ಸರಿ. ಕತ್ತ, ಹುರಿ, ಹಗ್ಗಗಳನ್ನು ಬಿಡುವಿನ ಸಮಯದಲ್ಲಿ ಮಾಡಲಾಗುತ್ತದೆ. ನೇಯ್ಗೆಯ ಕೆಲಸವು ಮಾತ್ರ ಕಾರಖಾನೆಗಳಲ್ಲಾಗುತ್ತದೆ.

ಉತ್ತರಕನ್ನಡದಲ್ಲಿ

ನಮ್ಮ ಜಿಲ್ಲೆಯಲ್ಲಿ- ವಿಶೇಷತಃ ಹೊನ್ನಾವರ ತಾಲೂಕಿನಲ್ಲಿ- ಕತ್ತ,ಹುರಿ,ಹಗ್ಗಗಳನ್ನು ಮಾಡುವ ವ್ಯವಸಾಯವು ಅನಾದಿಯಿಂದ ನಡೆದುಬಂದಿದೆ. ಈ ವ್ಯವಸಾಯದಿಂದ ೩೦೦೦ ಕ್ಕೂ ಮೇಲ್ಪಟ್ಟು ಜನರು ತಮ್ಮ ಅನ್ನವನ್ನು ಇಲ್ಲಿ ಕಂಡುಕೊಳ್ಳುತ್ತಿದ್ದಾರೆ. ಇವರ ಜೀವನಸ್ವಾತಂತ್ರ್ಯಕ್ಕೆ ಯಾವತರದ ತೊಂದರೆಯನ್ನೂ ತಂದುಕೊಡದೆ, ಇವರನ್ನು ಸಾವುಕಾರೀ ಪಾಶಕ್ಕೆ ಸಿಲುಕಿಸದೆ, ಇವರ ಸಂಪತ್ತನ್ನು ಅಭಿವೃದ್ಧಿಸುವದಲ್ಲದೆ, ತ್ರಾವಣಕೋರಿನ ಮಾದರಿಯಿಂದಲೇ ಈ ತಾಲೂಕಿನಲ್ಲಿ ಈ ವ್ಯವಸಾಯವನ್ನು ಊರ್ಜಿತಾವಸ್ಥೆಗೆ ತಂದು, ಇನ್ನೂ ೮೦೦೦ ಜನರನ್ನು ಈ ವ್ಯವಸಾಯದಲ್ಲಿ ಸೇರ್ಪಡಿಸಿ, ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸಿ ಕೊಟ್ಟು, ಉದ್ಯೋಗಿಗಳಿಗೆ ಸುಖ- ಸ್ವಾತಂತ್ರ್ಯಗಳನ್ನು ಒದಗಿಸಿ ಕೊಟ್ಟು, ಹಳ್ಳಿಗಳ ಪುನರುಜ್ಜೀವನವನ್ನು ಮಾಡಿ, ತಾಲ್ಲೂಕಿನ ಮುಖ್ಯಸ್ಥಳವಾದ ಹೊನ್ನಾವರವನ್ನು ಉದ್ಯೋಗದ ಜೇನುಬೀಡನ್ನಾಗಿ ಮಾಡುವದು ಸಾಧ್ಯವೂ ಸುಲಭವೂ ಇರುತ್ತದೆಂಬುದನ್ನು ಮನಗಂಡು, ಈ ವಿಷಯದಲ್ಲಿಯ ಪ್ರಯತ್ನವು ಕೆಲಕಾಲದಿಂದ ಕೈಕೊಳ್ಳಲ್ಪಟ್ಟಿದೆ.

ತೆಂಗಿನಕಾಯಿ ಕೊಯ್ಲು

ತೆಂಗಿನ ಗಿಡಗಳು ಹೂಬಿಟ್ಟ ೧೨ ತಿಂಗಳುಗಳಲ್ಲಿ ಕಾಯಿಗಳು ಬಲಿಯುತ್ತವೆ. ತ್ರಾವಣಕೋರಿನಲ್ಲಿ ಕಾಯಿಗಳು ಪೂರ್ಣವಾಗಿ ಬಲಿಯುವ ಒಂದು ತಿಂಗಳ ಮುಂಚೆಯೇ ಅವುಗಳನ್ನು ಕೊಯ್ಯುತ್ತಾರೆ. ಎಳೆಯ ಕಾಯಿಗಳ ಸಿಪ್ಪೆಗಳಿಂದ, ಅಂದವಾಗಿ ಕಾಣುವ ಬಿಳಿಯದಾದ ನಾರು ಹೊರಡುತ್ತದೆ. ಆದರೆ ಕೊಬ್ಬರಿ-ಎಣ್ಣೆಗಳೇ ಪ್ರಧಾನವಾಗಿರುವ ಸೀಲೋನ್ ಮತ್ತು ಹಿಂದುಸ್ತಾನದ ಇತರ ಪ್ರಾಂತಗಳಲ್ಲಿ, ಕಾಯಿಗಳನ್ನು ಪೂರ್ಣವಾಗಿ ಬಲಿಯಗೊಡುತ್ತಾರೆ. ಶರಾವತೀತೀರದಲ್ಲಿ ಕೆಲವು ಪ್ರಮಾಣದಿಂದ ಕತ್ತವು ತಯಾರಾಗುತ್ತದೆ. ಅದು ಅಲ್ಲಿಯ ಜನರ ವ್ಯವಸಾಯವಾಗಿರುತ್ತದೆ. ಆದ್ದರಿಂದ ಕಾಯಿಗಳಿಗೆ ಗಿರಾಕಿಗಳು ಸಿಗುವರೆಂದು ಕಂಡಕೂಡಲೆ ಅಲ್ಲಿಯ ಜನರೂ ಪೂರ್ಣವಾಗಿ ಬಲಿಯುವ ಪೂರ್ವದಲ್ಲಿಯೆ ಅವುಗಳನ್ನು ಕೊಯ್ದುಬಿಡುತ್ತಾರೆ.

ಕಾಯಿಗಳನ್ನು ಗಿಡಗಳಿಂದ ಕೊಯ್ಯುವದೂ ಒಂದು ವ್ಯವಸಾಯವೇ. ಈ ವ್ಯವಸಾಯದಿಂದ ಈ ತಾಲ್ಲೂಕಿನ ೫೦೦ ಜನರಾದರೂ ಜೀವನವನ್ನು ಮಾಡುತ್ತಿದ್ದಾರೆ. ತೆಂಗಿನ ಮರಗಳು ಬಹು ಎತ್ತರವಾಗಿರುತ್ತವೆ. ಅವುಗಳ ತಲೆಯು ಬಹು ಭಾರ. ಬೊಡ್ಡೆಗೆ ಟೊಂಗೆ ಟಿಸಿಲುಗಳಿರುವದಿಲ್ಲ. ಬೊಡ್ಡೆಗಳು ನೀಟಾಗಿ

ಸವುರಾಗಿರುತ್ತವೆ. ಇವೆಲ್ಲ ಕಾರಣಗಳಿಂದ ಸ್ವಲ್ಪಮಾತ್ರವಾಗಿ ಗಾಳಿಯಾಡಿದರೂ ಗಿಡಗಳು ಒಂದೆರಡು ಮೂರು ಅಚೆ ಈಚೆ ಅಲುಗಾಡುತ್ತವೆ. ಗಾಳಿಯು ವಿಶೇಷವಿದ್ದರಂತೂ ತೀರಿಬಿಟ್ಟಿತು. ಹೀಗಾಗಿ ಈ ಗಿಡಗಳನ್ನು ಹತ್ತುವವರಲ್ಲಿ ಧೈರ್ಯ, ಸಾಹಸ, ಕೌಶಲ್ಯಗಳು ಬೇಕಾಗುತ್ತವೆ. **"ಡೊಂಬರ ಸಾವು ಗಣೆಯ ಮೇಲೆ, ಬಿಲ್ಲವರ ಸಾವು ಮರದ ಮೇಲೆ"** ಎಂಬ ಗಾದೆಯನ್ನು ಎಲ್ಲರೂ ಕೇಳಿರುತ್ತಾರೆ. ಕಾಯಿಗಳನ್ನು ಕೊಯ್ಯುವದು ಒಂದು ವ್ಯವಸಾಯವಾದ್ದರಿಂದ, ಆ ವ್ಯವಸಾಯಗಾರರ ಜಾತಿಯೇ ಪ್ರತ್ಯೇಕವಾಗಿರುತ್ತದೆ.

ಈ ಜಿಲ್ಲೆಯಲ್ಲಿ ೫ ಮರಗಳನ್ನು ಹತ್ತಿ ಕಾಯಿಗಳನ್ನು ಕೊಯ್ದರೆ ಒಂದು ಕಾಯಿಯಂತೆ ಮಜೂರಿಯನ್ನು ಕೊಡಲಾಗುತ್ತದೆ. ತ್ರಾವಣಕೋರ್ ಸೀಲೋನ್‌ಗಳಲ್ಲಿ, ಮಜೂರಿಯು ಮರಗಳ ಸಂಖ್ಯೆಯನ್ನವಲಂಬಿಸಿರುವದಿಲ್ಲ– ಕೊಯಿದ ಕಾಯಿಗಳ ಸಂಖ್ಯೆಯನ್ನವಲಂಬಿಸಿರುತ್ತದೆ. ತ್ರಾವಣಕೋರ್ ಸಂಸ್ಥಾನದಲ್ಲಿ ಸಾವಿರ ಕಾಯಿಗಳನ್ನು ಕೊಯ್ದು ಮಜೂರಿಯು ೧-೪-೦ ಇರುತ್ತದೆ. ಸೀಲೋನಿನಲ್ಲಿ ಗಿಡಗಳ ಉದ್ದಳತೆ ವಯೋಮಾನಗಳನ್ನು ಅನುಲಕ್ಷಿಸಿ ಸಾವಿರ ಕಾಯಿಗಳನ್ನು ಕೊಯ್ದರೆ ೨ ರೂಪಾಯಿಯಿಂದ ೩ ರ ವರೆಗಿನ ಮಜೂರಿಯನ್ನು ಕೊಡುತ್ತಾರೆ. ಒಂದೊಂದು ಕೊಯಿಲಿಗೆ ಒಂದೊಂದು ಗಿಡಕ್ಕೆ ಸರಾಸರಿ ಯಿಂದ ೮ ರಂತೆ ಕಾಯಿಗಳು ದೊರೆಯುತ್ತವೆಂದು ಊಹಿಸಿದರೆ, ನಮ್ಮ ಪ್ರಾಂತದಲ್ಲಿ ಸಾವಿರ ಕಾಯಿಗಳನ್ನು ಕೊಯಿದರೆ ೨೫ ಕಾಯಿಗಳು— ಈಗಿನ ದರಮಾನದಿಂದ ಒಂದು ರೂಪಾಯಿಯ ಮಜೂರಿಯು — ದೊರೆಯುತ್ತದೆನ್ನಬಹುದು. ವರ್ಷ ಒಂದರಲ್ಲಿ ೩ರಿಂದ ೬ರ ವರೆಗೆ ಕೊಯಿಲುಗಳನ್ನು ಮಾಡುವ ರೂಢಿಯಿದೆ.

> **ಉತ್ತರ ಕನ್ನಡನಾಡಿನ ಸಿಪ್ಪೆಗಳು ಆಕಾರದಿಂದಲೂ ತೂಕದಿಂದಲೂ ತ್ರಾವಣಕೋರ್ ಕೋಚೀನಗಳ ಎರಡರಷ್ಟಿದ್ದು ಹೊರಡುವ ಕತ್ತವೂ ಇಮ್ಮಡಿಯಾಗಿರುತ್ತದೆ.**

ಕಾಯಿಗಳ ಸಿಪ್ಪೆ ಸುಲಿಯುವುದು

ಕತ್ತವು ಮಿದುವೂ ನೂಲಲು ಅನುಕೂಲವುಳ್ಳದ್ದೂ ಆಗಬೇಕಾದರೆ, ಕಾಯಿಗಳನ್ನು ಕೊಯಿದ ಒಂದೆರಡು ದಿನಗಳಲ್ಲಿಯೇ ಸಿಪ್ಪೆಗಳನ್ನು ಸುಲಿದು, ಈ ಸಿಪ್ಪೆಗಳನ್ನು ಉಪ್ಪುನೀರಿನ ನದಿಗಳ ತಳದಲ್ಲಿ ಹೂಳಿಡಬೇಕಾಗುತ್ತದೆ. ಕಾಯಿಗಳನ್ನು ಸುಲಿಯುವದೂ ಒಂದು ವ್ಯವಸಾಯವು. ಆದರಿಂದಲೂ ನೂರಾರು ಮಂದಿ ಈ ತಾಲ್ಲೂಕಿನಲ್ಲಿ ಜೀವನಮಾಡಿಕೊಂಡಿರುತ್ತಾರೆ.

ಕಾಯಿಗಳನ್ನು ಕಬ್ಬಿಣದ ಇಲ್ಲವೆ ಬಿರುಸಾದ ಕಟ್ಟಿಗೆಯ ಶೂಲದಿಂದ ಸುಲಿಯುತ್ತಾರೆ. ಆ ಶೂಲಗಳನ್ನು ನೆಲದಲ್ಲಿ ನೆಡುತ್ತಾರೆ. ಅವು ನೆಲದಮೇಲೆ ೨ ಮೊಳ ಎತ್ತರವಾಗಿರುತ್ತವೆ. ಅವು ೨ ಇಂಚು ಅಗಲವಾಗಿಯೂ ½ ಇಂಚು ದಪ್ಪವಾಗಿಯೂ ಇರುತ್ತವೆ. ತುದಿಯು ಚೂಪಾಗಿರುತ್ತದೆ.

ಈ ತಾಲ್ಲೂಕಿನವರು ಸಾಮಾನ್ಯವಾಗಿ ೮ ತಾಸುಗಳ ತನಕ ದುಡಿದು, ದಿನವೊಂದರಲ್ಲಿ ೧೫೦೦ ಕಾಯಿಗಳನ್ನು ಸುಲಿಯುತ್ತಾರೆ. ೨೫೦೦-೩೦೦೦ ಕಾಯಿಗಳನ್ನು ಸುಲಿಯುವವರೂ ಅಲ್ಲಲ್ಲಿ ಕಂಡು ಬರುತ್ತಾರೆ. ಒಂದು ಸಾವಿರ ಕಾಯಿಗಳನ್ನು ಸುಲಿದರೆ ಸೀಲೋನಿನಲ್ಲಿ ೨ ರೂಪಾಯಿಗಳಿಂದ ೩ ರೂಪಾಯಿಗಳ ವರೆಗಿನ ಮಜೂರಿಯು ದೊರೆಯುತ್ತದೆ. ತ್ರಾವಣಕೋರಿನಲ್ಲಿ ೧ ರೂಪಾಯಿಯಿಂದ ೧-೮-೦ ಮಜೂರಿಯು ದೊರೆಯುತ್ತದೆ. ನಮ್ಮ ಪ್ರಾಂತದ ಕಾಯಿಗಳು ಆಕಾರದಲ್ಲಿ ದೊಡ್ಡವಿರುವದರಿಂದಲೂ ಸಿಪ್ಪೆಗಳು ದಪ್ಪವಾಗಿರುವದರಿಂದಲೂ ಸುಲಿಯುವದು ಅಲ್ಲಿಯಷ್ಟು ಕಷ್ಟವಾಗುವದಿಲ್ಲ. ತ್ರಾವಣಕೋರ್ ಕೋಚೀನಗಳಲ್ಲಿ ದಿನ ಒಂದಕ್ಕೆ ೫೦೦ ಕಾಯಿಗಳನ್ನು ಸುಲಿಯುವವರೂ ವಿರಳ.

ಸಿಪ್ಪೆಯ ಬೆಲೆ

ಸಿಪ್ಪೆಗಳ ದರವು ಬೇರೆ ಬೇರೆ ಪ್ರದೇಶದಲ್ಲಿ ಬೇರೆಬೇರೆಯಾಗಿರುತ್ತದೆ. ಒಣಗಿದ ಸಿಪ್ಪೆಗಳಿಂದ ಪ್ರಯೋಜನವಿಲ್ಲ. ಅವು ಸಾವಿರಕ್ಕೆ ೨ ರ ದರದಲ್ಲಿಯೂ ದೊರೆಯುತ್ತವೆ. ಆದರೆ ನಾರನ್ನು ತಯಾರಿಸಲು ಬರುವ ಹಸಿ ಸಿಪ್ಪೆಗಳು ತುಟ್ಟಿ. ೧೯೩೮ ನೆಯ ಇಸವಿಯ ದರವು ಈ ಕೆಳಗಿನಂತಿತ್ತು.

ತ್ರಾವಣಕೋರ್	ಸಾವಿರಕ್ಕೆ	೬ ರಿಂದ ೮ ರೂ.
ಸೀಲೋನ್........	,,	೨ ರಿಂದ ೩ ,,
ಮಲಬಾರ್........	,,	೩-೧೨-೦ ,,
ಹೊನ್ನಾವರ......	,,	೩॥ ಯಿಂದ ೪ ,,

ಸೀಲೋನಿನಲ್ಲಿ ಕಳೆದ ೩ ವರ್ಷಗಳಿಂದ ದರವು ಏರುತ್ತ ನಡೆದಿದೆ. ನಮ್ಮ ಪ್ರಾಂತದ ಸಿಪ್ಪೆಗಳು ಆಕಾರದಿಂದಲೂ ತೂಕದಿಂದಲೂ ತ್ರಾವಣಕೋರ್ ಕೋಚೀನಗಳ ಎರಡರಷ್ಟಿದ್ದು, ಇವುಗಳಿಂದ ಹೊರಡುವ ಕತ್ತವೂ ಇಮ್ಮಡಿಯಾಗಿರುತ್ತದೆ.

ಸಿಪ್ಪೆಯನ್ನು ಕತ್ತವಾಗಿಸುವುದು

ಕಾಯಿಗಳನ್ನು ಕೊಯಿದು ಒಂದೆರಡು ದಿನಗಳಲ್ಲಿ ಸಿಪ್ಪೆಗಳನ್ನು ಸುಲಿದು, ಮೇಲೆ ಹೇಳಿದಂತೆ ಸಿಪ್ಪೆಗಳನ್ನು ಉಪ್ಪುನೀರಿನ ನದಿಗಳ ತಳದಲ್ಲಿ ಹೂಳಿಡುತ್ತಾರೆ. ೮-೧೦ ತಿಂಗಳುಗಳ ಅವಧಿಯಲ್ಲಿ ಉಪ್ಪುನೀರಿನ ಗುಣಧರ್ಮದಿಂದಲೂ, ನದಿಗಳ ತಳದಲ್ಲಿರುವ ಜಿಗುಟುಮಣ್ಣಿನ ಗುಣಧರ್ಮದಿಂದಲೂ, ಸಿಪ್ಪೆಗಳೊಳಗೆ ನಾರುಗಳನ್ನು ಒಂದಕ್ಕೊಂದನ್ನು ಅಂಟಿಸಿ ಹಿಡಿದ ದ್ರವವು ನಾಶವಾಗಿ, ನಾರುಗಳು ಒಂದರಿಂದೊಂದು ಸಡಿಲಾಗುತ್ತವೆ. ಆಮೇಲೆ ಒಂದು ರಾತಲಿನಷ್ಟು ಭಾರದ ಒಂದು ಮೊಳ ಉದ್ದದ ಕಟ್ಟಿಗೆಯ ತುಂಡಿನಿಂದ ಸಿಪ್ಪೆಗಳನ್ನು ಜಪ್ಪಲು, ನಾರುಗಳು ಪ್ರತ್ಯೇಕವಾಗುತ್ತವೆ. ಇವುಗಳನ್ನು ತೊಳೆದು ಒಣಗಿಸಿದರೆ ಕತ್ತವಾಗುವದು.

ತ್ರಾವಣಕೋರ್ ಕೋಚೀನಗಳ ಕತ್ತವು ಬೆಳ್ಳಗಾಗಿಯೂ ಹೊಳಪುಳ್ಳದ್ದಾಗಿಯೂ ಇರುತ್ತದೆ. ಇದು ಜಗತ್ತಿನಲ್ಲೆಲ್ಲ 'ಕೋಚೀನ ಫೈಬರ್ಸ್' ಎಂಬ ಹೆಸರಿನಿಂದ ಖ್ಯಾತಿಗೊಂಡಿದೆ. ಈ ಬಣ್ಣವೂ ಈ ಹೊಳಪೂ ಅವಕ್ಕೆ ಬರಲು, ಆ ಪ್ರಾಂತದಲ್ಲಿ ಬಹುದೂರದ ವರೆಗೂ ಒಳಸೇರಿದ ಸಮುದ್ರದ ಆಖಾತವೂ (backwaters) ಆದರ ಬುಡದೊಳಗಿನ ಕರಿಯ ಜಿಗುಟು ಮಣ್ಣೂ ಕಾರಣವಾಗಿ

ಇರುತ್ತವೆ. ಸಮುದ್ರದ ಭರತಿ-ಇಳಿತಗಳಿಂದ ಸಿಪ್ಪೆಗಳಮೇಲೆ ಪರಿಣಾಮವನ್ನು ಮಾಡುತ್ತಿರುವ ಉಪ್ಪುನೀರು, ದಿನ ಒಂದರಲ್ಲಿ ಎರಡಾವೃತ್ತಿ ಬದಲಾಗುತ್ತದೆ. ಆದ್ದರಿಂದ ಬಾರಿಬಾರಿಗೂ ಕ್ಷಾರಗುಂಪದ ಹೊಸಹೊಸ ನೀರು ಬರಲು ಅವಕಾಶವಾಗುತ್ತದೆ. ಈ ಸೌಕರ್ಯವು ಜಗತ್ತಿನ ಇನ್ನಾವಭಾಗದಲ್ಲಿಯೂ ಇಲ್ಲವೆಂದು ಅಲ್ಲಿಯವರ ಹೇಳಿಕೆ.

ಕೋಚೀನ್ ಕತ್ತದ ಖ್ಯಾತಿಯನ್ನು ಓದಿ, ಮತ್ತು ಕೇಳಿ, ಅದನ್ನು ಕಣ್ಣಾರೆ ಕಾಣಬೇಕೆಂದು ಕುತೂಹಲದಿಂದ ಅದನ್ನು ಕೋಚೀನಿನಿಂದಲೇ ನಾನು ತರಿಸಿ ನೋಡಿದೆ. ನನ್ನ ಕಣ್ಣುಗಳಿಗಂತೂ ಶರಾವತೀ ತೀರದ ಕತ್ತಕ್ಕಿಂತಲೂ ಅದು ಮಿಗಿಲಾಗಿ ತೋರಲಿಲ್ಲ. ಶಾಸ್ತ್ರೀಯ ರೀತ್ಯಾ ವಿಚಾರವನ್ನೂ ಮಾಡಿದೆ. ಉಪ್ಪುನೀರಿನ ನದಿಗಳಿಗೂ ಸಮುದ್ರಕ್ಕಿದ್ದಂತೆ ಭರತಿ ಇಳಿತಗಳಿದ್ದೇ ಇರುವವು. ಸಮುದ್ರದಿಂದ ೧೮ ಮೈಲುಗಳ ಅಂತರದವರೆಗೂ ಶರಾವತೀ ನದಿಗೆ ಭರತಿ ಇಳಿತಗಳಾಗುತ್ತಿದ್ದು, ನೀರು ಎರಡಾವೃತ್ತಿ ಬದಲಾಗುತ್ತದೆ. ಮೈಸೂರ ಪ್ರಾಂತದಿಂದ ವೇಗದಿಂದ ಹರಿದು ಬರುತ್ತಿರುವಾಗ ಅಲ್ಲಿಯ ಗುಡ್ಡಗಾಡಿನೊಳಗಿನ ಜಿಗುಟುಮಣ್ಣನ್ನು ತಕ್ಕೊಂಡೇ ಬಂದು, ಗೇರಸಪ್ಪೆಯ ಜೋಗಿನ ಗುಂಡಿಯಲ್ಲಿ ೯೦೦ ಫೂಟು ಎತ್ತರದಿಂದ ಹಾರಿ ಇನ್ನಿಷ್ಟು ವೇಗದಿಂದ ಇಲ್ಲಿಗೆ ಬರುವಾಗ, ಸಹ್ಯಾದ್ರಿಯ ಜಿಗುಟು ಮಣ್ಣನ್ನೂ ದೊಡ್ಡ ಪ್ರಮಾಣದಿಂದಲೇ ಈ ನದಿಯು ತರುತ್ತದೆ. ಕೋಚೀನದ್ದೇನು ವಿಶೇಷವೋ ಎಂಬುದು ನನಗಂತೂ ತಿಳಿಯಲಿಲ್ಲ.

ಕತ್ತದ ವ್ಯವಸಾಯಕ್ಕೆ ಯುಕ್ತಕ್ಷೇತ್ರ

ಕತ್ತದ ವ್ಯವಸಾಯವು ಸಾಗಬೇಕಾದರೆ, ಸಮುದ್ರವನ್ನು ಕೂಡುವ ನದಿಯು ಬೇಕು. ಅದು ಸಮುದ್ರಕ್ಕೆ ತೀರ ಸಮೀಪವಾಗಿರಬೇಕು. ಆ ನದಿಗೆ ಭರತಿ- ಇಳಿತಗಳಿರಬೇಕು. ನದಿಯು ಪರ್ವತಗಳಿಂದ ಹರಿದು ಬಂದಿರಬೇಕು. ಮೇಲಿಂದಮೇಲೆ ಅಲ್ಲಿಂದ ಹೊಸ ಹೊಸ ಜಿಗುಟು ಮಣ್ಣನ್ನು ತರುತ್ತಿರಬೇಕು. ಪಕ್ಕದಲ್ಲಿ ತೆಂಗಿನ ತೋಟಗಳಿರುತ್ತಿರಬೇಕು.

ತೋಟಗಳು ತೀರದಿಂದ ಸಮೀಪವಾಗಿದ್ದರೆ, ಸಿಪ್ಪೆಗಳನ್ನು ಅಲ್ಲಿಂದ ತೀರಕ್ಕೆ ತರುವದು ಕಠಿಣವಾಗುವದಿಲ್ಲ. ಆದರೆ ಅವು ದೂರವಾಗಿದ್ದರೆ ಸಿಪ್ಪೆಗಳನ್ನು ಹೊತ್ತುತರುವ ಕೂಲಿಯು ಹೆಚ್ಚಾಗಿ ಬಿಡುತ್ತದೆ. ಆದ್ದರಿಂದ ನದೀತೀರದಿಂದ ದೂರವಾಗಿರುವ ಊರುಗಳಲ್ಲಿ ಸಿಪ್ಪೆಗಳನ್ನು ಒಲೆಗೆ ಹಾಕಬೇಕಾಗುತ್ತದೆ. ಇದರಿಂದ ತೋಟಗಾರರಿಗೆ ಕೆಲಮಟ್ಟಿನ ಉತ್ಪನ್ನವು ನಷ್ಟವಾಗುತ್ತದೆ.

ಈ ತರದ ನೈಸರ್ಗಿಕ ಸೌಕರ್ಯಗಳು ಇಲ್ಲದ ಪ್ರದೇಶದಲ್ಲಿ ಕೂಡ, ರಾಸಾಯನಿಕ ದ್ರವಗಳ ಉಪಯೋಗದಿಂದ, ಸಿಪ್ಪೆಗಳಿಂದ ಕತ್ತವನ್ನು ಸ್ವಲ್ಪ ಅವಧಿಯಲ್ಲಿಯೆ ತಯಾರಿಸಬಹುದೆಂದು ನಾನು ಊಹಿಸಿದ್ದೆ. ೨ ವರ್ಷಗಳ ಹಿಂದೆ ಇದನ್ನು ಮುಂಬಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಈ ಊಹೆಯು ನ್ಯಾಯವಾದದ್ದೆಂದು A. I. V. A. ದವರಿಗೆ ತೋರಿ, ಅವರು ಶೋಧವನ್ನು ಕೈಕೊಂಡರು. ಆ ಸಂಘಕ್ಕೆ ಸೇರಿದ ಡಾ॥ ಟಿ. ಪಿ. ರಾಮನಾಥ ಮೆನನ್ ಎಂಬವರು ಈ ಪ್ರಯತ್ನದಲ್ಲಿ ಯಶವನ್ನು ದೊರಕಿಸಿರುವರೆಂದು ಕಳೆದ ವರ್ಷ ಜೂನ್ ತಿಂಗಳಲ್ಲಿ ಸಂಘದವರು ಪ್ರಸಿದ್ಧಿಸಿದ ವರದಿಯಲ್ಲಿ ಬರೆದಿರುತ್ತದೆ. ಆಣಲೇಕಾಯಿಯ ನೀರಿನಲ್ಲಿ ಸಿಪ್ಪೆಗಳನ್ನು ಮೂರು ದಿನಗಳ ಪರಿಯಂತರ ಮುಳುಗಿಸಿಟ್ಟರೆ, ಉತ್ಕೃಷ್ಟವಾದ ಕತ್ತವು ತಯಾರಾಗುವದಂತೆ. ಈ ಶೋಧದ ಆರ್ಥಿಕ ವಿಚಾರವಿನ್ನೂ ಆಗಿರುವದಿಲ್ಲ. ಶೋಧವು ನಡೆದೇ ಇದೆ.

ಕತ್ತಕ್ಕಾಗಿ ಸಿಪ್ಪೆಗಳನ್ನು ಚಚ್ಚುವುದರ ಕೂಲಿ

ಸಿಪ್ಪೆಗಳು ತಯಾರಾದ ಮೇಲೆ ಅವುಗಳನ್ನು ಜಪ್ಪುವ ಮಜೂರಿಯು ಈ ಪ್ರಾಂತದಲ್ಲಿ ೧೦೦೦ ಸಿಪ್ಪೆಗಳಿಗೆ ೧-೮-೦. ಈ ಕೆಲಸವನ್ನು ಹೆಚ್ಚಾಗಿ ಹೆಂಗುಸರೇ ಮಾಡುತ್ತಾರೆ. ದಿನ ಒಂದಕ್ಕೆ ೮ ತಾಸುಗಳವರೆಗೆ ದುಡಿದು ಹೆಂಗುಸೊಬ್ಬಳು ೧೫೦ ಸಿಪ್ಪೆಗಳನ್ನು ಜಪ್ಪುತ್ತಾಳೆ. ತ್ರಾವಣಕೋರಿನಲ್ಲಿ ಸಾವಿರ ಸಿಪ್ಪೆಗಳನ್ನು ಜಪ್ಪಿದ್ದಕ್ಕೆ ೧/- ರಿಂದ ೨/- ರ ವರೆಗಿನ ಮಜೂರಿಯು ದೊರೆಯುತ್ತದೆ. ಸೀಲೋನಿನಲ್ಲಿ ೧॥ ರೂ. ಯಿಂದ ೨ರ ವರೆಗೆ ದೊರೆಯುತ್ತದೆ.

ಕತ್ತದ ವ್ಯವಸಾಯವು ನಡೆಯುವ ಯಾವತ್ತು ಪ್ರದೇಶಗಳಲ್ಲಿ, ನದಿಯಲ್ಲಿ ಹೂಳಿಟ್ಟ ಸಿಪ್ಪೆಗಳೂ ಕ್ರಯಕ್ಕೆ ದೊರೆಯುತ್ತವೆ. ಅವುಗಳ ದರವನ್ನು ಕೆಳಗೆ ಕಾಣಿಸಲಾಗಿದೆ :

ತ್ರಾವಣಕೋರ್	..೧೦೦೦ಕ್ಕೆ ..	೧೦ ರಿಂದ ೧೨	ರೂ.
ಸೀಲೋನ್........	,, ...	೫ ,, ೮	,,
ಮಲಬಾರ್..........	,, ...	೬ ,, ೦	,,
ಹೊನ್ನಾವರ......	,, ...	೫-೮-೦	,,

ಹೊನ್ನಾವರದಲ್ಲಿ ಕತ್ತದ ಪ್ರಸ್ತುತ ಧಾರಣೆಯು, ೫೬೦ ರಾತಲಗಳ ಖಂಡಿಯೊಂದಕ್ಕೆ ೧೫ ರೂ. ಗಳಂತೆ ಇರುತ್ತದೆ. ಇತರ ಪ್ರಾಂತಗಳಲ್ಲಿಯ ಧಾರಣೆಯು :—

೫೬೦ ರಾತಲುಗಳಿಗೆ :— (೧೯೩೪ರಲ್ಲಿ).

ತ್ರಾವಣಕೋರ್........	೨೨ ರಿಂದ ೨೮	ರೂ.
ಸೀಲೋನ್...........	೧೪ ರಿಂದ ೨೦	,,
ಮಲಬಾರ್..........	೧೬ ರಿಂದ ೨೦	,,
ಹೊನ್ನಾವರ........	೧೫	,,

ಈ ಪ್ರಾಂತದಲ್ಲಿ ಬೆಳೆಯುವ ೧೦೦೦ ಕಾಯಿಗಳ ಸಿಪ್ಪೆಗಳಿಂದ ಸರಾಸರಿ ೮ ರಿಂದ ೯ ಮಣ (ಮಣ ೨೮ ರಾತಲು) ಗಳಷ್ಟು ಕತ್ತವು ತಯಾರಾಗುತ್ತದೆಂದು ಹೇಳಬಹುದು. ಇದನ್ನು ತಯಾರಿಸುವ ಖರ್ಚನ್ನು ಈ ಕೆಳಗಿನ ಲೆಕ್ಕದಲ್ಲಿ ಕಾಣಿಸಲಾಗಿದೆ.

ಅ.	೧೦೦೦ ಸಿಪ್ಪೆಗಳ ಕ್ರಯ ..	೪-೦-೦
ಬ.	ನದಿಯ ತಳದಲ್ಲಿ ಹೊಂಡ ತೋಡಿ, ಸಿಪ್ಪೆಗಳನ್ನು ಹೂಳಿ, ಜಿಗುಟು ಮಣ್ಣನ್ನು ಮುಚ್ಚುವ ಮಜೂರಿ..........	೦-೮-೦
ಕ.	೮ ತಿಂಗಳಾದ ಮೇಲೆ ಅವುಗಳನ್ನು ಹೊರಗೆ ತೆಗೆದು ತರುವವರ ಮಜೂರಿ.	೦-೫-೦
ಡ.	ಸಿಪ್ಪೆಗಳನ್ನು ಜಪ್ಪುವ ಮಜೂರಿ....	೧-೮-೦
		೬-೫-೦

ಮಾರಾಟದಿಂದ ದೊರೆಯುವ ಕ್ರಯ ಸರಾಸರಿ ೬-೮-೦

ಜಾಣತನದ ಪ್ರದರ್ಶನ

ಅರ್ಥಾತ್

ಪ್ರದರ್ಶನದ ಜಾಣತನ

(ಹರಟೆಯೊಂದು)

- **ಮಾನವನ ಇಹಲೋಕಪ್ರವಾಸವು ಸುಖಕರವಾಗಬೇಕಾದರೆ**
- **ಉಗಿಬಂಡಿಯ ಥರ್ಡ್‌ಕ್ಲಾಸ್ ಪ್ರವಾಸದ ಅನುಭವಬೇಕು ;**
- **ಪರಲೋಕಪ್ರವಾಸವು ಸುಖಕರವಾಗಬೇಕಾದರೆ ಸಾಯುವು**
- **ದಕ್ಕಾಗಿ ಅನುಕೂಲಸ್ಥಳವನ್ನು ಆರಿಸುವ ಅನುಭವಬೇಕು.**

ಜನಸಾಮಾನ್ಯರಿಗೆ ಇಂಥ ಅನುಭವ ಸಿಕ್ಕುವುದಕ್ಕೆ ಪ್ರದರ್ಶನಗಳನ್ನೇರ್ಪಡಿಸಬೇಕು.

ಈಗ ನೋಡಿದಲ್ಲೆಲ್ಲ ಪ್ರದರ್ಶನಗಳ ಹುಚ್ಚು; ಹಾಗೆಂದರೆ ಯಾರಾದರೂ ನಿದ್ದೆಗಣ್ಣಿನಲ್ಲಿ ಓದುವಾಗ 'ಹುಚ್ಚಿನ ಪ್ರದರ್ಶನ' ಎಂದು ಓದಬಹುದು, ಆದರೆ ಓದುಗರ ನಿದ್ದೆಗೆ ಸಂಪಾದಕರು-ಅಲ್ಲಲ್ಲ- ನಾವು ಜವಾಬ್ದಾರರಲ್ಲ ಎಂದು ಮೊದಲೇ ಹೇಳಿಡುವೆವು. ಸಮ್ಮೇಳನಗಳಲ್ಲಿ, ನಾಡಹಬ್ಬಗಳಲ್ಲಿ, ಹುಣ್ಣಿಮೆ – ಹಬ್ಬಗಳಲ್ಲಿ, ಸಂಕ್ರಾಂತಿ-ಸಮಾರಾಧನೆಗಳಲ್ಲಿ ಪ್ರದರ್ಶನವನ್ನು ಏರ್ಪಡಿಸದಿದ್ದರೆ ಕಾರ್ಯಕ್ರಮವೆ ಪೂರ್ತಿಯಾದಂತೆನಿಸುವುದಿಲ್ಲ. 'ಪ್ರದರ್ಶನ' ಎಂದರೇನು? ತೋರಿಸುವುದು. ಕೆಲಸ ಮಾಡುವುದನ್ನು ತೋರಿಸುವುದೊ? ಮಾಡುವ ಕೆಲಸವನ್ನು ತೋರಿಸು—ಛೆ, ಲೇಖಕರೆ ನಿದ್ದೆಹೋದಂತಿರುವ ಈ ಶಬ್ದಾಡಂಬರವನ್ನು ಬಿಟ್ಟುಬಿಡೋಣ. ಅಜ್ಞರಿಗಾಗಿ, ಸಾಮಾನ್ಯ ಮನುಷ್ಯರಿಗಾಗಿ ಕೆಲವು ಮಹತ್ತ್ವದ ಸಂಗತಿಗಳ, ಆವಶ್ಯಕ ವಿಷಯಗಳ ಮಾದರಿಗಳನ್ನು ಮುಂದಿಟ್ಟು ಜ್ಞಾನವನ್ನು ಕೊಡುವುದೆ ಪ್ರದರ್ಶನದ ಉದ್ದೇಶವಲ್ಲವೆ? ಉದಾಹರಣೆಗಾಗಿ ಥರ್ಡ್‌ಕ್ಲಾಸ್ ಪ್ರವಾಸದ ಪ್ರದರ್ಶನ–???

ನಗಬೇಡಿರಿ, ದಯವಿಟ್ಟು. ಥರ್ಡ್‌ಕ್ಲಾಸ್ ಪ್ರವಾಸವೆಂದರೆ ನಮ್ಮ ದೇಶದಲ್ಲಿ ಎಂತಹ ಮಹತ್ತ್ವದ ಸಂಗತಿಯಾಗಿದೆ, ಎಂತಹ ಆವಶ್ಯಕ ವಿಷಯವಾಗಿದೆ? ಭಾರತದಲ್ಲಿ, ಕಲಿಯುಗದ ಭರತವರ್ಷದಲ್ಲಿ ಜನ್ಮತಾಳಿದ ಮಾನವನಿಗೆ ಥರ್ಡ್‌ಕ್ಲಾಸ್ ಪ್ರವಾಸವು ತಪ್ಪಿದ್ದಲ್ಲ. ಆದಕ್ಕಾಗಿಯೆ ಇಂದು ಪರಮಾತ್ಮನು ನಮ್ಮ ದೇಶದಲ್ಲಿ ಅವತಾರ ತಾಳಲು ಹಿಂದುಮುಂದು ನೋಡುತ್ತಿದ್ದಾನೆ. ಇರಲಿ, ಇಷ್ಟೊಂದು ಮಹತ್ತ್ವದ ಮತ್ತು ಆವಶ್ಯಕವಾದ ಈ **ಥ. ಕ್ಲಾ.** ಪ್ರವಾಸವು ಸುಲಭವಾದುದಲ್ಲ, ಅಭ್ಯಾಸ ಮಾಡದೆ ಬರುವಂತಹದಲ್ಲ, ತಪವಂಗೈಯದೆ ಸಾಧಿಸುವಂತಹದಲ್ಲ. ಥ. ಕ್ಲಾ.

ಶ್ರೀರಂಗ

ಪ್ರವಾಸಿಗನು ಟಿಕೆಟ್ಟನ್ನು ಕೊಂಡುಕೊಳ್ಳುವುದು ಹೇಗೆ ಮತ್ತು ಎಲ್ಲಿ? ಮೊದಲನೆಯ ಎರಡನೆಯ ಕ್ಲಾಸಿನವರಿಗೆ 'ಸುಸ್ವಾಗತಂ, ಇಲ್ಲಿ ಟಿಕೆಟ್ಟನ್ನು ಕೊಳ್ಳುವ ಅನುಗ್ರಹ ಮಾಡುವಿರಾ?' ಎಂದು ಬರೆದು ತೋರಿಸಿರುತ್ತಾರೆ. ಜನರ ಗಲಾಟೆ ಇದ್ದಲ್ಲಿ ಥ. ಕ್ಲಾ. ಟಿಕೆಟ್ಟು ದೊರಕುವುದೆಂಬುದು ಸಾಮಾನ್ಯ ನಿಯಮ. ಆದರಂತೆ ನಾನೂ ಒಮ್ಮೆ ಆಚರಿಸಿದ್ದೆ. ಜನರ ಗಲಾಟೆಯಲ್ಲಿ ಧುಮುಕಿದೆ; ಟ್ರೇನು ಬಂದಿತು, ನುಗ್ಗಿದೆ; ಟ್ರೇನು ಹೊರಟಿತು, ಹೌಹಾರಿ ನಿಂತೆ! ಟಿಕೆಟ್ಟು ದೊರೆಯಲಿಲ್ಲ! ಇಷ್ಟರಲ್ಲಿ ಜನಸಂದಣಿಯು ಸಡಿಲಾಯಿತು. ನೋಡಿದರೆ ಅಲ್ಲಿ ಟಿಕೆಟ್ಟು ಸಿಕ್ಕುವ ಸ್ಥಳವಿದ್ದಿರಲಿಲ್ಲ– ಚಹಾ ಚಿವುಡಾಧಿಪತಿ ಮಾರವಾಡಿಯ ಅಂಗಡಿ! ಈ ಅನುಭವವಾಗಲಿ, ಯಾವನೊ ಒಬ್ಬನು ಉಡುಪಿಗೆ ಹೋದಾಗ ಕನಕನ ಕಿಂಡಿಯನ್ನು ನೋಡಿ 'ಒಂದು ಹುಬ್ಬಳ್ಳಿ ಟಿಕೆಟ್ಟು' ಎಂದು ಅಭ್ಯಾಸವಶದಿಂದ ಹಣವನ್ನು ಒಗೆದ ಅನುಭವವಾಗಲಿ ಈ ಕೆಲಸ ಸುಲಭವಲ್ಲವೆಂಬುದನ್ನು ತೋರಿಸಿಕೊಡುತ್ತಿವೆ. ಇನ್ನು ಟಿಕೆಟ್ಟನ್ನು ಹೇಗಾದರೂ ಸಂಪಾದಿಸಿ ಸ್ಟೇಶನಿನ ಒಳಗೆ ನುಗ್ಗಿ ಟ್ರೇನು ಬಂದು ನಿಂತಾಗ ಸ್ಥಳವನ್ನು ಹುಡುಕುವುದೆಂದರೆ ಆದೇನು ಸಾಮಾನ್ಯ ಕೆಲಸವೆ? ಹೆಂಗಸರ ಗಾಡಿಯೊಂದನ್ನು ಬಿಟ್ಟರೆ ಮತ್ತೆಲ್ಲೂ ಸ್ಥಳವೆ ಇಲ್ಲ—ಇಲ್ಲ ಎಂದರೆ ನಿಜವಾಗಿಯೆ ಇಲ್ಲ ಎಂದಲ್ಲ. ಸ್ಟೇಶನ ಮಾಸ್ತರರಾಗಲಿ, ಗಾರ್ಡನಾಗಲಿ 'ಬೇಕಾದಷ್ಟು ಸ್ಥಳವಿದೆ' ಎಂದು ಹೇಳುವರು. ಇದೆ ಸ್ಥಳ, ಆದರೆ ಆದನ್ನು ಗಳಿಸುವ ಯೋಗ್ಯತೆ ಬೇಕು. ಯುಕ್ತಿ ಬೇಕು. ಕೆಲವು ಗಾಡಿಗಳ ಬಾಗಿಲು ಹೊರಗೆ ತೆರೆಯುವುದು, ನೋಡಿರುವಿರಾ? ಅಂತಹ ಗಾಡಿಯನ್ನು ಹುಡುಕಬೇಕು. ನನಗೆ ಒಮ್ಮೆ ಆ ಯುಕ್ತಿ ಸಾಧಿಸಿದೆ, ಯಾವಾಗಲೂ ಅದನ್ನೆ ನಡೆಸುವೆ. ಒಳಗಿನಿಂದ ಜನರು 'ಇಲ್ಲ, ಇಲ್ಲ' ಎಂದು ಕೂಗುವಾಗಲೆ ನಾನು ಹೊರಗೆ ತೆರೆಯುವ ಬಾಗಿಲನ್ನು ಎಳೆದೆ. ತಟ್ಟನೆ ಒಳಗಿನಿಂದೊಂದು ವ್ಯಕ್ತಿ ಉರುಳಿಬಿದ್ದಿತು.... ಬಾಗಿಲಿಗೆ ಆತುಕೊಂಡು ಕುಳಿತ ವ್ಯಕ್ತಿ! ಸುತ್ತಲೆಲ್ಲ ಹಾಹಾಕಾರವೆದ್ದಿತು. ಸ್ಟೇಶನ ಮಾಸ್ತರರು ಬಂದರು. 'ಏನು, ಯಾರದು ಬಿದ್ದವರು?' ಎಂದು ಗದ್ದರಿಸಿದರು. 'ನಾನು' ಎನ್ನುತ್ತ ನಾನೇ ಮುಂದೆ ಬಂದೆ. ಥಾಂಥೀಂ ಅಂತ ಸಂಧ್ಯಾವಂದನೆಯ ಮಂತ್ರದ ಹಾಗೆ ಏನೋ ಇಂಗ್ಲಿಶದಲ್ಲಿ ಬೈದರು. 'ನಡೆ, ನಿನ್ನ ಸಲುವಾಗಿ ಟ್ರೇನು ಲೇಟ ಆದೀತು' ಎಂದು ಅಧಿಕಾರದರ್ಪದಿಂದ ನನ್ನನ್ನು ಒಳಗೆ ತಳ್ಳಿ ಬಾಗಿಲನ್ನು

ಭದ್ರವಾಗಿ ಮುಚ್ಚಿಬಿಟ್ಟರು! ಅಂದಿನಿಂದ ನನಗೆ ಸ್ಥಳ ದೊರೆಯುತ್ತಿದೆ. ಆದರೆ ಎಲ್ಲರಿಗೂ ಆ ಕಲೆ ಸಾಧಿಸಬೇಕಲ್ಲ? ಇದಲ್ಲದೆ ಇನ್ನೂ ಒಂದು ಲಕ್ಷ್ಯದಲ್ಲಿಡತಕ್ಕ ಮಾತಿದೆ. ನಿಮ್ಮ ಸ್ಟೇಶನು ಬಂದಾಗ ಇಳಿಯುವುದೂ ಬಲು ಕಷ್ಟ. ಅದಕಾಗಿಯೂ ಹೊರಗೆ ತೆರೆಯುವ ಬಾಗಿಲದ ಗಾಡಿಯನ್ನೆ ಹುಡುಕಬೇಕಾಗುವದು. ಇರಲಿ, ಇಷ್ಟೆಲ್ಲ ಸಾಮಾನ್ಯ ಮನುಷ್ಯನಿಗೆ ತಿಳಿಯುವುದು ಹೇಗೆ? ಅದಕಾಗಿ ಸರಕಾರದವರಾಗಲಿ, ಸಾಮಾಜಿಕ ಸಂಘದವರಾಗಲಿ ಪ್ರದರ್ಶನಗಳನ್ನೇರ್ಪಡಿಸಬೇಕು; ಅಲ್ಲಿ ಸಾಕ್ಷಾತ್ ಪ್ರಯೋಗ (experiment) ವನ್ನು ಮಾಡಿ ಥ. ಕ್ಲಾ. ಸಂಚಾರದ ಕಲೆಯನ್ನೂ ಪಾಠವನ್ನೂ ಕಲಿಸಬೇಕು, ತೋರಿಸಬೇಕು.

ಒಂದು ಉದಾಹರಣೆಯನ್ನೆ ತೆಗೆದುಕೊಳ್ಳೋಣ; ಇಂತಹ ಪ್ರದರ್ಶನಕ್ಕೆ ವೆಚ್ಚ ಕೂಡ ಬಹಳ ಬೇಕಾಗುವುದಿಲ್ಲ ಎಂಬುದು ಆಮೇಲೆ ನಿಮಗೆ ಕಂಡು ಬರುವುದು. ಹಳೆಯ ರಾಕ್ ಆಯಿಲ್ ಟಿನ್ (ಚಿಮಣಿಎಣ್ಣೆಯ ಡಬ್ಬಿ) ಒಂದನ್ನು ಒಂದು ಕಡೆ ಇಟ್ಟುಬಿಡಬೇಕು; ಆ ಡಬ್ಬಿಯು ಮಾತ್ರ ಚಿಮಣಿಎಣ್ಣೆಯದೆ ಇರಬೇಕಾಗುವುದು, ಇಲ್ಲವಾದರೆ ಥ. ಕ್ಲಾ. ಗಾಡಿಯ ಗುರುತು ಹಿಡಿಯುವ ಕಲೆಯನ್ನು ಕಲಿಸಲು ಸಾಧ್ಯವಿಲ್ಲ. ಪ್ರದರ್ಶನದ ಸ್ವಯಂಸೇವಕನೊಬ್ಬನು ಅತ್ತಿತ್ತ ನಾಯಿ ಬೆನ್ನು ಹತ್ತಿದವನಂತೆ ಓಡಿ ಬರಬೇಕು; ಇವನು ಥ. ಕ್ಲಾ. ಪ್ರವಾಸಿಗ. ಡಬ್ಬಿಯ ಹತ್ತಿರ ಬಂದ ಕೂಡಲೆ ಅವನ ಮೂಗು ಅರಳುವುದು- ಚಿಮಣಿಯ ಎಣ್ಣೆಯ ವಾಸನೆಯಿಂದ; ಥ. ಕ್ಲಾ. ಗಾಡಿಗಾದರೂ ಇಂತಹದೆ ವಾಸನೆ ಇರುವುದು. ಆಮೇಲೆ ಸಂತೋಷದಿಂದ ಡಬ್ಬಿಯ ಮುಚ್ಚಳದಲ್ಲಿದ್ದ ಸಣ್ಣ ತೂತಿನಲ್ಲಿ ಹಣಿಕಿಕ್ಕಿ ನೋಡುವನು; ಈ ಸಣ್ಣ ತೂತು ಥ. ಕ್ಲಾ. ಗಾಡಿಯ ಬಾಗಿಲು ಎಂದು ತಿಳಿಯಬೇಕು. ಆ ಮೇಲೆ ಆ ತೂತಿನೊಳಗಿಂದ ತನ್ನ ಇಡಿಯ ದೇಹವನ್ನೆಲ್ಲ ಸ್ವಯಂಸೇವಕನು ಡಬ್ಬಿಯೊಳಗೆ ಸೇರಿಸಬೇಕು; ಅವನು ಯಾವ ರೀತಿಯಿಂದ ಅದನ್ನು ಸಾಧಿಸುವನೊ ಆ ರೀತಿಯಿಂದ ಥ. ಕ್ಲಾ. ಗಾಡಿಯಲ್ಲಿ ಹೋಗತಕ್ಕದು ಎಂದು ಪ್ರೇಕ್ಷಕರಿಗೆ ತಿಳಿದುಬರುವುದು. ಇದು ಪ್ರದರ್ಶನದ ಒಂದು 'ಸ್ಟಾಲ್ (stall); ಮುಂದಿನ ಸ್ಟಾಲಿನಲ್ಲಿ ಒಂದು ಜೇನು ಹುಟ್ಟನ್ನು ತಂದಿಟ್ಟಿರಬೇಕು; ಪ್ರೇಕ್ಷಕರು ಬಂದು ನೋಡುವಾಗ ಒಂದೊಂದು ಜೇನನ್ನು ತಂದು ಬಿಡಬೇಕು; ಹುಟ್ಟಿನಲ್ಲಿ ಈಗಾಗಲೆ ಸಾವಿರ ಜೇನುಗಳಿದ್ದರೂ ಸಾವಿರದೊಂದನೆಯ ಜೇನು ಪ್ರಶಸ್ತವಾಗಿ ಅಲ್ಲಿ ಹೋಗಿ ಕುಳಿತುಕೊಳ್ಳುವುದು. ನೋಡಿದಿರಿಲ್ಲೊ? ನಡೆಯಿರಿನ್ನು ಮುಂದಿನ ಸ್ಟಾಲಿಗೆ. ಥ. ಕ್ಲಾ. ಕಂಪಾರ್ಟಮೆಂಟಿನ ಒಳಗಿನ ದೃಶ್ಯವನ್ನೂ ಅಲ್ಲಿ ಹೋದ ಮೇಲೆ ಕುಳಿತುಕೊಳ್ಳುವುದು ಹೇಗೆ ಎಂಬುದನ್ನೂ ಈ ಜೇನುಹುಟ್ಟಿನ ಪ್ರದರ್ಶನದಿಂದ ನಿಮಗೆ ತೋರಿಸಿದಂತಾಯಿತು. ಇನ್ನೂ ಉಳಿಯಿತೇನು? ಹಂ. . . ಕುಳಿತ ಗಾಡಿಯಿಂದ ಇಳಿಯುವುದು ಹೇಗೆ? ಸರಿ. . ಸ್ಟಾಲುಬಿಟ್ಟು ಹೋಗುವಾಗ ಜೇನುಹುಟ್ಟಿಗೆ ಕಲ್ಲನ್ನೊಂದು ಎಸೆಯಿರಿ. ಜೇನ್ನೊಣಗಳು ಹೇಗೆ ಕೆಳಗಿಳಿಯುವವೊ ಹಾಗೆಯೆ ನೀವೂ ಕೆಳಗಿಳಿಯತಕ್ಕದ್ದು.



"... ಆ ಮೇಲೆ ಆ ತೂತಿನೊಳಗಿಂದ ತನ್ನ ಇಡಿಯ ದೇಹವನ್ನೆಲ್ಲ ಸ್ವಯಂಸೇವಕನು ಡಬ್ಬಿಯೊಳಗೆ ಸೇರಿಸಬೇಕು...."

ಪ್ರವಾಸದಷ್ಟೆ ಜೀವನಕ್ಕೆ ಅವಶ್ಯವೆನಿಸುವ ಇನ್ನೂ ಕೆಲವು ಸಂಗತಿಗಳಿವೆ. ನಾನು ಹೇಳುವುದಿಷ್ಟೆ, ನನ್ನ ಜೀವನಕ್ಕೆ ಉಪಯುಕ್ತ ಎನಿಸುವ ಸಂಗತಿಗಳು ನನಗೆ ಪ್ರದರ್ಶನಗಳಲ್ಲಿ ಬೇಕು. ನಾನು ತಕ್ಕಮಟ್ಟಿಗೆ ಸುಶಿಕ್ಷಿತನಿದ್ದೇನೆ, ಇಷ್ಟೆ ಅಲ್ಲ ಸುಶಿಕ್ಷಿತರ ಪಕ್ಷಿಯಿಂದ, ಸುಶಿಕ್ಷಿತರ ಹಿತಕ್ಕಾಗಿ ನಾನು ಇದನ್ನು ಬರೆಯುತ್ತಲಿದ್ದೇನೆ. ಶಾಲೆ-ಕಾಲೇಜುಗಳಲ್ಲಿ ಕಲಿಯುವುದು ಪರೀಕ್ಷೆಗಾಗಿ, ಪ್ರದರ್ಶನಗಳಲ್ಲಿ ಕಲಿಯುವುದು ವ್ಯವಹಾರಕ್ಕಾಗಿ-ಎಂದು ನನ್ನದೊಂದು ಸೂತ್ರ; ಅಥವಾ ಬಾದ-ರಾಯಣ ಕಾಲದಿಂದ ಇದೇ ಪರಿಸ್ಥಿತಿ ನಡೆದು ಬಂದುದರಿಂದ ಇದು 'ಬಾದರಾಯಣ ಸೂತ್ರ' ವೆಂದೇ ಹೇಳೋಣ. ಇರಲಿ; ಇಹಲೋಕದ ಪ್ರವಾಸದ ಅವಶ್ಯಕತೆಯನ್ನೂ ಉದಾಹರಣೆಯನ್ನೂ ಮೇಲೆ

ತೋರಿಸಿದ್ದೇನೆ. ಅದರಂತೆಯೆ ಪರಲೋಕ ಪ್ರವಾಸದ ಜ್ಞಾನವನ್ನೂ ಪ್ರದರ್ಶನದಲ್ಲಿ ಮಾಡಿಕೊಡಬೇಕೆಂದು ನನ್ನ ಅಭಿಪ್ರಾಯ. ಉಚ್ಚ ಜಾತಿಗಳಲ್ಲಿ ಅರ್ಥಾತ್ ಭೂಸುರರಾದ ಬ್ರಾಹ್ಮಣ ಜಾತಿಯಲ್ಲಿ ಪರಲೋಕ ಪ್ರವಾಸವನ್ನು ಮಾಡುವುದು ಸುಲಭವಾದ ಮಾತಲ್ಲ. ಬ್ರಾಹ್ಮಣನಾದುದರಿಂದ ನಾನು ಮೋಕ್ಷಕ್ಕೇನೊ ಮುಟ್ಟಬಹುದು; ಆದರೆ ಮೊದಲು ಹೊರಡಬೇಕಲ್ಲ? ಫೋರ್ಡ್ ಮಾದರಿಯ ಮೋಟಾರುಗಳ ವಿಷಯವಾಗಿ ಒಂದು ವಿನೋದವಿದೆ, It can do anything except start (ಹೊರಡುವುದೊಂದನ್ನು ಬಿಟ್ಟು ಈ ಗಾಡಿ ಬೇಕಾದ್ದನ್ನು ಮಾಡಬಲ್ಲುದು) ಅಂತೆ. ಬ್ರಾಹ್ಮಣನ ಪರಲೋಕ ಪ್ರವಾಸವೂ ಹಾಗೆಯೆ. ಬೇನೆ ಬರುವುದು, ಎಲ್ಲ ಆಪ್ತೇಷ್ಟರು ಬರುವರು, ಡಾಕ್ಟರನು ಬರುವನು, ಕೊನೆಗೆ ಮರಣ ಎನ್ನುವುದು; ಇಷ್ಟಾಗುವುದೊಂದೇ ತಡ. ಗತ್ತೇ ಬಯಲಾಗುವುದು. ಶವಬಿದ್ದ ಕೂಡಲೆ ಪಕ್ಕದ ಮನೆಯವನಿಗೆ ಮೈಯಲ್ಲಿ ಜ್ವರವಾಗಿ ಅವನು ಮನೆಯಿಂದ ಕದಲಲಾರನು, ಪಾಪ! ಇನ್ನೊಬ್ಬ ಬ್ರಾಹ್ಮಣನ ಹೆಂಡತಿ ಗರ್ಭಿಣಿ, ಮೂರನೆಯವನಿಗೆ ತಂದೆ-ತಾಯ್ಗಳು ಜೀವದಿಂದಿರುವವರಂತೆ, ನಾಲ್ಕನೆಯವನು ಬರಲು ಉತ್ಸುಕನಾದರೂ ಮಿಷ್ಟೃತನಿದ್ದುದರಿಂದ ಅವನು ಬಂದರೆ ಹೆಣಕ್ಕೆ ಮೋಕ್ಷವಿಲ್ಲ! ಹೀಗಾಗಿ ಈ ಧಾರ್ಮಿಕ- ಸಾಮಾಜಿಕ- ಆರೋಗ್ಯ ತೊಡಕುಗಳು ಬಿಡುವವರೆಗೆ, ಪಾಪ, ಮೃತನ ದೇಹವು ಸತ್ತಲ್ಲಿಯೆ ಕೊಳೆಯಬೇಕಾಗುವುದು. ನಿಜವಾಗಿ ನೋಡಿದರೆ ಈ ತಪ್ಪು ಯಮದೇವನದು. ತಾನು ಜೀವವನ್ನು ಒಯ್ಯುವಾಗ ತನ್ನ ಜೊತೆಗೆ ನಾಲ್ಕು ಯಮದೂತರನ್ನು ತಂದು, ಅವರ ಹೆಗಲಮೇಲೆ ಹೆಣವನ್ನು ಸಾಗಿಸಿದರೆ ಆಗದೆ? ಬೇಕಾದರೆ extra luggage (ಹೆಚ್ಚಿನ ಸಾಮಾನು) ಎಂದು ಚಾರ್ಜ್ ಮಾಡಲಿ, ಇಲ್ಲವೆ ಮ್ಯುನಿಸಿಪಾಲಿಟಿ ಗಾಡಿಯಂತೂ ಇದ್ದೇ ಇದೆ, ಅದನ್ನು ಎಳೆಯಲು ತನ್ನ ಕೋಣವನ್ನು ಬಿಟ್ಟಿಯಾಗಿ ಕೊಡಬೇಕು; ಇಲ್ಲವೆ ನೆವ ಹೇಳಿ ಮನೆಯೊಳಗೆ ಕುಳಿತ ಮಿಕ್ಕ ಬ್ರಾಹ್ಮಣರನ್ನು ತನ್ನ ನಾಯಿಗಳನ್ನು 'ಛೂ' ಬಿಟ್ಟು ಎಬ್ಬಿಸಲಿ. ಆದರೆ ಆ ಧರ್ಮರಾಯನು ಇಂತಹದೊಂದನ್ನೂ ಮಾಡುವುದಿಲ್ಲ. ಡಾಕ್ಟರರ ಬಿಲ್ಲ(bill)ನ್ನು ವಸೂಲು ಮಾಡಲು ಬಂದವನಂತೆ ಜೀವವೊಂದನ್ನು ಒಯ್ದನೆಂದರೆ ಮುಗಿಯಿತು ಅವನ ಕೆಲಸ. ಇನ್ನು ಮಾಡಬೇಕೇನು ? ಸರಕಾರದವರು ಒಂದು ಕಾಯಿದೆ ಪಾಸುಮಾಡಬೇಕೆ, ಸಾಯುವವರೆಲ್ಲರೂ ಮೊದಲು ಸ್ಮಶಾನದಲ್ಲಿ ಎಲ್ಲ ವ್ಯವಸ್ಥೆ ಆಗಿದೆಯೆ ಇಲ್ಲವೆ ನೋಡಿಕೊಂಡು ಆ ಮೇಲೆ ಅಲ್ಲಿಯೆ ಹೋಗಿ ವ್ಯವಸ್ಥೆಯ ಮಗ್ಗುಲಲ್ಲಿಯೆ ಸಾಯಬೇಕೆಂದು ? ಯಾವನು ಈ ಕಾಯಿದೆಯನ್ನು ಮುರಿಯುವನೊ ಅವನಿಗೆ ದೇಹಾಂತ ಶಿಕ್ಷೆ ಎಂದರೆ ಮಾತ್ರ ತೊಡಕೇ ಬಗೆಹರಿದಂತಾಯಿತು. ಆದರೇನು ? ಸದ್ಯಕ್ಕೆ ಯಮರಾಯನಾಗಲಿ ಸರಕಾರವಾಗಲಿ ನಮ್ಮ ಕೈಯಲ್ಲಿಲ್ಲ; ಆದುದರಿಂದ ಈ ತೊಡಕನ್ನು ನಾವಾಗಿಯೆ ಬಿಡಿಸಿಕೊಳ್ಳಬೇಕು. ಅದಕ್ಕಾಗಿ ಪ್ರದರ್ಶನವನ್ನೇರ್ಪಡಿಸಬೇಕು, ಅಲ್ಲಿ ಇದರ ವ್ಯವಸ್ಥೆಯನ್ನು ಮಾಡಬೇಕು. Town Planning- ನಗರಯೋಜನೆ- ಅನ್ನುವರಲ್ಲಾ ಅಂತಹದೊಂದು ಮಾದರಿಯ ನಕಾಶೆಯನ್ನು ತೋರಿಸಬೇಕು. ಮನೆಗಳನ್ನು ಹೇಗೆ ಕಟ್ಟಿಸಬೇಕು- ಎಂಬುದರ ಜ್ಞಾನವು ಈ ನಕಾಶೆಯನ್ನು ನೋಡಿ ನಮಗಾಗಬೇಕು. ನೆರೆಮನೆಯವರಿಗೆ ನೆಗಡಿ-ಕೆಮ್ಮುಗಳಿರಬಾರದು, ತಂದೆ-ತಾಯ್ಗಳಿರಬಾರದು, ಬಹಿಷ್ಕಾರವಿರಬಾರದು, ಗರ್ಭವತಿ ಹೆಂಡತಿ ಇರಬಾರದು- ಇಂತಹರ ಮನೆಗಳ ನಡುವೆ ನಮ್ಮ ಮನೆ ಇರಬೇಕು. ಇದು ಒಂದು ಯೋಜನೆ. ಇಲ್ಲವೆ ನಮ್ಮ ಮನೆಯಲ್ಲಿಯೆ ರೋಗಿಯ ಕೋಣೆಯೂ ಉರುವಲ ಕಟ್ಟಿಗೆಯನ್ನಿಡುವ ಕೋಣೆಯೂ ಒಂದೇ ಆಗುವಂತಿರಬೇಕು. ಇಲ್ಲವೆ- ಸಾಯುವಾಗ ಜೀವದ ಕೂಡ ದೇಹವೂ ಹಾರಿಹೋಗುವಂತಹ ಯೋಗಸಾಧನೆ ಇರಬೇಕು. ನಾನೇನೊ ಕಿಡಿಗೇಡಿತನದಿಂದಾಗಲಿ ಹೇಸಿತನದಿಂದಾಗಲಿ ಇದನ್ನು ಬರೆಯುವೆನೆಂದು ಭಾವಿಸಬಾರದು. ರಣಾಂಗಣದಲ್ಲಿ ಗತಿ ಇಲ್ಲದೆ ಬಿದ್ದಂತೆ ಮನೆಯಲ್ಲಿ ಬಿದ್ದುಕೊಳ್ಳುವ ಉಚ್ಚ ಜಾತಿಯ ಶವಗಳನ್ನು ನೋಡಿದವರಿಗೆ ನನ್ನ ಮಾತಿನ ಆವಶ್ಯಕತೆ ಕಂಡುಬರುವುದು *

ಹೋಗಲಿ, ನಾನು ಬರೆಯುವುದು ಪ್ರದರ್ಶನದ ತತ್ತ್ವವನ್ನು ವಿವರಿಸುವುದಕ್ಕಾಗಿ, ಪ್ರೇತಸಂಸ್ಕಾರದ ನಿಯಮಗಳನ್ನು ಹೇಳುವುದಕ್ಕಾಗಿ ಅಲ್ಲ. ಇದಲ್ಲದೆ ಇದೇ ವಿಷಯವನ್ನು ವಿಸ್ತಾರಗೊಳಿಸತೊಡಗಿದೆನೆಂದರೆ ಕೆಲವು ಕುಚೇಷ್ಟೆಯ ವಿದ್ಯಾರ್ಥಿಗಳು ಸಾಹಿತ್ಯಕ್ಕೂ **ಗತಜೀವನಕ್ಕೂ** ಸಂಬಂಧವಿದೆ ಎಂಬ ತಲೆತಿರುಕತನದ ತತ್ತ್ವವನ್ನು ನಾನು ಹೇಳುತ್ತಿರುವೆ.... ಎಂದು ಪ್ರಚಾರಗೊಳಿಸಬಹುದು. ವಿದ್ಯಾರ್ಥಿಗಳೆಂದ ಮಾತ್ರಕ್ಕೆ ಸ್ಮರಣೆಗೆ ಬಂದಿತು. ವಿದ್ಯಾರ್ಥಿಗಳು ಅರ್ಥಾತ್ ತರುಣರು ಭಾರತದ ಭಾವೀ ಭಾಗ್ಯೋದಯದ ಆಧಾರಸ್ತಂಭರೆಂದು ಮಹಾನ್‌ಮಹಾನ್ ಮುಂದಾಳುಗಳೆಲ್ಲ ಹೇಳುತ್ತಿದ್ದಾರೆ. ನಮ್ಮ ದೇಶಕ್ಕೆ, ಸಮಾಜಕ್ಕೆ ಸ್ತಂಭಗಳು ಆವಶ್ಯ ಎಂಬುದು ನಿರ್ವಿವಾದ ವಿಷಯವಾಗಿದೆ. ಇಷ್ಟು ದಿವಸಗಳವರೆಗೆ ಕೂರ್ಮಾವತಾರದ ಬೆನ್ನಿನಮೇಲೆ ನಿಂತಿತ್ತು ನಮ್ಮ ದೇಶ. ಅದಕ್ಕಾಗಿ ಕೂರ್ಮ ನಡೆದಲ್ಲಿ ನಮ್ಮ ದೇಶ ನಡೆಯುತ್ತಿತ್ತು. ಈ ಕೂರ್ಮ (=ಆಮೆ) ಗತಿಯಿಂದ ದಾರಿ ಒತ್ತರವಾಗಿ ಸಾಗುವುದಿಲ್ಲ ಎಂಬುದು ಅನುಭವಸಿದ್ಧವಾದ ಮಾತು. ಈ ಕೂರ್ಮಗತಿಯಿಂದ ನಾವು ಮಿಕ್ಕ ದೇಶಗಳಿಗಿಂತ ಹಿಂದುಳಿದಿದ್ದರೆ ಅದು

* ಮೇಲಿನ ಮಾತುಗಳಿಂದ ನಾನೇನೊ ಜಾತಿಯ ದುರಭಿಮಾನಿ ಎಂದು ಮಿಕ್ಕ ಜಾತಿಯವರ ಕಲ್ಪನೆಯಾಗಬಹುದು. ಆದರೆ ಕೇವಲ ನನ್ನ ಜಾತಿಯವರ ಹಿತವನ್ನು ಮಾಡಬೇಕೆಂದು ನಾನು ಬರೆದಿಲ್ಲ, ಉದಾಹರಣೆ ಎಂದು ತೋರಿಸಿದ್ದೇನೆ ಇಷ್ಟೆ. ಹಾಗೆ ನೋಡಿದರೆ ಎಲ್ಲ ಜಾತಿಯವರಿಗೂ ಅಂತಹ ವ್ಯವಸ್ಥೆಯಾಗಬೇಕೆಂದು ನನ್ನ ನಿಷ್ಪಕ್ಷಪಾತದ ಅಭಿಪ್ರಾಯ. ಇದಲ್ಲದೆ ಹಿಂದುಳಿದ ಜಾತಿಯವರಿಗಾಗಿ ಸ್ಪೆಶಲ್ ವ್ಯವಸ್ಥೆಮಾಡಿದರೂ ನನ್ನ ಅಡ್ಡಿ ಇಲ್ಲ. ಅಥವಾ ಬ್ರಾಹ್ಮಣನ ಒಂದು ದೇಹದ ವ್ಯವಸ್ಥೆಯಾದರೆ ಮಿಕ್ಕ ಜಾತಿಯವರ ನೂರು ದೇಹಗಳನ್ನೊಯ್ಯಬೇಕು— ಎಂದು ಪ್ರಮಾಣವನ್ನು ಗೊತ್ತುಮಾಡಿದರೂ ಅಡ್ಡಿ ಇಲ್ಲ. ಇಲ್ಲವೆ ದಿವಂಗತ ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡರು ಪ್ರೇತನಿರ್ಣಯವನ್ನು (Funeral Award) ಕೊಟ್ಟರೂ ನಡೆಯುವುದು.

ನಮ್ಮ ದೋಷ, ಕಾರ್ಮುದ ದೋಷವಲ್ಲ. ಇದನ್ನರಿತೇ ಮುಂದಾಳುಗಳು ಇಂದು ನಮ್ಮ ದೇಶವನ್ನು ವಿದ್ಯಾರ್ಥಿಗಳ ಅರ್ಥಾತ್ ತರುಣರ ಬೆನ್ನಮೇಲಿಟ್ಟಿದ್ದಾರೆ. ಆದರೆ ತರುಣರಿಗೆ ಈ ಸ್ತಂಭ-ತತ್ತ್ವದ ಅರ್ಥವಾದಂತಿಲ್ಲ. ಅವರಿಗೆ ಅರ್ಥವಾಗದಿದ್ದರೆ ನಮ್ಮ ದೇಶ ಮುಂದೆ ಸಾಗುವಂತಿಲ್ಲ. ದೇಶವು ತಮ್ಮ ಬೆನ್ನು ಕಟ್ಟಿಕೊಂಡದ್ದರಿಂದ ತಾವು ಹೋದಲ್ಲಿ ಅದೂ ಹೋಗಲೆಬೇಕಾಗುವುದು ಎಂಬುದನ್ನು ಅವರು ಮರೆತಂತೆ ಕಾಣುವುದು. ತರುಣರು ಹೋಗುವುದೆಂದರೆ ಪರೀಕ್ಷೆಯ ಪೆಂಡಾಲು (pandal) ಗಳಿಗೆ, ಅರ್ಥಾತ್ ನಮ್ಮ ದೇಶವೂ ಅದಕ್ಕಿಂತ ಮುಂದೆ ಹೋಗಲು ಸಾಧ್ಯವಾಗಿಲ್ಲ. ಇದಲ್ಲದೆ ತರುಣರಿಗೆ ಮಾತು ಮಾತಿಗೆ ಸಿಟಿದು ನಿಂತು ಚಪ್ಪಾಳೆ ಬಾರಿಸುವ ಹುರುಪು ಹೆಚ್ಚು. ಹೀಗೆ ಕೈಬಿಟ್ಟು ಎದ್ದುನಿಂತರೆ ಬೆನ್ನಮೇಲಿದ್ದ ದೇಶವು ಜಾರಿ ನೆಲಕ್ಕೆ ಕುಪ್ಪಳಿಸುವ ಹೆದರಿಕೆ ಹೆಚ್ಚು. ಇದನ್ನೆಲ್ಲ ತಿಳುಹಿಸಿಕೊಡಲು ಒಂದು ಪ್ರದರ್ಶನವನ್ನೇರ್ಪಡಿಸಿದರೆ ಒಳಿತಾಗಲಿಕ್ಕಿಲ್ಲವೆ? ಉದಾಹರಣೆಗಾಗಿ, ಒಂದು ಕಲ್ಲಿನ ಕಂಬ ಒಂದು ಕಟ್ಟಿಗೆಯ ಕಂಬ, ಎರಡನ್ನೂ ಒಂದರ ಬದಿಗೊಂದು ನಿಲ್ಲಿಸಬೇಕು. ಎರಡೂ ಕಂಬಗಳ ಸುತ್ತು ಅನೇಕತರದ ಕ್ರಿಮಿಕೀಟಕಗಳನ್ನೂ ತಗಣಿ-ತಂಡಗಳನ್ನೂ ಹರಿಬಿಡಬೇಕು. ಸ್ವಲ್ಪಾವಧಿಯಲ್ಲಿಯೆ ಕಟ್ಟಿಗೆಯ ಕಂಬ ಸಡಿಲಾಗುವುದು, ಪೊಳ್ಳಾಗುವುದು, ಸಮಾಪಕ್ಕೆ ಯಾರನ್ನೂ ಬರಗೊಡದಂತಹದಾಗುವುದು. ಅರ್ಥವೇನು? 'ತರುಣರೆ, ನೀವು ಕಂಬಗಳೇನೊ ನಿಜ, ಆದರೆ ಕಂಬಗಳಾಗಿಯೆ ಉಳಿಯಬೇಕಾದರೆ ಕಟ್ಟಿಗೆಯ ಕಂಬವಾಗಬೇಡಿರಿ, ಕಲ್ಲಿನ ಕಂಬವಾಗಿರಿ' ಎಂಬ ಸತ್ಯವು ಕಣ್ಣು ಕಟ್ಟಿ ನಿಲ್ಲುವುದು.

ಕ್ಷಮೆ ಇರಲಿ. ನಾನು ಕತೆ ಹೇಳುತ್ತಿರುವುದಿಲ್ಲ ಹೀಗೆಯೆ ದೃಷ್ಟಾಂತಗಳನ್ನು ಬೆಳೆಸಲಿಕ್ಕೆ. 'ಈಗ ನೋಡಿದಲ್ಲೆಲ್ಲ ಪ್ರದರ್ಶನಗಳ ಹುಚ್ಚು' ಎಂದು ಮೊದಲೇ ಹೇಳಿದ್ದೇನೆ. ನಾನು ಬರೆದುದನ್ನು ಓದಿದ ಮೇಲೆ ನೋಡಿದಲ್ಲೆಲ್ಲ 'ಪ್ರದರ್ಶನಗಳ ಜಾಣತನ' ಕಂಡುಬಂದರೆ ನಾನು ಕೃತಾರ್ಥನಾಗುವೆ, ಎಂದರೆ ಇನ್ನು ಮುಂದೆ ಹೀಗೆ ಬರೆಯುವುದನ್ನೆ ಬಿಟ್ಟುಕೊಡುವೆ. ಇದನ್ನೋದಿದವರೂ ಇದನ್ನು ಮರೆತುಬಿಡಬಹುದು.

—— ೦ ——

ತ್ವರೆಮಾಡಿರಿ ! ತ್ವರೆಮಾಡಿರಿ !

ತ್ರಿಪದಿರೂಪವಾಗಿ ರಚಿಸಿದ

ಸರ್ವಜ್ಞ ವಚನಗಳು

ಸಂಶೋಧಿತವಾದ ಸಂಪೂರ್ಣ ಸಂಗ್ರಹ

ಜನಪದಾವೃತ್ತಿ

ಪ್ರಸ್ತಾವನೆ, ವಿಷಯಸೂಚಿಕೆ, ವಿಷಯವಿಭಜನೆ, ಶಬ್ದಕೋಶ ಅಭಿಪ್ರಾಯಗಳ ಸಹಿತವಾದುದು

ಸಂಪಾದಕರು :

ಚನ್ನಪ್ಪ ಉತ್ತಂಗಿ

ಕರ್ನಾಟಕ ಕವಿಚರಿತಕಾರರಾದಿಯಾಗಿ ಅನೇಕ ಸಾಹಿತಿಗಳೂ ಜನತೆಯೂ ಮೆಚ್ಚಿರುವ ಉದ್ಗ್ರಂಥ

ಸಾಮಾನ್ಯ ಪ್ರತಿ ಒಂದಕ್ಕೆ ೨ ರೂ. ೨ ಆ.

ಉತ್ತಮ ಪ್ರತಿ ಒಂದಕ್ಕೆ ೨ ರೂ. ೧೨ ಆ.

ಅಂಚೆವೆಚ್ಚ ಬೇರೆ.

ಸಿಗುವ ಸ್ಥಳ :—

ಕರ್ನಾಟಕ ಪ್ರಿಂಟಿಂಗ ವರ್ಕ್ಸ್, ಧಾರವಾಡ

ರೋಗಪರೀಕ್ಷೆಯ ಕೈಪಿಡಿ :
ರೋಗಚಿಕಿತ್ಸೆಯ ಕೈಗನ್ನಡಿ :

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಅಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ

ಲೇಖಕರು :

ಡಾ. ಗೋ. ಸ ಪಳಸುಲೆ L.M.&.S. ಪುಣೆ

ಕನ್ನಡಿಸಿದವರು :

ಶ್ರೀ. ನಾ. ತಿ. ದಾತಾರ B.A. ಬೆಳಗಾಂ

ಅ೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ ಬೈಂಡಿನ ಸುಂದರ ಹೊತ್ತಿಗೆ

ಬೆಲೆ : ಮೂರೇ ರೂಪಾಯಿಗಳು

ಪುಸ್ತಕ ದೊರೆಯುವ ಸ್ಥಳ :

೧. ಮನೋಹರ ಗ್ರಂಥ ಭಾಂಡಾರ, ಧಾರವಾಡ

೨. ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

Head office:– **Shri Krishna Homio Pharmacy**
Budhwar Peth, Poona.

ದಿವಂಗತ

ಒಂದು ಏಕಾಂಕ ದೃಶ್ಯ*

ಪ್ರೊ. ಎನ್. ಎಮ್. ಕುಲಕರ್ಣಿ,
ಎಂ. ಎ., ಕಾಶಿ.

ಅವರಿಂದ

— ಪಾತ್ರಪರಿಚಯ —

ಕಾಕಾ ಭಗವಂತರಾಯ	ರೋಗಗ್ರಸ್ತನಾದ ೭೮ ವರ್ಷದ ಮುದುಕ.
ರಂಗೂಬಾಯಿ	ಭಗವಂತರಾಯನ ೪೦ ವರ್ಷದ ಅಣ್ಣನ ಮಗಳು.
ಜನಾರ್ದನರಾಯ.	ರಂಗೂಬಾಯಿಯ ಗಂಡ– ೫೦ ವರ್ಷದವ.
ಲಕ್ಷ್ಮಿ	ಇವರಿಬ್ಬರ ಮಗಳು– ೧೨ ವರ್ಷದವಳು.
ಜಾನಕೀಬಾಯಿ	ರಂಗೂಬಾಯಿಯ ತಂಗಿ– ೩೫ ವರ್ಷದವಳು.
ನಾರಾಯಣರಾಯ	ಜಾನಕೀಬಾಯಿಯ ಗಂಡ–ಸುಮಾರು ೪೫ ವರ್ಷದವ.

(**ಸ್ಥಳ** :— ಜನಾರ್ದನರಾಯನ ಮನೆಯ ಪಡಸಾಲಿ. ವೇಳೆ:— ಸುಮಾರು ೪ ಗಂಟೆಯ ಹಗಲು. ರಂಗೂಬಾಯಿಯು ಅದೇ ಚಹ ಮುಗಿಸಿ ವಿಚಾರಮಾಡುತ್ತ ಕುಳಿತಿದ್ದಾಳೆ. ಬಲಕ್ಕೆ ಒಂದು ಹಳೆಯ ಮುರುಕು ಟ್ರಂಕು ಇಟ್ಟಿದೆ. ಮೇಜಿನಮೇಲೆ ಒಂದು ಹಳೆಯದಾದ ಗಡಿಯಾರ. ಕುರ್ಚಿಯ ಹತ್ತಿರ ಒಂದು ಜೊತೆ ಹೊಸ ಮೊಚ್ಚೆ. ರಂಗೂಬಾಯಿಯು ಹಣೆಯಮೇಲೆ ಕುಂಕುಮವಿಲ್ಲ.)

ರಂಗೂಬಾಯಿ— (ಕೂಗುದನಿಯಲ್ಲಿ) ಲಕ್ಷ್ಮೀ, ಏ ಲಕ್ಷ್ಮೀ ಒಳಗೆ ಬರುವದಿಲ್ಲೇನೇ!.. ಇನ್ನೂ, ಇವಳ ಆಟವೇ ಮುಗಿಯು ವಂತಿಲ್ಲ. ಏ, ಲಕ್ಷ್ಮೀ – – –!

(**ಲಕ್ಷ್ಮಿಯು ಓಡಿಬರುತ್ತಾಳೆ. ಪರಕಾರ ಉಟ್ಟುಕೊಂಡಿದ್ದಾಳೆ. ತಲೆಯ ಕೂದಲು ಹರವಿಬಿದ್ದಿದೆ.**)

ರಂಗೂ— ಮುದುಕಿಯಾದರೂ ಬುದ್ಧಿ ಬರಲಿಲ್ಲ ನಿನಗೆ.. ಮನೆಯಲ್ಲಿ ಏನಾಗಿದೆ– ಏನಿಲ್ಲ ಎಂಬುದು ಎಂದಿಗೆ ತಿಳೀಬೇಕೇ ನಿನಗೆ?.. ನಿಮ್ಮ ಅಜ್ಜ ಮೇಲೆ ಸತ್ತುಬಿದ್ದಿದ್ದಾನೆ.. ನೀನು ಆಡಲಿಕ್ಕೆ ಹೊರಟೇದಿ.. ಒಳಗ ಹೋಗು, ಏನು ನೋಡುತ್ತ ನಿಂತೀದಿ.. ಅಡಿಗೀಮನೀ ಒಳಗ ಹೋಗಬೇಡ. ಅತ್ತ ಇತ್ತ ರಿಪೀ ಮುಟ್ಟಬೇಡ. ಈಗ ನಮಗ ಮೈಲಿಗಿ, ಗೊತ್ತದೋ ಇಲ್ಲೋ? ಹೋಗು, ಒಲಿಗೆ ಉರೀಹಾಕು. ನೀರುಹಾಕಿಕೋ ಬೇಕು– ಈಗ ನಿಮ್ಮ ಅಬಚಿ (ಚಿಕ್ಕಮ್ಮ) ಬರತಾಳ.. ಹೂಂ, ನಡಿ..!

ಲಕ್ಷ್ಮಿ— ಅಬಚಿ..? ಅವರು ಈಗ ಯಾಕ ಬರತಾರವ್ವ? ಇಲ್ಲಿಗೆ ಬರದ ಈಗ ಎರಡು ವರ್ಷ ಆತು?

ರಂಗೂ— ನಿಮ್ಮ ಅಜ್ಜನ ಸಾಮಾನು-ಪಟ್ಟು ಹಂಚಿಕೊಳ್ಳ ಲಿಕ್ಕೆ– ಇದೇ ಹೇಳಿ ಕಳಿಸೇವಿ ಅವರಿಗೆ ಬರಲಿಕ್ಕೆ.. (ಹೊರಗೆ ಸಪ್ಪಳ)– ಅವೋ ಬಂದೇಬಿಟ್ಟರೋ ಏನೋ— ! (ಬಾಗಿಲಿಗೆ ಹೋಗಿ)– ಇಲ್ಲ ಇವರು ಬಂದರು.

(**ಜನಾರ್ದನರಾಯನು ಅವಸರದಿಂದ ಬರುತ್ತಾನೆ.**)

ಜನಾರ್ದನರಾಯ— ಏನು, ಇನ್ನೂ ಬರಲಿಲ್ಲೇನು ಆ ಶಂಕರಭಟ್ಟ! ಎಷ್ಟು ಹೊತ್ತು ಮನೆಯಲ್ಲಿ ಹೆಣ ಇಟುಕೊಂಡಿರ ಬೇಕು! ಹೇಳಿಕಳಿಸಿ ಎರಡು ತಾಸಾತು!

ರಂಗೂ— ನಿಮ್ಮ ಎಲ್ಲಾ ಕೆಲಸಾನೂ ಹೀಂಗs! ಶಂಕರ ಭಟ್ಟನೂ ಇಲ್ಲ. ಜಾನಕೀನೂ ಬರಲಿಲ್ಲ ಇನ್ನೂ. ಹೂಂ ಒಳಗ ಹೋಗs– ಲಕ್ಷ್ಮೀ.. ಎಷ್ಟು ಹೊತ್ತಾತು ನಿನಗೆ ನೀರೊಲಿಗೆ ಬೆಂಕೀಹಾಕಲಿಕ್ಕೆ ಹೇಳಿ..?

(**ಜನಾರ್ದನರಾಯ ಉಶ್ಶೆಂದು ಖುರ್ಚಿಯ ಮೇಲೆ ಕೂಳಿತುಕೊಳ್ಳುತ್ತಾನೆ.**)

ರಂಗೂ— ಆ ನಿಮ್ಮ ಹರಕುಮಚ್ಚೀ ಬಿಡಿರಷ್ಟು.. ಮಂದಿ ನೋಡಿದವರೆಲ್ಲ ನಗತಾರ. ಬಾಣಂತೇರು ಹಾಕೋ ಮಚ್ಚಾಗ್ಯಾವ..!

ಜನಾರ್ದನ— ಜಾನಕೀಬಾಯಿ ಬರತಾಳೋ ಇಲ್ಲೋ..! ಎರಡು ವರ್ಷದಿಂದ ನಿಮ್ಮ ಅಕ್ಕ-ತಂಗಿಯರ ಜಗಳ ನಡೆದವ್ಯಾಲ, ಈ ಮನ್ಯಾಗ ಕಾಲುಹಾಕಲಿಕ್ಕಿಲ್ಲ ಅಂತ ಹೋದಾಕಿ, ಇದು

* (STANLAY HOUGHTON ಅವರ "DEAR DEPARTED"—ಆಧಾರದಿಂದಲೇ ಬರೆದುದು.) —ಲೇ.

ವರೆಗಂತೂ ಹಾಂಗs ನೋಡ್ತ್ಯಾಳ.. ಈಗೇನು ಬರೋಹಾಂಗ ಕಾಣಲಿಲ್ಲ !

ರಂಗೂ— ಕಕ್ಕ ತೀರಿಕೊಂಡ ಸುದ್ದೀ ಕೇಳಿದ ಕೂಡ್ಲೇನ ಓಡಿ ಬರತಾಳ ನೋಡಿರಿ.. ಆತನ ಸಾಮಾನು ಎಲ್ಲಿ ಎಲ್ಲಾ ನಾವೇ ತಗೊಂಡೇವು ಅಂತ !....

ಜನಾರ್ದನ—ಒಳ್ಳೇದು ನೋಡೋಣ. (ಕಾಲು ನೋಡುತ್ತ) ಮಚ್ಚೀಬಿಡಿರಿ- ಅಂತ ಎಲ್ಲಾ ಹೇಳಿದಿ.. ಹೊಸಾವು ಕೊಳ್ಳಲಿಕ್ಕೆ ದುಡ್ಡು?

ರಂಗೂ— ಈಗ ದುಡ್ಡು ಬೇಕಾಗಿಲ್ಲ ಮಚ್ಚಿಗೆ. ಕಕ್ಕ ನೊನ್ನೆ ಮೊನ್ನೆ ಒಂದು ಜೋಡು ಕೊಂಡಿದ್ದ. ಇದೋ ನೋಡ್ರಿ. ಇಲ್ಲೇ ಅವ! ಇವನ್ನ ಹಾಕಿ ಕೊಳ್ಳಿರಿ !

ಜನಾರ್ದನ—ನಿಮ್ಮ ಕಕ್ಕನ ಕಾಲು ದೊಡ್ಡವು.... ನನಗೆ ಬರೋದಿಲ್ಲ ಅವು !

ರಂಗೂ— ಏನು ? ಸ್ವಲ್ಪ ದೊಡ್ಡವಾದರ ನಡೀಲಿಕ್ಕೆ ಬರೋದಿಲ್ಲs ನಿಮಗ....? ಹಾಕಿರಿ, ತಗೊಳ್ರಿ ಸಾಕು ! ನಿಮ್ಮ ಅಳತೀವು ಕೊಳ್ಳಲಿಕ್ಕೆ ದುಡ್ಡಿಲ್ಲ- ಮೇಲೆ ಇಂಥಾ ಜಿಕೀರಿ! ಮತ್ತಂದರ ಕೇಳಿರಿ ಇಷ್ಟು ! ಎಲ್ಲಾ ನಾನs ಹೇಳಬೇಕs ನಿಮಗ..? ಸ್ವಂತ ಬುದ್ಧೀನs ಕವಿಸ್ತಾ ಎಂದಿಗಾದರೂ.. ! ಕಕ್ಕ ಮೊನ್ನೆ ನೊನ್ನೆ ಪುಣೇದಿಂದ ದೊಡ್ಡ ಸೂಟಕೇಸ್ ತರಿಸಿದ್ದ. ಆ ಟ್ರಂಕು ಮುರದು ಹೋಗೇದ. 'ನಾ ಹೋದಮ್ಯಾಲ ನಿನಗs ಈ ಸೂಟ್‌ಕೇಸು....' ಅಂತ ಹೇಳಿದ್ದ.. ತಿಳೀತs !

ಜನಾರ್ದನ— ಜಾನಕೀಬಾಯಿ ಬರಲಿ; ಆ ಮ್ಯಾಲ ಎಲ್ಲಾ ಸಾಮಾನು ಹಂಚೋಣಂತ.. !

ರಂಗೂ— ಅಕ್ಕಲs ಇಲ್ಲಾ ಅಂತ ಏನ ಹೇಳೋದು ಮತ್ತ ! ಜಾನಕಿ ಬಂದಳೂ ಅಂದರ ಸುಮ್ಮನ ಬಿಟ್ಟುಕೊಟ್ಟ್ಯಾಳs ಅಂಥಾ ಹೊಸಾ ಸೂಟಕೇಸು? ಮತ್ತಲ್ಲದ ನನಗ ಬೇಕಾಗೇದ ಅಂತ ತಿಳಿದರಂತೂ ತೀರಿತು. ಆಕಿ 'ನನಗs ಬೇಕು' ಅಂತ ಹಟಾ ಹಿಡೀತಾಳ.. !

ಜನಾರ್ದನ— ಅಂದರ ಏನ ಮಾಡಬೇಕೂ ಅಂತೀ-?

ರಂಗೂ— ಮತ್ಯಾಕ ಹೇಳೋದು ನಿಮಗ.. ಸ್ವಂತ ಅಕಲs ಇಲ್ಲ ಅಂತ! ಎಲ್ಲಾದಕ್ಕೂ ನಾನs ಹೇಳಬೇಕು ! ನಾ ಇಲ್ಲದೇ ಇದ್ದರ ಏನು ಮಾಡತಿದ್ದಿರೋ ಏನೋ? ಜಾನಕಿ ಆ ಹೊಸಾ ಸೂಟಕೇಸು ಇನ್ನೂ ನೋಡಿಲ್ಲ, ತಿಳೀತs? ಆಕಿ ಬರೋದರೊಳಗs ಅದನ್ನ ಇಲ್ಲಿ ತಂದು ಇಟ್ಟುಕೊಳ್ಳೋಣ. ಎಲ್ಲಾ ನಾನs ಬಾಯಿಬಿಟ್ಟು ಹೇಳಿಕೊಡಬೇಕು ನಿಮಗ !

ಜನಾರ್ದನ— ಅಂದರೇನು ಈಗ ಆ ಸೂಟಕೇಸೇನು....

ರಂಗೂ— (ನಡುವೆ ಬಾಯಿ ಹಾಕಿ) ಹೂಂ, ಈ ಖೋಲ್ಯಾಗ ತಂದಿಡಬೇಕು; ತಿಳೀತs ?

ಜನಾರ್ದನ— (ಆಶ್ಚರ್ಯದಿಂದ) ಅಲ್ಲ-ಮತ್ತ ಅದನ್ನ ತರೋ ಅಷ್ಟೊತ್ತಿಗೇ ಅವರು ಬಂದರ—

ರಂಗೂ— ಅಷ್ಟೂ ಅಕಲ ಇಲ್ಲs ನಿಮಗ ? ಬಾಗಿಲ ಅಗಳೀ ಹಾಕ್ರಿ. ಎರಡು ಮಿನೀಟಿನ ಕೆಲಸ. ಅಷ್ಟು ತೋಳು ಏರಿಸರಿ ! ಸೂಟ ಕೇಸು ಭಾರ ಅದ. (ಬಾಗಿಲಹತ್ತಿರ ಹೋಗುತ್ತಾಳೆ) ನಾ ಮ್ಯಾಲ ಹೋಗಿರತೀನಿ ; ಅಷ್ಟು ಲಗೂ ಬರ್ರಿ ! ಇಲ್ಲೇ ವಿಚಾರ ಮಾಡ್ತ ನಿಂದರಬ್ಯಾಡರಿ! ತಿಳೀತs- (ಹೋಗುತ್ತಾಳೆ.) (ಲಕ್ಷ್ಮಿ ಒಳಗಿಂದ ಬರುತ್ತಾಳೆ. ಹೊಗೆಯಲ್ಲಿಕೂತು ಕಣ್ಣು ಕೆಂಪಗಾಗಿವೆ. ಅಪ್ಪನನ್ನು ನೋಡುತ್ತ)

"ರಂಗೂ:— ಆ ನಿಮ್ಮ ಹರಕುಮಚ್ಚೀ ಬಿಡಿರಷ್ಟು... ಮಂದಿ ನೋಡಿದವರೆಲ್ಲ ನಗತಾರ. ಬಾಣಂತೇರು ಹಾಕೋ ಮಚ್ಚ್ಯಾಗ್ಯಾವ. !"

ಲಕ್ಷ್ಮಿ— ಇದೇನಪ್ಪಾ ಅಂಗೀ ತೋಳು ಏರಿಸೀದಿ ?

ಜನಾರ್ದನ— ಅದೇ ನೋ ನಿಮ್ಮ ಅಜ್ಜನ ಸೂಟಕೇಸು ಇಲ್ಲಿಗೆ ತರಬೇಕಂತ ಹೇಳತಾಳ !

ಲಕ್ಷ್ಮಿ— ಅಂದರ ಜಾನಕೀ ಆಬಚಿ ಬರೋದರೊಳಗs ಅದನ್ನ ಎತ್ತಬೇಕೂ ಅಂತ ಏನು ?

ಜನಾರ್ದನ— ನಿಮ್ಮ ಅಜ್ಜ ಅದನ್ನ ಆಕೀಗೇ ಕೊಡತೇನ ಅಂತ ಹೇಳಿದ್ದನಂತ !

ಲಕ್ಷ್ಮಿ— ಹಾಂಗಿದ್ದರ ಮತ್ತ ಇಷ್ಟ್ಯಾಕ ಅವಸರ ಅದಕ್ಕ ? ಆ ಮ್ಯಾಲ ತಂದರಾಗವೇನು? ಬಾಗಿಲಾ ಯಾಕ ಹಾಕೇದ (ಹೊರ ಬಾಗಿಲ ಅಗಳೀ ಹಾಕಿದ್ದು ನೋಡಿ) ಇನ್ನೂ ಕತ್ತಲಾಗಿಲ್ಲ !

ಜನಾರ್ದನ— (ಏನು ಉತ್ತರ ಕೊಡಬೇಕು ತಿಳಿಯದೆ) ಅಂ.. ಬಹಳ ಘಾಳಿ ಬಿಟ್ಟsದ-ಧೂಳ ಬಂದೀತು. (ಇಷ್ಟರಲ್ಲಿ ರಂಗೂಬಾಯಿ ಸೀರಿ ಗಂಡುಗಚ್ಚೆ ಹಾಕಿ, ಗಡಿಬಿಡಿಯಿಂದ ಕೈಯಲ್ಲಿ ಹೊಸ ಗಡಿಯಾರ ಹಿಡಿದುಕೊಂಡು ಬರುತ್ತಾಳೆ.)

ರಂಗೂ— (ಸಿಟ್ಟಿನಿಂದ) ನಾನು ಹೇಳೋದೇನು ಸುಳ್ಳs ಸತ್ತ ! ಇಲ್ಲೇ ನಿಂತೀರಿ ಇನ್ನೂ ! (ಲಕ್ಷ್ಮಿಯನ್ನು ನೋಡಿ) ನs–ನೀ ಯಾಕ ಇಲ್ಲೆ ? ನೀರ ಕಾಯ್ಸವೇನು ? ನಡೀ ; ಹೂಂ ! ಡೀರಿ– (ಗಡಿಯಾರ ಮೇಜಿನ ಮೇಲೆ ಇಟ್ಟು, ಹಳೆಯ ಡಿಯಾರ ತಕ್ಕೊಳ್ಳುತ್ತಾಳೆ.)

ಲಕ್ಷ್ಮಿ— ಇದು ಅಜ್ಜನ ಗಡಿಯಾರ, ಇಲ್ಲ್ಯಾಕ ?

ರಂಗೂ – (ಸಿಟ್ಟಿನಿಂದ) ಬಾಯಿಮುಚ್ಚs ಜೋಡೀ !... ದು ನಮ್ಮದು ಈಗ. .! ಹೂಂ, ನಡೀರಿ ಇನ್ನೂ ಏನು ವಿಚಾರ...? ೂತ್ತಾಗಲಿಲ್ಲs...ಮತ್ತೆ ಏ ಲಕ್ಷ್ಮೀ, ಗಡಿಯಾರ ಅಜ್ಜಂದು ಂತ ಅಂದಿಗಿಂದೀ ನಿಮ್ಮ ಅಬಚೀ ಮುಂದ ! ಎಚ್ಚರಿಕೆ.. ! ನು ? ಈ ಹಳೇ ಟ್ರಂಕು ಮ್ಯಾಲ ಒಯ್ಯೋಣ– ನಡೀರಿ ! ಎತ್ತರಿ !
ಇಬ್ಬರೂ ಕೂಡಿ ಟ್ರಂಕನ್ನು ಎತ್ತಿಕೊಂಡು ಒಳಗೆ ಹೋಗುವರು.)

ಲಕ್ಷ್ಮಿ— (ಸ್ವಗತ) ಹೂಂ, ಗೊತ್ತು ನನಗ.. ಸೂಟಕೇಸು ತ್ತಿ ಹಾಕಿದಿವಿ ! (ಹೊರಗೆ ಬಾಗಿಲಲ್ಲಿ ಯಾರೋ ಬಾಗಿಲ ತಿಯುವರು.)

ರಂಗೂಬಾಯಿ— (ಒಳಗಿನಿಂದ ಒದರುತ್ತ) ಏ, ಲಕ್ಷ್ಮೀ, ಮ್ಮ ಅಬಚಿ ಬಂದಿದ್ದರ ಬಾಗಿಲಾ ತಗೀಬ್ಯಾಡ–ನಾ ಬರೋ ನಕ–ಏನು ?

(ಲಕ್ಷ್ಮಿಯು ಕಿಟಕಿಯಲ್ಲಿ ನೋಡುವಳು.)

ಲಕ್ಷ್ಮಿ— ಅವ್ವಾ, ಅವ್ವಾ, ಅಬಚಿ ಬಂದಾಳ–ನಾರಾಯಣ ಾಕಾಸೂ ಬಂದಾನ!

ರಂಗೂ—ಬಂದೆ, ಬಾಗಿಲಾ ತಗೀಬ್ಯಾಡ; ಎಚ್ಚರಿಕೆ.. (ಮತ್ತೆ ಾಗಿಲ ಬಡಿಯುತ್ತಾರೆ) ಬಡೀಲಿ, ಬಡೀಲಿ.. ಈಗ ಬಂದೆ.. ಒಳಗಿನಿಂದ ಗೋಡೆಗೆ ಹಾಯ್ದು ಸಪ್ಪಳ) ಜೋಕೆ ! ಅಷ್ಟು ಾರಿಂದ ನಡೀರಿ ! ಎಷ್ಟು ಸಪ್ಪಳ.. ಏನು ಗೋಡೆಗೆ ಾಯೋಣ..! ಅಕಲೇ ಇಲ್ಲ ಅಂತ ಅದಕ್ಕs ಹೇಳೋದು. ಗಂಡ–ಹೆಂಡಿರಿಬ್ಬರೂ ಉಸುರುಗರೆಯುತ್ತ ಭಾರವಾದ ಹೊಸ ೂಟ್‌ಕೇಸನ್ನು ಹೊತ್ತುಕೊಂಡು ಬರುತ್ತಾರೆ. ಮತ್ತೆ ಾಗಿಲ ಸಪ್ಪಳ.) ಈಗ ತಗೀಹೋಗು ಬಾಗಿಲಾ. ಹೂಂ ೂಳಷ್ಟು ಇಳಿಸಿರಿನ್ನ; ಇಷ್ಟೂ ತಿಳಿಯೋದಿಲ್ಲಾ ನಿಮಗ? ಹಣೀಗೆ ಣ್ಣಾ ಹತ್ತೇದದನ್ನು ಅಳಿಸಿಕೊಳ್ರಿ !

ಜನಾರ್ದನ— (ಅಂಗಿಯನ್ನು ಸರಿ ಮಾಡಿಕೊಳ್ಳುತ್ತ) ಎಲ್ಲಾ ೂತs ಸುಣ್ಣಾ? ಗುಬಟಿಬ್ಯಾರೆ ಒಂದsದ !

ರಂಗೂ— ಏನ ಹಣೀ ಒಡದ ಹೋಗಿಲ್ಲ ತಗೊಳ್ರಿ..! ನನಗೇ ಾರ ಸುಣ್ಣಾ ಹತ್ತೇದೇನ ನೋಡ್ರಿ– (ಸೀರಿಯನ್ನು ಸಮನಾಗಿ ಾಡಿಕೊಳ್ಳುವಳು.) ಇದನ್ನ ಓದಿಕೋತ ಕೂಡ್ರಿ (ಒಂದು ಳೆಯ ವರ್ತಮಾನಪತ್ರ ಕೊಡುವಳು)– ಎಲ್ಲಾ ಹೇಳಿ ಕೊಡ ೇಕು ನಿಮಗ !

(ಜಾನಕೀಬಾಯಿ, ಆಕೆಯ ಗಂಡ ನಾರಾಯಣರಾಯ ಒಳಗೆ ಬರುತ್ತಾರೆ. ಜಾನಕೀಬಾಯಿಯ ಹಣೆಯಮೇಲೆ ಕುಂಕುಮವಿಲ್ಲ.)

ಜಾನಕೀಬಾಯಿ – (ಅಳುವ ದನಿಯಲ್ಲಿ) ಅಂತೂ, ಕಕ್ಕ ಹೋದನs ! ಸಾಯೋಮುಂದ ಭೆಟ್ಟೀ ಕೊಡಲಿಲ್ಲ– (ಅಳುತ್ತಾಳೆ.)

ನಾರಾಯಣ— ಇರಲಿ ಬಿಡs; ಹೂಂ,– ಹುಟ್ಟಿದಮೇಲೆ ಎಲ್ಲರೂ ಒಂದು ದಿನ ಸಾಯೋದೇ– ಅತ್ತರ ಏನು ಸತ್ತವರು ಬರತಾರs ? ಅದೂ ಅಲ್ಲದ ೭೦ ವರ್ಷದ ಮುದುಕ ! ಮುಂದಿಗೆಲ್ಲಾ ಭಾರ ಆಗಿದ್ದ!

ಜಾನಕಿ— ಸಾಯೋಮುಂದ ಡಾಕ್ಟರ್ ಬಂದಿದ್ದರೇ ? ಏನು ಹೇಳಿದರು ?

ರಂಗೂ— ಎಲ್ಲೀ ಡಾಕ್ಟರು– ಏನು ಮಾತು ? ಹೇಳಿ ಕಳಿಸಿದ ಡಾಕ್ಟರೂ ಇನ್ನೂ ಬಂದಿಲ್ಲ ; ಮತ್ತ ಆ ಶಂಕರಭಟ್ಟನೂ ಬಂದಿಲ್ಲ ಇನ್ನೂ– ಈಗ ಎರಡು ತಾಸಾತು !

ಜಾನಕಿ— ಅಂದರ ಡಾಕ್ಟರ ಬರದs ಸತ್ತನ? ಹಾಂಗಾರ ಇನ್ನೂ ಜೀವ ಅದ. ಲಕ್ಷ್ಮೀ, ಓಡು..ಆ ಮಗ್ಗಲ ಮನೀ ವೈದ್ಯರನ್ನ ಕರೀ.. ಓಡು.. ಆದ್ಯಾಕ ಬರಬಾರದು ಜೀವ ? ಎಷ್ಟೋ ಜನರು ಸತ್ತರು ಅಂತ ಹೇಳಿದ ನಾಕು ನಾಕು ತಾಸಿನ ಮ್ಯಾಲ ಜೀವಾ ತರಸ್ಯಾರ ವೈದ್ಯರು.. ಹೂಂ, ಲಕ್ಷ್ಮೀ.. !

ನಾರಾಯಣ— (ಲಕ್ಷ್ಮಿಯನ್ನು ನಿಲ್ಲಿಸಿ) ನೀ ಹೇಳೋ ಮಾತು ನೀರಾಗ ಮುಳುಗಿದವರದು; ಅಂಥವರನ್ನ ಪುನಃ ಬದಕಸ್ಯಾರ– ಹೊಟ್ಯಾಗಿನ ನೀರ ತಗದು..! ನಿಮ್ಮ ಕಕ್ಕ ಮುಳುಗಿ ಸತ್ತಿಲ್ಲ; ಮನ್ಯಾಗ ಸತ್ತಾನ ಮನ್ಯಾಗ..! ಅದೂ ಅಲ್ಲದs ನಿಮ್ಮ ಕಕ್ಕಗ ನೀರ ಕಂಡರ ಮೂರಿರೋಗ ಬರತಿತ್ತು ಮೂರಿರೋಗ! (ನಗುತ್ತಾನೆ.)

ಜಾನಕಿ— (ಸಿಟ್ಟಿನಿಂದ) ಸಾಕುಮಾಡ್ರಿ ನಿಮ್ಮ ಚಾಷ್ಟೀ ! ಹೊತ್ತಿಲ್ಲ ವ್ಯಾಳ್ಯೇ ಇಲ್ಲ.. ಎಲ್ಲಾನೂ ನಗೀನs ನಿಮಗ !

ರಂಗೂಬಾಯಿ— ಇವತ್ತ ಮಧ್ಯಾಹ್ನ ಹನ್ನೆರಡು ಗಂಟೆಯ ವರೆಗೆ ಚೆನ್ನಾಗಿದ್ದ ಕಕ್ಕ. ಇನ್ಶೂರನ್ಸ ಕಂಪನೀ ಏಜಂಟ್ ಬಂದಾಗ ಅವನಿಗೆ ಇದೇ ತಿಂಗಳ ಪ್ರೀಮಿಯಂ ಕೂಡ ಕೊಟ್ಟ– (ಗಂಡನಿಗೆ) ಅಲ್ಲವೇ ?

ಜನಾರ್ದನ – ಹೌದು ! ಅಲ್ಲದೆ ನಾನು ಊಟಕ್ಕೆ ಕರೆಯಲು ಹೋದಾಗ ಮಲಗಿಕೊಂಡಿದ್ದ– ' ಈಗ ಊಟಮಾಡೋದಿಲ್ಲ.. ಸಾಯಂಕಾಲಕ್ಕೆ ' ಅಂತ ಹೇಳಿದ.

ರಂಗೂಬಾಯಿ – ಮತ್ತ ೪ ಗಂಟೆ ಸುಮಾರಿಗೆ ಚಹಾಕ್ಕ ಕರೀಲಿಕ್ಕೆ ನಾನs ಹೋದೆ; ಎಷ್ಟು ಒದರಿದರೂ ಏಳಲೆ ಇಲ್ಲ.. ಹತ್ತರ ಹೋಗಿ ನೋಡಿದೆ..ಮೈ ಎಲ್ಲಾ ತಣ್ಣಗ !– ನಾಡಿ ಬಂದ–! ತೀರಿಕೊಂಡು ಬಿಟ್ಟಿದ್ದ–! ಆ ಉಬ್ಬಸದ ಬ್ಯಾನಿ..ನನಗ ಗೊತ್ತs ಇತ್ತು .. ಕಕ್ಕ ಎಂದಾದರೂ ಹೀಂಗ ಒಮ್ಮೆಲೇ ಸಾಯೋದು ಅಂತ ! (ಅಳುವನ್ನು ನಟಿಸುವಳು.)

ನಾರಾಯಣ— ಮೊದಲು ಅಷ್ಟು ಚಹಾ ತರ್ರಿ ರಂಗೂಬಾಯಿ! ಆ ಮ್ಯಾಲ ಹೆಣದ ವ್ಯವಸ್ಥಾ– ಆ ಮ್ಯಾಲ ಆತನ ಸಾಮಾನು–ಸಟ್ಟು– ಲೆಕ್ಕ–ಪತ್ರಗಳ ವಿಚಾರ !

ರಂಗೂಬಾಯಿ— (ಚಹಾ ಕೊಡುತ್ತ) ದಾಗೀನು ವಗೈರೆ ಎಲ್ಲಾ ಎಂದೋ ಮಾರಿಬಿಟ್ಟಾನ....ಉಳಿದದ್ದು ಅಂದರ ಆತನ ಪಲ್ಲಂಗ, ಇನ್ಸೂರನ್ಸ್ ಹಣ, ಒಂದು ಬಂಗಾರದ ರಿಸ್ಟ್‌ವಾಚು !

ಜಾನಕಿ— ಆ ಗಡಿಯಾರ ನಮ್ಮ ಶೀನೂಗ ಕೊಡತೇನಿ ಅಂತ ಹೇಳಿದ್ದ– ಈಗ ಎರಡು ವರ್ಷದ ಹಿಂದs ; (ಗಂಡನನ್ನು ಕೇಳಿ) ಏಕೆ ಅಲ್ಲವೇ ?

ನಾರಾಯಣ— ಬರೇ ಗಡಿಯಾರನs ಯಾಕ : ಇದ್ದ ಬಿದ್ದ ಎಲ್ಲಾದನ್ನೂ ನಿನಗs ಕೊಡೋದು ಅಂತ ಹೇಳಿದ್ದ !

ರಂಗೂಬಾಯಿ— (ಸಿಟ್ಟಿನಿಂದ) – ಹ್ಯಾಂಗೇನು ? ಅಂದರ ಈಗ ಎರಡು ವರ್ಷದಿಂದ ನಾವು ಮನ್ಯಾಗ ಇಟುಕೊಂಡು, ಜಡ್ಡಿನವನ್ನ ಆರೈಕೀ ಮಾಡಿದ್ದೆಲ್ಲಾ ಎಲ್ಲಿ ಹೋತು ಹಾಂಗಾದರs ?

ನಾರಾಯಣ— ಸ್ವಲ್ಪ ಸಮಾಧಾನ ಮಾಡ್ರಿ ರಂಗೂಬಾಯಿ ! ಇನ್ಸೂರನ್ಸ್ ಹಣಾ ಅದs ಅಲ್ಲ– ೧೦,೦೦೦ಕ್ಕ ವಿಮಾ ಇಳಿಸಿದ್ದ. ಅದರಾಗ ನಿಮಗ ೫೦೦೦ ಬರತದ. ಸಣ್ಣ ಪುಟ್ಟ ಸಾಮಾನು ತಗೊಂಡೇನು ಮಾಡ್ತೀರಿ ? ನಿಮಗೇನು ಗಂಡನು ಮಕ್ಕಳಿಲ್ಲ. ಜನಾರ್ದನರಾಯ ಹಳೇ ತರದ ಮನುಷ್ಯ. ಅಂದ ಮ್ಯಾಲ ರಿಸ್ಟ್‌ವಾಚ್ ತಗೊಂಡೇನು ಮಾಡ್ತೀರಿ ನೀವು ?

ಜನಾರ್ದನ— ಮೊದಲ ಇನ್ಸೂರನ್ಸ್ ಹಣದ ಪಾವತೀ ಎಲ್ಲ್ಯದ ನೋಡ್ರಿ ಅಷ್ಟು– !

ಲಕ್ಷ್ಮಿ— ಮಧ್ಯಾನ್ನಾಗ ಬಂದವ ಇನ್ಸೂರನ್ಸ್ ಎಜಂಟ್ ಅಲ್ಲ; ನನಗ ಗೊತ್ತದ–ನಾಯಿಕರ ಬಿಷ್ಟಪ್ಪ ಬಂದಿದ್ದ. ಅವರಾಡಿದ ಮಾತೆಲ್ಲಾ ನಾ ಕೇಳಿದೆ. ಆದೇನೋ ಬಿಷ್ಟಪ್ಪನ ಮಗಳು ಪಾರಿನ್ನ ಅಜ್ಜ ಲಗ್ನಾ ಮಾಡಿಕೊಳ್ಳಬೇಕಂತಿದ್ದ.

(ಎಲ್ಲರೂ **ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋಡುವರು**).

ನಾರಾಯಣ— ನನಗ ಗೊತ್ತು, ನಿಮ್ಮ ಕಕ್ಕನ ಗತ್ತು ! ಅಂತೂ ಇಂತೂ ಒಮ್ಮೆ ಲಗ್ನಾಗೋ ಆಸಾಮೀ ಇದು ಅಂತ !

ರಂಗೂ— (ಸಿಟ್ಟು ನಿರಾಶೆಯಿಂದ) ಅಂದರ ಈ ಎರಡು ವರ್ಷದಿಂದ ನಾನು ಆತಗ ಮಾಡಿದ್ದೆಲ್ಲಾ ಹಾಳಾಗಿ ಹೋತು— ಪ್ರೀಮಿಯಂ ಕೊಡದೆ ಇದ್ದರ ಹಣ ಹ್ಯಾಂಗ ಸಿಗತದ ?–

ಜಾನಕೀ— ನಮ್ಮ ಮನ್ಯಾಗ ಐದು ವರ್ಷ ಇದ್ದ.. ಇಲ್ಲಿಗೆ ಬರೋದಕ್ಕೆ ಮುಂಚೆ !

ರಂಗೂ— ಅಂತ್ಲೇ ಯಾವಾಗ ಮನೀ ಬಿಟ್ಟು ಕಳಿಸೇನು ಅಂತ ಕೂತಿದ್ದಿ. ಈಗ ಎರಡು ವರ್ಷಾತು ದಿನಾ ಶುಶ್ರೂಷೆ ! ನಿಮ್ಮಲ್ಲಿದ್ದಾಗ ಬ್ಯಾನಿ ಅಷ್ಟು ಜೋರಿದ್ದಿಲ್ಲ..ಏನೌಷಧಿ, ಏನು ಪಥ್ಯಾ ! ರಾಮ ರಾಮಾ (ಕಿವಿಯ ಮೇಲೆ ಕೈ ಇಟ್ಟುಕೊಳ್ಳುವಳು.)

ಜನಾರ್ದನ— ಎಲ್ಲಾ ಕಾಗದ ಪತ್ರ ನೋಡದs ಈಗಾಗಲೇ ಅಳ್ಳಿಕ್ಕೇ ಹತ್ತೀರಿ. ನೋಡೋಣ; ಈ ಸೂಟಕೇಸಿನ್ಯಾಗ ಎಲ್ಲಾ ತನ್ನ ಪತ್ರಾ ಇಡತಿದ್ದ.

ರಂಗೂಬಾಯಿ— ಇದ್ದರೂ ಯಾಕ ಇರಬಾರದು ! ಏ, ಲಕ್ಷ್ಮೀ ಹೋಗs . ಮ್ಯಾಲ ಅಜ್ಜನ ಖೋಲ್ಯಾಗ ಕೀಲೀಕೈ ಸರಪಳಿ ಅದ ತಗೊಂಡು ಬಾ !

ಲಕ್ಷ್ಮಿ— ಸತ್ತವರ ಖೋಲ್ಯಾಗ, ಒಬ್ಬಾಕೀ– ಹೋಗs ನಂತಾಯಿಽ !

ರಂಗೂ— (ಸಿಟ್ಟಿನಿಂದ) ಕೆಟ್ಟ ಮಾರೀ ಹುಡುಗೀ ! ಹೋಗ್ತೀ ಇಲ್ಲೋ ? (ಹೊಡೆಯಲಿಕ್ಕೆ ಕೈ ಎತ್ತುವಳು.)

(ಲಕ್ಷ್ಮಿಯು ತಪ್ಪಿಸಿಕೊಂಡು ಓಡಿಹೋಗುವಳು.)

ರಂಗೂ— ನೋಡೋಣ, ಸೂಟಕೇಸಿನ್ಯಾಗ ಯಾಕ ಇಟ್ಟಿರಬಾರದು ಪಾವತೀ ?

ಜಾನಕೀಬಾಯಿ— (ಸೂಟಕೇಸ್ ನೋಡಿ) ಇದೇನs ರಂಗಕ್ಕಾ ಇದೆಲ್ಲಿ ತಗೊಂಡ್ರಿ? ಹೊಸಾದು ಕಾಣ್ಸತದ ?

ರಂಗೂಬಾಯಿ— (ನಸ್ಯ ಮಾಡುತ್ತ) ಅಲ್ಲೇ ಕೇಳು.. ಎಲ್ಲಿಂದಾ ತಂದ್ರು ಅಂಬೂದನ್ನ !

ಜನಾರ್ದನರಾಯ— (ಸಂಕೋಚದಿಂದ) ಅದನ್ನ–ಹೂಂ–ಮೊನ್ನೆ ಆ ಶ್ಯಾನಭೋಗರ ಶ್ಯಾಮರಾಯರ ಮಗ ಪರೀಕ್ಷಕ್ಕ ಪುಣೇಕ್ಕ ಹೋದಾಗ ತರಿಸಿದೆ. ೪೦ ರೂಪಾಯಿ ಅಂತ ಅದಕ್ಕ.

(**ಲಕ್ಷ್ಮಿಯು ಓಡಿಬಂದು ಹೆದರಿದವಳಂತೆ ನಡುಗುತ್ತ ನಿಲ್ಲುತ್ತಾಳೆ**).

ಲಕ್ಷ್ಮಿ— ಅವ್ವಾ, ಅವ್ವಾ, ನಾ ಮೊದಲs ಹೇಳಲಿಲ್ಲs ನಿನಗ.. ಅಜ್ಜನ ಖೋಲ್ಯಾಗ ಹೋಗೋದಿಲ್ಲ– ಅಂತ !

ರಂಗೂ— ಅಂದರ !

ಲಕ್ಷ್ಮಿ— ಅಜ್ಜ ಎದ್ದು ಕೂತಾನ..ದ್ರಾಕ್ಷೀ ತಿಂತಿದ್ದ– ನಸ್ಸಳ ಮಾಡಥಾಂಗs ಓಡಿ ಬಂದೆ !

ಜಾನಕಿ— ಛೀ ಹುಚ್ಚೀ, ಅದು ನಿನ್ನ ಕಲ್ಪನಾ, ಸತ್ತವರೆಲ್ಲಾರೇ ದ್ರಾಕ್ಷೀ ತಿಂತಾರೇನು ?

ರಂಗೂ— (ಲಕ್ಷ್ಮಿಯನ್ನು ಸಮಾಧಾನ ಮಾಡುತ್ತ) ಅಜ್ಜ ಸತ್ತ್ಯಾನ. ನೀ ಹೆದರಿದ್ದೀ....

ಲಕ್ಷ್ಮಿ— ಇಲ್ಲs ಅವ್ವಾ, ಕಣ್ಮುಟ್ಟ ನೋಡಿ ಬಂದೆ..ಹಾಸಿಗೀ ಮ್ಯಾಲ ಕೂತುಕೊಂಡು ತಿನಲಿಕ್ಕೆ ಹತ್ಯಾನ..ಬೇಕಾದರ ಹೋಗಿ ನೋಡ್ರಿ.

ಜಾನಕಿ— ನೋಡೋಣ ನಡೀರಿ ಹಾಂಗಾರ! ನಾ ಹೇಳಲಿಲ್ಲs ಸತ್ತ ೪ ತಾಸಿನ ಮ್ಯಾಲ ಜೀವ ಬಂದವರಿದ್ದಾರ– ಅಂತ ! (ಗಂಡನನ್ನು ನೋಡಿ ನಗುತ್ತಾಳೆ.)

(ಎಲ್ಲರೂ **ಏಳುತ್ತಾರೆ. ಹಿಂದಿನ ಪರದೆ ಏಳುತ್ತದೆ–ಖೋಲಿಯ ಪಲ್ಲಂಗದ ಮೇಲೆ ಭಗವಂತರಾಯ ದ್ರಾಕ್ಷೆಯನ್ನು ತಿನ್ನುತ್ತ, ಕೆಮ್ಮುತ್ತ ಕುಳಿತಿದ್ದಾನೆ. ಎಲ್ಲರೂ ಹೆದರಿಕೆ–ಕುತೂಹಲದಿಂದ ನೋಡುತ್ತಾರೆ**).

ಕಾಕಾ— ಏ ಲಕ್ಷ್ಮೀ, ಏನಾಗೇದ ನಿನಗ ? ಬಂದಿದ್ದಿ ಯಾಕ. ಓಡಿಹೋದಿ ಯಾಕ ?' ದ್ರಾಕ್ಷಿಗೆ ಬಂದಿದ್ದೇನು ? (ನಾರಾಯಣ

ರಾಯನ್ನ ನೋಡುತ್ತ) ಯಾರು, ನಾನಾರಾಯ? ಜಾನಕೀನೂ ಬಂದಾಳs? ಇದೇನು ಎರಡುವರ್ಷದ ಮ್ಯಾಲ ಭೆಟ್ಟಿ? ಎಲ್ಲಾರೂ ಕ್ಷೇಮುs? (ಕೆಮ್ಮುತ್ತಾನೆ.)

ರಂಗೂ— ಕಕ್ಕಾ (ಮೈ ಮುಟ್ಟಿ ನೋಡಿ, ಬಟ್ಟು ತಿವಿದು ಪರೀಕ್ಷಿಸುತ್ತಾಳೆ)- ಕಕ್ಕs!

ಕಾಕಾ— (ಕೈತೆಗೆದು ಸರಿಯುತ್ತ) ಒಟ್ಯಾಕ ತಿವೀತಿಯೋ ರಂಗೂ? ಮೊದಲs ಪಕ್ಕೆ ನೋಯ್ತಾವ? ..! (ದ್ರಾಕ್ಷೆಯನ್ನು ತಿನ್ನುತ್ತ ಕೆಮ್ಮುತ್ತಾನೆ.)

ರಂಗೂ— (ಎಲ್ಲರಿಗೂ) ಕಕ್ಕ ಸತ್ತಿಲ್ಲ. ಜೀವಂತ ಇದ್ದಾನ! (ತಮ್ಮೊಳಗೇ ಎಲ್ಲರೂ ಕಿವಿಮಾತಾಡುತ್ತಾರೆ.)

ನಾರಾಯಣ— ಹಾಂಗs ಕಾಣಿಸ್ತsದ! (ಹೆದರಿ. ಹಿಂದಕ್ಕೆ ಸರಿಯುತ್ತಾನೆ.)

ಕಾಕಾ— (ಏನೂ ತಿಳಿಯದವನ ಹಾಗೆ) ಏನದು ಕುಜು ಕುಜು ಮಾತು? ಜಾನಕೀ, ಎರಡು ವರ್ಷಾತು ನಿಮ್ಮ ಮನೀ ಬಿಟ್ಟು..ಒಮ್ಮೆಯಾದರೂ ಭೆಟ್ಟಿಗೆ ಬಂದೀಯಾ?

ಜಾನಕಿ— ಏನು ಮಾಡೋದು ಕಕ್ಕಾ, ದಿನಾ ಕೆಲಸದಾಗ ಮರತs ಹೋಗತಿತ್ತು. ಈಗ ಎಲ್ಲಾ ನೆಟ್ಟಗಾಗೇದs ಕೆಮ್ಮೋದು- ಉಬ್ಬಸ ಹ್ಯಾಂಗೈತೇ? ಬಹಳ ಜೋರಾಗೇದ ಅಂತ ಕೇಳಿಬಂದಿವಿ!

ಕಾಕಾ- (ಕಿವಿಗೊಟ್ಟು ಕೇಳುತ್ತ) ಏನಂದಿ? ಜೋರಾಗೇದ? ಯಾರಿಗೆ? ನನಗೇನೂ ಜೋರಿಲ್ಲ..ಕೆಮ್ಮು! ಇವತ್ತ ಮಧ್ಯಾನ್ಹಾಗ ಮಾತ್ರ ಯಾಕೋ ಸ್ವಲ್ಪ ತಲೆನೋವು ಬಂದ್ಹಾಂಗಿತ್ತು- ಅಂತs ‘ಲಂಘನಂ ಪರಮೌಷಧಂ’ ಅಂತ ಊಟಾ ಬಿಟ್ಟು ಮಲಗಿದ್ದೆ. ಈಗೇನೂ ಇಲ್ಲ. ಎಲ್ಲಾ ಬರಾಬರೀ ಅದ! (ಪಲ್ಲಂಗದಿಂದ ಇಳಿದು, ಖುರ್ಚಿಯ ಹತ್ತಿರ ಬರುತ್ತಾನೆ. ನಾರಾಯಣರಾಯ ದೂರ ಸರಿದು ನಿಲ್ಲುತ್ತಾನೆ.) ರಂಗೂ, ನನ್ನ ಚಷ್ಮಾ ಎಲ್ಲ್ಯವs..ಕಾಣೋದಿಲ್ಲ? ಇದೇ ಈಗ ಇಲ್ಲಿ ಬಿಟ್ಟಿದ್ದೆ!

ರಂಗೂ—ಅಲ್ಲೇ ಖುರ್ಚಿಕೆಳಗ ಇದ್ದಾವು ನೋಡು ಕಕ್ಕಾ-! (ಅತ್ತಿತ್ತ ನೋಡುವಳು.)

ಕಾಕಾ— ಎಲ್ಲ್ಯವ? ಎಲ್ಲಿಯೂ ಇಲ್ಲ! ಏನು ಕಣ್ಣು ಮಂಜಾಗ್ಯಾವೋ ನನ್ನವು? (ಜನಾರ್ದನರಾಯ ನೊಕ್ಷಿ ತೆಗೆಯುವದನ್ನು ನೋಡುತ್ತ) ಏನು? ನೀ ಹಾಕಿದ್ಯಾ? ಯಾಕ? ನಿನ್ನ ಜೋಡೇನಾಗ್ಯಾವೋ?

(ಜನಾರ್ದನರಾಯ ಏನು ಮಾತನಾಡಬೇಕೆಂಬುದು ತಿಳಿಯದೆ ಹೆಂಡತಿಯ ಕಡೆಗೆ ನೋಡುವನು.)

ರಂಗೂ— ಹೊಸಾಮುಚ್ಚಿ;..ನಿನ್ನ ಕಾಲಿಗೆ ಹತ್ಯಾವು ಅಂತ ಹಾಕಿಕೊಂಡು ಇಡಲಿಕ್ಕೆ ಹೇಳಿದ್ದೆ, ಕಕ್ಕಾ! (ಗಂಡಗ) ಸಾಕು, ಬಿಡ್ರಿನ್ನ ಅವನ್ನ, ಹಳೇವಾದವು ಅವು..! ಏನಾದರೂ ಹೇಳಿದರ ತಿಳಿಯೋದೇ ಇಲ್ಲಾ- ಹಾಕ್ಕೊಂಡು ನಾಲ್ಕು ಹೆಜ್ಜೀ ಓಡಾಡಿ ಇಡ್ರಿ- ಅಂತ ಹೇಳಿದರ ಹಾಂಗs ಹಾಕ್ಕೊಂಡೇ ತಿರಗ್ತಾರ ಇನ್ನೂ..! ಎಂದಿಗಾದರೂ ಸ್ವಂತ..................

(ಲಕ್ಷ್ಮಿಯು ಓಡಿಬಂದು ಭಗವಂತರಾಯನ ಹತ್ತರ ಕುರ್ಚಿಯ ಮೇಲೆ ಕುಳಿತುಕೊಳ್ಳುವಳು.)

“....ಇಷ್ಟs ಸೈಯೇನs ಅವಲಕ್ಕಿ....? ಹೂಂ, ಇನ್ನಿಷ್ಟು ತಾ ಹೋಗು....!”
(ಪುಟ ೧೬೩)

ಲಕ್ಷ್ಮಿ— ಅಜ್ಜಾ-ನೀ ಸತ್ತೇ ಇಲ್ಲ..? ಇನ್ನೂ ಜೀವಂತ ಇದ್ದೀದಿ..? ಹೂಂ, ದ್ರಾಕ್ಷೀಕೊಡು!

ರಂಗೂ — ಬಾಯಿ ಮುಚ್ಚೀ ಹುಚ್ಚ- ಬೋಡೀ!

ಕಾಕಾ — (ಕಿವಿ ಗೊಟ್ಟು ಕೇಳುತ್ತ) ಏನಂತೀಯೇ ಲಕ್ಷ್ಮೀ, ಯಾರು ಸತ್ತಾರ?

ರಂಗೂ— ಏನಿಲ್ಲ ಕಕ್ಕಾ, ಹುಚ್ಚು ಹುಡಿಗಿ ಏನೋ ವಟಗುಟ್ತಾಳ- (ಲಕ್ಷ್ಮಿಯನ್ನು ಚಿವುಟುತ್ತಾಳೆ).

ಕಾಕಾ— (ರಂಗೂ ಬಾಯಿಯನ್ನು ದಿಟ್ಟಿಸಿ ನೋಡುತ್ತ) ರಂಗೂ. ಹಣೀಗ್ಯಾಕ ಕುಂಕುಮ ಯಾಕಿಲ್ಲ? ಏನು ನನ್ಕಣ್ಣುs ಮಂಜಾಗ್ಯಾವೋ? (ಜಾನಕೀಬಾಯಿಯನ್ನೂ ಲಕ್ಷ್ಮಿಯನ್ನೂ ನೋಡಿ) ಜಾನಕೀನೂ ಕುಂಕುಮ ಹಚ್ಚಿಲ್ಲ- ಲಕ್ಷ್ಮೀ- ಏನೇ ನೀನೂ ಹಚ್ಚಿಕೊಂಡಿಲ್ಲ ಕುಂಕುಮ? ಹತ್ತುವರ್ಷದ ಹುಡುಗಿ! ನಾಳೆ ಬೆಳಗಾದರ ಲಗ್ನsಮಾಡಿಕೋತೀ,! ಹೋಗು; ಕುಂಕುಮಾ ಹಚ್ಚಿಕೋ-; ಆ ಮ್ಯಾಲ ದ್ರಾಕ್ಷಿ!

ಲಕ್ಷ್ಮಿ— (ಅವ್ವನ್ನ ನೋಡುತ್ತ) ಇಲ್ಲಜ್ಜಾ, ಮತ್ತ ನಮಗೇನೋ ಮೈಲಿಗೆಂತ..ಕುಂಕುಮಾ ಹಚ್ಚಬಾರದಂತ.. ಅವ್ವ ಹೇಳಿದಳು. ನೀರು ಹಾಕ್ಕೊಂಡು ಹಚ್ಚಿಕೋಬೇಕಂತ- ನೀರುಕಾಸಿ ಇಟ್ಟೇನಿ;- ನೀರಹಾಕ್ಕೊಂಡ ಮ್ಯಾಲ ಹಚಿಕೋತೇನಿ- ಹೂಂ- ದ್ರಾಕ್ಷೀಕೊಡು!

ಕಾಕಾ— (ಆಶ್ಚರ್ಯದಿಂದ) ಏನಂದಿ ? ಮೈಲಿಗಿ..? ನೀರು ಯಾಕ ಹಾಕ್ಕೊಂಬೋದು ? ಅಂದರೇನು ನಾನೂ ಹಾಕ್ಕೋಬೇಕೇನು ? ಡಾಕ್ಟರು ನೀರು ಮುಟ್ಟಬ್ಯಾಡ್ರಿ ಅಂತ ಹೇಳ್ಯಾರ ! ರಂಗೂ, ಎಲ್ಲೀದು ಮೈಲಿಗಿ ? ಎಷ್ಟು ದಿನದ್ದು ?

ರಂಗೂ— ಯಾರಿಲ್ಲೇಳು ಕಕ್ಕಾ, ಅದ್ಯಾರೋ ನಮ್ಮ ಮನ್ಯಾಗ ದೂರದ ಆಪ್ತರಂತ ! ನಮಗ ಗೊತ್ತಿಲ್ಲ ಸುದ್ದಾ ಯಾರು ಸತ್ತಾರಂಬೂದು !

ಕಾಕಾ— ಏನೋ ಜನಾರ್ದನರಾಯಾ, ಯಾರೋ ಸತ್ತವರು ? ಎಂದ ಬಂತು ಸುದ್ದಿ ?

ರಂಗೂ— (ಜನಾರ್ದನರಾಯ ಹೆಂಡತಿಯನ್ನು ನೋಡ ತೊಡಗುವನು)- ಯಾರೋ ಅವರ ಆಬಚೀ ತಮ್ಮನ ಮಗಳ ಗಂಡನ ತಮ್ಮನಂತ.

ಜನಾರ್ದನ— ನನಗೆಲ್ಲೀ ಅಬಚಿದ್ದಾಳs ? (ರಂಗೂಬಾಯಿ ಸಿಟ್ಟಿನಿಂದ ಸುಮ್ಮನಿರಲಿಕ್ಕೆ ಸನ್ನೆಮಾಡುವಳು)

ಕಾಕಾ— ಅವನ ಹೆಸರೇನೋ, ಹೆಸರು..ಊಂ....

ಜನಾರ್ದನ— (ವಿಚಾರಿಸುತ್ತ ಹೆಂಡತಿಯನ್ನು ನೋಡುವನು)

ರಂಗೂ— (ಗಂಡನಿಗೆ ಕಿವಿಯಲ್ಲಿ ಕೇಳುವಂತೆ) ಶಂಕರ ಅಂತ ಹೇಳ್ರಿಷ್ಟು !

ಜಾನಕಿ— (ಜನಾರ್ದನರಾಯನಿಗೆ ಹೇಳುತ್ತ) ಗೋವಿಂದ ಅಂತ ಹೇಳ್ರಿ !

ಜನಾರ್ದನ— ಶಂಕ... ಗೋವಿನ್... ಶಂಕ... ಗೋಪಾಲಂತ !

ಕಾಕಾ— ಗೋಪಾಲ ? ಎಲ್ಲಿ ತೀರಿಕೊಂಡನಂತ ? ಏನಾಗಿತ್ತು ಅವಗ ?

ಜನಾರ್ದನ— (ತಲೆ ತುರಿಸುತ್ತ) ಮುಂಬೈಯಾಗ ಕಲೀತಿದ್ದನಂತ..ಅದೇನೋ ಟ್ರಾಮಿನಿಂದ ಬಿದ್ದು ಸತ್ತನಂತ !

ಕಾಕಾ— ಸೈ, ಸೈ, ಈಗಿನ ಹುಡುಗರ ಸಾವು ಹೇಳ್ಳಿಕ್ಕೇ ಬರೋಹಾಂಗಿಲ್ಲ, ಯಾರು ಟ್ರಾಮಿನ್ನಿಂದ, ಯಾರು ಮೋಟಾರಿನಿಂದ, ಯಾರು ಸಾಯ್ಕಲ್ಲಿನ್ನಿಂದ, ಯಾರು ರೈಲ್ವೇದಿಂದ, ಅದೆಷ್ಟು ರೀತಿಂದ ಸಾಯೋದು ? ರಾಮ ರಾಮಾ! ನಮ್ಮ ಕಾಲಕ್ಕ ಇವೆಲ್ಲಾ ಇದ್ದಿದ್ದಿಲ್ಲ ದೇವರ ದಯದಿಂದ..! ಸತ್ತವರು ಸಾಯಲಿ. ಇನ್ನು ಇದ್ದವರಂದು ನೋಡೋಣ. ಮಧ್ಯಾಹ್ನದ ಊಟಾ ಬಿಟ್ಟಿದ್ದೆ.. ತಲಿಶೂಲೆಲ್ಲಾ ಕಡಿಮಿ ಆತು. ಈಗ ಹಸಿವಿ ಬಹಳ ಆಗೇದ.. ರಂಗೂ, ಅಷ್ಟು ಚಹಾ- ತಿಂಡಿ ಕೊಡ್ತೀಯಾ? ಹೋಗು ಲಕ್ಷ್ಮೀ, ಒಂದಿಷ್ಟು ಅವಲಕ್ಕಿ ಇದ್ದರ ತಗೊಂಡು ಬಾ..!

ರಂಗೂ— (ಚಹಾ ಕೊಡುತ್ತ) ಇನ್ನಿಷ್ಟು ಹಾಲು ಹಾಕಲೇನು ನೋಡು ಕಕ್ಕಾ...; ಈಗ ಹ್ಯಾಂಗದ ಕೆಮ್ಮು? ನೆಟ್ಟಗ ನಿದ್ದಿ ಹತ್ತಿತ್ತೇನು ಮಧ್ಯಾಹ್ನದಾಗ?

ಕಾಕಾ— ಹಾಸಿಗೀ ಮ್ಯಾಲೇನೋ ಮಲಗಿದ್ದೆ; ಮುದುಕರಾದ ಮ್ಯಾಲೆಲ್ಲೀ ನಿದ್ದಿ ಹೇಳು! ಏನೋ ಸ್ವಲ್ಪ ಹಾಂಗs ಕಣ್ಮುಚ್ಚಿ ಮಲಗಿದ್ದೆ.. ನಿದ್ದೇನೂ ಪೂರ್ಣವಾಗಿ ಹತ್ತಿದ್ದಿಲ್ಲ.

ರಂಗೂ—
ಜನಾರ್ದನ— } (ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋಡುತ್ತಾರೆ. ಜನಾರ್ದನರಾಯ ಸೂಟಕೇಸಿನ ಕಡೆಗೆ ನೋಡುತ್ತಾನೆ. ರಂಗೂಬಾಯಿ ತಿಳಿದುಕೊಳ್ಳುತ್ತಾಳೆ. ತಪ್ಪು ಮಾಡಿದವರಂತೆ ಒಬ್ಬರನ್ನೊಬ್ಬರು ನೋಡುತ್ತಾರೆ.)

ಕಾಕಾ— ಆದರ ಒಂದು ತಾಸಿನ ತನಕ ಮಾತ್ರ ಕೈಯು, ಕಾಲು, ಏನೂ ಅತ್ತ ಇತ್ತ ಮಾಡಲಿಕ್ಕೆ ಬರುವಂತಿದ್ದಿಲ್ಲ. ವೈದ್ಯರು ಹೇಳಿದ್ರು- ಇವತ್ತಿನ ಔಷಧೀ ಪರಿಣಾಮ ಅಷ್ಟು ಜೋರಾಗಿ ರ್ತದ ಅಂತ !

ಜನಾರ್ದನ— (ಕುತೂಹಲದಿಂದ) ಅಂದರ ಮಲಕೊಂಡಾಗ ಎಚ್ಚರಿತ್ತು ಅನ್ನು.. ನಿದ್ದಿ ಹತ್ತಿದ್ದಿಲ್ಲs ? -

ಕಾಕಾ— ಮಲಗಿದ ಮ್ಯಾಲ ಸ್ವಲ್ಪ ಹೊತ್ತು ಹಾಂಗs ಜಂಪ ಹತ್ತಿತ್ತು- ಆದರೂ ಪಕ್ಕನೆ ಎಚ್ಚರ ಆತು. (ಲಕ್ಷ್ಮಿಯನ್ನು ಕುರಿತು) ಇಷ್ಟs ಸೈಯೇನs ಅವಲಕ್ಕಿ ? ಹೂಂ ! ಇನ್ನಿಷ್ಟು ತಾ, ಹೋಗು !

ರಂಗೂ— ನಿನಗೆಲ್ಲೋ ಭ್ರಾಂತಿ- ಕಕ್ಕಾ, ನಿನಗ ನಿದ್ದಿ ಹತ್ತಿರಲಿಕ್ಕೇ ಬೇಕು. ನಾನು ಎರಡು ಸಾರೆ ನಿನ್ನ ಕರೀಲಿಕ್ಕೆ ಬಂದಿದ್ದೆ- ನೀನು ಹಾಂಗs ಮಲಗಿದ್ದಿ ! ಕೈ, ಕಾಲು ಏನೂ ಸರಿಯುತ್ತಿದ್ದಿಲ್ಲ.

ಕಾಕಾ— (ಸ್ವಲ್ಪ ಸಿಟ್ಟಿನಿಂದ) ನಾ ಮಲಗಿದ್ದು ನನಗೆ ಗೊತ್ತಿಲ್ಲ ಅಂತೀ ಏನು ? ಮುದುಕಾಗಿದ್ದರೂ, ಇನ್ನೂ ಅಷ್ಟು ಮಲಗಿ ನಿದ್ದಿ ಹತ್ತಿದ್ದೂ ಬಿಟ್ಟದ್ದೂ ತಿಳೀತsದ ನನಗ..!

ಜಾನಕಿ— ರಂಗಕ್ಕ ಅಲ್ಲದೆ ಮತ್ಯಾರಾದರೂ ನಿನ್ನ ಖೋಲ್ಯಾಗ ಬಂದದ್ದು ನಿನಗ ನೆನಪು ಆದs ಏನು ಹಾಂಗಾರ-

ಕಾಕಾ— (ವಿಚಾರ ಮಾಡುತ್ತ) ಹೇಳ್ತೀನಿ ನಿಂದ್ರು. ಇನ್ನೊಂದು ಕಪ್ಪು ಚಹಾ ತಾರs, ರಂಗೂ !

ರಂಗೂ— (ಚಹಾ ಕೊಡುತ್ತ) ಜಾನಕೀ- ಅದೆಲ್ಲಾ ಕೇ' ಸುಮ್ಮನೆ ಯಾಕ ತ್ರಾಸ ಕೊಡತೀ. ಅವಗ? ಸುಮ್ಮನಿರು, ಸಾಕು' ಮಲಗ್ಯಾದರೂ ಇರಲಿ, ಬಿಟ್ಟಾದರೂ ಇರಲಿ...ಏನದ ಅದರಾಗೆಲ್ಲಾ ಈಗ ಎಚ್ಚರದಿಂದ್ದಾನ ತೀರಿತು !

ಜನಾರ್ದನ— ನಾನೂ, ಅಷ್ಟs ಅನ್ನೋದು..ಮರತು ಬಿಡಲಿ ಎಲ್ಲಾ...!

ನಿಮ್ಮ ಸಾಮಾನುಗಳ ಸುದ್ದಿ

ಜಗತ್ತಿಗೆಲ್ಲ

ಗೊತ್ತಾಗಬೇಕಾದರೆ

ಜಯಂತಿಯಿಂದಲೆ ಸಾಧ್ಯ

ಕಾಕಾ— (ಕಪ್ಪು ಮೇಜಿನ ಮೇಲಿಟ್ಟು- ಒಮ್ಮೆಲೇ ಏನೋ ನಪಾದವನಂತೆ) ಅಲ್ಲs ರಂಗೂ, ಮತ್ತ ಆ ಸೂಟಕೇಸು ಯಾಕ ತ್ತಿಕೊಂಡು ಬಂದ್ರೇ-ನೀವು? ಖೋಲೀ ಸ್ವಚ್ಛ ಮಾಡಬೇಕಂತ ನಾಡಿದ್ದೇನು? (ರಂಗೂಬಾಯಿ, ಜನಾರ್ದನರಾಯ- ಏನೂ ತ್ತರವಿಲ್ಲದೆ ಹೌಹಾರಿ ನಿಲ್ಲುವರು)-ಏನು ರಂಗೂ, ಕೇಳಿಸಿ ನು? ಸೂಟ್‌ಕೇಸ್ ಯಾಕ ತಗೊಂಡು ಬಂದ್ರಿ? ಎಲ್ಲಿಗೆ ಯ್ತಿದ್ದಿರಿ?

ಜಾನಕಿ— ಯಾವದು-?(ಸೂಟಕೇಸು ತೋರಿಸುತ್ತ) ಇದs ು ನಿನ್ನ ಸೂಟಕೇಸು- ಕಕ್ಕಾ?

ಕಾಕಾ— ಹಾ, ಹಾ, ಅದs-! (ದಿಟ್ಟಿಸಿ ನೋಡುತ್ತ) ಇಲ್ಲ್ಯಾಕ ದಿಟ್ಟಾರ; ಏನ ತಾನು? (ಮೇಜಿನ ಮೇಲಿನ ಗಡಿಯಾರ ಟ್ಟಿಸಿ ನೋಡಿ-) ಇದೇನs ರಂಗೂ.. ನನ್ನ ಗಡಿಯಾರಾ ನೂ ಲ್ಲೇ ಬಂದ್ಯದಲ್ಲ! ಏನು ಈ ಮನ್ಯಾಗ ಭೂತಗೀತ ಹೊಕ್ಕಾವ್ರೋ, ು ನನ್ನ ಕಣ್ಣs ಮಂಜಾಗ್ಯಾವ್ರೋ? ಏನಿದೆಲ್ಲ- ರಂಗೂ- -?

ಜನಾರ್ದನ— (ಆಶ್ಚರ್ಯದಿಂದ) ಏನೋ ನನಗ ಯಾವದೂ ಯದು; (ಹೆಂಡತಿಯನ್ನು ನೋಡಿ) ನಾನು ಎಂದೂ ಸ್ವಂತ ದ್ಧಿಯಿಂದ ಕೆಲಸ ಮಾಡಿದವನೇ ಅಲ್ಲ..

ಜಾನಕಿ — ಭೂತ ಅಲ್ಲ, ಪ್ರೇತ ಅಲ್ಲ, ಕಕ್ಕಾ; ಈ ಮನ್ಯಾಗ ೋಡೆ ನಡೆದsದ, ದರೋಡೆ! (ರಂಗೂಬಾಯಿಯನ್ನು ದಿಟ್ಟಿಸಿ ೋಡುವಳು.)

ರಂಗೂ— (ಸಿಟ್ಟಿನಿಂದ) ಸುಮ್ಮನಿರು ಜಾನಕೀ; ಬಾಯಿ ಚ್ಚು.. ಎಷ್ಟು ಮಾತಾಡು?

ಜಾನಕಿ— ಅದ್ಯಾಕ ಸುಮ್ಮನಿರೋದೇ-? ಪುಣೇದಿಂದ ತರಿಸಿ ತ-! ಯಾರ ಮಗಾ ಅವ ನಿಮಗ ತಂದಕೊಟ್ಟಾವ- ಆ ಸೂಟ ಸು-? ಬೇಶ್ ನಡ್ಸೀರಿ ಕೆಲಸಾ.. ಅಂ?

ಜನಾರ್ದನ— ಜಾನಕೀಬಾಯಿಾ, ಸ್ವಲ್ಪ ಸಮಾಧಾನ ಮಾಡು. ನ್ಲಾ ಹೇಳ್ತೇನಿ!..

ಜಾನಕಿ— ನೀವೂ ಅಕ್ಕನ್ಹಾಂಗs ಮಾಡ್ಲಿಕ್ಕೆ ಹತ್ತೀರಾ. ು- ನಿಮ್ಮನ್ನ ಸಂಭಾವಿತ್ರು.. ಅಂತ ತಿಳಿದಿದ್ದೆ.

ಜನಾರ್ದನ — ಅಲ್ಲೇ ಕೇಳು, ಜಾನಕೀಬಾಯಿಾ,! ನಾನೆಂದೂ ಂತ ಬುದ್ದಿಯಿಂದ ಯಾವ ಕೆಲಸಾನೂ ಮಾಡಿಲ್ಲ. ಎಲ್ಲಾ- ಹೇಳಿದ್ಹಾಂಗs..; ಕೇಳು ಬೇಕಾದರೆ!

ರಂಗೂ— ಜಾನಕೀ, ಅಷ್ಟು ನಾಲಿಗೀ ಉದ್ದಕ ಬಿಡಬ್ಯಾಡ ೀತs? ಎಲ್ಲಿದ್ದೀ — ಯಾರ ಸಂಗ್ತೀ ಮಾತಾಡ್ತೀ— ಅಷ್ಟು ಚ್ಚರಲಿ!

ನಾರಾಯಣ— (ಸಮಾಧಾನಮಾಡುತ್ತ) ಸಾವಧಾನ, ಮಧಾನ, ಜಗಳ ಬ್ಯಾಡ! ಆಗಿಹೋದ ಮಾತಿಗೆಲ್ಲ ಯಾಕ ಮ್ಮನs ಜಗಳ? ಏನು ಲಾಭ ಅದರೊಳಗ?

ಜಾನಕಿ— ಈಗ ತಿಳೀತೆಲ್ಲಾ- ನನಗ ನಿನ್ನ ಮಸಲತ್ತು! - ..ವ್ಯಾ, ಎಷ್ಟಾರs ಸುಳ್ಳು ಹೇಳೋದದು?

ಟೆಲಿಫೋನಿನಿಂದ ಬೇಕಾದಷ್ಟು ದೂರ ಮುಟ್ಟಿಸಬಹುದು.
ರೇಡಿಯೊದಿಂದ ಬೇಕಾದಷ್ಟು ಜನರಿಗೆ ಮುಟ್ಟಿಸಬಹುದು.
ಒಂದಕ್ಕೆ ವೆಚ್ಚ! ಇನ್ನೊಂದಕ್ಕೆ ನಿಯತವೇಳೆ!!
ಆ ದ ರೆ ?
ಬೇಕಾದಾಗ ಬೇಕಾದಷ್ಟು ಜನರಿಗೆ ತಿಳುಹಿಸುವ ಸಾಧನವೆಂದರೆ
ಜಯಂತಿಯೊಂದೇ!

ರಂಗೂ— (ಸಿಟ್ಟಿನಿಂದ ತಂಗಿಯ ಹತ್ತರ ಬಂದು) ಜಾನಕೀ, ಎರಡನೇ ಮಾತಾಡಿದೀ ಅಂದ್ರ ಈಗ ಮನೀಬಿಟ್ಟು ಹೊರಗ ನಿಂದ್ರು; ನಾ ಸುಳ್ಳು ಹೇಳ್ತೇನೇ-? ಏನಂತೀ, ಅಂ-!

ಕಾಕಾ— ಏ, ಏ, ರಂಗೂ, ಜಾನಕೀ- ಸಾಲ್ದೇನ್ರೆ ಈ ಎರಡುವರ್ಷ ಇಬ್ಬರೂ ಮಾತುಕತಿ ಬಿಟ್ಟದ್ದು-! ಏನೋ ಮತ್ತ ಕೂಡಿರ್ರೀರಿ ಅಂತ ಮಾಡಿದ್ದೆ— ಮತ್ತ ಸುರುವs ಮಾಡೀರಲ್ಲ ನಿಮ್ಮ ಜಗಳಾ!

ಜಾನಕಿ— ನಿನಗೇನು ಗೊತ್ತು ಕಕ್ಕಾ, ಈ ಮನ್ಯಾಗ ನಿನ್ನ ದರೋಡೇ ನಡದsದ- ದರೋಡೇ!

ಕಾಕಾ— (ಕಿವಿಗೊಟ್ಟು ಕೇಳುತ್ತ) ಏನಂದೀ, ನನ್ನ ದರೋಡೇ-! ಯಾರವರು ನನ್ನ ದರೋಡೇ ಮಾಡೋರು?

ಜಾನಕಿ— ಅಲ್ಲಿ ನಿಂತಾರ ನೋಡು-, ರಂಗಕ್ಕಾ ಮತ್ತಾಕೀ ಪತಿರಾಯ! ನಿನ್ನ ಗಡಿಯಾರ.. ಸೂಟಕೇಸು ಎತ್ತಿಹಾಕಿಬಿಟ್ಟು- (ಆವೇಶದಿಂದ) ಕಳ್ಳರು ಬಂದಹಾಂಗೆ ನಿನ್ನ ಖೋಲ್ಯಾಗ ಬಂದು... ನೀ ಸತ್ತಮ್ಯಾಲ ಅವನ್ನ ಎತ್ತಿಕೊಂಡು ಬಂದಿಲ್ಲಿಟ್ಟಾರ-; ತಮ್ಮವು ಅಂತ ಹೇಳ್ತಾರ, ನಾಲದ್ವಕ್ಕ-!

ಜನಾರ್ದನ
ರಂಗೂ } — ಜಾನಕೀ- ಜಾನಕೀ- ಸ್ವಲ್ಪ ಸಮಾಧಾನ ಮಾಡು....!

ಜಾನಕೀ— ಇನ್ನೆಲ್ಲೀ ಸಮಾಧಾನ-? ನಾ-ಏನು ಹೇಳೋದು ಕಕ್ಕಾ.. ನೀ ಸತ್ತಮ್ಯಾಲ ತಗೊಂಡ ಬಂದಾರ ಅವನ್ನ; ತಿಳೀತs..?

ಕಾಕಾ— ಯಾರು ಸತ್ತಮ್ಯಾಲ?

ಜಾನಕಿ— ನೀ ಸತ್ತು ಮಲಕೊಂಡಾಗ..!

ಕಾಕಾ— ನಾ ಜೀವಂತs ಇದ್ದೇನಲ್ಲ ಮತ್ತ!

ಜಾನಕೀ— ನೀ ಮಲಕೊಂಡಾಗ, ಸತ್ತಿ ಅಂತ ತಿಳಕೊಂಡು- ನಮಗೆಲ್ಲ ಹೇಳಿ ಕಳಿಸಿದ್ರು-; ತಿಳೀತs..!

ಕಾಕಾ— (ಸ್ವಲ್ಪ ಹೊತ್ತು ವಿಚಾರಿಸಿ) ಅಂ- ಈಗ ತಿಳೀತೆಲ್ಲಾ! ಅದಕ್ಕ ಮೈಲಿಗೇ ಹಾಂಗಾರ! ಅಂತs ಕುಂಕುಮಾ ಹಚ್ಚಿಲ್ಲ..! ನಾ ಸತ್ತಿದ್ದೆನೋ..! ಒಳ್ಳೇಮಾತು.. ಹಾ ಹಾ (ನಗುತ್ತಾನೆ.)
(ಮತ್ತೆ ದ್ರಾಕ್ಷೆಗಳನ್ನು ತಿನ್ನುತ್ತ ಕೂಡುತ್ತಾನೆ.)

ರಂಗೂ— (ಅಳುವ ದನಿಯಲ್ಲಿ-ಪಶ್ಚಾತ್ತಾಪದಿಂದ) ಕಕ್ಕಾ- ನಾ ಹೇಳೋದಂದ್ರ....

ಕಾಕಾ— ತಿಳೀತು ತಿಳೀತು ರಂಗೂ- ಅಂತೂ- ನನ್ನ ಸಾಮಾನೆಲ್ಲಾ ಈಗ ಹಂಚಿಕೊಳ್ಳಿಕ್ಕೆ ಹತ್ತಿದ್ರಿ ಅನ್ನು !

ಜಾನಕಿ— ಎಲ್ಲೀ ಹಂಚೋದು..! ಆಕೀನs ಎಲ್ಲಾ ಎತ್ತಿ ಹಾಕಿಬಿಟ್ಟಾಳ- !

ಕಾಕಾ— ರಂಗೂ, ನೀ ಎಂದಿಗಾದ್ರೂ ಸ್ವಲ್ಪ ಧೂರ್ತ ಮನಸ್ಯಾಳು. ನನ್ನಿಂದ ಏನೂ ಹಣ ಸಿಕ್ಕಿಲ್ಲ ಅಂತ ನೀ ಅಸರಂತs ಅಂವೇ ಅಂತೀದಿ ! ನನ್ನ ಮರಣಪತ್ರದಾಗ ನಿನಗ ಸ್ವಲ್ಪ ಹಣ ಬಿಟ್ಟಿದ್ದೆ-ಅಂತ ಏನು ?

ಜನಾರ್ದನ— ಮರಣ ಪತ್ರಾನೂ ಬರೆದಿದ್ದೇನು ಹಾಂಗಾರ? ಎಲ್ಲ್ಯದs ಅದು?

ಕಾಕಾ— ಆ ಸೂಟ ಕೇಸಿನಾಗಿಟ್ಟೇನಿ !

ರಂಗೂ— ಏನದ ಆ ಪತ್ರದಾಗ ? ಎಷ್ಟು ರೂಪಾಯಿ ....?

ಕಾಕಾ— ಈಗೇನ ಮಾಡ್ತೀ ಅದೆಲ್ಲ ತಗೊಂಡು ? ಆದನ್ನ ರದ್ದ ಮಾಡೇನಿ ; ಇನ್ನೊಂದು ಬ್ಯಾರೆ ಪತ್ರ ಮಾಡತೇನ ಇನ್ನ !

ರಂಗೂ— (ಅಳುತ್ತ) ಕಕ್ಕಾ, ನನ್ನ ಮ್ಯಾಲ ಸಿಟ್ಟಾಗ್ತೀ ಏನು ? ನನಗೇನೂ ಕೊಡೊದೇ ಇಲ್ಲs? ಲಕ್ಷ್ಮೀ ಲಗ್ನ ಬಂದsದ.!

ಕಾಕಾ— ಇನ್ನಿಷ್ಟು ಅವಲಕ್ಕೀ ತಾ ರಂಗೂ ಮೊದಲ..! ಆ ಮ್ಯಾಲ ಪತ್ರದ ವಿಚಾರ.

ರಂಗೂ— (ತ್ವರೆಯಿಂದ) - ಈಗ ತಂದೆ-ಏ ಲಕ್ಷ್ಮೀ- ಹೋಗs- ಇನ್ನಿಷ್ಟು ಅವಲಕ್ಕೀ ತಗೊಂಬಾ; ಮತ್ತ ಹಾಂಗs- ಕಪಾಟಿನಾಗ ಮೊನ್ನೆ ತರಿಸಿದ ಲೈಸಬಾಜಾರ ಫೇಡೇ ಅವ ನೋಡು.. ಅವನ್ನೂ ತಾ !

ಕಾಕಾ — ರಂಗೂ, ನನಗ ಯಾರ ಮ್ಯಾಲೂ ಸಿಟ್ಟಿಲ್ಲ. ನನ್ನ ಹೆಂಡ್ತಿ ತೀರಿಕೊಂಡತೊಟ್ಲೆ ಸ್ವಲ್ಪ ದಿನ ನಿನ್ನ ಮನ್ಯಾಗ, ಸ್ವಲ್ಪ ದಿನ ಜಾನಕೀ ಮನ್ಯಾಗ ಇದ್ದಕೋತ ಬಂದೇನಿ ; ನಾ ಸಾಯೋ ಮುಂದ ಯಾರ ಮನ್ಯಾಗ ಇರತೇನೋ ಅವರಿಗೇ ಎಲ್ಲಾ ನನ್ನ ಆಸ್ತೀ ಬಿಟ್ಟು ಕೊಡ್ತೇನಿ; ತಿಳೀತs ?

ನಾರಾಯಣ— ಅಂದ್ರೇನು ಇದು ? ಲಾಟರೀ ಹಾಕಿಧಾಂಗ ಹೇಳ್ತೀರಲ್ಲ - ಕಾಕಾ ?-

ಜಾನಕಿ— ಇನ್ನು ಮೇಲೆ ಯಾರ ಮನೆಯಲ್ಲಿರಬೇಕಂತ ಮಾತೀ, ಕಕ್ಕಾ ?

ಕಾಕಾ— ಅದನ್ನs ವಿಚಾರಮಾಡ್ತೇನಿ..

ಜಾನಕಿ — ಕಕ್ಕಾ-ಇಲ್ಲಿ ನೋಡು; ನಮ್ಮ ಮನೀ ಬಿಟ್ಟು ಈಗಾಗಲೇ ಎರಡು ವರ್ಷ ಆತು. ಇನ್ನು ಮೇಲೆ ಅಲ್ಲಿಗೇ ನಡಿ- ತಿಳೀತ ?-

ರಂಗೂ— ಅದ್ಯಾಕ-ನಿಮ್ಮನ್ಯಾಗ ೫ ವರ್ಷ ದಿನ ಇದ್ದ. ಇಲ್ಲಿಗೆ ಬಂದು ದೇವರs ಅತ ಇನ್ನೂ ಎರಡು ವರ್ಷ! ಅನಕಾ ಇನ್ನೂ ಕನಿಷ್ಟ ಮೂರು ವರ್ಷ ಅಂತೂ ಇಲ್ಲೇ ಇರಬೇಕು- ಆತ !-

ಜಾನಕಿ— ಇಲ್ಲಿರೋ ಮನಸ್ಸಿಲ್ಲ ಆತಗ-; ಇವತ್ತಿನ ಸಂಗತೀ ಕೇಳಿದ ಮ್ಯಾಲ ಇನ್ನಿಲ್ಲಿರೋದು ಕ್ಷೇಮ ಅಲ್ಲ ಅಂತೇನಿ ! ಏನು ಕಕ್ಕಾ- ಈ ಮನ್ಯಾಗ ಹಗಲುಹಾಡೇ ದರೋಡೇ.. !

ಕಾಕಾ— ಅಂತೂ, ನಿಮ್ಮ ಮನೀಗೆ ಬರಬೇಕು...... ಹೀಂಗಂತೀಯಾ ಜಾನಕೀ ?

ಜಾನಕಿ— ನಿನಗ ಎಷ್ಟು ದಿನ ಬೇಕೋ ಅಷ್ಟು ದಿನ ಇರು.. ತಿಳೀತs ? ನಮಗೇನು ನೀ ಭಾರ ಅಲ್ಲ. ಎಂಥೆಂಥವರೋ ಇದ್ದು ಹೋಗ್ಯಾರ-ನೀನಂತೂ ಖಾಸ ಕಕ್ಕ !

ಕಾಕಾ— ಇದಕ್ಕ ನೀ ಏನಂತೀ ರಂಗೂ?

ರಂಗೂ - ನಾ ಅನ್ನೋದು ಇಷ್ಟs: ಜಾನಕಿ ತನ್ನ ಮಾತಿನಾಗ ಮಾತಿಲ್ಲದಾಕೆ..;ಕಕ್ಕಾ, ನನಗs ಆಕಿಗೆ ಜಗಳ ಯಾತರಿಂದ ಬಂತು ಗೊತ್ತದs ನಿನಗ ?

ಜಾನಕಿ— ಅಕ್ಕಾ- ಇನ್ನು ಸಾಕುಮಾಡು ನಮ್ಮ ಜಗಳದ ಸುದ್ದೀ; ಸುಮ್ಮನಿರಿನ್ನ !

ರಂಗೂ— ಹೂಂ, ಅದ್ಯಾಕ ಸುಮ್ಮನಿರೋದು ! ಕಕ್ಕ ನಮ್ಮ ಮನ್ಯಾಗ ಇರದೇ ಇದ್ದರೂ ನಿಮ್ಮ ಮನೀಗೇನು ಕಳಿಸೋದಿಲ್ಲ ಆತನ್ನ..ತಿಳೀತೇನು ? ಇಲ್ಲಿ ಕೇಳು, ಕಕ್ಕಾ, ನಮ್ಮ ಜಗಳ ಅಂದರ ಆಕಿಂದs ಸುರುವಾದದ್ದು.. ನಿನ್ನ ಮೊದಲು ನಮ್ಮ ಮನೀಗೆ ಕಳಿಸಬೇಕೂ..ಅಂತ ದಿನಾ- ನೀ ಅಕಿ ಮನ್ಯಾಗಿದ್ದಾಗ ನನಗ ಹೇಳಿ ಕಳಿಸತಿದ್ದಳು-'ಹೀಂಗs ಎಷ್ಟು ದಿನ ನಮ್ಮಮನ್ಯಾಗಿರೋದು..ಅದ್ಯಾಕ ಅಕ್ಕನ ಮನಿಗೆ ಹೋಗಬಾರದು ಕಕ್ಕಾ!' ಅಂತ ಹಗಲೆಲ್ಲಾ ಗುಣುಗುಣುತಿದ್ದಳು. ಅಂತಲೇ ನಮ್ಮ ಜಗಳ.

ಕಾಕಾ— ಅಂತೂ ಇಂತೂ ನಿಮ್ಮಿಬ್ಬರಿಗೂ ನಾನು ಬ್ಯಾಡಾಗಿದ್ದೇನಿ ಅಂತ ಕಾಣಸ್ತದ !

ರಂಗೂ— ನಂದೇನಾರೂ ತಪ್ಪಾಗಿದ್ರ ನೀ ಸಿಟ್ಟ ಹಿಡೀಬಾರದು ಕಕ್ಕಾ ! ಎಷ್ಟಂದರೂ ನೀ ನಮ್ಮ ಕಕ್ಕ.. !

ಜಾನಕಿ— ನಾನೂ ಅದs ಅನ್ನೋದು-; ಅಪ್ಪ ತೀರಿಕೊಂಡ ಮ್ಯಾಲ ನೀನs ನಮಗ ಅಪ್ಪ ಇದ್ದಾಂಗ !

ಕಾಕಾ— ಇದ್ದ ಮಾತು ಇದ್ದಾಂಗs ಆಡಬೇಕು ಅಂದರ- ನಾ ನಿಮ್ಮಿಬ್ಬರಲ್ಲಿಯೂ ಇರುತ್ತಿದ್ದಾಗ ನನಗೆ ಯಾವಾಗಲೂ ಸಂಕೋಚ ಅನಸತಿತ್ತು. ಇವತ್ತಿನ ತನಕ ನೀವಿಬ್ಬರೂ ನನ್ನನ್ನು ಒಬ್ಬರ ಮನಿಂದ ಇನ್ನೊಬ್ಬರ ಮನಿಗೆ ಕಳಿಸೋ ಯತ್ನಮಾಡ್ತಿದ್ದದ್ದು ನನಗ ಕಂಡುಬಂದsದ !

ರಂಗೂ— / **ಜಾನಕೀ**— } ಇಲ್ಲ- ಕಕ್ಕಾ- ಎಂದಿಗೂ....

ಕಾಕಾ— ನನಗೆಲ್ಲ ತಿಳೀತದ-ರಂಗೂ ! ನಾ ಬಲ್ಲೆ, ಜಾನಕೀ' ಈಗ ಹಣ ಬರತದಂತ ತಿಳಿದು ನಾ ಯಾರ ಮನ್ಯಾಗ ಸಾಯಬೇಕ. ಅಂತ ನೀವು ಒಬ್ಬರಮೇಲೊಬ್ಬರು ಕರೀತೀರಿ; ಆದರ ನನಗ ಇನ್ನೂ ಇರಬೇಕಾಗೇದ ನಾಲ್ಕೊಪ್ಪತ್ತು..! ಇಷ್ಟು ಲಗೂನs ಸತ್ತು ಏನು ಮಾಡೋದು- ? (ನಗುತ್ತಾನೆ.) ನಿಮ್ಮಿಬ್ಬರಿಗೂ

ಬೇಕಾದವನಾಗಿ ನಾನು ಬದುಕಿರಬೇಕಿದ್ದರೆ, ಇನ್ನುಮೇಲೆ ಬೇರೆ ಯಾರಾದರೂ ಮೂರನೆಯವರ ಕೂಡ ಇರಬೇಕಾಗಿದೆ.

ಜನಾರ್ದನ— ಅದು ಹೇಗೆ - ಭಗವಂತರಾವ ? ಇಬ್ಬರಲ್ಲಿ ಯಾವ ಮಗಳ ಹತ್ತರಾದರೂ ನೀವು ಇರಲಿಕ್ಕೇ ಬೇಕು. ಮುಪ್ಪಿನಲ್ಲಿ ಬೇರೆ ಜನರ ಮನೆಯಲ್ಲಿದ್ದರೆ ಎಷ್ಟು ಲಾಂಛನ ? ಜನರು ಏನೆಂದಾರು ?

ಕಾಕಾ— ಅದಾಗದ ಮಾತು ಜನಾರ್ದನರಾಯಾ! ಒಬ್ಬರಲ್ಲಿದ್ದರೆ ಒಬ್ಬರಿಗೆ ಸಿಟ್ಟು ; ಇಬ್ಬರಲ್ಲಿಯೂ ನಾನಿನ್ನು ಇರುವುದಿಲ್ಲ. ಇನ್ನು ಮೇಲೆ ನಾನು ಮಾಡತಕ್ಕ ಕಾರ್ಯಗಳೆಂದರೆ ಮೂರು. ಮೊದಲನೆಯದೆಂದರೆ, ವಕೀಲ ಹನುಮಂತರಾಯನಲ್ಲಿ ಹೋಗಿ ನನ್ನ ಮರಣಪತ್ರ ಬರೆಯಿಸುವದು. ಎರಡನೆಯದೆಂದರೆ, ಇನ್ಸೂರನ್ಸ್ ಕಂಪನಿಯ ಕಚೇರಿಗೆ ಹೋಗಿ, ಈ ತಿಂಗಳ ಪ್ರೀಮಿಯಂ ತುಂಬುವದು. (ದನಿ ಸರಿಪಡಿಸಿಕೊಳ್ಳುತ್ತ) – ಮೂರನೆಯ ದಾತೆಂದರೆ– ಮುಖ್ಯವಾದದ್ದು– ಜೋಯಿಸರ ಮಾದೇವಪ್ಪನ ಮನಿಗೆ ಹೋಗಿ, ಲಗ್ನದ ಮುಹೂರ್ತ ತಗಿಸುವದು. ಇಷ್ಟೇ ಕೆಲಸ!

ಎಲ್ಲರೂ— (ಒಮ್ಮೆಲೇ) - ಏನು ?– ಲಗ್ನ ?– ಯಾರದು ?–

ಕಾಕಾ— ನನ್ನದು, ನನ್ನದು ! ಕನ್ಯಾ ಯಾವುದಂತೀರೇನು ? ಆ ನಾಯ್ಕರ ಬಿಷ್ಟಪ್ಪನ ಮಗಳು. . ಪಾರ್ವತಿ– !

ಎಲ್ಲರೂ— ನಿಶ್ಚಯವಾಗಿ - ಕಕ್ಕನ ತಲಿಗೆ ಏನೋ ಆಗೇದ-ಲಗ್ಗಾ !

ಕಾಕಾ— ನನ್ನ ತಲೀ ಎಲ್ಲಾ ಬರಾಬರೀ ಅದ (ತಲಿಮುಟ್ಟಿಕೊಳ್ಳುತ್ತ) ಮೊನ್ನೆ ಮೊನ್ನೆ ಹಜಾಮತ ಆಗೇದ. ಜೀವಂತ ಇದ್ದವರನ್ನ— ಮಲಗಿಕೊಂಡವರನ್ನ ಸತ್ತಾರ ಅಂತ ಸುದ್ದೀ ಹುಟ್ಟಿಸಿ, ಆ ಮ್ಯಾಲಿ ಅವರ ಸಾಮಾನು ಎತ್ತಿಹಾಕೋ ಅವರ ತಲೀಗೇ ಏನಾದರೂ ಆಗಿರಲಿಕ್ಕೇಬೇಕು. ತಿಳೀತs ! (ನಗುತ್ತ) ನಿಮಗೆಲ್ಲ ಲಗ್ನಕ್ಕೆ ಆಮಂತ್ರಣ ಈಗs ಕೊಟ್ಟೇನಿ (ಬುಚಿಗೆಯಿಂದ ಏಳುತ್ತ)– ಇನ್ನಮ್ಯಾಲ ನಿಮಗೆ ಯಾರಿಗೂ ನಾ ತ್ರಾಸು ಕೊಡೋದಿಲ್ಲ ತಿಳೀತs ! ಹುಡುಗೀನೂ ಬೆಳದು ನಿಂತsದ - (ಹೋಗುತ್ತ) ರಂಗೂ, ಸೂಟಕೇಸು ಇಲ್ಲಿ ತಂದದ್ದು ಬಹಳ ಹಗುರು ಮಾಡ್ದಿ ; ಒಯ್ಯಲಿಕ್ಕೆ ಅನುಕೂಲ ಆತು. (ನಗುತ್ತ)– ಲಗ್ನಕ್ಕೆ ಮರೀಬ್ಯಾಡ್ರಿ ಮತ್ತ ! (ಹೋಗುತ್ತಾನೆ.)

ಲಕ್ಷ್ಮಿ— ನನಗೊತ್ತಿತ್ತು; ನಾ–ಹೇಳಲಿಲ್ಲs ? ಮಾ - ಅಜ್ಜನ ಲಗ – ಅಜ್ಜನ ಲಗ್ನ– ಹಾಹಾ– !

(ಎಲ್ಲರೂ ಒಬ್ಬರನ್ನೊಬ್ಬರು ನೋಡುತ್ತ ಆಶ್ಚರ್ಯಮಗ್ನರಾಗಿ ನಿಲ್ಲುತ್ತಾರೆ. ತೆರೆಯು ಬೀಳುತ್ತದೆ.)

ಜಾನಪದ ಕಥೆಗಳು

ಕನ್ನಡ ಜನಾಂಗ ಕನ್ನಡಭಾಷೆ ಇವು, ಇತಿಹಾಸಕಾಲದ ಹಿಂದೆ ಮರೆಯಾಗಿದ್ದ ಕಾಲದಲ್ಲಿಯೂ ಬದುಕಿ ಬಾಳಿದುವುಗಳು, ಅಂತಲೆ ಕನ್ನಡ ಜಾನಪದ ಜೀವನವು ಬೇರೆ ಬೇರೆ ಕಾಲದ ಸೊಗಸಾದ ಸಂಸ್ಕೃತಿಗಳನ್ನು ತನ್ನೊಡನೆ ತೇಲಿಸಿಕೊಂಡು ವರ್ತಮಾನ ಕಾಲದ ವರೆಗೂ ತಂದು ಬಿಟ್ಟಿರುವುದು. ಕನ್ನಡ ಪುರಾತನರು ರಾಜ್ಯ, ಸಾಮ್ರಾಜ್ಯಗಳನ್ನು ಕಟ್ಟಿ ದೇಶವಿದೇಶಗಳಲ್ಲಿ ತಮ್ಮ ಶೌರ್ಯ–ಧೈರ್ಯಗಳನ್ನು ಮೆರೆಯಿಸಿ ದಿಗ್ವಿಜಯವನ್ನು ಸಂಪಾದಿಸಿದವರು. ಎಕ್ಕಡದಡಿಯ ಎಂಟೆದೆಯ ಕನ್ನಡ ಬಂಟರು ಬೇಟೆ ಮಾಟದಲ್ಲಿ ಕರಡಿ-ಹುಲಿಗಳೊಂದಿಗೆ ಕುಸ್ತಿಯಾಡಿದವರು. ಕುಬೇರನಿಗೆ ಕೈಗಡ ಕೊಡಬಲ್ಲ ಕನ್ನಡ ಹರದ–ಹೆಗ್ಗಡೆಗಳು ಹಡಗುಗಳನ್ನು ಕಟ್ಟಿ ಪರನಾಡಿನ ವ್ಯವಹಾರದಿಂದ ನಾಡಸಿರಿಯನ್ನು ಹೆಚ್ಚಿಸಿದವರು. ನಮ್ಮ ನಾಡ ಗರತಿಯರು ತಮ್ಮ ವೀರಪತಿಗಳೊಂದಿಗೆ ಸ್ವರ್ಗಕ್ಕೇರಿ ' ಮಾಸತಿ 'ಗಳೆಂದು ಹೊಗಳಿಸಿಕೊಂಡವರು. ಇವರೆಲ್ಲರ ರಮ್ಯಜೀವನವನ್ನೊಳಗೊಂಡ ಜಾನಪದ ಕತೆಗಳು ಕನ್ನಡ ನಾಡಿನ ಒಂದೊಂದು ಹಳ್ಳಿಗೂ ಹತ್ತಾರದಂತೆ ಸಿಕ್ಕುವುವು. ಕನ್ನಡ ಸಂಸ್ಕೃತಿ ಸಂರಕ್ಷಣೆಯ ದೃಷ್ಟಿಯಿಂದಲೂ ಆ ಕತೆಗಳಲ್ಲಿರುವ ಸಾಹಿತ್ಯದ ಸೊಗಸನ್ನು ಬೆಳೆಯುವ ಕನ್ನಡಿಗ–ಕನ್ನಡಿತಿಯರು ಅರಿತುಕೊಳಬೇಕೆಂಬ ಅಪೇಕ್ಷೆಯಿಂದಲೂ— ಅಲ್ಲಿಯಿಲ್ಲಿ ಚೆದರಿ ಬಿದ್ದಿರುವ— ಆ ಕತೆಗಳನ್ನೆಲ್ಲ ಕೂಡಿಸಿ, ಒಂದೊಂದರಂತೆ ಆಗಾಗ ಜಯಂತಿಯಲ್ಲಿ ಸಚಿತ್ರವಾಗಿ ಪ್ರಕಟಿಸಬೇಕೆಂದಿರುವೆವು. ಅದಕ್ಕಾಗಿ ಹಳ್ಳಿಗಳಲ್ಲಿ ವಾಸಿಸುತ್ತಿರುವ ಕಲಿತ ಕನ್ನಡಿಗರು ಅಂತಹ ಕತೆಗಳನ್ನು, ಹಳ್ಳಿಗರು ಹೇಳುವ ದೇಸಿನುಡಿಯಲ್ಲಿಯೆ ಸಂಗ್ರಹಿಸಿ ನಮ್ಮ ಕಡೆಗೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ. ಕನ್ನಡ ಗದ್ಯವನ್ನು ಕನ್ನಡದ ನಡಿಗೆಯಲ್ಲಿಯೆ ನಡೆಯಿಸಬೇಕೆಂದು ಅಪೇಕ್ಷಿಸುವ ಸಾಹಿತಿಗಳು, ಹಳ್ಳಿಯ ಕ ತೆ ಗ ಳ ಭಾಷೆಯನ್ನು ಅವಶ್ಯವಾಗಿ ಪರಿಚಯಮಾಡಿಕೊಳ್ಳಬೇಕು ; ಏವರೆ ಕನ್ನಡನುಡಿಯ ತಿರುಳು ಗೊತ್ತಾಗುವುದು.

ಸಂ. ಜ. ಧಾರವಾಡ

ಅಡುಗೆಯ ಮನೆ ಕೆಡುಹಿದರೆ ನೀವೆ ನಿರಾಧಾರಿಗಳಾಗುವಿರಿ!

ಗಂಡುಸು ತನ್ನನ್ನು ಅನ್ಯಾಯದಿಂದ ಮನೆಯಲ್ಲಿ ಸೆರೆಹಿಡಿದಿಡುತ್ತಲಿದ್ದಾನೆಯೆಂಬ ಭಾವನೆಯಿಂದ ಹೆಂಗುಸು ಸ್ವಲ್ಪ ತೂಕತಪ್ಪಿ ಆಟ-ಮಾಟಗಳನ್ನು ನಡೆಯಿಸಿದ್ದಾಳೆಂದು ಎನಿಸುತ್ತಲಿದೆ. ಅದರ ಪರಿಣಾಮವೆ 'ಅಡುಗೆಮನೆಗಳನ್ನು ಕೆಡುಹಬೇಕು' ಎಂಬ ಕೂಗು. ಆದರೆ ಕೆಡಹಿದ ಅಡುಗೆಮನೆ ತಮ್ಮಮೇಲೆ ಬೀಳುವುದೆಂಬುದನ್ನು ನಮ್ಮ ಅಕ್ಕ-ತಂಗಿಯರು ಮರೆಯಲಾಗದು!

ಶ್ರೀಮಾನ್ ಶಂ. ಬಾ. ಜೋಶಿ

ಅವರಿಂದ

'ಜಯಂತಿ'ಯ ಮೊದಲನೆಯ ಸಂಚಿಕೆಯಲ್ಲಿ ಬಂದ ಮನೆಮನೆಗೆ ಅಡುಗೆಯ ಮನೆಗಳು ಬೇಕೆ? ಎಂಬ ವಿವಾದಾತ್ಮಕವಾದ ಲೇಖನದ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಸಂಪಾದಕರು ಕೇಳಿದರು. ನಾನೆಂದೆ: 'ಗಂಡುಸರ ಅಭಿಪ್ರಾಯವನ್ನು ಕೇಳುವ ಕಾರಣವೆ ಇಲ್ಲ; ಏಕೆಂದರೆ ಯಾವ ಗಂಡುಸು ತಾನೆ ತನ್ನ ಹೆಂಡತಿಯ ಕೈಯ ಸವಿಯೂಟವನ್ನು ಉಣ್ಣಲು ಹಾತೊರೆಯಲಿಕ್ಕಿಲ್ಲ? ಬೇರೆ ಹೆಂಗುಸರ ಅಭಿಪ್ರಾಯಗಳೇನಾದರೂ ತಿಳಿದಿಸೆಯೆ?'

ಅಡುಗೆಯ ಕಾಟ ತಪ್ಪುವ ಸುವರ್ಣ ಯುಗವು ಬಂದರೆ ಎಷ್ಟೋ ಹೆಂಗಸರು ಹಿಗ್ಗದಿರಲಾರರು; ಅದುದರಿಂದ ಅಂತಹ ವಿಚಾರಗಳ ಪ್ರಚಾರಕ್ಕೆ ಆರಂಭವಾದುದನ್ನು ನೋಡಿ — ಜಯಂತಿಯಲ್ಲಿ ಅಂತಹ ಲೇಖನವನ್ನೋದಿ ಹಿಗ್ಗಿದವರು ಹಲವರುಂಟು. ಅದರಂತೆ ಆ ಲೇಖನವನ್ನೋದಿ ಅಸಹ್ಯಪಟ್ಟವರೂ ಕಡಿಮೆ ಇಲ್ಲವೆಂದು ಸಂಪಾದಕ ಮಹಾಶಯರು ಹೇಳಿದರು.

ಆದರೆ ಬಾಯ ಮಾತಿನಿಂದ ಮಾತ್ರ ವಿರೋಧವನ್ನು ವ್ಯಕ್ತಪಡಿಸಿದ ಮಹಿಳೆಯರು ಅದನ್ನು ಒರೆದು ಕಳುಹದೆ ಇದ್ದುದನ್ನು ನೋಡಿದರೆ, ಒಳಗೊಳಗೆ ಅವರೂ ಅಡುಗೆ ಮನೆಯ ಕಡುಹಗೆಗಳ ಕೂಟಕ್ಕೆ ಸೇರಿದವರೇ ಇರಬಹುದೇನೊ.. ಎಂಬ ಸಂದೇಹವುಂಟಾಗುತ್ತಲಿದೆ. ಈ ವಿಷಯದಲ್ಲಿ ಕೆಲವು ಹೆಣ್ಣುಮಕ್ಕಳು ತಮ್ಮ ತಮ್ಮೊಳಗೆ ಚರ್ಚೆ ನಡೆಯಿಸಿದಾಗಿನ ಒಂದು ದೃಶ್ಯವು ಒಮ್ಮೆ ಕಣ್ಣಿಗೆ ಬಿದ್ದಿತು. ಅಡುಗೆ ಮನೆಯ ಪಕ್ಷವಹಿಸಿ ಮಾತನಾಡುವವರಿಗೆಲ್ಲ ಎದುರಾಳಿಯಾಗಿದ್ದವಳು ಆಡಿದ ಮಾತು ಎದೆಯಲ್ಲಿ ನೆಟ್ಟು ಬೆನ್ನಿಂದ ಹೊರಬೀಳುವಂತಿದೆ: "ಏನಿರೇ, ನೀವೆಲ್ಲ ಅಡುಗೆ ಮನೆಯಲ್ಲಿ ಹುಗಿದುಕೊಳ್ಳಲು ಇಷ್ಟು ಆತುರಪಡುತ್ತಿದ್ದೀರಲ್ಲ. ಏತಕ್ಕೆ ಗೊತ್ತೆ? ಹೇಡಿತನ ಅಥವಾ ಗಂಡಸರ ಹೆದರಿಕೆಯಲ್ಲದೆ ಬೇರಾವ ಕಾರಣವೂ ಇಲ್ಲ, ಇದಕ್ಕೆ. ನಿಮ್ಮ ಮನಸ್ಸಿನ ಆಳವನ್ನು ನೀವೆ ಅರಿತಿಲ್ಲ; ನಿಮ್ಮ ಮನಸ್ಸಿನ ಅಂತರಾಳದಲ್ಲಿ ಹೊಕ್ಕು ನೋಡಿದರೆ, ನಿಮಗೂ ಅಡುಗೆಮನೆಯ ಹೊರಗೆ, ಹೊಗೆಯ ಲವಲೇಶವೂ ಇಲ್ಲದ, ಸ್ವಚ್ಛ ವಾತಾವರಣದ ಪ್ರೀತಿಯು ಇಲ್ಲದಿಲ್ಲ."

ಅಡುಗೆ ಮನೆಗಳು ಇರಲೇಕೂಡದೆಂದು '**ಒರ್ವ ನವಯುವತಿ**'ಯು ಬರೆದ ಲೇಖನವನ್ನೋದಿ ಹೆಣ್ಣುಮಕ್ಕಳಿಗೆ ಕೆಲವರಿಗೆ ಬಂದ ಸಿಟ್ಟಿಗಿಂತಲೂ ಎಷ್ಟೋ ಗಂಡುಸರಿಗೆ ಆದ ವಿಷಾದವು ಎಷ್ಟೋ ಪಟ್ಟು ಹೆಚ್ಚಾಗಿದೆ. 'ಅಡುಗೆ ಮನೆಯು ಹೋದರೆ ಧರ್ಮವೆ ಮುಳುಗುವುದು, ಆರ್ಯ ಸಂಸ್ಕೃತಿಯು ಹಾಳಾಗುವುದು' ಎಂದು ಮುಂತಾಗಿ ನಿಡುಸುಯ್ಯುವವರುಂಟು.

ಆದರೆ ಈ ಸಮಸ್ಯೆಯನ್ನು ನಾನು ಈ ಬಗೆಯ ಭಾವನಾತ್ಮಕ ದೃಷ್ಟಿಯಿಂದ ನೋಡುವುದಿಲ್ಲ. ಗಂಡುಸರೆ ಹೆಣ್ಣುಮಕ್ಕಳನ್ನು ಅಡುಗೆಯ ಮನೆಯಲ್ಲಿ ಕೊಳೆಹಾಕಿರುವರೆಂದು ಸ್ತ್ರೀವರ್ಗದ ಭಾವನೆಯಾಗಿ, ಅವರು ಅದನ್ನು ಕೆಡಹುವುದಕ್ಕೆ ಹೊರಟಿದ್ದರೆ ಅತ್ಯಗತ್ಯವಾಗಿ ನೆಲಸಮ ಮಾಡಿ ಬಿಡಲಿ. ನಿಜವಾಗಿ ನೋಡಿದರೆ ಮನೆಯನ್ನು (ಅದರಲ್ಲಿ ಅಡುಗೆ ಮನೆಯೂ ಉಂಟು) ಮೊದಲು ನಿಲ್ಲಿಸಿದವಳು ಸ್ತ್ರೀಯು. ಗಂಡುಸು ನೆಲೆಯಾಗಿ ನಿಲ್ಲುವ ನೆಚ್ಚಿಕೆಯ ಪ್ರಾಣಿಯಲ್ಲ. ಹೂವಿನಿಂದ ಹೂವಿಗೆ ಅಲೆವ ತಿರುಗಲಿನು ಗಂಡುಸು; ಅವನನ್ನು ತನ್ನ ಒಲವು ನಲಿವುಗಳ ಮಾಟದಿಂದ ಮನೆಯಲ್ಲಿ ಕಾಲುಕಟ್ಟಿ ನಿಲ್ಲಿಸಿದವಳು ಹೆಂಗುಸು,.. ಎಂದು ಸಮಾಜಶಾಸ್ತ್ರಜ್ಞರ ಸಿದ್ಧಾಂತಕ್ಕೆ ಪ್ರಾಚೀನ ಸ್ಥಿತಿಗತಿಗಳ ಸಂಶೋಧಕರ ಬೆಂಬಲವೂ ಇದೆ. ಆದುದರಿಂದ ಮನೆಯನ್ನು (ಅದರೊಡನೆ ಅಡುಗೆ ಮನೆಯನ್ನೂ) ಹುಟ್ಟಿಸಿದ ಶ್ರೇಯಸ್ಸು ಅಥವಾ ಅಪಶ್ರೇಯಸ್ಸು ಹೊಣೆಗಾರಿಕೆಯೂ ಹೆಣ್ಣುಮಕ್ಕಳ ಪಾಲಿಗೇ ಇದೆ.

ಆಗ ಹಾಗಿದ್ದುದು ಈಗ ಹೀಗೇಕೆ ಮತ್ತೆ?.. ಇದಕ್ಕೆ ಎರಡು ಕಾರಣಗಳು:

ಕ್ರಿಯೆಗೆ ಪ್ರತಿಕ್ರಿಯೆ ಎಂಬ ಅಬಾಧಿತವಾದ ಸಿದ್ಧಾಂತವನ್ನಿಲ್ಲಿ ಕಾಣಬಹುದು. ಮನುಷ್ಯನು ಒಮ್ಮೆ ಬಯಸುವವನು; ಅದು ಕೈಗೆ ಬಂದೊಡನೆ ಅದರಲ್ಲಿ ಬೇಸರವುಂಟಾಗುವುದು. ಒಂದು ವ್ಯಾಪಾರವನ್ನೊ ಉದ್ಯೋಗವನ್ನೊ ಮೊದಲು ಹಮ್ಮುವನು; ಮೊದಮೊದಲು ಅದನ್ನೆ ಹಾಸಿ ಅದನ್ನೆ ಹೊದ್ದುಕೊಳ್ಳುವುದರಲ್ಲಿ ಹಿಗ್ಗುಗೊಳ್ಳುವ ಮಾನವನಿಗೆ ಮುಂದೆ 'ತಾನು ಇದರಲ್ಲಿ ಸಿಕ್ಕಿಬಿದ್ದಿರುವೆನು, ಸೆರೆ ಸಿಕ್ಕಿರುವೆನು' ಎಂಬ ಸಂದೇಹವುಂಟಾಗಿ (ಕೆಲವುಸಲ ಅದು ನಿಜವಿರುವುದುಂಟು) ಮೊದಲು ತಾನು ಹಮ್ಮಿದುದನ್ನೆ ಹರಿದುಹಾಕಲು ಹಂಬಲಿಸುವನು ; ಇದು ಮನುಷ್ಯಸ್ವಭಾವ. '**ನವಯುವತಿ**'ಯರು ಅಡುಗೆಯ ಮನೆಗಳನ್ನು ಕಲಸವು ಮಾಡಹೊರಟುದು ಈ ಕಾರಣದಿಂದಲೆ ಇರಬೇಕು.

ಅಥವಾ ಇನ್ನೊಂದು ಕಾರಣವು ಹೀಗಿರಬಹುದು : ಗೆಳೆತನದಲ್ಲಿ ಇಬ್ಬರು ಗೆಳೆಯರು ಒಬ್ಬರೊಬ್ಬರನ್ನು ಅನುಕರಿಸುವುದರಿಂದ ಅವರ ಸ್ವಭಾವಗಳು ಅದಲುಬದಲಾದುದನ್ನು ಕಾಣುತ್ತೇವೆ. ಯಾರು ಯಾವುದನ್ನು ಧ್ಯಾನಿಸುವರೊ ಅದೆ ಅವರಾಗುವರು. ಗಂಡು–ಹೆಣ್ಣಿನ ಹಲವು ಕಾಲದ ಗೆಳೆತನ, ಪರಸ್ಪರ ಚಿಂತನ ಮತ್ತು ಸತತವಾದ ಸನ್ನಿಧಾನದಿಂದ ಎಷ್ಟೋ ಮಟ್ಟಿಗೆ ಅವಳ ಸ್ವಭಾವವು ಇವನಲ್ಲಿ, ಇವನ ಸ್ವಭಾವವು ಅವಳಲ್ಲಿ ಒಡಮೂಡಿದ್ದನು ನಿಜ. ಇದರ ಫಲಿತವೆಂದೆ ಅಲೆದಾಟಕ್ಕೆ ಮೆಚ್ಚಿದ್ದ ಗಂಡು ಮನೆಯನ್ನು ಬಯಸುತ್ತಿದೆ; ಹುಟ್ಟಾ 'ಸ್ಥಿರೆ'ಯೆಂದು ಸಿದ್ಧವಾದ ಹೆಣ್ಣು ಮನೆಯಿಂದ ಹೊರಬಿದ್ದು ಹಾರಾಡಲು ಹಂಬಲಿಸುತ್ತಿದೆ. ಕೆಲವೊಂದು ಅನುಭವವು ಬರುವವರೆಗೆ ಎಂದರೆ ತಲೆಗೆ ಬಡಿಯುವವರೆಗೆ ಇದು ಅನಿವಾರ್ಯ.

'ಮನುಸ್ಮೃತಿಯಲ್ಲಿ ಹೇಳಿದೆ, ಆದುದರಿಂದ ಹೆಣ್ಣೆಂಬುದು ಮನೆಯಲ್ಲಿಯೆ ತೊಡಕಿಕೊಂಡಿರಬೇಕು,' ಎಂದು ಎಷ್ಟು ಕಿರಿಚಿಕೊಂಡರೂ ಈಗಿನ ಓಘವು ಒಮ್ಮೆಲೆ ತಿರುಗುವುದು ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪ ಕಾಲವು ಬೇಕು. ಅಷ್ಟರಲ್ಲಿ ಗಂಡನೂ ತನ್ನ ಮಾತಿನ ರೀತಿಯನ್ನು ಬದಲಿಸಿಕೊಳ್ಳಲು ಕಲಿಯಬೇಕು. 'ಹೆಂಗುಸು ಮನೆಯಲ್ಲಿ **ತೊಡಕಿ**ಕೊಂಡಿರಬೇಕು' ಎಂದು ಹಟ ಹಿಡಿಯದೆ **ತೊಡಗಿ**ಕೊಂಡಿರುವುದು ಸಾಕೆಂಬ ವಿಚಾರಕ್ಕೆ ಬರಬೇಕು. ಜಗತ್ಪ್ರವಾಹವು ನಡೆದಿರುವುದು ಯಾರ ಹೊರಗಣ ಕಟ್ಟುಕಟ್ಟಳೆಗಳಿಂದಲ್ಲ ; ಸೃಷ್ಟಿಯು ಎಲ್ಲವನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡಿದೆ. ಮನುವಿನ ಆಜ್ಞೆಯನ್ನು ಉಲ್ಲಂಘಿಸಬಹುದು ; ಆದರೆ ಮನುವು ಹೇಳಿದ ಮಾನವಧರ್ಮವನ್ನು ಮಾತ್ರ ಯಾರಿಂದಲೂ ಮೀರಿಹೋಗುವುದಕ್ಕಾಗಲಿಕ್ಕಿಲ್ಲ ; ಏಕೆಂದರೆ ಅದು ಮನುವಿನ ಮಾತಲ್ಲ, ಸೃಷ್ಟಿನಿಯಮ ; ಶಾಶ್ವತವಾದ ಸನಾತನ ಸತ್ಯದ ಅವಜ್ಞೆಯನ್ನು ಮಾಡಿ ಬದುಕುವುದು ಸಾಧ್ಯವಿಲ್ಲ.

ಹೆರಿಗೆಯ ಹೊಣೆಯು ಎಲ್ಲಿಯವರೆಗೆ ಹೆಂಗುಸಿನ ಮೇಲಿದೆಯೊ ಅಲ್ಲಿಯವರೆಗೆ ಹೆಂಗಸು ಗಂಡುಸಿನಂತೆ ಸಿಕ್ಕಲ್ಲಿ ಸಿಕ್ಕಂತೆ ಅಲೆದಾಡಲು ಆರಳು. ಮಕ್ಕಳನ್ನು ಪಡೆದು ಅವುಗಳನ್ನು ಲಾಲಿಸಿ ಪಾಲಿಸಿ, ತನ್ನ ಅಮೃತ ಹಸ್ತದಿಂದ ಮುಂಡಾಡಿ, ಪ್ರಪಂಚಕ್ಕೆಲ್ಲ ಚಿರಂಜೀವಿಯಾಗೆಂದು ಹರಸಿ ಅದನ್ನು ಸಾರ್ಥವಾಗಿ ಮಾಡುವ ತಪಃ ಸಾಮರ್ಥ್ಯವು ಹೆಣ್ಣಿನಲ್ಲಿದೆ. ಈ ಸಾಮರ್ಥ್ಯವನ್ನು ಸಂಪಾದಿಸಲು ಮಾಡಬೇಕಾದ ತಪಸ್ಸಿಗೆ ಅಲೆದಾಟವು ಬಾಧಕ. ತಪಸ್ವಿ ಎಂಬುದಕ್ಕೆ ಕನ್ನಡದಲ್ಲಿ 'ಕಿತ್ತಡಿ' ಎಂಬ ಮೇಳದ ನುಡಿಯಿದೆ. ಕಿರಿದು ಅಡಿಯುವನೆ ಕಿತ್ತಡಿ–ತಪಸ್ವಿ. ಜಗತ್ತಿಗೆ ಅಮರತ್ವವನ್ನು ಸಂಪಾದಿಸಿಕೊಡುವ ಭಾಗ್ಯವು ಹೆಣ್ಣಿನ ಪಾಲಿಗಿದೆ. ಆದರೆ ಕೆಲವೊಂದು ಸಂದರ್ಭದಲ್ಲಿ ಮನುಷ್ಯರ ಅಥವಾ ಪರಿಸ್ಥಿತಿಯ ತಪ್ಪಿನಿಂದ ಈ ಭಾಗ್ಯವೆ ಬಂಧನಕಾರಕವಾಗುವುದನ್ನು ನೋಡಿ, ಆಗುವ ತಪ್ಪನ್ನು ತಿದ್ದಿಕೊಳ್ಳುವುದಕ್ಕಷ್ಟೆ ಯತ್ನಿಯಿಸದೆ, ಮೂಲತಃ ತನ್ನ ಮೇಲಿದ್ದ ಹೊಣೆಯನ್ನೇ ತಪ್ಪಿಸಿಕೊಳ್ಳಲು ಹವಣಿಸುವುದು ಮಾತ್ರ ಆತ್ಮಘಾತವಾಗಿದೆ.

ಒರ್ವ 'ನವಯುವತಿ'ಯು ಅಡುಗೆಯ ಮನೆಯನ್ನು ಕೆಡಹಬೇಕೆಂದು ಬರೆದುದು ಬಹಳ ಅರ್ಥಪೂರ್ಣವಾದಸಮಸ್ಯೆಯಾಗಿದೆ. ಅದು ಬರಿ ಅಡುಗೆಯ ಮನೆಯ ಮಾತಲ್ಲ. ಅಡುಗೆ ಮನೆಯೆಂಬುದರಲ್ಲಿ ಸ್ತ್ರೀಯರ ಜೀವನದ ತೊಡಕುಗಳೆಲ್ಲವೂ ಸೇರಿಕೊಂಡಿವೆ. ಈಗ ಹೆಣ್ಣುಮಕ್ಕಳಿಗೆ ಮನೆಹಿಡಿದುಕೊಂಡಿರಬೇಕಾದುದು ಮುಖ್ಯವಾಗಿ ಅಡುಗೆಗಾಗಿ. ಹೊರಗೆ ಉಪನ್ಯಾಸಗಳು, ಪ್ರದರ್ಶನಗಳು, ಆಟ–ನೋಟಗಳು ಮೊದಲಾದ ಬೇಕಾದ ಹಿಗ್ಗು ಹೆಗ್ಗಳಿಕೆಯ ಪ್ರಸಂಗಗಳಿರಲಿ; ಸಂಜೆ– ಮುಂಜಾವಿನ ಅಡುಗೆಯ ನಿಮಿತ್ತದಿಂದ ಹೆಂಗುಸು ಮನೆಯಲ್ಲಿರಬೇಕಾಗಿ, ಮೇಲ್ಕಾಣಿಸಿದ ಬಗೆಯ ಆನಂದೋತ್ಸವಗಳಿಗೆ ಅವರು ಎರವಾಗಬೇಕಾಗುತ್ತದೆ. ಇದು ಒಂದು ವ್ಯಾವಹಾರಿಕ ರೀತಿಯಲ್ಲಿ ಆಗಾಗ ಹೇಳುವ ದೊಡ್ಡ ಕಾರಣ. ಇದರೊಂದಿಗೆ ಅಷ್ಟು ಸ್ಪಷ್ಟವಾಗಿ ಆಡಲಿಕ್ಕೆ ಅನಿಮಿಸಿಗೊಳ್ಳುವ ಬೇರೆ ಕೆಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದೊಂದು ಚಿಳ್ಳೆಪಿಳ್ಳೆಗಳ ಜಂಜಡ (ಜಂಜಾಟ); ಅಡುಗೆಮನೆ ಬೇಡವೆಂದರೆ ಅದರಲ್ಲಿ ಈ 'ಚ್ಯಾಂ ಪ್ಯಾಂ' ಗಳ ಗಲಾಟೆಯೂ ಬೇಡವೆಂಬ ಒಳಧ್ವನಿಯೂ ಕೇಳಬರುತ್ತಲಿದೆ ಅದು ನಿಜ. ಏಕೆಂದರೆ ಹೆಂಗುಸು ಮನೆಯಲ್ಲಿ ಹೆಚ್ಚಾಗಿ ನಿಂತು–ಕೊಳ್ಳ ಬೇಕಾಗುತ್ತಿದ್ದುದು ಶಿಶುಸಂಗೋಪನದ ಹೊಣೆಯು ಅವಳ ಮೇಲಿದ್ದುದರಿಂದಲೆ. ಮನೆಯಲ್ಲಿರಬೇಕಾದ ಬಳಿಕ ಅಲ್ಲಿಯೆ ಇದ್ದುಕೊಂಡು (ಮಕ್ಕಳು ಮರಿಗಳನ್ನು ಆಡಿಸುತ್ತ) ಮಾಡಲು ಬರುವ ಗೃಹವ್ಯವಸ್ಥೆಯ ಅಧಿಕಾರವು ಅವಳ ಕಡೆಗೆ ಬರುವುದು ಕ್ರಮಪ್ರಾಪ್ತವಾಗಿದೆ. ಆದುದರಿಂದಲೆ ಅಡುಗೆಮನೆಯ ಒಡೆತನವು ಹೆಂಗುಸಿನದೆಂಬ ರೂಢಿಯು ಅನಂತಕಾಲದಿಂದ ನಡೆದುಬಂದಿದೆ.

ಗಂಡುಸು ಈ ಪರಿಸ್ಥಿತಿಯ ಲಾಭಪಡೆದುಕೊಂಡು, ಹೆಂಗುಸನ್ನು ಮನೆಯಲ್ಲಿ–– ಅಡುಗೆ ಮನೆಯಲ್ಲಿಯೆ ತುರುಕಿಡುವುದಕ್ಕೆ ಹವಣಿಸಿದುದು ಸುಳ್ಳಲ್ಲ. ಅಂದಚೆಂದದ ಗರಿಗಾಗಿ ಬಂಧನಕ್ಕೊಳಗಾಗಬೇಕಾಗುವುದೆಂಬ ಅರಿವು ಉಂಟಾದರೆ, ನವಿಲು ತನ್ನ ಪುಚ್ಛಗಳನ್ನು ಒಂದರಗಳಿಗೆಯಾದರೂ ಇಟ್ಟುಕೊಳ್ಳಲು ಸಿದ್ಧವಾಗಲಿಕ್ಕಿಲ್ಲ. ಹೆಣ್ಣೂ ಮನುಷ್ಯ! ಮನುಷ್ಯನೆಂದರೆ ಬರಿ ಗಂಡುಸೆ ಅಲ್ಲ! ಹೆರಿಗೆಯ ಹೊಣೆಯು ಹೆಣ್ಣಿನ

ಪಾಲಿಗೆ ಬಂದ ತಪ್ಪಿಗಾಗಿಯೆ ಅದು, ತನಗೆ ಮನೆಯೆಂಬ ಸೆರೆಯಲ್ಲಿ ಸಿಕ್ಕಿಬೀಳಬೇಕಾಗುವುದೆಂಬ ತಿಳಿವು ತಲೆದೋರಿದೊಡನೆಯೆ, ಅದರೊಳಗಿಂದ ಹೊರಬೀಳುವ ಎತ್ತುಗಡೆಯನ್ನು ನಡೆಯಿಸಿದ್ದರೆ ಸೋಜಿಗವೇನು? ಸಂತಾನನಿರೋಧದ ಕೃತ್ರಿಮ ಸಾಧನಗಳು ಸುಲಭವಾಗಿ, ಬೇಕಾದ ಹಾಗೆ ಸಿಕ್ಕಲಾರಂಭಿಸಿದ ಬಳಿಕ, ಹೆಣ್ಣಿನ ಈ ಪ್ರಯತ್ನಗಳಿಗೆ ಒಂದು ಬಗೆಯ ವಿಶೇಷ ಮೂರ್ತಸ್ವರೂಪವು ಬರಲಾರಂಭಿಸಿದೆ.

ಭೌತಿಕಶಾಸ್ತ್ರಸಂಶೋಧಕರು, ಹೆಣ್ಣುಮಕ್ಕಳಿಗೆ ಇನ್ನೂ ಒಂದು ಬಗೆಯಿಂದ ಈ ವಿಚಾರದಲ್ಲಿ ತಾವು ನೆರವಾಗುವೆವೆಂದು ಕನಕರಿಸುತ್ತಲಿದ್ದಾರೆ: ಈ ಶಾಸ್ತ್ರಜ್ಞರಿಗೆ ನಮ್ಮ ಪೌರಾಣಿಕ ಕಥೆಗಳೇ ಈ ಬಗೆಯ ಸ್ಫೂರ್ತಿಯನ್ನು ಕೊಟ್ಟಿದ್ದರೆ ನಾನರಿಯೆ. ನಮ್ಮ ಪ್ರಾಚೀನರಾದ ದ್ರೋಣ, ಕೃಪ ಮೊದಲಾದವರಂತೆ ಅರ್ವಾಚೀನ ಕುಂಭಸಂಭವರನ್ನು ನಿರ್ಮಿಸಬೇಕೆಂದು ಈ ಶಾಸ್ತ್ರಜ್ಞರ ಹಂಬಲ. ಕೆಲವೊಂದು ಔಷಧಿಗಳ ಯೋಗದಿಂದ ಗಂಡುಸು ಕೂಡ ಮಗುವಿಗೆ ಮೊಲೆಯೂಡಿಸಲು ಸಮರ್ಥನಾಗುವನೆಂದೂ ಆದರಿಂದ ಹೆಣ್ಣುಮಕ್ಕಳ ಕೆಲವೊಂದು ಶ್ರಮವು ಉಳಿದು, ಅವರಿಗೆ ಹೆಚ್ಚು ತೆರವು ದೊರೆತು, ಮನೆಯಿಂದ ಹೊರಬೀಳಲಿಕ್ಕೂ ಅಡುಗೆಮನೆಯ ಹೊರಗಿನ ಕೆಲಸಗಳಿಗೆ ಕೈಯಿಕ್ಕಲಿಕ್ಕೂ ಆಸ್ಪದವುಂಟಾದೀತೆಂದೂ ಒಂದು ಎಣಿಕೆಯಿದೆ. ಇವುಗಳ ಶಕ್ಯಾಶಕ್ಯತೆಗಳನ್ನು ಹೇಳುವುದು ನನ್ನ ಅಳವಿನ ಹೊರಗಣ ವಿಷಯ. ಒಂದು ವೇಳೆ ಇದೆಲ್ಲವು ಸಾಧ್ಯವೆಂದು ತಿಳಿದರೂ, ನನಗೆ ತಿಳಿದ ಮಟ್ಟಿಗೆ ಹೆಣ್ಣುಮಕ್ಕಳ ಹೊಣೆಯು ಕಡಿಮೆಯಾದೀತೆಂದು ಎನಿಸುವುದಿಲ್ಲ. ಪ್ರಾಣವಾಯು ಮತ್ತು ಜಲಜನಕವಾಯುಗಳ ಸಂಯೋಗದಿಂದ (ಪ್ರಾ+೨.ಜ) ನೀರು ಉಂಟಾಗುವುದೆಂದು ಚೆನ್ನಾಗಿ ಸಿದ್ಧವಾಗಿದ್ದರೂ ನಮ್ಮ ವಿಜಾಪುರ ಜಿಲ್ಲೆಯ ನೀರಿನ ಅರಬು ಇನ್ನೂ ಹಿಂಗಿಲ್ಲ!

ಆದರೆ ಒಂದುಮಾತಿಗಾಗಿ ಮಾತ್ರ ಹೆದರಬೇಕಾಗಿದೆ. ಸಂತಾನನಿರೋಧದ ಕೃತ್ರಿಮ ಉಪಾಯಗಳು, ಎರಡೂಮುಗ್ಗಲು ಹದನಾದ ಶಸ್ತ್ರದಂತಿದ್ದು– ಅಯೋಗ್ಯ ರೀತಿಯಿಂದ ಉಪಯೋಗಿಸಿದರೆ ಸ್ವಂತಕ್ಕೂ ಸಮಾಜಕ್ಕೂ ಕೂಡಿಯೆ ಅಪಾಯಕಾರಕವಾಗಿವೆ. 'ಗಂಡುಸು ತನ್ನನ್ನು ಅನ್ಯಾಯದಿಂದ ಮನೆಯಲ್ಲಿ ಸೆರೆಹಿಡಿದಿಡುತ್ತಲಿದ್ದಾನೆ' ಎಂಬ ಭಾವನೆಯಾಗಿ ಹೆಂಗುಸು ಈಗ ಸ್ವಲ್ಪ ತೂಕತಪ್ಪಿ ಆಟ-ಮಾಟಗಳನ್ನು ನಡೆಯಿಸಿದ್ದಾಳೆಂದು (ಪಶ್ಚಿಮದಿಕ್ಕಿನಲ್ಲಿ ನೋಡಿದರೆ) ಎನಿಸುತ್ತಲಿದೆ. ಅದರ ಪರಿಣಾಮವೆ 'ಅಡುಗೆಮನೆಗಳನ್ನು ಕೆಡುಹಬೇಕು' ಎಂಬ ಕೂಗು. ಗಂಡುಸು ಹೆಂಗುಸನ್ನು ಇಲ್ಲದ ರಿಕ್ತಿನಲ್ಲಿ ಹಿಡಿದಿಡಬೇಕೆಂದಿದ್ದ ಅವಿಚಾರದ ಫಲವಿದು. 'ಹೆಂಗುಸರ ಬುದ್ಧಿ ಅಡುಗೆಮನೆಯಲ್ಲಿ', 'ಬಳೆ ಹಾಕಿಕೊಂಡವಳು', 'ನಸ್ತ್ರೀಸ್ವಾತಂತ್ರ್ಯಮರ್ಹತಿ' ಎಂಬಿವೆ ಮೊದಲಾದ, ಈಗ ಅಪಾರ್ಥದಾಯಕವಾಗಿರುವ ಮಾತುಗಳನ್ನು ಮರೆತುಬಿಡಬೇಕು. 'ಹೆಂಗುಸು ಮನೆಹಿಡಿದುಕೊಂಡಿರಬೇಕು', 'ಅಡುಗೆಮನೆಯೆ ಅವಳ ಕಾರ್ಯಕ್ಷೇತ್ರ' ಎಂದು ಮುಂತಾಗಿ ಈರ್ಷೆಯನ್ನು ಹುಟ್ಟಿಸುವ ಮಾತುಗಳಿಂದ ಹೆಣ್ಣುಮಕ್ಕಳ ಸ್ವಾಭಿಮಾನಕ್ಕೆ ಸುಮ್ಮನೆ ಪೆಟ್ಟುಕೊಡುವುದೂ ಯುಕ್ತವಲ್ಲ.

ಹೆಂಗುಸು ಅಡುಗೆಮನೆಯನ್ನು ತನ್ನ ಕೆಲಸಕ್ಕಾಗಿ ಆರಿಸಿಕೊಂಡುದು ಪ್ರಪಂಚವು ಸುಸೂತ್ರವಾಗಿ ಸಾಗಲು ಇಬ್ಬರಿಗೂ ಅನುಕೂಲವೆಂದು, ಹೊರತು ಹೊರಗಿನ ಕೆಲಸಗಳನ್ನು ಅವಳು ಮಾಡಲೆಕೂಡದೆಂದಾಗಲಿ, ಮಾಡಲು ಅಸಮರ್ಥಳೆಂದಾಗಲಿ ಇದರ ಅರ್ಥವಲ್ಲ; ಅವಶ್ಯವೆನಿಸಿದರೆ, ಪ್ರಸಂಗಬಂದರೆ ಅವನ್ನೂ ಮಾಡುವ ಹಕ್ಕು ಅವಳಿಗಿಲ್ಲದಿಲ್ಲ. ಗಂಡುಸು ಒತ್ತಾಯದಿಂದ ಇಂತಹದೇ ನಿನ್ನ ಕೆಲಸವೆಂದು ಆಕೆಗೆ ಬಲವಂತಪಡಿಸಹೋದರೆ, ಅದರ ಪ್ರತಿಕ್ರಿಯೆಯ ದುಷ್ಪರಿಣಾಮಗಳನ್ನವನು ಖಂಡಿತ ಅನುಭವಿಸಬೇಕಾಗುವುದು; ನಮ್ಮ ನಾಡಿನಲ್ಲಿಯೂ ಅದರ ಸ್ವಲ್ಪ ಬಿಸಿಯು ತಾಕಲಾರಂಭಿಸಿದೆ. ಆದುದರಿಂದ ಗಂಡುಸು ತನ್ನ ಕೃತ್ರಿಮ ಬಂಧನಗಳನ್ನು ಹಾಕುವ ಗಡಿಬಿಡಿಗೆ ಹೋಗಲಾಗದು. ಸೃಷ್ಟಿಯ ಶಾಶ್ವತ ಬಂಧನಗಳ ಮೇರೆಯನ್ನು ಮೀರಿಬಾಳುವುದು ಯಾರಿಗೂ ಸಾಧ್ಯವಿಲ್ಲ; ಈ ಸನಾತನ ಧರ್ಮದಲ್ಲಿ ಶ್ರದ್ಧೆಯಿದ್ದವರು ಎಳ್ಳಷ್ಟೂ ಗಾಬರಿಯಾಗುವ ಕಾರಣವಿಲ್ಲ.

ಇಲ್ಲಿ ಇನ್ನೊಂದು ವಿಚಾರ:- ಈಗಿನ ವಿಚಾರ ಪ್ರವಾಹವನ್ನು ಸ್ವಲ್ಪ ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ನಾವು ಅಪೇಕ್ಷಿಸುವ ರೀತಿಯಲ್ಲಿ ಅಡುಗೆಮನೆಯನ್ನು ಕಾಯ್ದಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಪ್ರಪಂಚದ ಆರ್ಥಿಕ ಪರಿಸ್ಥಿತಿಯ ಒತ್ತಾಯದ ಮೂಲಕವಾಗಿ ಹೆಣ್ಣುಮಕ್ಕಳು ದುಡಿದು ಹೊಟ್ಟೆಹೊರಕೊಳ್ಳಬೇಕಾಗಿದೆ. ಹೊಟ್ಟೆಯ ಚಿಂತೆಯಿಲ್ಲದ ಸ್ವಲ್ಪ ಉಳ್ಳವರು ವಿದ್ಯಾಭಿರುಚಿಯಿಂದ ಓದುಬರೆಹಗಳನ್ನು ಕಲಿತು, ಒಂದಿಲ್ಲೊಂದು ಸಾರ್ವಜನಿಕ ಕೆಲಸದಲ್ಲಿ ಮನಸ್ಸು ಹಾಕುವ ರೂಢಿಯು ಹೆಚ್ಚಾಗುತ್ತಲಿದೆ. ಅಲ್ಲದೆ '**ಉಡುಪಿಯ ಕ್ಷುಧಾಶಾಂತಿಭುವನ**'ಗಳ ಪರಿಣಾಮದಿಂದ ಮನೆಯ ಅಡಿಗೆಯು ಸಂಕ್ಷೇಪಕ್ಕೆ ಬರಲಾರಂಭಿಸಿದೆ. ಮನೆಗೆ ಅತಿಥಿ ಅಭ್ಯಾಗತರು ಬರುತ್ತಲೆ ಸಮೀಪದ '**ಉಡುಪಿ ಶ್ರೀಕೃಷ್ಣಭುವನ**'ದಿಂದ ಬೇಕಾದ ತಿನಿಸನ್ನು ತರಿಸುವವರನ್ನು ಕಾಣಬಹುದು. ಹಬ್ಬಹುಣ್ಣಿವೆಗಳಿಗೆ ಸಹ ಅಲ್ಲಿಂದಲೆ ಮುಖ್ಯ ಪಕ್ವಾನ್ನ ತರಿಸಿ, ಅನ್ನ ಸಾರು ಮನೆಯಲ್ಲಿ ಮಾಡುವ ಸಂಪ್ರದಾಯವಂತರೂ ಉಂಟು. ಹೀಗೆ ಅನೇಕ ಕಾರಣಗಳಿಂದ ಅಡುಗೆಮನೆಯು ನಮಗೆ ತಿಳಿಯದೆಯೆ ಸಣ್ಣ-ಸಣ್ಣದಾಗುತ್ತ ನಡೆದಿದೆ.

ಆದರೆ ಅದು ಸಂಪೂರ್ಣ ನಾಶವಾದೀತೆಂದು ತಿಳಿಯುವುದು ಮಾತ್ರ ಶುದ್ಧ ಭ್ರಾಂತಿ. ಎಷ್ಟೇ ಸಾರ್ವಜನಿಕ ಪಾಕಶಾಲೆಗಳಾಗಲಿ, '**ಶ್ರೀಕೃಷ್ಣ ಮಂದಿರ**'ಗಳಾಗಲಿ, ಕೊನೆಗೆ ಅಡುಗೆಯ ಮೂಲೆಯಾದರೂ ಇಲ್ಲದಿರುವ ಮನೆಯು ದೊರೆಯಲಾರದು. ಇಲ್ಲಿ ಮನೆಯೆಂಬುದಕ್ಕೆ ಕುಟುಂಬಿಗಳ ಮನೆಯೆಂಬರ್ಥ. ವ್ಯಕ್ತಿಗೊಂದು ಸ್ವಂತದ ರುಚಿಯೆಂಬುದು ಇದ್ದೇ ಇರುತ್ತದೆ. ಊಟದ ಅಂಗಡಿಗಳಲ್ಲಿ ಎಷ್ಟೇ ನೊಗಸಾದ ಪದಾರ್ಥಗಳನ್ನೇ ಮಾಡಿರಲಿ; ಅದಕ್ಕೆ ಮನೆ ಅಡುಗೆಯ ಸವಿ ಬರಲಾರದು. ಮೇಲಾಗಿ ತನ್ನವರಿಗೆ ತಾನು ಸ್ವಂತದ ಕೈಯಿಂದ ಮಾಡಿಹಾಕಬೇಕೆಂಬ ಒಂದು ಔತ್ಸುಕ್ಯವು ಪ್ರೇಮಜೀವಿಗಳಲ್ಲಿರುವುದುಂಟು.

ಮನುಷ್ಯಸ್ವಭಾವದೊಳಗಿನ ಈ ಭಾಗವನ್ನು ನೆನಪಿಗೆ ತಂದುಕೊಂಡರೆ, ಅಡುಗೆಮನೆಗಳನ್ನು ಹುಡಿಗೂಡಿಸುವ ಕೆಲಸವೂ, ಪರಶುರಾಮನು ಇಪ್ಪತ್ತೊಂದು ಸಲ ನಿಃಕ್ಷತ್ರಿಯ ಪೃಥ್ವಿಯನ್ನು ಮಾಡಿದ ಕಾರ್ಯವೂ (ಆದಾದ ಮೇಲೆಯೂ ಇಕ್ಷ್ವಾಕುವಂಶದ ಶ್ರೀರಾಮಚಂದ್ರನು ಹುಟ್ಟಿದನೆಂಬುದು ಗೊತ್ತಿರಲಿ!) ಎರಡೂ ಒಂದೇ.

ಇಷ್ಟಾಗಿಯೂ ಅಡಿಗೆ ಮನೆಯನ್ನು ಕೆಡುಹಬೇಕೆಂದು ಎತ್ತುಗಡೆ ನಡೆಯಿಸಿದರೆ, ಕೆಡುಹುವವರ ಮೈಮೇಲೆಯೆ ಅದು ಬೀಳದಿರಲಾರದು. ಹೊಟ್ಟೆಯ ಪಾಡಿಗಾಗಿ ಕಾರಖಾನೆ, ಕಚೇರಿ ಮೊದಲಾದುವುಗಳಲ್ಲಿ ಗಂಡುಸಿನೊಡನೆ ಸ್ಪರ್ಧೆಮಾಡುತ್ತ ಅಲ್ಲಿ ಇಲ್ಲಿ ಅಲೆದಾಡುವುದರಲ್ಲಿ ಸ್ತ್ರೀಯರು ನಿಸರ್ಗದ ಮರ್ಯಾದೆಯನ್ನು ವಿೂರಬೇಕಾಗುತ್ತದೆ. ಇದರ ದುಷ್ಪರಿಣಾಮಗಳು ಅವರ ಮೈ ಮತ್ತು ಮನಸುಗಳ ಮೇಲೆ ಆಗಿ ನಾಡಿನ ಹಾನಿಯಾಗುವುದು. ಗಂಡುಸು ತನ್ನ ದೃಷ್ಟಿಕೋನವನ್ನು ಬದಲಿಸಿಕೊಂಡು ಸ್ವಲ್ಪ ವಿವೇಕಿಯಾಗಿ ವರ್ತಿಸಿದರೆ, ತಾವು ಹೊರಗೆ ಅಲೆದಾಡಿ ಒಬ್ಬರ ಆಳಾಗಿ ದುಡಿದು ತರುವುದರಲ್ಲಿ ಏನಾದರೂ ವಿಶೇಷ ಗೌರವವಿದೆಯೆಂದು ಹೆಂಗುಸಿಗೂ ಎನಿಸಲಿಕ್ಕಿಲ್ಲ. ಗಂಡಿನ ತಪ್ಪು-ನಡೆವಳಿಯ ಮೂಲಕ ಹೆಣ್ಣಿನಲ್ಲಿ ಈ ಬಗೆಯ ಬುದ್ಧಿಯು ತಲೆದೋರಿದೆ. ಗಂಡು, ತಾನೆ ದುಡಿದು ತರತಕ್ಕವನು, ಸುಮ್ಮನೆ ಕುಳಿತು ತಿನ್ನುವ ಕೆಲಸ ಮಾಡುವುದು ಹೆಣ್ಣು-ಎಂದು ಹೆಮ್ಮೆಪಟ್ಟುಕೊಳ್ಳುವುದರಿಂದ ಅಡಿಗಡಿಗೆ ಹೆಣ್ಣಿನ ಅಪಮಾನವಾಗುತ್ತಲಿದೆ; ಆದರಿಂದ ಹೊರಗಣಿಂದ ತಾನೂ ಗಳಿಸಿ ತಂದು, ಗಂಡಿನ ಹಂಗಿನೊಳಗಿಂದ ಪಾರಾಗಬೇಕೆಂಬ ಈರ್ಷ್ಯಾ ಬುದ್ಧಿಯು ಹೆಣ್ಣಿನಲ್ಲಿ ಮೂಡುತ್ತಲಿದೆ. ಬಾಳುವೆಯು ಸವಿಯಾಗಬೇಕಿದ್ದರೆ ಒಲವಿನವರು ಒಬ್ಬರೊಬ್ಬರ ಕಡೆಗೆ ವ್ಯಾಪಾರದ ವೃತ್ತಿಯಿಂದ ನೋಡಲಾಗದು; ಅದರಿಂದ ಪ್ರೀತಿವಿಶ್ವಾಸಗಳು ಬೆಳೆಯಲಾರವು. ಪ್ರೀತಿ ವಿಶ್ವಾಸಗಳೆ ಸಂಸಾರಸೌಖ್ಯದ ತಳಹದಿ. ಅದುವೆ ಇಲ್ಲದಿದ್ದ ಬಾಳು ಬರಿಗೋಳು; ಸಂತೆಯೊಳಗಿನ ಭಂಡಾಟ. ಹೆಣ್ಣು ಏನೂ ಗಳಿಸದೆ ಮನೆಯಲ್ಲಿಯೆ ಇರುವುದೆಂದು ಆಕ್ಷೇಪಿಸುವ ಗಂಡು, ಸ್ವಲ್ಪ ಎಣಿಕೆಮಾಡಿ ನೋಡಲಿ, ಏನು ಕಾಣುವುದು? ಇಬ್ಬರೂ ದುಡಿಯುವುದಕ್ಕೆ ಹೋದರೆ ಮನೆಯಲ್ಲಿ ಅಡುಗೆಯವರಿಗೆ ಹಣ ತೆರಬೇಕಾಗುವುದಲ್ಲವೆ! ಮಕ್ಕಳ ಆರೈಕೆ, ಉಪಚಾರಗಳಿಗಾಗಿ ಎಷ್ಟು ಹಣಕೊಟ್ಟು ಇಟ್ಟರೂ ದಾದಿಯು ತಾಯಿಗೆ ಸರಿದೊರೆಯಾಗಬಹುದೆ? ಆತ್ಮೀಯರೊಡನೆ ಕುಳಿತು ಉಂಡ ಊಟದ ಸವಿಯು ಬಾಡಿಗೆಯ ಆಳಿನ ಕೈಯ ಬಡಿಸುವಿಕೆಯಲ್ಲಿ ದೊರೆತೀತೆ? ತಾಯಿಯ ಕರುಳ ಕಕ್ಕುಲತೆಗಳ ಸ್ವರ್ಗೀಯ ಆನಂದದ ಸ್ವಲ್ಪಾಂಶವನ್ನೂ ಅನುಭವಿಸದ ಮಕ್ಕಳು, ಮುಂದೆ ಮನುಷ್ಯರಾಗದೆ ರಕ್ಕಸರಾಗುವರೆಂಬುದರಲ್ಲಿ ಸಂದೇಹವೆ ಇಲ್ಲ. ದಾದಿಯರು ತಾಯಂದಿರಿಗಿಂತಲೂ ಹೆಚ್ಚು ಶಿಶುಸಂಗೋಪನಶಾಸ್ತ್ರ, ಮಕ್ಕಳ ಮಾನಸಶಾಸ್ತ್ರ ಮೊದಲಾದುವುಗಳಲ್ಲಿ ನಿಷ್ಣಾತರಾಗಿರಬಹುದು. ಆದರೆ ಇದೆಲ್ಲವೂ ಬುದ್ಧಿ; ಭಾವನೆ- ಹೃದಯವು ಇದೊಂದು ವಸ್ತುವೆ ಬೇರೆ. ಆ ತನ್ನತನವು ತಾಯಿಗಲ್ಲದೆ ಬೇರವರಿಗೆ ಬಾರದು. ಆದುದರಿಂದ ಈ ವಿಷಯದಲ್ಲಿ ತಂದೆಯೆಂಬುವವನು ತಾಯಿಗೆ ಎಷ್ಟು ಸಂಬಳವನ್ನು ಸಲ್ಲಿಸಿದರೂ ಅದು ಕಡಿಮೆಯೆ ಸರಿ. ತನ್ನ ಗೃಹಮಂತ್ರಿಯೆಂದು, ತನ್ನ ಸುಖದುಃಖ, ಅನುಕೂಲತೆ ಪ್ರತಿಕೂಲತೆಗಳಲ್ಲಿ ತನಗೆ ಹತ್ತಿರವಿದ್ದು ನೆರವಾಗುವ ವ್ಯಕ್ತಿಯೆಂದು, ಗಂಡು ತನ್ನ ಹೆಣ್ಣಿಗೆ ಕೊಡತಕ್ಕ ಪ್ರತಿಫಲವೆಂದರೆ ಅವಳಿಗೆ ತನ್ನನ್ನೆ ವಿಶಾಸಲ ಮುಡುಪಾಗಿರಿಸಿಕೊಳ್ಳುವುದಕ್ಕಿಂತ ಗುಂಜಿತೂಕ ಕಡಿಮೆಯಾಗಿದ್ದುದು ಆದಾವುದೂ ನಡೆಯಲಾರದು. ನಿಜಸ್ಥಿತಿಯು ಹೀಗಿದ್ದುದರಿಂದ ಗಂಡಿಗೆ ಇದು ತನ್ನದು, ಇದು ಹೆಣ್ಣಿನದೆಂಬ ತಾರತಮ್ಯವನ್ನು ಮಾಡುವುದಕ್ಕೆ ಬಾಯಿಯೆ ಇಲ್ಲ. ಮೇಲ್ಕಾಣಿಸಿದ ಬಗೆಯಿಂದ ಲೆಕ್ಕಮಾಡಿದರೂ ಹೆಣ್ಣಿಗೆ ಗಂಡು ಸಲ್ಲಿಸಬೇಕಾಗತಕ್ಕ ಹಣವು ಆವನ ಗಳಿಕೆಗಿಂತ ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಆದುದರಿಂದ ಹೆಣ್ಣಿಗೆ 'ನೀವು ಮನೆ ಹಿಡಿದುಕೊಂಡು ಕೂರುವವರು' ಎಂದು ಮನಸಿಗೆ ನೋವನ್ನುಂಟುಮಾಡುವ ಮಾತನಾಡಿ, ಅವರಲ್ಲಿ ಮನೆಯನ್ನು ಕೆಡುಹಬೇಕೆಂಬ ಬುದ್ಧಿಯು ಅಂಕುರಿಸುವಂತೆ ನಡೆದುಕೊಳ್ಳುವುದು ಸರಿಯಲ್ಲ. ಮನೆಯಲ್ಲಿಯೆ ಸಾಕಷ್ಟು ಮರ್ಯಾದೆ ದೊರೆತರೆ ಯಾವ ಹೆಣ್ಣಿಗೆ ತಾನು ಮನೆಬಿಟ್ಟು ಹೋಗಬೇಕೆಂದೆನಿಸೀತು? ಆದುದರಿಂದಲೆ ಅವಳಿಗೆ ನಮ್ಮ ಹಿರಿಯರು 'ಗೃಹಲಕ್ಷ್ಮಿ' ಎಂದು ಕರೆಯುತ್ತಿದ್ದರು. ಮನೆಯ ವಿಶಿಷ್ಟ ಪರಿಸ್ಥಿತಿಯ ಮೂಲಕ ಹೆಣ್ಣು ಮಕ್ಕಳಿಗೆ ಹೊರಗಿನ ಬೇರೆ ಏನಾದರೂ ಕೆಲಸ ಹಿಡಿಯಬೇಕೆಂಬ ಆವಶ್ಯಕತೆಯುಂಟಾಗಿದ್ದರೆ ಅದು ಒಂದು ಆಕಸ್ಮಿಕಕಾರಣದ ಮೂಲಕವಾಗಿಯೆಂದೆ ತಿಳಿಯಬೇಕಲ್ಲದೆ, ಹೆಂಗುಸರು ಮೊದಲು ನಿರುದ್ಯೋಗಿಗಳಾಗಿದ್ದರು, ಈಗ ಉದ್ಯೋಗಕ್ಕೆ ಹತ್ತಿದರೆಂಬ ವಿಚಾರದ ರೀತಿಯನ್ನು ಬದಲಿಸಿಕೊಳ್ಳಬೇಕು. ವ್ಯಾಪಾರ, ನೌಕರಿ ಮೊದಲಾದ ದಂದುಗಗಳ ಒತ್ತಾಯಕ್ಕಾಗಿ ತಾಯಿಯು ತೊಟ್ಟಿಲಿನ ಹಗ್ಗವನ್ನು ಆಳಿನ ಕೈಯಲ್ಲಿ ಕೊಡುವ ರೂಢಿಯು ಹೆಚ್ಚಾದರೆ, ಅಥವಾ ಮಕ್ಕಳಿ ಬೇಸರವಾದರೆ ನಾಡಿನ ಅಳಿಗಾಲವು ತೀರ ಹತ್ತಿರಕ್ಕೆ ಬಂದಿತೆಂದ ತಿಳಿಯಲು ಅಡ್ಡಿಯಿಲ್ಲ. ನಮ್ಮ ಅಕ್ಕ-ತಂಗಿಯರು ಈ ಮಾತನ್ನು ಚೆನ್ನಾಗಿ ಯೋಚಿಸಲಿ.

———o———

ಕಂಡುಂಡ ಮಾತು

"ಬೇಕಾದಷ್ಟು ಸದ್ಗುಣಗಳಿರಲಿ; ಅವುಗಳ ಪ್ರದರ್ಶನ ಮಾಡಬೇಕೆಂಬ ಒಂದೆ ಒಂದು ದುರ್ಗುಣವು, ಇದ್ದ ಸದ್ಗುಣಗಳನ್ನೆಲ್ಲ ನುಂಗಿ ನೀರು ಕುಡಿಯುತ್ತದೆ."

"ಇನ್ನೊಬ್ಬರಿಗ ಉಪದೇಶ ಮಾಡುವಾಗ ನಾವು ಉಪಯೋಗಿಸುವುದು ರಂಜಣಿಗೆ; ತೆಗೆದುಕೊಳ್ಳುವಾಗ ಉಪಯೋಗಿಸುವುದು ಮಾತ್ರ ತೀರ್ಥಸವುಟು."

ಡಾ. ಎಂ. ಸಿ. ತುಮ್ಮಿನಕಟ್ಟಿಯವರು

"ಕರ್ಚ್ಯೂ" ಕಾರಖಾನೆಯ ಮೊದಲನೆಯ ಕಾಣಿಕೆ

'ಕರ್ಚ್ಯೂ' ದಂತೌಷಧಿ ಎಲ್ಲರಿಗೂ ಗೊತ್ತಿದ್ದರೂ, ಅದರ ಉತ್ಪಾದಕರಾದ ಡಾ. ತುಮ್ಮಿನಕಟ್ಟಿಯವರನ್ನು ಅರಿಯದವರು ಕರ್ನಾಟಕದಲ್ಲಿಯೂ ಬಹುಜನರಿದ್ದಾರೆ. ಮುಂಬಯಿ ಸರಕಾರದ ಔದ್ಯೋಗಿಕ ಸಲಹೆಗಾರರ ಸಮಿತಿಯಲ್ಲಿ ಇವರನ್ನು ಸದಸ್ಯರನ್ನಾಗಿ ಆರಿಸಿದುದು ಇವರ ಯೋಗ್ಯತೆಗೆ ತಕ್ಕ ನಿದರ್ಶನವಾಗಿದೆ.

ಶ್ರೀ. ಎನ್. ಕೆ. ಕುಲಕರ್ಣಿ, ಬಿ.ಎ. (ಆನರ್ಸ್)

ಅವರಿಂದ

"ಕಾಯಕವೇ ಕೈಲಾಸ"

—ಶ್ರೀಬಸವಣ್ಣನವರು

'ಕರ್ಚ್ಯೂ' ಎಂಬ ದಂತಲೇಪನವನ್ನೆ ನಾನು ಇಲ್ಲಿಯವರೆಗೆ ಉಪಯೋಗಿಸುತ್ತ ಬಂದಿರುವುದು. ಅದರ ಗುಣಗಾನ ಮಾಡುವ ಜಾಹೀರದಾರನಾಗಬೇಕೆಂಬ ಮನಸ್ಸು ನನ್ನದಲ್ಲ; ಅದರ ಜನ್ಮ-ಭೂಮಿಯನ್ನೂ ಜನಕವಿಜ್ಞಾನಿಗಳನ್ನೂ ಕುರಿತು ಒಂದು ಪರಿಚಯ ಬರೆಯಬೇಕೆಂಬ ಬಯಕೆಯುಟ್ಟಿ. ನನಗೆ ಇದನ್ನು ಬರೆಯ ಹಚ್ಚಿ ದುದು 'ಜಯಂತಿ'ಯ ಪ್ರೇರಣೆಯಲ್ಲ; ಕರ್ಚ್ಯೂವಿನ ಪ್ರೇರಣೆ.

ಕರ್ಚ್ಯೂಲೇಪನವು ನಿತ್ಯಪ್ರಭಾತದಲ್ಲಿಯೂ ತನ್ನ ಚೆಳ್ಳಗವನ್ನು ನನ್ನ ನಾಲಗೆಯ ಮೇಲಿರಿಸು ತ್ತಿದ್ದರೂ ಕರ್ಚ್ಯೂ ಎಂದರೇನು—ಇದು ಮಾತ್ರ ನನಗೆ ಹೊಳೆದಿರಲಿಲ್ಲ. ತಿಳಿದಿರಲಿಲ್ಲ. ಒಂದು ದಿನ ನನ್ನ ಮಿತ್ರರೊಬ್ಬರು—ಮಾತಿಗೆ ಮಾತು ಬಂದಾಗ—"ಕರ್ಚ್ಯೂ ಎಂದರೆ 'ಕ-ಚಾ-ಲ ಮಿನಿಸ್ಟ್ರು' ಇದ್ದಂತೆ ನೋಡು" ಎಂದರು. ನನಗೆ ಅರ್ಥವಾಗಲಿಲ್ಲ. ಇದೂ ಅವರಿಗೆ ಅರ್ಥ ವಾಯಿತು. 'ಇಷ್ಟು ಗೊತ್ತಿಲ್ಲವೇ ನೋ! Karnatak Chamical Works ಈ ಮೂರೂ ಶಬ್ದಗಳ Kar-che-w ಎಂಬುವನ್ನು ಕೂಡಿಸಿದರೆ ಏನಾಗುತ್ತದೆ? ಎಂದರು. (ಹೇಗಿದೆ ಇತಿಹಾಸಕ್ಕೂ ಉದ್ಯೋಗಕ್ಕೂ ಸಾಹಿತ್ಯಕ್ಕೂ ಸಂಬಂಧ?) "ಸರಿ, ಅಂತೂ ಕರ್ಚ್ಯೂ ಎಂಬ ಹೆಸರನ್ನಿಟ್ಟವರು ಬಹು 'ಹುಷಾರಿ' ಯಿದ್ದಿರಬೇಕು" ಎಂದೆ. "ಅಂತೇ ಅವರ 'ಕರ್ಚ್ಯೂ' ಇಷ್ಟು 'ಖರ್ಚು' ಆಗುತ್ತವೆ" ಎಂದರು.......

ಡಾ. ತುಮ್ಮಿನಕಟ್ಟಿಯವರು

"ಹಾಗಾದರೆ ಕ್ರಿಮಿಕೊಲ್" ಎಂದರೇನು? ನಾನೆಂದೆ.

"ಕ್ರಿಮೀನ್ ಕೊಲ್ಲತಿ ಇತಿ—ಎಂದರೆ ಕ್ರಿಮಿಗಳನ್ನು ಅವುದು ಕೊಲ್ಲುತ್ತದೆಯೋ ಅದು."

"ಆದರೆ ಅಚ್ಚಗನ್ನಡ ಸಮಾಸದಲ್ಲಿ **ಕ್ರಿಮಿಗುಳಿ** ಎಂದಾಗ ಬೇಕಲ್ಲ?"

"ಸಾಕುಮಾಡೊ; ನಿನ್ನ ವ್ಯಾಕರಣಪಾಂಡಿತ್ಯ ಇಲ್ಲಿತರಬೇಡ. ಅರ್ಥವಾಗುತ್ತದೋ ಇಲ್ಲೊ?"

"ಇದಿರಲಿ. 'ಹೆಮುಗುಳ್' ಎಂಬುದು ಸಂಬೋಧನಾರ್ಥ ವೇನು?"

"ಹಾಗಲ್ಲೊ ಚಂದ್ರಾಮಾ. ಹೆಮುಗುಳ್ ಎಂಬುದೊಂದು ವನಸ್ಪತಿ."

"ಹೀಗೋ! ಇಷ್ಟೇ ಏನು ಮಾತುತ್ತೀ. ಮೊನ್ನೆ ಒಬ್ಬ ರಸಿಕಶಿಖಾಮಣಿಗಳು 'ಬೇಕಾದವರು ಬನ್ನಿರಿ—ಹೆಣ್ಮಗಳ್' ಎಂದು ಓದುತ್ತಿದ್ದರು—ಒಂದು ಜಾಹೀರಾತನ್ನು."

"ಸರಿ. ಆ ಜಾಹೀರಾತಿನಲ್ಲಿ ಅಚ್ಚಿನದೋಷ ವಿದ್ದಿರಬೇಕು.. ಇಲ್ಲವೆ ಓದುವವರಲ್ಲಿ ತಲೆಯ ಅಥವಾ ನಾಲಗೆಯ ದೋಷವಿದ್ದಿರಬೇಕು." ಎಂದು ನುಡಿದು ಹಾಸ್ಯಮಾಡಿದರು.

"ಅಂತೂ ನಮ್ಮೂರಲ್ಲಿಯೆ ಇದೆಯೆ ಈ ಹೆಮುಗುಳ್ ಕಾರಖಾನೆ?"

"ನಿತ್ಯ ಉಪಯೋಗಿಸುತ್ತಿ—ಅಂಥದು ನಿಮ್ಮೂರಿನದು ಎಂಬುದು ಗೊತ್ತಿಲ್ಲವೆಂತೀಯಲ್ಲ!"

"ನಾನು ಉಪಯೋಗಿಸುತ್ತಿರೋದು ನಮ್ಮೂರಿನದು ಅಂತಲ್ಲ; ಅಮೇರಿಕೆಯಲ್ಲಿ ವಿಶೇಷ ಪ್ರಶಸ್ತಿಯನ್ನು ಪಡೆದದೆ ಅಂತ ಕೇಳಿದ್ದಕ್ಕೆ!"

"ಅಂತೂ ನನ್ನ ಮುಂದೆ ಈ ಮಾತು ಆಡಿದೀಯಂತ ನಿನ್ನ

ಜಾಣತನಕ್ಕೆ ಧಕ್ಕೆ ಬರಲಿಲ್ಲ - ನೋಡು......ಒಮ್ಮೆ ನೋಡಿಯಾದರೂ ಬಾರೊ ಜಾಣಾ, ನಿಮ್ಮೂರಿನ ಹಿತ್ತಲಮುದ್ದನ್ನ!"

* * *

ನನ್ನ ಗೆಳೆಯನ ಪ್ರೇರಣೆಯಿಂದಲೇ ನಾನು ಮೊನ್ನೆ ತಾನೆ ಕಚ್ಯೂರ್ ಕಚೇರಿಯನ್ನು ಕಂಡದ್ದು. ನಮ್ಮ ಮನೆಯಿಂದ ಬಹು ದೂರವಿದ್ದಿರದಿದ್ದರೂ ಈವರೆಗೆ ಅದನ್ನು ಕಾಣಬೇಕೆಂಬ ಸದಿಚ್ಛೆ ನನ್ನಲ್ಲಿ ಹುಟ್ಟಿರಲಿಲ್ಲ. ಕ್ಷಮಿಸಿರಿ ಇದು ನನ್ನ ತಪ್ಪಲ್ಲ, ನಮ್ಮವರ ತಪ್ಪು. ದರ್ಶನಪತ್ರವನ್ನು ಕಳಿಸಿದಾಗ ಡಾ. ತುಮ್ಮಕಟ್ಟಿಯವರು ಸಾದರದಿಂದ ಬರಮಾಡಿಕೊಂಡರು. ಪ್ರಾಸ್ತಾವಿಕ ಮಾತುಗಳಾದ ಮೇಲೆ ನಾನು:—

"ನಿಮ್ಮ ಕಚ್ಯೂರ್‌ಲೇಪವನ್ನು ಇಷ್ಟು ಕೊಂಡಾಡಿದರೂ ಅದರ 'ಹುಟ್ಟಿದ ಕೋಣೆ'ಯನ್ನು ಕಾಣುವುದು ಆಗಿರಲಿಲ್ಲ."

"ದೊಡ್ಡವರೆನಿಸಿಕೊಳ್ಳುವ ದೇಶದ ಉದ್ಧಾರಕರು ನತು ಈ ಹುಟ್ಟಿದ ಕೋಣೆಯನ್ನು ಮರೆತು ಮುಂದಡಿಯಿಟ್ಟು ಗದಗು ದಾಟುವಾಗ, ನೀವಂತೂ ಮಾನವರು!" ಅವರ ಬಾಯಿಂದ ಈ ಮಾತು ಬರುವಾಗ ಕಂಠವು ತುಂಬಿ ಬಂದಿದ್ದಿತು.

"ಇಂದು ನಮ್ಮವರೆಲ್ಲರಿಗೂ ಔದ್ಯೋಗಿಕಶಿಕ್ಷಣ ಬೇಕೆಂದು ಎಲ್ಲ ಮುಖಂಡರೂ ಎಲ್ಲ ಮುಖಂಡ ಪತ್ರಿಕೆಗಳೂ ಸಾರಿಸಾರಿ ಹೇಳುತ್ತಿವೆ. ಆದರೆ ಔದ್ಯೋಗಿಕ ಶಿಕ್ಷಣದ ಪದವಿಯ ಮುದ್ರೆಯನ್ನು ಪಡೆದು ಬಂದವರಿಗೆಲ್ಲ ಉದ್ಯೋಗವು ದೊರಕುತ್ತದೆಯೆಂಬ ಭರವಸೆ ಯಾರಿಗಿದೆ? ಈಗಾಗಲೆ ಔದ್ಯೋಗಿಕ ಶಿಕ್ಷಣ ಪಡೆದ ಪದವೀಧರರಿಗೆ ಪ್ರಯೋಗಶಾಲೆಯೆಂದರೆ ನೀರಿನ ಹೋಮವಾದಾಗ, Technical College ಗಳು ನಮ್ಮಲ್ಲಿ ಬೆಳೆಯಬೇಕೆಂಬುವುದೇಕೆ? ಒಬ್ಬನು ಬಟ್ಟೆಯ ಸಾಬಾಣ ಮಾಡುವುದನ್ನು ಕಲಿತು ಬಂದು, ಬಂಡವಾಳ ಹಾಕಿ ಒಂದು ಕಾರಖಾನೆ ತೆಗೆಯುವನೆನ್ನೋಣ; 'ಸನ್‌ಲಾಯಿಟ್' 'ಪಾಮೊಲಿವ್' ಮೊದಲಾದ ಸೋಪಿನ ಹೊರತು ಮತ್ತೊಂದು ಸಾಬೂನು ಉಪಯೋಗಿಸಲಿಕ್ಕಿಲ್ಲೆಂದು ಆಣೆತೊಟ್ಟು ಕೂಟವರ ಹೆಸರಿನಿಂದ ಮೋಸ ನಡೆಸಬೇಕೆ— ಆ ಕಾರಖಾನೆಯನ್ನು? ಎಷ್ಟೇ ಔದ್ಯೋಗಿಕ ವಿದ್ಯಾಲಯಗಳು ಹುಟ್ಟಿದರೂ ಪ್ರೋತ್ಸಾಹವಿಲ್ಲದಿರಲು, ಆ ಮಂದಿರಗಳೆಲ್ಲ ಮುಗಿಲ ಮಲ್ಲಿಗೆಯಂತೆಯೆ.

ಒಂದು ಕಾರಖಾನೆಯು ಏಳ್ಗೆಹೊಂದಬೇಕಾದರೆ ಮೊದಲು ಜನತೆಯ ಪ್ರೋತ್ಸಾಹ, ಸರಕಾರದ ಉತ್ತೇಜನಗಳು ಕೆಲಮಟ್ಟಿಗಾದರೂ ಬೇಕೇ ಬೇಕು. ಅದರಂತೆ ಜನತೆಯ ಉಪಯೋಗಕ್ಕೆ ತಕ್ಕುದಾಗುವಂತೆ ಸರಕುಗಳನ್ನು ಹುಟ್ಟಿಸುವುದೂ ಉದ್ಯೋಗಿಗಳ ಕರ್ತವ್ಯ. ಜನತೆಯ ಪ್ರೋತ್ಸಾಹವು ಬೇಕೆಂಬುದರಲ್ಲಿಯೂ ಒಂದು ಮರ್ಯಾದೆಯುಂಟು. ದಿನಕ್ಕೆ ನಾಲ್ಕಾಣೆ ದುಡಿಯುವ ಕೂಲಿಯು, ತನ್ನ ಹೊಟ್ಟೆ ಪಾಡಿಗೆ ಸಾಕಾಗಿ ಉಳಿಯುವ ರೊಕ್ಕದಲ್ಲಿ ತನ್ನ ಅರಿವೆಅಂಚಡಿಯನ್ನು ನೋಡಿಕೊಳ್ಳಬೇಕಾಗುವುದು. ಅಂಥವನಿಗೆ, ಎರಡಾಣೆಗೆ ಒಂದು ವಾರ ದೊರೆಯುವ ಜಪಾನಿನ ಅರಿವೆಗಿಂತ ಎಂಟಾಣೆಗೆ ದೊರೆಯುವ ಖಾದಿಯನ್ನು ಕೊಳ್ಳೆಂದು ಹೇಳಿ, ಆತನಿಂದ ಉತ್ತೇಜನವನ್ನಪೇಕ್ಷಿಸುವುದು ಜಾಣತನದ ಲಕ್ಷಣವಲ್ಲ. ಹಾಗೆಯೆ ಸ್ವದೇಶೀ ಸರಕಿಗೆ ಉತ್ತೇಜನ ದೊರೆಯಬೇಕೆಂದು, ಪರದೇಶಿಯ ಸರಕಿಗೆ ಇಮ್ಮಡಿ ಕರ ಹೇರಬೇಕೆಂದು ಬಯಸುವುದೂ ಸಯುಕ್ತಿಕವಲ್ಲ.



'ಕಚ್ಯೂರ್' ಕಾರ್ಯಾಲಯದ ಮುಂಭಾಗ

ಯಂತ್ರಾಲಯದ ಒಂದು ನೋಟ.

ಮಹಾಯುದ್ಧದ ಕಾಲದಲ್ಲಿ ದೇಶೀಯ ಕಾರಖಾನೆಗಳು ಉದಿಸಿದ್ದುದು ಜನತೆಯ–ಸರಕಾರದ ಪ್ರೋತ್ಸಾಹದಿಂದಲ್ಲ; ಆವಶ್ಯಕತೆಯ ಮೂಲಕ ! ಮುಂದೆ ೧೯೪೦ ರ ವರೆಗೆ ಸ್ವದೇಶಿಯ ಸರಕುಗಳು ಸ್ವದೇಶಾಭಿಮಾನದಿಂದ ಉಪಯೋಗಿಸಲ್ಪಡುತ್ತಿದ್ದಿರಬೇಕು; ಆದರೆ ನಿಜವಾಗಿಯೂ ಕಾರಖಾನೆಗಳ ಬೆಳೆವಣಿಗೆಯಾಗಬೇಕಾದರೆ ಮೇಲಣ ಸಾಪೇಕ್ಷತೆಗಳಾವವೂ ಸಂಪೂರ್ಣ ಸಹಾಯಕಾರಿಯಾಗವು. ಉದ್ಯೋಗವು ಬೆಳೆಯುವುದು ಭಾವನಾತತ್ತ್ವದಿಂದಲ್ಲ; ಅರ್ಥಶಾಸ್ತ್ರದ ಮೇಲಿಂದ. ಮೊದಮೊದಲು ಕೆಲವೊಂದುಮಟ್ಟಿಗೆ ಜನತೆಯ ಹಾಗೂ ಸರಕಾರದ ಪ್ರೋತ್ಸಾಹವನ್ನು ಯಾವುದೇ ಕಾರಖಾನೆಯು ಬಯಸಿದರೂ, ಜನತೆಗೆ ಉಪಯುಕ್ತವೆನಿಸುವಂತಹ ಸರಕುಗಳನ್ನು ಹುಟ್ಟಿಸುವಷ್ಟು ಸಾಮರ್ಥ್ಯವನ್ನು ಅದು ಪಡೆಯಬೇಕು. ಯಾವನೊಬ್ಬನಿಗೂ ಮೊದಲು ತನ್ನ ಊರಿನಲ್ಲಿ ಹುಟ್ಟುವ ಸರಕುಗಳನ್ನೂ, ತನ್ನ ಪ್ರಾಂತದಲ್ಲಿ ಹುಟ್ಟುವ ಸರಕುಗಳನ್ನೂ, ತನ್ನ ದೇಶದಲ್ಲಿ ಹುಟ್ಟುವ ಸರಕುಗಳನ್ನೂ ಬಳಸುವೆನೆಂಬ ಅಭಿಮಾನವು ಇದ್ದೇ ಇರಬೇಕು. ಆದರೆ ಈ ಅಭಿಮಾನದ ಮೂಲಕ ಆಗುವ ಸರಕಿನ ಮಾರಾಟದ ಲಾಭವು ಕೇವಲ ಬಂಡವಾಳಗಾರರಿಗೆ ಹೋದರೆ, ಬಂದ ಲಾಭಕ್ಕಿಂತ ಆದ ನಷ್ಟವೇ ಹೆಚ್ಚಾಗುವುದು. ಮುಖ್ಯ ಇದರ ತತ್ತ್ವವೆಂದರೆ ಪರದೇಶದ ಸರಕುಗಳ ಮಾರಾಟವನ್ನು ಸ್ಪರ್ಧಿಸುವಷ್ಟು ತ್ರಾಣ ಸ್ವದೇಶದ ಕಾರಖಾನೆಗಳಿಗೆ ಬರುವ ತನಕ ಮಾತ್ರ ಜನತೆಯ ಪ್ರೋತ್ಸಾಹ, ಸರಕಾರದ ಸಂರಕ್ಷಣೆ (Protection) ಗಳು ಮೂಲಭೂತವಾಗಿ ಬೇಕಾದುವು. '' — ಇವೇ ಮೊದಲಾದ ವಿಚಾರಗಳನ್ನು ಡಾ. ತುಮ್ಮನಕಟ್ಟಿಯವರು ತಮ್ಮ ಅನುಭವ-ಜ್ಞಾನಗಳ ಭಾಂಡಾರದಿಂದ ನೀಡಿದರು. ವಾಚಕರ ಮೆದುಳು ಈ ವಿಚಾರಗಳನ್ನು ಸೇರಿಸಿಕೊಳ್ಳಲು ಅಲ್ಲಗಳೆಯುತ್ತಿರಬೇಕು. ಮುಂದಣ ಸರಸನಿರೂಪಣೆಯ ಸವಿಗಾಗಿ ಈ ಸಾಹಸವನ್ನೂ ತಾಳಿಕೊಳ್ಳಬೇಕು ಮತ್ತೆ !

'' ಆದಿರಲಿ– (ನನಗೂ ತುಸು ಬೇಸರವೆನಿಸಿಯೆ ಮಾತು ಹೊರಳಿಸಿದೆ.) ನಿಮ್ಮ ಕಾರಖಾನೆ ಉದ್ಭವವಾಗುವುದಕ್ಕಿಂತ ಮೊದಲಿನ ಸಂದರ್ಭವನ್ನೂ ಅದರ ಹಿನ್ನಲೆಯನ್ನೂ ತುಸು ವಿವರಿಸುವಿರಾ? '' ನಾನೆಂದೆ. ಇದಕ್ಕೆ ಡಾ. ತುಮ್ಮನಕಟ್ಟಿಯವರು ನಸುವೆ ಧ್ವನಿಯನ್ನು ತಗ್ಗಿಸಿ ಸಾವಧಾನವಾಗಿ ಹೇಳಿದರು.

' ನನ್ನ ಮಾನ್ಯಮಿತ್ರರಾದ ಶ್ರೀ. **ಭೂಮರಡ್ಡಿ ಬಸಪ್ಪನವರ** ಧನಸಹಾಯವಿಲ್ಲದಲೆ ನಾನು ಈ ಪ್ರಯೋಗಶಾಲೆಯನ್ನು ಪ್ರಾರಂಭಿಸುವುದು ಸಾಧ್ಯವೇ ಇರಲಿಲ್ಲ. ಈ ನಮ್ಮ ಕಾಯಕ–ಪುರುಷನಿಗೆ ನಾನು ದೇಹವನ್ನು ಕೊಟ್ಟಿದ್ದರೆ ಅವರು ಪ್ರಾಣವನ್ನು ಕೊಟ್ಟಿದ್ದಾರೆ. ಭೂಮಿ ಅವರದು, ಬೀಜ ಅವರದು, ನೀರು ಅವರದು. ನಾನು ಬಿತ್ತಿದವ. ಅವರು ಜಮಿನುದಾರರೆಂದರೆ ನಾನು ಒಬ್ಬ ಒಕ್ಕಲಿಗ. ಇಂದಿನಂತಹ ಆರ್ಥಿಕ ದುರವಸ್ಥೆಯ ದಿನದಲ್ಲಿ ಈ ಬಗೆಯ ಸಾಹಸ ಮಾಡಿದ ಶ್ರೀ. ಭೂಮರಡ್ಡಿಯವರ ಧೈರ್ಯದ ಮುಂದೆ ನನ್ನ ಉದ್ಯಮೋತ್ಸಾಹವೆಂದರೆ ಹನುಮಂತನೊಡನೆ ನೆಗೆದ ಗುಬ್ಬಿಯಂತೆ. ''

ಶ್ರೀ. ಭೂಮರಡ್ಡಿಯವರ ಸ್ಥಿರಸ್ವಭಾವದ ಉದಾಹರಣೆಯನ್ನು ಕೇಳಿ, ನನ್ನ ಮೈನವಿರು ನೆಟ್ಟಗಾದುವು. ಶ್ರೀ. ಭೂಮರಡ್ಡಿಯವರೆಂದರೆ ಈಬಗೆಯ ವ್ಯವಸಾಯದಲ್ಲಿ ವಿಶೇಷ ಪರಿಚಯವಿಲ್ಲದವರೆಂದೇ ಹೇಳಬೇಕು. ಅವರ ಶಿಕ್ಷಣಸಿದ್ಧಿಯೂ

ಉಚ್ಚ ತರಗತಿಯದಲ್ಲ. ಅಲ್ಲದೆ ಈ ಮೊದಲೆ ಎರಡು-ಮೂರು-ಬಗೆಯ ವ್ಯವಸಾಯೋದ್ಯಮಗಳಲ್ಲಿ ದೇಹದಿಂದಲೂ ದುಡ್ಡಿನಿಂದಲೂ ಸೋತವರು; ಹೀಗಿದ್ದು ಅಪ್ರತಿಹತವಾದ ಉತ್ಸಾಹಶಕ್ತಿಯಿಂದ, ಇಂದಿಲ್ಲ ನಾಳೆಯಾದರೂ ನಮ್ಮ ಪಟ್ಟಶ್ರಮಕ್ಕೆ ಫಲವು ದೊರೆಯುವುದೆಂಬ ಆಶಾಮಾತ್ರದಿಂದ ಇಷ್ಟೊಂದು ಲಕ್ಷಾವಧಿ ಬಂಡವಾಳ ಹಾಕಲು ನಿಂತ ಕಾಲ ಮೇಲೆ ಸಿದ್ಧರಾದರೆಂದು ಕೇಳಿದರೆ ಶ್ರೀ. ಭೂಮರಡ್ಡಿಯವರು 'ಅ-ಚ-ಲ-' ಸ್ಥೈರ್ಯರೆನ್ನುವುದರಲ್ಲಿ ಅತಿಶಯೋಕ್ತಿಯೇನಿದೆ? ಡಾ. ತುಮ್ಮಿನಕಟ್ಟಿಯವರೊಡನೆ ಪರಿಚಯವಾಗಿ ಈಬಗೆಯ ವ್ಯಾವಹಾರಿಕ ಸಂಬಂಧ ಬಂದುದೇ ಇದು ಮೊದಲನೆಯ ಸಲ ಬೇರೆ! ವ್ಯವಹಾರಕ್ಕೆ ಬರೆವಣಿಗೆಯ ಕಟ್ಟಿಗಿಂತ ಇಂತಹ ನೈತಿಕ ಕಟ್ಟೇ ಇದ್ದ ಮೇಲೆ ಕೇಳುವುದೇನು? ಒಬ್ಬನ ಪ್ರಾಮಾಣಿಕತೆಯನ್ನು ಒರೆದುನೋಡುವುದಕ್ಕಾದರೂ ಸ್ವಾಭಾವಿಕವಾಗಿ ಕೆಲಮಟ್ಟಿಗೆ ಸಾಹಸ ಮಾಡಲೇ ಬೇಕು. ಅವನು ಅಪ್ರಾಮಾಣಿಕನೆಂದು ಮನಗಾಣುವುದಕ್ಕೆಯೇ ಸಾಕಷ್ಟು ಹಣವನ್ನು ಧಾರೆಯೆರೆಯಬೇಕಾಗಿ ಬರಬಹುದು. ಇಂತಹ ಸಾಹಸದಲ್ಲಿ ಶ್ರೀ. ಭೂಮರಡ್ಡಿಯವರು ಅದೆಷ್ಟೋ ಸಲ ಹಾನಿ ಹೊಳಗಾಗಿದ್ದರೂ ಡಾ. ತುಮ್ಮಿನಕಟ್ಟಿಯವರೊಡನೆ ಈ ವಿಶ್ವಾಸ ಪೂರ್ವಕ ವ್ಯವಸಾಯವನ್ನು ಕೈಕೊಳ್ಳಬೇಕಾದರೆ ಅದೇನು ಡಾ. ತುಮ್ಮಿನಕಟ್ಟಿಯವರಲ್ಲಿಯ ಮಾಯಾಶಕ್ತಿಯೊ (ಈಗ ಮಾತ್ರ ಪ್ರಾಮಾಣಿಕತೆಯ ಮೂರ್ತಿಯೆ ತುಮ್ಮಿನಕಟ್ಟಿಯವರು ಎಂಬುದು ಪ್ರಮಾಣವ್ಯಕ್ತವಾಗಿದೆ.) ಭೂಮರಡ್ಡಿಯವರ ಸಾಹಸ ಶಕ್ತಿಯೊ! ಅಥವಾ ಡಾ. ತುಮ್ಮಿನಕಟ್ಟಿಯವರು ತಮ್ಮ ವಿಶ್ವಾಸವನ್ನು ಕಾಯ್ದುಕೊಳ್ಳುವರೆಂಬ ಭವಿಷ್ಯವೇ ಶ್ರೀ. ಭೂಮರಡ್ಡಿಯವರಿಗೆ ಹೇಳಲು ಹೊಳೆಯಿತೊ! ಅವರಲ್ಲಿಯೂ ಈಗಿನ ದಿವಸದಲ್ಲಿ ಬಂಡವಾಳವನ್ನು ಹಾಕಿ ಮುಂದಾದವರ ಉದಾಹರಣೆ ತಲೆ ತುರಿಸಿಕೊಂಡರೂ ತಿಳಿದುಬರುವಂತಿಲ್ಲ. 'ಲಿಮಿಟೆಡ್ ಕಂಪನಿ' ಗಳಲ್ಲಿ ಒಂದೂ ಬದುಕಲಾರವೆ ತಕ್ಕ ಸೂತ್ರ-ಹಿಡಿತಗಳಿಲ್ಲದುದರಿಂದ ಮುಳುಗಿಹೋಗಿರುವುದೇ ಮೇಲಿನ ಮಾತಿಗೆ ಕಾರಣ. (ಲಿಮಿಟೆಡ್ ಕಂಪನಿಗಳು ತೆಂಗಿನತೋಟದಂತೆ; ಬೆಳೆದು ಬಲಿಯುವವರೆಗಷ್ಟೆ ಶ್ರಮ. ಆ ಶ್ರಮಕ್ಕೆ ತಕ್ಕ ಜಾಣತನವೂ ಬೇಕು.) ಬಂಡವಾಳವನ್ನು ಹಾಕುವುದೆಂದರೆ ಬಂಡೆಗಲ್ಲಿಗೆ ಕಾಯಿಕಪ್ಪುರ ಕೊಟ್ಟಂತೆಯೆ ಎಂದು ಮನಗಂಡ ಸಿರಿವಂತರೆಲ್ಲ ಹಿಂಜರಿಯುತ್ತಾರೆ, ಹಿಂದಣ ಅನುಭವಗಳಿಂದ. ಅದೂ ಪ್ರಸ್ತುತ ಪ್ರಯೋಗ ಮಾತ್ರಶಾಲೆಯಲ್ಲಿ ಬಂಡವಾಳ ಹಾಕುವುದಕ್ಕೆ ಮತ್ತಷ್ಟು ಧೈರ್ಯ ಬಾರದು. ಅಂತೂ ಕಚ್ಛ್ಯಾ ಕಾರಖಾನೆಯನ್ನು ಲಿಮಿಟೆಡ್ ಕಂಪನಿಯಾಗಿ ಮಾಡಿ, ಶೇರ್ (Share) ಪದ್ಧತಿಯ ಮೇಲಿಂದ ನಿರ್ವಹಿಸುವುದು ಅಸಾಧ್ಯವಾಯಿತು. ಈ ಪ್ರಯೋಗದ ಕಲ್ಪನೆಯು ಬಂಗಾರದಂತೆ ಹೊಳೆದಿದ್ದರೂ ಅವರಿಗದು ಬೆಂಕಿಯಂತೆ ಕಂಡಿರಬೇಕು. ಅಂತೆಯೆ ಶ್ರೀ. ಭೂಮರಡ್ಡಿಯವರು ತಮ್ಮ ಅಪೂರ್ವ ಸ್ಥೈರ್ಯದಿಂದ ಆದದ್ದಾಗಲಿಯೆಂದು ಒಂದು ಲಕ್ಷ ರೂಪಾಯಿ ಬಂಡವಾಳ ಹಾಕಿ, ಪ್ರಾಪ್ತಿಯ ಅರ್ಥ ಪಾಲಿನ ತತ್ತ್ವದ ಮೇಲೆ-ಇದ್ದ ಹಣವನ್ನು ರಿಝರ್ವ್ ಬ್ಯಾಂಕಿನಲ್ಲಿ ಇಡುವುದಕ್ಕಿಂತ ಈಬಗೆಯ ಉಪಯೋಗದಿಂದ ಹೆಚ್ಚಿಗೆ ಬಡ್ಡಿ ಬಿದ್ದರೆ ಹೀಗೇಕೆ ಬಳಸಿ ನೋಡಬಾರದು?—ಎಂದು ಬಗೆದು, ಕಚ್ಛ್ಯಾ ಕಾರಖಾನೆಯ ತಳಹದಿಯನ್ನೂರಿದರು. ಇದೇ ಕಚ್ಛ್ಯಾ ಕಂಪನಿಯೇ ಶುಕ್ಲಪಕ್ಷದ ವರ್ಧಿಷ್ಣು ಚಂದ್ರನಂತೆ, ಸಂಕಟಗಳ



ಹುಲಗಿಲ ಎಣ್ಣೆಯ ಸಾರಸತ್ತ್ವವನ್ನು ತೆಗೆಯುವ ಯಂತ್ರ ಸಾಮಗ್ರಿಗಳು.



" ಕಚ್ಚೂರ್ " ಟೂಥ್‌ಪೌಡರನ್ನು ತಯಾರಿಸುವ ಯಂತ್ರ



" ಕಚ್ಚೂರ್ " ಟೂಥ್‌ಪೇಸ್ಟ್ ತಯಾರಿಸುವ ಯಂತ್ರ

ಹುಟ್ಟುವಳಿಯ ವೈವಿಧ್ಯದಲ್ಲಿಯೂ ವ್ಯಾಪಾರ ವಿಸ್ತಾರದಲ್ಲಿಯೂ ಅಡಿಯಿಡಿಯಂತೆ ಮುಂದಡಿ ಇಡುತ್ತಲಿದೆ.

" ಬೆಂಗಾಲ ಕೆಮಿಕಲ್ ವರ್ಕ್ಸ್ ಇದೂ ಇಷ್ಟೊಂದು ವ್ಯಾಪ್ತಿಯನ್ನು ಒಮ್ಮೆಲೆ ಹೊಂದಲಿಲ್ಲ. ಯಾವುದೆ ಮಾನವ ಪ್ರಾಣಿಯು, ಹುಟ್ಟಿದ ಕೂಡಲೆ ಹುಲಿಯಂತೆ ಹಾರಿಹಾರಿ ನೆಗೆಯುವುದು ಸಾಧ್ಯವಿಲ್ಲವಷ್ಟೆ! ಅಂತಹ ಶಕ್ತಿ ಬರುವವರೆಗೆ ಅದಕ್ಕೆ ತಕ್ಕ ಪೋಷಣೆ ಬೇಡವೆ? ಮೇಲೆ ಹೇಳಿದ ಬಂಗಾಲ ಕಾರಖಾನೆಗಾದರೂ ಮೊದಲು ಬಂಗಾಲದವರ ಪ್ರಾಂತಾಭಿಮಾನದ ಅನ್ನ ದೊರೆಯದಿದ್ದರೆ ಅದು ಇಂದಿನಂತೆ ಉಂಡು ತೇಗುತ್ತಿರಲಿಲ್ಲ. ಯಾವುದೇ ಔಷಧದ ಸಾಮಾನನ್ನೂ ಬಂಗಾಲಿಗಳು ಬಂಗಾಲ ಕೆಮಿಕಲ್ ವರ್ಕ್ಸ್ ಬಿಟ್ಟು ಮತ್ತೊಂದೆಡೆ ಕೊಳ್ಳುತ್ತಿರಲಿಲ್ಲ. ಇದರ ತರುವಾಯ ಹುಟ್ಟಿದ **ಅಲೆಂಬಿಕ್** ಮತ್ತು **ಝಂಡು** ಫಾರ್ಮಸಿಗಳನ್ನು ಸ್ಪರ್ಧಿಸುವುದಕ್ಕಾಗಿ, ಅನೇಕ ಕಡೆ ಬಂಗಾಲದವರು ತಮ್ಮ ಶಾಖೆಗಳನ್ನು ತೆಗೆದು, ಅಲ್ಲಿಯ ಪ್ರಾಂತದವರಿಂದಲೂ ಪ್ರೋತ್ಸಾಹವನ್ನು ಪಡೆಯುತ್ತಿದ್ದರು. ಪ್ರಾಂತೀಯ ಸ್ವಾತಂತ್ರ್ಯದಿಂದ ಪ್ರಾಂತಸ್ಥ ಕಾರಖಾನೆಗಳಿಗೆ ವಿಶೇಷ ಸಹಾಯ ದೊರೆಯಲೆಂದೇ ಮೂರುವರುಷದ ಕೆಳಗೆ ಮುಂಬಯಿಯಲ್ಲಿ ತಮ್ಮದೊಂದು ಶಾಖೆಯನ್ನು ಸ್ಥಾಪಿಸಿದರು."

" ನಿಮ್ಮ ಕಚ್ಚೂರ್ ಕಂಪನಿಯು ಸ್ಥಾಪಿತವಾಗಿ ಐದುವರುಷಗಳಾದರೂ ಸಮಷ್ಟಿಸೃಷ್ಟಿಯಲ್ಲಿ ಪ್ರಮಾಣವು ಇನ್ನೂ ಏಕೆ ಬೆಳೆದಿಲ್ಲ?" ನಡುವೇ ಬಾಯಿಹಾಕಿದೆ. " ಪ್ರಮಾಣದಲ್ಲಿ ಘನತೆಯಿರದಿದ್ದರೂ ಸರಕುಗಳ ಸಂಖ್ಯೆಯಲ್ಲಿ ಸಾಕಷ್ಟು ವೈಶಾಲ್ಯ ಇದೆ. **ಕಚ್ಚೂರ್, ಹೆಮಂಗುಳ್, ಕ್ರಿಮಿಕೊಲ್, ಹೊಂಗೊಲ್** ಮೊದಲಾದುವಲ್ಲದೆ ಎಲ್ಲ ಔಷಧೀಯ ಸಾಮಾನುಗಳನ್ನು ತಯಾರಿಸುತ್ತೇವೆ. ಇನ್ನು ಎರಡೇ ತಿಂಗಳಲ್ಲಿ 'ಟೆಂಕ್ಚರ್' ಸಾಮಾನುಗಳನ್ನು ಸಹ ತಯಾರಿಸುತ್ತೇವೆ. ಸದ್ಯಕ್ಕೆ ಸಾಬೂನ ಆಗೂ (ಸಿದ್ಧತೆ) ಸುರುವಾಗಿದೆ."

" ಅಂತೂ ಬೆಂಗಾಲ ಕೆಮಿಕಲ್ಸಿನ ಮಾದರಿಯು (Mineature ಆಗಿದೆಯಲ್ಲ!"

" ಇಷ್ಟೇ—ಅಲ್ಪ ಪ್ರಮಾಣದ ಮೇಲೆ! ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಪ್ರಯತ್ನವಿನ್ನೂ ಪ್ರಯೋಗರೂಪದಲ್ಲಿಯೆ ಇದ್ದುದು. ಮೊದಲು ಕರ್ನಾಟಕದಲ್ಲಿಯೆ ಸರ್ವರೂ ನಮ್ಮನ್ನು ಪ್ರೋತ್ಸಾಹಿಸಲಿ; ಮುಂದೆ ತಾನೆ ವ್ಯಾಪ್ತಿ ಬೆಳೆದಂತೆ ನಮ್ಮ ಹುಟ್ಟುವಳಿಯ ಪ್ರಮಾಣವೂ ಬೆಳೆಯುವುದು. ಸದ್ಯಕ್ಕೆಯೆ ನಾವು ಇಷ್ಟೊಂದು ದೊಡ್ಡ ಪ್ರಮಾಣಕ್ಕೆ ಕೈಹಾಕದಿರುವುದಕ್ಕೆ ಮುಂದೆ ಒಂದು ವೇಳೆ ಮೈಮೇಲೆ ಒಂದರೂ ಆಗುವ ಹಾನಿ ಅಲ್ಪಮಟ್ಟಿಗೆ ಇರಲಿ—ಎಂಬುದೇ ಕಾರಣ. ಒಂದು ವೇಳೆ ನಮ್ಮ ಕಚ್ಚೂರ್ ಕಂಪನಿಯು ರೆಕ್ಕೆ ಮೂಳೆಯದ ಹಕ್ಕಿಯಂತೆ ಮುಗ್ಗರಿಸುವಂತಹ ಅನಾಹುತ ಪ್ರಸಂಗ ಬಂದರೂ ಅದಕ್ಕೂ ನಿದ್ದರಿಬೇಕೆಂದೇ, ವಿಶೇಷ ಹಾನಿಯಾಗಬಾರದೆಂಬ (ಇದಾಗದಿರಲಿ! ಪೂರ್ವ ತಯಾರಿಯೆಂದಲ್ಲದೆ ಬೇರಾವುದೇ ನಿಮಿತ್ತದಿಂದಲ್ಲ."

" ಆದರೆ ಈ ಐದು ವರುಷಗಳಲ್ಲಿಯ ಏರಿಕೆಯನ್ನು ನೋಡಿದ ಮಾತ್ರ, ನಿಮ್ಮ ಪೂರ್ವ ತಯಾರಿಯೇನೂ ಕಾರಣವಿಲ್ಲವೆಂದೆನಿಸುವಂತಿಲ್ಲವೆ?" ಇದಕ್ಕೆ ತಮ್ಮ ಬೆಳ್ಳಗೆಯ ಮಲ್ಲಿಗೆಯನ್ನು

ತಿರಳಿಸಿದರು ಮಾತ್ರ. (ಬೆಳ್ಳಗೆಯೆಂಬುವಲ್ಲಿ ಅರ್ಥವಿದೆ ಮಿತ್ರ, ವಾಚಕಮಿತ್ರರೆ! ಕಚರ್ಯ್ಯ ಲೇಪನದಿಂದಲೆ ಉಜ್ವಿರಬೇಕಾದ ಬಿಳಿಯಾದ ಸಾಲಾದ ಕಿರುಹಲ್ಲುಗಳ ಕಿರಣದಿಂದ ನಗೆಮುಗುಳು ಬೆಳಗಿತಾದ್ದರಿಂದ ಬೆಳ್ಳಗೆ.)

"ಮುಖ್ಯ ನಿಮ್ಮ ಕಾರಖಾನೆಯನ್ನೆ ನೋಡಲಿಲ್ಲವಲ್ಲ!" ಎಂದೆ.

"ಕಾರಖಾನೆಯ ಮೇಲೆ ಕಾವ್ಯ ಒರೆಯಬೇಕೆಂದಿದ್ದರೇನು ನೋಡುವ ಕಾರಣವಿಲ್ಲ." "ಇಲ್ಲ ನೋಡಬೇಕೆಂದಿದ್ದೇನೆ." ಅವರು ನಗುತ್ತ ಮುಂದೆ ನಡೆದರು; ನಾನೂ ಹಿಂಬಾಲಿಸಿದೆ. ಮೊದಲು ಅಚ್ಚಿನ ಮಂದಿರವನ್ನು ಪ್ರವೇಶಿಸಿದೆವು. ತಮ್ಮ ಜಾಹೀರಾತು ಮೊದಲಾದುವುಗಳಿಗಾಗಿಯೆ ಒಂದು ಅಚ್ಚಿನಯಂತ್ರ ರಿಸಿದ್ದಾರೆ. ಆದರೆ ತಮ್ಮ ಜಾಹೀರಾತುಗಳ ಪ್ರಕಟನೆಗಳಿಲ್ಲದಾಗ ಲ್ಲಿಯ ಕೂಲಿಕಾರರಿಗೆ ಉದ್ಯೋಗ ಕಲ್ಪಿಸಿಕೊಡುವುದಕ್ಕಾಗಿ ತರ ಅಚ್ಚಿನ ಕೆಲಸಗಳನ್ನು ಕೈಕೊಳ್ಳುವರು. 'ಕಾಯಕವನ್ನು ಟ್ಟಿಸುವ ಜಾಣತನ ನೋಡಿದೆಯಾ!' ಎಂದು ಕೊಂಡೆ ಮನ ಲ್ಲಿಯೆ. ಇದೊಂದೇ ಸಂದರ್ಭದಲ್ಲಿಯಲ್ಲ ಇವರು ಹೀಗೆ ದ್ಯೋಗಕ್ಕೆ ಉದ್ಯೋಗವನ್ನು ಬೆಳೆಯಿಸಿದುದು; ಉಗಿಯನ್ನು ಯಾರಿಸುವಲ್ಲಿಯೂ ತಮ್ಮ ಯಂತ್ರದ ಬಂಡವಾಳದ ಣವನ್ನು ಪೂರಯಿಸಿಕೊಳ್ಳುವುದಕ್ಕಾಗಿ, ತನಗೆ ಬೇಕಾಗುವುದ ಂತ ಹೆಚ್ಚಿಗೆ ನಿರ್ಮಲಪಡಿಸಿದ ನೀರನ್ನು (distilled water) ಯಾರಿಸಿ (ಹೀಗೆ ತಯಾರಿಸುವುದಕ್ಕೆ ವಿಶೇಷ ಶ್ರಮವೂ ಇಲ್ಲ, ಷ್ಟವೂ ಇಲ್ಲ.) ಬೇರೆ ಬೇರೆ ಸ್ಥಳಗಳಿಗೆ ಪೂರೈಸುತ್ತಿದ್ದುದು ಡೆದುಬಂದಿತು. ಬಡಿಗನಿಗೆ ಸಹ ಕಾರಖಾನೆಯ ಕೆಲಸವಿಲ್ಲದೆ ನಿರುದ್ಯೋಗಿಯಾದಾಗ ಎರಡನೆಯ ಕಡೆಯಿಂದ ಕೆಲಸ ಪೂರೈಸು ತ್ತಿದ್ದರು.

ಅಚ್ಚಿನ ಮಂದಿರವನ್ನೂ ಅಲ್ಲಿಯ ಕೆಲಸಗಾರರ ಕಾಯಕದ ಅಚ್ಚುಕಟ್ಟುತನವನ್ನೂ ನೋಡಿ, ಆನಂದಪಟ್ಟು, ಅದೇ ಸಿದ್ಧತೆ ನಡೆದಿದ್ದ ಸಾಬಾಣದ ಕಾರಖಾನೆಯ ಯಂತ್ರಗಳನ್ನು ನೋಡ ಹೋದೆವು. ಇದಾದ ಮೇಲೆ ಕಚರ್ಯ್ಯ ಲೇಪನವು ತಯಾರಿ ಯಾಗುವ ಎಲ್ಲ ಯಂತ್ರಗಳನ್ನೂ ವಿವರಸಿವರವಾಗಿ ಕಂಡೆವು. ಡಾ. ತುಮ್ಮಿನಕಟ್ಟಿಯವರು ಶಿಷ್ಯವಾತ್ಸಲ್ಯದಿಂದ ಪ್ರತಿಯೊಂದನ್ನೂ ತಿಳಿಸಿ ತಿಳಿಸಿ ಹೇಳಿದರು. ಆ ತರುವಾಯ (ಯಂತ್ರಗಳ ವಿಜ್ಞಾನ, ಪರಿಭಾಷೆಗಳು ಗೊತ್ತಿಲ್ಲ; ಕ್ಷಮಿಸಿ. ಅವನ್ನು ಹೆಚ್ಚಿಗೆ ಬಣ್ಣಿಸ ಲಾರೆ.) ವನಸ್ಪತಿಯ ಉದ್ಯಾನಕ್ಕೆ ಹೋದೆವು. ಶಿವಮೊಗ್ಗೆಯಲ್ಲಿ ಕಾಡಡವಿಯಲ್ಲಿ ಬೆಲೆಯಿಲ್ಲದೆ ಬೆಳೆವ ಹೆಮ್ಮುಗುಳನ್ನು ಇಲ್ಲಿ ಎಷ್ಟೊಂದು ಅಕ್ಕರೆಯಿಂದ ಬೆಳೆಯಿಸುತ್ತಿದ್ದಾರೆ! ಶಿವಮೊಗ್ಗೆಯ ಹೆಮ್ಮುಗುಳ ಅರಣ್ಯರೋದನವನ್ನು ಯಾರು ಕೇಳಬೇಕು? "ಹೆಮ್ಮುಗುಳಾಗಿ ಹುಟ್ಟಿದರೆ ಡಾ. ತುಮ್ಮಿನಕಟ್ಟಿಯವರ ಉದ್ಯಾನದಲ್ಲಿಯೆ ಹುಟ್ಟು ಹೇ ಹೆಮ್ಮುಗುಳೇ!" ಎಂದು ನನ್ನಷ್ಟಕ್ಕೆ ನಾನೇ ಉದ್ಗಾರ ತೆಗೆದೆ. ಆ ಮೇಲೆ ಅವರ ಔಷಧಿ ಗಳನ್ನು ತಯಾರಿಸುವ ಪ್ರಯೋಗಶಾಲೆಯನ್ನು ಕಂಡೆವು.

ತುಸು ಬೆಲೆಯ ವನಸ್ಪತಿಗಳಲ್ಲಿ, ಗುಣ ಕೊಡುವ ಮಹತ್ವದ ಔಷಧಿಗಳನ್ನು ತಯಾರಿಸಿದ್ದರು. ೧ ತಾಸಿನ ಹಿಂದೆ ಡಾ. ತುಮ್ಮಿನಕಟ್ಟಿಯವರಿಗೆ ಅಪರಿಚಿತನಾಗಿದ್ದವನು ಈಗ ನಿಕಟ ಸಂಬಂಧಿಕನಂತಾದೆ. ಅವರ ವಿನಯ-ಸೌಜನ್ಯಗಳು ನನ್ನ ಎದೆಯ



"ಕಚರ್ಯ್ಯ" ಛಾಪಿನ ಗುಳಿಗೆಗಳನ್ನು ತಯಾರಿಸುವ ಯಂತ್ರ



ನೀರನ್ನು ಪರಿಶುದ್ಧಗೊಳಿಸುವ ಯಂತ್ರ

ಮನೆಯಲ್ಲಿ ಮನೆಮಾಡಿಕೊಂಡಿವೆ. ಅವರ ಸಾದರ ಭಾವ, ಆತಿಥ್ಯಗಳು ನನ್ನ ಅಂತರಂಗದಲ್ಲಿ ನುಗ್ಗಿ ಅಂತಃಕರಣವನ್ನು ತಾಗಿದುವು. ಅವರ ಕಾಯಕಜೀವನದ ತಿರುಳನ್ನರಿತುಕೊಳ್ಳಬೇಕೆಂಬ ಕುತೂಹಲವು ಮೊಳೆತು, ಇಮ್ಮಡಿಯಿಂದ ನೂರ್ಮಡಿಯಾಯಿತು. ಸಾಮಾನ್ಯ ವನಸ್ಪತಿಗಳಾದ ಕಾಮಕಸ್ತೂರಿ, ಕರಿಯತುಳಸಿ, ಹೆಮ್ಮುಗುಳುಗಳಿಂದ ಯಾವುದೋ ಪಾಶ್ಚಾತ್ಯ ರಸಾಯನವನ್ನು ಸ್ಪರ್ಧಿಸುವಂತೆ ಔಷಧವನ್ನು ತಯಾರಿಸುವ ಅವರ ಜಾಣ್ಮೆಗೆ ತಲೆ ತೂಗಿ ಬಾಗಿಸಿದೆ.

"ನಿಮ್ಮ ಜೀವನಚರಿತವನ್ನು ಬಂದಿಸಿಸು ಹೇಳುವಿರಾ?" ನಾನು ನುಡಿದೆ.

"ಕಚ್ಚೂರ್" ಟೂಥ್‌ಪೇಸ್ಟನ್ನು ತುಂಬುವದು ಮತ್ತು ಮಾರಾಟಕ್ಕೆ ಸಿದ್ಧಗೊಳಿಸುತ್ತಿರುವದು.

"ನನ್ನ ಕಚ್ಚೂರ್ ಕಾರಖಾನೆಯೆ ನನ್ನ ಜೀವನಸರ್ವಸ್ವವಾಗಿದೆ. ನಮ್ಮ ಕಾರಖಾನೆಯ ಚರಿತವನ್ನು ಕೇಳಿದಿರಿ, ನೋಡಿದಿರಿ— ಅಲ್ಲವೆ?"

"ನಿಮ್ಮ ಶಿಕ್ಷಣಕ್ರಮವನ್ನಾದರೂ ತುಸು—" ಡಾಕ್ಟರರಿಗೂ ತುಸು ನಗೆಮೂಡಿ ಲಾಸ್ಯವಾಡಿತು.

"ಕ್ರಿ. ಶ. ೧೯೧೭ರಲ್ಲಿ ಧಾರವಾಡದ ಗವ್ಹರ್ನಮೆಂಟ್ ಹಾಯಸ್ಕೂಲಿನಿಂದ ನಾನು ಮ್ಯಾಟ್ರಿಕ್ ಪರೀಕ್ಷೆ ಪಾಸಾದೆನು. ಆಮೇಲೆ ಕರ್ನಾಟಕ ಕಾಲೇಜಿನಲ್ಲಿ ಎಫ್. ವಾಯ್. ನಲ್ಲಿ ವಿದ್ಯಾರ್ಥಿ-ವೇತನದಿಂದ ಇದ್ದೆನು. ಮುಂದೆ ಇಂಟರ್ ಪರೀಕ್ಷೆ ಪುಣೆಯ ಫರ್ಗ್ಯೂಸನ್ ಕಾಲೇಜಿನಿಂದ ಪಾಸಾದೆನು. ೧೯೨೧ರಲ್ಲಿಯೆ ನಾನು ಪರದೇಶಕ್ಕೆ ತೆರಳಿದೆ. ಒಟ್ಟಾರೆ ನಾನು ಪರದೇಶದಲ್ಲಿದ್ದುದು ಆರೂವರೆವರುಷ. ೧೯೨೪ರಲ್ಲಿ ಬಿ. ಎಸ್‌ಸಿ., ಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆಹೊಂದಿದೆನು. ಮರುವರುಷವೆ ಎಂ. ಎಸ್‌ಸಿ. ಪದವಿ ದೊರೆಯಿತು. ೧೯೨೭ ರಲ್ಲಿ ಪಿ. ಎಚ್. ಡಿ. ಪದವಿ ಸಿಕ್ಕಿತು. ಮುಂದೆ ಒಂದುವರುಷ ಅಲ್ಲಿಯೆ 'ಪ್ರಾಕ್ಟ್ ಡೇವಿಸ್ ಕೆಮಿಸ್ಟ್ರಿ ಫ್ಯಾಕ್ಟರಿ'ಯಲ್ಲಿ ಕೆಲವು ಸಂಶೋಧನಾತ್ಮಕ ಕೆಲಸಗಳನ್ನು ಕೈಕೊಂಡೆನು. ಮುಂದೆ ೧೯೨೮ರಲ್ಲಿ ಹಿಂದುಸ್ಥಾನಕ್ಕೆ ಮರಳಿ, ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯಿನ್ಸ್'ದಲ್ಲಿ ಕೆಲವುಕಾಲ ಅಧ್ಯಾಪಕನಾಗಿದ್ದೆನು. ಅದೇ ಸಮಯಕ್ಕೆ ಶ್ರೀ. ಭೂಮರಡ್ಡಿಯವರ ವಿಷಯ ತಿಳಿದು ಬಂದಿತು ಅವರೂ ನನ್ನನ್ನು ಬರಮಾಡಿಕೊಂಡರು. ನನ್ನಮೇಲೆ ವಿಶ್ವಾಸ ವಿಟ್ಟು ಈ ಕಾರ್ಯಕ್ಕೆ ಕೈಹಾಕಹೇಳಿದರು. ನಾನು ಪ್ರಾರಂಭಿಸಿದೆ ಅವರು ಒಂದೂ ವಿಷಯದಲ್ಲಿ ಅಡ್ಡ ಬರುವುದಿಲ್ಲ. ಬೇಕಷ್ಟು ಧನ ಪೂರೈಸುತ್ತಾರೆ. ನನ್ನಂತಹರು ಅನೇಕರಿರಬಹುದು, ಅವರಂತಹರು ಒಬ್ಬರೆ ಎಂದರೂ ಸಲ್ಲುವ ಮಾತಾಗಿದೆ."

ನನಗೆ ತುಂಬಿದ ಭಾವದಲ್ಲಿ ಮಾತೇ ಏಳಲಿಲ್ಲ. "ನಿಮ್ಮದು ಯಾವವೂರು?" ಎಂದೆನಷ್ಟೆ.

"ನಮ್ಮದು ರಾಣೆಬೆನ್ನೂರು. ನಾನು ಹುಟ್ಟಿದುದು ಕ್ರಿ. ಶ. ೧೮೯೯ರಲ್ಲಿ." ಡಾ. ತುಮ್ಮಿನಕಟ್ಟಿಯವರಿಗೀಗ ಮೂವತ್ತೆಂಟು ವರುಷ. ಈ ಅವಧಿಯಲ್ಲಿ ಕಾಯಕವೇ ತಮ್ಮ ಜೀವನ ಎಂಬ ಪಾಠವನ್ನು ಜಗತ್ತಿನ ಕಣ್ಣೆದುರು ಕನ್ನಡಿಯಂತೆ ಹಿಡಿದಿದ್ದಾರೆ. ಅವರದು ಆದರ್ಶಜೀವನ..............

"**ಕಾಯಕವೇ ಕೈಲಾಸ**" ಎಂದು ಬಸವಣ್ಣನವರು ನುಡಿದಿಲ್ಲವೆ?

ಆತಿಥ್ಯ

(ನಾಟ್ಯಚಿತ್ರ)

ಶ್ರೀಮಾನ್ ಕೌಜಲಗಿ ಹನುಮಂತರಾಯರು, ಎಲ್‌ಎಲ್.ಬಿ.

(ಹಳ್ಳಿಯೂರ ಸದ್ಗೃಹಸ್ಥರೊಬ್ಬರ ಮನೆ; ಅತಿಥಿಗಳೊಬ್ಬರು ಮನೆಗೆ ಬರುವರು. ಮನೆಯ ಯಜಮಾನನು ಗಡಬಡಿಸಿ ಎದ್ದು ನುಡಿಯುವನು.)

"ಅಲಲಲ! ರಾಯರ ಬರೋಣಾಯಿತೇನು?.. ಬರಬೇಕು.. ಬರಬೇಕು.. ರಾಯರs ಬರಬೇಕು! ಇದೇನು.. ಬಡವರ ಮನಿಗೆ ಭಾಗೀರಥಿ ಬಂದ್‌ಹಾಂಗ?.. ಇಲ್ಲೆ, ಇಲ್ಲೆ ಮ್ಯಾಲೆ ಕೂಡ್ರಿ ರಾಯರs! ಎಲೋ.. ಯಾರವರು..? ದಿಂಬೆಲ್ಲೆ ಅದsನೋ.., ...ತಾ, ಲಗೂನs ತಾ!..ಏನಮಾ ...ಹುಡುಗೋರು..! ಇಟ್ಟದ್ದು ...ಟ್ಟಲ್ಲೆ ಇರಗೊಡೂ ಹಾಂಗs ...ಲ್ಲ!.... ಕೂಡ್ರಿ ರಾಯರs ...ಡ್ರಿ..!ಹುಡುಗೂರ ಕಾಲಾಗ ...ಸತ್ತು ಹೋಗಿನ್ ನೋಡ್ರಿ.. ...ತ್ತು– ಹಾಸಿಗೀ ಸುರಳಿಗೆ ಸಂಬಿ ...ತುಗೊಳ್ರಿ! ಏನು?..ಚಹಾ ...ಗಬೇಕೋ, ಕಾಫೀಯೋ, ...ಾಲೋ....? ಏನುಬೇಕೂ ...ಳ್ರಿ! ಒಲ್ಲೇ ಅಂದರ ಅದೇನೂ ...ಳೂಹಾಂಗಿಲ್ಲ ....ಬಡವರ ...ನಿಗೆ ಬಂದು ಏನು ಹಾಂಗs ...ೋಗತೀರಾ?.. ನಾಳೆ ನಿಮ್ಮ ...ನೀ ಮುಂದ ನಾಲಿಗೀ ಕಿತ್ತಿ ...ೊಂಡು ಪ್ರಾಣಾ ಕೊಟ್ಟೇನು!"

"ಏ..! ಒಳಗ ಹೇಳೋ– ...ಯರಿಗೆ ಸ್ವಲ್ಪ ಸಜ್ಜಿಗೀ ...ಾಡಂತ ಹೇಳು....! ಮತ್ತ ...ಜ್ಜಿಗೀ ತುಪ್ಪದಾಗ ಕರೀಲಿಕ್ಕೆ ...ಳು..! ಇಲ್ಲದಿದ್ದರ— ಏನ ...ಳತೀ— ಅದು ಡೋಣಿಸಾಲ ...ಣ್ಣ; ನುಚ್ಚು ಕುದಿಸಿ ಇಟ್ಟೀತು..! ಸೀ ಸಜ್ಜಿಗೀ–ಅಂತ ಹೇಳು ...ತ್ತ..! ಇಲ್ನೋಡು, ಒಮ್ಮಿಗಿಲೆ ಓಡಬ್ಯಾಡ..! ಕಿವೀ ಕಿತ್ತೀನು.. ಪೂರಾ ಕೇಳಿಕೊಂಡು ಹೋಗು! ಬರೇ ಸೀ ಆದರ ಸಟ್ಟಿಗಾಗೂದಿಲ್ಲ;.. ಸ್ವಲ್ಪ ಅವಲಕ್ಕೀ ಒಗ್ಗರಣೀ ಹಾಕಲಿಕ್ಕೆ ಹೇಳು..! ಎಲೇ ಯಲ್ಲ್ಯಾ! ಗೌಡರ ಹಿತ್ತಲಾಗಿಂದs ಕರಿಬೇವು ಇಸಗೊಂಡು ಬಾರೋ– ಅವಲಕ್ಕಿಗೆ..! ಅವಲಕ್ಕಿ ಘಮಾಘಮಾ ಆಗಲಿ!.. ಚಹಾಕ್ಕ ಒಂದು ಬ್ಯಾರೇ ಎಸರಿಡಲಿಕ್ಕೆ ಹೇಳು.. ಸುಳ್ಳs ತಡಾ ಮಾಡಬ್ಯಾಡ್ರಿ!"

"ಎಲೋ— ಅಳಮಾರೀ ಗಂಡೇ! ಗಂಡಸs ನೀನು?.. 'ಸಕ್ರಿಲ್ಲಾ–ಚಹಾ ಇಲ್ಲಾ–' ಹೇಳಲಿಕ್ಕೆ ಬಂದಾನ ಅತುಗೋತ..! ಹೋಗು.. ಓಡು ಜಲ್‌ದೀ.., ಚೆನಬಸಪ್ಪನ ಅಂಗಡಿಗೆ ಹೋಗು, ನಾ ಹೇಳೇನಿ ಅಂತ್‌ಹೇಳು..! ಅತುಗೋತs ತಿರಿಗಿ ಬರಬ್ಯಾಡ! ಕಾಲುಮುರದೀನು!.. ಹಾಂಗ ಹೀಂಗ ಅಂತ ಚೆನಬಸಪ್ಪ ಅದs ಮಾತು ಹಚ್ಯಾನು.., ರಾಯರು ಬಂದು ಕೂತಾರಂತ ಹೇಳು!.. ಇಲ್ನೋಡು.. ಹಾಂಗs ನಾಲ್ಕು ಅಡಿಕೀ, ಒಂದ್ನಾಲ್ಕು ಲವಂಗ, ಒಂದು ಕಾಚಿನ ಹಳ್ಳು ಕೊಡಂತ ಹೇಳು– ಚೆನಬಸಪ್ಪಗ..! ಲಗೂ ಬಾ, ಬಿಸಲಾತ್ಯು..!"

"ಏನಂತಾರೋ ಒಳಗ..? ತುಪ್ಪಿಲ್ಲಂತ....? ಇಷ್ಟೊತ್ತು ಏನ್ ಮಾಡತಿದ್ಲು..! ಹೇಳಲಿಕ್ಕೇನಾಗಿತ್ತು– ಹುಣ್ಣಾಗಿತ್ತೇನ ಬಾಯಿಗೆ..? ತುಪ್ಪ ತೀರಿಹೋಯ್ತೇನು? ಇದs ಇಂದ ಇನ್ನೂ ಮಂಗಳವಾರ..; ಶನಿವಾರ ಸಂತೀ ದಿನ ಮೂರು ಸೇರು ಬೆಣ್ಣೀ ತಂದಿತ್ತು..; ಏನು ಎರಕೋತಾಳೋ ಏನೋ ತುಪ್ಪದಲೆ! ಎಷ್ಟು ತಂದರೂ ಈಡ ಆಗೂದಿಲ್ಲ..! ಹೋಗೋ ಮಾಮೂ;.. ಕುಲಕರ್ಣ್ಯಾರ ಮನ್ಯಾಗ ತುಪ್ಪಾ ಇಸಗೊಂಡು ಬಾ..ಸಂತೀ ದಿವಸ ಕೊಡತೀವಂತ್ ಹೇಳು! ಕೂಡ್ರಿ ರಾಯರs ತಡಾ ಆತ್ಯು! ಹತ್ತ ನಿಮಿಷದಾಗs ಚಹಾ ಆಗತsದ..: ಎಂದೂ ಬಾರದವರು.. ಹಾಂಗs ಕಳಿಸೂದು ನಮ್ಮ ಧರ್ಮs..?"

"....ಬರಬೇಕು....ಬರಬೇಕು....ರಾಯರs ಬರಬೇಕು!"

"ಏನದೂ..? ಗುರೂಗುರೂ ಸಪ್ಪಳ್ಯಾತರದು? ಸಜ್ಜಿಗೀ ಒಡೀತಾರs?.. ಬೇಶ್ ಬೇಶ್! ಇದ್ದರಿಂಥಾ ಹೆಣ್ಣು ಇರಬೇಕು..; ಲಗೂ ಆಗಲೀ ಅಂತ ಹೇಳು.. ರಾಯರು ಹಸದಿದ್ದಾರು..."

(ಒತ್ತಾಯದ ಕಣ್ಣುಸ್ಸು ತಂದುಕೊಂಡು, ಚೀರಿಸಿ ಉಗುಳಲೆಂದು ಹೊರಗೆ ಹೋದ ರಾಯರು, ಪೊಟ್ಟೆಯ ಪರವೆಯಿಲ್ಲದೆ ಊರಿನ ವರೆಗೆ ಓಟಬಿಟ್ಟರು)

ಶ್ರೀ. ಸೌ. ಕಮಲಾಬಾಯಿ ತಲಚೇರಿಕರ,
ಮಂಗಳೂರು.

ಜೀವನ ಜ್ಯೋತಿ

(ಅನುಭವ ಕಥನ)

ಮಾಲತಿಗೆ ಸುಂದರಮ್ಮನ ಪರಿಚಯ ಆದುದು ತುರಂಗದಲ್ಲಿ. ಮಾಲತಿ ತುರಂಗದಲ್ಲಿಯೋ....? ಅದೇಕೆ? ಕೈದಿಗಳಿಗೆ ಪತ್ರಗಳನ್ನು ಹಂಚುವ ಸಮಯ ಸುಂದರಮ್ಮನಿಗೆ ಅತ್ಯಂತ ದುಃಖದ ಸಮಯವಾಗಿ ಪರಿಣಮಿಸುತ್ತಿತ್ತು. ಅದೇಕೆ ಹಾಗೆ?

ನನಗೆ ಸುಂದರಮ್ಮನ ಪರಿಚಯವಾದದ್ದು ತುರಂಗದಲ್ಲಿಯೆ; ಮದ್ರಾಸ್ ಪ್ರಾಂತ್ಯದೊಳಗಿನ ತುರಂಗವಾದುದರಿಂದ, ಅಲ್ಲಿಯ ಬಹುತರ ಎಲ್ಲ ಕೈದಿಗಳು ತಮಿಳರು ಇಲ್ಲವೆ ತೆಲುಗರು. ಕರ್ನಾಟಕದ ಹೆಣ್ಣುಮಗಳೆಂದರೆ ನಾನೊಬ್ಬಳೇ. ಬೇರೆ ತುರಂಗದಿಂದ ನನ್ನನ್ನು ಅಲ್ಲಿಗೆ ಕರೆದೊಯ್ದ ದಿನ ದೀಪಾವಳಿಯ ಹಬ್ಬವಾಗಿದ್ದಿತು. ದಕ್ಷಿಣದ ಜನರಲ್ಲಿ ಉತ್ತರಕರ್ನಾಟಕದಲ್ಲಿರುವಷ್ಟು ಈ ಹಬ್ಬಕ್ಕೆ ಮಹತ್ತ್ವವಿಲ್ಲದಿದ್ದರೂ ಸವಿಯೂಟವೂ ದೀಪದ ಅಲಂಕಾರಗಳ ರೂಢಿಯೂ ಅವರಲ್ಲೂ ಇದೆ. ದೀಪಾವಳಿಯ ದಿನ ಹಾಲು-ಬೆಲ್ಲ ಸೇರಿಸಿ, ಸಾಗೂ ಅಕ್ಕಿಯ ಪಾಯಸ ಮಾಡಬೇಕೆಂದು, ತುರಂಗದಲ್ಲಿಯ ಹೆಣ್ಣುಮಕ್ಕಳೆಲ್ಲ ಸೇರಿ ಮೊದಲ ದಿನವೇ ನಿಶ್ಚಯಿಸಿದ್ದರು. ಆದರೆ, ಈ ನಿರ್ಧಾರವು ಒಂದು ಆಕಸ್ಮಿಕ ಘಟನೆಯಿಂದ ಕುಸಿದುಬಿತ್ತು, ಅಲ್ಲದೆ ಸಂತೋಷದ ಸಂಭ್ರಮದ ಬದಲು ದುಃಖದ ಮೌನದಲ್ಲಿ ನಮ್ಮ ಅಂದಿನ ಹಬ್ಬದ ದಿನವು ಕೊನೆಗಂಡಿತು.

ನನ್ನ ಪ್ರಯಾಣದ ಸಹಭಾಗಿಗಳಾಗಿದ್ದ ಪೋಲೀಸರು ನನ್ನನ್ನು ತುರಂಗದ ಮಹಾದ್ವಾರದ ತನಕ ಬಿಟ್ಟಮೇಲೆ, ಸದಸ್ಯಳನ್ನಾಗಿ ಸೇರಿಸುವ ಕ್ರಮಗಳೆಲ್ಲವೂ ಹೊರ ಕೊಠಡಿಯಲ್ಲಿ ಮುಗಿದು, ವಾರ್ಡರರನ್ನು ಕೂಡಿ ನನ್ನ ನಿಯಮಿತ ಸ್ಥಳಕ್ಕೆ ಹೋಗುವಾಗ, ರಾಜಕೀಯ ಕೈದಿಗಳ ವಿಭಾಗದಲ್ಲಿ ಸ್ವಲ್ಪ ಕೋಲಾಹಲವೆದ್ದಂತೆ ಕಂಡಿತು. ಕೈದಿಗಳು ತಂಡತಂಡವಾಗಿ ಒಳಗಿನ ಸಣ್ಣ ಗೇಟಿನ ಬಳಿಗೂ ದವಾಖಾನೆಯ ಬಳಿಗೂ ಓಡಾಡುತ್ತಲೂ, ಚಿಂತಾಕ್ರಾಂತ ಮುದ್ರೆಯಿಂದ ತಂತಮ್ಮೊಳಗೆ ಏನೇನೋ ಮಾತನಾಡುತ್ತಲೂ ಅಲ್ಲಾಡುತ್ತಿದ್ದರು. ಅಷ್ಟರಲ್ಲಿ ಹೊಸ ವ್ಯಕ್ತಿಯು ಅವರೊಳಗೆ ಬರುವುದನ್ನು ಕಂಡು, ಕೆಲವರು ನನ್ನ ಬಳಿಗೆ ಬಂದರು. ನನ್ನ ಔತ್ತರೀಯ ಪದ್ಧತಿಯ ಪೋಷಾಕನ್ನು ನೋಡಿ ಅವರಲ್ಲಿ ಸ್ವಲ್ಪ ಕುತೂಹಲ ಉತ್ಪನ್ನವಾಗಿರಬೇಕು. ಆಗ ಅವರು ತಮ್ಮ ಭಾಷೆಯಲ್ಲಿ ಹಲವು ಪ್ರಶ್ನೆಗಳನ್ನು ಕೇಳಿದರು. ನನಗೆ ಒಂದೂ ಅರ್ಥವಾಗಲಿಲ್ಲ. ಕೊನೆಗೆ ಅಲ್ಪಸ್ವಲ್ಪ ಇಂಗ್ಲಿಷ್ ಬರುತ್ತಿದ್ದವಳೊಬ್ಬಳು “ ನಿಮಗೆ ಕನ್ನಡ ಬರುತ್ತದೆಯೇನು ? ” ಎಂದು ಕೇಳಿದಳು. ನಾನು ಬರುತ್ತದೆಯೆನ್ನಲು ಕೂಡಲೆ ಅವಳು ಹೋಗಿ ಸುಂದರಮ್ಮನನ್ನು ನಾನಿದ್ದಲ್ಲಿಗೆ ಕರಕೊಂಡು ಬಂದಳು. ತನ್ನ ಭಾಷೆ ತಿಳಿಯುವವಳೊಬ್ಬಳು ದೊರೆತಳೆಂದು ಸುಂದರಮ್ಮನಿಗೆ ಬಹಳೇ ಆನಂದವಾದಂತೆ ತೋರಿತು. ನನ್ನ ಸಾಮಾನುಗಳನ್ನೆಲ್ಲ ತೋರಿಸಿದ ಕೋಣೆಯಲ್ಲಿ ಇಟ್ಟಾದ ಮೇಲೆ ನಾನು ಸುಂದರಮ್ಮನ ಕೂಡ “ ಕೈದಿಗಳಲ್ಲಿ ಕೋಲಾಹಲಕ್ಕೆ ಕಾರಣವೇನು ? ದೀಪಾವಳಿಯ ಸಲುವಾಗಿ ವಿಶೇಷವೇನಾದರೂ ಇದೆಯೋ ? ” ಎಂದು ಕೇಳಿದೆ.

“ ಛೆ, ಈವೊತ್ತು ಬೆಳಗಿನಲ್ಲಿ ಒಬ್ಬ ಖೂನಿಯ ಕೈದಿಯನ್ನು ಫಾಸಿಗೆ ಕೊಟ್ಟರು

ಎಂದು ಭಾರವಾದ ಸ್ವರದಲ್ಲಿ ಅವಳು ಉತ್ತರ ಕೊಟ್ಟಳು.

ಆ ರಾತ್ರಿ ನಾವು ದೀಪಾವಳಿಯ ದೀಪಗಳನ್ನು ಹಚ್ಚಲಿಲ್ಲ; ಏಕೆಂದರೆ ನಮ್ಮ ತುರಂಗದೊಳಗಿನ ಒಂದು ದೀಪವನ್ನು ಆ ದಿನ ನಂದಿಸಲಾಗಿತ್ತು. !

* * *

ಒಬ್ಬೊಬ್ಬ ಕೈದಿಗೆ ಒಂದೊಂದು ಕೋಣೆಯೆಂದು ಆ ತುರಂಗದ ಕ್ರಮ. ಆದರೆ, ಆಕಸ್ಮಿಕದಲ್ಲಿ ಆ ಕ್ರಮವನ್ನು ಅನುಸರಿಸುವುದು ಅಶಕ್ಯವಾಗಿತ್ತು. ಒಂದಲ್ಲಿ ಇಬ್ಬರು ಮಲಗಬೇಕಾಗಿಬಂದರೂ, ಸಂಗತಿಗಳನ್ನು ಅರಿಸುವ ಸ್ವಾತಂತ್ರ್ಯವನ್ನು ನಮಗೆ ಕೊಟ್ಟದ್ದರಿಂದ ಅಂದಿನ ಆ ಬಿಕ್ಕಟ್ಟಿನ ಪರಿಸ್ಥಿತಿಯು ನಮಗೆ ಸುಖದಾಯಕವೇ ಆಯಿತು. ತನ್ನ ಸಹವಾಸಿನಿಯಾಗಿದ್ದ ಒಬ್ಬ ತೆಲುಗು ಸ್ತ್ರೀಯನ್ನು ನನಗಾಗಿ ನಿಯಮಿಸಿದ್ದ ಕೊಠಡಿಗೆ ಹೋಗುವಂತೆ ವಿನಂತಿಮಾಡಿ, ಸುಂದರಮ್ಮನು ತನ್ನ ಕೊಠಡಿಗೆ ನಾನು ಬರುವಂತೆ ಆಗ್ರಹಪಡಿಸಿದಳು. ಇದರ ಕಾರಣವನ್ನು ಸ್ವಲ್ಪ ಹೊತ್ತಿನ ತರುವಾಯ ಅವಳೇ ನನಗೆ ಹೇಳಿದಳು, "ಮಾಲತೀಬಾಯಿ, ನೀವು ಇಲ್ಲಿಗೆ ಹೊಸದಾಗಿ ಬಂದವರು, ಪರಪ್ರಾಂತ್ಯ, ಅದು ಅಲ್ಲದೆ ತುರಂಗ" ಎಂತು ಮೆಲ್ಲಗಿನ ಸ್ವರದಲ್ಲಿ ಹೇಳಿದಳು. ಈ ಹೊತ್ತು ಫಾಸಿಗೆ ಕೊಟ್ಟ ಸ್ತ್ರೀಯ ನೆನಪಾದೊಡನೆ ಹೊಟ್ಟೆಯಲ್ಲಿ ಧಡಕ್ಕೆನ್ನುತ್ತದೆ. ನಿಜವಾಗಿ, ಮಾಲತೀಬಾಯಿ, ಇಲ್ಲಿ ರಾತ್ರಿಯಲ್ಲಿ ಚಮತ್ಕಾರಿಕ ಸ್ವರಗಳು ಕೇಳಬರುತ್ತವೆ."

ಪ್ರಯಾಣದ ದಣಿವಿದ್ದುದರಿಂದ ನಾನು ಅವಳೊಡನೆ ಹೆಚ್ಚು ಮಾತನ್ನಾಡದೆ ಬೇಗನೆ ಮಲಗಿದೆನು.

* * *

ನಾನು ಅಲ್ಲಿಗೆ ಬಂದು ಬಹಳದಿವಸಗಳಾಗಿದ್ದುವು. ಈ ಅವಧಿಯಲ್ಲಿ ನನಗೂ ಸುಂದರಮ್ಮನಿಗೂ ಪರಿಚಯವು ಬೆಳೆಯಿತು. ಪ್ರಾಯದಲ್ಲಿ ಅವಳು ನನಗಿಂತ ಎಷ್ಟೋ ಹಿರಿಯಳು. ಅವಳಿಗೆ ತೆಲುಗು ಚೆನ್ನಾಗಿ ಬರುತ್ತಿತ್ತು. ಕನ್ನಡ ಮಾತನಾಡುವಾಗ ಕೂಡ ತೆಲುಗು ಶಬ್ದಗಳು ಬಾಯಿಯಿಂದ ಬರುತ್ತಿದ್ದುವು. ಜೀವಿತದಲ್ಲಿ ಹೆಚ್ಚಿನ ದಿವಸಗಳನ್ನು ಅವಳು ಆಂಧ್ರದೇಶದಲ್ಲಿ ಕಳೆದುದೇ ಇದಕ್ಕೆ ಕಾರಣ. ಅವಳ ಗಂಡ ಪೆನುಗೊಂಡೆಯಲ್ಲಿ ಡಾಕ್ಟರಾಗಿದ್ದರು. ಅವಳಿಗೆ ಓದುಬರೆಹ ಸ್ವಲ್ಪವೂ ಬರುತ್ತಿದ್ದಿಲ್ಲ. ತುರಂಗದಲ್ಲಿರುವಾಗ, ಹಿಂದೀ ಕಲಿಯುವ ವಿಚಾರ ಬಂದು, ಅವಳು ಪಾಟಿ ಹಿಡಿದು 'ಅ ಆ' ಕಲಿಯಲಿಕ್ಕೆ ಪ್ರಾರಂಭಿಸಿದಳು. ಮಧ್ಯಮ ವಯಸ್ಕಳಾಗುವ ತನಕ, ವಿದ್ಯೆಯ ಯಾವುದೊಂದು ಸಂಸ್ಕಾರವೂ ಇಲ್ಲದ ಅವಳಿಗೆ ಶಿಕ್ಷಣವು ತೀರ ಕಷ್ಟಸಾಧ್ಯವಾಗುತ್ತಿತ್ತು. ಒಂದು ಪಾಠ ಕಲಿಯಲು ಸುಮಾರು ಒಂದು ತಿಂಗಳು ಹತ್ತುತ್ತಿತ್ತು. ಮೊದಲನೆಯ ಪಾಠ ಮುಗಿದು ಎರಡನೆಯ ಪಾಠ ಮುಗಿಸುವಷ್ಟರಲ್ಲಿ, ಮೊದಲು ಕಲಿತದ್ದು ಪೂರ್ಣ ಮರೆತು ಹೋಗುತ್ತಿತ್ತು.

"ಮಾಲತೀ, ಈಗ ಕಲಿತರೆ ನನಗೆ ವಿದ್ಯೆ ಬಂದೀತೇ? ನನ್ನ ಜನ್ಮ ಹೀಗೆಯೇ ಹೋಗುವುದಲ್ಲಾ, ನನಗೆ ಇಷ್ಟುವಯಸ್ಸಾದದ್ದು ವ್ಯರ್ಥ, ಅಕ್ಷರದ ಗುರುತಿಲ್ಲದ ಮನುಷ್ಯ ಪಶುವಿನಂತೆಯೇ ಅಲ್ಲವೇ?" ಎಂದು ಅವಳು ನಿರಾಶೆಯಿಂದ ಉದ್ಗಾರ ತೆಗೆಯುವಾಗ ನಾವೆಲ್ಲರೂ ಅವಳಿಗೆ ಸಮಾಧಾನ ಹೇಳುತ್ತಿದ್ದೆವು. ಸುಂದರಮ್ಮ ಆಗಾಗ ಉದಾಸೀನಭಾವದಿಂದ ತಮ್ಮ ಕತೆ ಹೇಳುತ್ತಿದ್ದರು.

"ನನಗೆ ಹನ್ನೆರಡನೆಯ ವರ್ಷದಲ್ಲಿ ಲಗ್ನವಾಯಿತು. ಪಾಟಿ, ಪೆನ್ಸಿಲ್ ಒಮ್ಮೆಯೂ ಕೈಯಲ್ಲಿ ಹಿಡಿದು ಗೊತ್ತಿಲ್ಲ. ವಿದ್ಯೆ ಕಲಿಯದುದರಿಂದ ಏನಾದರೂ ಕೊರತೆ ನನಗಿದೆಯೆಂಬುದು ಈ ತನಕ ನನಗೆ ಕಂಡುಬರಲಿಲ್ಲ. ಕಲಿಯಬೇಕೆಂಬ ಇಚ್ಛೆಯೂ ನನಗುಂಟಾಗಲಿಲ್ಲ. ಆದರೆ, ಈಗ ತುರಂಗಕ್ಕೆ ಬಂದ ಮೇಲೆ, ಯಾವಾಗ ನನ್ನವರಿಗೆ ಎರಡು ಸಜ್ಜಾಯ ಪತ್ರ ಬರೆಯಲಿಕ್ಕೂ ಆಗುವುದಿಲ್ಲವೆಂಬುದು ತಿಳಿಯಿತೋ ಆಗ 'ವಿದ್ಯೆ ಇಲ್ಲದ ಈ ಜನ್ಮ ವ್ಯರ್ಥ' ಎಂದು ಎನಿಸುತ್ತದೆ."

ತುರಂಗದಲ್ಲಿಯ ದಿನದಿನದ ಕಾರ್ಯಕ್ರಮವು ಭೇದವಿಲ್ಲದ ಒಂದೇಗತಿಯಿಂದ ಸಾಗುತ್ತಿತ್ತು. ಒಂದು ದಿನ ಸಂಜೆ, ಊಟ ಮುಗಿದ ನಂತರ ಕೋಣೆಗಳಿಗೆ ಬೀಗ ಹಾಕುವ "ವಾರ್ಡರ ಅಮ್ಮ"ನು ಬೀಗದ ಕೈಗೊಂಚಲು ಹಿಡಿದುಕೊಂಡು "ವಾಂಗೋ ವಾಂಗೋ (ತಮಿಳಿನಲ್ಲಿ ಬನ್ನಿ ಬನ್ನಿ ಎಂಬರ್ಥ)" ಎಂದು ಕರೆಯುವ ಮಧ್ಯದ ಸ್ವಲ್ಪ ಅವಕಾಶದಲ್ಲಿ ಅಂಗಳದಲ್ಲಿ ಅಡ್ಡಾಡುತ್ತಿರುವಾಗ, ಫಾಶಿಗೆ ಕೊಟ್ಟ ಸ್ತ್ರೀಯ ನೆನಪಾಗಿಯೇನೋ!— ಸುಂದರಮ್ಮ ಕೇಳಿದಳು: "ನಿಮಗೆ ಭೂತಪ್ರೇತಗಳ ಮೇಲೆ ನಂಬಿಕೆ ಇದೆಯೇನು?"

"ಸುಮ್ಮನೆ ಹುಚ್ಚು ಹುಚ್ಚು ವಿಚಾರ ತಲೆಗೆ ಹಚ್ಚಿಕೊಳ್ಳಬೇಡಿ!" ಎಂದು ಹೇಳಿ ನಾನು ಸಂಭಾಷಣೆಯನ್ನು ಬೇರೆ ವಿಷಯದ ಕಡೆಗೆ ತಿರುಗಿಸಲು ಯತ್ನಿಸಿದೆ.

"ನೀವು ನಂಬಲಿಕ್ಕಿಲ್ಲ, ಭೂತ ಪ್ರೇತಗಳನ್ನು; ಆದರೆ ನನಗೆ ಪೂರ್ಣ ನಂಬಿಕೆಯಿದೆ. ನನ್ನ ಯಜಮಾನರ ಮೈಮೇಲೆ

ಶ್ರೀ. ಸೌ. ಕಮಲಾಬಾಯಿ ತಲಚೇರಿಕರ್

ಒಮ್ಮೆ ಭೂತಸಂಚಾರವಾಗಿತ್ತು" ಎಂದಳು ಸುಂದರಮ್ಮ.

"ನಮ್ಮಗೇನಾದರೂ ಅಂತೀರಿ; ಅವರು ಡಾಕ್ಟರರಲ್ಲವೇನು? ಒಳ್ಳೆಯ ವಿದ್ಯಾವಂತರಿದ್ದು ಇಂತಹ ಮಾತಿನ ಮೇಲೆ ಅವರಿಗೆ ಹೇಗೆ ವಿಶ್ವಾಸ?"

"ಏನು ಹೇಳುತ್ತೀ ಮಾಲತಿ? ನಿಮ್ಮ ಪುಸ್ತಕಗಳಲ್ಲೆಲ್ಲ ಇದೆಲ್ಲಾ ಸುಳ್ಳೆಂದು ಬರೆದಿದೆಯೆ? ನಮ್ಮ ಯಜಮಾನರಿಗೆ ವಿಶ್ವಾಸ ಏನೂ ಇಲ್ಲದಿರುವುದರಿಂದಲೇ ಅವರು ತಂದೆಯ ಶ್ರಾದ್ಧ ಸಹ ಮಾಡುವುದಿಲ್ಲ. ಒಮ್ಮೆ ಪುಷ್ಯಮಾಸದ ಅಮಾವಾಸ್ಯೆಯದಿನ ಅವರ ದೇಹದಲ್ಲಿ ಭೂತಸಂಚಾರವಾಗಿತ್ತು; ಕೊನೆಗೆ ಮಂತ್ರವಾದಿಯನ್ನು ಕರೆಯಿಸಿದೆವು. ಅವನನ್ನು ನೋಡಿ ಭಯಂಕರ ಅಕಾಂಡ ತಾಂಡವ ಮಾಡಿದರು. 'ದೇಹದಲ್ಲಿ ಭೂತದ ಆವೇಶವಾದರೆ ಇದೇ ರೀತಿ ಮಾಡುತ್ತಾರೆ' ಎಂದು ಆ ಮಂತ್ರವಾದಿ ಹೇಳಿದ.

"ಉಚ್ಚಾಟನೆ ಮಾಡಿದನೇನು ಅವನು ಆ ಭೂತವನ್ನು?"

"ಎಲ್ಲಿಯದಮ್ಮಾ! ಅವರು ಬಹಳ ಕೋಲಾಹಲ ಮಾಡಿದರು. ಆ ಮೇಲೆ ಅವರ ಅಣ್ಣಾ ಆ ಮಂತ್ರವಾದಿಯನ್ನು ಓಡಿಸಿ, ಒಬ್ಬ ದಕ್ಷಿಣದೇಶದ ಪ್ರಖ್ಯಾತ ವೈದ್ಯರ ಔಷಧ ಪ್ರಾರಂಭಿಸಿದರು. ಬಳಿಕ ಮೆಲ್ಲಮೆಲ್ಲನೆ ಹೋದ ಬುದ್ಧಿಯನ್ನು ಅವರು ಪುನಃ ಸಂಪಾದಿಸಿದರು. ಆದರೆ ಈಗಲೂ ಶ್ರಾದ್ಧ ಮಾಡುವುದಿಲ್ಲ."

"ಸುಂದರಮ್ಮಾ, ನೀವೇ ಹೇಳಿರಿ; ಇಲ್ಲಿ ಭೂತವೆಲ್ಲಿಯದು ಬಂತು? ಔಷಧದಿಂದಲ್ಲವೇ ಅವರಿಗೆ ಗುಣವಾದದ್ದು?"

"ಆದರೆ, ಮಂತ್ರವಾದಿಯು ಒಂದೇ ದಿವಸದಲ್ಲಿ ಗುಣಮಾಡಿ ಬಿಡುತ್ತಿದ್ದ." ಹೀಗೆ ಹೇಳುವಾಗಿನ ಅವಳ ದೀನಮುಖಮುದ್ರೆಯನ್ನು ನೋಡಿ ನನಗೆ ಬಹಳ ಕನಿಕರವೆನಿಸಿತು.

ಮರುದಿವಸ ನಾನು ಅವರ ಊರಿನ ಒಬ್ಬ ಆಂಧ್ರಮಹಿಳೆಯೊಡನೆ ಮಾತನಾಡುತ್ತಿರುವಾಗ, ಆಕೆ ಹೀಗೆ ಹೇಳಿದಳು:

"ಸುಂದರಮ್ಮನ ಗಂಡನಿಗೆ ಹುಚ್ಚು ಹಿಡಿದಿತ್ತು; ಅದನ್ನೇ ಅವಳು 'ಭೂತಸಂಚಾರವಾಗಿತ್ತು' ಎಂದು ಹೇಳುತ್ತಾಳೆ. ಆದರೆ ನಿಜವಾಗಿಯೂ ಅದು ಹುಚ್ಚೇ! ಹುಚ್ಚು ಹಿಡಿದಾಗ, ಅವರು ದವಾಖಾನೆಯ ಸಾಮಗ್ರಿಗಳನ್ನು ಎಲ್ಲೆಲ್ಲಿಯೋ ಬೀಸಾಡಿದ್ದರು. ಸುಂದರಮ್ಮ ಆ ಸಮಯದಲ್ಲಿ ಆತ್ಮಹತ್ಯೆಯ ಪ್ರಯತ್ನವನ್ನು ಸಹ ಮಾಡಿದ್ದಳು. ಗುಣವಾದಮೇಲೆ ಅವಳ ಗಂಡ ಹೇರಳ ಹಣ ಖರ್ಚುಮಾಡಿ ಪುನಃ ದವಾಖಾನೆಯನ್ನು ತೆರೆದರು. ಆದರೆ, ಬೇಗನೆ ಸತ್ಯಾಗ್ರಹ ಚಳವಳಿಯು ಪ್ರಾರಂಭವಾಯಿತು. ಅದರಲ್ಲಿ ಅವರು ದುಮುಕಿದರು. ಈಗ ತುರಂಗದಲ್ಲಿದ್ದಾರೆ. ತಂದೆ, ತಾಯಿ ಇಬ್ಬರೂ ತುರಂಗದಲ್ಲಿದ್ದ ಸುಂದರಮ್ಮನ ಎಂಟುವರ್ಷದ ಹುಡುಗಿ ಅಜ್ಜಿಯ ಬಳಿ ಇದ್ದಾಳೆ."

ಸುಂದರಮ್ಮನು ಆಗಾಗ ಬಹಳ ದುಃಖದಲ್ಲಿಯೂ ಯೋಚನೆಯಲ್ಲಿಯೂ ಮುಳುಗಿರಲು ಕಾರಣವೇನೆಂಬುದು ಈಗ ನನಗೆ ತಿಳಿದಂತಾಯಿತು.

* * *

ಸಂಜೆಯ ಹೊತ್ತಿನಲ್ಲಿ ವಾರ್ಡರ್ ಅಮ್ಮನು ಕೈದಿಗಳಿಗೆ ಬಂದ ಪತ್ರಗಳನ್ನು ಹಂಚಿದಳು. ಮನೆಯಿಂದ ಬರುವ ಪತ್ರಗಳಿಂದ ಆನಂದವೆಷ್ಟಾಗಬಹುದೆಂಬುದನ್ನು ತಿಳಿಯಬೇಕಾದರೆ ಕೆಲವು ದಿವಸವಾದರೂ ಜೈಲಿನ ಅನುಭವ ಪಡೆಯಬೇಕು. ಬಂದ ಪತ್ರಗಳನ್ನು ಓದಿ, ತಮಗೆ ಏನೂ ಸಂಬಂಧವಿಲ್ಲದ ಇತರ ಕೈದಿಗಳಿಗೆ ಅವನ್ನು ಓದಿ ಹೇಳಿ, ಅವುಗಳಲ್ಲಿ ಬರೆದ ವೃತ್ತಾಂತಗಳನ್ನು ವಿವರಿಸಿ ಹೇಳುವುದರಲ್ಲಿ ಎಲ್ಲರೂ ಮಗ್ನರಾಗಿದ್ದರು. ಹೊರಗಣ ಜಗತ್ತಿನ ಭೇದಭಾವಗಳು ಜೇಲಿನಲ್ಲಿ ಕಂಡುಬರುತ್ತಿದ್ದಿಲ್ಲ. ನಾವೆಲ್ಲರೂ ಒಂದೆ ಮನೆಯವರಂತೆ ಇರುತ್ತಿದ್ದೆವು. ಪತ್ರಗಳನ್ನು ಕೈದಿಗಳಿಗೆ ಹಂಚುವ ಸಮಯವು ಸುಂದರಮ್ಮನಿಗೆ ಅತ್ಯಂತ ದುಃಖದ ಸಮಯವಾಗಿ ಪರಿಣಮಿಸುತ್ತಿತ್ತು. ಜೇಲಿಗೆ ಬಂದ ಮೇಲೆ ಅವಳಿಗೆ ಒಂದೇ ಒಂದೂ ಪತ್ರ ಬಂದಿರಲಿಲ್ಲ. ಪತ್ರಗಳ ಕಟ್ಟನ್ನು ತಕೊಂಡು ವಾರ್ಡರ್ ಅಮ್ಮನು ಬರುವುದನ್ನು ಕಂಡೊಡನೆ ಅವಳು ಕಣ್ಣೀರು ಸುರಿಸುತ್ತಾ ತನ್ನ ಕೊಠಡಿಯ ಕಡೆಗೆ ಹೋದಳು. ಆದರೆ ಪತ್ರಗಳನ್ನು ಓದುವುದರಲ್ಲಿ ಮಗ್ನರಾದ ಪ್ರತಿಯೊಬ್ಬರೂ ಅವಳ ಕೊಠಡಿಯ ಕಡೆಗೆ ಹೋಗಿ, ಅವಳನ್ನು ಸಮಾಧಾನಪಡಿಸಲು ಎರಡು ಮಾತು ಆಡದೆ ಇರಲಿಲ್ಲ. ಆದರೆ ಸಹಾನುಭೂತಿಯ ಮಾತುಗಳು ಅವಳ ದುಃಖವನ್ನು ಇನ್ನೂ ಹೆಚ್ಚಿಸಿದ್ದವು. ಅವಳು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಸುಂದರಮ್ಮನ ಗಂಡ ಅದೇ ಊರಿನ ಗಂಡಸರ ಜೇಲಿನಲ್ಲಿದ್ದರು. ಭೌಗೋಲಿಕ ದೃಷ್ಟಿಯಿಂದ ಎರಡು ಜೈಲುಗಳ ಅಂತರವು ಇನ್ನೂರು ಗಜಮಾತ್ರವಿದ್ದರೂ, ಕೈದಿಗಳ ದೃಷ್ಟಿಯಿಂದ ಅದು ದಾಟಲಸಾಧ್ಯವಾದ ಮಹಾಸಾಗರವೇ ಆಗಿತ್ತು. 'ಬ' ವರ್ಗದ ಕೈದಿಗಳಾದ ನಮಗೆ ತಿಂಗಳಿಗೊಂದರಂತೆ ಪತ್ರ ಬರೆಯುವುದಕ್ಕೆ ಅನುಮತಿ ಇತ್ತು. ಆದರೆ ಒಂದು ಜೇಲಿನಿಂದ ಇನ್ನೊಂದು ಜೇಲಿಗೆ ಪತ್ರಬರೆಯಬಾರದೆಂಬ ನಿಯಮವಿದ್ದುದರಿಂದ, ಇನ್ನೂರು ಗಜದ ಅಂತರದೊಳಗಿರುವ ಗಂಡಹೆಂಡಿರಿಗೆ ಒಬ್ಬರ ವರ್ತಮಾನ ಇನ್ನೊಬ್ಬರಿಗೆ ತಿಳಿಯುವುದು ಅಶಕ್ಯವಿತ್ತು. ಯಾವ ರೀತಿಯಲ್ಲಿಯೂ ಸುದ್ದಿಯನ್ನು ಕಳಿಸುವುದಕ್ಕೆ ಸಾಧ್ಯವೇ ಇದ್ದಿಲ್ಲ.

ಸುಂದರಮ್ಮನ ತಾಯಿಯು ಊರಲ್ಲಿದ್ದಳು. ಆದರೆ, ಅವಳಿಗೇನು ಗೊತ್ತು- "ಜೇಲಿನಲ್ಲಿ ತಿಂಡಿತೀರ್ಥಕ್ಕಿಂತ ತನ್ನವರಿಂದ ಎರಡು ಪಂಕ್ತಿಯ ಪತ್ರ ಬಂದರೆ, ಅದರ ಮೇಲೆಯೇ ತಿಂಗಳತನಕ ಜೀವಿಸಬಹುದು ಎಂದು! ಇಲ್ಲದಿದ್ದರೆ- ಮಾತೃಹೃದಯ, ಬೇರೆಯವರ ಕಾಲುಹಿಡಿದಾದರೂ ಮಗಳಿಗೆ ಮೊಮ್ಮಗಳ ಕುಶಲವಾರ್ತೆಯನ್ನು ತಿಳುಹಲು ಪತ್ರಬರೆಯಿಸದೆ ಇರುತ್ತಿದ್ದಳೇ?

ಸುಂದರಮ್ಮನಿಗೆ ಮನೆಯ ನೆನಪಾಗದಂತೆ ನಾವು ನಮ್ಮ ಕೈಲಾದಷ್ಟು ಪ್ರಯತ್ನ ಮಾಡುತ್ತಿದ್ದೆವು. ಆದರೆ ಅದು ಎಂದೂ ಸಫಲವಾಗುತ್ತಿದ್ದಿಲ್ಲ. 'ಇಲ್ಲ, ಮಾಲತಿ, ನನಗೆ ಮನೆಯ ನೆನಪನ್ನು ಮರೆಯಲು ಸಾಧ್ಯವಿಲ್ಲ. ನನಗೆ ಹೊರಗಣ ಜಗತ್ತಿನ

ಪರಿಚಯವಾದದ್ದೇ ಇಲ್ಲಿಗೆ ಬಂದ ನಂತರ. ಅದರೊಡನೆ ನನ್ನತನ (ಆತ್ಮೀಯತೆ) ಇಷ್ಟು ಬೇಗನೆ ಹ್ಯಾಗೆ ಹೊಂದಬೇಕು?

ನನ್ನ ಲೀಲೆಯು ನಾನು ಹೊರಡುವಾಗ ಶಾಲೆಗೆ ಹೋಗಿದ್ದಳು. ಪಾಪ, ಮನೆಗೆ ಬಂದ ಮೇಲೆ ಕಳವಳಗೊಂಡು ಎಷ್ಟು ಅತ್ತಳೊ! 'ಮಗಳ ಮಾಯೆಯನ್ನು ಮುರಿದುಹೋಗುತ್ತೀಯೇನು? ಎಷ್ಟು ನಿಷ್ಠುರಳಮ್ಮಾ ನೀನು?' ಎಂದು ನನ್ನ ತಾಯಿ ಆಗ ಹೇಳಿದ ಶಬ್ದಗಳು ಈಗಲೂ ಮನದಲ್ಲಿ ಪ್ರತಿಧ್ವನಿಗೊಡುತ್ತಿವೆ. ಮಾಲತಿ, ಮನೆಯ ಹೊರಗಿನ ಯಾವುದಾದರೂ ಸತ್ಕಾರ್ಯದಲ್ಲಿ ಮನಸ್ಸನ್ನು ಇಡಲು ಏನು ಮಾಡಲಿ ನಾನು?"

* * *

ನಮ್ಮ ಜೇಲಿನಿಂದ ಕಾಣುವ ದೃಶ್ಯವು ಬಹಳ ಮನೋಹರವಾಗಿತ್ತು. ಮದರಾಸು ಪ್ರಾಂತ್ಯದ ಯಾವತ್ತೂ ಸ್ತ್ರೀಕೈದಿಗಳು ಬರುವ ಮಧ್ಯವರ್ತಿ ತುರಂಗವಾದುದರಿಂದ ಅದರ ನಿವೇಶನಕ್ಷೇತ್ರವು ಬಹಳ ದೊಡ್ಡದಿತ್ತು. ಎರಡು ಕಡೆಗಳಲ್ಲಿ ಕೊಠಡಿಗಳ ಸಾಲು; ಒಂದು ಕಡೆಯಲ್ಲಿ ಆಫೀಸು ಹಾಗೂ ದೊಡ್ಡ ಹೆಬ್ಬಾಗಿಲು. ನಾಲ್ಕನೆಯ ಕಡೆಯಲ್ಲಿ ಜೇಲು ಆಸ್ಪತ್ರೆ ಇದ್ದು, ನಡುವೆ ವಿಸ್ತಾರವಾದ ಬಯಲಿದ್ದಿತು. ಅಲ್ಲಿ ನಾವು ಸಂಜೆಯ ಹೊತ್ತು ಯಾವಾಗಲೂ ಅಡ್ಡಾಡುತ್ತಿದ್ದೆವು. ಸುತ್ತಲಿನ ಪ್ರಾಕಾರದ ಗೋಡೆ, ಕೊಠಡಿಗಳ ಸಾಲು ಇವುಗಳಿಂದ ನಮ್ಮ ಮನಸ್ಸಿಗೆ ಒಡೆದು ಕಾಣಿಸುವ ಬಂಧನದ ಅರಿವು, ದೂರದಲ್ಲಿ ತೋರುವ ಗುಡ್ಡವನ್ನೂ ಮೇಲೆ ಕಾಣುವ ಶುಭ್ರ ಆಕಾಶವನ್ನೂ ನೋಡಿ ಮರೆಯಾಗುತ್ತಿತ್ತು, ಆದರೆ ಕೆಲವು ಸಾರೆ ವಿರೋಧಾಭಾಸದಿಂದ ಅದರ ತೀಕ್ಷ್ಣತೆಯು ಇನ್ನಷ್ಟು ಹೆಚ್ಚಾಗಿರುತ್ತಿತ್ತು. ಮುಳುಗುವ ಸೂರ್ಯನ ಹೊಂಬಣ್ಣದ ಕಿರಣಗಳು ಆ ಗುಡ್ಡದಲ್ಲಿಯ ವೃಕ್ಷಗಳ ಮೇಲೆ ಬೀಳುವಾಗ, ಪಕ್ಷಿಗಳಂತೆ ಹಾರಿ ಹೋಗಿ ಆ ವೃಕ್ಷಗಳ ಮೇಲೆ ಕೂಡಬೇಕೆಂದು ನಮಗೆ ಅನಿಸುತ್ತಿತ್ತು. ನಮ್ಮಲ್ಲಿ ಸೃಷ್ಟಿಯ ಸೊಬಗನ್ನು ನೋಡಿ ಆನಂದಿಸುವ ಕವಯಿತ್ರಿಯರೂ ಚಿತ್ರಲೇಖಕರೂ ಯಾರೂ ಇರಲಿಲ್ಲ. ನಾವು ಇದಕ್ಕಿಂತ ಮೊದಲು ಎಷ್ಟೋ ಗುಡ್ಡಗಳನ್ನು ನೋಡಿದ್ದರೂ ಈ ಗುಡ್ಡವನ್ನು ನೋಡಿದಾಗ ಮಾತ್ರ "ಈ ಗುಡ್ಡದ ಶಿಖರದ ಮೇಲೆ ಹೋಗಿ ಸೃಷ್ಟಿಯ ಸೌಂದರ್ಯ ನೋಡಬೇಕು; ನಾನು ಬಿಡುಗಡೆಯಾದ ನಂತರ ಮೊದಲು ಅಲ್ಲಿಗೆ ಹೋಗುವೆನು." ಎಂಬ ಶಬ್ದಗಳು ಪ್ರತಿಯೊಬ್ಬರ ಬಾಯಿಂದಲೂ ಬರುತ್ತಿದ್ದುವು. ನಮ್ಮ ಪಾರತಂತ್ರ್ಯದಿಂದ ಮುಕ್ತರಾಗಿ ಸ್ವಾತಂತ್ರ್ಯದ ಶಿಖರವನ್ನು ನಾವು ಮುಟ್ಟುವುದೆಂದು— ಎಂಬ ವಿಚಾರಗಳು ನನ್ನ ಮನಸ್ಸಿನಲ್ಲೂ ಆಗಾಗ ಬರುತ್ತಿದ್ದುವು. ಆ ಗುಡ್ಡದ ಮೇಲೆ ತರತರದ ಉಡುಪನ್ನು ಧರಿಸಿ, ಸ್ತ್ರೀಪುರುಷರೂ ಮಕ್ಕಳೂ ಸಂಧ್ಯಾಕಾಲದಲ್ಲಿ ವಿಹರಿಸುತ್ತಿದ್ದರು. ನಾಲ್ಕು ಗೋಡೆಗಳ ಮಧ್ಯೆ ನಮ್ಮ ಶರೀರವನ್ನು ಬಂಧಿಸಿದ್ದರೂ ಗುಡ್ಡದ ಮೇಲೆ ಸ್ವಚ್ಛಂದವಾಗಿ ತಿರುಗಾಡುವವರ ಸ್ಥಳದಲ್ಲಿ ನಮ್ಮನ್ನು ಕಲ್ಪಿಸಿಕೊಂಡು, ಕ್ಷಣಮಾತ್ರ ಸ್ವಾತಂತ್ರ್ಯದ ಸುಖವನ್ನು ಮನೋಭೂಮಿಯಲ್ಲಿ ಅನುಭವಿಸುತ್ತಿದ್ದಾಗ, ವಾರ್ಡರರ "ವಾಂಗೊ ವಾಂಗೊ" ಎಂಬ ಕರ್ಕಶ ಧ್ವನಿಯು ಕಲ್ಪನಾಸಾಮ್ರಾಜ್ಯದ ಸ್ವಾತಂತ್ರ್ಯವನ್ನು ಮಣ್ಣುಗೂಡಿಸುತ್ತಿತ್ತು. ಆ ಧ್ವನಿಯನ್ನು ಕೇಳಿದೊಡನೆ ಧಾನ್ಯ ಹೆಕ್ಕಿ ತಿನ್ನಲು ಹೊರಗೆ ಬಿಟ್ಟ ಹಕ್ಕಿಗಳನ್ನು, ಧನಿಯು ಗೂಡಿನೊಳಗೆ ಹಾಕಲು ಕರೆಯುವಂತೆ ನಮ್ಮೆಲ್ಲರಿಗೆ ಭಾಸವಾಗುತ್ತಿತ್ತು. ನಾವು ಕೂಡ ದೂರದ ಗುಡ್ಡಕ್ಕೆ ಹಾರಿ ಹೋದ ಮನಸ್ಸನ್ನು ಹಿಂದಕ್ಕೆ ಕರೆದು ದೇಹಪಂಜರದಲ್ಲಿ ಕೂಡಿಸಿ, ನಮ್ಮ ನಮ್ಮ ಕೋಣೆಗಳಿಗೆ ಹೋಗುತ್ತಿದ್ದೆವು. ವಾರ್ಡರರು ಹೊರಗಿನ ಬೀಗ ಇಕ್ಕುತ್ತಿದ್ದರು.

ಒಂದು ದಿನ ಎಂದಿನಂತೆ ನಮ್ಮನ್ನು ಕೋಣೆಯಲ್ಲಿ ಸೇರಿಸಿದ ನಂತರ ಬಾಗಿಲಿನ ಸರಳಿಗೆ ಹೊರಗಿನಿಂದ ಕಟ್ಟಲ್ಪಟ್ಟ (ಜೈಲು ನಿಯಮದಂತೆ ಕಂದೀಲು ಕೋಣೆಯ ಒಳಗಿರಬಾರದು.) ಕಂದೀಲಿನ ಅಲ್ಪ ಬೆಳಕಿನಲ್ಲಿ ಸುಂದರಮ್ಮನು "ಮೈ—ಮೈ, ಪ—ಪ ಪಥ ರ—ಹೀ ರಹೀ ಮೈ ಪಥ ರಹೀ ಹುಂ; ತುಂ—ಪಥ—ಅ—ತೇ ತುಂ ಪಥತೇಹೋ" ಎಂದು ಒದರುತ್ತಾ ಹಿಂದೀ ಅಭ್ಯಾಸ ನಡೆಯಿಸಿದ್ದಳು. ನನಗೆ ತಲೆನೋವು ಇದ್ದುದರಿಂದ ಬೇಗನೆ ಮಲಗಿದೆ; ಆದರೆ ನಿದ್ದೆ ಹತ್ತಲಿಲ್ಲ. ಮನೆಯವರ ನೆನಪಾಯಿತು. ವಾರ್ಡರಳು ಗಂಟೆ ಹೊಡೆದಳು. ಆಗಲೇ ದೂರದಿಂದ ಉಗಿಬಂಡಿಯ ಸಿಳ್ಳು ಕೇಳಿಸಿತು. ರಾತ್ರಿಯ ಶಾಂತ ವಾತಾವರಣದಲ್ಲಿ 'ಮನೆಗೆ ಹೋಗೋಣ, ಬಾ' ಎಂದು ಅದು ಕರೆವಂತೆ ನನಗೆ ಭಾಸವಾಯಿತು. "ಈ ಉಗಿಬಂಡಿಯು ಆತುರತೆಯಿಂದ ಕಾತರರಾದ ಎಷ್ಟು ಜೀವಿಗಳ ಭೆಟ್ಟಿಯನ್ನು ಮಾಡಿಸುತ್ತಿರಬಹುದು! ಇದೇ ಬಂಡಿಯಿಂದಲ್ಲವೇ ನನ್ನನ್ನು ಮನೆಯಿಂದ ಇಷ್ಟು ದೂರ ತಂದದ್ದು? ಇನ್ನು ನಾನು ಇದೇ ಬಂಡಿಯಿಂದಲ್ಲವೇ, ನನ್ನವರ ಬಳಿಗೆ ಹೋಗುವೆನು! ನನ್ನ ಪ್ರಿಯತಮನ ಭೆಟ್ಟಿಯ ಆನಂದವು ಪುನಃ ದೊರೆತಾಗ, ಈ ಕರಿಯ ಹೆಬ್ಬಾಗಿಲಿನ ಹಿಂದೆ ಬಂಧಿಸಲ್ಪಟ್ಟ ಸೋದರಿಯರ ನೆನಪಾದೀತೆ?" ಇತ್ಯಾದಿ ವಿಚಾರಗಳಲ್ಲಿ ಮಗ್ನಳಾದ ನನ್ನ ಕಣ್ಣಿನಲ್ಲಿ, ನನಗೆ ತಿಳಿಯದೆಯೆ ನೀರು ಹರಿಯಲಾರಂಭಿಸಿತು. ಸುಂದರಮ್ಮನ ಓದು ಥಕ್ಕನೆ ನಿಂತಿತು.

"ಮಾಲತೀ, ಏನಿದು? ಮುಖ ನೋಡೋಣ! ನನಗೆ ಯಾವಾಗಲೂ ಧೈರ್ಯಕೊಡುವವಳು ನೀನು! ಈವೊತ್ತು ಇದೇನು ಹೀಗೆ? ನಿನ್ನ ಬಿಡುಗಡೆಗೆ ಎರಡು ತಿಂಗಳು ಮಾತ್ರ ಇದೆ. ನೀನು ಹೀಗೆ ಮಾಡಿದರೆ ಆಜನ್ಮ ಶಿಕ್ಷೆಯಾದವರು ಏನು ಮಾಡಬೇಕು? ಅವರಿಗೆ ಸಾಯುವ ಮೊದಲು ಒಮ್ಮೆಯಾದರೂ ಮನೆಯವರನ್ನು ನೋಡೇವೆಂಬ ಆಶೆ ಇದೆಯೆ?" ಇದನ್ನು ಕೇಳಿ ನನಗೆ ನಿಜವಾಗಿಯೂ ನಾಚಿಕೆಯೆನಿಸಿತು. "ಪರ್ವತದಷ್ಟೆಂದು ತೋರುವ ನನ್ನ ದುಃಖವು, ಅವರ ದುಃಖದೊಡನೆ ಹೋಲಿಸಿದರೆ ಒಂದು ಸಾಸಿವೆ ಕಾಳಿನಷ್ಟೆ!

* * *

ನನ್ನ ಬಿಡುಗಡೆಗೆ ಸ್ವಲ್ಪ ದಿವಸಗಳು ಉಳಿದಿದ್ದುವು. ಅಷ್ಟರಲ್ಲಿ ವಿಶೇಷಸಂಗತಿಯೊಂದು ನಡೆಯಿತು. ನಮ್ಮ ಜೇಲಿಗೆ ಯುರೋಪಿಯನ್ ಸ್ತ್ರೀಯೊಬ್ಬಳು

ರಾಜಕೀಯ ಕೈದಿಯಾಗಿ ಬಂದಳು. ಅವಳು ಯಾವಾಗಲೂ ನಮಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ತನ್ನ ಅನುಭವದ ವಿಷಯಗಳನ್ನು ಹೇಳುತ್ತಿದ್ದಳು. ಶಾಲಾ–ಕಾಲೇಜುಗಳ ಶಿಕ್ಷಣದಲ್ಲಿ ಹಾಗೂ ಕೇವಲ ಪುಸ್ತಕ ವಾಚನದಲ್ಲಿ ಸಿಕ್ಕಲಾರದ ಜ್ಞಾನವು ಅವಳು ಹೇಳುವ ಸ್ವಾನುಭವದ ಕಥೆಗಳಲ್ಲಿ ನಮಗೆ ಸಿಕ್ಕಿದುವು; ಅವು ಮನೋರಂಜಕ ಮಾತ್ರವಲ್ಲ; ಬೋಧಪ್ರದವೂ ಆಗಿದ್ದುವು. ರಾತ್ರಿಯಲ್ಲಿ ಕೋಣೆಗೆ ಬಂದ ನಂತರ ನಾನು ಅವುಗಳನ್ನು ಸುಂದರಮ್ಮನಿಗೆ ಕನ್ನಡದಲ್ಲಿ ಹೇಳುತ್ತಾ ಇದ್ದೆನು. ಅವಳಿಗೆ ಅವನ್ನು ತಿಳಿಸಬೇಕಾದರೆ, ಯುರೋಪ್ ಎಂದರೇನು ಎಂಬಲ್ಲಿಂದ ಪ್ರಾರಂಭಿಸಬೇಕಾಗುತ್ತಿತ್ತು. ನಮ್ಮ ಮಾತು ಅಶಿಕ್ಷಿತರಿಗೆ ತಿಳಿಯಲು ಎಷ್ಟು ಕಠಿನವಾಗುತ್ತದೆಂಬುದೂ, ಅವರಿಗೆ ತಿಳಿಯುವಂತೆ ಹೇಳುವುದು ನಮಗೆ ಎಷ್ಟು ಪ್ರಯಾಸಕರವೆಂಬುದೂ ಆಗ ನನಗೆ ತಿಳಿಯಿತು. ನಗರಗಳಲ್ಲಿ ಕೂತು "ಹಳ್ಳಿಗರ ಸುಧಾರಣೆ" ಎಂಬ ವಿಷಯದಲ್ಲಿ ಉದಾತ್ತ ಭಾಷಣ ಕೊಡುವ ನಮ್ಮ ಮುಂದಾಳುಗಳು, ನಿಜವಾಗಿ ಹಳ್ಳಿಗರಲ್ಲಿ ಬೆರೆತುಕೊಂಡು ಕೆಲಸ ಮಾಡಲು ಹೊರಟರೆ ಎಷ್ಟು ಒಳಿತಾಗುತ್ತಿತ್ತು! 'ದೇಶಸೇವಕನು ಪಡೆಯಬೇಕಾದ ಪ್ರಥಮ ಶಿಕ್ಷಣವೆಂದರೆ ಹಳ್ಳಿಗರಿಗೆ ತಿಳಿಯುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಲು ಕಲಿಯುವುದು!" ಎಂಬ ಮಾತಿನ ಅನುಭವ ಅಂದು ನನಗೆ ಆಯಿತು.

* * *

ನನ್ನ ಬಿಡುಗಡೆಗೆ ಕೆಲವೇ ದಿವಸಗಳು ಉಳಿದಿದ್ದುವು. ಆಗಿನ ನನ್ನ ಮನಃಸ್ಥಿತಿಯು ತವರುಮನೆಗೆ ಬಂದು ಹಿಂತಿರುಗುವ ತರುಣಿಯ ಸ್ಥಿತಿಯಂತಿತ್ತು. ಒಂದೆಡೆ ಪ್ರಿಯತಮನನ್ನು ಕಾಣುವ ಉತ್ಸುಕತೆಯ ಆನಂದ; ಇನ್ನೊಂದೆಡೆ ಪರಿಚಿತ ಗೆಳತಿಯರನ್ನು ಅಗಲುವ ದುಃಖ. ಒಂದು ವರ್ಷದಿಂದಲೂ ಆಟ, ಪಾಠ, ಊಟ ಇತ್ಯಾದಿ ಎಲ್ಲ ಕಾರ್ಯಗಳಲ್ಲಿ ಸರ್ವವಿಧದಿಂದ ಸಮಭಾಗಿಯಾಗಿದ್ದವರನ್ನು ಬೀಳ್ಕೊಳ್ಳುವಾಗ, ಯಾವ ಕಲ್ಲೆದೆಯೂ ಕರಗದೆ ಇರಲಾರದು. ಅಲ್ಲದೆ ಅವರನ್ನು ಪುನಃ ಕಾಣುವ ಸಂದರ್ಭಗಳು ಸಿಗುವಂತೆಯೇ ಇದ್ದಿಲ್ಲ. ನಾನು ಆಂಧ್ರ, ತಮಿಳು ನಾಡಿಗೆ ಹೋಗುವುದಾಗಲಿ, ಅವರು ಕರ್ನಾಟಕ ಮಹಾರಾಷ್ಟ್ರಗಳಿಗೆ ಬರುವುದಾಗಲಿ ದುರ್ಲಭವೇ ಆಗಿತ್ತು.

ಇಂದು ದಶಂಬರ ೩೧ನೆಯ ತಾರೀಖಿನ ದಿನ. ಮರುದಿನ ನನ್ನ ಬಿಡುಗಡೆಯಾಗುವುದಿತ್ತು. ಆ ದಿನ ಸಂಜೆ, ಮೇಲೆ ಹೇಳಿದ ಯುರೋಪಿಯನ್ ಮಹಿಳೆಯ ಸುತ್ತಲೂ ನಾವೆಲ್ಲರೂ ಕೂಡಿದ್ದೆವು. ನನ್ನ ಪಾಲಿಗೆ ಅಂದಿನದು ಅವಳ ಕೊನೆಯ ವ್ಯಾಖ್ಯಾನ. ವರ್ತಮಾನಪತ್ರದಿಂದ ಒಂದು ತಲೆಬರೆಹವನ್ನು (head line) ಅವಳು ಓದಿ ಹೇಳಿದಳು: "ಒಬ್ಬ ತರುಣ ಸ್ತ್ರೀಯು ಆತ್ಮಹತ್ಯೆ ಮಾಡಿಕೊಂಡಳು. ಕಾರಣವು ತಿಳಿದಿಲ್ಲ." ಇದನ್ನು ಓದಿದೊಡನೆ ಅವಳ ಮುಖ–ಮುದ್ರೆಯು ಗಂಭೀರವಾಯಿತು. ತನ್ನ ಖೋಲಿಗೆ ಹೋಗಿ ಅವಳು ಒಂದು ರೋಜನಿಸಿ (diary) ಯನ್ನು ತಕ್ಕೊಂಡು ಬಂದು ಒಂದು ಹಾಳೆಯನ್ನು ಓದಲು ತೊಡಗಿದಳು:

"ಒಂದಲ್ಲ ಇನ್ನೊಂದು ರೀತಿಯ ಆಶಾಭಂಗದಿಂದಾಗಿ ಎಷ್ಟು ಜೀವಗಳು ಆತ್ಮಹತ್ಯೆಯಿಂದ ಅಂತ್ಯಗೊಂಡಿರಬಹುದು? ಯಾರಿಗೆ ಜೀವವೇ ಬೇಡವೆನಿಸುತ್ತದೊ ಅಂಥವರು ಅದನ್ನು ಇತರ ದುಃಖಿತರ ಸೇವೆಯಲ್ಲಿ ಸವೆಯಿಸಿದರೆ ಆತ್ಮಹತ್ಯೆಯಿಂದ ಕೂಡ ಶಾಂತವಾಗಲಸಾಧ್ಯವಾದ ಅವರ ಜೀವದ ತಳಮಳವು ಲೋಕಸೇವೆಯಲ್ಲಾದರೂ ಶಾಂತವಾಗುವುದೆಂದು ನಿಮಗೆ ಎನಿಸುವುದಿಲ್ಲವೇ?" ಆಕೆ ಮುಂದೆ ಹೇಳಿದಳು:

ನನಗೆ ಕೆಲವು ವರ್ಷಗಳ ಹಿಂದೆ ಆಗಿಹೋದ ಒಂದು ಸಂಗತಿಯು ನೆನಪು ಆಯಿತು. ಆಗ ನಾನು ಒಂದು ಶಾಲೆಯ ಮುಖ್ಯ ಅಧ್ಯಾಪಿಕೆಯಾಗಿದ್ದೆನು. ಅಲ್ಲಿ ಗ್ರೇಸ್ ಮತ್ತು ಶಾಂತಾ ಎಂಬ ಇಬ್ಬರು ವಿದ್ಯಾರ್ಥಿನಿಯರಿದ್ದರು. ಅವರಿಬ್ಬರಲ್ಲಿ ಬಲವಾದ ಮೈತ್ರಿ ಇತ್ತು; ಮಾತ್ರವಲ್ಲದೆ ಅವರ ವಿಚಾರ, ಧ್ಯೇಯಗಳೂ ಒಂದೇ ಇದ್ದುವು. ನಾನು ಆ ಶಾಲೆಯನ್ನು ಬಿಡುವ ಸಮಯದಲ್ಲಿ ಹುಡುಗಿಯರೊಡನೆ "ನೀವು ಮುಂದೆ ಏನು ಮಾಡುವಿರಿ?" ಎಂದು ಕೇಳಿದೆನು. ಗ್ರೇಸಳು "ನಾನು ಡಾಕ್ಟರಳಾಗುವೆನು" ಎಂದಳು. ಅವಳ ಹಾಗೂ ಶಾಂತೆಯ ವಿಚಾರಗಳು ಬಹುತರ ಒಂದೇ ಇರುತ್ತಿದ್ದುದರಿಂದ ಅವಳೂ ಅದೇ ಉತ್ತರ ಕೊಡುವಳು ಎಂದು ಎಣಿಸಿದ್ದೆ. ಆದರೆ, ಅವಳು ಏನೂ ಮಾತನಾಡಲಿಲ್ಲ. ಗ್ರೇಸಳನ್ನು ವಿಚಾರಿಸಲಾಗಿ, ಅವಳ ಲಗ್ನವು ನಿಶ್ಚಯವಾಗಿದೆಯೆಂದೂ ಹುಡುಗನು ಅವಳಿಗೆ ಒಪ್ಪಿಗೆಯಿದ್ದ ಅನುರೂಪ ವರನೆಂದೂ ಗೊತ್ತಾಯಿತು. ನಾನು ಶಾಂತೆಯ ಅಭಿನಂದನೆ ಮಾಡಿದೆನು.

ಬಹಳ ವರ್ಷಗಳ ನಂತರ ನಾನು ಅದೇ ಊರಿಗೆ ಹೋಗಿ, ಅವರಿಬ್ಬರ ವಿಷಯದಲ್ಲಿ ವಿಚಾರಿಸುವಾಗ, ಗ್ರೇಸಳು ಕ್ರೈಸ್ತ ಸನ್ಯಾಸಿನಿ (nun) ಯಾಗಿ ಅನಾಥಾಲಯದ ಚಾಲಕಳಾಗಿರುವಳೆಂದು ತಿಳಿಯಿತು. ಶಾಂತೆಯ ಲಗ್ನವಾದ ಸ್ವಲ್ಪಸಮಯದಲ್ಲೇ ಅವಳ ಲಗ್ನವೂ ಆಯಿತೆಂದೂ, ಆದರೆ ಒಂದೆರಡು ವರ್ಷಗಳಲ್ಲಿಯೆ ಅವಳ ಗಂಡನು ಸಮುದ್ರಸ್ನಾನಕ್ಕೆ ಹೋದಾಗ ಮುಳುಗಿ ಸತ್ತನೆಂದೂ ತಿಳಿಯಿತು. ಅನಾಥಾಲಯಕ್ಕೆ ಹೋಗಿ ಗ್ರೇಸಳನ್ನು ಭೆಟ್ಟಿಯಾಗಿ ಅವಳ ಹಾಗೂ ಶಾಂತೆಯ ಬಾಳನ್ನು ಕುರಿತು ವಿಚಾರಿಸಿಕೊಂಡೆನು:

"ನಾವು ಭಿನ್ನ ಭಿನ್ನ ಧರ್ಮದವರಾದರೂ ಬಾಲ್ಯಾರಭ್ಯ ಗೆಳತಿಯರು. ನಮ್ಮ ವಿಚಾರಗಳು ಒಂದೆಬಗೆಯವಾಗಿದ್ದುವು. ಸಧರಣ ಒಟ್ಟಿಗೆಂಬಂತೆ ನಮಗೆ ಮದುವೆಯಾಯಿತು. ನಮ್ಮ ಮೇಲೆ ದುಃಖದ ಪ್ರಸಂಗಗಳೂ ಒಂದೇಸಾರೆ ಒಂದೇ ರೀತಿಯಿಂದ ಬಂದುವು. ದಾಂಪತ್ಯ ಸುಖವನ್ನು ಎರಡುವರ್ಷ ನಾವಿಬ್ಬರೂ ಸಂಪೂರ್ಣ ಅನುಭವಿಸಿದೆವು. ನನ್ನ ಗಂಡನಿಗೆ ಸೀರಿನಲ್ಲಿ ಅಪಘಾತವಾಯಿತು. ಅವಳ ಗಂಡನು ಜ್ವರಕ್ಕೆ ತುತ್ತಾದನು. ಶಾಂತೆಗೆ ವೈಧವ್ಯದುಃಖವು ಸಹನೆಯ ಮೇರೆಯನ್ನು ಮೀರಿಸಿತು. 'ದುಃಖದಿಂದ ಬೆಂದ ಆತ್ಮಕ್ಕೆ ಸಹಿಷ್ಣುತೆಯ ತಂಪನ್ನೀಯುವ ಯಾವ ವ್ಯವಸ್ಥೆಯೂ ಹಿಂದೂ ಸಮಾಜದಲ್ಲಿರದುದರಿಂದ, ಅವಳು ದುಃಖವನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡಳು. ನನಗೂ ಆತ್ಮಹತ್ಯೆಯ ವಿಚಾರವು ಅನೇಕ ಸಾರೆ ಬರುತ್ತಿತ್ತು. ನನ್ನ ಪ್ರಿಯ–

ತಮನಿದ್ದೆಡೆಗೆ ಹೋಗಬೇಕೆಂದು ಮನಸ್ಸು ನನ್ನನ್ನು ಬಲವಾಗಿ ಸೆಳೆಯುತ್ತಿತ್ತು. ಆದರೆ, ಇಂಥ ಪರಿಸ್ಥಿತಿಯಲ್ಲಿ ಸನ್ಯಾಸಿನಿಯರ ಸಂಸರ್ಗವಾಯಿತು. ಅವರ ಶಾಂತವಾದ ಜೀವನ, ದುಃಖಿತರ ಸೇವೆ ಇವನ್ನು ಕಂಡು, ನನ್ನ ಸುಖಜೀವನವು ಸಮಾಪ್ತವಾದರೂ ಜೀವನದ ಜ್ಯೋತಿಯನ್ನು ಆರಿಸುವುದಕ್ಕಿಂತ ಉರಿಸುತ್ತಾ ಇಟ್ಟರೆ ನೆರೆಹೊರೆಯ ಅಂಧಕಾರವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆಮಾಡಬಹುದೆಂಬ ವಿಚಾರವು ಮೂಡಿತು. ನಾನು ಆತ್ಮಹತ್ಯೆಯ ವಿಚಾರವನ್ನು ಬಿಟ್ಟು, ಸನ್ಯಾಸಿನಿಯಾಗಿ ಈ ಅನಾಥಬಾಲಕರ ರಕ್ಷಣೆಯನ್ನು ಕೈಕೊಂಡೆನು. ಆಗಾಗ, ಶಾಂತೆಯ ನೆನಪಾಗಿ ದುಃಖವಾಗುತ್ತದೆ. ಇಂತಹ ಸಂಸ್ಥೆಗಳು ಹಿಂದೂಸಮಾಜದಲ್ಲಿರುತ್ತಿದ್ದರೆ, ಸದಾ ದುಃಖದಲ್ಲಿ ಕಣ್ಣೀರು ಸುರಿಸುವ ಹಿಂದೂ ವಿಧವೆಯರ ನಿರುಪಯುಕ್ತ ಜೀವನವನ್ನು ಉಪಯುಕ್ತತೆಯ ಹಾಗೂ ಸಮಾಜೋನ್ನತಿಯ ದಾರಿಗೆ ಹಚ್ಚಬಹುದಾಗಿತ್ತು."

"ಒಬ್ಬ ತರುಣಿಯ ಆತ್ಮಹತ್ಯೆಯ ಸುದ್ದಿಯನ್ನು ವರ್ತಮಾನಪತ್ರದಲ್ಲಿ ಓದಿ ನನಗೆ ಗ್ರೇಸ್, ಮತ್ತು ಶಾಂತೆಯರ ನೆನಪಾಯಿತು" ಎಂದು ಆ ಯುರೋಪಿಯನ್ ಬಾಯಿಯು ನಮಗೆ ಹೇಳಿದಳು.

ಅವಳ ಉತ್ಸಾಹ, ಹಿಂದುಸ್ಥಾನದ ಜನರ ವಿಷಯದಲ್ಲಿ ಅವಳಿಗಿರುವ ಕಳಕಳಿ, ಇವುಗಳನ್ನು ನೋಡಿ ನಮಗೆಲ್ಲರಿಗೆ ಅವಳ ವಿಷಯದಲ್ಲಿ ಆದರ, ಗೌರವಗಳು ತೋರಿದುವು. ಅವಳ ಸ್ವಾರ್ಥತ್ಯಾಗದ ಜ್ಯೋತಿಯು ನಮ್ಮ ಅಂತರ್ಯದೊಳಗಿನ ಸಣ್ಣ ಸಣ್ಣ ದೀಪಗಳನ್ನು ಬೆಳಗಿಸಿತು. ಆ ಬೆಳಕಿನಲ್ಲಿ ನಾವು ವಿಶ್ವಬಂಧುತ್ವದ ದೃಶ್ಯವನ್ನು ಕಂಡೆವು.

ಅದು ನನ್ನ ಜೇಲಿನೊಳಗಿನ ಕೊನೆಯ ದಿವಸವಾದರೂ ಸುಂದರಮ್ಮ ನನ್ನೊಡನೆ ಏನೂ ಮಾತನಾಡಲಿಲ್ಲ. ಒಂದು ಗೂಢವಾದ ತತ್ತ್ವವನ್ನು ಕಥೆಯ ರೂಪದಿಂದ ಹೇಳಿದರೆ ಅಜ್ಞ ಬಾಲಕನಿಗೂ ತಿಳಿಯುವಂತೆ, ಈ ದಿನದ ವಿಷಯವು ಅವಳಿಗೆ ಸರಿಯಾಗಿ ತಿಳಿಯಿತು.

* * *

ತುರಂಗದಿಂದ ಹೊರಗೆ ಬಂದು ಮೂರು ವರ್ಷಗಳಾಗಿದ್ದುವು. ಸುಂದರಮ್ಮ ಏನು ಮಾಡುತ್ತಿರಬಹುದು..ಎಂದು ತಿಳಿಯಬೇಕೆಂದು ಕುತೂಹಲವು ಆಗಾಗ ಉತ್ಪನ್ನವಾಗುತ್ತಿತ್ತು. ಆದರೆ, ತಿಳಿಯುವ ಬಗೆ ಹೇಗೆ? ನಿರಕ್ಷರಳಾದ ಆಂಧ್ರಮಹಿಳೆಗೆ ನಾನು ಪತ್ರಬರೆಯುವುದಾದರೂ ಯಾವ ಭಾಷೆಯಲ್ಲಿ?

ಅಕಸ್ಮಾತ್ ಒಂದುದಿನ, ತುರಂಗದಲ್ಲಿದ್ದ ಒಬ್ಬ ಸೋದರಿಯ ಪತ್ರ ಬಂತು. ತಾನು ಕಾರಣಾಂತರದಿಂದ ಮಂಗಳೂರಿಗೆ ಬರುವುದಾಗಿ ಬರೆದಿದ್ದಳು. ರೈಲ್ವೆ ನಿಲ್ದಾಣದಲ್ಲಿ ಅವಳನ್ನು ಸ್ವಾಗತೀಕರಿಸಿದೊಡನೆ ಸುಂದರಮ್ಮನ ವಿಷಯಕ್ಕೆ ಕೇಳಿದೆನು.

"ಮಾಲತೀ. ಸುಂದರಮ್ಮನ ದುರ್ದೈವ ಏನೆಂದು ಹೇಳಲಿ! ಅವಳ ಮುದ್ದುಮಗಳಾದ ಲೀಲೆಯು ಇಹಲೋಕವನ್ನು ಬಿಟ್ಟು ಹೋದಳು; ಗಂಡನಿಗೆ ಪುನಃ ಭಯಂಕರ ಹುಚ್ಚು ಹಿಡಿದು, ಔಷಧೋಪಚಾರಗಳೇನೂ ಸಫಲವಾಗದೆ, ಈಗ ಹುಚ್ಚರ ಆಸ್ಪತ್ರೆಯಲ್ಲಿದ್ದಾನೆ. ಗುಣವಾಗುವ ಲಕ್ಷಣಗಳು ಕಾಣುವುದಿಲ್ಲ."

ನನ್ನ ತಲೆಗೆ ಯಾರೋ ಬಡಿದಂತಾಯಿತು. 'ಇಷ್ಟು ದೊಡ್ಡ ಝಂಝಾವಾತದಲ್ಲಿ ಸುಂದರಮ್ಮನ ಜೀವನಜ್ಯೋತಿಯು ಆರಿಹೋದೀತೇ, ಅಥವಾ ಇತರರಿಗೆ ಪ್ರಕಾಶಕೊಡಲು ಮಿಣಿಮಿಣಿಯಾಗಿಯಾದರೂ ಉಳಿದೀತೇ?' ಎಂಬ ಪ್ರಶ್ನೆಯನ್ನು ನನಗೆ ನಾನೇ ವಿಚಾರಿಸಹತ್ತಿದೆ. ಈ ದಿವಸವೂ ದೀಪಾವಳಿಯ ಹಬ್ಬದ ದಿನವಾಗಿತ್ತು. ರಾತ್ರಿ ಎಲ್ಲೆಲ್ಲಿಯೂ ದೀಪಗಳ ಬೆಳಕು. ದೀಪಾವಳಿಯ ಬೆಳಕಿನಂತೆಯೇ ನಮ್ಮ ಜೀವನಜ್ಯೋತಿಯೂ ಆದೀತೇ?

ಮುಂದಿನ ಸಂಚಿಕೆಯಲ್ಲಿ:

ನಿಸರ್ಗದ ನೇಯ್ಗೆ (ವಿಜ್ಞಾನವಿಚಾರ)
ಪ್ರೊ. ಎಲ್. ಕೆ. ಗುಂಜೀಕರ ಎಂ. ಎಸ್‌ಸಿ.

ಮಗನ ಮಾವ (ಸಣ್ಣ ಕತೆ)
ಶ್ರೀ. ಜಿ. ಎಚ್. ದೇಸಾಯಿ ಬಿ. ಎ..

ಉತ್ತರ ಕನ್ನಡ ಜಿಲ್ಲೆಯಲ್ಲಿ ಕತ್ತದ ವ್ಯವಸಾಯ
(ಉತ್ತರಖಂಡ) ಶ್ರೀ. ಎಸ್. ಕೆ. ಕಲ್ಲಾಪೂರ
ಬಿ. ಎ. ಎಲ್‌ಎಲ್. ಬಿ.

ಸಂಗಮಸೌಂದರ್ಯ (ಸಣ್ಣಕತೆ)
ಶ್ರೀ. ಪಂಡಿತ ಶಂಕರರಾಯರು, ಗದಗು

ಮೀಸಲು ಮೀಸೆ (ವಿನೋದ ಪ್ರಬಂಧ)
ಶ್ರೀ. ಕೆ. ಟಿ. ಪುರಾಣಿಕ ಬಿ. ಎ.

ದೇವರಿದ್ದಾನೆಯೆ? (ವಿಚಾರಾತ್ಮಕ ಪ್ರಬಂಧ)
ಶ್ರೀ. ರಂಗನಾಥ ನೆಗಳೂರ ಬಿ. ಎ.

ಜೀವಂತ ಜ್ವಾಲಾಮುಖಿ (ನಾಟ್ಯಚಟ್ಟಾ)
ಶ್ರೀ. ಕೌಜಲಗಿ ಹನುಮಂತರಾಯರು
ಬಿ. ಎ. ಎಲ್‌ಎಲ್. ಬಿ.

ಪ್ರೆಸಿಡೆಂಟ್ ರೂಜ್‌ವೆಲ್ಟ್ (ವ್ಯಕ್ತಿಪರಿಚಯ)
'ಚಾಡಿಯ ಚಾಣಕ್ಯ'



[ಈ ವಿಭಾಗದಲ್ಲಿ ಸೇರಿಸುವುದಕ್ಕಾಗಿ ಯಾರಾದರೂ ನಗೆಮಾತಿನ ತುಣುಕುಗಳನ್ನು ಕಳುಹಿಸಿದರೆ ಸ್ವೀಕರಿಸಲಾಗುವುದು. ಪ್ರತಿ ತಿಂಗಳಲ್ಲಿ ಎಲ್ಲಕ್ಕೂ ಒಳ್ಳೆಯದಾಗಿ ಬಂದ ನಗೆಮಾತಿಗಾಗಿ, ನಾಲ್ಕು ತಿಂಗಳವರೆಗೆ 'ಜಯಂತಿ'ಯನ್ನು ಉಚಿತವಾಗಿ ಕಳುಹಲಾಗುವುದು. ಸಂ. ಜ.]

ದೀಪ ಹುಡುಕಿದ

ಒಬ್ಬ ಮಾರವಾಡಿ ಬಹಳೇ ಸಂಶಯ ಸ್ವಭಾವದವನಾಗಿದ್ದನು. ಅಂಗಡಿಯನ್ನು ಮುಚ್ಚುವಾಗ ಒಳಗಿನ ವಿದ್ಯುದ್ದೀಪವನ್ನು ಆರಿಸಿದೆಯೊ ಇಲ್ಲವೋ ಎಂದು ಅವನಿಗೊಮ್ಮೆ ಬಲವಾದ ಸಂಶಯ ಬಂದಿತು. ಹಲಿಗೆಗಳನ್ನು ತೆಗೆದು ಮತ್ತೊಮ್ಮೆ ಒಳಗೆ ನೋಡಿದ. ದೀಪ ಕಾಣಿಸಲಿಲ್ಲ. ಇಷ್ಟಾದರೂ ಅವನಿಗೆ 'ಖಾತ್ರಿ' ಎನಿಸದೆ, ಕೊನೆಗೆ ಮೇಣಬತ್ತಿಯನ್ನು ಹಚ್ಚಿ ಮೂಲೆಮೂಲೆಗೂ ನೋಡಿದನಂತೆ!

* * *

ಕಿವುಡರ ಏಕಾಂತ

ಒಬ್ಬ ಕಿವುಡ– (ಧರ್ಮಶಾಲೆಯಲ್ಲಿ) ಗಾಂಧಿಯವರು ಶೇಗಾಂವದೊಳಗ ಬೀಡಾರ ಬಿಟ್ಟಾರಂತ?

ಇನ್ನೊಬ್ಬ ಕಿವುಡ– ಹೌದು, ಗಾಂಜೀ ಸೇದ್ರೋದು ನಾನೂ ಬಿಟ್ಟೀನಿ!

* * *

ಪರಿಷತ್ತಿನ ಯಶಸ್ಸು

ತಿಮ್ಮ– ನಮ್ಮೂರಿನ ಪರಿಷತ್ತು ಬಹಳೇ ಯಶಸ್ವಿಯಾಯಿತು. ಅಧ್ಯಕ್ಷರ ಮೆರವಣಿಗೆಯ ಗಾಡಿಗೆ ಸಾವಿರದಾ ಒಂದು ಎತ್ತು ಹೂಡಿತ್ತು.

ಸುಮ್ಮ–ನಮ್ಮೂರಿನದು ಅದಕ್ಕೂ ಹೆಚ್ಚು ಯಶಸ್ವಿಯಾಯಿತು. ನಮ್ಮ ಅಧ್ಯಕ್ಷರ ಗಾಡಿಗೆ ಸಾವಿರದಾಒಂದು ಹೋರಿ ಹೂಡಿತ್ತು.

ನುಡಿಯಂತೆ ನಡೆ

ದೇಶಭಕ್ತ–(ಆವೇಶದಿಂದ) ಬಾಂಧವರೆ, ಇನ್ನು ಮಾತಿನ ದಿವಸಗಳು ಹೋದವು. ಈಗ ನಾವು ಕೃತಿಯನ್ನು ತೋರಿಸಬೇಕಾಗಿದೆ' ಎಂದವನೆ ಮಾತನ್ನು ತಡೆದನು; ಯಾಕೆಂದರೆ ಆವನ ಉಪದೇಶವು ಫಲರೂಪವಾಗಿಯೆ ಪರಿಣಮಿಸಿತು!

ಜಾಹೀರಾತಿನದೊಂದು ಮಾದರಿ

ನಮ್ಮ ವೃತ್ತಪತ್ರಿಕೆಗಳಲ್ಲಿ ಬರಬೇಕಾದ ಜಾಹೀರಾತು:– 'ಬಡವರ ಕಾಮಧೇನು! ಬಳಲುವವರ ಕಲ್ಪತರು! ಒಮ್ಮೆ ಕೊಂಡು ಅನುಭವಿಸಿ ನೋಡಿರಿ. ನಿಮ್ಮ ಎಲ್ಲ ಮಹತ್ವಾಕಾಂಕ್ಷೆಗಳು ಕೈಗೂಡುವುವು. ಎಲ್ಲ ಹೃದ್ರೋಗಕ್ಕೆ ಒಂದೇ ರಾಮಬಾಣ.

ನಾಲ್ಕಾಣೆ ಕೊಟ್ಟು ಕಾಂಗ್ರೆಸ ಮೆಂಬರರಾಗಿರಿ.'

* * *

ಹಕ್ಕು ದೊರೆಯಿತು

ದೇಶಭಕ್ತ–ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಬೇಕು.

ಮುಸ್ಲೀಮುಲೀಗಭಕ್ತ– ಹಿಂದುಸ್ತಾನ ಎಂಬ ಹೆಸರಿನಲ್ಲಿ ಮುಸಲ್ಮಾನರಿಗೂ ಒಂದು ಹಕ್ಕಿನ ಭಾಗ ಬೇಕು.

ದೇಶಭಕ್ತ– ಆಗಬಹುದು; ಹಿಂದು-ಮುಂದುಸ್ತಾನಕ್ಕೆ ಸ್ವಾತಂತ್ರ್ಯ ಬೇಕು.

ಅಧ್ಯಕ್ಷರ ಅಭಿಮಾನ

ಹೆಂಡತಿ:— ಅಲ್ಲಾ, ನೀವು ನಾಡಹಬ್ಬಕ್ಕೆ ಅಧ್ಯಕ್ಷರಾಗಿ ಹೋಗಿದ್ದಿರಲ್ಲಾ! ನಿಮ್ಮ ಭಾಷಣ ಹ್ಯಾಗಾಯಿತು?

ಗಂಡ:— (ಹುರುಪಿನಿಂದ) ಕೇಳತೀಯೇನು? ಅಪೂರ್ವ ಭಾಷಣ! ನಾನು ಭಾಷಣ ಮಾಡಿ ಕೂತುಕೊಂಡೆ; ಸಭೇಲಿ ಎಲ್ಲಾ ಕಡೆಗೂ ಕೂಗು 'ಭಾಳ ಛಲೋ ಮಾಡಿದಿರಿ' ಅಂತ!

ನಿಪಾತದ ದುರುಪಯೋಗ

ಶಿಕ್ಷಕ– ಒಳ್ಳೇ ಕೆಲಸಮಾಡಿದವ ಸತ್ತ ಮೇಲಷ್ಟು ಸ್ವರ್ಗಕ್ಕೆಹೋಗುವ; ತಿಳಿಯಿತೇನು? ಆದರೆ– ಕೆಟ್ಟ ಕೆಲಸ ಮಾಡಿದವ–ಅಂ–ಕೆಟ್ಟ ಕೆಲಸ ಮಾಡಿದವ– ಏನು ?

ವಿದ್ಯಾರ್ಥಿ– (ಚುರುಕಾಗಿ) ಕೆಟ್ಟಕೆಲಸ ಮಾಡಿದವ ಇದ್ದಾಗಷ್ಟೆ ಸ್ವರ್ಗಕ್ಕೆ ಹೋಗ್ತಾನ ಸರ್.

* * *

ಒಂದೇ ಅಕ್ಷರ ಬೇರೆ

ಶಿಕ್ಷಕ– ಹಿಂದಿನ ಕಾಲದೊಳಗ ಊರ ವ್ಯಾಜ್ಯ ಯಾರು ತೀರಿಸತ್ತಿದ್ದರು ?

ವಿದ್ಯಾರ್ಥಿ– ಪಂಚರು !

ಶಿಕ್ಷಕ– ಸರಿ; ಈಗಿನ ಕಾಲದೊಳಗ ಯಾರು ತೀರಿಸತಾರ ?

ವಿದ್ಯಾರ್ಥಿ– ಲಂಚರು !

* * *

ಹೊಸ ಅರ್ಥ

ಉಗೆಬಂಡಿಯ ಕಂಪಾರ್ಟಮೆಂಟೊಂದರಲ್ಲಿ ಮೊದಲೆ ಕುಳಿತವನು ಹೊಸತಾಗಿ ಒಳಕ್ಕೆ ಬಂದವನಿಗೆಂದನು:

" ಇಲ್ಲಿ ನೋಡ್ರಿ, ಕಣ್ಣು ಕಾಣಸ್ತಾವೋ ಇಲ್ಲೋ! ಈ ಕಂಪಾರ್ಟಮೆಂಟಿನೊಳಗ ೨೪ ಜನರು ಮಾತ್ರ ಕೂತುಕೋ ಬೇಕಂತ ಬರದದ ನೋಡ್ರಿ ! "

ಬಂದವನು ಉತ್ತರಕೊಟ್ಟ :

" ಅದು ಕೂತುಕೊಳ್ಳುವರ ಸಲುವಾಗಿ ಮಾತ್ರ ಬರದದ ಏಳ್ರಿ ! ಅದರ ಅರ್ಥನೂ ನಿಮಗಾಗಿಲ್ಲ ಕಾಣಸ್ತದ ! "

* * *

ಅನುಭವಿಕಳು

ತರುಣ ಹೆಂಡತಿ– (ನಿಡುಸುಯ್ದು) ಸರಿ ರಾತ್ರಿಯಾಗತಾ ಬಂತು. ಇವರಿನ್ನೂ ಮನಿಗೇ ಬಂದಿಲ್ಲ. ಎಲ್ಲಿಗಾದರೂ ಹೋಗಿರುವರೋ ಅಂತ ಮನಸ್ಸು ಖಿನ್ನವಾಗಿದೆ.

ಅನುಭವಿಕ ಹೆಂಡತಿ– (ಅರ್ಥಾತ್ ನೆರೆ ಹೊರೆಯವಳು) ಹೋಗಲಿ ಬಿಡು; ಗೊತ್ತಾದರೆ ಇದಕ್ಕೂ ಹೆಚ್ಚು ಖಿನ್ನವಾದೀತು !

* * *

ಮುಖಸಾಮುದ್ರಿಕ

ಮನೆಗೆ ಬಂದ ಆಚಾರ್ಯರಿಗೆ ಯಜಮಾನಿ ಮಗುವನ್ನು ತೋರಿಸಿ; ಮಗುವಿನ ಲಕ್ಷಣ ಹೇಗಿರುವುದೆಂದು ಕೇಳಿದಳು. ಮಗುವಿನ ಮುಖನೋಡಿ ಆಚಾರ್ಯರು ಹೇಳಿದರು.

" ಮಗು ತಂದೀತಾಯಿ ಇಬ್ಬರನ್ನೂ ಹೋಲತದ; ಆದರ ಮುಖದ ಮ್ಯಾಲ ತಿಳುವಳಿಕೀ ಕಳೇ ಮಾತ್ರ ಇದ್ದಾಂಗ ಕಾಣಸ್ತದ. "

* * *

ಬೇಗನೆ ಏಳುವ ಉಪಾಯ

ರಾಯರಿಗೆ ಮುಂಜಾನೆ ಹತ್ತುಗಂಟೆಗೆ ಮೊದಲು ಏಳುವುದೆಂದರೆ ಎಂದೂ ಗೊತ್ತಿರಲಿಲ್ಲ. ಮರುದಿನ ಬೆಳಗಿನ ಒಂಬತ್ತೂವರೆಯ ಗಾಡಿಗೆ ಅವರು ಊರಿಗೆ ಹೊರಡುವವರಿದ್ದರು. ಒಂಬತ್ತಕ್ಕಾದರೂ ಏಳಬೇಕಲ್ಲವೇ? ಅವರಿರುವುದು ಪರಸ್ಥಳ; ಎಬ್ಬಿಸುವವರು ಯಾರು ? ಒಬ್ಬರೆ ಒಬ್ಬರು; ಬಳಿಯಲ್ಲಿ ಗಂಟೆಯು ಗಡಿಯಾರವಿರಲಿಲ್ಲ. ಉಪಾಯ ಗಾಣದೆ ಚಡಪಡಿಸಿದರು. ಕೊನೆಗೆ ಒಂದು ನಾಟ್‌ಪೇಡ್ ಪಾಕೇಟನ್ನು ತಮ್ಮ ವಿಳಾಸಕ್ಕೆ ತಾವೇ ಬರೆದು ಹಾಕಿ, ನಿಶ್ಚಿಂತೆಯಿಂದ ನಿದ್ದೆ–ಹೋದರು. ಬೆಳಗಿನ ಒಂಬತ್ತುಗಂಟೆಗೆ ಸರಿಯಾಗಿ ಪೋಸ್ಟ್‌ಮನ್ ಬಂದು ಬಾಗಿಲು ಬಡಿದನು. ರಾಯರಿಗೆ ಎಚ್ಚರಾಯಿತು. ಬಾಗಿಲು ತೆರೆದರು.

ಪೋಸ್ಟ್‌ಮನ್— ಎರಡಾಣೆ ಕೊಡಿ.... ನಾಟ್‌ಪೇಡ್ ಪಾಕೇಟು ಇದೆ.

ರಾಯರು—(ಸಿಟ್ಟಿನಿಂದ) ನಮಗೇನೂ ಬೇಕಾಗಿಲ್ಲ. ಅದನ್ನು ತಿರುಗಿ ಕಳಿಸಿಬಿಡಿರಿ ! ಒಂದಾಣೆಯ ಟಿಕೀಟನ್ನು ಕೂಡ ವೆಚ್ಚ ಮಾಡಬಾರದೆನ್ನುವವರ ಸಂಬಂಧವಾದರೂ ಯಾಕೆಬೇಕು ನಮಗೆ ?

* * *

ಡಾಕ್ಟರ್— ಏನ್ರೀ ನಿಮಗ ಆಗೇದರೆ ಏನು ?

ಬಂದವ— ಏನ ಹೇಳಲಿ ಡಾಕ್ಟರ್ರ ! ನನ್ನ ಕಿವ್ಯಾಗ ಯಾವಾಗಲೂ ಶಂಖಾ–ಕಾಳಿ ಕೂಗಿಧಾಂಗ ಆಗತಿರತದ !

ಡಾಕ್ಟರ್— ಎಷ್ಟು ದಿನಾ ಆಯ್ತು–ಹೀಂಗ ಆಗಲಿಕ್ಕೆ ಹತ್ತಿ ?

ಬಂದವ— ನನ್ನ ಹೆಂಡತಿ ಮನೀಗೆ ಬಂದ ದಿವಸನೂ ಸುರೂ ಆಗೇದ.

ಝೋನಿನ ಜೊಂಜಾಟ

" ಬಂದಿತು ಬಂದಿತು ಝೋನ ಟಿಕೀಟು !
ಮಂದಿಗೆ ಸುಲಭದ ಪಯಣದೇರ್ಪಾಟು ! "

" ಸಂದವು ಕೈಲಿಗೆ ಲೆಕ್ಕಿಲ್ಲದೆ ನೋಟು ;
ತಿಂದಿತು ಮುಂದೆಲ್ಲಾ ಮೈತುಂಬಾ ಏಟು ! "

ಸಾಹಿತ್ಯ ಸಮೀಕ್ಷಣ

೪ - ದಸರೆಯ ಕಾಣಿಕೆ

ಲೇಖಕರು: ಶ್ರೀ. ಜಿ. ಎನ್. ಲಕ್ಷ್ಮಣ ಪೈ ಅವರು.

ಶ್ರೀಪರಾಸ್ ಪೈ ಅವರು ಕನ್ನಡಿಗರಿಗೆ ಅಪರಿಚಿತರಲ್ಲ ; ತಮ್ಮ ಗದ್ಯ-ಪದ್ಯ ಗ್ರಂಥಗಳಿಂದಲೂ ನಾಟಕಗಳಿಂದಲೂ ಸಾಕಷ್ಟು ಪರಿಚಯದವರಾಗಿದ್ದಾರೆ. ಈ 'ದಸರೆಯ ಕಾಣಿಕೆ' ಯಲ್ಲಿ 'ಅಮರಲೋಕ' 'ಯದ್ಭಾತದ್ಭಾ' ಎಂಬ ಹೆಸರಿನ ಎರಡು ನಿಡುಗವಿತೆಗಳಿರುವುವು. ಎರಡನೆಯ ಕವಿತೆಯಾದ 'ಯದ್ಭಾತದ್ಭಾ' ಎಂಬುದು ಈಮೊದಲೆ ಬೇರೆಯಾಗಿ ಪ್ರಕಟವಾಗಿದ್ದಿತು. ಬೇನರಿನ ಸುಲ್ತಾನನೊಬ್ಬನ ವಿಕ್ಷಿಪ್ತ ಸ್ವಭಾವದ ವಿನೋದಕಥೆಯು ಈ ಕವಿತೆಯಲ್ಲಿ ಹೆಣಿಕೆಗೊಂಡಿದೆ. ಹಿಂದೆ ಪ್ರಕಟವಾಗಿದ್ದ ಈ ಕವಿತೆ, ಜೇದರವನ್ನು ಮಹಾರಾಷ್ಟ್ರದಲ್ಲಿ ಸೇರಿಸಿದ್ದಿತು ; ಈಗ ಕರ್ನಾಟಕವೆಂದು ತಿದ್ದಿಕೊಂಡುದು ಸಂತೋಷದ ಸಂಗತಿ.

ಮೊದಲನೆಯದಾದ 'ಅಮರಲೋಕ' ಎಂಬ ಕವನ ಹೊಸದು. ಕವಿ ಕನಸಿನಲ್ಲಿ ಅಮರಲೋಕಕ್ಕೆ ಹೋಗಿ ಅಲ್ಲಿ ನೃಪತುಂಗನನ್ನು ಮೊದಲು ಮಾಡಿ ಮುದ್ದಣನ ವರೆಗೆ ಎಲ್ಲ ಕನ್ನಡ ಕವಿಗಳನ್ನೂ ಕಾಣುತ್ತಾನೆ. ಕನ್ನಡದ ಆಧುನಿಕ ಸಾಹಿತ್ಯವನ್ನು ಕುರಿತು ಚರ್ಚಿಸುವುದಕ್ಕಾಗಿ ಅಲ್ಲಿ ಪರಿಷತ್ತೊಂದು ನೆರೆಯುವುದು. ಪಂಪ ಅಧ್ಯಕ್ಷನಾಗುವನು. ಪುರಾತನ ಕವಿಗಳೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವರು. ಕಾವೇರಿಯಿಂದ ಗೋದಾವರಿಯ ವರೆಗೆ ಇದ್ದ ಕರ್ನಾಟಕ ಒಡೆದು ಚೂರು-ಚೂರಾದುದಕ್ಕಾಗಿ ನೃಪತುಂಗ ಕಳವಳಗೊಳ್ಳುತ್ತಾನೆ. ಕತ್ತುರಿಯಂತಿದ್ದ ಕನ್ನಡನುಡಿಯನ್ನು ಬಿಟ್ಟು ಆಂಗ್ಲಭಾಷೆಯ ಬೆನ್ನನ್ನು ಕನ್ನಡಿಗರು ಹತ್ತಿದುದಕ್ಕಾಗಿ ಪಂಪ ನಿಡುಸುಯ್ಯುತ್ತಾನೆ. 'ಅಯ್ಯೋ, ಸಂಸ್ಕೃತಿಯಿಲ್ಲದ ಇಂಗ್ಲಿಷರ ಕಾವ್ಯವೆ!' ಎಂದು ರನ್ನ ಮರುಗುತ್ತಾನೆ. ತನ್ನ ಜಾತಿಯ ಜೈನರು ಇಂದು ಕನ್ನಡ ಬಿಟ್ಟು ಹೋಗಿದ್ದಾರೆಂದು ಜನ್ನನಿಗೆ ವ್ಯಸನ; ತನ್ನ ವ್ಯಾಕರಣ ಸೂತ್ರಗಳನ್ನು ಇಂದಿನವರು ಹರಿಯತೊಡಗಿದ್ದಾರೆಂದು ಕೇಶಿರಾಜನಿಗೆ ಅಸಮಾಧಾನ. ರಾಘವಾಂಕನಿಗೂ ಕುಮಾರವ್ಯಾಸನಿಗೂ— ಹೊಸದಾರಿಯವರು ತಮ್ಮ ಮಾರ್ಗವನ್ನು ಮರೆತಿಲ್ಲವೆಂಬುದನ್ನು ಕಂಡು ಸಮಾಧಾನ. ತಮ್ಮ ಹಾಡುಗಳನ್ನು ಬಿಟ್ಟು ಜನರು 'ಯಂಗೇ ಆಟ್ಕಾ ವೀಸೆ ವಿಟವರಿ ಉಭಾ' ಎಂದು ಮೊದಲಾಗಿ ಅನ್ಯಭಾಷೆಯ ಹಾಡುಗಳನ್ನು ಹಾಡುತ್ತಿದ್ದುದಕ್ಕಾಗಿ ಹರಿದಾಸರಿಗೆ ತುಂಬ ಯೋಚನೆ. ಕವಿ ಇವರೆಲ್ಲರಿಗೂ ತಕ್ಕ ಸಮಾಧಾನಗಳನ್ನು ಹೇಳಿ, ಪರಿಷತ್ತನ್ನು ಮುಗಿಸುವನು; ಗುಡುಗೊಂದು ಗರ್ಜಿಸಲು ಎಚ್ಚತ್ತು ಕಣ್ಣುತೆರೆಯುವನು.

ಆಧುನಿಕ ಸಾಹಿತ್ಯದ ವಿಷಯದಲ್ಲಿ ತನಗಿದ್ದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಲ್ಪಿಸಿದ್ದ ಈ ಸಂನಿವೇಶವನ್ನು, ಕವಿ ತಿಳಿಗನ್ನಡದ ಸರಳರಗಳೆಯಲ್ಲಿ ರಂಜಕವಾಗಿ ರೂಪಿಸಿದ್ದಾನೆ. ಓದಿ ಮೋದಪಡತಕ್ಕಂತಹದಾಗಿದೆ.. ಈ ಸಾಹಿತ್ಯದ 'ದಸರೆಯ ಕಾಣಿಕೆ'!

ಬೆಟಗೇರಿ ಕೃಷ್ಣಶರ್ಮ

೬. ರಂಗವಲ್ಲಿ (ಕಥಾಸಂಗ್ರಹ)

ಬೇರೆ ಬೇರೆ ಕತೆಗಾತಿಯರು ಬರೆದುವು.

ದಿನಕ್ಕೊಂದು ಚೆಂದದಿಂದ ಬೆಳೆಯುತ್ತಿರುವ ಇಂದಿನ ಕನ್ನಡ ಸಾಹಿತ್ಯದೇವಿಗೆ ಕರ್ನಾಟಕದ ಮಹಿಳೆಯರು ಸಲ್ಲಿಸಿದ ಆಕ್ಕರತೆಯ ಕಾಣಿಕೆಯಿದು— ಅವಳ ಪೂಜಾಸಮಯದಲ್ಲಿಯ 'ರಂಗವಲ್ಲಿ' ಯಿದು. ಕನ್ನಡದಲ್ಲಿ ಸಣ್ಣಕಥೆಗಳಿಗೆ ಜನಕರಾದ ಶ್ರೀ. ಮಾಸ್ತಿಯವರ ಸರಸವಾದ ಮುನ್ನುಡಿಯು ಸೇರ್ಪಡೆಗೊಂಡಿದೆ. ಈಗಾಗಲೇ ಬರೆಯುತ್ತಿರುವವರಿಗೆ ಉತ್ತೇಜನಕರವೂ, ಇನ್ನು ಮುಂದೆ ಬರೆಯಲೆಳಸುವವರಿಗೆ "ರಾಜಮಾರ್ಗ"ವಾಗಿಯೂ ಇರುವ ಶ್ರೀ. ಮಾಸ್ತಿಯವರ ಅಮೋಘವಾದ ಮುನ್ನುಡಿಯು 'ರಂಗವಲ್ಲಿ'ಗೆ ಹೆಚ್ಚಿನ ರಂಗನ್ನು ತಂದು ಕೊಟ್ಟಿದೆ. ಜೀವನದ ಯಾವ ದರ್ಶನದಲ್ಲಿಯೂ ಸ್ತ್ರೀಜೀವನಕ್ಕೆ ಒಂದು ಅತ್ಯಂತ ಮಹತ್ವದ ಸ್ಥಾನವಿದೆ. ಹೆಂಗಸರಿಗೇ ಸ್ವಾಭಾವಿಕವಾಗಿರುವ ವಿಚಾರಗಳು, ಅವರ ಆಶೆ-ನಿರಾಶೆಗಳು, ಆಕಾಂಕ್ಷೆ-ಅಪೇಕ್ಷೆಗಳು ಇವೆಲ್ಲ ಸ್ತ್ರೀನಿರ್ಮಿತ ಸಾಹಿತ್ಯದಲ್ಲಿಯೇ, ಹೆಚ್ಚಾದ ನಿಚ್ಚಳತೆಯಿಂದ ಒಡಮೂಡುವುದು ಸಹಜ. ಜೀವನದಲ್ಲಿ ತಮಗೆ ಇದಿರು ಬರುವ ಪ್ರಶ್ನೆಗಳನ್ನು ತಾವಾಗಿಯೇ ಮನಬಿಚ್ಚಿ, ಮನಮುಟ್ಟುವಂತೆ— ಪ್ರಸ್ತುತ ಪುಸ್ತಕದಲ್ಲಿ ಹೇಳಿವಂತೆ— ಹೇಳಿದಲ್ಲಿ, ವಿಶದಪಡಿಸಿದಲ್ಲಿ, ಸಾಹಿತ್ಯಕ್ಕೆ ಒಂದು ಹೊರದ ವಿಶಾಲತೆ ಬರುವುದುಂಟು. ಕರ್ನಾಟಕದ ಮಹಿಳೆಯರು ಕಾಲಯೋಗ್ಯವಾದ ಜಾಗ್ರುತಿಯಲ್ಲಿ ಎಚ್ಚತ್ತು, ಸ್ತ್ರೀಜೀವನಕ್ಕೆ ವಿಶಿಷ್ಟವಾದ ಪ್ರಶ್ನೆಗಳನ್ನು ಸ್ತ್ರೀಯರ ದೃಷ್ಟಿಕೋನದಿಂದ ನಿರೀಕ್ಷಿಸಲೆಳಸಿದ ಪ್ರಯತ್ನಕ್ಕೂ ಫಲಕ್ಕೂ 'ರಂಗವಲ್ಲಿ'ಯು ತಕ್ಕ ಸಾಕ್ಷಿಯಾಗಿದೆ. ನಾನು ಬರೆಯುತ್ತಿರುವೆನೆಂಬ ಹೆಮ್ಮೆಯು, ನಾನು ಬರೆಯಲಾರೆನೆಂಬ ಹೇಡಿತನಕ್ಕಿಂತ ಹೆಚ್ಚಿನದಾದರೂ, ನಮ್ಮ ಕತೆಗಾತಿಯರು ಕಲಿಯಬೇಕಾದ ವಿಷಯ ಅದೆಷ್ಟೊ ಇದೆ. ಆದರೂ ಹೇಳುವ ವಿಷಯವನ್ನು ಆದಷ್ಟು ಸಹಜವಾಗಿ, ಚೆನ್ನಾಗಿ ಹೇಳುವುದು ಸಾಹಿತ್ಯದ ರಾಜಮಾರ್ಗವೆಂಬ ತತ್ತ್ವವನ್ನು ಅರಿತುಕೊಂಡು ಆಚರಿಸುವ ಕನ್ನಡದ ಕತೆಗಾತಿಯರು, ಹೀಗೆಯೇ ಮೇಲಿಂದಮೇಲೆ ಹೊಸಹೊಸ ತರದ 'ರಂಗವಲ್ಲಿ'ಯನ್ನು ಹಾಕುತ್ತಿರಲೆಂದು ಹಾರೈಸುತ್ತೇವೆ.

V. M.

೧೪. ಪ್ರೇಮಯೋಗಿನಿ :

ಅನುವಾದಕರು ಶ್ರೀ. ಸಿ. ಕೆ. ನಾಗರಾಜರಾವ್, ಬೆಂಗಳೂರು.

ಬಂಗಾಲದ ಸುಪ್ರಸಿದ್ಧ ಕಾದಂಬರಿಕಾರರಾದ ಸ್ವರ್ಗೀಯ ಶ್ರೀಶರಚ್ಚಂದ್ರ

ಚಟ್ಟೋಪಾಧ್ಯಾಯ ಅವರ ನಿಡುಗತೆ ತೊಂದರ,ಹಿಂದೀ ಅನುವಾದದ ಕನ್ನಡಾನು ವಾದವಿದು. ಶ್ರೀ.ಶರಚ್ಚಂದ್ರರ ವಾಙ್ಮಯ-ಪ್ರಪಂಚ ಒಂದೇ ಆದರ್ಶದ ಕನಸನ್ನೆ ಚಿತ್ರಿಸುವುದಲ್ಲ ; ವಾಸ್ತವ ಪ್ರಪಂಚದ ಸ್ವರ್ಗ-ನರಕಗಳ ಬೆರಕೆಯನ್ನು' ಚಿತ್ರಿಸಿ, ವಾಚಕರ ಮನಸ್ಸಿನಲ್ಲಿ ಉತ್ಕಟವಾದ ಆಶೆ-ಜುಗುಪ್ಸೆಗಳ ಅಲೆಗಳನ್ನೆಬ್ಬಿಸಿ, ಇಹಲೋಕ ವನ್ನೆ ಸ್ವರ್ಗವನ್ನಾಗಿ ಮಾಡುವ ಬಗೆಯನ್ನು ಅವರಲ್ಲಿ ಒಡಮೂಡಿಸುವಂತಹದು.

ಪ್ರಸ್ತುತ ಕಥಾನಾಯಕಿಯಾದ ಅನು ಪಮೆಯನ್ನೆ ಉದಾಹರಣೆಗೆಂದು ತೆಗೆದು ಕೊಳ್ಳೋಣ ! ಕನಸಿನ ಪ್ರಪಂಚವನ್ನು ಚಿತ್ರಿಸಿದ ಕಾದಂಬರಿಗಳನ್ನೋದಿ ಎದು ನ್ನು ಕೆಡಿಸಿಕೊಂಡವಳವಳು ; ಕಾದಂಬರಿ ಯಲ್ಲಿಯ ಪ್ರೇಮದ ಹುಚ್ಚು ಅವಳಿಗೆ. ಸ್ವಪ್ನದಲ್ಲೆಂದೂ ನೋಡದ- ಮಾತನಾಡದ- ತರುಣನೊಬ್ಬನನ್ನು ಪ್ರೀತಿಸತೊಡಗುವಳು. ಮದುವೆಯ ಮಾತು ಬಂದಾಗ, ಅವನನ್ನೆ ಮದುವೆಯಾಗುವೆನೆಂದು ಹಟಹಿಡಿಯು ವಳು. ಇವಳ ಹಟ ಪೂರಯಿಸುವದಕ್ಕಾಗಿ ಒಂದೆ ಬುಟ್ಟಿ ತುಂಬ ರೂಪಾಯಿ ಸುರಿಯಲು ಸಿದ್ಧನಾಗುವನು. ಸರಿ ! ಮದುವೆಯ ದಿನ ಗಂಡು ಫರಾರಿ ! ನಿಯಮಿಸಿದ ದಿನ ಮದುವೆಯಾಗದಿದ್ದರೆ- ಬಹಿಷ್ಕೃತರಾಗ ಬೇಕಾಗುವುದು ಬಂಗಾಲಿಗಳಲ್ಲಿ ರೂಢಿ ಯಂತೆ. ತಂದೆಗೆ ತುಂಬ ಚಿಂತೆ; ಸಮಾಜದ ಹಿರಿಯರು ಸೇರಿ, ಗೂರಲು ರೋಗಹತ್ತಿದ ಮುದುಕನೊಬ್ಬನನ್ನು ವರನನ್ನಾಗಿ ತಂದು ಕೊಡುವರು. ಅನುಪಮೆಯ ಮದುವೆ ಯಾಗುವುದು.

ಅನುಪಮೆಯನ್ನು ಹೃದಯಪೂರ್ವಕ ಪ್ರೀತಿಸುವ ತರುಣನೊಬ್ಬನಿದ್ದ. ಅವನ ಹೆಸರು ಲಲಿತಮೋಹನ. ಅನುಪಮೆಯ ಹುಚ್ಚುಪ್ರೇಮ ಅವನನ್ನು ಮಾತನಾಡಿ ಸದೆ ಹೋಯಿತಷ್ಟೆ ಅಲ್ಲ, ಕಳ್ಳನೆಂಬ ಅಪವಾದನೆಯಿಂದ ತುರಂಗಕ್ಕೆ ಕಳುಹಿತು.

ಅನುಪಮೆಯ ರೋಗದ ಗಂಡ ತೀರಿದ. ಪ್ರೀತಿಯ ತಂದೆ ತೀರಿದ. ಪ್ರೀತಿಯ ಮಗಳಾಗಿ ಬಾಳಿದ ಮನೆಯಲ್ಲಿಯೆ, ವಿಧವೆ ಯಾದ ಅನುಪಮೆ ಎಲ್ಲರ ಅಪ್ರೀತಿ-ಅನಾ ದರಕ್ಕೆ ಗುರಿಯಾಗಿ ಬಾಳಬೇಕಾಗಿ ಬಂದಿತು. ಸ್ವಾಭಿಮಾನವನ್ನು ಸಂರಕ್ಷಿಸಿಕೊಳ್ಳಲು ಹೋಗಿ, ಮಲಅಣ್ಣನ ತಂತ್ರದಿಂದ ದುರಾಚಾರಿಯೆಂಬ ಅಪವಾದಕ್ಕೆ ಗುರಿ ಯಾಗಬೇಕಾಯಿತು. ಅನುಪಮೆಗೆ ಜಗತ್ತೇ ಬೇಸರಾಗಿ ಜೀವಕೊಡಲು ಯತ್ನಿಸಿದಾಗ, ಲಲಿತಮೋಹನನ ಪ್ರೀತಿ ಅವಳನ್ನು ಒದುಕಿಸಿತು.

ಇದಿಷ್ಟೆ ಕತೆ; ಮಾತುಮಾತಿಗೂ ಕತೆ ಓಡಿಬಿಟ್ಟಿದೆ. ಅನುಪಮೆಯ ಆದರ್ಶ-ಪ್ರೇಮದ ಹುಚ್ಚಿನ ವಿಡಂಬನೆಯ ಮೂಲಕ, ಕತೆಯು ಕರುಣಾಭಾವದಿಂದ ಬೆಳೆಯುತ್ತಿ ದ್ದರೂ ಶೈಲಿ ವಿಡಂಬನಾತ್ಮಕವಾದುದೆ ಆಗಿದೆ. ನಗೆಮಾತಿನಿಂದ ಅಳುವಿನ ಕತೆಯನ್ನು ಪರಿಣಾಮಕಾರಿಯಾಗಿ ಹೇಳುವುದಕ್ಕೆ ಶ್ರೀಶರಚ್ಚಂದ್ರರೊಬ್ಬರು ಸಮರ್ಥರು. ಒಂದು ವಿಷಾದದ ವಿಷಯ : ಮೂಲಗ್ರಂಥದ ಒಂದು ರೂಪಾಯಿ ಸೊಗಸಿನಲ್ಲಿಯ ನಾಲ್ಕಾಣೆ ಕೂಡ ಅನು ವಾದದಲ್ಲಿ ಇಳಿದಿಲ್ಲ. ಹಾಗಾಗಿರುವುದಕ್ಕೆ ಈ ಲೇಖಕರಿಗಿರುವ ಕನ್ನಡ ಬರೆವಣಿಗೆಯ ಅನಭ್ಯಾಸವೆ ಕಾರಣವೆಂದು ಹೇಳಬಹುದು. ಅದೇನು ವಿಚಿತ್ರವೊ ! ಶ್ರೀಶರಚ್ಚಂದ್ರರ ೭-೮ ಕತೆ-ಕಾದಂಬರಿಗಳು ಕನ್ನಡದಲ್ಲಿ ಬಂದಿವೆಯಾದರೂ-ಎಲ್ಲವೂ ಹೊಸ ಲೇಖ ಕರ ಕೈಗೆ ಸಿಕ್ಕಿ-ಒಂದೂ ಶ್ರೀಶರಚ್ಚಂದ್ರರ ಸಾಹಿತ್ಯದ ಸಮಗ್ರ ಸೌಂದರ್ಯವನ್ನು ತೋರಿಸುವ ಸಾಮರ್ಥ್ಯವನ್ನು ಪಡೆದಿಲ್ಲ. ಇದೇನು ಕನ್ನಡಿಗರ ದುರ್ದೈವವೊ, ಶರಚ್ಚಂದ್ರರ ದುರ್ದೈವವೊ ! ಪ್ರಸ್ತುತ ಲೇಖಕರು ಶ್ರೀ ಶರಚ್ಚಂದ್ರರ ಇನ್ನೂ ಹಲವು ಗ್ರಂಥಗಳನ್ನು ಕನ್ನಡಕ್ಕೆ ತರುವವರಿದ್ದಾರೆ ; ತರಲಿ. ಸಂತೋಷ ! ಒಳ್ಳೆಯ ರೀತಿಯಿಂದ ಅನುವಾದಿಸಿ ತಂದಲ್ಲಿ ತುಂಬ ಸಂತೋಷ !!

—ಶಾ. ಬಾ. ರಾವ್.



ಜಯಂತಿಯ
ತರುಣ ಬರೆಹಗಾರರೊಬ್ಬರು

ಪ್ರೊ. ಎನ್. ಎಮ್. ಕುಲಕರ್ಣಿ ಎಂ. ಎ.

ಇವರು ಬಾಗೇವಾಡಿಯಲ್ಲಿ ಹುಟ್ಟಿದರು. ಇವರಿಗೆ ಈಗ ಸುಮಾರು ೩೪ ವರ್ಷಗಳು. ಬನಾರಸ ಹಿಂದೂ ಯುನಿವ್ಹರ್ಸಿಟಿಯ ಎಂ. ಎ ಪರೀಕ್ಷೆಯಲ್ಲಿ, ಇಂಗ್ಲೀಷನ್ನು ಮುಖ್ಯವಿಷಯ ವನ್ನಾಗಿಟ್ಟುಕೊಂಡು, ಮೊದಲನೆಯ ವರ್ಗದಲ್ಲಿ ಮೊದಲಿಗರಾಗಿ ತೇರ್ಗಡೆ ಹೊಂದಿದ್ದಾರೆ. ಸ್ವಂತ ಪರಿಶ್ರಮದಿಂದಲೇ ವಿದ್ಯಾಭ್ಯಾಸವನ್ನು ಮುಂದು ವರಿಸಿ ವಿಶೇಷಕೀರ್ತಿಯನ್ನು ಸಂಪಾದಿಸಿ, ಸದ್ಯ ಬನಾರಸ ಹಿಂದೂ ಯುನಿವ್ಹರ್ಸಿಟಿಯಲ್ಲಿ ಇಂಗ್ಲೀಷಿನ ಉಪಾಧ್ಯಾಪಕರಾಗಿದ್ದಾರೆ. ಹಿಂದೂ ಯುನಿವ್ಹರ್ಸಿಟಿಯಲ್ಲಿ ಹಿಂದಿಯ ಮುಖಾಂತರ ವಾಗಿಯೇ ಕಾಲೇಜಿನ ಶಿಕ್ಷಣವಾದರೂ ನಡೆಯ ಬೇಕೆಂದು ಚಳವಳಿನಡೆದಾಗ ಬರೆದ “ Have we done with English ?- ಇಂಗ್ಲೀಷಿನ ಸಂಬಂಧ ಕಡಿಯಿತೇ ? ” ಎಂಬ ಇವರ ಲೇಖನವು, ವಿದ್ವಜ್ಜನರ ಮನವನ್ನು ಆಕರ್ಷಣ ಮಾಡಿತು. ಅಲ್ಲದೆ ಇವರ ಬೇರೆ ಕೆಲವು ಇಂಗ್ಲಿಷ್ ಲೇಖನಗಳು ‘ Modern Reviw ’ ‘ Chronicle ’ ‘ Herald ’ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕನ್ನಡವೆಂದರೆ ಇವರಿಗೆ ಒಂದು ಬಗೆಯ ಹುಚ್ಚು. ಕನ್ನಡದ ಸೇವೆ ಮಾಡಲು ಹೆಚ್ಚು ಅನುಕೂಲವಾಗಬೇಕೆಂದು ಸಾಂಗಲಿಯ ವಿಲಿಂಗ್ಡನ ಕಾಲೇಜಿನಲ್ಲಿ, ಒಂದು ವರ್ಷ ಅಧ್ಯಾಪಕ ರಾಗಿದ್ದರು. ಆದರೆ ದುರ್ದೈವದಿಂದ ಅಲ್ಲಿಯ ಹವಾಮಾನವು ಇವರಿಗೆ ಒಗ್ಗದ್ದರಿಂದ, ಪುನಃ ಕಾಶಿಗೆ ತೆರಳಬೇಕಾಯಿತು. ಬನಾರಸದ ಕರ್ನಾಟಕ ಸಂಘದ ಮುಖ್ಯ ಕಾರ್ಯಕರ್ತರಲ್ಲಿ ಇವರು ಒಬ್ಬರಾಗಿದ್ದುಕೊಂಡು, ಕನ್ನಡಕ್ಕೆ ಸೇವೆ ಸಲ್ಲಿಸುತ್ತಲಿದ್ದಾರೆ.

ಈ ಸಂಚಿಕೆಯಲ್ಲಿ ಪ್ರಕಟವಾದ ‘ ದಿವಂಗತ ’ ಎಂಬ ಇವರ ನಾಟಕವು, ಇವರ ಕನ್ನಡ ಬರೆಹ ದಲ್ಲಿ ಪ್ರಥಮಪ್ರಯತ್ನವಾಗಿದ್ದರೂ ತುಂಬ ರಸ ಭರಿತವಾಗಿದೆಯೆಂಬುದು ವಾಚಕರ ಗಮನಕೆ ಬಾರದಿರದು. ‘ ಚಾಡಿಯ ಚಾಕು ’ ಎಂಬ ಇವರ ದೊಡ್ಡ ನಾಟಕವೊಂದು ಅಚ್ಚಾಗಲಿದೆ.



ಏಕಮತವೋ, 'ಏಕಮತ್ರ'ವೋ ?

ಸದ್ಯಕ್ಕೆ ಜಗತ್ತಿನ ಅನೇಕ ಮೂಲೆಗಳಲ್ಲಿ ಸರ್ವಾಧಿಕಾರಿತ್ವಕ್ಕೂ ಪ್ರಜಾಪ್ರಭುತ್ವಕ್ಕೂ ಕಲಹ ನಡೆದಿದೆ. ಆ ಕಲಹದ ಛಾಯೆ ನಮ್ಮ ದೇಶದಲ್ಲೂ ಬಿದ್ದಿದೆ ಎಂದು ಹೇಳಬಹುದು. ತಮ್ಮನ್ನಾಳುವ ಪರಕೀಯ ಸತ್ತೆಯನ್ನು ಏಕಮುಖವಾಗಿ ಎದುರಿಸಬೇಕೆಂಬ ಕಾಂಗ್ರೆಸ್ಸು, ಯಾವ ಮುಖದಿಂದ ಈಗ ಆ ಕಾರ್ಯವನ್ನು ನಡೆಸಿದೆ ಎಂದು ಹೇಳುವುದು ಕಠಿನವಾಗಿದೆ. ಸ್ವಾತಂತ್ರ್ಯಪ್ರೇಮವನ್ನು ಸೃಷ್ಟಿಸಿದ ಈ ಬ್ರಹ್ಮಸಂಸ್ಥೆಯಲ್ಲಿ ಈಗ ಅನೇಕ ಮುಖಗಳು ಕಂಡುಬರುತ್ತಿವೆಯೆಂಬುದಕ್ಕೆ ತೀರ ಇತ್ತೀಚಿನ ಒಂದು ದೃಷ್ಟಾಂತವನ್ನು ಕೊಡಬಹುದು: ಯುರೋಪಕ್ಕೆ ಹೊರಡುವ ಮುಂಚೆ ಪಂಡಿತ ಜವಾಹರಲಾಲರು ಒಂದೆರಡು ಮಹತ್ವದ ಭಾಷಣಗಳನ್ನು ಮಾಡಿದರು. ಒಂದೆಡೆ, ಸಂಸ್ಥಾನಗಳ ರಾಜ್ಯಪದ್ಧತಿ ಒಡನಾಯಿಸುವಂತೆ ನೋಡುವುದು ಕಾಂಗ್ರೆಸ್ಸಿನ ಧೋರಣೆಯಾಗಿದೆ ಎಂದು ಹೇಳಿದರು. ಇದೇ ವಿಷಯವಾಗಿ 'ಸಂಸ್ಥಾನದ ಒಳನಡೆವಳಿಯಲ್ಲಿ ಕೈಹಾಕಬಾರದೆಂದು ಕಾಂಗ್ರೆಸ್ಸಿನ ಧೋರಣೆ ಇದೆ' ಎಂದು ಸರದಾರ ವಲ್ಲಭಭಾಯಿಯವರು ಹೇಳಿದರು. ಅದರಂತೆಯೇ, 'ಬರಲಿರುವ ಸಂಘಟನಾ (federation) ಪದ್ಧತಿಯನ್ನು ಸತ್ಯಾಗ್ರಹದಿಂದ ಕೂಡ ಎದುರಿಸುವೆವು' ಎಂದು ರಾಷ್ಟ್ರಪತಿ ಬಾಬು ಸುಭಾಷರು ಇತ್ತ ಸಾರುತ್ತಲಿದ್ದಾರೆ; ಅತ್ತ ಶ್ರೀಯುತ ಭುಲಾಭಾಯಿಯವರು 'ಇಂತಿಂತಹ ಹೆಚ್ಚುಕಡಮೆಗಳನ್ನು ಮಾಡಿದರೆ ಕಾಂಗ್ರೆಸ್ಸು ಸಂಘಟನಾಪದ್ಧತಿಯನ್ನು ಸ್ವೀಕರಿಸಬಹುದು' ಎಂದು ಉದ್ಘೋಷಿಸುತ್ತಲಿದ್ದಾರೆ. ಇನ್ನೂ ಅನೇಕ ವಿಷಯಗಳಲ್ಲಿ ರಾಷ್ಟ್ರದ ಹಿರಿಯರು ಹೀಗೆಯೆ ವಿರುದ್ಧಾಭಿಪ್ರಾಯಗಳನ್ನು ಪ್ರಕಟಿಸುತ್ತಿರುವಾಗ. ಜನತೆಯು ಕಾಂಗ್ರೆಸ್ಸಿನ ಕಡೆಗೆ ಯಾವ ಆಶೆಗಾಗಿ- ಯಾವ ಧೋರಣೆಗಾಗಿ ನೋಡಬೇಕು? ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹವನ್ನು ಹೂಡಿದ ಕಾಂಗ್ರೆಸ್ಸು, ಇಂದು ಅಲ್ಪಸ್ವಲ್ಪ ಅಧಿಕಾರಗಳ ಬದಲಾವಣೆಯನ್ನೆ ಧೋರಣೆಯಾಗಿಟ್ಟುಕೊಂಡಂತಿದೆ. ಒಂದು ಪ್ರಾಂತದ ಗವರ್ನರನನ್ನು ನಿಯಮಿಸಿದಲ್ಲಿ ಪ್ರತಿಭಟಿಸುವ ಕಾಂಗ್ರೆಸ್ಸು, ಸಾಮ್ರಾಜ್ಯವಿನಿಮಯದ ಪ್ರಶ್ನೆಗಾಗಿ ಮಧ್ಯವರ್ತಿ ಸರಕಾರಕ್ಕೆ ಹಟದ ಗೊತ್ತುವಳಿಯನ್ನು ಕಳುಹಿಸಿ ತೃಪ್ತವಾಗಬಯಸುತ್ತಿದೆ. ಇಡಿಯ ದೇಶದ ರಾಜ್ಯಸೂತ್ರಕ್ಕೆ ಸಂಚಾಲನೆಯನ್ನು ಕೊಡಬೇಕಾದ ವರ್ಕಿಂಗ್‌ಕಮಿಟಿಯು ೪-೬ ದಿವಸಗಳ ಅಧಿವೇಶನವನ್ನೆಲ್ಲ ವೈಯಕ್ತಿಕ ಕಲಹ-ವಿರೋಧಗಳಿಗೆ ಬೆಸಕೆ ಕೊಡುವುದರಲ್ಲಿಯೆ ಕಳೆಯಿತು. 'ದೂರದ ಧ್ಯೇಯವನ್ನು ಮರೆತು, ಸದ್ಯದ ಸವಿಗಾಗಿಯೆ ಬಾಯ್ಬಿಡುತ್ತಿದ್ದೇವೆ' ಎಂದು ಜವಾಹರರು ಹೇಳಿದ್ದು ಸತ್ಯವಾಗಿದೆ, ಕಳವಳವನ್ನುಂಟುಮಾಡುವ ಮಾತಾಗಿದೆ.

ಆಡಳಿತಗಾರರೊ, ಆಡಿಟರರೊ ?

ನಿಜವಾಗಿ ನೋಡಿದಲ್ಲಿ ಕ್ರಮೇಣ ಕಾಂಗ್ರೆಸ್ಸಿನಲ್ಲಿ ವೈಯಕ್ತಿಕ ಆಡಳಿತೆಯೆ ಬೆಳೆಯತೊಡಗಿದೆ ಎಂದು ಕಂಡುಬರುವುದು. ಶ್ರೀ. ಸಾಂಬಮೂರ್ತಿಯವರು ರಾಜೀನಾಮೆ ಕೊಟ್ಟರೆ, ಅಖಿಲ ಭಾರತ ವರ್ಕಿಂಗ್ ಕಮಿಟಿಯು ಅದರ ವಿಚಾರಣೆಯನ್ನು ಮಾಡಬೇಕು! ಮಧ್ಯಪ್ರಾಂತದ ಮಂತ್ರಿಗಳಲ್ಲಿ ವೈಯಕ್ತಿಕ ವೈಮನಸ್ಯ ಬೆಳೆದರೆ, ಅದನ್ನೂ ವರ್ಕಿಂಗ್ ಕಮಿಟಿಯೆ ವಿಚಾರಮಾಡಬೇಕು! ಇದು ಕ್ರಮವೋ- ಎಂದು ಸಂದೇಹಪಡುವಂತಿದೆ. ಅಖಿಲಭಾರತ ಪಾರ್ಲಮೆಂಟರಿ ಕಮಿಟಿಯನ್ನು ನಡೆಯಿಸುವುದೇಕೆ? ಮೇಲಿನ ಪ್ರಶ್ನೆಗಳ ವಿಚಾರಣೆಯು ಆ ಪಾರ್ಲಮೆಂಟರಿ ಕಮಿಟಿಯಲ್ಲಿಯೆ ಆಗಬೇಕಾದದ್ದು. ಕೇವಲ ಅಖಿಲಭಾರತದ ದೃಷ್ಟಿಯಿಂದ, ಭಾರತೀಯ ಪ್ರಜೆಗಳ ಹಿತದ ದೃಷ್ಟಿಯಿಂದ ಮಹತ್ವದ್ದುವೆನಿಸಿದ ಸಂಗತಿಗಳನ್ನು ವರ್ಕಿಂಗ್ ಕಮಿಟಿಯು ವಿಚಾರಿಸತಕ್ಕದ್ದು. ಆದರೆ ಇಂದಿನ ಕಾಂಗ್ರೆಸ್ಸಿನ ಪರಿಸ್ಥಿತಿಯಲ್ಲಿ ಪ್ರಜೆಗಳ ಕೂಗು ಕಾಂಗ್ರೆಸ್ ಸರಕಾರದ ಮಂತ್ರಿಮಂಡಳವಾದ ವರ್ಕಿಂಗ್ ಕಮಿಟಿಗೆ ಮುಟ್ಟುವುದೆ ದುಸ್ತರವಾಗಿದೆ. ವರ್ಕಿಂಗ್ ಕಮಿಟಿಯ ಹಿರಿಯರಿಗೆ ಮಹತ್ವದ್ದುವೆನಿಸಿದ ಪ್ರಶ್ನೆಗಳೆ ಬೇರೆ, ಬಡ ಪ್ರಜೆಗಳ ಪ್ರಶ್ನೆಗಳೆ ಬೇರೆ- ಹೀಗಾಗಿದೆ ಇಂದಿನ ಪರಿಸ್ಥಿತಿ.

ಶಿಸ್ತಿಗಾಗಿ ಶಿರಚ್ಛೇದ

ಈ ಮಾತಿನಲ್ಲಿ ಅತಿಶಯೋಕ್ತಿ ಇದೆ ಎನ್ನುವವರು ಎಲ್ಲ ಕಾಂಗ್ರೆಸ್ ಕಮಿಟಿಗಳ ಆಡಳಿತವನ್ನು ಸೂಕ್ಷ್ಮವಾಗಿ ನಿರೀಕ್ಷಿಸಬೇಕು. ಕಾಂಗ್ರೆಸ್ಸು ಒಂದು ಕಡೆ ಸ್ವಾತಂತ್ರ್ಯವನ್ನು ಧ್ಯೇಯವಾಗಿರಿಸಿಕೊಂಡರೆ, ಇನ್ನೊಂದು ಕಡೆ ಪ್ರಜಾಪ್ರಭುತ್ವ (Democracy) ದ ತತ್ತ್ವಕ್ಕೆ ಬದ್ಧವಾಗಿದೆ. ವ್ಯಕ್ತಿಸ್ವಾತಂತ್ರ್ಯ ಮತ್ತು ವಿಚಾರಸ್ವಾತಂತ್ರ್ಯ ಇವು ಪ್ರಜಾಪ್ರಭುತ್ವದ ತಳಹದಿಯಾಗಿವೆ. ಸಾವಿರಾರು ವರ್ಷ ಸಮಾಜದಲ್ಲಿ ದೇವ-ಧರ್ಮ-ಗುರು-ಹಿರಿಯರ ದಾಸರಾಗಿ, ಮುಂದೆ ಪರಸತ್ತೆಯ ಗುಲಾಮರಾಗಿ ಬಾಳುವ ನಮ್ಮ ಬಂಧುಗಳಿಗೆ, ವ್ಯಕ್ತಿ-ಮತ್ತು ವಿಚಾರ

ಸ್ವಾತಂತ್ರ್ಯಗಳು ಕಲಿಯಬೇಕಾದ ವಿಷಯಗಳಾಗಿವೆ; ಅವುಗಳನ್ನು ಕಲಿಸುವ ಹೊಣೆಗಾರಿಕೆ ಕಾಂಗ್ರೆಸಿನವರದು. ಅದಕ್ಕಾಗಿಯೆ ಹಳ್ಳಿ-ತಾಲೂಕು-ಜಿಲ್ಲೆ-ಪ್ರಾಂತ ಮೊದಲಾದ ಕ್ರಮದಿಂದ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿದ್ದು. ಸಾಮಾನ್ಯಮನುಷ್ಯನ ಬಯಕೆ-ಬೇಡಿಕೆಗಳು ಮೇಲಿನ ವರೆಗೆ ಮುಟ್ಟುವ ಕ್ರಮವಿದು. ಆದರೆ ಕಾಂಗ್ರೆಸ್ಸು ಅಧಿಕಾರಾರೂಢವಾದಂದಿನಿಂದ, ಕೆಳಗಿನವರ ಕಲೆಯೆ ಕಳಚಿಬಿದ್ದಂತಾಗಿದೆ. ಕಾಂಗ್ರೆಸ್ಸು ಆಡಳಿತವನ್ನು ಕೈಕೊಂಡಿದೆ; ಆಡಳಿತವು ಸೂಕ್ಷ್ಮವಾದ, ಶಾಸ್ತ್ರೀಯವಾದ, ವಿಶಾಲವಾದ ವಿಷಯ; ತಜ್ಞರ ವಿಷಯ; ಆದುದರಿಂದ ಅಜ್ಞನಾದ ಸಾಮಾನ್ಯ ಮನುಷ್ಯನು ಅದರಲ್ಲಿ ತಲೆಹಾಕುವಂತಿಲ್ಲ. ಆ ದುರ್ಬುದ್ಧಿ ಅವನಿಗೆ ಬರಬಾರದೆಂದು ಶಿಸ್ತಿನ ಪಿನಲ್ ಕೋಡೊಂದು ನಿರ್ಮಿಸಲ್ಪಟ್ಟಿದೆ. ಮೇಲಿನವರೆ ಪ್ರಶ್ನೆಗಳನ್ನು ಹುಡುಕುವರು; ಅವುಗಳ ಮಹತ್ತ್ವವನ್ನು ನಿರ್ಣಯಿಸುವರು. ಕೆಳಗಿನ ಕಾಂಗ್ರೆಸ್ ಕಮಿಟಿಗಳು, ಆಯಾ ಸ್ಥಳದ ಸರಕಾರೀ ಅಧಿಕಾರಿಗಳ ಹೆಡ್ ಕ್ಲಾರ್ಕಿನಂತಾಗಲಿ ಇಲ್ಲವೆ ಚುನಾವಣೆಯಲ್ಲಿಯ ಪ್ರತಿಸ್ಪರ್ಧಿಯಂತಾಗಲಿ, ನಿಸ್ಸತ್ತ್ವವಾಗಿ ಇಲ್ಲವೆ ಕಾರ್ಯದೀರ್ಘಸೂತ್ರಿಗಳಾಗಿ ನಿಂತಿವೆ. ಬುಡವಿಲ್ಲದೆ ಶಿಖರವನ್ನು ನಿಲ್ಲಿಸುವ ಈ ಪ್ರವೃತ್ತಿಯ ಪರಿಣಾಮ ಏನಾಗಬಹುದೆಂದು ಬೇರೆ ಹೇಳಬೇಕೆ?

ಹಿಂದು-ಮುಸಲ್ಮಾನ ಐಕ್ಯಸಂಧಾನ

ಮಹಾತ್ಮಾ ಗಾಂಧಿಯವರು ಬ್ಯಾರಿಸ್ಟರ ಜಿನ್ನಾರೊಡನೆ ಪ್ರಾರಂಭಿಸಿದ ಮಾತುಕತೆಗಳಿಂದ ಮುಂದುವರಿದ ಐಕ್ಯಸಂಧಾನವು ಇದೇ ಪ್ರವೃತ್ತಿಯ ಇನ್ನೊಂದು ಉದಾಹರಣೆ ಎಂದು ಹೇಳಬಹುದು. ಹಿಂದು-ಮುಸಲ್ಮಾನರ ಐಕ್ಯವೇನೋ ಬೇಕು— ಈ ಮಾತನ್ನು ಯಾವ ರಾಷ್ಟ್ರೀಯವೃತ್ತಿಯವನಾದರೂ ಒಪ್ಪುವ ಮಾತು. ಆದರೆ ಈ ಸಂಧಾನದ ಪ್ರಯತ್ನಗಳನ್ನು ನೋಡಿ ನೋಡಿದಂತೆ ನಮ್ಮ ದೇಶದಲ್ಲಿ ಹಿಂದು-ಮುಸಲ್ಮಾನರ ಅನೈಕ್ಯವು ಅತ್ಯಂತವಾಗಿದೆ ಎಂದು ಭಾಸವಾಗುವಂತಿದೆ. ಆದರೆ ವಸ್ತುಸ್ಥಿತಿ ಎಂತಹದಿದೆ? ಹಿಂದುಸ್ಥಾನದ ಲಕ್ಷಾವಧಿ ಹಳ್ಳಿಗಳಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಪರಸ್ಪರ ದ್ವೇಷಮಾಡುತ್ತಿದ್ದಾರೆ? ಇನ್ನುಳಿದ ನೂರಾರು ಪಟ್ಟಣಗಳಲ್ಲಿ ಯಾವ ತರಗತಿಯ ನಾಗರಿಕರು ಈ ಜಾತೀಯ ಕಲಹಗಳನ್ನು ಕೆಣಕುತ್ತಾರೆ? ಈಗ ನಡೆದ ಸಂಧಾನವು ಯಾವ ಐಕ್ಯಕ್ಕಾಗಿ? ಹಿಂದು-ಮುಸಲ್ಮಾನ ಧರ್ಮಗಳ ಐಕ್ಯಕ್ಕಾಗಿಯೆ? ಹಿಂದು-ಮುಸಲ್ಮಾನ ಸಮಾಜಗಳ ಐಕ್ಯಕ್ಕಾಗಿಯೆ? ಇಲ್ಲವೆ ಇಡಿಯ ದೇಶದ ಆಡಳಿತ-ಅಧಿಕಾರಗಳಲ್ಲಿ ಯಾವ ಜಾತಿಗೆ ಎಷ್ಟುಪಾಲು ಬೇಕೆಂಬುದಕ್ಕಾಗಿಯೆ? ಇಲ್ಲವೆ-ಇಲ್ಲದ ಜಗಳವನ್ನು ಹುಟ್ಟಿಸುವ ಕಿಡಿಗೇಡಿಗಳ ಬಾಯಿಕಟ್ಟುವುದಕ್ಕಾಗಿಯೆ? ಈಗಿನ ಸಂಧಾನವು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿಲ್ಲ ಎಂದು ಹೇಳಬಹುದು. ಇನ್ನು ಆಡಳಿತದ, ಅಧಿಕಾರಪದದ ಪಾಲಿಗಾಗಿ ಈ ಸಂಧಾನವಿದ್ದರೆ ಇಂದು ಮುಸಲ್ಮಾನರಂತೆ ನಾಳೆ ಇನ್ನೊಂದು ಜಾತಿಯವರೂ ಹಟ ಹಿಡಿಯಬಹುದು. ದೇಶದ ರಾಜಕಾರಣದಲ್ಲಿ ಒಂದು ಜಾತಿಗೆ ಸ್ಥಾನವನ್ನು ಕೊಟ್ಟರೆ, ಇನ್ನೊಂದು ಜಾತಿಗೂ ಕೊಡಲೇಬೇಕಾಗುವುದು. ಇಂದು ಝೆಕೊಸ್ಲೊವಾಕಿಯಾದಲ್ಲಿ ನಡೆದುದೆ ನಾಳೆ ನಮ್ಮಲ್ಲಿ ನಡೆಯುವುದು; ಝೆಕೊಸ್ಲೊವಾಕಿಯಾದಲ್ಲಿ ಮೊದಲು ಜರ್ಮನ್ ನಾಗರಿಕರು ಸ್ವಾಯತ್ತತೆಯನ್ನು ಬೇಡಿದರು; ಈಗ ಸ್ಲೊವಾಕ ನಾಗರಿಕರು ಬೇಡುತ್ತಲಿದ್ದಾರೆ; ಇನ್ನೆಂಟು ದಿವಸಗಳಲ್ಲಿ ಅದೇ ರಾಜ್ಯದಲ್ಲಿದ್ದ ಹಂಗೇರಿಯನ್ನರೂ ಬೇಡುವರು. ಅದರಂತೆಯೆ ಇಂದು ಮುಸಲ್ಮಾನರು, ನಾಳೆ ಸೀಖರು, ಮುಂದೆ ಬ್ರಾಹ್ಮಣರು ಹೀಗೆ ಎಲ್ಲರೂ ಅಲ್ಪಸಂಖ್ಯಾಕರೆಂದು ತಮಗಾಗಿ ವಿಶಿಷ್ಟಸಂರಕ್ಷಣೆಯನ್ನು ಬೇಡುವವರೆ. ಒಂದು ಜಾತಿಗೆ ಒಪ್ಪಿಕೊಂಡುದನ್ನು ಇನ್ನೊಂದಕ್ಕೆ ಇಲ್ಲೆ— ಎನಲು ಕಾರಣವೇನು? ಇಡಿಯ ದೇಶದ ಪ್ರತಿನಿಧಿಯು ತಾನು ಎಂದು ಕಾಂಗ್ರೆಸ್ಸು ನಿಜವಾಗಿಯೆ ನಂಬಿದ್ದರೆ, ಎಲ್ಲ ಜಾತಿಸಂಸ್ಥೆಗಳನ್ನು ಅದು ನಿರ್ದಾಕ್ಷಿಣ್ಯವಾಗಿ ಅಲಕ್ಷಿಸಬೇಕು; ಇಲ್ಲವೆ ಒಂದು ಜಾತಿಯಂತೆ ಇನ್ನೂ ಹತ್ತಾರು ಜಾತಿಗಳ ಪರಿಸ್ಥಿತಿ ಇದೆ ಎಂಬುದನ್ನು ಕಂಡು ಎಲ್ಲರೊಡನೆಯೂ, ಎಲ್ಲರಿಗೂ ಅಸಂತೋಷವನ್ನುಂಟುಮಾಡದಂತೆ ಸಂಧಾನವನ್ನು ಮಾಡಬೇಕು. ಜನತೆಯಿಂದಲೆ ತನಗೆ ಬಲವಿದೆ ಎಂಬುದನ್ನು ಕಾಂಗ್ರೆಸ್ಸು ಮರೆತಿಲ್ಲವಾದರೆ, ಜನತೆಯ ಅಭಿಪ್ರಾಯವನ್ನು ಸಾರ್ವತ್ರಿಕಮತಗಣನೆ (plebiscite) ಯಿಂದ ಪಡೆಯಬೇಕು; ಬ್ಯಾ. ಜಿನ್ನಾ ಮತ್ತು ಅವರ ಮಿತ್ರರೆದುರು ಈ ಜನತಾನಿರ್ಣಯವನ್ನಿಡಬೇಕು; ಅದರಂತೆಯೆ ತಾನು ನಡೆಯಬೇಕು. ಈಗ ನಡೆದದ್ದು ಜನತಾನಿರ್ಣಯವಲ್ಲ, ಕೆಲವೊಂದು ವಿಶಿಷ್ಟವ್ಯಕ್ತಿಗಳ ಮಾನಾಪಮಾನದ ನಿರ್ಣಯ; ಇದು ಪ್ರಜಾಪ್ರಭುತ್ವವಲ್ಲ, 'ಪ್ರಜಾ-ದಬ್ಬುತ್ವ.'

ಜಿನ್ನಾ ಅವರ ಜಿಗಿದಾಟ-ನೆಗೆದಾಟಗಳು

ಒಂದುಕಾಲದ ದೇಶಾಭಿಮಾನದ ಬಂಡವಾಳದಿಂದ ರಾಜಕಾರ್ಯದಲ್ಲಿ ಬ್ಯಾ. ಜಿನ್ನಾ ಅವರಿಗೆ— ಇದುವರೆಗೂ— ಒಂದು ಬಗೆಯ ಮರ್ಯಾದೆಯ ಸ್ಥಾನವಿದ್ದಿತು. ಈಗ ಹಿಂದೂ-ಮುಸ್ಲಿಮರ ಸಂಧಾನದ ವಿಚಾರದಲ್ಲಿ, ಮಹಾತ್ಮಾ ಗಾಂಧಿ ಮತ್ತು ಬ್ಯಾ. ಜಿನ್ನಾ ಅವರಿಗೂ, ಪಂಡಿತ ಜವಾಹರಲಾಲ ಮತ್ತು ಬ್ಯಾ. ಜಿನ್ನಾ ಅವರಿಗೂ ನಡೆದ ಪತ್ರವ್ಯವಹಾರವನ್ನು ನೋಡಿದರೆ, ಮಹಾತ್ಮಾ ಗಾಂಧಿಯವರಂತೆ 'ನೀವು ಮೊದಲಿನ ಜಿನ್ನಾ ಅಹುದೇನು?' ಎಂದು ಯಾರಿಗೂ ಕೇಳಬೇಕೆನಿಸುತ್ತದೆ. ಜಿನ್ನಾ ಅವರಿಗೆ ಬರೆದಿದ್ದ ಗಾಂಧಿಯವರ ಪತ್ರಗಳನ್ನೂ ಜವಾಹರಲಾಲರ ಪತ್ರಗಳನ್ನೂ ಓದಿನೋಡಿದರೆ, ಒಂದೊಂದು ಶಬ್ದದಲ್ಲಿಯೂ ಒಂದುಗೂಡಬೇಕೆಂಬ ಹಂಬಲು, ಅದಕ್ಕಾಗಿದ್ದ ವಿನಯ, ಸ್ನಿಗ್ಧತೆ, ತ್ಯಾಗ ಇವೆಲ್ಲ ಸ್ಪಷ್ಟವಾಗಿ ಕಾಣುತ್ತವೆ; ಇಷ್ಟೇ ಅಲ್ಲ, ಕೆಲವು ಮಾತುಗಳನ್ನು ನೋಡಿ, ಬಿಸಿನೆತ್ತರಿನ ಭಾರತೀಯರು 'ಎಂತಹ ಹೇಡಿಗಳಿವರು?' ಎಂದು ಹೀಗಳೆಯುವಂತಿವೆ. ಅದೇ ಜಿನ್ನಾ ಅವರ ಪತ್ರಗಳನ್ನು ನೋಡಿರಿ; ಮಾತು-ಮಾತಿನಲ್ಲಿಯೂ ಧರ್ಮಾಂಧತೆ, ಉದ್ಧತವೃತ್ತಿ, ರುಕ್ಷತೆ ಇವು ಎದ್ದುನಿಂತಿವೆ. ಜಿನ್ನಾ ಅವರ ಮಾತಿನಲ್ಲಿ ಒಪ್ಪಂದಕ್ಕಾಗಿ ಮನಃಪೂರ್ವಕವಾಗಿ ಮುಂದೆ-

ಮಾಡಿದ್ದಕ್ಕೆ ಎಲ್ಲಿಯೂ ದೃಷ್ಟಿಗೆ ಬೀಳುವುದಿಲ್ಲ. ಈ ಜಗೆಯನ್ನು ನೋಡಿದರೆ ಜಿನ್ನಾ ಅವರಿಗೆ, ಹಿಂದುಸ್ಥಾನದ ಸ್ವಾತಂತ್ರ್ಯಸಾಧನೆಗಿಂತ ಮುಸಲ್ಮಾನ್ ಜಾತಿಯವರಿಂದ 'ತಮ್ಮ ಮುಂದಾಳು' ಎಂದು ಹೇಳಿಸಿಕೊಳ್ಳುವುದರಲ್ಲಿಯೆ ಹೆಚ್ಚು ಶ್ರದ್ಧೆಯಿರುವಂತೆ ಕಂಡುಬರುವುದು. ಮುಸ್ಲೀಮ್ ಲೀಗಿನಲ್ಲಿ ನಿಜವಾದ ದೇಶಪ್ರೇಮಿಗಳಿರುವರು; ಆದರೆ ಜಿನ್ನಾ ಅವರ ಸ್ವಾರ್ಥಸಾಧಕವಾದ ಜಾತೀಯ ಅಂಧಪ್ರೀತಿಯು ಮುಸಲ್ಮಾನ್ ಜನಸಾಮಾನ್ಯರ ಮನಸ್ಸನ್ನು ಆಕರ್ಷಿಸಿಕೊಂಡು, ಆ ದೇಶಾಭಿಮಾನಿ ಮುಸ್ಲೀಮ್ ಮುಂದಾಳುಗಳಲ್ಲಿಯ ವಿಶ್ವಾಸವನ್ನು ಕಡಿಮೆಮಾಡುತ್ತಲಿರುವುದು. ಅಸಮಾಧಾನದ ಸಂಗತಿ. ದೇಶದ ಅಭ್ಯುದಯದ ದೃಷ್ಟಿಯಿಂದ ಹಿಂದೂ-ಮುಸಲ್ಮಾನ್-ಸೀಖ್ ಇವರಲ್ಲಿ ಸಂಧಾನವಾಗಬೇಕಾದುದು ಅವಶ್ಯಕ ವಿಷಯ; ಆದರೆ ಮುಸಲ್ಮಾನರು ಹಟವಾದಿಗಳಾದ (ಮುಪ್ಪಿನ ಕಾಲದಲ್ಲಿ ಹಟವಾದಿತನ ಹೆಚ್ಚಾಗಿರುವುದು) ಜಿನ್ನಾ ಅವರನ್ನೆ ಮುಂದಾಳುಗಳೆಂದು ಮುಂದೆ ಚಾಚತೊಡಗಿದರೆ ಸಂಧಾನವಾಗುವುದು ಬಯಲಿಗೆ ಬಯಲೇ ಸರಿ! ಹಿಂದುಗಳ ಮುಂದಾಳುಗಳು ಇನ್ನು ಮೇಲಾದರೂ ಆತುರಪಟ್ಟು ಸಂಧಾನಕ್ಕೆ ತಾವೆ ಓಡಾಡದೆ, ವಿಧಾಯಕ ರೀತಿಯಲ್ಲಿ ತಮ್ಮ ಆಡಳಿತವನ್ನು ಸಾಗಿಸುವುದು ಒಳಿತು; ತುಂಟತನವು ಗೆಳೆತನಕ್ಕಿಂತಲೂ ಔದಾಸೀನ್ಯದಿಂದಲೆ ಬೇಗ ಹಾದಿಗೆ ಬರುವುದೆಂಬ ಮನೋವಿಜ್ಞಾನ ಸೂತ್ರವನ್ನು ಅವರು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಲೇಸು.

ಕಳೆದ ಸಂಚಿಕೆಯಲ್ಲಿ ಬರೆದ ಶಂಕರ-ಗೋವಿಂದರ ಕತೆಯನ್ನು ಇಲ್ಲಿ ಇನ್ನೊಂದು ಸಲ ನೆನಪುಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.

ಹಿಂದೀ ಪ್ರಚಾರದ ಹುಚ್ಚು ಕುಣಿತ

ಸ್ವತಂತ್ರ ಭಾರತದ ಸಂಯುಕ್ತ ಆಡಳಿತದ ವ್ಯವಸ್ಥೆಯಲ್ಲಿ ಅಂತಃಪ್ರಾಂತೀಯ ವ್ಯವಹಾರಕ್ಕಾಗಿ ಯಾವುದಾದರೊಂದು ಮಾಧ್ಯಮಭಾಷೆ ಇರಬೇಕೆಂಬ ಮಾತು ಸರ್ವಜನಸಮ್ಮತವಾದುದು. ಬಹುಜನರ ಭಾಷೆಯಾದುದರಿಂದ ಹಿಂದೀಭಾಷೆ 'ರಾಷ್ಟ್ರಭಾಷೆ'ಯಾಗಬೇಕೆಂದು ಮ. ಗಾಂಧಿಯವರೆಂದರು; ಅವರ ಎಲ್ಲ ಮಾತುಗಳನ್ನೂ ಎತ್ತಿಹಿಡಿಯುತ್ತಿರುವಂತೆ ಕಾಂಗ್ರೆಸ್ಸು ಈ ರಾಷ್ಟ್ರಭಾಷೆಯ ಮಾತನ್ನೂ ಎತ್ತಿಹಿಡಿಯಿತು. ಆವಶ್ಯಕತೆಯ ದೃಷ್ಟಿಯಿಂದ ಹಿಂದಿಯ 'ರಾಷ್ಟ್ರಭಾಷಾತ್ವ'ವನ್ನು-ಹಿಂದುಗಳ ಮಟ್ಟಿಗಾದರೂ-ಬಹುಜನರು ತಲೆಬಾಗಿ ಪುರಸ್ಕರಿಸಿದರು.

ಹಿಂದೀಭಾಷೆಯ ಪ್ರಚಾರಕ್ಕೆ ಆ ಭಾಷೆಯ ನಾಡುವ ಪ್ರಾಂತದ ಜನರ ಸಂಪೂರ್ಣ-ಸಾಭಿಮಾನ-ಸಹಾಯವಿರುವುದರಿಂದಲೂ, ಕಾಂಗ್ರೆಸ್ಸು ಹಿಂದೀ ಪ್ರಚಾರದ ಚಳವಳಿಗೆ ಪ್ರೋತ್ಸಾಹ ಕೊಟ್ಟುದರಿಂದಲೂ, ಪರಪ್ರಾಂತಪ್ರಾಂತಗಳಲ್ಲಿಯೂ ಹಿಂದೀ ಪ್ರಚಾರಕರು ಹಿಂಡುಹಿಂಡಾಗಿ ಬಂದರು; ಕಾಂಗ್ರೆಸ್ಸಿನ ಸೂಚನೆಗೆ ಮನ್ನಣೆಯಿತ್ತು ಬಾಗಿದ ತಲೆಯ ಮೇಲೆ, ಹಿಂದೀಭಾಷೆಯ ಹೊರೆಯನ್ನು ಔಚಿತ್ಯವಿಚಾರಿ ಹೇರಲು ತೊಡಗಿದರು.

ನಮ್ಮ ದಕ್ಷಿಣ ಪ್ರಾಂತಗಳಲ್ಲಿ ಮೊದಮೊದಲು ಬಂದ ಹಿಂದೀ ಪ್ರಚಾರಕರೆಲ್ಲರೂ ಉತ್ತರ ಭಾರತದಿಂದ ಬಂದವರು. ಅವರಲ್ಲಿಯ ಬಹುಜನರು ಹೊಟ್ಟೆಪಾಡಿಗಾಗಿ ಪ್ರಚಾರ ಕಾರ್ಯವನ್ನು ಕೈಕೊಂಡವರಾಗಿದ್ದರೂ, ದಕ್ಷಿಣದ ಕಾಡುಜನರಿಗೆ ಸ್ವರ್ಗದಿಂದ ತಂದ ವಿದ್ಯೆಯನ್ನು ಹೇಳಿಕೊಟ್ಟು, ಅವರನ್ನು ಸುಧಾರಿಸಲಿರುವೆವೆಂಬ ಹುಚ್ಚು ಹೆಮ್ಮೆಯವರಿಗೆ. ನಮ್ಮನ್ನೂ ನಮ್ಮ ಭಾಷೆಯನ್ನೂ ಕಂಡು ತಿರಸ್ಕಾರದ ನಗೆ ನಗುತ್ತಿದ್ದರು. ಕಾಂಗ್ರೆಸ್ಸಿನ ದಾಕ್ಷಿಣ್ಯಕ್ಕಾಗಿ ಅವರಿಂದಾಗುತ್ತಿರುವ ಅಭಿಮಾನಭಂಗವನ್ನೂ ನಾವು ಸಾಕಷ್ಟು ಸಹಿಸಿದೆವು. ಈಗಿನ ಪ್ರಚಾರಕರಲ್ಲಿ ಬಹುಜನರು ನಮ್ಮ ನಾಡಿನವರೆ ಆಗಿದ್ದರೂ ಹಿಂದಿಯನ್ನು ಕಲಿತ ಹೆಮ್ಮೆಯಲ್ಲಿ ಅವರು ಮಾತೃಭಾಷೆಯನ್ನು ಅಡಿಯ ಬುಡಕ್ಕೆ ಹಾಕುತ್ತಲಿದ್ದಾರೆ. ಕಾಂಗ್ರೆಸ್ಸಿನ ದಾಕ್ಷಿಣ್ಯ ಅವರಿಗೆ ಸಂರಕ್ಷಕ ಛತ್ರವಾಗಿ ನಿಂತಿದೆ. ಇದರ ಮೂಲಕ ನಮ್ಮ ಕನ್ನಡ ನಾಡಿನಲ್ಲಂತೂ ಹಿಂದೀಭಾಷೆಯು ಸ್ಥಾನವಲ್ಲದ ಸ್ಥಾನವನ್ನು ಆಕ್ರಮಿಸುತ್ತ ನಡೆದುದು ಖೇದಕರವಾದ ಸಂಗತಿಯಲ್ಲದೆ, ವಿಚಾರಣೀಯ ವಿಷಯವೂ ಆಗಿ ಕುಳಿತಿದೆ. ಇಂದಿನ ಪರಿಸ್ಥಿತಿಯನ್ನು ನೋಡಿದರೆ, ಶೂನ್ಯದಲ್ಲಿ ಕರ್ಣಾಟಕವನ್ನು ರಚಿಸಬೇಕಾಗಿದೆಯೆಂಬ ಮಾತನ್ನು ಕರ್ಣಾಟಕದ ಹಿತಾಕಾಂಕ್ಷಿಗಳೆಲ್ಲರೂ ಬಲ್ಲರು. ಆದರೆ ಕಟ್ಟಿ ನಿಲ್ಲಿಸಿದ ಸ್ಥಾನವನ್ನೆಲ್ಲ ಇನ್ನೊಬ್ಬರು ಆಕ್ರಮಿಸುತ್ತ ನಡೆದರೆ, ಕನ್ನಡಿಗರ ಸಂಸ್ಕೃತಿಗೆ ಮತ್ತೆ ಕಾಡೇ ಗತಿ. ವರ್ಧಾ ಶಿಕ್ಷಣದ ಯೋಜನೆ ಪ್ರಚಾರದಲ್ಲಿ ಬಂದಿತೆಂದರಂತೂ ಕನ್ನಡದ ಸ್ಥಾನ ಎಲ್ಲಿಗೆ ಬರುವುದೋ ಕಾಣೆವು; ಪ್ರಾಂತೀಯ ಭಾಷೆಗೆ ಆ ಯೋಜನೆಯಲ್ಲಿ ಮಹತ್ವದ ಸ್ಥಾನವಿಲ್ಲ; ಇದ್ದರೆ ಮಾತೃಭಾಷೆಗೆ ಒಂದು ಸ್ಥಾನವಿರಬಹುದು. ಕನ್ನಡನಾಡಿನ ವಿಚಿತ್ರ ಪರಿಸ್ಥಿತಿಯ ಮೂಲಕ, ಕನ್ನಡಿಗರ ಮಾತೃಭಾಷೆಯೆ ಇನ್ನೊಂದು ಭಾಷೆಯಾಗಿರುವಾಗ, ಕನ್ನಡದ ದೈನ್ಯತೆ ಇನ್ನಿಷ್ಟು ಹೆಚ್ಚಬಹುದೆಂದು ಹೆದರಿಕೆ ನಮಗೆ. ಹಿಂದೀ ಭಾಷೆಗಿರುವ ಸ್ಥಾನ ಸಾಕಷ್ಟು ದೊಡ್ಡದಾಗಿರುವುದರಿಂದ, ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಯಾವ ಚಟುವಟಿಕೆಗಳೂ ಬಲವಾದ ಆಘಾತವನ್ನು ಎದುರಿಸುತ್ತಲೆ ಮುಂದುವರಿಯಬೇಕಾಗುವುದೆಂಬುದನ್ನು, ಕನ್ನಡಿಗರು ಮರೆತು ನಡೆಯಲಾಗದೆಂದು ನಮ್ಮ ಎಚ್ಚರಿಕೆ!

'ಹಿಂದೀ ಪ್ರಚಾರದಿಂದ ಹಾನಿಯೇನು?'

ಯಾವ ವಿಚಾರವನ್ನೂ ಮಾಡದೆ ಅನೇಕರು ಕೇಳುವ ಪ್ರಶ್ನೆಯಿದೊಂದು; ಹಿಂದೀ ಪ್ರಚಾರಕರು ಯುಕ್ತರೀತಿಯಲ್ಲಿ ಕಾರ್ಯ ಮಾಡಿದರೆ ಹಾನಿ ಯಾವುದೂ ಇಲ್ಲವೆಂದು ನಾವೂ ಹೇಳುವೆವು. ಆದರೆ ವಸ್ತುಸ್ಥಿತಿ ವಿಚಿತ್ರವಾಗಿದೆ. ಪ್ರಚಾರಕರ ಹಿಂದಿಯ ಪ್ರೇಮ ಬರೀ ಹಿಂದಿಯ ಪ್ರೇಮವಾಗಿ ಉಳಿಯದೆ, ಅದು ಪ್ರಾಂತೀಯ ಭಾಷೆಯ ದ್ವೇಷ-ತಿರಸ್ಕಾರಗಳಲ್ಲಿ ಪರ್ಯವಸಾನ ಹೊಂದುತ್ತಲಿದೆ. 'ಹಿಂದಿಯು ಕೇವಲ ಅಂತಃಪ್ರಾಂತೀಯ ವ್ಯವಹಾರಕ್ಕೆ; ಪ್ರಾಂತದ ಪ್ರತಿಯೊಂದು ವ್ಯವಹಾರಕ್ಕೂ ಪ್ರಾಂತೀಯ ಭಾಷೆಗೆ ಸ್ಥಾನವಿದೆ' ಎಂಬ ರಾಷ್ಟ್ರಸಭೆಯ ತತ್ತ್ವವನ್ನು ಹಿಂದೀ ಪ್ರಚಾರಕರು ಎಂದೋ ಹಿಂದೆ ದೂಡಿ-

ಬಿಟ್ಟಿದ್ದಾರೆ. ಹಿಂದೀಪ್ರಚಾರಕರು ಪರಸ್ಪರರನ್ನು ಕಂಡಾಗ, ಇಲ್ಲವೆ ವಿದ್ಯಾರ್ಥಿಗಳೊಂದಿಗೆ ಅವರು ಬೇರೆ ವಿಷಯವನ್ನು ಕುರಿತು ಮಾತನಾಡುತ್ತಿರುವಾಗ, ಸಾರ್ವಜನಿಕ ಸಮ್ಮೇಳನಗಳು ನಡೆದಾಗ – ಕನ್ನಡನಾಡಿನಲ್ಲಿಯೂ— ಹಿಂದಿಯನ್ನು ಬಳಸುವ ಹಟವನ್ನವರು ಇಟ್ಟುಕೊಂಡಿರುವರು. ಪ್ರಾಂತೀಯ ಧುರೀಣರೂ ಯಾವ ಮೋಹದಿಂದಲೋ ಏನೋ– ಈ ರೀತಿಯನ್ನು ತಡೆದು ಹಿಡಿಯುವುದಿಲ್ಲವಿಷ್ಟೇ ಅಲ್ಲ; ತಮ್ಮ ಸಕ್ರೀಯ ಸಹಾನುಭೂತಿಯನ್ನು ತೋರಿಸುತ್ತಾರೆ. ಇದರಿಂದ ಕನ್ನಡಕ್ಕೆ ಹಾನಿಯೊದಗದೆ?

ಇನ್ನುಳಿದವರಿಗಿಂದ ಹೆಚ್ಚಿನ ಭಾಷೆಯೊಂದನ್ನು ತಾವು ಬಲ್ಲವ ರೆಂಬ ಹೆಮ್ಮೆಯನ್ನು ಮೆರೆಯಿಸುವುದು ಜನಸಾಮಾನ್ಯರದೊಂದು ರೀತಿ. ಹಿಂದಿಯನ್ನು ಕಲಿತವರೆಲ್ಲ ಈ ಬಗೆಯ ಹೆಮ್ಮೆಯನ್ನು ಮೆರೆಯಿಸಲಿಕ್ಕೆಂದು, ಹಿಂದೀ ಭಾಷೆಯ ವೃತ್ತಪತ್ರ–ಮಾಸಿಕಗಳನ್ನೆ ತರಿಸುವರು ; ಹಿಂದೀ ಭಾಷೆಯ ಪುಸ್ತಕಗಳನ್ನೆ ಕೊಳ್ಳುವರು. ತಮ್ಮ ವಾಚನದ ಬಯಕೆ ಅದರಲ್ಲಿ ತೀರಬಹುದಾದುದರಿಂದ, ಕನ್ನಡದ ಪತ್ರಿಕೆ- ಪುಸ್ತಕಗಳನ್ನವರು ಏತಕ್ಕೆ ತರಿಸಿಕೊಳ್ಳುವರು ? ಎರಡೆರಡು ಕಡೆಗೆ ಹಣ ವೆಚ್ಚಮಾಡುವುದಕ್ಕೆ ನಮ್ಮ ಜನರಲ್ಲಿ ಹೆಚ್ಚಿನ ಅಭಿರುಚಿಯೂ ಇಲ್ಲ; ಹೆಚ್ಚಿನ ಹಣವೂ ಇಲ್ಲ. ಈಗ ಹಿಂದೀಭಾಷೆಯನ್ನು ಕಲಿತವರ ಮನೆಗೆ ಹೋಗಿ ನೋಡಿರಿ ಬೇಕಾದರೆ; ಅವರ ಸಂಗ್ರಹದಲ್ಲಿ ಬೆಲೆಕೊಟ್ಟು ಕೊಂಡ ಪತ್ರಿಕೆ–ಪುಸ್ತಕಗಳೆಲ್ಲ ಹಿಂದೀಭಾಷೆಯವೆ. ಇದೇ ರೀತಿ ಹೆಚ್ಚುತ್ತ ಹೋದರೆ ಕನ್ನಡಕ್ಕೆ ಹೆಚ್ಚುಹೆಚ್ಚಿನ ಹಾನಿಯಲ್ಲವೇ? ಆಗ ಕನ್ನಡ ಗ್ರಂಥಕರ್ತರೂ, ಸಂಪಾದಕರೂ ತಮ್ಮ ಗ್ರಂಥ-ಪುಸ್ತಕಗಳನ್ನು ಜಾಹೀರಾತುಗಳಂತೆ ಪುಕ್ಕಟೆಯಾಗಿ ಹಂಚಬೇಕು; ಇಲ್ಲದಿದ್ದರೆ ಹಿಂದೀಭಾಷೆಯಲ್ಲಿಯೆ ಬರೆದು ಪ್ರಕಟಿಸಬೇಕು !

ನಾವು ಹೇಳುವುದಿಷ್ಟು : ಹಿಂದಿಯು ರಾಷ್ಟ್ರಭಾಷೆಯಾಗಲಿ ; ಅಂತಃಪ್ರಾಂತೀಯ ವ್ಯವಹಾರವನ್ನು ಮಾಡಲಾಶಿಸುವ ಜನರು ಆವಶ್ಯಕತೆಯ ದೃಷ್ಟಿಯಿಂದದನ್ನು ಕಲಿತೇ ಕಲಿಯುವರು. ಅಷ್ಟರ ಪುಟ್ಟಿನ ವ್ಯವಹಾರಕ್ಕಾಗಿ, ಹಿಂದೀ ಭಾಷೆಯ ಸಾಹಿತ್ಯವನ್ನೇನೂ ತಿರುಹಿಹಾಕಬೇಕಾದ ಆವಶ್ಯವಿಲ್ಲ. ಹುರುಕು–ಮುರುಕು ಹಿಂದಿ ನಮ್ಮಲ್ಲಿ ಹಲವರಿಗೆ ಕಲಿಯದೆ ಬರುತ್ತಿರುವಾಗ, ಅದರ ಪ್ರಚಾರಕ್ಕಾಗಿ ಇಷ್ಟೊಂದು ಆಡಂಬರ–ವಿಜೃಂಭಣೆಗಳೇಕೆ ? ಶಾಲೆಗಳಲ್ಲಿ ಪ್ರತಿಯೊಬ್ಬನೂ ಕಲಿಯಲೆ ಬೇಕೆಂಬ ಒತ್ತಾಯವೇಕೆ? ಸ್ವತಂತ್ರ ಕರ್ಣಾಟಕಪ್ರಾಂತದಲ್ಲಿ ಮೊದಲಿನಿಂದ ಕೊನೆಯವರೆಗಿನ ವ್ಯವಹಾರವನ್ನು ಕನ್ನಡದ ಮುಖಾಂತರವಾಗಿ ಸಾಗಿಸಬೇಕಾಗಿರುವಾಗ, ಅಂತಃಪ್ರಾಂತೀಯ ಸಂಬಂಧ ಎಷ್ಟು ಜನರಿಗೆ ಬಂದೀತು ? ಅಂತಹ ಸಂಬಂಧ ಬಂದಾಗ, ಇಂದಿನ ಐ. ಸಿ. ಎಸ್. ಜನರು ಪ್ರಾಂತೀಯ ಭಾಷೆಯನ್ನು ಕಲಿಯುವಂತೆ ಹಿಂದಿಯನ್ನು ಕಲಿತರೆ ಆಗದೇ? ಭವಿಷ್ಯದ ವಿಚಾರವನ್ನು ಸರಿಯಾಗಿ ಮಾಡದೆ, ಈಗ ಕನ್ನಡಿಗರ ತನು–ಮನ–ಧನಗಳನ್ನೂ ಉತ್ಸಾಹವನ್ನೂ ಹಿಂದೀ ಪ್ರಚಾರದಲ್ಲಿ ವಿನಿಯೋಗಿಸಹಚ್ಚುವುದು, ನಮಗೆ ಯಾವರೀತಿಯಲ್ಲಿಯೂ ಪಥ್ಯಕಾರಿಯಾಗಿ ತೋರದು.

ಗುದ್ದುಗಳನ್ನು ತಿಂದೇ ಬುದ್ಧಿಕಲಿಯಬೇಕೆ?

ನಮ್ಮ ಸಂಸ್ಥಾನಿಕರು ದೇಶ-ಕಾಲ-ಪರಿಸ್ಥಿತಿಗಳನ್ನು ಚೆನ್ನಾಗಿ ಯೋಚಿಸಿ ತಮ್ಮ ಆಡಳಿತವನ್ನು ಸಾಗಿಸತೊಡಗಿದರೆ, ತೇಜೋಭಂಗದ ಸಂದರ್ಭಗಳನ್ನವರು ಖಂಡಿತವಾಗಿ ತಪ್ಪಿಸಿಕೊಳ್ಳಬಲ್ಲರು. ಆದರೆ ಅವರಿಗೆ ಆಡಳಿತದ ವಿಚಾರದಲ್ಲಿ ಸ್ವಂತದ ಕಣ್ಣುಗಳನ್ನುಪಯೋಗಿಸುವ ಸಂದರ್ಭವೆಲ್ಲಿ ಬರುತ್ತಿದೆ? ಸ್ವಾರ್ಥಿಗಳಾದ ಅಧಿಕಾರಿಗಳೆ ಅವರ ಕಣ್ಣು–ಕೈ–ಕಾಲು–ಬುದ್ಧಿ ಎಲ್ಲಾ ! ಈ ಕಣ್ಣು–ಕೈ–ಕಾಲು–ಬುದ್ಧಿಗಳೆಲ್ಲ ತಪ್ಪುದಾರಿಯನ್ನು ಹಿಡಿದು, ದೇಹಕ್ಕೆ ಏಟುಬೀಳುವ ಸಂದರ್ಭವನ್ನು ತಂದೊಡ್ಡುತ್ತವೆ. ಹೀಗೆ ಆಗುವುದನ್ನು ತಪ್ಪಿಸಲಿಕ್ಕೆ ನಮ್ಮ ಸಂಸ್ಥಾನಿಕರಿಗೆ ಸಾಧ್ಯವಿಲ್ಲವೇನು ? ಸಾಧ್ಯವಿದೆಯೆಂತಲೆ ಗುಜರಾತಿನಲ್ಲಿಯ **ಮಾನಸಾ** ಸಂಸ್ಥಾನಿಕರು ಪ್ರಜೆಗಳ ಸತ್ಯಾಗ್ರಹದಿಂದ ತೆರೆದಕಣ್ಣವರಾಗಿ ಒಳುದಾರಿಯನ್ನು ಹಿಡಿದರು ; ಪ್ರಜೆಗಳ ಅಜ್ಞಾನದ ಆಟ್ಟವನ್ನು ಹಾಕಿ, ಮನಸ್ಸಿಗೆ ಬಂದಂತೆ ಕುಣಿದಾಡುತ್ತಿದ್ದುದನ್ನು ಕಡಿಮೆಮಾಡುವೆವೆಂದು ಒಡಂಬಡಿಕೆಗೆ ಸಿದ್ಧರಾದರು. ಅಲ್ಲಿ ಸರದಾರ ವಲ್ಲಭಭಾಯಿಯವರು ಮಧ್ಯಸ್ಥರಾಗಿ, ರೈತರ ಅಪೇಕ್ಷೆಗಳಲ್ಲಿಯ ಬಹ್ವಂಶವನ್ನು ಪೂರಯಿಸಿ ಕೊಟ್ಟರು. ಮೈಸೂರಿನ ರಾಜ್ಯಘಟನಾಸಮಿತಿಯಲ್ಲಿ ಮೈಸೂರ ಕಾಂಗ್ರೆಸ್ಸಿಗೆ ತಕ್ಕ ಪ್ರಾತಿನಿಧ್ಯವನ್ನು ಕೊಡಲು ಮೈಸೂರಿನ ಅಧಿಕಾರಿವರ್ಗವು ಮಹಾರಾಜರನ್ನು ಒಮ್ಮೆಲೆ ಸಮ್ಮತಿಸಗೊಡಲಿಲ್ಲ; ಮಾದರಿಯ ರಾಜ್ಯಕ್ಕೆ ನೆತ್ತರಿನ ನಾರಣೆಯಿಕ್ಕಿ, ಪ್ರಪಂಚದ ಹಳಿವನ್ನೆ ಮುಡಲಲ್ಲಿ ಕಟ್ಟಿಕೊಂಡು, ಬಳಿಕ ಬಲವಂತದ ಮಾಘಸ್ನಾನ ಮಾಡಿದರು. ಉತ್ತರ ಕರ್ಣಾಟಕದಲ್ಲಿಯ ರಾಮದುರ್ಗದ ರೈತರು ಮೊನ್ನೆಮೊನ್ನೆಯ ಮುಖ ಮೇಲಕ್ಕೆತ್ತಿ ನಿಂತು, ತಮ್ಮ ಸಂಸ್ಥಾನಿಕರ ಕಣ್ಣಿನ ಕುರುಡನ್ನು ಕಳೆದರು. ತಮ್ಮ ಬೇಡಿಕೆಗಳ ಸತ್ಯತೆಯ ಕೋಲುಮಿಂಚನ್ನು ಚುಚ್ಚಿ ಅಧಿಕಾರಿಗಳನ್ನು ಎಚ್ಚರಿಸಿದರು. ಒಡಂಬಡಿಕೆಯಾಯಿತು. ಪ್ರಜರ ನ್ಯಾಯದ ಪಕ್ಷಕ್ಕೆ ವಿಜಯಮಾಲೆ ದೊರೆಯಿತು. ಈ ಒಡಂಬಡಿಕೆಯಂತೆ ರಾಮದುರ್ಗದ ಪ್ರಜೆಗಳಿಗೆ ಆಡಳಿತದಲ್ಲಿ ಸಲಹೆಕೊಡುವುದಕ್ಕೆ ಬಹುಮತವಾಗುವಂತಹ ಪ್ರಾತಿನಿಧ್ಯ ದೊರೆಯಿತು. ಹಳೆಯ ಕಂದಾಯದ ಹಣಕ್ಕೆಲ್ಲ ' ಸೂಟು' ಸಿಕ್ಕಿತು. ನಡೆಯುವ ವರ್ಷದ ತೆರಿಗೆಯಲ್ಲಿ ಅರ್ಧಕ್ಕೆ ' ಸೂಟು' ಅರ್ಧಕ್ಕೆ ' ತಹಕೂಬಿ' ದೊರೆಯಿತು. ಹುಲ್ಲುಬನ್ನಿ ಹೋಯಿತು. ೫೦೦ ರಿಂದ ೭೦೦ ರ ವರೆಗಿನ ಉತ್ಪನ್ನದ ಮೇಲಿನ ತೆರಿಗೆ ಹೋಯಿತು. ಇಷ್ಟೆಲ್ಲವಾದರೂ ನೇಕಾರರ ಮಗ್ಗದ ಮೇಲಿನ ತೆರಿಗೆಯ ವಿಚಾರ, ಬಣ್ಣಗಾರರ ಹಿತ್ತಲ ನೆಲದ ತೆರಿಗೆಯ ವಿಷಯ ಒಪ್ಪಂದದ ಮಾತುಗಳಲ್ಲಿ ಬಂದೇ ಇಲ್ಲ. ಹೀಗಾದುದಕ್ಕೆ ಕಾರಣವೇನೋ ಕಾಣೆವು. ಕಾಣೆವೆಂಬುದಾದರೂ ಏಕೆ? ಕಾಂಗ್ರೆಸ್ಸಿನ ಇಂದಿನ ಆಡಳಿತಕ್ಕೂ ಮುಂದಿನ ಆಡಳಿತದ ಸಿದ್ಧತೆಗೂ ರೈತರ ಬೆಂಬಲ ಹೆಚ್ಚಾಗಿ ಬೇಕಾಗಿದೆ. ಈ ಒಪ್ಪಂದ ಮಾಡಿದ ಸಮಿತಿಯಲ್ಲಿ ಕಾಣುತ್ತಿರುವ ಮುಖಗಳೆಲ್ಲ ಕಾಂಗ್ರೆಸ್ಸಿನ ಮುಂದಾಳುಗಳವೇ ಆಗಿವೆ. ಕಾಂಗ್ರೆಸು ಕೈನೂಲು, ಕೈಮಗ್ಗಗಳ ಪ್ರಸಾರವನ್ನೂ ಪುರಸ್ಕರಿಸುವುದೆಂಬುದನ್ನು ಈ ಮುಂದಾಳುಗಳು ಮರೆತಿರಲಿಕ್ಕಿಲ್ಲವಷ್ಟೆ! ಸರಿ, ಏನೆ ಇರಲಿ; ರಾಮದುರ್ಗದ

ಸಂಸ್ಥಾನಿಕರೂ ಏಟುತಿಂದೇ ದಾರಿಗೆ ಬಂದರು. ಜಮಖಂಡಿಯ ಜನರ ಜೀವದ ಅಲುಗಾಟವನ್ನು ನೋಡಿ ಅಲ್ಲಿಯ ಸಂಸ್ಥಾನಿಕರು, ಹರಿಯುವತನಕ ಜಗ್ಗಬಾರದೆಂಬ ನೀತಿಯನ್ನು ಆಶ್ರಯಿಸಿದ್ದಾರೆಂದು ತೋರುವದು. ಈಗ ನಾಲ್ಕೈದು ವರ್ಷಗಳಿಂದಲೂ ಕನ್ನಡಪ್ರಜರ ಮಾತೃಭಾಷೆಯ ಸಂರಕ್ಷಣದ ಹಕ್ಕಿನ ಮೇಲೆ ಆರ್ಡಿನನ್ಸಿನ ಭೂತವನ್ನು ಜಗಿದಾಡಲು ಹಚ್ಚಿದ ಜಮಖಂಡಿಯ ಸಂಸ್ಥಾನಿಕರು, ಇಂದು 'ಪ್ರಜೆಗಳ ಕನಿಷ್ಠ ಬೇಡಿಕೆಯೇನಿದೆ?' ಎಂಬುದನ್ನು ತಿಳಿದುಕೊಳ್ಳುವ ನಾಟಕವಾಡುತ್ತಿದ್ದಾರೆ. ಇದನ್ನೆಲ್ಲ ಮಿಕ್ಕ ಸಂಸ್ಥಾನಿಕರು ಬಿಡುಗಣ್ಣಿಂದ ನೋಡಿ, ಮೊದಲೆ ಎಚ್ಚತ್ತಿದ್ದರಾಗದೆ? ಗುದ್ದುಗಳನ್ನು ತಿಂದೇ ಬುದ್ಧಿಕಲಿಯುವುದು ಮನುಷ್ಯರ ಲಕ್ಷಣವಲ್ಲವೆಂಬುದನ್ನು ಅವರೂ ಅರಿತಿರಬಹುದು!

ಕನ್ನಡದ ಕೊರಳಿಗೆ ಮತ್ತೂ ಕತ್ತರಿಯೆ

ರಾಮದುರ್ಗದ ಪ್ರಜೆಗಳದೊಂದು ಮುಖ್ಯ ಬೇಡಿಕೆಯಿದ್ದಿತು. ಅದಾವುದೆಂದರೆ: 'ಆಡಳಿತದ ಭಾಷೆ ಕನ್ನಡ ಇರಬೇಕು!' ಎಂಬುದು. ನೂರಕ್ಕೆ ನೂರು ಜನ ಕನ್ನಡ ಪ್ರಜರಿದ್ದರೂ ರಾಜಭಾಷೆಯೆ ಅಲ್ಲಿ ತನ್ನ ರಾಸಲೀಲೆಯನ್ನು ನಡೆಯಿಸಿದೆ. ಈಗ ಒಡಂಬಡಿಕೆ ಮಾಡಿಕೊಳ್ಳುವುದರಲ್ಲಿ ಮಧ್ಯಸ್ಥರಾಗಿ ಬಂದ ಮುಂದಾಳುಗಳು, ಇದೊಂದು ಮುಖ್ಯ ಬೇಡಿಕೆಯನ್ನೆ ಲಾಗ ಹೊಡೆಯಿಸಿಬಿಟ್ಟಿದ್ದಾರೆ. ಕನ್ನಡವು ಆಡಳಿತದ ಭಾಷೆಯಾಗಬೇಕೆಂಬುದರಲ್ಲಿ ಮಾತೃಭಾಷೆಯ ಅಭಿಮಾನದ ಭಾವನೆಯೊಂದೇ ಮುಖ್ಯ ವಿಷಯವಲ್ಲ; ಪ್ರಜರ ಅನುಕೂಲತೆ-ಉಪಯುಕ್ತತೆಗಳಿಗಾಗಿಯೆ ಅದು ಹೆಚ್ಚಿನ ಆವಶ್ಯಕತೆಯ ಬೇಡಿಕೆಯಾಗಿದೆ. ಪ್ರಾಥಮಿಕ ಶಾಲೆಗಳು ಕನ್ನಡವಾಗಿರುವುದರಿಂದ ಜನರು ಕಲಿಯುವರು ಕನ್ನಡವನ್ನು. ಸರಕಾರದ ಆಡಳಿತಕ್ಕೆ ಮರಾಟಿಗರ ಅವಶ್ಯಕತೆಯಿರುವುದು. ಕನ್ನಡ ಕಲಿತ ಸಂಸ್ಥಾನದ ಜನರಿಗೆ ಆಡಳಿತದಲ್ಲಿ ಸ್ಥಾನ ಸಿಕ್ಕುವ ಬಗೆ ಹೇಗೆ? ಅದಕ್ಕಾಗಿಯೆ ಇನ್ನೊಂದು ಭಾಗದಿಂದ ಅಧಿಕಾರಿಗಳನ್ನು 'ಆಮದು' ಮಾಡಬೇಕಾಗುವುದು. ತೆರಿಗೆ-ಸುಂಕಗಳನ್ನು ಕೊಡುವವರು ಸಂಸ್ಥಾನದ ಜನರು; ಅದನ್ನು ಮನಸಾರೆ ಮೇದು ಆಳುವವರು ಇನ್ನಾರೋ! ಸಂಸ್ಥಾನದ ಪ್ರಜರ ಹಣ ಅವರಲ್ಲಿಯೆ ಆಯ್ದ ಅಧಿಕಾರಿವರ್ಗಕ್ಕೆ ಸಲ್ಲಬೇಕಲ್ಲವೇ? ಸರಕಾರಕ್ಕೆ, ಕನ್ನಡಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ತತ್ತ್ವ ಒಪ್ಪಿಗೆಯಂತೆ. ಕ್ರಮೇಣ ಅದನ್ನು ಜಾರಿಯಲ್ಲಿ ತರಲಿರುವೆವೆಂಬ ಸರಕಾರದ ಮಾತನ್ನು ಮಧ್ಯಸ್ಥ ಧುರೀಣರು ಒಪ್ಪಿಕೊಂಡಿರುವರಂತೆ. ಈ ಧುರೀಣರಲ್ಲಿಯ ಹೆಗ್ಗಡೆಗಳೆಂದರೆ ನಮ್ಮ ಕರ್ನಾಟಕ ಸಿಂಹ ಗಂಗಾಧರರಾಯರು; ಮಹಾರಾಷ್ಟ್ರದ (ಶಾರ್ದೂಲವೋ?) ದೇವ ಶಂಕರರಾಯರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿಯೆ ಕನ್ನಡಕ್ಕೆ ತಕ್ಕ ಸ್ಥಾನವನ್ನು ಕೊಡಲು ಮನಸ್ಸಿಲ್ಲದವರು, ರಾಮದುರ್ಗದ ಪ್ರಜರ ಈ ಕನ್ನಡಭಾಷೆಗೆ ಸಂಬಂಧಿಸಿದ ಬೇಡಿಕೆಗೆ ಯಾವ ಬೆಲೆಯನ್ನು ಕೊಟ್ಟಿರಬಹುದು! 'ಕ್ರಮೇಣ ಕನ್ನಡಭಾಷೆಗೆ ಸ್ಥಾನಕೊಡಲಾಗುವುದು' ಎಂಬ ವಚನ ಜನಸಾಮಾನ್ಯರಲ್ಲಿ ಮೋಹವನ್ನು ಪಸರಿಸಬಹುದು; ಆದರೆ ಈ 'ಕ್ರಮೇಣ'ದಲ್ಲಿ ಕಲಿಯುಗವನ್ನೂ ಸವೆಯಿಸಲಿಕ್ಕೆ ಬರುವ ಶಕ್ತಿಯಿದೆಯೆಂಬುದನ್ನು ರಾಮದುರ್ಗದ ಪ್ರಜರು ಮರೆಯದಿರಲಿ' ಸಿಕ್ಕಷ್ಟು ಸಾಕೆಂಬ ಮಬ್ಬಿಗೆ ಬೀಳದೆ, ಕನ್ನಡಭಾಷೆಯ ಬಗೆಗಿರುವ ತಮ್ಮ ಹಕ್ಕನ್ನು ಸಂರಕ್ಷಿಸಿಕೊಳ್ಳಲು. ಉತ್ತರಕರ್ನಾಟಕ ಸಂಸ್ಥಾನಗಳಲ್ಲಿಯ ಪ್ರತಿಯೊಬ್ಬ ಪ್ರಜೆಯೂ ಜಾಗೃತನಾಗಿ ನಡೆಯಬೇಕು. ಹಿಂದೊಮ್ಮೆ ಕರ್ನಾಟಕ ಸಾಹಿತ್ಯ ಪರಿಷತ್ತು ಬಿನ್ನವಿಸಿಕೊಂಡಾಗ ಇದೇ ಈ ರಾಮದುರ್ಗದ ಸಂಸ್ಥಾನಿಕರು ಏನೆಂದು ಉತ್ತರಕೊಟ್ಟಿದ್ದಾರೆಂಬುದನ್ನು ಒಡಂಬಡಿಕೆ ಮಾಡಿಕೊಂಡ ಮುಂದಾಳುಗಳು ಅರಿತಿದ್ದಾರೇನು?

"ನಿಮ್ಮ ಈ ಬಿನ್ನಹವನ್ನು ಎಂದೂ ಯಾವರೀತಿಯಲ್ಲಿಯೂ ಪರ್ಯಾಲೋಚಿಸಲಾರೆವು"

ಸಾಹಿತ್ಯ ಪರಿಷತ್ತಿಗೆ ದೊರೆತ ಉತ್ತರವಿದು. ಅಂತಹ ಸಂಸ್ಥಾನಿಕರು ಕ್ರಮೇಣ ಕನ್ನಡಕ್ಕೆ ಸ್ಥಾನ ಕೊಡುವೆವೆಂದು ಒಪ್ಪಿಕೊಂಡರಂತೆ; ಮುಂದಾಳುಗಳು ತಲೆದೂಗಿದರಂತೆ. ಇದರಿಂದ ನಮ್ಮ ಮುಂದಾಳುಗಳಿಗೆ ರಾಜಕಾರ್ಯದ ಅಜ್ಞಾನವಿದೆಯೆನ್ನಬೇಕೇ? ಕನ್ನಡ ಭಾಷೆಯ ಬಗೆಗೆ ಉದಾಸೀನತೆ ಇದೆಯೆನ್ನಬೇಕೆ? ಅನುಕೂಲಕಾಲದಲ್ಲಿಯೂ ಕನ್ನಡದ ಕೊರಳ ಕತ್ತರಿಯನ್ನು ತೆಗೆದೊಗೆಯುವುದಕ್ಕೆ ನಮ್ಮವರೇ ಮನಸ್ಸು ಮಾಡದಿರುವುದು, ಕರ್ನಾಟಕದ ಆರೋಗ್ಯದ ಲಕ್ಷಣವೇನೂ ಅಲ್ಲ

ಸ್ವೀಕಾರ

೧೩. ಗೆಳೆಯ: (ಕನ್ನಡಕಂದ ಮಾಸಪತ್ರಿಕೆಯ ರೂಪಾಂತರಿತ ಪುಸ್ತಕಮಾಲೆಯ ಪುಸ್ತಕವೊಂದು) ಬರೆದವರು; ಶ್ರೀ. ಮೇವುಂಡಿ ಮಲ್ಲಾರಿ ಧಾರವಾಡ. ಪ್ರಕಾಶಕರೂ ಅವರೇ. ಕ್ರಾ. ೩೨ದ ೩೦ ಪುಟಗಳು. ಬೆಲೆ ೮-೧-೬

೧೪. ಗೋಮಟೇಶ್ವರ (ಸಚಿತ್ರ ಸಂಶೋಧನಾತ್ಮಕ ಗ್ರಂಥ). ಲೇಖಕರು ಶ್ರೀ. ಜಿ. ಪಿ. ರಾಜರತ್ನಂ ಎಂ. ಎ., ಶಾಕ್ಯ ಸಾಹಿತ್ಯಮಂಟಪ, ಮಲ್ಲೇಶ್ವರ-ಬೆಂಗಳೂರು ಕ್ರಾ. ೩೨ದ ೯೦ ಪುಟಗಳು, ೧೯ ಹಾಫ್ ಟೋನ್ ಚಿತ್ರಗಳಿವೆ. ಬೆಲೆ ೧-೦-೦

೧೫. ಪ್ರೇಮಯೋಗಿನಿ (ಶ್ರೀ ಶರಚ್ಚಂದ್ರರ ಚಿಕ್ಕಕಾದಂಬರಿಯೊಂದರ ಕನ್ನಡ ಅನುವಾದ) ಲೇಖಕರು: ಶ್ರೀ. ಸಿ. ಕೆ. ನಾಗರಾಜರಾವ. ಪ್ರಕಾಶಕರು: ಸತ್ಯಶೋಧನ ಪುಸ್ತಕಭಾಂಡಾರ, ಬೆಂಗಳೂರು ನಗರ. ಪು. ೩೨ದ ೬೦ ಪುಟಗಳು ಬೆಲೆ

ವಾರ್ಷಿಕ ವರ್ಗಣಿ ರೂ. ೩—೦—೦ .... ಬಿಡಿಸಂಚಿಕೆಗೆ ೪ ಆಣೆ.

ಸಲಹೆಗಾರ ಮಂಡಲ

ಪ್ರೊ. ಡಿ. ಪಿ. ಪಟ್ಟಣಶೆಟ್ಟಿ ಎಂ. ಎ., ಬಾರ್-ಅಟ್-ಲಾ. ಮುಂಬಯಿ
ಪ್ರೊ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ., ಮೈಸೂರು
ಪ್ರೊ. ಎಸ್. ಎಸ್. ಮಾಳವಾಡ ಎಂ. ಎ., ಧಾರವಾಡ
ಶ್ರೀ. ವ್ಹಿ. ಎಂ. ಇನಾಮದಾರ ಬಿ. ಎ., ವಿಜಾಪುರ
ಶ್ರೀ. ಅ. ನ. ಕೃಷ್ಣರಾಯರು ಬೆಂಗಳೂರು
ಶ್ರೀ. ತಲಚೇರಿ ರಂಗರಾಯರು ಎಲ್‌ಎಲ್. ಬಿ. ಮಂಗಳೂರು
ಶ್ರೀ. ಎಸ್. ವ್ಹಿ. ಅಡ್ಡಣಗಿ ಎಲ್‌ಎಲ್. ಬಿ., ಬೆಳಗಾಂವಿ
ಶ್ರೀ. ಎಂ. ಪಿ. ಪಾಲಿ ಎಂ. ಎ., ಚೀಫ್ ಆಫೀಸರ್ ಡಿ. ಎಲ್. ಬಿ. ಬೆಳಗಾಂವಿ
ಶ್ರೀ. ಕೋಟ ಶಿವರಾಮ ಕಾರಂತ ಮಂಗಳೂರು
ಶ್ರೀ. ಆರ್. ಎಚ್. ದೇಸಾಯಿ ಬಿ. ಎ., ಧಾರವಾಡ.

ಪ್ರಕಾಶಕರು:

ಎಂ. ಜಿ. ಪಾಟೀಲ, 'ಜಯಂತಿ' ಕಾರ್ಯಾಲಯ ಕ. ಪ್ರಿಂ. ವರ್ಕ್ಸ್, ಧಾರವಾಡ

ಮುಖ್ಯಪ್ರಸಾರಕರು:

ದಿ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

BOMBAY OFFICE:

Dr. Parekh's Building, Room No. 8
Bhatwadi 2nd Lane Girgaon, BOMBAY

ಹಳೇ-ಹೊಸ-ವಿವಿಧ ರೋಗನಿವಾರಣೆಗಾಗಿ

ಪ್ರೇಮ ಚಿಕಿತ್ಸಾ ಸೇವೆ.

ತುಂಗಭದ್ರೆಯ ಪ್ರೇಮಚಿಕಿತ್ಸಾ ಸಂಸ್ಥೆಯ ಅಧ್ಯಕ್ಷರಾದ

ಪಂಡಿತ ತಾರಾನಾಥ

ಇವರ ರೋಗನಿದಾನ ಚಿಕಿತ್ಸೆಗಳ ಅಲಭ್ಯಲಾಭವನ್ನು
ಇಂಡಿಯದಲ್ಲಷ್ಟೇ ಅಲ್ಲ, ಯುರೋಪು ಅಮೇರಿಕ ಖಂಡಗಳಲ್ಲಿಯೂ ಬಲ್ಲರು!

* * ಮಾದರಿಗಾಗಿ ಕೆಲವು ದಾಖಲೆಗಳು ಮಾತ್ರ. * *

"..ಕ್ಷಯ, ಬಹುಮೂತ್ರ, ಉಬ್ಬಸ,..ಕುಷ್ಠ ಮುಂತಾದ ರೋಗಗಳಲ್ಲಿ ಇವರಿಗುಂಟಾದ ಅದ್ಭುತ ಜಯವೆ ಅನೇಕ ಪ್ರದೇಶಗಳಲ್ಲಿ ಇವರಿಗೆ ಬಂದ ಕೀರ್ತಿಯ ಆಧಾರ.."

ನ್ಯೂಯಾರ್ಕ (ಯು. ಎಸ್. ಅಮೇರಿಕ) ಜನೆವರಿ ೧೯೩೪ — ದಿ ವಿಶ್ವ, ಜಗತ್ತಿನಲ್ಲಿ ಪ್ರಥಮಸ್ಥಾನವನ್ನು ಹೊಂದಿದ ಮೂರು ಪತ್ರಿಕೆಗಳಲ್ಲೊಂದು.

"ತಾವು ಕೊಟ್ಟ ಪಾತ್ರೆಗಳಿಂದ ನನಗೆ ಈಗೆಷ್ಟೋ ವಾಸಿ......."

ಪೋಲೆಂಡ (ಯುರೋಪ್) ೨೬—೫—೩೪ — ಅಲೆಕ್ಸಾಂಡರ್ ವಿಗಾರ್ಡ, ಡೈರೆಕ್ಟರ—ಏಯರ್‌ವೇಸ್.

ಉತ್ತರಕ್ಕಾಗಿ ಒಂದಾಣೆಯ ಸ್ಟ್ಯಾಂಪ್ ಇಟ್ಟು **ಪ್ರೇಮ ಮೆಡಿಕಲ್ ಸರ್ವಿಸ್ ತುಂಗಭದ್ರಾ**
(ಬಳ್ಳಾರಿ ಜಿಲ್ಲಾ) ಎಂಬ ವಿಳಾಸಕ್ಕೆ ಬರೆಯಿರಿ!

ಆದರ್ಶ ಶಿಕ್ಷಣಸಂಸ್ಥೆ ! ನಿಮಗೆ ಮಕ್ಕಳ ಶಿಕ್ಷಣದ ಚಿಂತೆಯೆ ?

ಪಂಚಗಣಿ ಹಿಂದೂ ಹೈಸ್ಕೂಲು



ನಮ್ಮ ಕ್ರಿಕೆಟ್ ಟೀಮು

ಮಕ್ಕಳ ಆರೋಗ್ಯವನ್ನು ಕುರಿತೂ ಯೋಚಿಸಬೇಕಾಗಿಲ್ಲ. ೪೩೦೦ ಫೂಟು ಎತ್ತರವಾದ ನಿಸರ್ಗರಮಣೀಯ ಪ್ರದೇಶದಲ್ಲಿ ಈ ವಿದ್ಯಾಲಯವು ಸ್ಥಾಪಿತವಾಗಿದೆ. ಕಳೆದ ಹದಿನೈದು ವರುಷಗಳಿಂದ ದಿನದಿನಕ್ಕೂ ಇದು ಜನಾದರಕ್ಕೆ ಪಾತ್ರವಾಗುತ್ತ ನಡೆದಿದೆ. ಹಿಂದೂ ಹುಡುಗರ ಸಲುವಾಗಿ ತೆರೆದ ಈ ಬಗೆಯ ಆದರ್ಶಸಂಸ್ಥೆ ಇನ್ನೊಂದಿಲ್ಲ.

ಭಾರತದ ಒಳಗಿರುವ ಹೊರನಾಡಿನೊಳಗಿರುವ ಅನೇಕ ಜನ ಸಿರಿವಂತರೂ, ಅಧಿಕಾರಿಗಳೂ, ಜಹಗೀರದಾರರೂ ತಮ್ಮ ತಮ್ಮ ಮಕ್ಕಳನ್ನು ಒಳ್ಳೆಯ ಸಂಸ್ಕಾರವಂತರನ್ನಾಗಿಸಬೇಕೆಂಬ ಅಪೇಕ್ಷೆಯಿಂದ ನಮ್ಮ ಈ ವಿದ್ಯಾಮಂದಿರಕ್ಕೆ ಕಳುಹುತ್ತಾರೆ.

ಹಳ್ಳಿಯ ಸರಳಜೀವನವೂ ನಗರದ ಸುಂದರ ಸಂಸ್ಕೃತಿಯೂ ಸಮನ್ವಯಗೊಳ್ಳಬೇಕಾದರೆ ವಿದ್ಯಾರ್ಥಿಗಳು ಪಂಚಗಣಿಯ ಹಿಂದೂ ಹೈಸ್ಕೂಲಿಗೇ ಬರಬೇಕು. ವೆಚ್ಚವೂ ಹೆಚ್ಚಾಗಿ ಬಾರದು. ಬರುವ ಮೇ ತಿಂಗಳ ೧೫ ರಿಂದ ಹೊಸ ವರುಷದ ಅಭ್ಯಾಸಕ್ಕೆ ಆರಂಭವಾಗುವುದಲ್ಲದೆ ಬೇಕಾದಾಗ ಕಳುಹಿದರೂ ವಿದ್ಯಾರ್ಥಿಗಳಿಗೆ ಪ್ರವೇಶವುಂಟು. ಮಾಟ್ರಿಕ್ಯುಲೇಶನ್‌ವರೆಗೆ ಕಲಿಸುವ ಏರ್ಪಾಡಿದೆ. ವಿ. ವಿ. ಪಿಲಯ, ಸರಕಾರಗಳ ಮನ್ನಣೆಯೂ ಇದೆ. ಕನ್ನಡ, ಹಿಂದೀಭಾಷೆಗಳನ್ನು ಕಲಿಸುವುದರ ಏರ್ಪಾಡೂ ನಡೆದಿದೆ.

The Panchgani Hindu High School, Panchgani, (*Dist.* Satara)

Printed by K. R. Bhise at the Karnatak Printing Works Dharwar and Edited & Published by M. G. Patil at the Jayanti Office, Dharwar.